ಮನುಷ್ಯ ಜಾತಿ
ತಾನೊಂದೆ ವಲಂ

ಕನ್ನಡ ಸಾಹಿತ್ಯ ಪರಿಷತ್ತು
ಬೆಂಗಳೂರು

ಸಂಶೋಧನೆ

ಸಂಪಾದಕರು
ನಾಡೋಜ ಪ್ರೊ. ಕಮಲಾ ಹಂಪನಾ



೧೧ ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆ

ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆ

ಸಂಪುಟ – ೧೧

ಸಂಶೋಧನೆ

ಸಂಪಾದಕರು

ನಾಡೋಜ ಪ್ರೊ. ಕಮಲಾ ಹಂಪನಾ

ಪ್ರಧಾನ ಸಂಪಾದಕರು

ಪುಂಡಲೀಕ ಹಾಲಂಬಿ

ಕನ್ನಡ ಸಾಹಿತ್ಯ ಪರಿಷತ್ತು

ಚಾಮರಾಜಪೇಟೆ, ಬೆಂಗಳೂರು – ೫೬೦ ೦೧೮

KANNADA SAHITYA PARISHATTU CENTENARY PUBLICATION

ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆ
ಸಂಪುಟ–೧೧ – ಸಂಶೋಧನೆ
ಸಂಪಾದಕರು: ನಾಡೋಜ ಪ್ರೊ. ಕಮಲಾ ಹಂಪನಾ

ಪ್ರಕಾಶಕರು:
ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾ ಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು–೫೬೦ ೦೧೮

ಮುಖಪುಟ ವಿನ್ಯಾಸ : **ಅಪಾರ**

ಪುಟಗಳು: ೨೭೨

ಮುದ್ರಣ ಕಾಗದ:
೭೦ ಜಿ.ಎಸ್.ಎಂ. ಎನ್.ಎಸ್. ಮ್ಯಾಪ್‌ಲಿಥೋ

ಬೆಲೆ: ಎರಡುನೂರಾ ಐವತ್ತು ರೂಪಾಯಿಗಳು
ಪ್ರಥಮ ಮುದ್ರಣ: ೨೦೧೫
ಪ್ರತಿಗಳು: ೧೦೦೦

ಮುದ್ರಣ
ಲಾವಣ್ಯ ಮುದ್ರಣ
ನಂ. ೧೯, ವಿದ್ಯಾಪೀಠ ಸರ್ಕಲ್
೧೫ನೇ ಕ್ರಾಸ್, ಬಿಎಸ್‌ಕೆ ೧ನೇ ಹಂತ
ಬೆಂಗಳೂರು – ೫೬೦ ೦೫೦
ಫೋ.: ೨೬೬೧೫೮೪೩
ಮೊ.: ೯೮೪೫೦ ೬೩೩೮೧

Adhunika Kannada Sahitya Charitre
Samputa - 11
Samshodhane
- History of modern Kannada literature in Kannada
Research - Vol-11
-Ed.by Nadoja Prof.Kamala Hampana

Published by
Kannada Sahitya Parishattu
Pampa Mahakavi Road
Chamarajpet, Bengaluru - 560 018

Cover Page : **APARA**

Pages : 272

Paper:
70 G.S.M. N.S. Maplitho

Rs: 250=00
First Edition: 2015
Copies: 1000

Printed at
Lavanya Mudrana
No. 19, Vidyapeeta Circle
15th Cross, BSK 1st Stage
Bengaluru - 560 050.
Ph.: 26615843
Mobile : 98450 63381

ಪ್ರಕಟಣಾ ಸಮಿತಿ

ಅಧ್ಯಕ್ಷರು

ಶ್ರೀ ಪುಂಡಲೀಕ ಹಾಲಂಬಿ

ಡಾ. ಸಿದ್ಧಲಿಂಗಯ್ಯ

೮೧ನೇ ಅ.ಭಾ.ಕ.ಸಾ. ಸಮ್ಮೇಳನಾಧ್ಯಕ್ಷರು

ಸದಸ್ಯರು

ಶ್ರೀ ಬಿ.ಎಂ. ಸದಾಶಿವಪ್ಪ ಶ್ಯಾಗಲೆ

ಶ್ರೀ ನೀಲಾವರ ಸುರೇಂದ್ರ ಅಡಿಗ

ಡಾ. ಸೋ.ಮು. ಭಾಸ್ಕರಾಚಾರ್

ಶ್ರೀ ಎಸ್.ಜಿ. ಕೋಟಿ

ಡಾ. ಮಾನಸ

ಡಾ. ಎ.ವಿ. ನಾವಡ

ಶ್ರೀ ಬಿ.ಎನ್. ರಾಮಸ್ವಾಮಿ

ನಿರ್ದೇಶಕರು

ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಡಾ. ವಸುಂಧರಾ ಭೂಪತಿ

ಡಾ. ರಾಜೇಂದ್ರ ಎಸ್. ಗಡಾದ

ಡಾ. ಡಿ.ಕೆ. ಚಿತ್ತಯ್ಯ ಪೂಜಾರ್

ಡಾ. ಸುಜಾತಾ ಜಂಗಮಶೆಟ್ಟಿ

ಡಾ. ಮಳಲಿ ವಸಂತಕುಮಾರ್

ಸಂಯೋಜಕ ಸಂಪಾದಕರು

ಶ್ರೀ ಸಿ.ಕೆ. ರಾಮೇಗೌಡ

ಡಾ. ರಾಜಶೇಖರ ಹತಗುಂದಿ

ಶ್ರೀ ಪಿ. ಮಲ್ಲಿಕಾರ್ಜುನಪ್ಪ

ಶ್ರೀ ಜೆ.ಎನ್. ಶಾಮರಾವ್

ಸಂಚಾಲಕ

ಅಧ್ಯಕ್ಷರ ನುಡಿ

ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆಯಾದ ಕನ್ನಡ ಸಾಹಿತ್ಯ ಪರಿಷತ್ತು ಶತಮಾನೋತ್ಸವವನ್ನು ಆಚರಿಸಿಕೊಳ್ಳುತ್ತಿರುವುದು ಅತ್ಯಂತ ಹೆಮ್ಮೆಯ ವಿಷಯ. ನಾಡು, ನುಡಿ, ಸಾಹಿತ್ಯಕ್ಕೆ ಪ್ರೇರಕಶಕ್ತಿಯಾಗಿ ಹಾಗೂ ಪೋಷಕವಾಗಿ ದುಡಿಯುತ್ತಿರುವ ಕನ್ನಡ ಸಾಹಿತ್ಯ ಪರಿಷತ್ತು ೫-೫-೧೯೧೫ರಂದು ಅಂದಿನ ಮೈಸೂರು ಮಹಾರಾಜರಾದ ನಾಲ್ವಡಿ ಕೃಷ್ಣರಾಜ ಒಡೆಯರು ಹಾಗೂ ದಿವಾನ್‌ರಾಗಿದ್ದ ಸರ್.ಎಂ. ವಿಶ್ವೇಶ್ವರಯ್ಯನವರ ಪ್ರಯತ್ನದ ಫಲವಾಗಿ ಸಂಸ್ಥಾಪನೆಗೊಂಡಿತು. ಸರ್ ಮಿರ್ಜಾ ಇಸ್ಮಾಯಿಲ್ ಅವರ ನೆರವಿನಿಂದ ಪುಷ್ಟಿ ಪಡೆಯಿತು. ಅಂದಿನಿಂದ ಈವರೆಗೆ ೨೪ ಜನ ಅಧ್ಯಕ್ಷರು ಪರಿಷತ್ತಿನ ಸೇವೆ ಸಲ್ಲಿಸಿದ್ದಾರೆ. ೮೧ ಅಖಿಲ ಭಾರತ ಸಾಹಿತ್ಯ ಸಮ್ಮೇಳನಗಳ ಅಧ್ಯಕ್ಷತೆಯನ್ನು ೭೯ ಜನ ಮಹಾನ್ ಲೇಖಕರು ಅಲಂಕರಿಸಿದ್ದಾರೆ. ಕೇವಲ ೮೫ ಜನ ಸದಸ್ಯರಿಂದ ಆರಂಭಗೊಂಡ ಪರಿಷತ್ತಿನ ಇಂದಿನ ಸದಸ್ಯರ ಸಂಖ್ಯೆ ೨,೦೮,೦೦೦. ಎಲ್ಲ ಮೂವತ್ತು ಜಿಲ್ಲೆಗಳಲ್ಲೂ, ೧೭೬ ತಾಲ್ಲೂಕುಗಳಲ್ಲೂ, ೪ ಹೊರನಾಡು ಘಟಕಗಳಲ್ಲೂ ಪರಿಷತ್ತು ತನ್ನ ಶಾಖೋಪಶಾಖೆಗಳನ್ನು ವಿಸ್ತರಿಸಿಕೊಂಡಿರುತ್ತದೆ.

ಪರಿಷತ್ತಿನ ಪ್ರಕಟಣೆಗಳ ಸಂಖ್ಯೆಯೇ ೧೪೭೫. ಕೇವಲ ಅಂಕಿಸಂಖ್ಯೆಯ ದೃಷ್ಟಿಯಿಂದಲೇ ಕನ್ನಡ ಸಾಹಿತ್ಯ ಪರಿಷತ್ತಿನ ಸಾಧನೆ ಅನನ್ಯವಾದುದು; ಇನ್ನು ಕನ್ನಡ ಸಾರಸ್ವತ ಲೋಕಕ್ಕೆ ನೀಡಿದ ಕೊಡುಗೆಯಂತೂ ಅವಿಸ್ಮರಣೀಯವಾದುದು.

ಈ ಹಿನ್ನೆಲೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಶತಮಾನೋತ್ಸವದ ಅಂಗವಾಗಿ ಕೆಲವೊಂದು ಮಹತ್ವದ ಯೋಜನೆಗಳನ್ನು ಪರಿಷತ್ತು ಕೈಗೊಂಡಿರುತ್ತದೆ. ಮೊದಲನೆಯದಾಗಿ, ಎರಡು ಶತಮಾನಗಳಿಗೂ ಮೀರಿದ ಅವಧಿಯ ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಗಳ ರಚನೆ ಹಾಗೂ ಪ್ರಕಟಣೆ. ಎರಡನೆಯದಾಗಿ, ಪರಿಷತ್ತಿನ ನೂರರ ಸಂಭ್ರಮಕ್ಕೆ ಕಿರೀಟಪ್ರಾಯವಾಗಿ ಕನ್ನಡದ ನೂರು ಮೌಲಿಕ ಗ್ರಂಥಗಳ ಮರುಮುದ್ರಣ. ಜೊತೆಗೆ, ಪರಿಷತ್ತಿನ ನೂರು ವರ್ಷಗಳ ಇತಿಹಾಸವನ್ನು ದಾಖಲಿಸುವ ನೆನಪಿನ ಸಂಪುಟದ ಪ್ರಕಟಣೆ.

೧೭-೮-೨೦೧೨ರಂದು ನಡೆದ ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಕಟಣಾ ಸಮಿತಿ ಸಭೆಯಲ್ಲಿ ಪರಿಷತ್ತಿನ ಪ್ರಕಟಣೆಗಳು ಶಾಶ್ವತವಾಗಿ ಕನ್ನಡಿಗರ ಮನದಲ್ಲಿ ಉಳಿಯುವಂತಾಗಬೇಕೆಂದು ನಿರ್ಧರಿಸಿ ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯ ಸಂಪುಟಗಳನ್ನು ಪ್ರಕಟಿಸಲು ನಿರ್ಧರಿಸಲಾಯಿತು. ದಿನಾಂಕ ೨೭-೧೦-೨೦೧೨ರಲ್ಲಿ ನಡೆದ

ಇದೇ ಸಮಿತಿ ಸಭೆಯಲ್ಲಿ ೧೫ ಸಂಪುಟಗಳಲ್ಲಿ ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಗಳನ್ನು ಪ್ರಕಟಿಸಲು ತೀರ್ಮಾನಿಸಿ ಸಂಪಾದಕ ಸದಸ್ಯರ ಪಟ್ಟಿಯನ್ನು ತಾತ್ಕಾಲಿಕವಾಗಿ ಸಿದ್ಧಪಡಿಸಿ ವಿಷಯಗಳ ವರ್ಗೀಕರಣ, ಸಂಪುಟಗಳ ನಿಗದಿ ಹಾಗೂ ಪ್ರಾದೇಶಿಕ ಪ್ರಾತಿನಿಧ್ಯ, ಸಾಮಾಜಿಕ ಪ್ರಾತಿನಿಧ್ಯಗಳನ್ನು ಮತ್ತು ಆಯಾ ಕ್ಷೇತ್ರದ ತಜ್ಞರು ಹೊಂದಿರುವ ಅನುಭವ, ಪರಿಶ್ರಮ, ಸಾಧನೆಗಳನ್ನು ಗಮನದಲ್ಲಿಟ್ಟುಕೊಂಡು ಸಂಪಾದಕರನ್ನು ಅಗತ್ಯಕಂಡಂತೆ ನಿಗದಿಪಡಿಸುವ ಅಧಿಕಾರವನ್ನು ಅಧ್ಯಕ್ಷರಿಗೆ ನೀಡಲು ಸಮಿತಿಯು ತೀರ್ಮಾನಿಸಿತು. ಅದರಂತೆ ಸಂಪುಟಗಳಿಗೆ ಸಂಪಾದಕರನ್ನು ಗೊತ್ತುಪಡಿಸಲಾಯಿತು.

ಅನಂತರ ೧೨-೬-೨೦೧೩ ಹಾಗೂ ೫-೭-೨೦೧೩ರಂದು ಸಂಪುಟಗಳ ಸಂಪಾದಕರ ಸಭೆಗಳಲ್ಲಿ ವಿಷಯಗಳನ್ನು ಪುನರ್ ವರ್ಗೀಕರಣ ಮಾಡಿ ಒಟ್ಟಾರೆ ೧೭ ಸಂಪುಟಗಳಲ್ಲಿ ಪ್ರಕಟಿಸಲು ನಿರ್ಧರಿಸಲಾಯಿತು.

ಸಾಹಿತ್ಯ ಚರಿತ್ರೆಗಳ ಸ್ವರೂಪದ ಪರಿಕಲ್ಪನೆ ಬದಲಾಗಿರುವ ದೃಷ್ಟಿಯಿಂದ ಹತ್ತೊಂಬತ್ತನೆಯ ಶತಮಾನವೂ ಸೇರಿದಂತೆ ಈವರೆಗಿನ ಒಟ್ಟಾರೆ ಕನ್ನಡ ಬರವಣಿಗೆಯನ್ನು ಗಮನದಲ್ಲಿ ಇರಿಸಿಕೊಂಡು ಸಾಹಿತ್ಯ ಚರಿತ್ರೆಯನ್ನು ರೂಪಿಸಲು ಉದ್ದೇಶಿಸಿ, ಮೊಟ್ಟ ಮೊದಲ ಬಾರಿಗೆ 'ಸಾಹಿತ್ಯ ಚರಿತ್ರೆ'ಯಲ್ಲಿ ಕಲೆ, ವಿಜ್ಞಾನ, ಮಾನವಿಕ ಬರವಣಿಗೆಗಳನ್ನು ಸೇರಿಸಿ, ಪ್ರತ್ಯೇಕ ಸಂಪುಟಗಳಲ್ಲಿ ಪ್ರಕಟಿಸಲು ನಿರ್ಧರಿಸಲಾಯಿತು. ಆ ೧೭ ಸಂಪುಟಗಳೆಂದರೆ:

೧. ಪೂರ್ವರಂಗ ಅಥವಾ ಮೊದಲ ಶತಮಾನ -
(೧೯ನೆಯ ಶತಮಾನದ ಕನ್ನಡ ಸಾಹಿತ್ಯ)

೨. ಆಧುನಿಕ ಕನ್ನಡ ಸಾಹಿತ್ಯದ ತಾತ್ತ್ವಿಕ ನೆಲೆಗಳು -
(೨೦ನೆಯ ಶತಮಾನದ ಆರಂಭದಿಂದ ಈವರೆಗೆ)

೩. ಕಾವ್ಯ (ಮಹಾಕಾವ್ಯಗಳೂ ಸೇರಿದಂತೆ)

೪. ಸಣ್ಣಕಥೆ

೫. ಕಾದಂಬರಿ

೬. ನಾಟಕ

೭. ಸಾಹಿತ್ಯ ವಿಮರ್ಶೆ- ಸಾಹಿತ್ಯ ಮೀಮಾಂಸೆ

೮. ಜಾನಪದ

೯. ಮಕ್ಕಳ ಸಾಹಿತ್ಯ

೧೦. ಅನುವಾದ ಸಾಹಿತ್ಯ

೧೧. ಸಂಶೋಧನೆ

೧೨. ಸಂಕೀರ್ಣ-೧
[ಭಾಷಾಶಾಸ್ತ್ರ, ಗ್ರಂಥ ಸಂಪಾದನೆ, ಸಾಹಿತ್ಯ ಚರಿತ್ರೆಗಳು, ನಿಘಂಟು, ವಿಶ್ವಕೋಶ, ಛಂದಸ್ಸು, ಶಾಸನಗಳು, ಹಸ್ತಪ್ರತಿಶಾಸ್ತ್ರ)

೧೩. ಸಂಕೀರ್ಣ-೨
[ಲಲಿತ ಪ್ರಬಂಧ, ಹಾಸ್ಯ ಸಾಹಿತ್ಯ, ಜೀವನ ಚರಿತ್ರೆ, ಆತ್ಮಕಥೆ, ಅಂಕಣ ಬರಹ, ವಿಚಾರ ಸಾಹಿತ್ಯ, ಭಾಷಣಗಳು, ಮುನ್ನುಡಿಗಳು, ಅಭಿನಂದನಾ ಗ್ರಂಥಗಳು, ಪತ್ರಿಕೋದ್ಯಮ]

೧೪. ವಿಜ್ಞಾನ – ತಂತ್ರಜ್ಞಾನ : ಸಂ: ಟಿ.ಆರ್. ಅನಂತರಾಮು

೧೫. ಮಾನವಿಕಗಳು

೧೬. ಲಲಿತಕಲೆಗಳು

೧೭. ಸಂಸ್ಕೃತಿ ಅಧ್ಯಯನ

ಯೋಜನೆಗೆ ನಿರ್ದಿಷ್ಟ ಕಾಲಮಿತಿಯನ್ನು ನಿಗದಿಪಡಿಸಿ ಜೂನ್ ೨೦೧೪ರೊಳಗೆ ಹಸ್ತಪ್ರತಿ ಸಿದ್ಧಪಡಿಸುವ ಗುರಿಯನ್ನು ಹೊಂದಲಾಗಿತ್ತಾದರೂ, ವಿಷಯ ಬಾಹುಳ್ಯ ಹಾಗೂ ಅಪಾರ ಕನ್ನಡ ಗ್ರಂಥರಾಶಿಯ ಅಧ್ಯಯನವೇ ಮೊದಲಾದ ಕಾರಣಗಳಿಂದ ಹಸ್ತಪ್ರತಿಗಳು ಸಿದ್ಧವಾಗುವುದು ನಿಗದಿತ ಅವಧಿಯನ್ನು ಮೀರಿತು.

ಪ್ರಸ್ತುತ ಎಲ್ಲ ಹದಿನೇಳು ಸಂಪುಟಗಳ ರಚನೆಯ ಪ್ರಗತಿ ವಿವಿಧ ಹಂತಗಳಲ್ಲಿದೆ. ಎಲ್ಲ ಸಂಪಾದಕರು ಶತಮಾನೋತ್ಸವದ ಅವಧಿಯೊಳಗಾಗಿ ತಮ್ಮ ತಮ್ಮ ಸಂಪುಟಗಳನ್ನು ಸಿದ್ಧಪಡಿಸಿಕೊಡುತ್ತಾರೆಂಬ ವಿಶ್ವಾಸ ಹಾಗೂ ನಂಬಿಕೆ ನನಗಿದೆ.

ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆ ಸಂಪುಟಗಳ ಮಾಲೆಯಲ್ಲಿ ಎರಡನೆಯದಾಗಿ ಸಂಶೋಧನೆ ಕುರಿತ ೧೧ನೆಯ ಸಂಪುಟವು ಸಿದ್ಧಗೊಂಡು ಪ್ರಕಟವಾಗುತ್ತಿದೆ. ಇದಕ್ಕಾಗಿ ನಾನು ಸಂಪುಟದ ಸಂಪಾದಕರಾದ ನಾಡೋಜ ಪ್ರೊ. ಕಮಲಾ ಹಂಪನಾ ಅವರನ್ನು ಅಭಿನಂದಿಸಬಯಸುತ್ತೇನೆ.

ಆಧುನಿಕ ಪರಿಕಲ್ಪನೆಯ ಸಂಶೋಧನೆ ಕುರಿತ ಬರವಣಿಗೆ ಕನ್ನಡದಲ್ಲಿ ೧೯ನೆಯ ಶತಮಾನದಲ್ಲಿಯೇ ಆರಂಭವಾಗಿದ್ದು, ಈತನಕ ನೂರಾರು ಪುಸ್ತಕಗಳು ಪ್ರಕಟಗೊಂಡಿದ್ದರೂ ಆ ಬರವಣಿಗೆಯ ಚರಿತ್ರೆಯೊಂದನ್ನು ದಾಖಲು ಮಾಡಲು ಪ್ರಯತ್ನಿಸಿರುವಂತೆ ಕಂಡುಬರುವುದಿಲ್ಲ. ಈ ದೃಷ್ಟಿಯಿಂದ ಇದು ಮೊದಲ ಪ್ರಯತ್ನವೆಂದು ಭಾವಿಸುತ್ತೇನೆ. ಈ ಕಾರ್ಯವನ್ನು ಅತ್ಯಂತ ಶ್ರದ್ಧೆ ಹಾಗೂ ಪರಿಷತ್ತಿನ ಮೇಲಿನ ಪ್ರೀತಿಯಿಂದ ನೆರವೇರಿಸಿಕೊಟ್ಟಿರುವ ನಾಡೋಜ ಪ್ರೊ. ಕಮಲಾ ಹಂಪನಾ ಅವರಿಗೆ ನನ್ನ ಕೃತಜ್ಞತೆಗಳು. ಸಂಪುಟಕ್ಕೆ ಲೇಖನಗಳನ್ನು ಸಕಾಲಕ್ಕೆ ಬರೆದುಕೊಟ್ಟಿರುವ ಎಲ್ಲ ಲೇಖಕರಿಗೂ ನಾನು ಆಭಾರಿಯಾಗಿದ್ದೇನೆ. ಈ ಯೋಜನೆಯ ಬೀಜರೂಪವನ್ನು ನನ್ನಲ್ಲಿ ಬಿತ್ತಿದವರು ನಾಡೋಜ ದೇಜಗೌ ಅವರು. ಅವರಿಗೆ ನನ್ನ ಗೌರವಪೂರ್ವಕ ನಮನಗಳು.

ಈ ಪ್ರಕಟಣೆ ಯೋಜನೆಗೆ ನೆರವು ನೀಡಿದ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ಧರಾಮಯ್ಯ ಅವರಿಗೆ, ಕನ್ನಡ ಮತ್ತು ಸಂಸ್ಕೃತಿ ಸಚಿವರಾದ ಶ್ರೀಮತಿ ಉಮಾಶ್ರೀ ಅವರಿಗೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ನನ್ನ ಕೃತಜ್ಞತೆಗಳು.

ಈ ಮಹತ್ಕಾರ್ಯದಲ್ಲಿ ನನ್ನೊಡನೆ ಸಹಕರಿಸಿದ ಪ್ರಕಟಣ ಸಮಿತಿಯ ಎಲ್ಲ ಸದಸ್ಯರಿಗೆ ಹಾಗೂ ಪರಿಷತ್ತಿನ ಎಲ್ಲ ಪದಾಧಿಕಾರಿಗಳಿಗೆ ನಾನು ಕೃತಜ್ಞತೆಗಳನ್ನು ಸಲ್ಲಿಸಬಯಸುತ್ತೇನೆ.

ಈ ಸಂಪುಟವನ್ನು ಅತ್ಯಲ್ಪ ಕಾಲದಲ್ಲಿ ಅಂದವಾಗಿ ಮುದ್ರಿಸಿಕೊಟ್ಟ ಲಾವಣ್ಯ ಮುದ್ರಣ – ಅವರಿಗೆ ನನ್ನ ಕೃತಜ್ಞತೆಗಳು.

ದಿನಾಂಕ : ೦೮–೦೬–೨೦೧೫
ಬೆಂಗಳೂರು

ಪುಂಡಲೀಕ ಹಾಲಂಬಿ
ಅಧ್ಯಕ್ಷರು

ಸಂಪಾದಕರ ಮಾತು

ಕನ್ನಡ ಸಾಹಿತ್ಯ ಪರಿಷತ್ತು ಈ ಸಂಶೋಧನ ಸಂಪುಟದ ಯೋಜನೆಯನ್ನು ಕೈಗೆತ್ತಿಕೊಂಡ ಸಂದರ್ಭದಲ್ಲಿ ತಜ್ಞರ ಸಮಾಲೋಚನೆ ಸಭೆ ಏರ್ಪಡಿಸಿತ್ತು. ಆ ಸಭೆಯಲ್ಲಿ ಪ್ರಸ್ತುತ ಸಂಪುಟದ ಒಟ್ಟು ಸ್ವರೂಪ, ಹಾಸುಬೀಸು, ಚೌಕಟ್ಟು ಏನೆಂತೆಂದು ನಿರ್ವಚಿಸಲಾಯಿತು. ಅಂದು ಸೂಚಿಸಿದ ರೂಪರೇಖೆಗಳಿಗೆ ಅನುಗುಣವಾಗಿ ಈ ಸಂಪುಟ ಅಣಿಯಾಗಿದೆ.

ಕನ್ನಡ ಸಾಹಿತ್ಯ ಪರಿಷತ್ತು ನೂರರ ನೆನಪಿಗಾಗಿ 'ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆ'ಯನ್ನು ಹದಿನೈದು ಸಂಪುಟಗಳಲ್ಲಿ ಹೊರತರಲು ತೀರ್ಮಾನಿಸಿ ಆ ಮಾಲೆಯಲ್ಲಿ 'ಸಂಶೋಧನೆ' ಸಂಪುಟವನ್ನು ಸಿದ್ಧಪಡಿಸಿಕೊಡುವ ಜವಾಬ್ದಾರಿಯನ್ನು ನನಗೆ ವಹಿಸಿತು. ಸಾಹಿತ್ಯ ಪರಿಷತ್ತು ಹಾಕಿಕೊಟ್ಟ ರೂಪರೇಖೆಗಳಿಗೆ ಅನುಗುಣವಾಗಿ ಈ ಸಂಪುಟದಲ್ಲಿ ಅಳವಡಿಸಿರುವ ಬರೆಹ ಮತ್ತು ಬರೆಹಗಾರರ ವಿವರ ಹೀಗಿದೆ :

ಒಟ್ಟು ಹತ್ತು ಅಧ್ಯಾಯಗಳು;

೧. ಸಂಶೋಧನೆಯ ವಿಸ್ತಾರ, ವಿನ್ಯಾಸ : ಕಮಲಾ ಹಂಪನಾ

೨. ಸಂಶೋಧನೆ, ಸಂಶೋಧನೆಯ ಪರಿಕಲ್ಪನೆಯಲ್ಲಿ ಆಗಿರುವ ಬದಲಾವಣೆ : ಎಸ್.ಪಿ. ಪದ್ಮಪ್ರಸಾದ್

೩. ಸಂಶೋಧನೆಯ ಪಾಶ್ಚಾತ್ಯ ಮತ್ತು ದೇಶಿ ನೆಲೆಗಳು : ಸಿ. ನಾಗಣ್ಣ

೪. ಸಂಶೋಧನೆಯ ಪರಿಕರಗಳು ಮತ್ತು ಅವುಗಳನ್ನು ಬಳಸಿಕೊಂಡ ಬಗೆ : ಎಂ.ಜಿ. ಮಂಜುನಾಥ್

೫. ಸಂಶೋಧನೆ ಮತ್ತು ಸಂಸ್ಕೃತಿ : ತಾಳ್ತಜೆ ವಸಂತಕುಮಾರ್

೬. ಸಂಶೋಧನ ಬರಹಗಳ ಭಾಷೆ : ಸೋಮಶೇಖರ ಗೌಡ

೭. ಸಂಶೋಧನೆ ಮತ್ತು ಸಮಾಜ ಶಾಸ್ತ್ರಗಳು : ಚಂದ್ರಪೂಜಾರಿ

೮. ಸಂಶೋಧನೆಗಾಗಿ ರೂಪಿತವಾದ ಸಂಸ್ಥೆಗಳು ಮತ್ತು ಪತ್ರಿಕೆಗಳು: ಸಂಗಮೇಶ ಸವದತ್ತಿಮಠ

೯. ಸಂಶೋಧನೆ ಕುರಿತಂತೆ ಬಂದಿರುವ ಕೃತಿಗಳ ಪರಿಚಯ–ವಿಮರ್ಶೆ : ಚಿತ್ತಯ್ಯ ಪೂಜಾರಿ

೧೦. ಸಂಶೋಧನೆಯ ಫಲಶ್ರುತಿ, ಸಮೀಕ್ಷೆ : ಕಮಲಾ ಹಂಪನಾ

ಆಯಾ ಲೇಖನದ ಅಭಿಪ್ರಾಯಗಳ ಹೊಣೆ ಆಯಾ ಲೇಖಕರಿಗೆ ಸೇರಿದ್ದು ಎಂದು

ಹೇಳುವಾಗ ಆ ಬರೆಹಗಾರರೆಲ್ಲರೂ ಅವರವರಿಗೆ ವಹಿಸಿದ ಹೊಣೆಗಾರಿಕೆಯ ಗುರುತ್ವವನ್ನು ಅರಿತು ಲೇಖನ ಸಿದ್ಧಪಡಿಸಿರುತ್ತಾರೆ ಎಂಬುದನ್ನೂ ನೆನಪಿಡಬೇಕಾಗುತ್ತದೆ. ಈ ವಿವಿಧ ಪ್ರಬಂಧಗಳನ್ನು ಓದಿದ ಮೇಲೆ ಇದುವರೆಗೆ ಆಗಿರುವ ಕೆಲಸ ಅಗಾಧವಾದದ್ದು ಎಂಬುದರ ಜೊತೆಗೆ ಆ ವಿಷಯದ ಸ್ವರೂಪ ಮತ್ತು ಮಹತ್ವವೂ ನಮಗೆ ಮನವರಿಕೆ ಆಗುತ್ತದೆ. ಈ ವಿಚಾರ ವಾಹಿನಿಯ ಪ್ರವಹಣ ಇಲ್ಲಿಗೆ ನಿಲ್ಲುವಂತಹುದಲ್ಲ. ಇನ್ನು ಆಗಬೇಕಾದದ್ದು ಯಾವುದು, ಅದು ಯಾವ ಬಗೆಯದು ಎಂಬಿತ್ಯಾದಿ ಮುನ್ನೋಟದ ಗಂಭೀರ ಮೀಮಾಂಸೆಯೂ ನಡೆಯಬೇಕು. ಪ್ರಸ್ತುತ ಸಂಪುಟ ಅಂಥದೊಂದು ಸಂಚಲನಕ್ಕೆ ತಕ್ಕ ಚಿಮ್ಮುಹಲಗೆ ಆಗುತ್ತದೆ. ಹೊರಳು ದಾರಿಯಲ್ಲಿ ಬಂದು ನಿಂತಿರುವ ಸಂಶೋಧಕರಿಗೆ ಯಾವ ಕವಲಿಗೆ ಹೆಜ್ಜೆ ಹಾಕಿದರೆ ಯಾವ ಸವಲತ್ತುಗಳಿವೆ ಎಂಬ ಸೂಚನೆಯೂ ದಿಕ್‌ಸೂಚಿಯೂ ಇಲ್ಲಿನ ಬರೆಹಗಳಿಂದ ಸಿಗುತ್ತದೆ. ಈ ಬಗೆಯ ಸಂಕಲನಗಳು ಕರಾರುವಾಕ್ಕಾಗಿ ಇರಬೇಕೆಂದು ಎಷ್ಟೇ ಎಚ್ಚರಿಕೆಯಿಂದ ಅಣಿಗೊಳಿಸಿದರೂ ಇತಿಮಿತಿಗಳು ಇರುತ್ತವೆ. ಇನ್ನೂ ಕೆಲವು ವಿಚಾರಗಳೂ ಪ್ರಸ್ತಾಪಗಳೂ ಲೇಖನಗಳೂ ಇದರಲ್ಲಿ ಬರಬೇಕಿತ್ತು ಎಂಬ ಅನಿಸಿಕೆಗೆ ಅವಕಾಶ ಇರುತ್ತದೆ.

ಗ್ರಂಥಸಂಪಾದನೆ, ಶಬ್ದಕೋಶ ರಚನೆ, ಶಾಸನ ಸಂಗ್ರಹ ಕಾರ್ಯ, ಹಸ್ತಪ್ರತಿಶಾಸ್ತ್ರ–ಕ್ಷೇತ್ರಗಳ ಸಂಶೋಧನ ಇತಿಹಾಸವನ್ನು ಕುರಿತು ಈ ಮಾಲೆಯ ಹನ್ನೆರಡನೆಯ "ಸಂಕೀರ್ಣ-೧" ಸಂಪುಟದಲ್ಲಿ ಹಿರಿದಾಗಿ ಹೇಳಿರುವ ಬೇರೆ ಬೇರೆ ಬರೆಹಗಳಿವೆ. ಅದರಿಂದ ಆ ವಿಷಯಗಳನ್ನು ಅತಿಕಿರಿದರಲ್ಲಿ ಉಚಿತಕೆ ತಕ್ಕಷ್ಟನ್ನು ಬರೆದಿದ್ದೇನೆ. ಹದಿನಾಲ್ಕು ವರ್ಷಗಳ ಹಿಂದೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಇಪ್ಪತ್ತನೆಯ ಶತಮಾನದ ಸಾಹಿತ್ಯ ಸಮೃದ್ಧಿಯನ್ನು ವಿಷಯವಾರು ಸಮೀಕ್ಷಿಸುವ ಯೋಜನೆಯನ್ನು ಹಮ್ಮಿತು. ಆ ಮಾಲೆಯಲ್ಲಿ 'ಶತಮಾನದ ಸಂಶೋಧನೆ' ಹೆಸರಿನ ೧೧೧೬ ಪುಟಗಳಿರುವ ಸಂಪುಟವನ್ನು ಎನ್.ಎಸ್. ತಾರಾನಾಥ ೨೦೧೧ರಲ್ಲಿ ಸಿದ್ಧಪಡಿಸಿದರು. ಅದರಲ್ಲಿ ಶಾಸನ ಶೋಧ, ಕರ್ನಾಟಕ ಸಂಸ್ಕೃತಿ ಶೋಧ, ಭಾಷಾಶೋಧ, ಛಂದಃಶೋಧ, ಕವಿ–ಕಾಲ–ಮತ–ಕರ್ತೃತ್ವಶೋಧ, ಸಾಹಿತ್ಯಶೋಧ, ಸಾಹಿತ್ಯ ಸಂಸ್ಕೃತಿಶೋಧ, ಹೊಸಗನ್ನಡ ಸಾಹಿತ್ಯೋದಯ ಶೋಧ – ಎಂಬ ಎಂಟು ತಲೆ ಬರೆಹಗಳಡಿಯಲ್ಲಿ ವಿವಿಧ ಲೇಖಕರು ಪ್ರಕಟಿಸಿದ್ದ ಒಟ್ಟು ಎಂಬತ್ತು ಲೇಖನಗಳನ್ನು ಸಂಗ್ರಹಿಸಿ ಅಳವಡಿಸಿದೆ. ಪ್ರಸ್ತುತ ಕನ್ನಡ ಸಾಹಿತ್ಯ ಪರಿಷತ್ತು ತನಗೆ ನೂರು ವರುಷ ತುಂಬಿದ ನೆನಪಿಗೆ ಯೋಜಿಸಿರುವ ಮಾಲೆಯಲ್ಲಿ ತರುತ್ತಿರುವ ಸಂಶೋಧನ ಸಂಪುಟದ ಹಾಸು ದೊಡ್ಡದು ಮತ್ತು ಬೇರೆಯಾದುದು.

ಹತ್ತೊಂಬತ್ತು ಮತ್ತು ಇಪ್ಪತ್ತನೆಯ ಶತಮಾನದ ಹಾಸಿನಲ್ಲಿ ಸಂಶೋಧನೆಯು ಒಂದು ಗಂಭೀರ ಅಧ್ಯಯನ ಶಿಸ್ತಾಗಿ ಬೆಳೆದು ಬಂದ ಪರಿಯನ್ನು ಅರಿಯಲು ನೆರವಾಗುವಂತೆ ಮೊದಲನೆಯ ಮತ್ತು ಕಡೆಯ ಅಧ್ಯಾಯವನ್ನು ಸಂಯೋಜಿಸಿದ್ದೇನೆ. ಸಂಶೋಧನೆಯ ದೃಷ್ಟಿಯಿಂದ ಪೂರ್ವ–ಪಶ್ಚಿಮಗಳ ಮುಖಾಮುಖಿ ಫಲಿಸಿದ ಈ ಅವಧಿಯಲ್ಲಿದ್ದ ಪ್ರಾದೇಶಿಕ ಪ್ರತಿಭೆ ಪಾಂಡಿತ್ಯದ ಪ್ರಬುದ್ಧತೆಯನ್ನೂ ದೇಶೀಯ ತುಡಿತ ಕಾಳಜಿಗಳನ್ನೂ ಮನಗಾಣಿಸಿದ್ದೇನೆ. ನಾನಾರಂಗಗಳಲ್ಲಿನ ಮಹತ್ತರ ಸಾಧನೆ, ಚಿಂತನೆ ಮತ್ತು ವೈವಿಧ್ಯಪೂರ್ಣ ಪ್ರಯೋಗಗಳನ್ನು ಎಂಟು ಜನ ವಿದ್ವಾಂಸರು ಪರಿಚಯಿಸಿದ್ದಾರೆ.

ನನ್ನ ವಿನಂತಿಗೆ ಸ್ಪಂದಿಸಿ, ನನ್ನ ತಗಾದೆಯನ್ನು ಸಹಿಸಿ ಸಹಕರಿಸಿದ ಈ ಸಂಪುಟದ ಸಹ ಲೇಖಕರಿಗೆ ನನ್ನ ನೆನಕೆಗಳು ಮೀಸಲು. ಅರ್ಧ ಶತಮಾನಕ್ಕೂ ಹೆಚ್ಚು ವರ್ಷಕಾಲ ಯಾವ ಸಂಶೋಧನ ಕಾರ್ಯದಲ್ಲಿ ನನ್ನನ್ನು ತೊಡಗಿಸಿಕೊಂಡು ಅಧ್ಯಯನ ನಿರತಳಾಗಿದ್ದೆನೊ ಅಂತಹ ಕ್ಷೇತ್ರಕ್ಕೆ ಸಂಬಂಧಿಸಿದ ಈ ಸಂಪುಟವನ್ನು ಅಣಿಗೊಳಿಸಿ ಕೊಡುವ ಪ್ರೀತಿಯ ಕೆಲಸವನ್ನು ನನಗೆ ವಹಿಸಿಕೊಟ್ಟ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಪುಂಡಲೀಕ ಹಾಲಂಬಿ ಅವರಿಗೆ ಸಹರ್ಷ ಕೃತಜ್ಞತೆಗಳು.

– ಕಮಲಾ ಹಂಪನಾ
ಸಂಪಾದಕಿ

ಪರಿವಿಡಿ

೧. ಸಂಶೋಧನೆಯ ವಿಸ್ತಾರ–ವಿನ್ಯಾಸ ೩
– ಕಮಲಾ ಹಂಪನಾ

೨. ಸಂಶೋಧನೆ ಮತ್ತು ಅದರ ಪರಿಕಲ್ಪನೆಯಲ್ಲಿ ಆಗಿರುವ ಮಾರ್ಪಾಟುಗಳು ೨೫
– ಡಾ. ಎಸ್.ಪಿ. ಪದ್ಮಪ್ರಸಾದ್

೩. ಸಂಶೋಧನೆಯ ಪಾಶ್ಚಾತ್ಯ ಮತ್ತು ದೇಶಿ ನೆಲೆಗಳು ೩೭
– ಡಾ. ಸಿ. ನಾಗಣ್ಣ

೪. ಸಂಶೋಧನೆಯ ಪರಿಕರಗಳು ಮತ್ತು ಅವುಗಳನ್ನು ಬಳಸಿಕೊಂಡ ಬಗೆ ೫೭
– ಡಾ. ಎಂ.ಜಿ. ಮಂಜುನಾಥ

೫. ಸಂಶೋಧನೆ ಮತ್ತು ಸಂಸ್ಕೃತಿ ೮೯
– ಡಾ. ತಾಳ್ತಜೆ ವಸಂತಕುಮಾರ

೬. ಸಂಶೋಧನ ಬರಹಗಳ ಭಾಷೆ ೧೧೫
– ಡಾ. ಸೋಮಶೇಖರಗೌಡ

೭. ಸಮಾಜ ಶಾಸ್ತ್ರಗಳು ಮತ್ತು ಸಂಶೋಧನೆ ೧೩೧
– ಡಾ. ಎಂ. ಚಂದ್ರ ಪೂಜಾರಿ

೮. ಕನ್ನಡ ಸಂಶೋಧನೆಗಾಗಿ ರೂಪಿತವಾದ ಸಂಸ್ಥೆಗಳು ಮತ್ತು ಪತ್ರಿಕೆಗಳು ೧೭೧
– ಡಾ. ಸಂಗಮೇಶ ಸವದತ್ತಿಮಠ

೯. ಸಂಶೋಧನೆಯನ್ನು ಕುರಿತಂತೆ ಬಂದಿರುವ ಕೃತಿಗಳ ಪರಿಚಯ ಮತ್ತು ವಿಮರ್ಶೆ ೨೧೩
– ಡಾ. ಡಿ.ಕೆ. ಚಿತ್ತಯ್ಯ ಪೂಜಾರ್

೧೦. ಸಂಶೋಧನೆಯ ಫಲಶ್ರುತಿ–ಸಮೀಕ್ಷೆ ೨೩೩
– ಕಮಲಾ ಹಂಪನಾ

ಅಜೀವಂ ಪೊಸಯಿಸುವುದೇ ಸಂಶೋಧನಂ

ಸಂಶೋಧನೆ

೧

ಸಂಶೋಧನೆಯ ವಿಸ್ತಾರ–ವಿನ್ಯಾಸ

ಕಮಲಾ ಹಂಪನಾ

ಅವತರಣಿಕೆ

ಸಂಶೋಧನೆ ಎಂಬುದು ಒಂದು ನಿರ್ದಿಷ್ಟ ವಿಷಯವನ್ನು ಕುರಿತ ತಲಸ್ಪರ್ಶಿ ಅಧ್ಯಯನ. ಅಧ್ಯಯನಕ್ಕೆಂದು ಆರಿಸಿಕೊಂಡ ಯಾವುದೇ ವಿಷಯದಲ್ಲಿ ಬುಡಮಟ್ಟ ಹುಡುಕಾಟವೇ ಶೋಧನೆ. ಇದು ಗತ ಇತಿಹಾಸದ ಪುನರಾವಲೋಕನ ಹಾಗೂ ಪುನಾರಚನೆ ಆಗಿರಬಹುದು ಇಲ್ಲವೇ ವರ್ತಮಾನದ್ದೇ ಆದ ಸಂಗತಿಯೊಂದರ ಆಳವೂ ಸಮಗ್ರವೂ ಆದ ಅವಲೋಕನ ಇರಬಹುದು. ಈ ತಪಾಸಣೆ ಪ್ರಕ್ರಿಯೆಯಲ್ಲಿ ವಿಶ್ವಾಸಾರ್ಹ ಆಕರಗಳ, ಜೀವಧಾತುಗಳ ಅವಲಂಬನೆ, ಕಳಚಿಹೋಗಿದ್ದ ಕೊಂಡಿಗಳನ್ನು ಕೂಡಿಸುವುದು, ಕತ್ತಲೆಯ ಮುಸುಕು ಮುಚ್ಚಿದ್ದ ಸಂಗತಿಗಳಿಗೆ ಬೆಳಕು ಹಾಯಿಸಿ ಅದರ ವಿಚಾರದಲ್ಲಿ ನಮ್ಮ ತಿಳಿವಳಿಕೆಯನ್ನು ಹೆಚ್ಚಿಸುವುದು – ಇದು ಕಟ್ಟಕಡೆಯಲ್ಲಿ ದೊರೆಯುವ ಫಲ. ಸಂಶೋಧನೆಯಿಂದ ಹೊಸ ಸಂಗತಿಗಳು ತಿಳಿಯುತ್ತವೆ ಮತ್ತು ಸಮಸ್ಯೆಗಳಿಗೆ ಪರಿಹಾರ ಕಾಣುತ್ತದೆ.

ಸಂಶೋಧನೆ ಸಂಕೀರ್ಣ ಸ್ವರೂಪದ್ದು. ಆದಕಾರಣ ಸಂಶೋಧನೆ ಮತ್ತು ಅದರ ಸ್ವರೂಪ, ವ್ಯಾಪ್ತಿ ಕುರಿತು ಬಂದಿರುವ ನಿರ್ವಚನಗಳನ್ನು ಗಮನಿಸಬೇಕಾಗುತ್ತದೆ. ಸಂಶೋಧನೆಯ ನಿರ್ವಚನಕ್ಕೆ ಮತ್ತು ಅದರ ವ್ಯಾಪ್ತಿ ಸ್ವರೂಪದ ಪರಿಚಯ ಪರಾಮರ್ಶೆಗೆ ತೊಡಗುವುದಕ್ಕೂ ಮೊದಲು ಇದರ ಉಗಮ, ವಿಕಾಸ ಕುರಿತು ಅರಿಯುವುದು ಅಗತ್ಯವಿದೆ. ಸಂಶೋಧನೆ ಎಂಬ ಮಾತು ಇಂದು ಸಾಹಿತ್ಯ ವಲಯದಲ್ಲಿ, ಅದರಲ್ಲಿಯೂ ವಿದ್ವತ್ ಕ್ಷೇತ್ರದಲ್ಲಿ, ಬಹು ವ್ಯಾಪಕವಾಗಿ ಬಳಕೆ ಯಲ್ಲಿದೆ. ಈ ಶಬ್ದದ ನಿಷ್ಪತ್ತಿ (ವ್ಯುತ್ಪತ್ತಿ) ಮತ್ತು ಮೂಲಾರ್ಥವನ್ನು ಪರಿಶೀಲಿಸಿದರೆ ಈ ಮಾತು ಕಾಲಕ್ರಮೇಣ ಒಂದು ಪರಿಕಲ್ಪನೆಯಾಗಿ ಪಡೆದುಕೊಂಡಿರುವ ವ್ಯತ್ಯಾಸ ವಿಕಾಸಗಳು ನಿಚ್ಚಳವಾಗುತ್ತವೆ.

ಸಂಶೋಧನೆ ಎಂಬುದು ಕನ್ನಡದಲ್ಲಿ ಬಹುವಾಗಿ ರೂಢಿಯಲ್ಲಿರುವ ಅನ್ಯ ಭಾಷೆಯಿಂದ ಬಂದಿರುವ ಶಬ್ದರೂಪ. ಸಂಸ್ಕೃತ ಭಾಷೆಯಿಂದ ಕನ್ನಡ ಭಾಷೆ ಎರವಲಾಗಿ ಪಡೆದಿರುವ ಈ ಶಬ್ದದ ಮೂಲರೂಪ 'ಸಂಶೋಧನ' ಎಂಬುದು.

ಸಂಸ್ಕೃತದಲ್ಲಿ ಸಂಶೋಧನ, ಶೋಧಃ, ಸಂಶುದ್ಧಿ – ಇವು ಒಂದಕ್ಕೊಂದು ಸಂಬಂಧವಿರುವ ಜ್ಞಾತಿರೂಪಗಳು. 'ಶೋಧನ' ಎಂಬ ಪದಕ್ಕೆ 'ಸಂ–' ಎಂಬ ಆದಿಪ್ರತ್ಯಯ ಸೇರಿ ಸಂಶೋಧನ ಎಂಬ ಅಕಾರಾಂತ ಶಬ್ದ ಸಿದ್ಧಿಸಿದೆ. ಸಂಸ್ಕೃತದ ಕೆಲವು ಅಕಾರಾಂತ ಶಬ್ದಗಳು ಕನ್ನಡಕ್ಕೆ ಬಂದಾಗ ಎಕರಾಂತ ಆಗುವುದುಂಟು. ಅದರಂತೆ ಈ ಸಂಶೋಧನ ಶಬ್ದವೂ ಕನ್ನಡದಲ್ಲಿ ಸಂಶೋಧನೆ ಎಂದಾಗಿದೆ.

ಇಲ್ಲಿ ಗಮನಿಸಬೇಕಾದ ಇನ್ನೊಂದು ಸ್ವಾರಸ್ಯವೂ ಇದೆ. ಸಂಸ್ಕೃತದಲ್ಲಿ 'ಸಂಶೋಧನ' ಶಬ್ದದಂತೆ 'ವಿಮರ್ಶನ' ಎಂಬ ಶಬ್ದವಿದೆ. ಆದರೆ ಕನ್ನಡದಲ್ಲಿ ಸಂಶೋಧನವು ಸಂಶೋಧನೆ ಆದಂತೆ ವಿಮರ್ಶನ ಶಬ್ದವು ವಿಮರ್ಶನೆ ಎಂದಾಗಲಿಲ್ಲ. ಅದು ಕನ್ನಡ ಭಾಷೆಯ ಜಾಯಮಾನಕ್ಕೆ ಒಗ್ಗಲಿಲ್ಲ. ಅದರಿಂದ ಕನ್ನಡ ಭಾಷೆ ಸಂಸ್ಕೃತದಿಂದ 'ವಿಮರ್ಶ' ಎಂಬ ಅಕಾರಾಂತ ಶಬ್ದವನ್ನು ಒಪ್ಪಿಕೊಂಡು ಅದನ್ನು 'ವಿಮರ್ಶೆ' ಎಂದು ಎಕಾರಾಂತವಾಗಿಸಿ ಬಳಸತೊಡಗಿದೆ.

ಇಂಗ್ಲಿಷಿನ ರಿಸರ್ಚ್, ರಿಸರ್ಚರ್ ಎಂಬ ಎರಡು ಶಬ್ದಗಳಿಗೆ ಸಂವಾದಿಯಾಗಿ ಕನ್ನಡದಲ್ಲಿ ಸಂಶೋಧನೆ, ಸಂಶೋಧಕ ಎಂಬ ಪದಗಳು ಚಾಲ್ತಿಯಲ್ಲಿ ನಿಂತುಬಿಟ್ಟಿವೆ. ಸಂ+ಶೋಧನೆ, ಸಂ+ಶೋಧಕ ಎಂಬಂತೆಯೇ ಇಂಗ್ಲಿಷಿನ ಶಬ್ದಗಳಲ್ಲಿಯೂ ರಿ+ಸರ್ಚ್, ರಿ+ಸರ್ಚರ್ (re-search, re-searcher) ಎಂಬ ಎರಡು ಸೊಲ್ಲುಗಳು ಕೂಡಿವೆ. ಇಂಗ್ಲಿಷಿನ 'ರಿಸರ್ಚ್' ಶಬ್ದಕ್ಕಿರುವ ಹುರುಳು ಇದು – Careful search, diligent examination or investigation, scrutiny, to examine anew. ಇಂಗ್ಲಿಷಿನ ರಿಸರ್ಚ್ ಶಬ್ದಕ್ಕಿರುವ ಈ ಅರ್ಥ ಪ್ರತೀತಿಯನ್ನೂ ಒಳಗೊಳ್ಳುವಂತೆ ಕನ್ನಡದಲ್ಲಿ ಸಂಶೋಧನೆ ಎಂಬ ಶಬ್ದವನ್ನು ರೂಢಿಗೆ ತರಲಾಗಿದೆ.

ಆದರೆ ವಾಸ್ತವವಾಗಿ ಸಂಸ್ಕೃತದಲ್ಲಿ ಈ ಸಂಶೋಧನೆ (ನ) ಎಂಬ ಶಬ್ದಕ್ಕೆ ಇರುವ ಮೂಲ ಅಥವಾ ಪ್ರಧಾನ ಅರ್ಥ ಬೇರೆಯೇ ಆಗಿದೆ. ಸಂಶೋಧನ ಎಂಬ ಪದದ ಅರ್ಥ – 'ಶುದ್ಧಿಗೊಳಿಸುವುದು, ಪವಿತ್ರಗೊಳಿಸುವುದು' ಎಂದು; purifying, cleansing. ಪ್ರಾಚೀನ ಪ್ರಯೋಗಗಳು ಈ ಅರ್ಥವನ್ನು ಒಳಗೊಂಡಿವೆ. ಸಂಶೋಧನ ಶಬ್ದಕ್ಕೆ ಪ್ರಾಚೀನ ಸಂಸ್ಕೃತ ನಿಘಂಟುಗಳಲ್ಲಿ ಕೊಟ್ಟಿರುವ ಅರ್ಥವೂ ಇದೇ ಆಗಿದೆ. ಮಾನಿಯರ್ ವಿಲಿಯಮ್ಸ್, ವಿ.ಎಸ್. ಆಪ್ಟೆ ಮೊದಲಾದವರು ಸಿದ್ಧಪಡಿಸಿರುವ ಸಂಸ್ಕೃತ – ಇಂಗ್ಲಿಷ್ ಶಬ್ದ ಕೋಶಗಳಲ್ಲಿಯೂ ಇದಿಷ್ಟೇ ಅರ್ಥ ಕೊಟ್ಟಿದ್ದಾರೆ.

ನಿರ್ವಚನ

ಕನ್ನಡ ಸಾಹಿತ್ಯದ ಸಂದರ್ಭದಲ್ಲಿ 'ಸಂಶೋಧನೆ' ಎಂಬ ಶಬ್ದವು ವಿಶಿಷ್ಟವಾದ, ಇಂದು ಬಹುರೂಢಿಯಲ್ಲಿ ಇರುವ ಅರ್ಥವಿಸ್ತಾರವನ್ನು ಪಡೆಯಿತು. ಆ ಎರಡನೆಯ ಅರ್ಥವನ್ನು ಕನ್ನಡ ಸಾಹಿತ್ಯ ಪರಿಷತ್ತು ಸಿದ್ಧಪಡಿಸಿರುವ ಬೃಹತ್ ಕನ್ನಡ ನಿಘಂಟಿನ ಎಂಟನೆಯ ಸಂಪುಟದಲ್ಲಿ ಕೊಡಲಾಗಿದೆ. "ಸೂಕ್ಷ್ಮವೂ ಶಾಸ್ತ್ರೀಯವೂ ಆದ ಅನ್ವೇಷಣೆ, ಆಮೂಲಾಗ್ರವಾದ ತಪಾಸಣೆ, ಹೊಸ ವಿಷಯಗಳ ಆವಿಷ್ಕಾರದ ಪ್ರಯತ್ನ" (೧೯೯೫ : ಪುಟ ೮೨೬೭). ಹೀಗಾಗಿ ಸಂಶೋಧನೆ ಶಬ್ದವು ಕನ್ನಡ ಭಾಷಾ ಸಾಹಿತ್ಯ ಸಂದರ್ಭದಲ್ಲಿ ಗುಣದೋಷ ಪರಿಶೀಲನೆ, ಹೊಸ ವಿಷಯಗಳ ಆವಿಷ್ಕಾರದ ಪ್ರಯತ್ನ – ಎಂಬಿತ್ಯಾದಿ ಹೆಚ್ಚಿನ

ಹುರುಳು ಹಬ್ಬಿ ದಾಂಗುಡಿಯಿಟ್ಟು ಬಳಕೆಯಲ್ಲಿದೆಯೇ ಹೊರತು ಮೂಲಾರ್ಥವಾದ 'ಶುದ್ಧಿಗೊಳಿಸುವುದು' ಎಂಬ ಅರ್ಥದಲ್ಲಿ ಈ ಶಬ್ದ ಹಬ್ಬಲಿಲ್ಲ. ಅದೇ ರೀತಿಯಲ್ಲಿ ಕನ್ನಡದಲ್ಲಿ ಪ್ರಚಲಿತವಿರುವ 'ಅನ್ವೇಷಣೆ, ತಪಾಸಣೆ' ಎಂಬ ಅರ್ಥಪ್ರತೀತಿ ಈ ಶಬ್ದಕ್ಕೆ ಸಂಸ್ಕೃತದಲ್ಲಿ ವೃದ್ಧಿಸಲಿಲ್ಲ.

ಹುಡುಕಾಟ ಮನುಷ್ಯನ ಹುಟ್ಟುಗುಣಗಳಲ್ಲೊಂದು. ಆತ ಇರುವುದನ್ನು ಇನ್ನಷ್ಟು ಕೆದಕಿ ಬೆದಕಿ ನೋಡುತ್ತಾನೆ. ಅದರಂತೆ ಹೊಸತನ್ನು ಅರಿಯುವ, ಕಾಣುವ ಅನ್ವೇಷಣೆಯನ್ನೂ ನಡೆಸುತ್ತಾನೆ. ಇದು ಹಂಬಲ ಮಾತ್ರವಲ್ಲ, ಅನಿವಾರ್ಯವೂ ಹೌದು. ನೆಸೆಸಿಟಿ ಈಸ್ ದಿ ಮದರ್ ಆಫ್ ಇನ್‌ವೆನ್‌ಷನ್-ಎಂಬ ಮಾತಿನಲ್ಲಿ ಹುರುಳಿದೆ. ಹೊಟ್ಟೆಯ ಹಸಿವು ಭೌತಿಕ, ಜ್ಞಾನದ ಹಸಿವು ಬೌದ್ಧಿಕ. ಲೌಕಿಕ ಸುಖಕ್ಕೆ ಇವೆರಡೂ ಪೂರಕ. ಸಂಶೋಧನೆಯ ರೀತಿನೀತಿ ವಿಧಾನಗಳು ವಿದೇಶೀಯರು ನಮಗೆ ನೀಡಿದ ಬಳುವಳಿ ಎಂಬುದು ತಪ್ಪು ತಿಳಿವಳಿಕೆ. ಭಾರತೀಯರಿಗೆ ಐತಿಹಾಸಿಕ ಪ್ರಜ್ಞೆಯೇ ಇರಲಿಲ್ಲ, ಸಂಶೋಧನೆಯ ಅರಿವು ಇರಲಿಲ್ಲ, ಇವು ನಮ್ಮಲ್ಲಿ ಬೆಳೆದು ಬಂದದ್ದು ಪಶ್ಚಿಮದ ವಿದ್ವಾಂಸರಿಂದ – ಎಂದು ಬಿಂಬಿಸುವುದು ಸರಿಯಲ್ಲ. ಸಂಶೋಧನೆ, ಸಂಶೋಧಕ ಎಂಬ ಪರಿಭಾಷೆ ನವೀನವೇ ಹೊರತು ಅದರ ಮೂಲ ಪರಿಕಲ್ಪನೆ ಪುರಾತನವಾದದ್ದು.

ಹಿಂದಿನವರು ತಮ್ಮನ್ನು ಸಂಶೋಧಕರೆಂದು ಕರೆದುಕೊಳ್ಳಲಿಲ್ಲ ಹಾಗೂ ತಾವು ಮಾಡುತ್ತಿರುವುದು ಸಂಶೋಧನೆ ಎಂದು ಹೇಳಿಕೊಳ್ಳಲಿಲ್ಲ. ಆದರೆ ದಿಟಕ್ಕೂ ಅವರು ಸಂಶೋಧಕರಿದ್ದರು ಮತ್ತು ಇಂದಿಗೂ ಮೌಲಿಕತೆ ಇರುವಂತಹ ಮಹತ್ವದ ಸಂಶೋಧನೆ ಮಾಡಿದ್ದರು. ಶ್ರೀವಿಜಯ (ಕವಿರಾಜಮಾರ್ಗ), ನಾಗವರ್ಮ (ಲಕ್ಷಣಶಾಸ್ತ್ರ ಗ್ರಂಥಗಳು), ಕೇಶಿರಾಜ-ಭಟ್ಟಾಕಲಂಕ (ವೈಯಾಕರಣರು) ದೇವಚಂದ್ರ, ಮಲ್ಲಿಕಾರ್ಜುನ – ಅಭಿನವ ವಾದಿ ವಿದ್ಯಾನಂದ (ಸಂಗ್ರಹಕಾರರು) ಕವಿಗಳು ಸಂಶೋಧನಕಾರರೂ ಹೌದು. ಶಾಸ್ತ್ರಕೃತಿಗಳಾದ ಜಟ್ಟಶಾಸ್ತ್ರ (=ಮಳೆ ಶಾಸ್ತ್ರ) (೧೭೭೦-೧೮೪೧), ಅಶ್ವಶಾಸ್ತ್ರ, ಗಜಶಾಸ್ತ್ರ, ಸೂಪಶಾಸ್ತ್ರ (ಅಡಿಗೆ ಶಾಸ್ತ್ರ), ಲೋಕೋಪಕಾರ (ಜನೋಪಕಾರ) ಸಂಶೋಧನ ಗ್ರಂಥಗಳೂ ಆಗಿದ್ದುವು. ಆದುದರಿಂದ ಸಂಶೋಧನ ಪ್ರವೃತ್ತಿ ಆಧುನಿಕ ಕಾಲದ ಅನುಸಂಧಾನವೇನಲ್ಲ. ಪ್ರಾಚೀನ ಕಾಲದಿಂದಲೂ ಸಂಶೋಧನೆಗಳು ನಾನಾ ಕ್ಷೇತ್ರಗಳಲ್ಲಿ ನಿರಂತರವಾಗಿ ನಡೆದಿವೆ. ಅಂದಂದಿಗೆ ಜ್ಞಾನವೆಂದೂ ವಿಜ್ಞಾನವೆಂದೂ ಶಾಸ್ತ್ರವೆಂದೂ ತಿಳಿದಿದ್ದ ಎಲ್ಲ ಪೋಷಕ ಕ್ಷೇತ್ರಗಳಲ್ಲೂ ತಪಾಸಣೆ ಮತ್ತು ಹುಡುಕಾಟ ಸತತವಾಗಿ ನಡೆದಿದೆ.

ಸಂಶೋಧನೆ ಬಹುರೂಪಿಯೂ ಬಹುವ್ಯಾಪಿಯೂ ಆದುದು. ಅದು ಸೃಷ್ಟಿ ಸಮಸ್ತವನ್ನೂ ತನ್ನ ತೋಳಿನ ತೆಕ್ಕೆಗೆ ಆತುಕೊಳ್ಳುತ್ತದೆ. ಹಿಂದಿನ ಬುದ್ಧಿಯೊಡೆಯರು ತಮತಮಗೆ ತೋಚಿದ ಹಾಗೆ ಆರಿಸಿಕೊಂಡ ವಸ್ತು ಇಲ್ಲವೇ ವಿಷಯ ಕುರಿತು ಆಳವಾಗಿ ಚಿಂತಿಸಿರುವುದಕ್ಕೆ ಸೂಕ್ತ ನಿದರ್ಶನಗಳಿವೆ. ಅಂದಿನ ಬಲ್ಲಿದರಿಗೂ ಸುಳಿವು ಹೊಳವುಗಳಿದ್ದುವು. ವಿದ್ವತ್ತಿನ ದೋಹದ ವಿತ್ತು. ಹಳೆಯ ಕಾಲದ ಪಂಡಿತರು ಕೂಡ ತಮ್ಮ ಅಧ್ಯಯನಕ್ಕೆ ಅಗತ್ಯವಾದ ಸಾಮಗ್ರಿಯನ್ನು ಪಡೆದುಕೊಂಡು ಚಿಂತನೆಯನ್ನು ಮುಂದುವರಿಸುತ್ತಿದ್ದರು. ಒಂದು ನಿದರ್ಶನವಿತ್ತು ಇದನ್ನು ಇನ್ನಷ್ಟು ಪುಷ್ಟೀಕರಿಸುತ್ತೇನೆ. ಇದು ಹತ್ತನೆಯ ಶತಮಾನದ ದೃಷ್ಟಾಂತ. ಕವಿಗಳೂ ವಿದ್ವಜ್ಜನರೂ ಸಾಹಿತ್ಯ ವತ್ಸಲ ಸಿರಿವಂತರೂ ಆಗಾಗ ಒಂದೆಡೆ ಕಲೆತು ಸಂಪಾದಿಸುತ್ತಿದ್ದರು. ಅದು ಅರಮನೆ, ಗುರುಮನೆ, ಮಠಮಂದಿರ, ಆಶ್ರಯದಾತರ ಮನೆಯ ಜಗತಿ

ಆಗಿರಬಹುದು. ವೇಮುಲವಾಡ ಚಾಲುಕ್ಯರ ರಾಜನಾದ ಇಮ್ಮಡಿಅರಿಕೇಸರಿಯ ಆಸ್ಥಾನದ ಪಂಡಿತರು ತೀರ್ಮಾನಿಸಿ ಪಂಪನನ್ನು ವಿಕ್ರಮಾರ್ಜುನ ವಿಜಯ ಕಾವ್ಯವನ್ನು ಬರೆಯಲು ಕೇಳಿಕೊಂಡರು. ದಾನಚಿಂತಾಮಣಿ ಅತ್ತಿಮಬ್ಬೆಯ ತಂದೆ ಮಲ್ಲಪಯ್ಯನ ಮನೆ ಪಂಡಿತ ಮಂಡಲಿಗೂ ಕವಿಗಳಿಗೂ ತವರು ಮನೆ ಆಗಿತ್ತೆಂದು ರನ್ನ ಕವಿ ತಿಳಿಸಿದ್ದಾನೆ [ರನ್ನ : ಅಜಿತಪುರಾಣಂ, ೧-೨೮]. ಪಂಪ ಮಹಾಕವಿ ಹೇಳುವ ಅಕ್ಕರದ ಗೊಟ್ಟಿ (ಅಕ್ಷರ) ಗೋಷ್ಠಿಗಳು ಈ ಬಗೆಯವು. ಅದು ವಿದ್ವದ್ ಜನರ ಸಮಾವೇಶ. ಆನೆ ನಡೆದದ್ದು ದಾರಿ ಎಂಬಂತೆ ತಮ್ಮ ದಾರಿಯನ್ನು ತಾವೇ ಕಂಡುಕೊಂಡು ಗುರಿಮುಟ್ಟಿದ ಅಂದಿನ ಪಂಡಿತ ಮಂಡಲಿಯ ಪಾಂಡಿತ್ಯ ಇಂದಿಗೂ ಬೆರಗು ಮೂಡಿಸುತ್ತದೆ.

ಹಿಂದಣ ವಿದ್ವಾಂಸರ ಶೋಧನ ವಿಧಾನ ಒಂದು ಬಗೆಯಲ್ಲಿತ್ತು. ಇಂದು ಯಾವುದನ್ನು ಸಂಶೋಧನ ಮಾರ್ಗ, ವಿಧಿವಿಧಾನ ಎಂದೆಲ್ಲ ಪರಿಗಣಿಸುತ್ತೇವೆಯೋ ಅಂಥದೊಂದು ಸಿದ್ಧ ಚೌಕಟ್ಟಿನಿಂದ ಹಿಂದಿನವರು ಬಹಳ ದೂರ ಸರಿದಿಲ್ಲವೆಂಬುದು ಪರಿಭಾವಿಸಬೇಕಾದ ತೌಲನಿಕ ವಿಚಾರ. ಸಂಶೋಧನೆಯ ಇಂದಿನ ಕೆಲವು ಪರಿಕರಗಳು ಅವರಿಗೆ ಲಭ್ಯವಿರಲಿಲ್ಲ ಹಾಗೂ ತಿಳಿದಿರಲಿಲ್ಲವೆನಿಸಿದರೂ ತತ್ಸಂಬಂಧದ ಕೌಶಲಗಳು ಕರಗತವಾಗಿದ್ದುವು. ಕರ್ನಲ್ ಮೆಕೆಂಜಿಗೆ ನೆರವು ನೀಡಿದ ಕನ್ನಡ ಪಂಡಿತ ಕವೆಲ್ಲಿ ವೆಂಕಟ ಬೋರಯ್ಯನವರು ಶ್ರವಣಬೆಳಗೊಳದಲ್ಲಿರುವ ಬುಕ್ಕರಾಯನ ಶಾಸನವನ್ನು ೧೮೦೭ರಲ್ಲಿಯೇ ಏಷಿಯಾಟಿಕ್ ರಿಸರ್ಚ್ ಪತ್ರಿಕೆಯಲ್ಲಿ ಪ್ರಕಟಿಸಿದ್ದರು. ರೆವರೆಂಡ್ ಎಫ್. ಕಿಟೆಲರಿಗೆ ನಿಘಂಟಿನ ಸಿದ್ಧತೆಯಲ್ಲಿ ವಸ್ತ್ರದ ಶಿವಲಿಂಗಯ್ಯ, ಎಂ.ಸಿ. ಶ್ರೀನಿವಾಸ ಆಚಾರಿ ಮೊದಲಾದ ಇಲ್ಲಿನ ಕನ್ನಡ ಪಂಡಿತರು ಸಹಾಯವಿತ್ತರು. ಅಂದರೆ ಹಿಂದಿನ ದೇಶೀಯ ಪಂಡಿತರು ಸಮರ್ಥರಿದ್ದರು ಎಂಬುದು ವಿದೇಶೀಯರಿಗೆ ತಿಳಿದಿತ್ತು.

ದೇಶೀಯ-ವಿದೇಶೀಯ

ಹಾಗಾದರೆ ಪಶ್ಚಿಮದ ಕೊಡುಗೆ ಎಂಬುದು ಏನೂ ಇಲ್ಲವೆ? ಇದು ಕೇವಲ ಹಳೆಯ ಜಾಡಿನ ಮುಂದುವರಿಕೆ ಮಾತ್ರವೆ? ಪುರಾತನರ ಪದ್ಧತಿಗೂ ಆಧುನಿಕರ ರಿಸರ್ಚ್ ವಿಧಾನಕ್ಕೂ ಅಂತರಗಳಿಲ್ಲವೆ? - ಇವು ಚಿಂತನೀಯ ಪ್ರಶ್ನೆಗಳು. ಇಂಗ್ಲಿಷ್ ಶಿಕ್ಷಣದ ಜೊತೆಗೆ ಆಂಗ್ಲ ವಿದ್ವಾಂಸರ ಬರೆಹಗಳು ಪ್ರೇರಣೆಯಾದುವು, ಹೊಸ ನೋಟ ಮೊಳೆಯಿತು. ಸಂಶೋಧನ ಶಿಸ್ತು, ಅದರ ಅಧ್ಯಯನ ವಿಧಿ ವಿಧಾನ ವಿನ್ಯಾಸ, ಪರಿಕರಗಳ ವಿಶ್ಲೇಷಣೆ, ಸಂಶೋಧನೆಯ ಬರವಣಿಗೆ ಶೈಲಿ, ವಿಷಯವನ್ನು ಕಲೆಹಾಕಿ ಮಂಡಿಸುವ ಮತ್ತು ಬೆಳೆಸುವ ಕ್ರಮ - ಇವೇ ಮೊದಲಾದ ವೈಧಾನಿಕತೆಯು ಪಾಶ್ಚಿಮಾತ್ಯ ತಿಳಿವಳಿಕೆ ಒದಗಿಸಿರುವ ಚೌಕಟ್ಟು. ಅಷ್ಟೇಕೆ ಕಳೆದ ಮೂರು-ನಾಲ್ಕು ದಶಕಗಳಿಂದೀಚೆಗೆ ಕನ್ನಡದಲ್ಲಿ ಸಂಶೋಧನೆಯ ಜಾತಕವನ್ನು ಬಿಡಿಸಿಟ್ಟಂತೆ ವೈಧಾನಿಕತೆಯನ್ನು ಪರಿಚಯಿಸುವ ಪುಸ್ತಕಗಳೂ ಅಚ್ಚಾಗಿವೆ. ಸಂಶೋಧನೆಯ ಅಖಾಡಕ್ಕೆ ಇಳಿಯುವ ಮುಂಚೆ ಸಂಶೋಧನೆಯ ಗರಡಿ ಮನೆಯಲ್ಲಿ ಮಾಡಬೇಕಾದ ಪೂರ್ವ ತಯಾರಿ ಏನೆಂತೆಂಬ ಮಾಹಿತಿಯಿರುವ ಕೈಪಿಡಿಗಳಿವೆ. ಇವೆಲ್ಲವೂ ನೆರವಿಗೆ ನಿಂತಿದ್ದರೂ ಅಂತಿಮವಾಗಿ ಸಂಶೋಧಕನು ಸ್ವಯಮಾಚಾರ್ಯನಾಗಲೇಬೇಕು. ಅಂಥ ನಿಶಿತ ಸ್ವಯಂ ಪ್ರತಿಭೆಯಿದ್ದರೇನೆ ಮೊದಲ ದರ್ಜೆಯ ಸೋಪಜ್ಞ ಕಾಣಿಕೆ ಕೊಡಲು ಸಾಧ್ಯ.

ಮತ್ತೆ ಸಂಶೋಧನೆಯ ಮೂಲಚೂಲದ ಚರ್ಚೆಗೆ ಮರಳೋಣ. ಸಂಶೋಧನೆಯ ಸಿರಿಗಂಧಗಾಳಿ ಬೀಸಿದ್ದು ತೀರ ಕಳೆದ ಶತಮಾನದಿಂದ ಇತ್ತೀಚೆಗೆ ಎಂದಾಗಲಿ, ಹಿಂದಿನ ಆ ಅಜ್ಜಪಜ್ಜರ್ಕಳ ತಲೆಮಾರಿನವರಿಗೆ ಈ ಮಟ್ಟದೆತ್ತರದ ಸಂಶೋಧನೆ ತಿಳಿದಿರಲಿಲ್ಲ ಎಂದಾಗಲಿ ಕಡೆಗಣಿಸಿ ಮಾತಾಡುವುದೂ ಭಾವಿಸುವುದೂ ಯಾಕೆ ತಪ್ಪು ಎಂಬುದನ್ನು ವಿಶದಪಡಿಸಬೇಕಾಗುತ್ತದೆ ಮತ್ತು ತಕ್ಕ ಉದಾಹರಣೆಗಳನ್ನು ಒದಗಿಸಿ ಅಂಕಿ ಅಂಶಗಳ ಒರೆಗಲ್ಲಿಗಿಟ್ಟು ಸಮರ್ಥಿಸಬೇಕಾಗುತ್ತದೆ.

ಈಗಾಗಲೆ ಮೇಲೆ ಪ್ರಸ್ತಾಪಿಸಿದಂತೆ, ಒಳಿತುಗಳೆಲ್ಲ ವಿದೇಶದಿಂದ ಬಂದದ್ದು, ಉತ್ಕೃಷ್ಟ ವಾದದ್ದನ್ನು ಹೊರಗಿನವರು ತಂದದ್ದು ಎಂಬ ಹುಸಿ, ಅಪಪ್ರಥೆ ರೂಢಿಯಲ್ಲಿದೆ. ಈ ತೆರನಾದ ನಂಬಿಕೆ, ಭಾವನೆ, ಪ್ರಚಾರಗಳು ಒಂದು ತುದಿ. ಇನ್ನೊಂದು ತುದಿ ಇದಕ್ಕೆ ತದ್ವಿರುದ್ಧವಾದದ್ದು. ನಮ್ಮಲ್ಲಿ ಎಲ್ಲವೂ ಇತ್ತು. ನಮ್ಮಲ್ಲಿ ಇಲ್ಲದ್ದು ಇನ್ನೆಲ್ಲಿಯೂ ಇರಲಿಲ್ಲ. ಸಕಲ ಪುರಾತನರು ಸಕಲ ಜ್ಞಾನಿಗಳು. ದೇಶೀಯರ ಸರ್ವಜ್ಞತ್ವಕ್ಕೆ ಎಣೆ ಇರಲಿಲ್ಲ – ಎಂಬ ಸ್ವಾಂತಸ್ಸುಖಾಯ ಪ್ರವೃತ್ತಿಯ ಅಭಿಮಾನಾಧಿಕ್ಯದಿಂದ ಬೀಗುವುದು. ಈ ಬಗೆಯ ಎರಡು ಧ್ರುವಗಳ ಅತಿರೇಕವಿರದೆ ವಾಸ್ತವದ ಜಗತಿಹತ್ತಿ ವಸ್ತುನಿಷ್ಠ ಗ್ರಹಿಕೆಯಿಂದ, ನಿರ್ಮಮಕಾರದ ತಟಸ್ಥ ಭೂಮಿಕೆಯಿಂದ ವಾಸ್ತವ ಸಂಗತಿಯ ಪರಿಚಯಕ್ಕೆ ತೊಡಗೋಣ. ಇದೇ ಸಂಶೋಧಕ ನಡೆಯುವ ದಾರಿ. ಆತನದು ನಿಜವನ್ನು ಕಾಣುವ ಹಾಗೂ ಕಾಣಿಸುವ ನಡಿಗೆ.

ಸಂಶೋಧನೆ ಎಂದರೆ ಏನು ಎಂಬ ಪ್ರಶ್ನೆಯೂ ಅದಕ್ಕೆ ಉತ್ತರಗಳೂ ವ್ಯಕ್ತಪಟ್ಟಿವೆ. ಸಂಶೋಧನೆಯೆಂದರೆ ಇದೇನೇ, ಇದಿಷ್ಟೇ ಎಂದು ಸೂತ್ರಪ್ರಾಯವಾಗಿ ಮಂಡಿಸುವ ಪ್ರಯತ್ನಗಳೂ ಆಗಿವೆ. ಇದುವರೆಗೆ ನೀಡಲಾಗಿರುವ ಸಂಶೋಧನೆಯ ಗುಣಲಕ್ಷಣ ನಿರೂಪಣೆಗಳೆಲ್ಲ ಸರಿಯಾಗಿಯೂ ಇವೆ. ಆದರೂ ಅವೆಲ್ಲ ಸಮಗ್ರವಾಗಿವೆ ಅಥವಾ ಸ್ವಯಂಪೂರ್ಣವಾಗಿವೆ ಎಂದೇನೂ ಅಲ್ಲ. ಹಾಗೆಂದು ಆ ವಿವರಣೆಗಳೆಲ್ಲ ಅಸಮರ್ಪಕ ವಾಗಿವೆ ಎಂದೂ ಹೇಳಲಾಗದು. ಸಂಶೋಧನೆಯ್ನು ಕುರಿತ ಪ್ರತಿಯೊಂದು ವ್ಯಾಖ್ಯೆಯೂ ಸರಿಯಾಗಿಯೇ ಇದ್ದಾಗಲೂ ಅದರ ಆಚೆಗೂ ಚಾಚಿಕೊಂಡ ಇನ್ನಷ್ಟು ಅಥವಾ ಇನ್ನೆಷ್ಟೋ ಸಂಗತಿಗಳನ್ನು ಒಳಗೊಂಡಿರುವುದಿಲ್ಲ. ಹೀಗಾಗಿ ಸೂಚಿತವಾಗಿರುವ ಪ್ರತಿಯೊಂದು ಲಕ್ಷಣ ನಿರೂಪಣೆಯೂ ಸಂಶೋಧನೆಯ ಅಪರಿಮಿತವನ್ನು ಪರಿಮಿತಿಯಲ್ಲಿ ಹರಳುಗೊಳಿಸುವ ಪ್ರಯತ್ನವಾಗಿರುತ್ತದೆ.

ಸಂಶೋಧನೆಯ ಗುಣಲಕ್ಷಣ ಆಯಾಮಗಳನ್ನೆಲ್ಲ ಕೀಲಿಸಿ ನಿಷ್ಕೃಷ್ಟ ಅರ್ಥ ಒಳಗೊಂಡು ಬರುವಂತೆ ಒಂದು ನಿರುಪಾಧಿಕ ಸೂತ್ರಕ್ಕೆ ಭಟ್ಟಿ ಇಳಿಸುವುದು ಯಾಕೆ ಕಷ್ಟದ ಕೆಲಸ ಎಂಬುದಕ್ಕೆ ಒಂದು ಉದಾಹರಣೆ ಕೊಡಬಹುದು. ಭಾಷೆ ಎಂದರೇನು ಎಂದು ವಿವರಿಸಲು ಅನೇಕ ಸೂತ್ರಗಳಿವೆ. ಆದರೆ, ಅವೆಲ್ಲವೂ ಸರಿಯಿದ್ದರೂ, ಅವು ಅಸಮಗ್ರವೂ ಹೌದು. ಇದು ಭಾಷೆಯ ಅಗಾಧ ವ್ಯಾಪ್ತಿಯನ್ನು ಸೂಚಿಸುತ್ತದೆ. ಇದರಂತೆಯೇ ಸಂಶೋಧನೆಯೂ ಬ್ರಹ್ಮಾಂಡವನ್ನೇ ತಬ್ಬಿರುವ ವಿಶಾಲ ವಿಚಾರ.

<< ಸಂಶೋಧನೆಯ ಕಾರ್ಯ ತುಂಬ ಕ್ಲೇಶಕರವಾದದ್ದು. ಇದಕ್ಕೆ ಮುಖ್ಯವಾಗಿ ವೈಜ್ಞಾನಿಕ ಮನೋಧರ್ಮ ಬೇಕು. ಯಾವುದಾದರೂ ಸಮಸ್ಯೆಯನ್ನು ಕುರಿತು ವಿಚಾರ ಬೆಳಸುವ ಮುನ್ನ ಆ ವಿಷಯದಲ್ಲಿ ಇತರ ಸಂಶೋಧಕರು ಏನು ಮಾಡಿದ್ದಾರೆ, ಯಾವ ನಿಲವಿಗೆ ಬಂದಿದ್ದಾರೆ, ಎಲ್ಲಿ ವಿರಮಿಸಿದ್ದಾರೆ ಎಂಬೀ ಅಂಶಗಳ ಅರಿವು ಸಾಕಷ್ಟು ಇರಬೇಕು.

ಅವರು ನಿಂತಿರುವ ಎಡೆಯಿಂದ ಮುಂದಕ್ಕೆ ಒಂದು ಹೆಜ್ಜೆಯಷ್ಟಾದರೂ ಹೋಗುವ ಪ್ರಯತ್ನ ಅವರ ಅನಂತರ ಬರುವ ಸಂಶೋಧಕನದು. ಇದಕ್ಕಾಗಿ ಅವನು, ಹಿಂದಿನವರು ಒದಗಿಸಿರುವ ಸಾಧಕ ಬಾಧಕ ಸಾಮಗ್ರಿಗಳ ಜೊತೆಗೆ ತನ್ನದೇ ಆದ ನೂತನ ಆಧಾರಗಳನ್ನು ಕಾಣಿಸುವುದೇ ಅಲ್ಲದೆ ನೂತನ ದೃಷ್ಟಿಯನ್ನು ಕೂಡ ತೋರಬಹುದು. ಹತ್ತು ಅಂಶಗಳು ಇತರರ ಸಂಶೋಧನೆಯ ಫಲವಾಗಿ ಬಂದಿದ್ದರೂ, ಹನ್ನೊಂದನೆಯದು ತನ್ನದೇ ಆಗಿರುವುದು ಮೇಲು >> [ಡಿ.ಎಲ್. ನರಸಿಂಹಾಚಾರ್ : ಉದ್ಧೃತಿ – ಶಾಸ್ತ್ರೀಯ, ಸಂಪುಟ ೪ : ಟಿ.ವಿ. ವೆಂಕಟಾಚಲಶಾಸ್ತ್ರೀ : ೧೯೯೯ : ೫೪೩].

ಪೂರ್ವ ಸೂರಿಭ್ಯೋ ನಮಃ

ಹೆದ್ದಾರಿ ಮಾಡಿದ ಆದ್ಯರು ಮಾನ್ಯರು.

ಸಂಶೋಧಕರು ಸಹ ಮಹಾನ್ ಸಾಧಕರು. ಎಷ್ಟೆಷ್ಟು ಸಾಧನೆಯೊ ಅಷ್ಟಷ್ಟು ಫಲ. ಆಸಕ್ತಿ, ಶ್ರದ್ಧೆ, ಶ್ರಮ, ಇದರ ಮೊದಲ ಮೂರು ಮೆಟ್ಟಿಲು. ಸಂಶೋಧನೆಗೆ ಆರಿಸಿಕೊಂಡ ವಸ್ತುವನ್ನು ಅವಲಂಬಿಸಿ ಅದರ ಮೂಲ ಚೂಲಗಳ ಅಧ್ಯಯನ ಸ್ವರೂಪ ರೂಪಿತವಾಗುತ್ತದೆ. ಅಂದರೆ ಒಂದೇ ಬಗೆಯ ಅಧ್ಯಯನ ವಿಧಾನವನ್ನು ಎಲ್ಲ ಬಗೆಯ ವಿಷಯ ಸಂಶೋಧನೆಗಳಿಗೂ ಹೊಂದಿಸಲಾಗದು. ಸಂಶೋಧನೆಗೆ ಆಯ್ಕೆ ಮಾಡಿದ ವಿಷಯ ಕುರಿತು ಆಯಾ ಕ್ಷೇತ್ರದಲ್ಲಿ ಆಗಿರುವ ಮೊದಲಿನ ಕೆಲಸವೆಷ್ಟು ಎಂಬುದನ್ನು ಆರಂಭದ ಅಧ್ಯಾಯದಲ್ಲಿಯೇ ಪರಿಚಯಿಸುವುದು ಒಳಿತು. ಅಂದರೆ ಸಂಶೋಧಕನು ತನ್ನವರೆಗೆ, ತಾನು ಆಯ್ಕೆ ಮಾಡಿಕೊಂಡಿರುವ ವಿಷಯದಲ್ಲಿ, ನಡೆದಿರುವ ಹಿಂದಣ ಸಂಶೋಧನೆಯ ಅರಿವು ಇದ್ದರೆ ಲೇಸು. ಆಗ ಅಲ್ಲಿಂದ ಅಥವಾ ಎಲ್ಲಿಂದ ತನ್ನ ಹೊಸ ಹುಡುಕಾಟವನ್ನು ಪ್ರಾರಂಭಿಸಬೇಕು, ಯಾವ ಅರೆಕೊರೆ ಉಳಿದಿರುವ ದಿಕ್ಕಿನೆಡೆಗೆ ಪಯಣಿಸಿ ವ್ಯಾಸಂಗವನ್ನು ಕೇಂದ್ರೀಕರಿಸಬೇಕು ಎಂಬುದು ನಿಚ್ಚಳ ಕಾಣುತ್ತದೆ.

ಸಂಶೋಧನೆಯ ದಿಗಂತವನ್ನು ಅಗ್ಗಳಿಸಿ ಹಿಗ್ಗಿಸಿದ ಆದ್ಯರು ಅವಿಸ್ಮರಣೀಯರು. ಸಂಶೋಧನೆಯ ಕ್ಷೇತ್ರವೂ ವಿಶಾಲವಾದದ್ದು. ಅದರಂತೆ ಸಂಶೋಧಕರೂ ಎಂದುರೋ ಮಹಾ ಅನ್ವೇಷಕರು. ಬಹುಶಿಸ್ತೀಯ, ಅಂತರಶಿಸ್ತೀಯ ಮತ್ತು ತೌಲನಿಕ ರೂಪದ ಸಾರವತ್ತಾದ ಬರೆಹ ಬೃಹತ್ ಪ್ರಮಾಣದಲ್ಲಿ ಹೊರ ಬಂದಿದೆ. ವಿವಿಧ ಜ್ಞಾನ ಶಾಖೆಗಳನ್ನು ಹರಿದ್ವರ್ಣವಾಗಿಸಿದ ಈ ಬಲ್ಲಿದರ ಬಳ್ಳಿ ಬಳಗವನ್ನು ಪರಿಚಯಿಸುವುದು ಪ್ರಾಥಮಿಕವೂ ಪ್ರಥಮ ನೆಲೆಯದೂ ಆದ ಪ್ರಯತ್ನ. ಇದರ ಎರಡನೆಯ ಮೆಟ್ಟಿಲು ಆಯಾ ವಿದ್ವಾಂಸರ ವಿದ್ವತ್ತನ್ನೂ ಮತ್ತು ಅವರ ಬಹುಶ್ರುತತ್ವದ ಫಲಿತಗಳನ್ನೂ ಗುರುತಿಸುವುದು. ಇದು ಸೋಪಾನಗಳನ್ನು ಹತ್ತುತ್ತ ವಿದ್ವತ್ತಿನ ವಿಶ್ವರೂಪದತ್ತ ಪಯಣಿಸುವ ವಿಧಾನ.

ಸಂಶೋಧನೆ ಕ್ಷೇತ್ರಕಾರ್ಯವಾಗಿರಬಹುದು ಅಥವಾ ಮೇಜುಕಾರ್ಯವಾಗಿರಬಹುದು. ಸಂಶೋಧಕರಿಗೆ ವೇತನ, ಭತ್ಯೆ, ರಜೆ ಸೌಕರ್ಯಗಳಿವೆಯಷ್ಟೆ. ಈ ಸೌಲಭ್ಯಗಳೊಂದೂ ಇರದಿದ್ದಾಗಲೂ ಸಂಶೋಧನೆ ನಿಂತಿರಲಿಲ್ಲ. ತಮ್ಮ ಸ್ವಂತ ಕಾಳಜಿಯಿಂದ ದೇಶೀಯ ಮಾರ್ಗವಿಧಾನಗಳಿಂದ ಸಂಶೋಧನೆ ವಸಾಹತು ಪೂರ್ವ ಮತ್ತು ವಸಾಹತೋತ್ತರ ಕಾಲಗಳಲ್ಲಿ ಸತತವಾಗಿ ಸಾಗಿತ್ತು.

ಹಿಂದಿನಿಂದಲೂ ಸಂಶೋಧನೆಯ ಪ್ರವೃತ್ತಿಗೆ ಉತ್ತೇಜನವಿತ್ತು. ಹಸ್ತಪ್ರತಿ ಅಥವಾ ಶಾಸನ ಸಂಗ್ರಹ, ಗ್ರಂಥ ಸಂಪಾದನೆ, ಪ್ರಕಟಣೆಯ ಆಚೆಗೂ ಸಂಶೋಧನೆ ಕೈಗೊಳ್ಳಲು ಅವಕಾಶ ಇರುವುದು ಮನವರಿಕೆ ಆಯಿತು. ಜನಪದ ಸಾಹಿತ್ಯ ಪ್ರಕಾರಗಳ ವಿಶಾಲ ಜಗತ್ತಿನ ಬಾಗಿಲು ತೆರೆಯಿತು. ಹಾಡು ಕಥೆ ಗಾದೆ ಒಗಟು ಮಹಾಕಾವ್ಯಗಳ ತವನಿಧಿ ಕಾಣಿಸಿತು. ಮತ್ತೆ ಸಂಶೋಧನೆ ದಿವ್ಯ ತಿರುವು ಪಡೆದು ಸ್ಥಳನಾಮ ಅಧ್ಯಯನಕ್ಕೆ ಹೊರಳಿತು. ಎಷ್ಟೆಷ್ಟು ಕ್ಷೇತ್ರಗಳ, ವಿಷಯಗಳ ಸಂಚಿತ ವಿದ್ವತ್ತು ಇದೆಯೋ ಅದು ನಾಳಿನ ತಲೆಮಾರಿಗೆ ಉಳಿಯಬೇಕೆಂಬ ತಹತಹದ ಸಂಚಲನವಾಯಿತು.

ಆತ್ಯಂತಿಕವಾಗಿ ಪರಿಭಾವಿಸಿದರೆ ಸಂಶೋಧನೆಯ ಪರಿಕರಗಳು ಹೊರಗಿನಿಂದ ಆಮದಾಗಿ ಇಳಿದುಬರುವುದಿಲ್ಲ. ಸ್ಥಳೀಯವಾಗಿ ಲಭ್ಯವಿರುವ ವ್ಯಾಪಕ ಸಾಮಗ್ರಿ ಸಲಕರಣೆಗಳ ಪಾತಳಿಗಳನ್ನು ಬಿಡಿಸಿ ಪರಿಶೀಲನೆಯ ಸೊಡರಿಗೆ ಹಿಡಿದು ಅವುಗಳ ಸೋಪಜ್ಞತೆ, ಅನನ್ಯತೆ, ಪ್ರಸ್ತುತತೆ ಮತ್ತು ಅಧ್ಯಯನದ ವಿಷಯಕ್ಕೆ ಆಗುವ ಪ್ರಯೋಜನ – ಇವನ್ನು ಕುರಿತು ತಲಸ್ಪರ್ಶಿಯಾಗಿ ಅಭ್ಯಾಸ ಮಾಡುವ ಪ್ರಕ್ರಿಯೆಗಳು ಸಂಶೋಧನೆಯ ಅಂಗಾಂಗಗಳು. ಹಾಗೆ ನೋಡುವುದಾದರೆ ಸಂಶೋಧನೆಯ ನೀತಿನಿಯಮಗಳನ್ನೂ ರೂಪರೇಖೆಗಳನ್ನೂ ಯಾರು ಎಷ್ಟೇ ಹೇಳಿದರೂ ಅಂತಿಮವಾಗಿ ಸಂಶೋಧಕರೇ ತಮ್ಮ ಸಾಮಗ್ರಿಯನ್ನು ಸ್ವಪ್ರಯತ್ನದಿಂದ ಗಳಿಸುತ್ತ ಪರಿಗಣಿಸುತ್ತ ಮುಂದೆ ಸಾಗಬೇಕು.

ಸೃಜನ–ಸೃಜನೇತರ ವಾಗ್ವಾದ

ಸಾಹಿತ್ಯವನ್ನು, ವಿಮರ್ಶೆಯ ಕಕ್ಷೆಯಲ್ಲಿ, ಸೃಜನ (creative) ಮತ್ತು ಸೃಜನೇತರ (non-creative) ಎಂದು ಎರಡು ಕವಲಾಗಿ ನೋಡುವ ಪರಿಪಾಟಿ ಬೆಳೆದು ಬಂದಿದೆ. ಇದಕ್ಕನುಗುಣವಾಗಿ ಸಂಶೋಧನೆಯನ್ನು ಸೃಜನೇತರ ಸಾಹಿತ್ಯ ಪ್ರಕಾರವೆಂದು ಪರಿಗಣಿಸಲಾಗುತ್ತಿದೆ. ಸಂಶೋಧನೆಯೂ ಸೃಜನ ಸಾಹಿತ್ಯದ ಇನ್ನೊಂದು ಮಗ್ಗಲು. ಇದನ್ನು ಸೃಜನಶೀಲ ವಿದ್ವತ್ತು (creative scholarship) ಎಂದು ಪರಿಗಣಿಸುವುದು ಸಮಂಜಸ. ಸಂಶೋಧನೆಯೂ ಸಾಹಿತ್ಯದ ಮುಖ್ಯ ಪ್ರಕಾರವೇ ಆಗಿದೆ. ಏಕೆಂದರೆ ಸಾಹಿತ್ಯದ ವಿಶಾಲ ಪರಿಪ್ರೇಕ್ಷ್ಯದಲ್ಲಿ ಅಂತರ್ಗತವಾಗಿರುವ ಸಂಶೋಧನೆಯ ವಿಧಿ ವಿಧಾನಗಳು ಸಾಹಿತ್ಯಕ್ಕೆ ಪೂರಕವಾಗಿವೆ. ಕಾವ್ಯ ನಾಟಕ ಕಥೆ ಕಾದಂಬರಿ ವಿಮರ್ಶೆಗಳ ರೀತಿ ಸಂಶೋಧನೆಯೂ ಜ್ಞಾನ ವಾಹಿನಿ. ಒಂದು ಹಂತದವರೆಗೆ ಸಂಶೋಧನೆಯೂ ಸೃಜನಶೀಲವೇ. ಮೌಲಿಕ ಸಂಶೋಧನೆಯು ಒಳಗಣ್ಣನ್ನು ತೆರೆಸಿ ನನ್ನಿಯನ್ನು ಕಾಣುವ, ಕಿವಿತೆರೆದು ನಿಜದನಿಯನ್ನು ಆಲಿಸುವ ಎಚ್ಚರದ ಹುಡುಕಾಟ.

ಹಾಗೆಂದು ಸಿದ್ಧ ಚೌಕಟ್ಟಿನ ನಿಯಮದ ಗಡಿಗೆರೆಗಳನ್ನು ಮೀರಿ ಹಾರುವ ಲೌಕಿಕ ಕಾವ್ಯ ರಚನೆಯಲ್ಲಿ ಸಿಗುವ ಸಲೀಸುತನ ಸ್ವಚ್ಛಂದ ವಿಹಾರಕ್ಕೆ ಇಲ್ಲಿ ಎಡೆಯಿಲ್ಲ. ಈ ಅರ್ಥದಲ್ಲಿ ಕವಿಗಳಿಗೂ ಕಥೆಗಾರರಿಗೂ ಇರುವ ಸ್ವಾತಂತ್ರ್ಯ ಸಂಶೋಧಕನಿಗಿಲ್ಲ, ಇರುವುದಿಲ್ಲ. ಸೃಜನ–ಸೃಜನೇತರ ಎಂಬ ಬೇರ್ಪಾಟು ಅಧ್ಯಯನದ ಅನುಕೂಲಕ್ಕಾಗಿ ಮಾಡಿದ ಏರ್ಪಾಟಷ್ಟೆ ಹೊರತು ಅವುಗಳಲ್ಲಿ ತರತಮ ವಿವಕ್ಷೆ ಇರಕೂಡದು. ಮಡಿವಂತಿಕೆ ಅನಗತ್ಯ. ಸಾಹಿತ್ಯ ಪ್ರಕಾರಗಳಲ್ಲಿ ಒಂದು ಮೇಲು ಇನ್ನೊಂದು ಕೀಳು ಎಂಬ ತಾರತಮ್ಯ ನುಸುಳದಂತೆ ಗಮನಿಸುವ ಆರೋಗ್ಯಕರ ಪರಾಮರ್ಶೆಗೆ ಮಾನ್ಯತೆ ಇದ್ದೇ ಇದೆ. ವಿಮರ್ಶೆಯೂ

ವ್ಯಾಖ್ಯಾನಾತ್ಮಕ ಸಂಶೋಧನೆ ಮತ್ತು ಸಂಶೋಧನೆಯೂ ವಿಶ್ಲೇಷಣಾತ್ಮಕ ವಿಮರ್ಶೆಯಾಗಿದೆ. ಹಾಗೆ ನೋಡುವುದಾದರೆ ಕವಿಗಳಿಗೂ ಸೃಜನ ಸಾಹಿತ್ಯಕಾರರಿಗೂ ಪಾಂಡಿತ್ಯ ಮತ್ತು ಸಂಶೋಧನ ಮನೋಧರ್ಮ ಕೂಡ ಇರಬೇಕು. ಸಂಸ್ಕೃತದಲ್ಲಿ ಈ ಸಂಬಂಧವಾದ ಹೇಳಿಕೆಯೊಂದು ಹೀಗಿದೆ :

ವಿದ್ವತ್ ಕವಯಃ ಕವಯಃ
ಕೇವಲ ಕವಿಯಸ್ತು ಕೇವಲಂ ಕಪಯಃ

ವಿದ್ವತ್ತು ಇರುವ ಕವಿಗಳೇ ಕವಿಗಳು, ಪಾಂಡಿತ್ಯವಿರದ ಕೇವಲ ಕವಿಗಳು ಕೇವಲ ಕಪಿಗಳಷ್ಟೆ. ಈ ಹೇಳಿಕೆಯ ಇಂಗಿತವೆಂದರೆ ಕವಿಗಳಿಗೂ ಪಾಂಡಿತ್ಯ ಅಗತ್ಯವೆಂಬುದು.

ಸಂಶೋಧಕರ ಕಾರ್ಯವೈಖರಿ, ಬರವಣಿಗೆಯ ಶೈಲಿ, ವಿಷಯ ಪ್ರತಿಪಾದನೆಯ ವಿಧಾನ – ಇವು ವಿಭಿನ್ನವಾಗಿರುವುದು ಸಹಜವೆ. ಇವು ಒಂದೇ ಬಗೆಯಲ್ಲಿ ಇರುವುದು ಸಾಧ್ಯವಿಲ್ಲ. ಸಂಶೋಧನೆಯಲ್ಲಿ ಈ ವೈವಿಧ್ಯ ಅಮುಖ್ಯ, ಸಂಶೋಧನೆಯ ಸಾರವಷ್ಟೆ ಮುಖ್ಯ. ಅಂದರೆ ಸಂಶೋಧಕರು ಹೇಗೆ ಹೇಳಿದ್ದಾರೆ ಎಂಬುದಕ್ಕಿಂತಲೂ ಏನು ಹೇಳಿದ್ದಾರೆ, ಅದರ ಮಹತ್ವವೇನು ಎಂಬುದಕ್ಕೇನೆ ಆದ್ಯತೆ. ಸಂಶೋಧಕರ ಇಲ್ಲವೇ ಆಯಾ ಸಂಶೋಧನೆಯ ಇತಿಮಿತಿಗಳ ಚರ್ಚೆ ಇಲ್ಲಿ ಗೌಣ. ಭಾಷೆಯ ಬಳಕೆ ಪರಿಣಾಮಕಾರಿಯಾಗಿ ಬಂದಿದೆಯೆ, ತಾವು ಕಂಡ ಸಂಗತಿಯನ್ನು, ತಲಪಿದ ನಿರ್ಣಯಗಳನ್ನು ಯಶಸ್ವಿಯಾಗಿ ಮಾಡಿದ್ದಾರೆಯೆ – ಇವು ಈ ಸಂಪುಟದ ಪರಿಪ್ರೇಕ್ಷ್ಯಕ್ಕೆ ಹೊರತಾದದ್ದು. ಈ ಸಂಪುಟದಲ್ಲಿ ಅಳವಡಿಸಿರುವ ತಮ್ಮ ಲೇಖನದಲ್ಲಿ ಸೋಮಶೇಖರ ಗೌಡರು ಹೇಳಿರುವಂತೆ << ತನ್ನ ಆಲೋಚನೆಯನ್ನು ಪರಿಣಾಮಕಾರಿಯಾಗಿ ಮಂಡಿಸಲು ಭಾಷೆಯನ್ನು ಹೇಗೆ ಉಪಯೋಗಿಸಿಕೊಳ್ಳಬೇಕು ಎಂಬುದನ್ನು ಸಂಶೋಧಕನೇ ನಿರ್ಧರಿಸಬೇಕು >>.

ಸಂಶೋಧಕರ ಹಾಗೂ ಒಟ್ಟಾರೆ ಸಂಶೋಧನ ಸಾಹಿತ್ಯದ ಭಾಷೆ ಜಡ, ಶುಷ್ಕ, ನೀರಸ, ಸಪ್ಪೆ – ಎಂಬಿತ್ಯಾದಿ ಹೇಳಿಕೆಗಳಿವೆ. ಇದು ಆರೋಪವೆಂದಾದರೆ ಸರಿಯಲ್ಲ. ಇವು ಸಂಶೋಧನೆಯನ್ನು ಕಾವ್ಯ ಕಥೆ ಮತ್ತು ಕಾದಂಬರಿ ಸಾಹಿತ್ಯದೊಂದಿಗೆ ಹೋಲಿಸಿ ಹೇಳಿದ ಮಾತುಗಳು. ಸಂಶೋಧನೆಯ ಚೌಕಟ್ಟೇ ಬೇರೆ. ಇಲ್ಲಿ ಜಿಜ್ಞಾಸುಗಳು ಶಿಸ್ತುಬದ್ಧ ಅನಲಂಕೃತ ನಿಖರ ಪರಿಭಾಷೆಯ ಬಳಕೆಗೆ ಬದ್ಧರು. ಸಂಶೋಧಕನ ತಾತ್ವಿಕ ಧೋರಣೆ ಮತ್ತು ಆಲೋಚನಾಕ್ರಮವು ಮುಗಿಲ ಮಲ್ಲಿಗೆಯನ್ನು ಮೂಸುತ್ತ ನಂದನದಲ್ಲಿ ವಿಹರಿಸುವ ಧಾಟಿಗೆ ದೂರವಾಗಿ ಸಾಗುತ್ತದೆ. ಅದರಿಂದ ಸಂಶೋಧಕನ ಭಾಷಾ ಬಳಕೆಗೆ ಸ್ವೇಚ್ಛೆಯಾಗಿ, ಸ್ವಚ್ಛಂದವಾಗಿ ಲಾಸ್ಯವಾಡುವ ಅವಕಾಶ ಕಡಮೆ. ಆದರೆ ಕವಿಗೆ ಇರುವಂತೆಯೇ ಸಂಶೋಧಕನಿಗೂ ಅರಿವಿನ ದಾಹವಿದೆ. ಆತ ಜ್ಞಾನ ಪಿಪಾಸು. ಆತನದು ವಿದ್ವತ್ ಪ್ರತಿಭೆ.

ಕವಿ–ಕಾವ್ಯ–ಕಾಲ ಜಿಜ್ಞಾಸೆ

ಹತ್ತೊಂಬತ್ತು ಮತ್ತು ಇಪ್ಪತ್ತನೆಯ ಶತಮಾನದ ಪ್ರಧಾನ ವಿದ್ವತ್ ಕಾರ್ಯ ನಡೆದದ್ದು ಗ್ರಂಥ ಸಂಪಾದನೆ ಕ್ಷೇತ್ರದಲ್ಲಿ. ಕನ್ನಡ ಸಾಹಿತ್ಯ ಚರಿತ್ರೆಯ ಸಂದರ್ಭವನ್ನು ಗಮನದಲ್ಲಿಟ್ಟು ಇಪ್ಪತ್ತನೆಯ ಶತಮಾನದ ಸಂಶೋಧನೆಯ ಸ್ವರೂಪವನ್ನು ಹಿಂತಿರುಗಿ ನೋಡಿದರೆ ಅದರ ಕೆಲವು ಮುಖ್ಯ ಲಕ್ಷಣಗಳು ನಿಚ್ಚಳವಾಗಿ ಕಾಣುತ್ತವೆ. ಅದರಲ್ಲಿ ಸಿಂಹಪಾಲು ಕವಿ–ಕಾವ್ಯ ಕೇಂದ್ರಿತ ವಾಗ್ವಾದಗಳಿಗೆ ಮೀಸಲು. ಅದು ಎಷ್ಟರಮಟ್ಟಿಗೆ ಸ್ಥಾಯಿಯಾಗಿ ಹೆಪ್ಪುಗಟ್ಟಿತ್ತೆಂದರೆ

ಸಂಶೋಧನೆ ಎಂದರೆ ಕವಿಯ ಕಾಲ, ಕವಿಯ ಜಾತಿಮತಧರ್ಮ, ಆತ ಆಗಿಹೋದ ಪ್ರದೇಶ ಮತ್ತು ಆತನ ಆಶ್ರಯದಾತರು – ಇವುಗಳ ಚರ್ಚೆಗೆ ಹೆಚ್ಚು ಮಹತ್ವ ದೊರೆತಿದೆ. ರಾ. ನರಸಿಂಹಾಚಾರ್ (೧೮೬೦–೧೯೩೬) ವಿರಚಿತ ಕವಿಚರಿತೆಯ ಮೂರು ಸಂಪುಟಗಳು (ಅವುಗಳ ಮರುಮುದ್ರಣಗಳು) ಈ ಕವಿ–ಕಾವ್ಯ–ಕಾಲ ಸಂವಾದಗಳಿಗೆ ಮೂಲ ಸಾಮಗ್ರಿ.

ಇವನ್ನು ಮುಖ್ಯ ಆಕರವಾಗಿರಿಸಿ ಹೊರಬಂದ ಹಲವಾರು ಬರೆಹಗಳು ಅಂದಿನ ದಿನಮಾನದ ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ, ಪ್ರಬುದ್ಧ ಕರ್ನಾಟಕ ಮುಂತಾದ ವಿದ್ವತ್ ಪತ್ರಿಕೆಗಳಲ್ಲಿ ಬೆಳಕು ಕಂಡಿವೆ. ಕವಿ ಚರಿತೆಯ ಒಕ್ಕಣೆಯನ್ನು ಪೂರ್ವಪಕ್ಷವಾಗಿರಿಸಿ ಅ. ವೆಂಕಟಸುಬ್ಬಯ್ಯನವರು ತಲಸ್ಪರ್ಶಿ ಅಭ್ಯಾಸದ ತಿದ್ದುಪಡಿ ರೂಪದ 'ಕೆಲವು ಕನ್ನಡ ಕವಿಗಳ ಕಾಲ ವಿಚಾರ' ಗ್ರಂಥ ಪ್ರಕಟಿಸಿದರು. ಇದೇ ಅವಧಿಗೆ ಮತ್ತು ಇದೇ ಚೌಕಟ್ಟಿಗೆ ಅಳವಡುವ ಕವಿ–ಕಾವ್ಯ–ಕಾಲದ ಚರ್ಚೆಗೆ ಗ್ರಾಸ ಒದಗಿಸಿದವರು ಮಂಜೇಶ್ವರ ಗೋವಿಂದ ಪೈ ಮತ್ತು ಇತರರು. ಉದ್ದಾಮ ಪಂಡಿತರಾದ ಮಂ. ಗೋವಿಂದ ಪೈಯವರು ಸಾತವಾಹನರು, ಕದಂಬರು, ಚಲುಕ್ಯರು, ರಾಷ್ಟ್ರಕೂಟರು, ಕಲ್ಯಾಣದ ಚಾಲುಕ್ಯರು ಕುರಿತು ಮಾಡಿರುವ ಸಂಶೋಧನ ಲೇಖನಗಳಲ್ಲಿ ಕಾಲಾನುಕ್ರಮಣಿ ಮತ್ತು ವಂಶಾನುಕ್ರಮಣಿಗಳನ್ನು ನಿರ್ಧರಿಸುವ ಪ್ರಯತ್ನದ ಪರಿಶ್ರಮ ಪ್ರಾಮಾಣಿಕತೆ ಅಪರೂಪದ್ದು, ಇಂದಿಗೂ ಉಪಾಧೇಯವಾದದ್ದು.

ಮಧ್ಯಯುಗೀನ ಹಸ್ತಪ್ರತಿಗಳ ಸಂಗ್ರಹಣ, ಪರಿಶೋಧನೆ, ಗ್ರಂಥ ಸಂಪಾದನೆ ಶುದ್ಧ ಪಾಠವನ್ನು ಗುರುತಿಸಿ ಅಂಗೀಕರಿಸಿ, ವಿಭಿನ್ನ ಪಾಠ ಪಾಠಾಂತರಗಳನ್ನು ಅಡಿಟಿಪ್ಪಣಿಸುವುದು, ಕವಿಯ ಜಾತಿಮತವನ್ನು ತೀರ್ಮಾನಿಸುವುದು, ಆಶ್ರಯದಾತನ ಇತಿವೃತ್ತ – ಈ ಬಗೆಯ ಹುಡುಕಾಟವೇ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಪ್ರಧಾನವಾಗಿ ನಡೆಯಿತು. ಖಾಸಗಿಯಾಗಿದ್ದ ಅಂದರೆ ಸರ್ಕಾರೇತರ ಗ್ರಂಥಾಲಯಗಳೂ ವಿಶ್ವವಿದ್ಯಾಲಯ ಆದಿ ಸರ್ಕಾರಿ ಹಸ್ತಪ್ರತಿ ಭಂಡಾರಗಳು ಗ್ರಂಥ ಸಂಪಾದನೆಗೆ ಪೂರಕವಾಗಿದ್ದುವು. ಹಳೆಗನ್ನಡ ಕಾವ್ಯಗಳನ್ನು ಸಂಪಾದಿಸಿ ಪ್ರಕಟಿಸುವ ಕಾರ್ಯದಲ್ಲಿ ಸಂಶೋಧಕರ ಹೊಣೆ ಗುರುತರವಾದದ್ದು. ಯಾವ ಬಗೆಯ ಸವಾಲು ಸಂಶಯಗಳು ಎದುರಾಗುತ್ತವೆ, ಅವನ್ನು ನಿವಾರಿಸಲು ಬೇಕಾದ ವಿಶ್ವಸನೀಯ ಮಾಹಿತಿಯನ್ನು ಕಲೆಹಾಕುವುದು ಹೇಗೆ, ಪಾಠಕ್ಲೇಷದ ಸಿಕ್ಕುಗಳನ್ನು ಬಿಡಿಸುವುದು ಹೇಗೆ ಪ್ರಕ್ಷಿಪ್ತಗಳನ್ನು ಪತ್ತೆಮಾಡುವುದೆಂತು – ಇವು ಗಂಭೀರವಾದ ವಿಚಾರಗಳು.

ಪ್ರಾಚೀನ ಕಾವ್ಯಗಳಲ್ಲಿ ಸೇರಿರುವ ಪ್ರಕ್ಷಿಪ್ತಗಳನ್ನು ಗುರುತಿಸುವ ಸಂಶೋಧನೆಗೆ ದೊಡ್ಡ ಇತಿಹಾಸವಿದೆ. ಮಲ್ಲಿನಾಥನು ಸುಮಾರು ೧೪೦೦ರಲ್ಲಿ ಕೆಲವು ಸಂಸ್ಕೃತ ಕಾವ್ಯಗಳಿಗೆ ವ್ಯಾಖ್ಯಾನ ಬರೆದಿರುವ ವಿದ್ವಾಂಸ. ಈತನು ಕಾಲಿದಾಸನ (ಆರನೆಯ ಶತಮಾನ) ಪ್ರಸಿದ್ಧ ಕಾವ್ಯವಾದ ಮೇಘದೂತದಲ್ಲಿನ ಪೂರ್ವ ಮೇಘದಲ್ಲಿರುವ ಕೆಲವು ಪದ್ಯಗಳು ಪ್ರಕ್ಷಿಪ್ತವೆಂದು ತಿಳಿಸಿದ್ದಾನೆ. ಈಗ ತಿಳಿದುಬಂದಿರುವಂತೆ ಕವಿಯ ಮೂಲ ಪಾಠವನ್ನು ಗುರುತಿಸುವ ಪ್ರಕ್ರಿಯೆಯಲ್ಲಿ ಪ್ರತಿಕಾರರ ಕೈವಾಡದಿಂದ ಸೇರಿಕೊಳ್ಳುವ ಪ್ರಕ್ಷಿಪ್ತವನ್ನು ಪತ್ತೆ ಹಚ್ಚುವುದು ಸಂಶೋಧನ ಕಾರ್ಯ. ಹೀಗಾಗಿ ಟೀಕಾಕಾರ ಮಲ್ಲಿನಾಥನು ಸಂಶೋಧಕನಾಗಿಯೂ ಗಣ್ಯನು. ಕವಿಯ ಪಾಠವೆಂದು ಗುರುತಿಸಿ ಅಧಿಕೃತತೆಯಿಂದ ಹೇಳಬಹುದಾದ ರೀತಿಯಲ್ಲಿ, ಗ್ರಂಥಸಂಪಾದನಶಾಸ್ತ್ರ ಪ್ರಣೀತ ಸೂತ್ರಗಳನ್ನು ಅನ್ವಯಿಸಬೇಕಾಗುತ್ತದೆ. ಪ್ರಾಚೀನ ಕೃತಿಗಳನ್ನು ಸಂಪಾದಿಸಲು ವ್ಯಾಸಭಾರತ, ವಾಲ್ಮೀಕಿ ರಾಮಾಯಣ, ಕಾಲಿದಾಸ ಭಾಸ ಭವಭೂತಿ

ಮೊದಲಾದವರ ಗ್ರಂಥ ಸಂಪಾದನೆಗಳು ಸಂಪಾದಿಸಲು ಅನುಸರಿಸಿದ ವಿಧಾನಗಳ ಮಾಹಿತಿ ಆದರ್ಶವಾಗಿತ್ತು.

ಗ್ರಂಥ ಸಂಪಾದನೆ

ಕನ್ನಡ ಕಾವ್ಯಗಳಲ್ಲಿ ಅಂಥದೊಂದು ಅಧಿಕೃತ ಗ್ರಂಥ ಸಂಪಾದನೆ ಆದದ್ದು, ಕನ್ನಡ ಸಾಹಿತ್ಯ ಪರಿಷತ್ತು ಸಿದ್ಧಪಡಿಸಿ ಹೊರತಂದ, ಪಂಪ ಮಹಾಕವಿಯ ವಿಕ್ರಮಾರ್ಜುನ ವಿಜಯ (ಪಂಪಭಾರತ). ಇದು ಒಬ್ಬ ವ್ಯಕ್ತಿಯ ಪ್ರಯತ್ನದಿಂದ ಆದದ್ದಲ್ಲ, ಕೆಲವು ವಿದ್ವಾಂಸರ ಸಾಮೂಹಿಕ ಪ್ರಯತ್ನದಿಂದ ಸಂಭವಿಸಿದ್ದು. ವಿದ್ವನ್ಮಂಡಲಿಯ ಈ ಸಾಂಘಿಕ ಹಾಗೂ ಸಾಂಸ್ಥಿಕ ಸಂಶೋಧನೆಯ ಕಜ್ಜದಲ್ಲಿ ಮುಂದಾಳು ಬೆಳ್ಳಾವೆ ವೆಂಕಟನಾರಣಪ್ಪನವರು (೧೮೭೨-೧೯೪೩). ಅವರು ಬೆಂಗಳೂರಿನ ಪ್ರಸಿದ್ಧ ಸೆಂಟ್ರಲ್ ಕಾಲೇಜಲ್ಲಿ ಭೌತಶಾಸ್ತ್ರ ಪ್ರಾಧ್ಯಾಪಕರಾದರೂ ಕನ್ನಡ ಪರಂಪರೆ ಬಲ್ಲ ನಿಷ್ಣಾತರಾಗಿದ್ದರು. ಅವರ ಮೇಲಾಳಿಕೆಗೆ ಅವಕಾಶ ಕಲ್ಪಿಸಿದ್ದು ಕನ್ನಡ ಸಾಹಿತ್ಯ ಪರಿಷತ್ತು. ಬಿಎಂಶ್ರೀ (೧೮೮೪-೧೯೪೬), ಟಿ.ಎಸ್. ವೆಂಕಣ್ಣಯ್ಯ (೧೮೮೫-೧೯೩೯) ಮತ್ತು ಬಲ್ಲಿದರ ಸಾಲಿನಲ್ಲಿ ಸೇರಬೇಕಾದ ಗಣ್ಯ ಪಂಡಿತರಾಗಿದ್ದ ಕಡಬ ನಂಜುಂಡಶಾಸ್ತ್ರೀ, ತೊಗರೆ ನಂಜುಂಡಶಾಸ್ತ್ರಿ – ಮೊದಲಾದ ಅರಿವಿನೋಜರ ದುಡಿಮೆಯಿಂದ ಮತ್ತು ಕೊಡುಗೆಯಿಂದ ಪಂಪಭಾರತ ಮಹಾಕಾವ್ಯದ ಉತ್ತಮ ಪತ್ಯ ರೂಪಗೊಂಡಿತು. ಈ ಪಂಪಭಾರತಕ್ಕೆ ಬರೆದಿರುವ ತಲಸ್ಪರ್ಶಿಯಾದ ಉಪೋದ್ಘಾತ ಅನಂತರದ ಗ್ರಂಥ ಸಂಪಾದನಕಾರರಿಗೆ ಮೇಲ್ಪಂಕ್ತಿಯಾಯಿತು. ಮರೆಯದೆ ನೆನಪಿಡಬೇಕಾದ ಮಾತೆಂದರೆ ಬಿ.ಎಲ್. ರೈಸರು ೧೮೯೮ರಲ್ಲಿ ಛಾಪಿಸಿದ ಪಂಪಭಾರತದ ಪರಿಷ್ಕರಣವಿದು.

ಉತ್ತರ ಕರ್ನಾಟಕದಲ್ಲಿ ವಚನ ಸಾಹಿತ್ಯ ಹಸ್ತಪ್ರತಿಗಳು ದಂಡಿಯಾಗಿ ದೊರೆತವು. ನಾ.ಶ್ರೀ. ರಾಜಪುರೋಹಿತ (೧೮೭೭-೧೯೫೩), ಫ.ಗು. ಹಳಕಟ್ಟಿಯವರು (೧೮೮೦-೧೯೬೪), ಕೆ.ಬಿ. ಪಾಠಕ್ (೧೮೫೧-೧೯೩೭), ಶಿ.ಶಿ. ಬಸವನಾಳರು, ಉತ್ತಂಗಿ ಚೆನ್ನಪ್ಪನವರು (೧೮೮೧-೧೯೬೨), ಆರ್.ಸಿ. ಹಿರೇಮಠರು, ಶಿ.ಚ. ನಂದಿಮಠರು (೧೯೦೦-೧೯೭೫), ಸಂ.ಶಿ. ಭೂಸನೂರಮಠರು ಮೊದಲಾದವರು ವಚನ ಸಾಹಿತ್ಯ ಸಂಪಾದನೆಗೆ ಒಂದು ಹೆದ್ದಾರಿ ತೆರೆದರು.

ಜನಪ್ರಿಯ ಆವೃತ್ತಿಗಳೂ ಬಜಾರು ಆವೃತ್ತಿಗಳೂ ಜೊತೆ ಜೊತೆಯಲ್ಲೆ ವಿಶ್ವಾಸಾರ್ಹ ವಿದ್ವಾಂಸರ ಸಂಪಾದಕತ್ವದ ಪರಿಷ್ಕೃತ ಆವೃತ್ತಿಗಳೂ, ಚಾಲ್ತಿಯಲ್ಲಿದ್ದುವು. ತಾಳೆಗರಿ ಕಡತಗಳಲ್ಲಿ ಅಡಗಿದ ಹಳೆಯ ಗ್ರಂಥಗಳನ್ನು ಅಚ್ಚಿಸಿ ಹೊರತರುವ ಅರುಣೋದಯ ಕೆಲಸ ಮಾಡಿದವರು ಹೊರನಾಡಿನಿಂದ ಬಂದು ಕನ್ನಡ ಭಾಷೆ ಕಲಿತು ಇಲ್ಲಿದ್ದ ಕ್ರೈಸ್ತ ಮಿಷನರಿಗಳು. ಆ ನಸುಕಿನ ಕಾಲದಲ್ಲಿ ವಿಲಿಯಂ ಕೇರಿಯ ವ್ಯಾಕರಣ (೧೮೧೭) ಹೊರಬಂದಿತು.

ಕನ್ನಡದಲ್ಲಿ ಗ್ರಂಥ ಸಂಪಾದನೆಯ ಕಾರ್ಯವನ್ನು ಆರಂಭಿಸಿದ ಮೊತ್ತ ಮೊದಲಿಗರು ಬಿ.ಎಲ್. ರೈಸರು, ಫರ್ಡಿನಾಂಡ್ ಕಿಟೆಲರು, ಬಿ. ಪದ್ಮರಾಜ ಪಂಡಿತರು ಮೊದಲಾದವರು. ಇದೇ ಪರಂಪರೆಯಲ್ಲಿ ದೇಶೀ ವಿದ್ವಾಂಸರೂ ದುಡಿದರು. ಈ ಮುಂಬೆಳಗಿನ ಕಾಲಮಾನದಲ್ಲಿ ಪಿ.ಆರ್. ಕರಿಬಸವಶಾಸ್ತ್ರಿಗಳು (೧೮೪೬-೧೯೩೧), ಎನ್.ಆರ್. ಕರಿಬಸವಶಾಸ್ತ್ರಿಗಳು (೧೮೭೨-೧೯೨೩), ರಾ. ನರಸಿಂಹಾಚಾರ್ಯರು, ಎಸ್.ಜಿ. ನರಸಿಂಹಾಚಾರ್ಯರು (೧೮೬೨-೧೯೦೭), ಎಂ.ಎ.ರಾಮಾನುಜೈಂಗಾರ್ಯರು (೧೮೬೨-೧೯೩೭), ಎಚ್. ಶೇಷಯ್ಯಂಗಾರ್ಯರು

ಮುಂತಾದವರ ದೊಡ್ಡ ಬಲ್ಲಿದರ ಪಡೆ ಈ ಕೆಲಸದಲ್ಲಿ ತೊಡಗಿತು. ಪ್ರಾಚ್ಯವಿದ್ಯಾ ಸಂಶೋಧನಾಲಯದಲ್ಲಿ ಸಂಶೋಧಕರಾಗಿದ್ದ ಪಂಡಿತರತ್ನ ಎರ್ತೂರು ಶಾಂತಿರಾಜ ಶಾಸ್ತ್ರಿಯವರು (೧೮೮೮-೧೯೫೨). ಇವರು ಪಾಠ ಪರಿಷ್ಕರಣ ಟೀಕೆ ಟಿಪ್ಪಣಿಗಳೊಂದಿಗೆ ಹಳಗನ್ನಡ ಕಾವ್ಯಗಳನ್ನಲ್ಲದೆ ಸಂಸ್ಕೃತ ಮಹಾಪುರಾಣವನ್ನು ಹೊಸಗನ್ನಡ ಗದ್ಯಾನುವಾದದೊಂದಿಗೆ ಸಂಪಾದಿಸಿದ ಆದ್ಯರಲ್ಲೊಬ್ಬರು. ಇವರಿಗೆ ಬಿ. ಪದ್ಮರಾಜ ಪಂಡಿತರೇ ಮಾದರಿ. ಇದಕ್ಕೆ ಸಂಬಂಧಿಸಿದ ಹೆಚ್ಚು ವಿವರಗಳು ಸಾಹಿತ್ಯ ಪರಿಷತ್ತು ಈ ಶತಮಾನೋತ್ಸವ ಮಾಲೆಯಲ್ಲಿ ಹೊರ ತಂದಿರುವ ಸಂಕೀರ್ಣ ಸಂಪುಟ ೧೨ ಭಾಗ-೧ರಲ್ಲಿ ಅಳವಟ್ಟಿವೆ.

ಕಾವ್ಯ ಸಂಗ್ರಹ

ಈಗಾಗಲೆ ಮೇಲೆ ಹೇಳಿರುವಂತೆ ಓಲೆಗರಿಯಲ್ಲಿ ಇದ್ದ ಹಳೆಗನ್ನಡ ಕಾವ್ಯಗಳನ್ನು ಸಂಪಾದಿಸಿ ಮುದ್ರಿಸಿ ಪ್ರಕಟಿಸುವ ಮಹತ್ ಕಾರ್ಯ ಹತ್ತೊಂಬತ್ತನೆಯ ಶತಮಾನದ ಕಡೆಯ ಎರಡು ದಶಕ ಮತ್ತು ಇಪ್ಪತ್ತನೆಯ ಶತಮಾನದ ಮೊದಲ ದಶಕಗಳ ದೊಡ್ಡ ಸಾಧನೆ. ಪೀಠಿಕೆ, ಪ್ರಸ್ತಾವನೆ, ಪಾಠಾಂತರಗಳಿಲ್ಲದೆ ಕೇವಲ ಕಾವ್ಯಪಾಠ ಮಾತ್ರ ಇರುತ್ತಿದ್ದ ಗ್ರಂಥ ಸಂಪಾದನೆ ಮೊದಲನೆಯ ಹಂತದಲ್ಲಿ ನಡೆಯಿತು. ಅನಂತರ ಹೆಚ್ಚು ಸಿಗುವ ತಾಳೆಯೋಲೆ ಮತ್ತು ಕಾಗದದ ಹಸ್ತಪ್ರತಿಗಳನ್ನು ನೋಡಿ ಶುದ್ಧ ಪಾಠವನ್ನು ಕೊಟ್ಟು, ಉಳಿದ ಪ್ರತಿಗಳಲ್ಲಿರುವ ಇತರ ಪಾಠಾಂತರಗಳನ್ನು ಅಡಿಟಿಪ್ಪಣಿಯಲ್ಲಿ ಕೊಟ್ಟು, ಮೌಲಿಕವೂ ಉಪಯುಕ್ತವೂ ಆದ ಪ್ರಸ್ತಾವನೆಗಳೊಂದಿಗೆ ಚಂಪೂ, ಷಟ್ಪದಿ, ಸಾಂಗತ್ಯಾದಿ ಕಾವ್ಯಗಳನ್ನು ಸಮಗ್ರರೂಪದಲ್ಲಿ ಛಾಪಿಸುವ ಕಾರ್ಯಕ್ಕೆ ವಿದ್ವಾಂಸರು ಮುತುವರ್ಜಿ ತೋರಿದರು.

ಈ ಗ್ರಂಥ ಸಂಪಾದನೆ ಪ್ರವೃತ್ತಿಯ ಮುಂದುವರಿಕೆಯಾಗಿ ಸಾವಿರಾರು ಪದ್ಯಗಳ ಹಲವಾರು ಆಶ್ವಾಸಗಳ ದೊಡ್ಡ ಕಾವ್ಯಗಳನ್ನು ಸಂಗ್ರಹಿಸಿಕೊಡುವ ಪದ್ಧತಿಯೊಂದು ರೂಢಿಯಾಯಿತು. ಆದಿಪುರಾಣ ಸಂಗ್ರಹ, ಕರ್ಣಾಟಕ ಕಾದಂಬರಿ ಸಂಗ್ರಹ (೧೯೩೩), ಹರಿಶ್ಚಂದ್ರ ಕಾವ್ಯ ಸಂಗ್ರಹ (೧೯೩೧), ಪಂಪರಾಮಾಯಣ ಸಂಗ್ರಹ (೧೯೩೬), ಗದಾಯುದ್ಧ ಸಂಗ್ರಹ (೧೯೪೯), ಪ್ರಭುಲಿಂಗ ಲೀಲೆಯ ಸಂಗ್ರಹ (೧೯೩೧) ಮೊದಲಾದ ಸಂಗ್ರಹಗಳು ಸಿದ್ಧವಾದುವು.

ಕವಿಯ ಮೂಲ ಕಾವ್ಯದಲ್ಲಿ ಅಷ್ಟಾದಶವರ್ಣನೆಗಳ ಸೀಗೆಮೆಳೆಯಲ್ಲಿ ತೆಳ್ಳಗೆ ಹರಿಯುವ ಮುಖ್ಯ ಕಥಾಸ್ರೋತದ ಎಳೆಹಿಡಿದರೂ ಕಾವ್ಯದ ಸೊಗಸು ಮತ್ತು ಕವಿಯ ವಿಶಿಷ್ಟತೆಗೆ ಲೋಪ ಆಗದಂತೆ ಸಿದ್ಧಪಡಿಸಿದ ಸಂಗ್ರಹಗಳು ವಿಸ್ತಾರವಾದ ಪ್ರಸ್ತಾವನೆಯೊಂದಿಗೆ, ಉಪಯುಕ್ತವಾದ ಅನುಬಂಧ ಸಹಿತ ಸಜ್ಜುಗೊಂಡು ಓದುಗರಿಗೆ ಒದಗಿದುವು. ಹಳೆಗನ್ನಡ ಕಾವ್ಯಗಳಿಗೆ ಸಂಬಂಧಿಸಿದಂತೆ ಸಂಗ್ರಹಗಳನ್ನು ಸಿದ್ಧಪಡಿಸುವ ಪರಿಕಲ್ಪನೆ ಪುರಾತನವಾದದ್ದು. ಮಲ್ಲಿಕಾರ್ಜುನ ಕವಿಯ (೧೨೪೦) ಸೂಕ್ತಿಸುಧಾರ್ಣವ, ಅಭಿನವವಾದಿ ವಿದ್ಯಾನಂದನನ (೧೫೩೩) ಕಾವ್ಯಸಾರ ಈ ಬಗೆಯವು. ಇವು ಅಷ್ಟಾದಶ ವರ್ಣನೆಗೆ ಸಂಬಂಧಿಸಿದ ಪದ್ಯಗಳನ್ನು ಪ್ರಾಚೀನ ಸಾಹಿತ್ಯದಿಂದ ಆಯ್ದು ಕಟ್ಟಿದ ಕಾವ್ಯ ತೋರಣಗಳು.

ಈ ಸಂಗ್ರಹಗಳಿಂದ ಇಂದು ನಮಗೆ ಉಪಲಬ್ಧವಿರದ ಕಾವ್ಯಗಳಿಗೆ ಸೇರಿದ ಪದ್ಯಗಳ ಪರಿಚಯ ಮತ್ತು ವೈಭವದ ದರ್ಶನವಾಯಿತು. ವ್ಯಾಕರಣ, ಅಲಂಕಾರಶಾಸ್ತ್ರ, ಛಂದಸ್ಸು, ನಿಘಂಟು ಕ್ಷೇತ್ರಗಳ ಸೀಮಾಪುರುಷ ನಾಗವರ್ಮನ (೧೦೪೨) ಕಾವ್ಯಾವಲೋಕನದಲ್ಲಿ

ಆತನಿಗಿಂತ ಹಿಂದಣ ಕಾವ್ಯಗಳಿಂದ ಆರಿಸಿದ ಪದ್ಯಗಳಿವೆ. ಶೂನ್ಯ ಸಂಪಾದನೆ ಮೊದಲಾದ ಹಲವು ವಚನ ಸಂಕಲನಗಳಿವೆ. ಕನ್ನಡ ಸಾಹಿತ್ಯ ಪರಿಷತ್ತು ಬಿಎಂಶ್ರೀ ಸಂಪಾದಕತ್ವದಲ್ಲಿ ಹೊರೆತಂದ ಕನ್ನಡ ಬಾವುಟ (೧೯೩೮), ರಾ. ನರಸಿಂಹಾಚಾರ್ಯರು ಸಂಪಾದಿಸಿದ ಶಾಸನ ಪದ್ಯಮಂಜರಿ (೧೯೨೩) ಆ ಬಗೆಯ ವಿಶಿಷ್ಟ ಸಂಕಲನಗಳು.

ಇನ್ನೊಂದೆಡೆ ಪ್ರಾಚೀನ ಕಾವ್ಯಗಳನ್ನು ಮೂಲ ಕವಿಪಾಠವನ್ನಿತ್ತು ಅದಕ್ಕೆ ಹೊಸಗನ್ನಡ ಗದ್ಯಾನುವಾದವನ್ನು ನೀಡಿ ಪ್ರಕಟಿಸುವ ಕೆಲಸವೂ ನಡೆಯಿತು. ಈ ಎರಡೂ ರೀತಿಯ (ಕಾವ್ಯ ಸಂಗ್ರಹ ಮತ್ತು ಗದ್ಯಾನುವಾದ) ಮಾರ್ಗಗಳು ಜನಪ್ರಿಯವಾದುವಾದರೂ ಕೆಲವು ಕರ್ಮಠರು ಈ ವಿಧಾನವನ್ನು ಅನುಮೋದಿಸಲಿಲ್ಲ. ಹಳೆಗನ್ನಡ ಕಾವ್ಯಗಳನ್ನು ಪರಿಷ್ಕರಣ ಮಾಡುವ ವಿದ್ವಾಂಸರು ಅಪ್ರಕಟಿತ ಕೃತಿಗಳನ್ನು ಉಪಷ್ಟಂಬಕ ಮಾಹಿತಿಯೊಂದಿಗೆ ಪ್ರಕಟಿಸಬೇಕೇ ಹೊರತು ಅವುಗಳ ಮೂಲ ಪಠ್ಯವನ್ನು ಮೊಟಕುಗೊಳಿಸುವುದರಿಂದ ಮೂಲ ಕೃತಿಯ ಒಟ್ಟಂದವನ್ನು ಕೆಡಿಸಿದಂತೆ ಆಗುತ್ತದೆಂಬುದು ಒಂದನೆಯ ಆಕ್ಷೇಪ. ಗದ್ಯಾನುವಾದ ಮಾಡುವುದರಿಂದ ಮೂಲಕೃತಿಗಳನ್ನು ಮೂಲದಲ್ಲಿ ಇರುವಂತೆಯೇ ಓದಿ ಆಸ್ವಾದಿಸಲು ಬೇಕಾದ ಪಾಂಡಿತ್ಯವನ್ನು ಗಳಿಸುವ, ಪರಿಶ್ರಮ ಪಡುವ ಪ್ರವೃತ್ತಿಗೆ ತಿಲಾಂಜಲಿ ಕೊಟ್ಟಂತೆ ಆಗುತ್ತದೆ – ಎಂಬುದು ಎರಡನೆಯ ಆಕ್ಷೇಪ. ಈ ಅಡ್ಡಿ ಅಸಮ್ಮತಿಗಳು ಹೆಚ್ಚು ಗಟ್ಟಿಯಾಗಲಿಲ್ಲ. ಕಾವ್ಯಸಂಗ್ರಹಗಳು ಶಾಲಾಕಾಲೇಜುಗಳಲ್ಲಿ ಹಳೆಗನ್ನಡ ಬೋಧಿಸಲು ಅನುಕೂಲಕರವಾಗಿ ಪಠ್ಯಪುಸ್ತಕಗಳಾದುವು.

ಚರಿತ್ರಾರ್ಹ ಘಟನೆ

ಕನ್ನಡ ಸಾಹಿತ್ಯದ ಮಹಾಕಾವ್ಯಗಳು ಹಾಗೂ ಮಹತ್ವದ ಕೃತಿಗಳು ಆಧುನಿಕರಿಗೂ ಎಟುಕುವಂತೆ ಹೊಸಗನ್ನಡ ಗದ್ಯಾನುವಾದ ಆಗಬೇಕು ಎಂಬ ಮಹದಾಶಯ ಮೊದಲು ಮೂಡಿದ್ದು ಅಂತರ ರಾಷ್ಟ್ರೀಯ ಖ್ಯಾತಿಯ ವಿದ್ವಾಂಸರಾದ ಪ್ರೊ. ಆ.ನೇ. ಉಪಾಧ್ಯೆ (೧೯೦೬–೧೯೭೫) ಅವರಿಗೆ. ಅವರು ಪ್ರತಿಷ್ಠಿತ ಭಾರತೀಯ ಜ್ಞಾನಪೀಠದವರಿಗೆ ಈ ವಿಷಯವನ್ನು ಮನವರಿಕೆ ಮಾಡಿದ್ದರಿಂದ ಕನ್ನಡ ಭಾಷಾ ಸಾಹಿತ್ಯ ಗೊತ್ತಿರದಿದ್ದರೂ ಗದ್ಯಾನುವಾದ ಸಹಿತ ಪ್ರಾಚೀನ ಕನ್ನಡ ಕಾವ್ಯಗಳನ್ನು ಪ್ರಕಟಿಸಲು ಸಮ್ಮತಿಸಿದರು. ಗದ್ಯಾನುವಾದ ಸಹಿತ ಪ್ರಾಚೀನ ಕೃತಿಗಳನ್ನು ಪ್ರಕಟಿಸುವ ಯೋಜನೆಯ ಪೂರ್ಣ ರೂಪರೇಖೆಯನ್ನು ಸಿದ್ಧಪಡಿಸಲು ಆ.ನೇ. ಉಪಾಧ್ಯೆಯವರು ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ವಿದ್ವಾಂಸರ ಸಭೆ ಕರೆದರು. ಘನಪಂಡಿತರ ಸಮಾಲೋಚನೆಯಲ್ಲಿ ಗದ್ಯಾನುವಾದಕ್ಕೆ ಸಂಬಂಧಿಸಿದಂತೆ ಅದರ ವೈಧಾನಿಕತೆಯನ್ನು ಚರ್ಚಿಸಲಾಯಿತು.

ಆರಿಸಿಕೊಳ್ಳಬೇಕಾದ ಗ್ರಂಥಗಳು ಯಾವುವು, ಮುದ್ರಣ ಹೇಗಿರಬೇಕು, ಪೀಠಿಕೆ ಮತ್ತು ಗದ್ಯಶೈಲಿಯ ಸ್ವರೂಪ, ಪುಸ್ತಕದ ಆಕಾರ, ಮೂಲ ಪದ್ಯಗಳಿಗೂ ಗದ್ಯಾನುವಾದಕ್ಕೂ ಅಂತರ ಎದ್ದುಕಾಣುವಂತೆ ಅಕ್ಷರಗಳ ಅಳತೆಯಲ್ಲಿ ಕಾಣಿಸಬೇಕಾದ ವ್ಯತ್ಯಾಸ, ಸಿದ್ಧಪಡಿಸಲು ಕಾಲದ ಗಡುವು, ಸಂಭಾವನೆಯ ಮೊತ್ತ – ಎಲ್ಲವೂ ಆ ಸಭೆಯಲ್ಲಿ ಇತ್ಯರ್ಥ ಆದುವು. ವಿವಿಧ ವಿದ್ವಾಂಸರಿಗೆ ಅನುವಾದಕ್ಕಾಗಿ ಬೇರೆ ಬೇರೆ ಕಾವ್ಯಗಳನ್ನು ವಹಿಸಲಾಯಿತು. ದುರ್ದೈವವೆಂದರೆ ಅನುವಾದ ಮಾಡಿಕೊಡಲು ಒಪ್ಪಿಕೊಂಡ ವಿದ್ವಾಂಸರಲ್ಲಿ ಮೂವರ ಹೊರತು ಉಳಿದವರು ತಟಸ್ಥರಾದರು. ಸಂಭಾವನೆಯನ್ನೂ ನೀಡಿ ಸುಂದರವಾಗಿ ಕನ್ನಡ ಕಾವ್ಯವನ್ನು ಹೊರತರಲು ಕನ್ನಡವೇ ಬಾರದ ಭಾರತೀಯ ಜ್ಞಾನಪೀಠದವರು ಒಪ್ಪಿದ್ದ ಕೆಲಸ ನಿಂತು ಹೋಯಿತು.

ಸಂಶೋಧನೆಯ ಕ್ಷೇತ್ರದಲ್ಲಿ ಮೊತ್ತಮೊದಲನೆಯ ಬಾರಿಗೆ ಕೈಗೊಂಡ ಇಂಥದೊಂದು ಚರಿತ್ರಾರ್ಹ ವಿಚಾರ ಜಾರಿಗೆ ಬಾರದೆ ಭ್ರೂಣಾವಸ್ಥೆಯಲ್ಲಿಯೇ ಜಾರಿಹೋಗಲು ಬಿಡಬಾರದೆಂದು ಆ.ನೇ. ಉಪಾಧ್ಯೆಯವರು ಕನ್ನಡ ಸಾಹಿತ್ಯ ಪರಿಷತ್ತನ್ನು ಸಂಪರ್ಕಿಸಿದರು. ಆಗಿನ (೧೯೭೦–೭೮) ಅಧ್ಯಕ್ಷರಾಗಿದ್ದ ಜಿ. ನಾರಾಯಣರು (೧೯೨೩–೨೦೧೨) ಉಪಾಧ್ಯೆಯವರ ಕಳಕಳಿಗೆ ಓಗೊಟ್ಟು ಹಳೆಗನ್ನಡ ಕಾವ್ಯಗಳನ್ನು ಹೊಸಗನ್ನಡ ಗದ್ಯಾನುವಾದ ಸಹಿತ ಪ್ರಕಟಿಸಲು ಒಪ್ಪಿ ಈ ಯೋಜನೆಗೆ ಜೀವ ತುಂಬಿದರು. ಅವರ ತರುವಾಯ (೧೯೭೮–೮೬) ಪರಿಷತ್ತಿಗೆ ಅಧ್ಯಕ್ಷರಾಗಿದ್ದ ಹಂಪನಾ ಈ ಕಾರ್ಯವನ್ನು ಮತ್ತೆ ಮುಂದುವರಿಸಿದರು.

ಪ್ರೊ.ಆರ್.ಸಿ.ಹಿರೇಮಠರು (೧೯೨೦–೨೦೦೫) ನಾಗಚಂದ್ರಕವಿ ವಿರಚಿತ ರಾಮಚಂದ್ರ ಚರಿತ ಪುರಾಣ (೧೯೭೫) (ಪಂಪರಾಮಾಯಣ) ಕಾವ್ಯವನ್ನೂ, ತ.ಸು. ಶಾಮರಾಯರು (೧೯೦೬–೧೯೮೮) ಆಚಣ್ಣ ಕವಿಯ ವರ್ಧಮಾನ ಪುರಾಣಂ ಕಾವ್ಯವನ್ನೂ (೧೯೭೫), ವಿದ್ವಾನ್ ಟಿ.ಎನ್. ಕೇಶವಭಟ್ಟರು (೧೯೨೦–೨೦೦೫) ದೇವಪ್ಪಕವಿ ವಿರಚಿತ ರಾಮವಿಜಯ ಕಾವ್ಯವನ್ನೂ (೧೯೭೪) ಭಾರತೀಯ ಜ್ಞಾನಪೀಠ ಹಮ್ಮಿದ ಯೋಜನೆ ಅಡಿಯಲ್ಲಿ ಗದ್ಯಾನುವಾದದೊಂದಿಗೆ ಸಿದ್ಧಪಡಿಸಿಕೊಟ್ಟರು. ಅಚ್ಚಾಗಿದ್ದ ಈ ಮೂರು ಕಾವ್ಯಾನುವಾದ ಕೃತಿಗಳ ಮಾರಾಟ ಮತ್ತು ಸ್ವಾಮ್ಯವನ್ನು ಜ್ಞಾನಪೀಠದವರು ಹಂಪನಾ ಕೋರಿಕೆ ಮನ್ನಿಸಿ ಸಾಹಿತ್ಯ ಪರಿಷತ್ತಿಗೇ ವಹಿಸಿಕೊಟ್ಟರು.

ಕನ್ನಡ ಸಂಶೋಧನೆಯ ಜಗತ್ತಿನಲ್ಲಿ ನಡೆದು ಹೋದ ಈ ವಿಶಿಷ್ಟ ಐತಿಹಾಸಿಕ ಘಟನೆ ಬೇರೆಲ್ಲೂ ಉಲ್ಲೇಖವಾಗಿಲ್ಲವಾದ ಕಾರಣ ಅದನ್ನಿಲ್ಲಿ ದಾಖಲಿಸಿದ್ದೇನೆ. ಈ ಮಾದರಿಗೆ ತುಸು ಹತ್ತಿರವಾಗಿ ನಿಲ್ಲಬಲ್ಲ ಎಲ್. ಬಸವರಾಜುರವರು (೧೯೧೯–೨೦೧೩) ಸರಳ ಗದ್ಯಾನುವಾದ ಮಾಡಿದ ಬಗೆಯನ್ನೂ ಪರಿಗಣಿಸಬೇಕು. ಇವು ನೇರ ಸಂಶೋಧನೆಯಲ್ಲ. ಇದೇ ರೀತಿ ದೂರ ಸಂಶೋಧನೆಯ ಅಂಚಿನಲ್ಲಿ ಸಂಚರಿಸುವ ಬರೆಹವನ್ನು ಜಿ.ಪಿ. ರಾಜರತ್ನಂ (೧೯೦೮–೧೯೭೯) ಬೌದ್ಧ, ಜೈನ, ವೈಷ್ಣವ ಹಿನ್ನೆಲೆಯಿಂದ ಮಾಡಿದರು.

ಈ ಅವಧಿಯಲ್ಲಿ ನಡೆದ ಮತ್ತೊಂದು ಗಣ್ಯತರ ಸಂಶೋಧನೆಯ ಕಾರ್ಯ ಎಂದರೆ ದೀಪಿಕೆಗಳ ರಚನೆ. ಪ್ರೊ ಡಿ.ಎಲ್. ನರಸಿಂಹಾಚಾರ್ಯರ (೧೯೦೬–೧೯೭೧) ಕನ್ನಡ ಗ್ರಂಥ ಸಂಪಾದನೆ (೧೯೬೪), ಶಬ್ದವಿಹಾರ (೧೯೫೬) ಮತ್ತು ಪೀಠಿಕೆಗಳು – ಲೇಖನಗಳು (೧೯೭೧) ಸಂಶೋಧನೆಯ ಉಗ್ರಾಣ. ಅವರ ಪಂಪಭಾರತ ದೀಪಿಕೆ (೧೯೭೧) ಅದ್ವಿತೀಯ ವಿದ್ವತ್ ಸಾಹಸ. ಅದೇ ಮಾದರಿಗೆ ಸೇರಿದ್ದಾದರೂ ತುಸು ಭಿನ್ನವಾದದ್ದು ತ.ಸು. ಶಾಮರಾಯ ಮತ್ತು ಪ. ನಾಗರಾಜಯ್ಯ ಜೋಡಿ ಮೂಲ ಕಾವ್ಯ ಪಾಠದೊಂದಿಗೆ ಪ್ರಕಟಿಸಿದ ಆದಿಪುರಾಣ ದೀಪಿಕೆ (೧೯೯೧). ಬೆಂಗಳೂರಿನ ಇಂಡಿಯಾ ಬುಕ್ ಹೌಸ್‌ನವರು (ಐಬಿಹೆಚ್) ೧೯೭೩ ರಿಂದ ೧೯೮೪ರ ಅವಧಿಯಲ್ಲಿ ವಿ. ಸೀತಾರಾಮಯ್ಯನವರ (೧೮೯೯–೧೯೮೩) ಸಂಪಾದಕತ್ವದಲ್ಲಿ ಹೊರತಂದ ಕವಿ–ಕಾವ್ಯ ಮಾಲೆಯ ಇಪ್ಪತ್ತು ಸಂಪುಟಗಳನ್ನು ವಿಶೇಷವಾಗಿಯೇ ಪರಿಗಣಿಸಬೇಕು. ಹಳಗನ್ನಡ ಕವಿಕಾವ್ಯಗಳನ್ನು ಪುನರ್ ಮೌಲ್ಯ ಮಾಡುವ ಪ್ರಯತ್ನವಿದು. ಸಂಭಾವನೆ ಮತ್ತು ಪ್ರಶಸ್ತಿ ರೂಪದ ಗ್ರಂಥಗಳ ದೊಡ್ಡ ಪರಂಪರೆ ಕನ್ನಡ ಸಾಹಿತ್ಯದ ಅಗ್ಗಳಿಕೆಗಳಲ್ಲೊಂದು; ಮುದ್ದಣ (೧೯೨೬), ರನ್ನಕವಿ ಪ್ರಶಸ್ತಿ (೧೯೨೮), ಅಭಿನವ ಪಂಪ (೧೯೩೪), ಕುಮಾರವ್ಯಾಸ ಪ್ರಶಸ್ತಿ (೧೯೪೦), ಹರಿಹರದೇವ (೧೯೩೭) ಕವಿ ಲಕ್ಷ್ಮೀಶ (೧೯೩೩), ಮಹಾತ್ಮ ಕನಕದಾಸ ಪ್ರಶಸ್ತಿ (೧೯೬೫). ಈ ಕೃತಿಗಳಲ್ಲಿ ಸಂಶೋಧನಾತ್ಮಕ ಬರೆಹಗಳಿವೆ.

ಅವಕಾಶಗಳ ಹೆಬ್ಬಾಗಿಲು ತೆರೆಯಿತು

ಇಂದಿಗೂ ಬೆರಗು ತರುವ ಮಹತ್ಕಾರ್ಯವೆನಿಸುವ ಸಂಶೋಧನೆ ಹಿಂದೆಯೂ ನಡೆದಿದೆ. ಸ್ಥಳೀಯ ಸಾಂಸ್ಕೃತಿಕ ಲೋಕದ ವಿಶ್ವರೂಪವನ್ನು ಪರಿಚಯಿಸಿದ ಹಿರಿಮೆಯ ದೊಡ್ಡ ಪಾಲು ಹೊರಗಿನಿಂದ ಬಂದ ಅರಿವಿನ ಓಜರಿಗೂ ಸಲ್ಲುತ್ತದೆ. ಮುನ್ನಡೆಯಲು ಕಾಲುದಾರಿ ಕೂಡ ಇರದಿದ್ದ ಮಬ್ಬುಮುಸುಗಿದ ಕಾಲದಲ್ಲಿ ಊರುಕೇರಿಗಳಲ್ಲಿ ಸುಳಿದು, ಕಾಡುಮೇಡುಗಳಲ್ಲಿ ಸುತ್ತಿ ಹೆದ್ದಾರಿ ಮಾಡಿದ ಮುಂಚೂಣಿಗರವರು. ಅಧ್ಯಯನಕ್ಕೆಂದು ಆರಿಸಿಕೊಂಡ ಆಯಾ ವಿಷಯದ ಪುನಾರಚನೆಗೆ, ಪುನರಾವಲೋಕನಕ್ಕೆ ಬೇಕಾಗುವ ಮೂಲ ಅಧಿಕೃತ ಆಕರಗಳನ್ನು ಒದಗಿಸಿದರು. ಕೈಪಿಡಿಗಳಿರದೆ, ಮಾರ್ಗದರ್ಶಕರಿರದೆ ಅವರು ಮೌಲಿಕವಾದ ಸಂಶೋಧನೆ ಮಾಡಿದ್ದು ಪ್ರಶಂಸಾರ್ಹ. ವಿಶ್ವವಿದ್ಯಾಲಯದ ಹೊರಗಿನವರು, ಹಣದ ಅನುದಾನ ಇರದವರು ಖಾಸಗಿಯಾಗಿ ಸಂಶೋಧನೆ ನಡೆಸಿದರು.

ಇಚಿದು ಅಂದಿನ ಅಡೆತಡೆಗಳ ಆತಂಕಗಳು ನಿವಾರಣೆಯಾಗಿವೆ. ನೆರವುಗಳ ನೆರೆ ಹರಿದು ಬರುತ್ತಿದೆ. ವಿಶ್ವವಿದ್ಯಾಲಯ ಧನಸಹಾಯ ಆಯೋಗ, ಸ್ಥಳೀಯ ವಿದ್ಯಾಲಯಗಳು, ಸರ್ಕಾರ, ಆರ್‌ಎಫ್‌ಸಿ, ಪಿಸಿಎಸ್‌ಆರ್, ಮತ್ತೊಂದು ಮಗದೊಂದು ಎಂದು ಪ್ರೋತ್ಸಾಹದ ಮಹಾಪೂರದ ಸುಗ್ಗಿ ಸುರಿಮಳೆ. ಸಂಶೋಧನದ ವಿಧಿವಿಧಾನ ತಿಳಿಸಿ ಕೊಡುವ ಪುಸ್ತಕಗಳಿವೆ. ಅಡಿಟಿಪ್ಪಣಿಗಳು ಯಾವ ಕ್ರಮದಲ್ಲಿರಬೇಕು, ಉದ್ಧೃತಿಗಳನ್ನು ಹೇಗೆ ಕೊಡಬೇಕು, ಗ್ರಂಥಸೂಚಿ ಮತ್ತು ಅನುಬಂಧ ಯಾವ ವಿಧಾನದಲ್ಲಿ ಬರಬೇಕು – ಎಂಬ ಸರಳ ವಿಚಾರವನ್ನು ಕೂಡ ತಿಳಿಸುವ ಸವಲತ್ತು ದೊರೆಯಿತು.

ಕರ್ನಾಟಕದಲ್ಲಿ ಇಂದು ಸಂಶೋಧನೆಯ ವಾತಾವರಣ ಮತ್ತು ಇರುವ ವಾಸ್ತವ ಪರಿಸ್ಥಿತಿಯನ್ನು ಅವಲೋಕಿಸಿದಾಗ ಮನವರಿಕೆಯಾಗುವ ಸಂಗತಿಗಳು ಮನಕಲಕುವಂತಿವೆ. ಇಪ್ಪತ್ತನೆಯ ಶತಮಾನದಲ್ಲಿಯೇ ಅದರ ಪೂರ್ವಾರ್ಧದ ಪರಿಸ್ಥಿತಿಗೂ ಉತ್ತರಾರ್ಧದ ಪರಿಸ್ಥಿತಿಗೂ ಅಜಗಜಾಂತರ ಕಣ್ಣಿಗೆ ರಾಚುತ್ತದೆ. ಸ್ವಾತಂತ್ರ್ಯಪೂರ್ವದಲ್ಲಿ ಅಲ್ಲೊಂದು ಇಲ್ಲೊಂದು ಎಂದು ವಿರಳವಾಗಿ ನಕ್ಷತ್ರಗಳು ಸಂಶೋಧನೆಯ ಬಾಂದಳದಲ್ಲಿ ಬೆಳಗುತ್ತಿದ್ದುವು. ಸ್ವಾತಂತ್ರ್ಯೋತ್ತರ, ಅಥವಾ ಇನ್ನೂ ನಿರ್ದಿಷ್ಟಗೊಳಿಸಿ ಹೇಳುವುದಾದರೆ ಕರ್ನಾಟಕ ಏಕೀಕರಣೋತ್ತರ ಕಾಲದಿಂದೀಚೆಗೆ ಪರಿಸ್ಥಿತಿ ಬದಲಾಯಿತು. ವರ್ಷದಿಂದ ವರ್ಷಕ್ಕೆ ಹಿಗ್ಗುತ್ತ ಹೆಚ್ಚುತ್ತ ಹೊರಟ ಈ ಸಂಶೋಧನೆಯ ಸುಗ್ಗಿ ಏರುತ್ತಲೇ ಇದೆ. ಸಾಹಿತ್ಯದ ಒಂದೆರಡು ಪ್ರಕಾರಗಳಿಗೆ ಸೀಮಿತವಾಗಿದ್ದ ವಿಷಯಗಳ ಆಯ್ಕೆಯ ಅವಕಾಶ ಇಂದು ಅಪರಿಮಿತವಾಗಿದೆ.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕಾಲಕಾಲಕ್ಕೆ ಕಲ್ಪಿಸಿದ ಆಕರ್ಷಕ ಸವಲತ್ತುಗಳಿಂದ ಸಂಶೋಧನ ಪ್ರವೃತ್ತಿಗೆ ನಾಗಾಲೋಟ ಬಂದಿತು. ಅಭ್ಯರ್ಥಿಗಳು ಅದೆಷ್ಟು ತಂಡೋಪ ತಂಡವಾಗಿ ಸಾಲುಗಟ್ಟಿದ್ದರೆಂದರೆ ಅನೇಕರಿಗೆ ಮಾರ್ಗದರ್ಶಕರು ಸಿಗುವುದೇ ಕಷ್ಟವಾಯಿತು. ತಮ್ಮ ಮಾರ್ಗದರ್ಶನಕ್ಕೆ ಅಭ್ಯರ್ಥಿಗಳೇ ಇಲ್ಲವೆಂದು ಪರಿತಪಿಸುತ್ತಿದ್ದ ಅಥವಾ ಪ್ರಾಧ್ಯಾಪಕರು ಹಾಯಾಗಿದ್ದ ದಿನಮಾನ ಹೋಯಿತು. ಈ ಹಿನ್ನೆಲೆಯಿಂದಾಗಿ ವಿಶ್ವವಿದ್ಯಾನಿಲಯಗಳ ಹಿರಿಯ ಪ್ರಾಧ್ಯಾಪಕರಷ್ಟೆ ಮಾರ್ಗದರ್ಶಕರಾಗಿ ಇರಬೇಕೆಂಬ ಹಳೆಯ ಪ್ರತಿಷ್ಠಿತ ನಿಯಮವನ್ನು ಸಡಿಲಿಸಿದರು. ರೀಡರುಗಳೂ ಡಾಕ್ಟರೇಟುಳ್ಳ ಹಿರಿಯ ಅನುಭವಿ ಅಧ್ಯಾಪಕರೂ ಮಾರ್ಗದರ್ಶಕರಾದರು.

ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ, ಮಾನವಿಕ ಮತ್ತು ವಿಜ್ಞಾನದ ನಾನಾ ಐಚ್ಛಿಕ ವಿಷಯಗಳಲ್ಲಿ ಸಂಶೋಧನೆಗೆ ಅಭ್ಯರ್ಥಿಗಳು ನಾ ಮುಂದು ತಾ ಮುಂದು ಎಂದು ಮುಗಿಬಿದ್ದರು. ಇಪ್ಪತ್ತನೆಯ ಶತಮಾನದ ಒಂಬತ್ತನೆಯ ದಶಕದ ವೇಳೆಗಾಗಲೆ ಸಂಶೋಧನ ವೇತನವನ್ನು ಕೊಡುವ ಪರಿಪಾಟಿ ಪ್ರಾರಂಭವಾಯಿತು. ಅದಕ್ಕೂ ಹಿಂದೆ ಮಾರ್ಗದರ್ಶಕರಿಗೆ ಇಬ್ಬರು ಮೂವರು ಅಭ್ಯರ್ಥಿಗಳನ್ನು ಒಪ್ಪಿಕೊಳ್ಳಲಷ್ಟೆ ಅನುಮತಿಯಿತ್ತು. ಆಮೇಲೆ ಒತ್ತಡಗಳು ಹೆಚ್ಚಿದುವು. ಒಬ್ಬೊಬ್ಬ ಮಾರ್ಗದರ್ಶಕ ಆರು ಜನರವರೆಗೆ ಗೈಡು ಮಾಡಲು ಪರವಾನಿಗಿ ದೊರೆಯಿತು. ಸಾಮಾಜಿಕ ನ್ಯಾಯ ಸಲ್ಲಬೇಕು ಎಂಬ ಸದಾಶಯದಿಂದ ಪರಿಶಿಷ್ಟ ಜಾತಿ ಮತ್ತು ವರ್ಗದ ಅಭ್ಯರ್ಥಿಗಳಿಗೆ ಶಿಷ್ಯವೇತನ – ಭತ್ಯೆ ಉಳಿದವರಿಗಿಂತ ತುಸು ಜಾಸ್ತಿ ಮಾಡಿದರಲ್ಲದೆ ಗೈಡುಗಳಲ್ಲಿ ಇವರಿಗೆ ಆದ್ಯತೆಯನ್ನೂ, ನಿಗದಿಪಡಿಸಿದ ಕೋಟವನ್ನು ದಾಟಿ ಇವರಲ್ಲಿ ಒಬ್ಬಿಬ್ಬರನ್ನು ಅಂಗೀಕರಿಸಲೂ ಪಿಎಚ್.ಡಿ. ನಿಯಮದಲ್ಲಿ ಅವಕಾಶ ಕಲ್ಪಿಸಲಾಯಿತು. ಈ ಹಂತದಲ್ಲಿ ಮತ್ತೊಂದು ಬೆಳವಣಿಗೆ ಸಂಭವಿಸಿತು. ಸಂಶೋಧನೆ ವಿಶ್ವವಿದ್ಯಾಲಯಗಳ ಗುತ್ತಿಗೆ ಏನಲ್ಲ. ಬೇರೆ ಸರ್ಕಾರಿ ಮತ್ತು ಖಾಸಗಿ ಪ್ರಥಮ ದರ್ಜೆ ಕಾಲೇಜುಗಳಲ್ಲಿರುವ ಪ್ರಾಧ್ಯಾಪಕರೂ ಉಪ ಅಥವಾ ಸಹ ಪ್ರಾಧ್ಯಾಪಕರೂ, ಅವರಿಗೆ ಡಾಕ್ಟರೇಟು ಇದ್ದಲ್ಲಿ, ಮಾರ್ಗದರ್ಶಕರಾಗಬಹುದೆಂಬ ಹೊಸ ಆಜ್ಞೆಯ ಸುತ್ತೋಲೆ ಹೊರಟಿತು. ಮೊದಲಿದ್ದ ಬೇಲಿಯನ್ನು ಕಿತ್ತರು! ಒಂದು ಕಡೆ ಸಂಶೋಧನ ವೇತನ ಸಹಾಯ, ಇನ್ನೊಂದು ಕಡೆ ಮಾರ್ಗದರ್ಶಕರು ಆರು ಜನರಿಗೆ ಮಾರ್ಗದರ್ಶನ ಮಾಡುವ ಸೌಲಭ್ಯ, ಮತ್ತೊಂದು ಕಡೆ ಸರ್ಕಾರಿ ಮತ್ತು ಖಾಸಗಿ ಕಾಲೇಜ್ ಪ್ರಾಧ್ಯಾಪಕರಿಗೂ ಮಾರ್ಗದರ್ಶಕರಾಗುವ ಅವಕಾಶ ಒದಗಿತು.

ಸಂಶೋಧನ ಪ್ರವೃತ್ತಿಯನ್ನು ಬೆಳಸಿಕೊಳ್ಳಲೂ ಶೈಕ್ಷಣಿಕ ಅರ್ಹತೆಯನ್ನು ಹೆಚ್ಚಿಸಿಕೊಳ್ಳಲೂ ಆಡಳಿತಾಂಗವೂ ನೆರವಾಗಬೇಕೆಂಬುದು ಈ ಬಗೆಯ ರಿಯಾಯಿತಿಗಳ ಹಿಂದಿರುವ ಸದಾಶಯ. ತಮ್ಮ ಅಧ್ಯಯನವನ್ನು ಉನ್ನತೀಕರಿಸಿ ಸಂಶೋಧನ ಪ್ರವೃತ್ತಿಯನ್ನೂ ರೂಢಿಸಿಕೊಳ್ಳಲು ಎಲ್ಲರಿಗೂ ಬಾಗಿಲು ತೆರೆದಿರಬೇಕೆಂಬ ಅನುಕೂಲ – ಇವೆಲ್ಲ ವರಸೆಯಾಗಿ ಒದಗಿಬಂದುವು. ಪ್ರೀ–ಪಿಎಚ್.ಡಿ. ಪರೀಕ್ಷೆಯ (ಲಿಖಿತ ಮತ್ತು ಮೌಖಿಕ) ನಿಯಮವಿದ್ದರೂ ಅಭ್ಯರ್ಥಿಗಳ ನೂಕುನುಗ್ಗಲು ತಗ್ಗಲಿಲ್ಲ. ಷಾಣ್ಮಾಸಿಕ ಸಂಶೋಧನ ಪ್ರಗತಿಯನ್ನು ಮಾರ್ಗದರ್ಶಕರ ರುಜುವಿನೊಂದಿಗೆ ವಿಶ್ವವಿದ್ಯಾಲಯಕ್ಕೆ ಸಲ್ಲಿಸಬೇಕೆಂಬ ನಿರ್ಬಂಧವನ್ನೂ ನಿಭಾಯಿಸಲಾಗುತ್ತಿತ್ತು.

ನೈತಿಕ ದಿವಾಳಿತನ

ಸಂಶೋಧನ ಪ್ರಬಂಧವೆಂಬ ಠಸ್ಸೆ ಒತ್ತಿದ ಪಿಎಚ್.ಡಿ. ಮಹಾಪ್ರಬಂಧಗಳು ಥೀಸಿಸ್‌ಗಳು ಪುಂಖಾನುಪುಂಖವಾಗಿ ಹೊರಬರತೊಡಗಿದಾಗ ಅದರಲ್ಲಿ ಜಳ್ಳೂ ಕಾಳೂ ಇರುವುದು ಸಹಜವೆ. ಎಲ್ಲವೂ ಒಂದೇ ಗುಣಮಟ್ಟದಲ್ಲಿ ಇರಬೇಕೆಂಬುದು ನಿರೀಕ್ಷೆ. ಆದರೆ 'ಸಾಮೂಹಿಕ ಉತ್ಪಾದನೆ' (ಮಾಸ್ ಪ್ರೊಡಕ್ಷನ್) ರೂಪದಲ್ಲಿ, ಒಮ್ಮೊಮ್ಮೆ ಆತುರಾತುರವಾಗಿ, ಹೊರಬಿದ್ದಿರುವ ಥೀಸಿಸ್‌ಗಳ ವಿಚಾರದಲ್ಲಿ ಟೀಕೆಗಳು ಹೆಚ್ಚಾದುವು. ಹಿಂದೆ 'ಪಿಎಚ್.ಡಿ ಕೊಡಬಹುದು, ಆದರೆ ಮುದ್ರಣ ಮಾಡಬಾರದು', 'ಈ ಮಹಾ ಪ್ರಬಂಧವನ್ನು ಪುನರ್ ಪರಿಶೀಲಿಸಿ ಮತ್ತೆ ಪಿಎಚ್.ಡಿ.ಗೆ ಸಾದರಪಡಿಸಬೇಕು', 'ಈ ಮಹಾಪ್ರಬಂಧ ಪಿಎಚ್.ಡಿ.ಗೆ ಅರ್ಹವಾಗಿಲ್ಲ' ಎಂದೆಲ್ಲ ಬಾಹ್ಯ ಪರೀಕ್ಷಕರು ತಮ್ಮ ಮೌಲ್ಯಮಾಪನ ವರದಿ ಕೊಡುತ್ತಿದ್ದುದೂ ಉಂಟು. ಆದರೆ ಇದರಲ್ಲಿಯೂ ರಾಜಕೀಯ ನುಸುಳಿತು. ದಯೆ ದಾಕ್ಷಿಣ್ಯಾದಿಗಳು

ತಲೆದೋರಿದುವು. ನಾನಾ ಬಗೆಯ ಪ್ರಭಾವ ಪ್ರಲೋಭನೆಗಳ ಕೈವಾಡ ಜೋರಾಯಿತು. ಮಾರ್ಗದರ್ಶಕರೂ, ಬಾಹ್ಯ ಪರೀಕ್ಷಕರೂ ಇಕ್ಕಟ್ಟಿಗೆ ಸಿಕ್ಕಿಬಿದ್ದರು. ವ್ಯವಹಾರದೃಷ್ಟಿ ಉಂಟಾಗಿ ಶೀಘ್ರತರ ಲೌಕಿಕ ಲಾಭಗಳಿಸುವ ಆಮಿಷ ಕಾಡಿತು. ತತ್ಫಲವಾಗಿ ಸಂಯಮ ತಗ್ಗಿ ತಾಳ್ಮೆ ತಪ್ಪಿತು, ಶಿಸ್ತು ಸಡಿಲವಾಯಿತು.

ಥೀಸಿಸ್‌ಗಳು ತಯಾರಾಗತೊಡಗಿದುವು. ದುಡ್ಡಿಗಾಗಿ ಸಂಶೋಧಿಸುತ್ತಿರುವ ಅಭ್ಯರ್ಥಿಯ ಬದಲು ಬೇರೊಬ್ಬರು ಸಿದ್ಧಪಡಿಸಿಕೊಡುವುದು ರಾಜಾರೋಷವಾಗಿ ನಡೆಯತೊಡಗಿತು. ಪುಟಪುಟದಲ್ಲೂ ಅಡಿಟಿಪ್ಪಣಿ ಕೊಟ್ಟರೆ ಅಲ್ಲಿಗೆ ಅದು ಸಂಶೋಧನೆ ಆದಂತೆಯೇ ಎಂಬ ಭ್ರಾಂತಿ ಆವರಿಸಿದ್ದೂ ಉಂಟು. ಬಲ್ಲಿದರ ಬಳಗ ಬಡವಾಗುತ್ತಿರುವುದನ್ನು ಕಂಡರೆ ಇದು ಎಲ್ಲಿ ಒಣಗಿ ಬತ್ತಿಹೋಗುತ್ತದೆಯೊ ಎಂಬ ಆತಂಕ ತಲೆದೋರಿದ್ದೂ ಇದೆ. ವಿದ್ವತ್ತಿಗೆ ಬರಗಾಲ ಬರಲಾರದೆಂಬ ನಂಬಿಕೆ ಹುಸಿಯಾಗದಿರಲಿ. ಅಲ್ಲೊಬ್ಬರು ಇಲ್ಲೊಬ್ಬರು ಎಂದು ಗಟ್ಟಿಕಾಳುಗಳು ಕಾಣುತ್ತಿವೆ. ಅಂಥವರು ಸಂಶೋಧಕರ ಪರಂಪರೆ ಮುರುಟಿ ಹೋಗದಂತೆ ಕಾಪಾಡುತ್ತಾರೆಂಬ ಆಶಾವಾದ ನನಗಿದೆ. ಈ ದುರಂತದಿಂದ ಪಾರಾಗಿ ತಮ್ಮ ಪಾಡಿಗೆ ತಾವು ಗಂಭೀರ ಅಧ್ಯಯನದಲ್ಲಿ ತೊಡಗಿ ಸಂಶೋಧನೆಯಲ್ಲಿ ನಿರತರಾಗಿರುವ ಯುವ ಪೀಳಿಗೆಯವರೂ ಇದ್ದಾರೆ. ಇಂಥ ಯುವ ಪೀಳಿಗೆಯವರನ್ನು ಕಂಡಾಗ ಭರವಸೆ ಚಿಗುರೊಡೆಯುತ್ತದೆ.

ಸಂಶೋಧನೆಯ ಧ್ಯೇಯ

ಸಂಶೋಧಕರು ಆಧಾರ ಪ್ರಮಾಣಗಳನ್ನು ಒದಗಿಸುವ ಪ್ರಮಾಣಪುರುಷರೂ ಆಗಿರಬೇಕು ಹಾಗೆಯೇ ಬೇರೆಯವರಿಂದ ಪಡೆದ ಮಾಹಿತಿಗಳನ್ನು ಮರೆಯದೆ ಕೃತಜ್ಞತೆಯಿಂದ ಅದನ್ನು ಸೂಚಿಸುವ ಪ್ರಾಮಾಣಿಕ ಪುರುಷರೂ ಆಗಿರುವುದು ಒಳಿತು. ವಿನಯೋಲ್ಲಂಘನೆ ಭೂಷಣವಲ್ಲ, ವಿನಯ ಪಾಲನೆ ವಿಭೂಷಣ.

<< ಸಂಶೋಧಕನಲ್ಲಿರಬೇಕಾದ ಮುಖ್ಯ ಗುಣ ಪ್ರಾಮಾಣಿಕತೆ. ಆತ್ಮವಂಚನೆ ಪರವಂಚನೆಗಳು ಸಲ್ಲವು. ಸಂದೇಹ ಬಂದಾಗ ಅದಕ್ಕೆ ಪರಿಹಾರವನ್ನು ಹುಡುಕಬೇಕು; ಸಿಕ್ಕದಿದ್ದರೆ ಸಂಶಯ ಹಾಗೇ ಉಳಿದುಕೊಳ್ಳುತ್ತದೆ. ಇದು ಸಂಶೋಧನೆಯ ಎಲ್ಲ ಅಂಶಗಳಿಗೂ ಅನ್ವಯಿಸುತ್ತದೆ. ಸಮಸ್ಯೆಯೇ ಇಲ್ಲದಿರುವ ಎಡೆಯಲ್ಲಿ ಕೃತಕವಾಗಿ ಒಂದನ್ನು ಹೂಡುವುದು, ಹೂಡಿದ್ದಕ್ಕೆ ಆಧಾರವನ್ನು ಒದಗಿಸುವುದು ಇವೇ ಮುಂತಾದವುಗಳಲ್ಲಿ ಅಪ್ರಾಮಾಣಿಕತೆ ತಲೆದೋರುವ ಸಂದರ್ಭವುಂಟು. ತನ್ನದಲ್ಲದ ವಿಚಾರಗಳನ್ನು ತನ್ನವೆಂದು ತೋರುವಂತೆ ಮಾಡುವ ನಿರೂಪಣೆಯಲ್ಲಿ ಪ್ರಾಮಾಣಿಕತೆಗೆ ಸಂಚಕಾರ ಬರುತ್ತದೆ. ಇಂಥ ಸಂಶೋಧನೆಯಲ್ಲಿ ಇತರ ಸಂಶೋಧಕರಿಗೆ ವಿಶ್ವಾಸವುಂಟಾಗುವುದಿಲ್ಲ. ಎಷ್ಟೋ ವೇಳೆ ತನಗೆ ತಿಳಿಯದೆಯೇ ಬುದ್ಧಿ ಮೋಸವಾಗುವುದುಂಟು. ಹಾಗಾಗಿದೆಯೆಂಬ ಅರಿವು ಬಂದ ಕೂಡಲೇ ಸಂಶೋಧಕ ತನ್ನನ್ನು ತಾನೇ ತಿದ್ದಿಕೊಳ್ಳುವುದಕ್ಕೆ ಸಿದ್ಧನಿರಬೇಕು.

ಒಂದು ವಿಷಯದಲ್ಲಿ ಒಬ್ಬನು ಮಾಡಿರುವ ಸಂಶೋಧನೆ ಸರಿಯಾಗಿದೆಯೆಂದು ಆತ್ಮ ಸಾಕ್ಷಿ ಒಳಗೊಳಗೇ ಹೇಳುತ್ತಿದ್ದರೂ ಅದನ್ನು ಕಡೆಗಣಿಸಿ ಖಂಡನೆಗಾಗಿಯೇ ಬರೆಯುವುದು ಪ್ರಾಮಾಣಿಕತೆಯಲ್ಲ. ನಿಜವಾದ ಮತಭೇದವಿದ್ದರೆ, ಅದಕ್ಕೆ ಪುಷ್ಟಿಕೊಡುವ ಆಧಾರ ಸಾಮಗ್ರಿಯನ್ನು ಕಾಣಿಸಿ ಪ್ರತಿಪಾದನೆ ಮಾಡಬೇಕು. ಅದಿಲ್ಲದೆ ಉಪಾಯದಿಂದ ನುಸುಳಿಕೊಳ್ಳುವ ಪ್ರಯತ್ನವನ್ನು ಮಾಡಬಾರದು. ಹೀಗೆ ಸಂಶೋಧನೆಯ ಎಲ್ಲ

ಕ್ಷೇತ್ರಗಳಲ್ಲಿಯೂ ಪ್ರಾಮಾಣಿಕತೆಗೆ ಮಿಗಿಲಾದ ವ್ಯಾಪ್ತಿಯುಂಟು >> [ಡಿಎಲ್ಎನ್ : ಉದ್ಧೃತಿ – ಶಾಸ್ತ್ರೀಯ, ಪೂರ್ವೋಕ್ತ].

ವಿದ್ವತ್ತು ಮತ್ತು ವಿದ್ವಾಂಸರ ವಿಚಾರವಾಗಿ ಬರೆಯುತ್ತ ಅವರು ಯಾವ ಗುಣ ಸ್ವಭಾವಗಳಿಂದ ಕೂಡಿರಬೇಕೆಂಬುದನ್ನು ಕುರಿತು ಬ್ರೊನೊವ್‌ಸ್ಕಿ ಎಂಬ ಪಾಶ್ಚಾತ್ಯ ಪಂಡಿತರು ಹೇಳಿರುವ ಮಾತುಗಳು ಎಲ್ಲ ಕಾಲಕ್ಕೂ ಸಲ್ಲುವಂತಿವೆ :

<< By the wordly standards of public life all scholars in their work are of course oddly virtuous. They do not make wild claims; they do not cheat; they do not try to persuade at any cost; they appeal neither to prejudice nor authority; they are often frank about their ignorance; their disputes are fairly decorous; they do not confuse what is being argued with race, polities, sex or age; they listen patiently to the young and to the old who both know everything. These are the general virtues of scholarship and they are peculiarly the virtues of science >>.

ಬ್ರೊನೊವ್‌ಸ್ಕಿಯವರ ಮೇಲ್ಕಂಡ ಸಾಲುಗಳನ್ನು ಉದಾಹರಿಸಿರುವುದಲ್ಲದೆ ಈ ಆಂಗ್ಲಪಾಠದ ಕನ್ನಡಾನುವಾದವನ್ನೂ ಟಿ.ವಿ. ವೆಂಕಟಾಚಲಶಾಸ್ತ್ರಿಯವರು ಕೊಟ್ಟಿದ್ದಾರೆ: << ಸಾರ್ವಜನಿಕ ಜೀವನದ ವ್ಯಾವಹಾರಿಕ ಮಾನದಂಡಗಳ ಪ್ರಕಾರ, ಎಲ್ಲಾ ವಿದ್ವಾಂಸರೂ ತಮ್ಮ ಕೆಲಸ ಕಾರ್ಯಗಳಲ್ಲಿ ವಿಚಿತ್ರವಾದ ನೀತಿ ನಿಷ್ಠೆಯಿಂದಿರುವುದು ನಿಸ್ಸಂದಿಗ್ಧವಾದುದೇ. ಅವರು ತಮ್ಮ ಸಾಧನೆಗಳನ್ನು ಹುಚ್ಚಾಬಟ್ಟೆ ಹೇಳಿಕೊಳ್ಳುವುದಿಲ್ಲ; ಅವರು ಮೋಸ ಮಾಡುವುದಿಲ್ಲ; ಏನಾದರೂ ಮಾಡಿ ಒಲಿಸೋಣವೆಂದು ಪ್ರಯತ್ನಿಸುವುದಿಲ್ಲ, ಪೂರ್ವಗ್ರಹಕ್ಕಾಗಲಿ ಅಧಿಕಾರ ಶಕ್ತಿಗಾಗಲಿ ಮೊರೆಯಿಡುವುದಿಲ್ಲ. ತಮ್ಮ ಅಜ್ಞಾನದ ಬಗೆಗೆ ಅವರು ಅನೇಕ ವೇಳೆ ಮರೆಮಾಚದೆ ಇರುತ್ತಾರೆ. ಅವರ ವಾದ ವಿವಾದಗಳು ಸಾಕಷ್ಟು ಮಟ್ಟಿಗೆ ಮರ್ಯಾದೆಯಿಂದ ಕೂಡಿರುತ್ತವೆ. ಚರ್ಚೆಯಾಗುತ್ತಿರುವ ವಿಷಯವನ್ನು ಅವರು ಜನಾಂಗ, ರಾಜಕೀಯ, ಲಿಂಗ ಅಥವಾ ವಯಸ್ಸಿನಿಂದ ಬೆರಸಿ ಗೊಂದಲಗೊಳಿಸುವುದಿಲ್ಲ. ಅವರು ಸರ್ವಜ್ಞರಾಗಿರುವ ಯುವಕರು ಮತ್ತು ವೃದ್ಧರು ಇಬ್ಬರನ್ನೂ ತಾಳ್ಮೆಯಿಂದ ಆಲಿಸುತ್ತಾರೆ. ಇವೇ ಪಾಂಡಿತ್ಯದ ಸಾಮಾನ್ಯ ಗುಣಗಳು ಮತ್ತು ಅವು ವಿಜ್ಞಾನದ ವಿಶಿಷ್ಟವಾದ ಗುಣಗಳು >> [ಶಾಸ್ತ್ರೀಯ, ಸಂಪುಟ ೪, ಪೂರ್ವೋಕ್ತ, ಪುಟ. ೫೪೯].

ಸಂಶೋಧನ ವಿಷಯಗಳ ವೈವಿಧ್ಯ

೧. ಪ್ರಾಚೀನ ಗ್ರಂಥಗಳನ್ನು ಮುದ್ರಿಸುತ್ತಿದ್ದ ಆರಂಭ ಘಟ್ಟದಲ್ಲಿ ಕನ್ನಡ ಸಾಹಿತ್ಯವನ್ನು ಜೈನ, ವೀರಶೈವ, ಬ್ರಾಹ್ಮಣ ಎಂಬಂತೆ ಕಿಟೆಲರು ೧೮೭೫ ರಲ್ಲಿ ವಿಂಗಡಿಸಿದರು. ಅನಂತರ ಶತಮಾನಗಳನ್ನು ಆಧರಿಸುವ ಸಂಶೋಧನೆ ನಡೆಯಿತು. ಅದಲ್ಲದೆ ಪ್ರಧಾನ ಕವಿಗಳನ್ನು ಗಮನಿಸಿ ಪಂಪಯುಗ, ರನ್ನಯುಗ, ಹರಿಹರಯುಗ, ಕುಮಾರವ್ಯಾಸಯುಗ, ಲಕ್ಷ್ಮೀಶಯುಗ, ರತ್ನಾಕರವರ್ಣಿಯುಗ ಎಂಬ ಸಮೀಕ್ಷೆ ಆಯಿತು. ಇವಲ್ಲದೆ ಚಂಪೂಯುಗ, ಷಟ್ಪದಿಯುಗ, ಸಾಂಗತ್ಯಯುಗ ಎಂಬ ಪರಿಶೀಲನೆಗೆ ತೊಡಗಿದರು.

೨. ಹೊಸ ಬಗೆಯ ಸಂವಾದ ಉದ್ಭವಿಸಿತು. ಸಮಗ್ರ ಕಾವ್ಯವನ್ನು ಆಧರಿಸಿದ ಸಂಶೋಧನೆ ಹಿನ್ನೆಲೆಗೆ ಸರಿಯಿತು. ಕೃತಿಯ ಭಾಗಗಳನ್ನು, ಪಾತ್ರಗಳನ್ನು, ಪದ್ಯಗಳನ್ನು ಒಳನೋಟಗಳಿಂದ ವಿಮರ್ಶಿಸುವ ವ್ಯಾಖ್ಯಾನಾತ್ಮಕ ಸಂಶೋಧನೆ ಪಲ್ಲವಿಸಿತು.

ಜಿ.ಹೆಚ್. ನಾಯಕರು ಈ ಬಗೆಯ ಬರವಣಿಗೆಗೆ ಮಾದರಿಯಾದರು. ಇಪ್ಪತ್ತನೆಯ ಶತಮಾನದ ಕಡೆಯ ದಶಕಗಳಲ್ಲಿ ಸ್ತ್ರೀವಾದಿ ಚಿಂತನೆಯನ್ನು ಕೇಂದ್ರ ಪ್ರಜ್ಞೆಯಾಗಿಸಿ ಸಂಶೋಧನೆ ಮುಂದುವರಿಯಿತು. ದಲಿತ-ಬಂಡಾಯ ಧೋರಣೆ ಪ್ರಾಮುಖ್ಯ ಪಡೆಯಿತು. ಸಂಶೋಧಕರು ಸತ್ಯಶೋಧಕರು – ಎಂಬ ಕ್ಲೀಷೆಯ ಮಾತು, ಅದು ಕೇವಲ ಭ್ರಮೆ ಎಂಬ ಮರು ಚಿಂತನೆಯೂ ನಡೆದಿದೆ. ಮೊಗಳ್ಳಿ ಗಣೇಶರ ಈ ಅಭಿಪ್ರಾಯ ಆರೋಪ ಅಥವಾ ಆಕ್ಷೇಪಾರ್ಥದ ಟೀಕೆಯಲ್ಲ. ಸಂಶೋಧನೆ ಸತ್ಯಶೋಧನೆಯೆಂದು ಸರಳೀಕರಿಸಿ ಹೇಳುವಂತಹುದಲ್ಲ ಎಂಬುದು ಇಲ್ಲಿರುವ ಧ್ವನಿ. ಅಂದರೆ ಸತ್ಯಶೋಧನೆಗೂ ಮಿತಿಗಳಿವೆ, ನಿರ್ಬಂಧಗಳಿವೆಯೆಂಬುದು ಇಂಗಿತ.

ವ್ಯಾಕರಣ, ಛಂದಸ್ಸು, ಗ್ರಂಥ ಸಂಪಾದನೆ, ಕವಿಕಾವ್ಯಕಾಲಾದಿ ಚರ್ಚೆ ಇತ್ಯಾದಿಗೆ ಪರಿಮಿತವಾಗಿದ್ದ ಸಂಶೋಧನೆಗೆ ಮತ್ತೊಂದು ಸಂಚಲನ ಬಂದದ್ದು ಇಪ್ಪತ್ತನೆಯ ಶತಮಾನದ ಆರು-ಏಳನೆಯ ದಶಕದಿಂದ. ವಿವಿಧ ಜ್ಞಾನ ಶಾಖೆಗಳನ್ನು ತನ್ನ ತೆಕ್ಕೆಗೆ ಆತುಕೊಂಡು ನಾಲ್ಕು ದಿಕ್ಕಿಗೂ ಅದು ದಾಂಗುಡಿಯಿಟ್ಟಿತು. ನವೋದಯ, ಪ್ರಗತಿಶೀಲ, ನವ್ಯ, ನವ್ಯೋತ್ತರ ದಲಿತ-ಬಂಡಾಯ ಎಂಬಿತ್ಯಾದಿ ಸಾಹಿತ್ಯ ಚಳವಳಿಗಳ ಸ್ಥಿತ್ಯಂತರ ಕಾಲದಲ್ಲಿ ಸಂಶೋಧನೆಯ ದಾರಿ ದಿಕ್ಕುಗಳಲ್ಲೂ ಮಾರ್ಪಾಟುಗಳಾದವು. ಸಂಶೋಧನೆ ಸಾಹಿತ್ಯೇತರ ಕ್ಷೇತ್ರಗಳಿಗೆ ಹಬ್ಬಿತು. ಹಾಗೆ ಚಾಚಿದ ಹೊಸ ಅಧ್ಯಯನಗಳಲ್ಲಿ ಸ್ಥಳನಾಮ ಕುರಿತ ಸಂಶೋಧನೆಯೂ ಸೇರಿತು. ಊರುಗಳ ಹೆಸರುಗಳಲ್ಲಿ ಅಡಗಿದ ಸಂಗತಿಗಳ ಅನ್ವೇಷಣೆ ಕುತೂಹಲಕರ ಮಾಹಿತಿಯನ್ನು ಬಿಟ್ಟುಕೊಟ್ಟಿತು. ಪ್ರತಿಯೊಂದು ಊರಿನ ಹೆಸರು ಏನೊ ಬೇಕಾಬಿಟ್ಟಿ ಕೊಟ್ಟದ್ದಲ್ಲ. ಅದರ ಒಡಲಲ್ಲಿ ಕೆನೆಕಟ್ಟಿದ ಪ್ರಾಕೃತಿಕ (ಸಸ್ಯಮೂಲ, ಶಿಲಾಮೂಲ, ಜಲಮೂಲ) ಹಿನ್ನೆಲೆ, ವ್ಯಕ್ತಿ ಸಂಬಂಧದ ಇತಿಹಾಸ, ಸಾಂಸ್ಕೃತಿಕ ಸಂಗತಿ – ಮೊದಲಾದುವು ಹರಳುಗೊಂಡಿರುತ್ತವೆ. ಪುಟ್ಟ ಹೆಸರಿನ ಹಿಂದೆ ಮರೆಯಾಗಿರುವ ದೊಡ್ಡ ಚರಿತ್ರೆಯು ಸಂಶೋಧನೆಯಿಂದ ಬಯಲಾಗುತ್ತದೆ ಎಂಬುದನ್ನು ಸ್ಥಳನಾಮ ಅಧ್ಯಯನ ಮನಗಾಣಿಸಿತು. ಇದಕ್ಕಾಗಿ ಪ್ಲೇಸ್ ನೇಮ್ ಸೊಸೈಟಿಯಂಥ ಸಂಸ್ಥೆ ಸ್ಥಾಪನೆಯಾಯಿತು.

ಇದೇ ವರ್ಗಕ್ಕೆ ಸೇರಿದ್ದು ವ್ಯಕ್ತಿಗಳ ಹೆಸರಿನ ಸಂಶೋಧನೆ. ಹೆಸರಿನಲ್ಲಿ ಏನಿದೆ ಎಂಬ ಪ್ರಶ್ನೆಗೆ ಹೆಸರಿನಲ್ಲಿ ಏನಿಲ್ಲ ಎಂಬ ಪ್ರಶ್ನೆಯೇ ಉತ್ತರವಾಗುವಂತೆ ಊರು ಮತ್ತು ವ್ಯಕ್ತಿಗಳ ಹೆಸರುಗಳನ್ನು ಕುರಿತ ಸಂಶೋಧನೆ ಬೆರಗು ತಂದಿತು. ಶಂಬಾ ಜೋಶಿಯವರು (೧೮೯೬-೧೯೯೧) ಕಣ್ಮರೆಯಾದ ಕನ್ನಡ, ಕನ್ನಡ ನೆಲೆ, ಕನ್ನಡ ನುಡಿಯ ಹುಟ್ಟು, ಎಡೆಗಳು ಹೇಳುವ ಕಂನಾಡ ಕತೆ, ಮುಂತಾದ ಕೃತಿಗಳಲ್ಲಿ ಸ್ಥಳನಾಮ ವಿವೇಚನೆಯೊಂದಿಗೆ ಸಂಸ್ಕೃತಿ ಅಧ್ಯಯನಕ್ಕೂ ಮೌಲಿಕಗ್ರಾಸವನ್ನು ಒದಗಿಸಿದರು. ಸ್ಥಳನಾಮ ಕುರಿತಾದ ಅಧ್ಯಯನ ಜನಪ್ರಿಯವಾದದ್ದು ಇಪ್ಪತ್ತನೆಯ ಶತಮಾನದಲ್ಲಿ. ಬಿ. ಪದ್ಮರಾಜ ಪಂಡಿತರು ಈ ಬಗೆಯ ಚಿಂತನೆಗೆ ತೊಡಗಿದ ಮೊದಲಿಗರು. ೧೯೦೦ರಲ್ಲಿ ಅವರು "ಮೈಸೂರು ಹೆಸರಿನ ವ್ಯುತ್ಪತ್ತಿ" – ಎಂಬ ಪುಸ್ತಕ ಪ್ರಕಟಿಸಿದ್ದರು.

ವಿಶ್ವವಿದ್ಯಾಲಯಗಳ ಉತ್ತೇಜನ

ವಿಶ್ವವಿದ್ಯಾಲಯಗಳು ಸಂಶೋಧನೆಯ ಆಡುಂಬೊಲ. ಕರ್ನಾಟಕದಲ್ಲಿ ಒಂದು ಸ್ವತಂತ್ರ ವಿಶ್ವವಿದ್ಯಾಲಯ ಸ್ಥಾಪಿತವಾದದ್ದು ತಡವಾಗಿ. ಬ್ರಿಟಿಷರು ಆಳುತ್ತಿದ್ದಾಗ ಭಾರತವನ್ನು ಭೌಗೋಳಿಕವಾಗಿ ಅನುಲಕ್ಷಿಸಿ ಪೂರ್ವಕ್ಕೆ ಕಲಕತ್ತದಲ್ಲೂ ಪಶ್ಚಿಮಕ್ಕೆ ಮುಂಬಯಿಯಲ್ಲೂ ದಕ್ಷಿಣಕ್ಕೆ ಮದರಾಸಿನಲ್ಲೂ – ಹೀಗೆ ಮೂರು ವಿಶ್ವವಿದ್ಯಾಲಯಗಳನ್ನು ಹತ್ತೊಂಬತ್ತನೆಯ

ಶತಮಾನದಲ್ಲಿ ಪ್ರಾರಂಭಿಸಿದ್ದರು. ದಕ್ಷಿಣ ಕನ್ನಡ ಜಿಲ್ಲೆಯವರೂ ಹಳೆಯ ಮೈಸೂರು ಭಾಗದವರೂ ಉನ್ನತ ವ್ಯಾಸಂಗಕ್ಕಾಗಿ ಮದರಾಸಿಗೆ ಹೋಗುತ್ತಿದ್ದರು. ಮದರಾಸು ವಿಶ್ವವಿದ್ಯಾಲಯ ೧೯೨೭ರಲ್ಲಿ ಕನ್ನಡ ವಿಭಾಗವನ್ನು ತೆರೆಯಿತು. ಅದರ ವತಿಯಿಂದ ಮಹತ್ವದ ಕನ್ನಡ ಕಾವ್ಯಗಳೂ ಶಾಸ್ತ್ರಗ್ರಂಥಗಳೂ ಅಚ್ಚಾದುವು. ಎ. (ಆಲೆಮನೆ) ವೆಂಕಟರಾವ್ (೧೮೮೯–೧೯೩೫), ಹೆಚ್. ಶೇಷ ಅಯ್ಯಂಗಾರ್ (೧೮೮೮–೧೯೬೮), ಎಂ. ಗೋವಿಂದರಾವ್, ಎಂ. ಮರಿಯಪ್ಪಭಟ್ ಕನ್ನಡ ಪರಂಪರೆಗೆ ಉಸಿರು ಊದಿದರು. ಉತ್ತರ ಕರ್ನಾಟಕದವರು ಮುಂಬಯಿ ವಿಶ್ವವಿದ್ಯಾಲಯದಲ್ಲಿ ಕಲಿತರು. ಮೈಸೂರು ವಿಶ್ವವಿದ್ಯಾನಿಲಯ ಆರಂಭವಾದದ್ದು ೧೯೧೬ರಲ್ಲಿ. ಅದೇ ವೇಳೆಗೆ ೧೯೧೫ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಆರಂಭವಾಯಿತು, ನಾಲ್ವಡಿ ಕೃಷ್ಣರಾಜ ಒಡೆಯರ ನೆರವಿನಿಂದ.

೧೯೧೪ರಲ್ಲಿ ಹುಟ್ಟಿದ ಕರ್ನಾಟಕ ಇತಿಹಾಸ ಸಂಶೋಧನ ಮಂಡಲ ಮತ್ತು ೧೯೩೯ರಲ್ಲಿ ಕನ್ನಡ ಸಂಶೋಧನ ಸಂಸ್ಥೆ ಉತ್ತರ ಕರ್ನಾಟಕ ಭಾಗದಲ್ಲಿ ವಿದ್ವತ್ ಸಂಚಲನ ಉಂಟು ಮಾಡಿದುವು, ಕನ್ನಡ ಅಸ್ಮಿತೆಯನ್ನು ಕಾಪಾಡಿದುವು. ೧೯೫೦ರಲ್ಲಿ ಧಾರವಾಡದಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ಸ್ಥಾಪಿತವಾಯಿತು. ಪ್ರಾಚೀನ ಇತಿಹಾಸ, ಭೂಗರ್ಭ ಸಂಶೋಧನೆ ವಿಭಾಗ ಇರುವ ಕನ್ನಡ ಸಂಶೋಧನ ಸಂಸ್ಥೆ ೧೯೫೬ ರಿಂದ ಇದರ ಆಶ್ರಯದಲ್ಲಿದ್ದು ಮೌಲಿಕ ಸಂಶೋಧನೆಗೆ ಇಂಬಾಗಿದೆ. ಸಮಗ್ರ ವಚನ ವಾಙ್ಮಯ ಸಂಶೋಧನೆ – ಪ್ರಕಟನೆ, ಸಾವಿರಾರು ಓಲೆಗರಿ ಗ್ರಂಥಗಳ ಸಂಗ್ರಹ – ಪರಿಷ್ಕರಣ, ಶೂನ್ಯ ಸಂಪಾದನೆಯ ಇಂಗ್ಲಿಷ್ ಭಾಷಾಂತರ, ಪ್ರಸಾರಾಂಗದ ವತಿಯಿಂದ ಪುಸ್ತಕ ಪ್ರಕಟಣೆ – ಇವು ಕೈಗೂಡುತ್ತಿವೆ.

ಇಲ್ಲಿನ ಕನ್ನಡ ಅಧ್ಯಯನ ಪೀಠ ಹಮ್ಮಿಕೊಂಡು ನಿರ್ವಹಿಸುತ್ತ ಬಂದಿರುವ ಮಹತ್ತರವಾದ ಸಂಶೋಧನಾತ್ಮಕ ಯೋಜನೆಗಳ ದೇಣಿಗೆ ದೊಡ್ಡದು. ಎಲ್ಲ ವಿಶ್ವ ವಿದ್ಯಾನಿಲಯಗಳಲ್ಲಿ ಇರುವಂತೆ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಉತ್ತಮವೂ ಉಪಯುಕ್ತವೂ ಆದ ಗ್ರಂಥಾಲಯವಿದೆ. ಗ್ರಂಥಾಲಯಗಳು ಸಂಶೋಧಕರ ತವರುಮನೆ. ವಿಶೇಷ ಅಧ್ಯಯನಕ್ಕೆ ಸಹಾಯ ಒದಗುವುದು ಈ ಗ್ರಂಥ ಭಂಡಾರಗಳು ಒದಗಿಸುವ ಪೂರಕ ಗ್ರಂಥಗಳಿಂದ. ವಿಶ್ವವಿದ್ಯಾಲಯಗಳಲ್ಲಿನ ಗ್ರಂಥಾಲಯಗಳಲ್ಲದೆ ಸಾರ್ವಜನಿಕ ಗ್ರಂಥಾಲಯಗಳೂ ಸಂಶೋಧಕರ ಸಹಾಯಕ್ಕಿವೆ.

ವಿದ್ಯಾರ್ಥಿನಿಲಯಗಳಲ್ಲಿಯೂ ಗ್ರಂಥಾಲಯಗಳನ್ನು ಸ್ಥಾಪಿಸುವುದುಂಟು. ಇಂದು ಮುದ್ರಿತ ಪುಸ್ತಕಗಳ ಲೈಬ್ರರಿಗಳು ಇರುವಂತೆಯೇ ಹಿಂದೆ ಓಲೆಗರಿ ಗ್ರಂಥಗಳ ಸಂಗ್ರಹಾಲಯಗಳಿದ್ದುವು. ಬಿ. ಪದ್ಮರಾಜ ಪಂಡಿತರು ಮೈಸೂರಿನಲ್ಲಿ ೧೯೨೬ರಲ್ಲಿ "ಜಿನಮತ ಗ್ರಂಥ ರತ್ನಾಕರ" ಎಂಬ ಹೆಸರಿಟ್ಟು ಓಲೆಗರಿ ಗ್ರಂಥಾಲಯವನ್ನು ಪ್ರಾರಂಭಿಸಿದರು. ತಾವೇ ಸಂಗ್ರಹಿಸಿದ ೯೪ ತಾಳೆಗರಿ ಗ್ರಂಥಗಳನ್ನು ನೀಡಿದರು. ಆರ್. ಶಾಮಾಶಾಸ್ತ್ರಿ, ರಾ. ನರಸಿಂಹಾಚಾರ್, ಮೇಲುಕೋಟೆ ಯತಿರಾಜ ಮಠದ ಸ್ವಾಮಿಗಳು – ಮೊದಲಾದವರು ಈ ತಾಳೆಗರಿ ಗ್ರಂಥಾಲಯವನ್ನು ಸಂದರ್ಶಿಸಿ ಶ್ಲಾಘಿಸಿದರು. ಕರ್ನಾಟಕದ ಗ್ರಂಥಾಲಯಗಳ ಇತಿಹಾಸದಲ್ಲಿ ಇದೊಂದು ಅಪರೂಪದ ಪ್ರಯತ್ನ.

ಶೈಕ್ಷಣಿಕವಾಗಿ ಉನ್ನತಿ ಗಳಿಸಲು ಮೈಸೂರಲ್ಲಿ ೧೮೫೩ರಲ್ಲಿ ಮಹಾರಾಜಾ ಕಾಲೇಜನ್ನೂ ಬೆಂಗಳೂರಲ್ಲಿ ೧೮೫೮ರಲ್ಲಿ ಸೆಂಟ್ರಲ್ ಕಾಲೇಜನ್ನೂ ಆರಂಭಿಸಲಾಯಿತು. ಇವೆರಡೂ ಅನಂತರದ ಕಾಲಘಟ್ಟದಲ್ಲಿ ಸ್ಥಾಪಿತವಾದ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಒಳಪಟ್ಟಿದ್ದರೂ

೧೯೬೪ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯ ಆರಂಭಗೊಂಡು ಸೆಂಟ್ರಲ್ ಕಾಲೇಜು ಅದರ ವ್ಯಾಪ್ತಿಗೆ ಒಳಪಟ್ಟಿತು. ಮೈಸೂರಲ್ಲಿ ೧೯೬೦ ರಿಂದ ಸ್ನಾತಕೋತ್ತರ ತರಗತಿಗಳು ಮಾನಸ ಗಂಗೋತ್ರಿಗೆ (ಈ ಹೆಸರಿಟ್ಟವರು ಕುವೆಂಪು) ವರ್ಗವಾದುವು. ಆಡಳಿತಾಂಗ, ಬೋಧನಾಂಗ, ಪ್ರಸಾರಾಂಗವಲ್ಲದೆ ಸಂಶೋಧನಾಂಗವೂ ವಿಶ್ವವಿದ್ಯಾಲಯದ ಪ್ರಮುಖ ಅಂಗ. 'ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ'ಯಲ್ಲಿ ಕನ್ನಡ ವಿಶ್ವಕೋಶ, ವಿಷಯ ವಿಶ್ವಕೋಶ, ಎಪಿಗ್ರಾಫಿಯ ಕರ್ನಾಟಿಕ ಸಂಪುಟಗಳ ಪರಿಷ್ಕರಣ – ಪ್ರಕಟನೆ, ಜಾನಪದ ವಿಭಾಗ, ಭಾಷಾಂತರ ವಿಭಾಗ, ಗ್ರಂಥಸಂಪಾದನ ವಿಭಾಗಗಳಿವೆ. ಇಲ್ಲೆಲ್ಲ ಮೇಲ್ಮಟ್ಟದ ಸಂಶೋಧನೆ ನಡೆದಿದೆ.

ಕನ್ನಡ ಅಧ್ಯಯನ ಸಂಸ್ಥೆ (ಮೈಸೂರು), ಅಧ್ಯಯನ ಪೀಠ (ಧಾರವಾಡ), ಅಧ್ಯಯನ ಕೇಂದ್ರ (ಬೆಂಗಳೂರು) – ಇವು ಸಂಶೋಧನೆಗೆ ಗರಡಿ ಮನೆಗಳು. ಹಂಪಿಯ ಕನ್ನಡ ವಿಶ್ವವಿದ್ಯಾಲಯ ಸಂಶೋಧನೆಯ ಮಹಾಮಾರ್ಗ ತೆರೆದ ಮಹಾಮನೆ. ಅಂತರಶಿಸ್ತೀಯ ಅಧ್ಯಯನಕ್ಕಿಲ್ಲಿ ಗರಿ ಮೂಡಿತು. ಹೊಚ್ಚ ಹೊಸ ಹಾದಿಗಳೂ ವಿಷಯಗಳೂ ಜೀವ ಪಡೆದುವು. ಸಂಶೋಧನೆಯ ಆಯಾಮ ಹಿಗ್ಗಿತು. ನಾನಾ ಜ್ಞಾನ ಶಾಖೆಗಳ ಹೆಚ್ಚಿನ ಓದಿಗೆ ನೆರವಾಗುವ ಬೆಲೆಯುಳ್ಳ ಹೊತ್ತಗೆಗಳನ್ನು ಹೊರತಂದ ಹಿರಿಮೆ ಕನ್ನಡ ವಿಶ್ವವಿದ್ಯಾಲಯದ್ದು.

ಸಾಹಿತ್ಯ ಪರಿಷತ್ತು

ಕನ್ನಡ–ಕರ್ನಾಟಕಗಳ ಸರ್ವತೋಮುಖ ಏಳಿಗೆಗೆಂದು ಹುಟ್ಟಿದ ಸಾಹಿತ್ಯ ಪರಿಷತ್ತು ಸಂಶೋಧನೆಗೆ ಪಟ್ಟ ಕಟ್ಟಿತು. ಬಲ್ಲಿದರ ಬರೆಹಗಳಿಗೆ ಮೀಸಲಾದ ಪರಿಷತ್ ಪತ್ರಿಕೆಯನ್ನು ೧೯೧೬ರಲ್ಲಿ ಪ್ರಾರಂಭಿಸಿ ಸಂಶೋಧನೆ ಬೇರು ಬಿಟ್ಟು ಹಬ್ಬಲು ನೆರವಾಯಿತು. ಸಾಹಿತ್ಯ ಪರಿಷತ್ತಿನ ನೆರಳಲ್ಲಿ ಸಂಶೋಧನೆ, ಜಾನಪದ ಮತ್ತು ಶಾಸನ ತರಗತಿಗಳು ಏರ್ಪಾಟಾದುದನ್ನು ನೆನೆಯಬೇಕು. ಸಂಶೋಧನ ಕಮ್ಮಟವೊಂದನ್ನು ನಾಡಿನಲ್ಲಿಯೇ ಮೊತ್ತ ಮೊದಲನೆಯ ಬಾರಿಗೆ ೧೯೮೫ರಲ್ಲಿ ಹಮ್ಮಿಕೊಂಡಿದ್ದುದು ಚರಿತ್ರಾರ್ಹ ಘಟನೆ. ಕರ್ನಾಟಕದ ಒಳಗಿನ ಮತ್ತು ಹೊರಗಿನ ಕಾಸರಗೋಡು, ಮುಂಬಯಿ ವಿಶ್ವವಿದ್ಯಾಲಯಗಳಿಂದ ಕನ್ನಡ ಸ್ನಾತಕೋತ್ತರ ವಿದ್ಯಾರ್ಥಿಗಳಲ್ಲಿ ಆಸಕ್ತರನ್ನು ಬರಮಾಡಿಕೊಂಡು ಅವರಿಗೆ ನಾಲ್ಕು ವಾರ ಊಟ ವಸತಿ ಸೌಲಭ್ಯ ಕಲ್ಪಿಸಿ ಸಂಶೋಧನೆಯ ವಿಧಿ ವಿಧಾನಗಳ ತರಬೇತಿ ನೀಡಲಾಯಿತು. ಜೊತೆಗೆ ಪ್ರಾಯೋಗಿಕ ತರಗತಿಗಳನ್ನು ವ್ಯವಸ್ಥೆ ಮಾಡಿದ್ದುದು ಹೆಚ್ಚಿನ ಶಿಕ್ಷಣಕ್ಕೆ ಅವಕಾಶವಾಯಿತು.

ಸಾಹಿತ್ಯ ಪರಿಷತ್ತಿಗಿಂತ ಇನ್ನೂ ಪ್ರಾಚೀನವಾದ ಮತ್ತು ಸಾಹಿತ್ಯ, ಸಂಸ್ಕೃತಿ, ಸಂಶೋಧನೆಗೆ ಮುಡಿಪಾದ ಮತ್ತೊಂದು ಮಹತ್ವದ ಮಹಾಸಂಸ್ಥೆ ೧೮೯೦ರಲ್ಲಿ ಕಣ್ಣುತೆರೆದ ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘ. ಉತ್ತರ ಕರ್ನಾಟಕದ ವಿದ್ವತ್ತಿನ ವಲಯದಲ್ಲಿ ಇದರ ವತಿಯಿಂದ ಸಂಶೋಧನೆಗೆ ಮಿಗಿಲಾದ ಉತ್ತೇಜನ ದೊರೆಯಿತೆಂಬುದು ಮರೆಯಲಾಗದ ಇತಿಹಾಸ. ವಾಗ್ಭೂಷಣ ಪತ್ರಿಕೆ ಮತ್ತು ಅನೇಕ ಗ್ರಂಥಗಳನ್ನು ಈ ಸಂಘ ಪ್ರಕಟಿಸಿದೆ. ಮಿಥಿಕ್ ಸೊಸೈಟಿ ಮತ್ತು ಅದರ ತ್ರೈಮಾಸಿಕ – ಕ್ವಾರ್ಟರ್ಲಿ ಜರ್ನಲ್ ಆಫ್ ಮಿಥಿಕ್ ಸೊಸೈಟಿ – ಸಂಶೋಧನ ಕ್ಷೇತ್ರದಲ್ಲಿ ಮಹತ್ತರವಾದ ಕಾರ್ಯನಿರ್ವಹಿಸಿದೆ. ಉಡುಪಿಯ ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ ಆರು ದೊಡ್ಡ ಸಂಪುಟಗಳಲ್ಲಿ ಸಿದ್ಧಪಡಿಸಿರುವ ತುಳು ನಿಘಂಟು ಬೆಲೆಯುಳ್ಳ ಕೊಡುಗೆ. ಶ್ರವಣಬೆಳಗೊಳ ಪ್ರಾಕೃತ ಭಾಷಾ ಸಾಹಿತ್ಯ ಪುನರುತ್ಥಾನಕ್ಕೆ ಬುನಾದಿ ಹಾಕಿ ಧವಲಾ, ಜಯಧವಲಾ, ಮಹಾಧವಲಾ ಗ್ರಂಥದ ೪೨ ಸಂಪುಟಗಳನ್ನು ಕನ್ನಡ ಕಾಲುವೆಗೆ ಹರಿಸಿದ್ದು ಭಗೀರಥ ಸಾಹಸ. ಧರ್ಮಸ್ಥಳದ

ಮಂಜುನಾಥೇಶ್ವರ ಸಂಸ್ಕೃತಿ ಸಂಶೋಧನ ಪ್ರತಿಷ್ಠಾನ ಪುರಾತನ–ಆಧುನಿಕ ಹಸ್ತಪ್ರತಿ ಸಂರಕ್ಷಣೆಯಲ್ಲಿ ಮಾದರಿಯೆನಿಸಿದೆ.

ಮೈಸೂರಿನ ಪ್ರಾಚ್ಯ ಸಂಶೋಧನ ಸಂಸ್ಥೆಯು ಸಂಶೋಧನೆ ಹಾದಿಗೆ ಅರವಂಟಿಗೆಯ ಕೆಲಸ ಮಾಡಿತು. ಈ ಸಂಸ್ಥೆಯ ಕೀರ್ತಿ ದಿಗ್‌ದಿಗಂತವಾಗಿ ಹಬ್ಬಿಸಿದ್ದು ಕೌಟಿಲ್ಯನ ಅರ್ಥಶಾಸ್ತ್ರ ಪ್ರಕಟನೆ (೧೯೦೯). ಇದನ್ನು ಸಂಶೋಧಿಸಿದ ವಿದ್ಯಾಲಂಕಾರ ಪಂಡಿತರಾಜ ಆರ್. ಶಾಮಶಾಸ್ತ್ರಿಯವರು (೧೮೬೮–೧೯೪೪) ಇದರ ಇಂಗ್ಲಿಷ್ ಭಾಷಾಂತರವನ್ನೂ (೧೯೧೫) ಮುದ್ರಿಸಿದರು. ಅನೇಕ ಸಂಸ್ಕೃತ ಗ್ರಂಥಗಳಲ್ಲದೆ ನಯಸೇನನ ಧರ್ಮಾಮೃತ (ಎರಡು ಭಾಗಗಳಲ್ಲಿ), ರುದ್ರಭಟ್ಟನ ಜಗನ್ನಾಥ ವಿಜಯ ಮುಂತಾದ ಕಾವ್ಯಗಳನ್ನೂ ಅಚ್ಚಿಸಿದರು.

ಇಲ್ಲಿಯೇ ಸ್ಪಷ್ಟಪಡಿಸಿಕೊಳ್ಳಬೇಕಾದ ಇನ್ನೂ ಕೆಲವು ಸಂಗತಿಗಳೂ ಸಂಶಯಗಳೂ ಇವೆ. ಸಂಶೋಧನೆಯ ಪರಿಧಿಯೊಳಗೆ ಸೇರಿಸಬೇಕಾ ಬೇಡವಾ ಎಂಬ ಡೋಲಾಯಮಾನದ ವಿಷಯಗಳಿವೆ. ಉದಾಹರಣೆಗೆ ಅನುವಾದ ಪ್ರಕಾರವಿದೆ. ಎಸ್.ವಿ. ಪರಮೇಶ್ವರ ಭಟ್ಟರು (೧೯೧೪–೨೦೦೦) ಸಂಸ್ಕೃತದಿಂದ ಕನ್ನಡಕ್ಕೆ ಮಹತ್ವದ ಕೃತಿಗಳನ್ನು ಇಳಿಸಿದ್ದಾರೆ. ಇದು ಉಭಯಭಾಷೆಗಳಲ್ಲಿ ಸಮದಂಡಿಯಾದ ಪಾಂಡಿತ್ಯವನ್ನು ಬಯಸುವ ವಿದ್ವತ್ ಕಾರ್ಯ. ಅನುವಾದಕ್ಕೆ ಸಂಬಂಧಿಸಿದಂತೆ ಸಾಹಿತ್ಯ ಪರಿಷತ್ತು ಮತ್ತೊಂದು ಪ್ರತ್ಯೇಕ ಸಂಪುಟವನ್ನು ಆಯೋಜಿಸಿದೆ. ಅದರಿಂದ ಈ ವಿಚಾರವಾಗಿ ವಿಸ್ತಾರವಾದ ಚರ್ಚೆಗೆ ಇಲ್ಲಿ ತೊಡಗಿಲ್ಲ.

ಸಮಗ್ರ ಸಂಶೋಧನೆಯ ಸ್ವರೂಪವನ್ನು ಒಟ್ಟಾರೆ ಪಟ್ಟಿ ಮಾಡಿ ಪರಿಶೀಲಿಸುವುದು ಒಂದು ವಿಧಾನ. ಇದು ಕೋಷ್ಟಕವನ್ನು ಕೊಟ್ಟು ವಿವೇಚಿಸುವ ಮಾದರಿ. ಇದನ್ನು ಬಿಟ್ಟು ಸಂಶೋಧನೆಯ ವಿವಿಧ ಕ್ಷೇತ್ರಗಳನ್ನು ಆಧರಿಸಿ ಸವಿವರವಾಗಿ ಸಮೀಕ್ಷಿಸುವುದು ಇನ್ನೊಂದು ಮಾರ್ಗ. ಈ ಎರಡೂ ದಾರಿಗಳ ಪಯಣದಲ್ಲಿ ಅನುಕೂಲ ಮತ್ತು ಮಿತಿಗಳಿವೆ. ಇಡಿಯಾಗಿ ನೋಡುವ ಮೊದಲನೆಯ ಮಾದರಿಯ ಅವಲೋಕನದಲ್ಲಿ ಸ್ಥೂಲವಾದ ನೋಟ ಸಿಗುತ್ತದೆ. ಆದರೆ ಬಿಡಿಯಾಗಿ, ತನಿಯಾಗಿ ನೋಡುವ ವಿಷಯವಾರು ಅವಲೋಕನದಲ್ಲಿ ಸೂಕ್ಷ್ಮ ವಿವೇಚನೆಗೆ ಅವಕಾಶ ಒದಗುತ್ತದೆ.

ಸೃಜನಶೀಲ ಸಾಹಿತ್ಯ ಸೃಷ್ಟಿಯಲ್ಲಿ ತೊಡಗಿದ ಮಹತ್ವದ ಲೇಖಕರಲ್ಲಿ ಕೆಲವರು ಸಂಶೋಧನ ಕಾರ್ಯನಿರತರೂ ಆಗಿದ್ದು ಮೌಲಿಕ ಬಿಡಿ ಲೇಖನಗಳು, ಅನುವಾದ ಮೊದಲಾದ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಕೆಲವು ಸಂಶೋಧಕರು ಒಂದಕ್ಕಿಂತ ಹೆಚ್ಚು ಕ್ಷೇತ್ರಗಳಲ್ಲಿ ಕೃಷಿ ಮಾಡಿರುವುದರಿಂದ ಅಂಥವರ ಹೆಸರುಗಳು ಪುನರಾವೃತ್ತಿ ಆಗುತ್ತದೆ. ಇದು ಅನಿವಾರ್ಯ. ಒಬ್ಬ ಸಂಶೋಧಕನ ಕೊಡುಗೆ ಎಲ್ಲೆಲ್ಲಿ ಎಷ್ಟೆಷ್ಟು ಸಂದಿದೆ ಎಂಬುದು, ಈ ಬಗೆಯ ಬಿಡಿಯಾಗಿ ನೋಡುವ ವಿಂಗಡಣೆಯ ವಿಧಾನದಲ್ಲಿ, ಎದ್ದು ಕಾಣುತ್ತದೆ. ಇಷ್ಟಿದ್ದೂ ಈ ಯಾವುದೇ ಸಮೀಕ್ಷೆಗಳು ಸ್ವಯಂಪೂರ್ಣ ಎಂದೇನೂ ಅಲ್ಲ. ಏಕೆಂದರೆ ಒಬ್ಬೊಬ್ಬ ಸಂಶೋಧಕರನ್ನೇ ಬೇರೆ ಬೇರೆಯಾಗಿಟ್ಟು ಅವರವರ ಸಂಶೋಧನೆಯ ಒಟ್ಟು ನೆಲೆಬೆಲೆಗಳನ್ನು ಗುರುತಿಸುವುದು ಸರಿಯಾದ ಕ್ರಮ. ಇದು ನಿಜವೆ ಆದರೂ ಈ ವಿಧಾನ ಪ್ರಸ್ತುತ ಶತಮಾನ ಸಮೀಕ್ಷೆಯ ಚೌಕಟ್ಟಿಗೆ ನಿಲುಕುವುದಿಲ್ಲ. ಅದರಿಂದಾಗಿ ಪ್ರಸ್ತುತ ಸಂಪುಟದ ಬಂಧಕ್ಕೆ ಇರುವ ನಿರ್ಬಂಧದಲ್ಲಿಯೇ ಒಂದು ಒಟ್ಟು ನೋಟ ಸಿಗುವಂತೆಯೂ ಸಂಶೋಧಕರ ಸಾಧನೆಯ ಸ್ವರೂಪ ಪರಿಚಯ ಆಗುವಂತೆಯೂ ಸಂಯೋಜಿಸಲು ಪ್ರಯತ್ನಿಸಲಾಗಿದೆ. ಓದುಗರು ತಮ್ಮ ಆಯ್ಕೆ ಆಸಕ್ತಿಗೆ ಅನುಗುಣವಾಗಿ ಸಂಶೋಧನ ಕ್ಷೇತ್ರದ ಉಡ್ಡೀನ ವಿಹಾರಗಳಿಗೆ ತೊಡಗಲು ಇದೊಂದು ಚಿಮ್ಮುಹಲಗೆ.

ಎ.ಆರ್. ಕೃಷ್ಣಶಾಸ್ತ್ರಿಯವರ (೧೮೯೦–೧೯೬೮) ಬಹುಶ್ರುತತ್ವವು ಅವರು ಕಥಾಮೃತ ಮತ್ತು ವಚನಭಾರತ ಪುಸ್ತಕಗಳಿಗೆ ಬರೆದಿರುವ ಪ್ರಸ್ತಾವನೆಯಲ್ಲಿ ಮಡುಗಟ್ಟಿದೆ. ಅಲ್ಲದೆ ಅವರ ವೈದುಷ್ಯವು ಸಂಸ್ಕೃತ ನಾಟಕ (೧೯೩೭), ಬಂಕಿಮಚಂದ್ರ (೧೯೬೦), ಭಾಷಣಗಳು ಮತ್ತು ಲೇಖನಗಳು (೧೯೬೦) ಮತ್ತು ಕನ್ನಡ ಕೈಪಿಡಿಯಲ್ಲಿ (೧೯೨೯) ಅಲಂಕಾರ ಶಾಸ್ತ್ರ ವಿಭಾಗದ ಒಕ್ಕಣೆಯಲ್ಲಿ ಕಾಣುತ್ತದೆ.

ವಚನವಾಙ್ಮಯ ವಾಚೋವಿಧೇಯವಾಗಿದ್ದ ಸಂ.ಶಿ. ಭೂಸನೂರಮಠರ (೧೯೧೦–೧೯೯೧) ಮಹತ್ವದ ಕೃತಿ ಶೂನ್ಯ ಸಂಪಾದನೆಯ ಪರಾಮರ್ಶೆಯಲ್ಲಿ ಅವರ ವ್ಯುತ್ಪತ್ತಿಯೂ ಹೊಳಲುಗೊಟ್ಟಿದೆ. ಕೆ.ಬಿ. ಪಾಠಕ್ (೧೮೫೧–೧೯೩೨) ಶಾಸನಗಳು, ಜೈನ–ಬೌದ್ಧ ಸಾಹಿತ್ಯ ಕುರಿತು ತಮ್ಮ ಸಂಶೋಧನ ಬರೆಹಗಳನ್ನು ಇಂಡಿಯನ್ ಆಂಟಿಕ್ವೆರಿ ಮತ್ತು ರಾಯಲ್ ಏಷಿಯಾಟಿಕ್ (ಮುಂಬಯಿ) ಪತ್ರಿಕೆಗಳಲ್ಲಿ ಪ್ರಕಟಿಸಿದರು. ಅವರು ಕವಿರಾಜಮಾರ್ಗವನ್ನು ಸಂಪಾದಿಸಿದ ಆದ್ಯರು (೧೮೯೮).

ರಂ.ಶ್ರೀ. ಮುಗಳಿಯವರ (೧೯೦೬–೧೯೯೩) ಮಹತ್ವದ ಕೃತಿಯಾದ ಕನ್ನಡ ಸಾಹಿತ್ಯ ಚರಿತ್ರೆ (೧೯೫೩) ಮತ್ತು ಅದಕ್ಕೆ ಪೂರಕಗ್ರಂಥವಾಗಿ ಬಂದ ಪ್ರಾಚೀನ ಕನ್ನಡ ರೂಪಗಳು (೧೯೮೫) ಎಂಬೆರಡು ಪುಸ್ತಕಗಳು ವಿಮರ್ಶೆಯ ಟಿಸಿಲುಗಳೊಂದಿಗೆ ಸಂಶೋಧನೆಯ ಬೇರನ್ನೂ ಒಳಗೊಂಡಿವೆ. ಎಸ್.ವಿ. ರಂಗಣ್ಣನವರ (೧೮೯೮–೧೯೮೭) ಪಾಶ್ಚಾತ್ಯ ಗಂಭೀರ ನಾಟಕಗಳು (೧೯೭೦) ಇಲ್ಲಿ ಉಲ್ಲೇಖಿಸಬೇಕಾದ ವಿದ್ವತ್ ಕೃತಿ.

ಈ ಎಲ್ಲ ವಿಚಾರಗಳಿಗೆ ಉಪಷ್ಟಂಬಕವಾಗುವ ಇನ್ನಷ್ಟು ಪೂರಕ ಮಾಹಿತಿಯನ್ನು ಕಡೆಯ ಹತ್ತನೆಯ ಅಧ್ಯಾಯದಲ್ಲಿ ನಿರೂಪಿಸಿದ್ದೇನೆ. ಮುಂದಿನ ಅಧ್ಯಾಯ ಎರಡರಿಂದ ಅಧ್ಯಾಯ ಒಂಬತ್ತರವರೆಗೆ ಎಂಟು ಜನ ವಿದ್ವಾಂಸರ ಮೌಲಿಕ ಬರೆಹಗಳಿವೆ.

■

೨

ಸಂಶೋಧನೆ ಮತ್ತು ಅದರ ಪರಿಕಲ್ಪನೆಯಲ್ಲಿ ಆಗಿರುವ ಮಾರ್ಪಾಟುಗಳು

ಡಾ. ಎಸ್.ಪಿ. ಪದ್ಮಪ್ರಸಾದ್

ಅರ್ಥ

ಮನುಷ್ಯನ ಅಂತರಾಳದಲ್ಲಿ ಸದಾ ಹುದುಗಿರುವ ಹುಡುಕಾಟದ (ಶೋಧ) ಪ್ರವೃತ್ತಿಯ ಫಲವಾಗಿಯೇ ಸಂಸ್ಕೃತಿಯ ವಿಕಸವಾಗಿದೆ, ಈ 'ಸಂಸ್ಕೃತಿಯ ವಿಕಸನ' ಎಂಬ ಮಾತಿನಲ್ಲಿ ಭಾಷೆ, ಕಲೆ, ಸಾಹಿತ್ಯ, ಸಂಗೀತ ವಿಜ್ಞಾನ, ಆಡಳಿತಶಾಸ್ತ್ರ, ರಾಜನೀತಿ ಇತ್ಯಾದಿ ಎಲ್ಲವೂ ಸೇರುತ್ತವೆ. ಯಾಕೆಂದರೆ – ಈ ಎಲ್ಲ ತಿಳಿವುಗಳ ಒಟ್ಟು ಪರಿಣಾಮವಾಗಿ ಮೂಡುವ, ಮೂಡಿ ಬರುವ ಜೀವನ ಶೈಲಿಯೇ ಒಂದು ಸಮುದಾಯದ ಸಂಸ್ಕೃತಿ ಎನಿಸಿಕೊಳ್ಳುತ್ತದೆ. ಮನುಷ್ಯರು ತಾವು ರೂಪುಗೊಂಡ ಕಾಲದಿಂದಲೂ ಹೊಸದನ್ನು ಶೋಧಿಸಿ ಕಂಡುಹಿಡಿಯುವ ಕಡೆಗೆ ಅಥವಾ ಇದ್ದದ್ದನ್ನೇ ಬೇರೊಂದು ರೀತಿಯಲ್ಲಿ ಪುನರ್ ರೂಪಿಸಿ ಹೆಚ್ಚು ಉಪಯುಕ್ತವಾಗುವಂತೆ ಮಾಡುವುದರ ಕಡೆ ಗಮನ ಕೊಡುತ್ತಾ ಬಂದರು. ಎಲ್ಲರೂ ಅಲ್ಲ, ಕೆಲವರು ಅಂತಹ ಹುಡುಕಾಟದ /ಪುನಾರಚಿಸುವ ತುಡಿತ ಉಳ್ಳವರು ಮಾತ್ರ. ಅದೊಂದು ದೀರ್ಘಕಾಲೀನ ಪ್ರಕ್ರಿಯೆಯಾಯಿತು. ಅದನ್ನು ಅನಂತರದವರು ಸಂಶೋಧನೆ ಎಂದು ಕರೆದರು. ಮೂಲತಃ 'ಸಂಶೋಧನೆ' – ಎಂದರೆ ಶುದ್ಧಿಗೊಳಿಸು, ತಿದ್ದು ಎಂದರ್ಥ[೧] 'ಪರ್ಯಾಯವಾಗಿ ಇದಕ್ಕೆ 'ಹುಡುಕು' ಎಂಬರ್ಥ ಬಂದು ಈ ಅರ್ಥವೇ ಈಗ ಪ್ರಬಲವಾಗಿದೆ[೨].

ಏನನ್ನು ಹುಡುಕುವುದು? 'ಇರುವ, ಆದರೆ ನಮಗೆ ಗೊತ್ತಿಲ್ಲದ ಸಂಗತಿಗಳನ್ನು ಹುಡುಕಿ ಪ್ರಕಟಿಸುವುದೇ ಸಂಶೋಧನೆಯ ಉದ್ದೇಶ ಎಂದರೆ ಸತ್ಯವನ್ನು ಪ್ರಕಟಿಸುವುದು ಸಂಶೋಧನೆ ಕೆಲಸ',[೩] ಎಂದು ಡಾ. ಎಂ. ಚಿದಾನಂದ ಮೂರ್ತಿಯವರು ತಮ್ಮ 'ಸಂಶೋಧನೆ' ಎಂಬ ಪುಟ್ಟ ಕೃತಿಯಲ್ಲಿ (೧೯೬೭) ಸಂಶೋಧನೆಯ ವ್ಯಾಖ್ಯೆ ಮತ್ತು ಉದ್ದೇಶಗಳನ್ನು ಸ್ಪಷ್ಟಪಡಿಸಿದರು.

'ಸಂಶೋಧನೆಯ ಉದ್ದೇಶವೇ ಪ್ರಕಟಣೆ' ಎಂದು ಪ್ರೊ. ಜಾನ್ ಜೈಮಾನ್ ಘೋಷಿಸಿದರು. (Professor John Ziman, has declared that, "The object of research is publication").[೪]

'ಸತ್ಯವನ್ನು ಕಂಡುಹಿಡಿಯುವುದು' – ಎಂದು ಸಂಶೋಧನೆಯ ಸಂಕ್ಷಿಪ್ತ ವ್ಯಾಖ್ಯೆ ನೀಡಿದ ಡಾ. ಚಿದಾನಂದಮೂರ್ತಿಗಳು ಅನಂತರ ಅದನ್ನು ಹೀಗೆ ಸ್ಪಷ್ಟಪಡಿಸಿದರು – 'ಸಂಶೋಧನೆಯೆನ್ನುವುದು ಸತ್ಯವನ್ನು ಕಂಡುಹಿಡಿಯಲು ಮಾಡುವ ಒಂದು ಪ್ರಾಮಾಣಿಕ ಪ್ರಯತ್ನ'[೫] ಇದರರ್ಥ ಇಷ್ಟೇ – ಸಂಶೋಧನೆಯಲ್ಲಿ ತಪ್ಪುಗಳಾದರೂ ಸಹ, ಅಂದರೆ ಒಂದು ಸಂಶೋಧನೆಯ ಫಲಿತಾಂಶಗಳು ಅನಂತರದಲ್ಲಿ ತಿರಸ್ಕೃತವಾದರೂ ಸಹ (ಹೊಸ ಸಾಕ್ಷ್ಯಗಳ ಕಾರಣದಿಂದಾಗಿ) ಆ ಹಿಂದಿನ ಸಂಶೋಧಕನ ಪ್ರಾಮಾಣಿಕ ಪ್ರಯತ್ನಕ್ಕೆ ವಿದ್ವತ್ ವಲಯದಲ್ಲಿ ಮೌಲ್ಯ ಮತ್ತು ಗೌರವಗಳಿದ್ದೇ ಇರುತ್ತವೆ ಎಂದು ದಿ.ಎಂ. ಗೋವಿಂದ ಪೈಯವರು ಕನ್ನಡದ 'ವಡ್ಡಾರಾಧನೆ'ಯ ಕಾಲ ಕ್ರಿ.ಶ. ಆರನೆಯ ಶತಮಾನಕ್ಕಿಂತ ಈಚಿನದಿರಲಿಕ್ಕಿಲ್ಲ ಎಂದು ನಿರ್ಣಯಿಸಿದರು. ಆದರೆ ಅದು ಹಾಗಲ್ಲವೆಂಬುದು ಈಗ ಖಚಿತವಾಗಿರುವ ಅಂಶವಾಗಿದೆ. ಕವಿ ಅಥವಾ ಕೃತಿಗಳ ಕಾಲ / ದೇಶಗಳ ಕುರಿತಾದ ಅದೆಷ್ಟೋ ನಿರ್ಣಯಗಳು ಅನಂತರದಲ್ಲಿ ಬದಲಾಗಿರುವುದುಂಟು. ಆ ಬಗ್ಗೆ ಹಿಂದಿನ ಸಂಶೋಧಕರಿಗೆ ದೊರೆಯದಿದ್ದ ಹೊಸ ಸಾಕ್ಷ್ಯಗಳು ಅನಂತರದವರಿಗೆ ದೊರೆತಿದ್ದು ಇದಕ್ಕೆ ಮುಖ್ಯ ಕಾರಣವಾಗಿರುತ್ತದೆ. ಆದ್ದರಿಂದಲೇ 'ನಾವು ಸಂಶೋಧಕರನ್ನು ಗುರುತಿಸುವುದು ಅವನು ಕಂಡುಹಿಡಿದ ಸತ್ಯದಿಂದ ಅಲ್ಲ, ಆ ಸತ್ಯವನ್ನು ಕಂಡು ಹಿಡಿಯಲು ಅವನು ಮಾಡಿದ ಪ್ರಯತ್ನದಿಂದ'.[೬]

ಆದರೆ ಸಂಶೋಧನೆಯನ್ನು ಕುರಿತ ಈ ಪರಿಕಲ್ಪನೆ ಕ್ರಮೇಣ ಪರಿಷ್ಕಾರಗೊಂಡಿದೆ ಅಂದರೆ – ಈ ವ್ಯಾಖ್ಯೆಯ ಮಿತಿಗಳನ್ನು ಗುರುತಿಸಲಾಗಿದೆ. ಡಾ. ಕೆ.ವಿ. ನಾರಾಯಣ ಈ ಪರಿಕಲ್ಪನೆಯ ಮಿತಿಯನ್ನು ವಿವರಿಸುತ್ತಾ ಹೀಗೆನ್ನುತ್ತಾರೆ. – 'ಯಾವುದೇ ಶೋಧವಾದರೂ ಸತ್ಯವನ್ನು ಪ್ರತಿಪಾದಿಸಲು ಉದ್ದೇಶಿಸಿರುತ್ತದೆ – ಎಂಬ ನಮ್ಮ ತಿಳುವಳಿಕೆಯ ಮಿತಿಗಳನ್ನು ನಾವು ಅರಿತಿರಬೇಕು. ಸಂಶೋಧನೆ ಮಂಡಿಸುವ ಸತ್ಯ ೧. ಆಂಶಿಕ ೨. ಪಾರ್ಶ್ವಿಕ ೩. ರಚಿತ ಮತ್ತು ೪. ಕಾಲ ದೇಶಾದಿಗಳಿಂದ ನಿಯಂತ್ರಿತವಾಗಿರುತ್ತದೆ. ಇದು ನಮಗೆ ಖಚಿತವಿರಬೇಕು.'[೭]

ಡಾ. ಚಿ.ಮೂ. ಮತ್ತು ಡಾ. ಕೆ.ವಿ. ನಾರಾಯಣ – ಇಬ್ಬರ ವ್ಯಾಖ್ಯೆ / ವಿವರಣೆಗಳನ್ನು ಸಂಯೋಜಿಸಿದರೆ ನಮಗೆ ಸಂಶೋಧನೆಯ ಅರ್ಥದ ಕುರಿತಾದ ಈ ವ್ಯಾಖ್ಯೆ ದೊರೆಯುತ್ತದೆ. 'ಸಂಶೋಧನೆ ಎಂಬುದು ಸತ್ಯವನ್ನು ಕಂಡುಹಿಡಿಯಲು ಸಂಶೋಧಕ ಮಾಡುವ ಪ್ರಯತ್ನ. ಈ ಪ್ರಯತ್ನದಿಂದಾಗಿ ಕಾಣಿಸುವ ಸತ್ಯವು ಆಂಶಿಕತೆ (Partialness) ಯಿಂದ, ಪಾರ್ಶ್ವಿಕತೆಯಿಂದ (One sidedness) ಸಂಶೋಧಕನ ರೂಪಿಸುವಿಕೆಯಿಂದ (Constructed) ಮತ್ತು ಕಾಲದೇಶಗಳಿಂದ (time and place) ಪರಿಮಿತವಾಗಿರುತ್ತದೆ. ಇದೇ ಅಭಿಪ್ರಾಯವನ್ನು ಪ್ರೊ. ಸಿ.ಎನ್. ರಾಮಚಂದ್ರನ್ ಅವರೂ ವ್ಯಕ್ತಪಡಿಸುತ್ತಾರೆ.

'ಸತ್ಯಶೋಧನೆಯೇ ಸಂಶೋಧಕನ ಗುರಿ ನಿಜ : ಆದರೆ ಸತ್ಯಕ್ಕೆ ನಾನಾ ಮುಖಗಳಿವೆ ಮತ್ತು ಅವೆಲ್ಲವನ್ನೂ ದರ್ಶಿಸುವುದು ಸುಲಭವಲ್ಲ ಎಂಬ ಅರಿವೂ ಸಂಶೋಧಕನಿಗಿರಬೇಕು. ಸುಲಭ ಹಾಗೂ ಸರಳೀಕೃತ ತೀರ್ಮಾನಗಳು ಎಂದಿಗೂ ಪ್ರಶ್ನಾರ್ಹವೇ. ನಾವು ಒಪ್ಪಿಕೊಳ್ಳುವ ಮತ್ತು ಕೊಡುವ 'ಸಾಕ್ಷ್ಯ'ದ ವಿಶ್ವಸನೀಯತೆಯೇ ನಮ್ಮ ಕೊನೆಯ ತೀರ್ಮಾನದ ವಿಶ್ವಸನೀಯತೆಯನ್ನು ನಿರ್ಧರಿಸುತ್ತದೆ'.

'ದೇಶೀ ಸಂಶೋಧನೆಯ ಪರಿಕಲ್ಪನೆ'

ಆದರೆ ಈ ವ್ಯಾಖ್ಯಾನಕ್ಕೂ ಎದುರುಬೀಳುವಂಥ ವ್ಯಾಖ್ಯಾನವನ್ನು ಕೊಟ್ಟಿರುವ ಈಚಿನ ವಿದ್ವಾಂಸರೂ ಇದ್ದಾರೆ. ಡಾ. ಮೊಗಳ್ಳಿ ಗಣೇಶ್ ಹೇಳುತ್ತಾರೆ – 'ಸಂಶೋಧನೆ ಎನ್ನುವುದು ಜಡಸ್ಥಿತಿಯ ವಸ್ತು ವಿಷಯವನ್ನು ಕೆದಕುವುದಲ್ಲ. ಹಾಗೆ ಗತಕಾಲದ ಸಂಗತಿಯನ್ನು ಎದುರುಗೊಳ್ಳುವುದು ವರ್ತಮಾನದ ಮೂಲಕವೇ. . . . . . ಸಂಶೋಧಕರೆಲ್ಲ ಸತ್ಯಶೋಧಕರು ಎಂಬ ಭ್ರಮೆ ಈ ಕಾಲದಲ್ಲಿ ಇಲ್ಲ. ದೇಶಿ ಪರಂಪರೆಗಳ ಸತ್ಯ ಕಣ್ಣಿಗೆ ಕಾಣುವಂಥದಲ್ಲ. ಸತ್ಯದ ಹುಡುಕಾಟವೆ ಈ ಕಾಲದಲ್ಲಿ ಅರ್ಥರಹಿತವಾದುದು. . . . . ಭಾರತೀಯ ಸಮಾಜಗಳು ಸತ್ಯವನ್ನು ಕಂಡ ಬಗೆಯೂ ಒಂದೇ ರೀತಿಯಾಗಿಲ್ಲ.'[೮]

ಈ ಮಾತುಗಳನ್ನು ನೋಡಿದಾಗ ಮೊಗಳ್ಳಿ ಗಣೇಶ್ ಅವರು ಸಂಶೋಧನೆಯ ಬಗ್ಗೆ ಈವರೆಗೂ ಒಪ್ಪಿಕೊಂಡು ಬಂದ ಅಂಗೀಕೃತ ಪರಿಕಲ್ಪನೆಯನ್ನು ತಲೆಕೆಳಗಾಗಿಸುತ್ತಿದ್ದಾರೆ ಎನಿಸುತ್ತದೆ. ಆದರೆ ಅವರ ಲೇಖನವನ್ನು, ಅಲ್ಲಿಯ ವಾದವನ್ನು ಸರಿಯಾಗಿ ಗಮನಿಸಿದರೆ ಅದು ಹಾಗೇನು ಅಲ್ಲ ಎನಿಸಿ ಸಮಾಧಾನವಾಗುತ್ತದೆ. ತಮ್ಮ ಕಾಲದವರೆಗೂ ಸಾಗಿಬಂದ 'ಸಂಶೋಧನೆ'ಯ ಈ ಪರಿಕಲ್ಪನೆಯು ನಿರ್ಲಕ್ಷಿಸಿದ್ದ ಆಯಾಮವೊಂದರತ್ತ ಶ್ರೀ ಗಣೇಶ್ ಬೆಟ್ಟುಮಾಡುತ್ತಿದ್ದಾರೆ ಎಂಬುದನ್ನು ಅರ್ಥಮಾಡಿಕೊಳ್ಳುವುದು ಸರಿಯಾದ ಕ್ರಮ. ಅವರ ಈ ಲೇಖನ 'ದೇಶೀ ಸಂಶೋಧನಾ ವಿಧಾನ'ವು ಜಾನಪದ ಅಧ್ಯಯನವನ್ನು ಕುರಿತಾದುದು. ದೃಷ್ಟಿ ಧೋರಣೆಗಳು ಯಾವುವು ಎಂಬುದನ್ನು ಕುರಿತು ಅವರಿಲ್ಲಿ ವಿವರಿಸಿದ್ದಾರೆ. ಇದು ಅರ್ಥವಾಗಬೇಕಾದರೆ ಇದೇ ಲೇಖನದಲ್ಲಿ ಮುಂದೆ ಅವರೇ ಹೇಳುವ – 'ದೇಶೀ ಸಂಶೋಧನೆಯು ವಿಶೇಷವಾಗಿ ತಿರಸ್ಕೃತ ಜ್ಞಾನ ಪರಂಪರೆಗಳ ಬೇರನ್ನು ಹಿಡಿದು ವರ್ತಮಾನದ ಸಾಮಾಜಿಕ ಮೌಲ್ಯಗಳನ್ನು ಕಂಡುಕೊಳ್ಳುತ್ತದೆ.[೯] ಅಂದರೆ, ಅವರು 'ದೇಶೀ ಸಂಶೋಧನೆ' ಎಂದರೆ 'ದೇಶೀ ಸಂಸ್ಕೃತಿಯ ವರ್ತಮಾನದ ಸಾಮಾಜಿಕ ಮೌಲ್ಯಗಳನ್ನು ಅವರ ಪಾರಂಪರಿಕ ಜ್ಞಾನದ ಸೆಲೆಗಳ ನೆರವಿನಿಂದ ಕಂಡುಕೊಳ್ಳುವ ಕಾರ್ಯ.' ಅದರಲ್ಲೂ ಅವರು ಅಲಕ್ಷಿತ ಜನಸಮುದಾಯಗಳಲ್ಲಿನ ಈ ಪಾರಂಪರಿಕ ಜ್ಞಾನಭಂಡಾರವನ್ನೂ, ಆ ಜನರ ಪ್ರಸ್ತುತ ಸ್ಥಿತಿಯನ್ನೂ ಗಮನದಲ್ಲಿರಿಸಿಕೊಂಡಿದ್ದಾರೆ. ಇದೂ ಕೂಡ ನಡೆಯಬೇಕಾದ ಶೋಧವೇ. ಸೋಲಿಗರು, ಲಂಬಾಣಿಗಳು, ಕಾಡುಕುರುಬರು, ಜೇನುಕುರುಬರು, ಕುಣುಬಿಯರು, ಸಿದ್ಧಿಗಳು, ಹಸಲರು – ಇಂಥ ನೂರಾರು ಕೆಳವರ್ಗದ ಜನಪದ ಸಮುದಾಯಗಳು ತಲೆಮಾರುಗಳಿಂದ ಅನೇಕ ವಿಷಯಗಳ ಬಗ್ಗೆ (ಕೃಷಿ, ಪ್ರಾಣಿ ಪಕ್ಷಿಗಳ ವರ್ತನೆಗಳು, ಅರಣ್ಯ ಹಾಗೂ ಅರಣ್ಯೋತ್ಪನ್ನಗಳು, ವೈದ್ಯ, ಪಶುವೈದ್ಯ, ಮಳೆ ಸೂಚನೆಗಳನ್ನು ಗ್ರಹಿಸುವ ವಿಧಾನ – ಇತ್ಯಾದಿ.) ಅದೆಷ್ಟೋ ವಿಷಯಗಳನ್ನು ತಿಳಿದಿದ್ದರೂ ಅದನ್ನು ಅವರನ್ನೂ ಕೇಳುವವರೇ ಇಂದು ಇಲ್ಲವಾಗಿದ್ದಾರೆ. ಈ ಬಗೆಗಿನ ಕಾಳಜಿ ಅಥವಾ ಬದ್ಧತೆ ಡಾ. ಗಣೇಶ್ ಅವರನ್ನು 'ದೇಶೀ ಸಂಶೋಧನೆ'ಗೆ ಈ ಪರಿಕಲ್ಪನೆ ನೀಡುವಂತೆ ಮಾಡಿದೆ. ಹೀಗೆ ತಳಮೂಲ ಜನಪದ ಸಂಸ್ಕೃತಿಯ ಅಧ್ಯಯನವನ್ನು ದೃಷ್ಟಿಯಲ್ಲಿಟ್ಟುಕೊಂಡು ಸಂಶೋಧನೆಯ ಪರಿಕಲ್ಪನೆ, ಸ್ವರೂಪಗಳನ್ನು ನಿರೂಪಿಸುತ್ತಿರುವುದರಿಂದಲೇ, 'ದೇಶೀ ಪರಂಪರೆಗಳ ಸತ್ಯ ಕಣ್ಣಿಗೆ ಕಾಣುವಂಥದಲ್ಲ' ಹಾಗೂ 'ಭಾರತೀಯ ಸಮಾಜಗಳು ಸತ್ಯವನ್ನು ಕಂಡ ಬಗೆಯೂ ಒಂದೇ ರೀತಿಯಲ್ಲಿಲ್ಲ' – ಎಂಬಂಥ ಮಾತುಗಳು ಈ ವಿವರಣೆಯಲ್ಲಿ ಕಂಡುಬರುತ್ತವೆ.

ಡಾ. ಮೊಗಳ್ಳಿ ಗಣೇಶರು ದೇಶೀ ಸಂಶೋಧನೆಯ ಸಂದರ್ಭದಲ್ಲಿ ಸಾದರ ಪಡಿಸುವ 'ಸಂಶೋಧನೆ'ಯನ್ನು ಕುರಿತ ಈ ವಿವರಣೆ–ಸಂಶೋಧನೆಯ ಒಂದು ವೈಲಕ್ಷಣ್ಯವನ್ನು ಹೇಳುವಂತೆಯೇ ತನ್ನಷ್ಟಕ್ಕೆ ಒಂದು ಪರಿಮಿತಿಯನ್ನೂ ಹಾಕಿಕೊಂಡಿದೆ. ಜಾನಪದ ಸಂಶೋಧನೆ ಎಂದರೆ ಕೇವಲ ತಳ ಸಮುದಾಯಗಳನ್ನು ಮಾತ್ರವೇ ಒಳಗೊಳ್ಳುವುದಿಲ್ಲ, ಮಧ್ಯಮ ಹಾಗೂ ಮೇಲ್ವರ್ಗದ (ಜೈನ, ಬ್ರಾಹ್ಮಣ ಇತ್ಯಾದಿ) ಸಮುದಾಯಗಳಲ್ಲೂ ಜಾನಪದ ಅಂಶಗಳು ಬೇಕಾದಷ್ಟಿರುತ್ತವೆ. ಅದೇ ರೀತಿ – 'ಸಂಶೋಧಕರೆಲ್ಲ ಸತ್ಯಶೋಧಕರು ಎಂಬ ಭ್ರಮೆ ಈ ಕಾಲದಲ್ಲಿ ಇಲ್ಲ. . . . . ಸತ್ಯದ ಹುಡುಕಾಟವೇ ಈ ಕಾಲದಲ್ಲಿ ಅರ್ಥರಹಿತವಾದುದು. ಸತ್ಯ ಎಂದ ಕೂಡಲೇ ಅದರ ಬಗ್ಗೆ ಪೂರ್ವಾಗ್ರಹಗಳ ಜೊತೆಗೆ ನಿರಾಕರಣೆಯೂ ಉಂಟಾಗುತ್ತದೆ. . . .[೧೦] ಎಂಬ ಮಾತುಗಳೂ ಕೂಡ ಒಪ್ಪಿಗೆ ಪಡೆಯುವುದು ಕಷ್ಟ. ಸಂಶೋಧಕರೆಲ್ಲ (ಪೂರ್ವಾಗ್ರಹಗಳನ್ನು ಹೊಂದಿದ್ದಲ್ಲಿ) ಸತ್ಯಶೋಧಕರಲ್ಲ ಎಂಬುದು ಈ ಕಾಲಕ್ಕೆ ನಿಜವಿರಬಹುದು. ಆದರೆ ಸಂಶೋಧಕರಲ್ಲಿ ಕೆಲವರಾದರೂ ನಿಷ್ಠಾವಂತ ಸತ್ಯಶೋಧಕರಿರುತ್ತಾರೆ ಎಂಬುದು ನಿಜ. "ಸಂಶೋಧಕರೇ ಸತ್ಯಶೋಧಕರಲ್ಲವೆಂದರೆ ಮತ್ತೆ ಯಾರು" – ಎಂದೂ ಕೇಳಬೇಕಾಗುತ್ತದೆ. 'ಸತ್ಯ' ಎಂದ ಕೂಡಲೇ ಅದು ಪೂರ್ವಾಗ್ರಹಗಳಿಂದ ಕೂಡಿರುತ್ತದೆ ಎಂಬ ಗ್ರಹಿಕೆ ಸ್ವತಃ ಪೂರ್ವಾಗ್ರಹ ದಿಂದಲೇ ಬಂದುದಾಗಿರುವಂತೆ ಕಾಣುತ್ತದೆ. ಪೂರ್ವಾಗ್ರಹ ದೂರಾದ ಸಂಶೋಧಕರು ಈಗಲೂ ಇದ್ದಾರೆ. ಶಂ.ಬಾ.ಜೋಶಿ, ಅವರಾಗಲೀ, ಡಾ. ಎ.ಎನ್. ಉಪಾಧ್ಯೆರವರಾಗಲೀ ಪೂರ್ವಾಗ್ರಹ ಪೀಡಿತರು ಎನ್ನಲು ಸಾಧ್ಯವೇ? ಅಥವಾ ವಿವಿಧ ದೇಶಗಳ ಜನಪದ ಸಂಸ್ಕೃತಿಗಳ ಬಗ್ಗೆ ಮಾಹಿತಿಯನ್ನು ಶ್ರಮಪೂರ್ವಕವಾಗಿ ಸಂಗ್ರಹಿಸಿ ವರ್ಗೀಕರಿಸಿ ವಿಶ್ಲೇಷಿಸಿದ 'ಗೋಲ್ಡನ್ ಬೋ' ಕರ್ತೃವಾದ ಜೇಮ್ಸ್ ಫ್ರೇಜರ್‌ನನ್ನು ಸತ್ಯದ ಅನ್ವೇಷಕನಲ್ಲ ಎನ್ನುವುದು ಸಾಧ್ಯವೇ?

ಆದರೆ ಸಂಸ್ಕೃತಿಗೆ ಸಂಬಂಧಿಸಿದ ಅಧ್ಯಯನವನ್ನು ಪೂರ್ಣವಾಗಿ ವೈಜ್ಞಾನಿಕ ಕ್ರಮದಲ್ಲಾಗಲೀ, ಪೂರ್ಣ ಸಾಹಿತ್ಯ / ಭಾಷಿಕ ಮಾನದಂಡಗಳಿಗೆ ಅನುಸಾರವಾಗಿಯಾಗಲೀ ನಡೆಸಲು ಸಾಧ್ಯವಿಲ್ಲ. ಸಾಂಸ್ಕೃತಿಕ ವಿಷಯಗಳಿಗೆ ಸಂಬಂಧಿಸಿದಂತಹ – ಜನಾಂಗೀಯ / ಜಾನಪದೀಯ ಅಧ್ಯಯನಗಳು ಹೆಚ್ಚು ಸಂಕೀರ್ಣ ಸ್ವರೂಪದವು. "ಸಂಸ್ಕೃತಿಗೆ ಸಂಬಂಧಿಸಿದ ಅಧ್ಯಯನಗಳು ಶುದ್ಧ ವೈಜ್ಞಾನಿಕ ನೆಲೆಗಟ್ಟಿಗೆ ಸೇರಲು ಸಾಧ್ಯವಿಲ್ಲ. ಸಂಸ್ಕೃತಿಗೆ ಸಂಬಂಧಿಸಿದ ಮಾಹಿತಿಗಳನ್ನು ಸಂಗ್ರಹಿಸುವುದಾಗಲೀ, ವಿವರಿಸುವುದಾಗಲೀ, ವ್ಯಾಖ್ಯಾನಿಸುವುದಾಗಲೀ ತನಗೆ ತಾನೇ ಪೂರ್ಣರೂಪಿಯಾದ ಕಾಲ ದೇಶ ವಿಮುಕ್ತವಾದ ಸಂಗತಿಯಲ್ಲ"[೧೧] ಎನ್ನುವುದು ನಿಜವಾದ ಮಾತೇ ಆಗಿದೆ. ಶಿಷ್ಟ ಸಾಹಿತ್ಯ ಹಾಗೂ ಶಾಸನಗಳಿಗೆ ಸಂಬಂಧಿಸಿದ ಸಂಶೋಧನೆಗಳಲ್ಲಿ, ಶುದ್ಧ ವಿಜ್ಞಾನ ಶೋಧಗಳಲ್ಲಿ ಈ ಸಮಸ್ಯೆ ಬರುವುದಿಲ್ಲ. ಆದರೆ ಸಂಸ್ಕೃತಿಯ ಅಧ್ಯಯನಗಳಲ್ಲಿ ಈ ಸಮಸ್ಯೆ ತಪ್ಪಿದ್ದಲ್ಲ. ಅಧ್ಯಯನ ಕ್ಷೇತ್ರವೇ ಸಂಕೀರ್ಣವಾಗಿರುವುದು ಇದಕ್ಕೆ ಕಾರಣ.

'ಸಂಶೋಧನೆ ಅನೇಕ ವೇಳೆ ಒಂದು ಕಲ್ಪನೆ, ಒಂದು ಪ್ರಶ್ನೆ, ಅಥವಾ ಹಿಂದಿನ ಶೋಧದ ಜಾಡಿನ ಮುಂದುವರಿಕೆಯಾಗಿ ಆರಂಭಗೊಳ್ಳುತ್ತದೆ'. (Research often starts from an idea a question or an extension of a previous line of enquiry) ಎಂದು ತಜ್ಞರು ಹೇಳುತ್ತಾರೆ.[೧೨] ಈ ಕಲ್ಪನೆ / ಪ್ರಶ್ನೆಗಳು ಅದೆಷ್ಟೋ ವಿಧವಾಗಿರಲು ಸಾಧ್ಯ. ಆದ್ದರಿಂದಲೇ ಸಂಶೋಧನೆಯೂ ಬಹುಮುಖಿಯಾಗಿ ವ್ಯಾಪಿಸಿಕೊಳ್ಳುತ್ತಾ ಹೋಗುತ್ತದೆ. ಆದ್ದರಿಂದಲೇ

ಸಂಶೋಧನೆಯ ಕ್ಷೇತ್ರಗಳು ಹಲವು ಕವಲುಗಳಾಗಿ ಒಡೆದುಕೊಳ್ಳುತ್ತವೆ. ಹಾಗೂ ಸಂಶೋಧನೆಯನ್ನು ಕುರಿತ ಪರಿಕಲ್ಪನೆಯು ಸರಳತೆಯಿಂದ ಸಂಕೀರ್ಣತೆಯ ಕಡೆಗೆ, ಸಂಕ್ಷಿಪ್ತತೆಯಿಂದ ವಿಸ್ತಾರದ ಕಡೆಗೆ ಮಾರ್ಪಾಟುಗೊಳ್ಳುತ್ತಾ ಹೋಗುತ್ತದೆ.

ಸ್ತ್ರೀವಾದಿ ಸಂಶೋಧನೆ

ಕನ್ನಡ ಸಾಮಾಜಿಕ ಸಂದರ್ಭ ಹಾಗೂ ಸಾಹಿತ್ಯದಲ್ಲಿ ಸ್ತ್ರೀವಾದಿ ದೃಷ್ಟಿಕೋನದ ಅಗತ್ಯತೆಯ ಕುರಿತ ವಾದಗಳು ಸುಮಾರು ಇಪ್ಪತ್ತು ವರ್ಷಗಳಿಂದೀಚೆಗೆ ಬಹಳ ಗಟ್ಟಿಯಾಗಿ ಕೇಳಿ ಬರುತ್ತಿವೆ. ಆದರೆ ಯೂರೋಪು, ಅಮೇರಿಕಾಗಳಲ್ಲಿ ಇದು ಕನಿಷ್ಠ ಐವತ್ತು ವರ್ಷಗಳಷ್ಟು ಹಳೆಯದು. ಈ ದೃಷ್ಟಿಕೋನಕ್ಕೆ ಸಂವಾದಿಯಾದ ಹಾಗೂ ಸ್ತ್ರೀವಾದಿ ಸಂಶೋಧನೆಯ ಅಗತ್ಯತೆ, ಅದಕ್ಕೆ ಪ್ರತ್ಯೇಕ ವಿಧಾನಗಳನ್ನು ರೂಪಿಸಿಕೊಳ್ಳುವುದು ಹೇಗೆಂಬ ಬಗ್ಗೆಯೂ ಚರ್ಚೆಗಳು ನಡೆದಿವೆ. ಇದು ಸಂಶೋಧನೆಯ ಪರಿಕಲ್ಪನೆಗೆ ಮತ್ತೊಂದು ತಿರುವನ್ನು ಕೊಟ್ಟಿದೆ. ಕನ್ನಡ ಸಾಹಿತ್ಯವನ್ನು ಸ್ತ್ರೀವಾದಿ ನೆಲೆಯಿಂದ ನೋಡಿರುವ ಹಲವು ಅಧ್ಯಯನಗಳು ಈಗಾಗಲೇ ನಡೆದಿವೆ. ಆದ್ದರಿಂದ ಸ್ತ್ರೀವಾದಿ ಸಂಶೋಧನೆಯ ಪರಿಕಲ್ಪನೆಯ ತಿಳಿವು ಕನ್ನಡ ಸಾಹಿತ್ಯ ಸಂಶೋಧಕರಿಗೂ ಈಗ ಅಗತ್ಯವಾಗಿದೆ.

ಮಹಿಳೆ ಹಾಗೂ ಲಿಂಗದ ಬಗ್ಗೆ ಜ್ಞಾನವನ್ನು ಸೃಷ್ಟಿಸುವುದು ಸ್ತ್ರೀವಾದಿ ಸಂಶೋಧನೆ ಎಂದು ಹೇಳಲಾಗಿದೆ. ಇಲ್ಲಿ ಮಹಿಳೆಯರ ಸಮಸ್ಯೆಗಳು, ಆತಂಕಗಳು ಹಾಗೂ ನಂಬಿಕೆಗಳು ಸಂಶೋಧನೆಯ ಚೌಕಟ್ಟುಗಳನ್ನು ರೂಪಿಸುತ್ತವೆ. "ಸ್ತ್ರೀವಾದಿ ಸಂಶೋಧನೆಯು ಸಾಂಪ್ರದಾಯಿಕ ಸಂಶೋಧನೆಗಿಂತ ಭಿನ್ನವಾಗಿದೆ. . . . . ಮಾರಿಯಾ ಮಿಸ್ ಅವರು ಹೇಳುವ ಹಾಗೆ ಸ್ತ್ರೀವಾದಿ ಸಂಶೋಧನೆಯು ಕೇವಲ ಮಹಿಳೆಯರ ಬಗ್ಗೆ ಸಂಶೋಧನೆ ಅಲ್ಲದೇ ಅವರ ಲಿಂಗಾಧಾರಿತ ಸವಾಜದ ಬದಲಾವಣೆಯ ಬಗ್ಗೆ ಸಂಶೋಧನೆಯಾಗಿದೆ."[೧೩] ಇಲ್ಲಿ ಸ್ಪಷ್ಟವಾಗುವುದೆಂದರೆ –

೧. ಸಂಶೋಧನೆಯು ಸ್ತ್ರೀಯರ ಸಮಸ್ಯೆಗಳು / ಆತಂಕಗಳು ಇತ್ಯಾದಿಗಳ ಜೊತೆಗೆ ಸಮಾಜದಲ್ಲಿ ಲಿಂಗಾಧಾರಿತ ತಾರತಮ್ಯವಿದ್ದಲ್ಲಿ ಅದರ ನಿವಾರಣೆ ಹೇಗೆಂದು ಹುಡುಕಲು ಪ್ರಯತ್ನಿಸಿದರೆ ಅದು ಸ್ತ್ರೀವಾದಿ ಸಂಶೋಧನೆಯಾಗುತ್ತದೆ.

೨. ಸ್ತ್ರೀವಾದಿ ಸಂಶೋಧನೆ ಎಂದರೆ ಅದು ಮಹಿಳಾ ಪರವಾದ ವಕಾಲತ್ ಅಲ್ಲ. ಮಹಿಳೆಯರ ನಿಜವಾದ ಕಷ್ಟಗಳನ್ನು ಅರಿಯುವ ಹಾಗೂ ಅದರ ಪರಿಹಾರದ ಮಾರ್ಗೋಪಾಯಗಳನ್ನು ಕಂಡುಹಿಡಿಯುವ ಒಂದು ರಚನಾತ್ಮಕ ಕಾರ್ಯ.

ಹೀಗೆ ಸಂಶೋಧನೆಯ ಪರಿಕಲ್ಪನೆ ಆಗಾಗ ಹೊರಳಿ ಮಗ್ಗುಲು ಬದಲಿಸುತ್ತಾ ಹೊಸ ದೃಷ್ಟಿಕೋನಗಳಿಗೆ, ಕಾಲದ ಅವಶ್ಯಕತೆಗಳಿಗೆ ಅನುವು ಮಾಡಿಕೊಡುತ್ತಾ ಹೋಗುತ್ತದೆ.

ಆದ್ದರಿಂದಲೇ ಡಾ. ಕೇಶವಶರ್ಮ ಹೇಳುತ್ತಾರೆ – "ಸಂಶೋಧನೆಯ ಅರ್ಥವಂತಿಕೆಯು ಕೂಡ ಕಾಲದಿಂದ ಕಾಲಕ್ಕೆ, ಜಾಗದಿಂದ ಜಾಗಕ್ಕೆ ಬದಲಾಗುತ್ತಾ ಹೋಗುತ್ತದೆ".[೧೪]

ಸಂಶೋಧನೆಯ ಪರಿಕಲ್ಪನೆ ಹೀಗೆ ಮಾರ್ಪಾಟು ಹೊಂದುವುದನ್ನು ಡಾ. ಹೆಚ್.ಎಸ್. ರಾಘವೇಂದ್ರರಾವ್ ಸಹ ಗುರುತಿಸಿದ್ದು, ಯಾಕೆ ಹಾಗಾಗುತ್ತದೆ ಎಂಬುದನ್ನೂ ವಿವರಿಸಿದ್ದಾರೆ ಈ ಮಾತುಗಳಲ್ಲಿ –

". . . . . . ಹಾಗೆ ನೋಡಿದರೆ, ಕಳೆದ ದಶಕಗಳಲ್ಲಿ ಸಂಶೋಧನೆಯು ತನಗಿದ್ದ ಒಂಟಿ ಆಯಾಮದ ಬದಲಾಗಿ ಬಹುಮುಖಿಯಾಗಿದೆಯೆಂದೇ ಹೇಳಬೇಕು. ಇದು ಪಾಂಡಿತ್ಯ

ಅಥವಾ ಪ್ರತಿಭೆಯ ಪ್ರಶ್ನೆಯಲ್ಲ. ಸಂಸ್ಕೃತಿಯೆಂಬ ಸಂಗತಿಯನ್ನು ಕುರಿತ ನಮ್ಮ ದೃಷ್ಟಿಕೋನ ಮತ್ತು ವ್ಯಾಖ್ಯಾನಗಳು ಬದಲಾದಂತೆ, ಹಳೆಯದು ಅಸಮರ್ಪಕವೆಂದು ತೋರತೊಡಗುತ್ತದೆ. ಹೀಗಾಗುವುದು ದೋಷವೇನೂ ಅಲ್ಲ."

ಸಂಶೋಧನೆಯೊಂದು ಸಾಂಸ್ಕೃತಿಕ ಪುನಾರಚನೆ

ಸಂಶೋಧನೆಯನ್ನು ಹೊಸ ದಿಕ್ಕಿನಿಂದ, ಹೊಸ ಒಳನೋಟಗಳಿಂದ ವ್ಯಾಖ್ಯಾನಿಸಿ ಹೊರಟ ಡಾ. ಕೆ.ವಿ. ನಾರಾಯಣ ಅವರು ತಮ್ಮ ಪೂರ್ವೋಲ್ಲೇಖಿತ ಲೇಖನದಲ್ಲೇ ಮುಂದೆ – 'ಸಂಶೋಧನೆ ಎಂದರೆ ಪುನಾರಚನೆ ಎನ್ನುವ ಮಟ್ಟಿಗೆ ಇದರ ವ್ಯಾಪ್ತಿ ಹರಡಿತು' ಎಂದು ಅದರ ಒಂದು ಹಂತದ ಪರಿಕಲ್ಪನೆಯನ್ನು ವಿವರಿಸುತ್ತಾರೆ.[೨೫] ಇದಕ್ಕೆ ಉದಾಹರಣೆ ಕೊಡುತ್ತಾ ಅವರು – 'ಸ್ಥಳನಾಮಗಳ ಬಗ್ಗೆ ವಿವಿಧ ಮೂಲಗಳಿಂದ ಮಾಹಿತಿ ಸಂಗ್ರಹಿಸಿ ವಿವರಿಸುವಾಗ ಆ ಊರಿನ ಚರಿತ್ರೆಯನ್ನು ಪುನಾರಚಿಸುತ್ತಿರುತ್ತಾರೆ, ಹಾಗೂ 'ಪದಗಳ ರಚನೆಯನ್ನು ಅಧ್ಯಯನ ಮಾಡುವವರು ಪದಗಳ ಪೂರ್ವಪದಗಳನ್ನು ಪುನಾರಚಿಸುತ್ತಿರುತ್ತಾರೆ ಎಂಬ ಅಂಶಗಳನ್ನು ಎತ್ತಿ ತೋರಿಸುತ್ತಾರೆ'. ಇಂಥ ನಿರ್ದಿಷ್ಟ ಅಧ್ಯಯನಗಳ ಸಂದರ್ಭದಲ್ಲಿ ಸಂಶೋಧಕ ಮಾಡುವುದು ಪುನಾರಚನೆಯನ್ನೇ ಎಂಬುದು ದಿಟ. ಆದರೆ ಇದು – ಮಗುವೊಂದು 'ಬಿಲ್ಡಿಂಗ್ ಬ್ಲಾಕ್ಸ್' ಗಳನ್ನುಪಯೋಗಿಸಿ ಒಂದು ಕಟ್ಟಡದ ಆಕೃತಿಯನ್ನು ರೂಪಿಸುವುದು, ಅದನ್ನು ಬಿಚ್ಚಿ ಅದನ್ನೇ ರೂಪಿಸುವ ಆಟದಂತಲ್ಲ. ಇಲ್ಲಿ 'ಶೋಧ'ವಿಲ್ಲದೆ ಪುನಾರಚನೆ ಸಾಧ್ಯವೇ ಆಗುವುದಿಲ್ಲ. ಆದ್ದರಿಂದ ನಿರ್ದಿಷ್ಟ ಸಂದರ್ಭಗಳಲ್ಲಿ 'ಸಂಶೋಧನೆಯೊಂದು ಸಾಂಸ್ಕೃತಿಕ ಪುನಾರಚನೆ' ಎಂಬ ಪರಿಕಲ್ಪನೆಯೂ ನಿಜವೇ, ಸಂಶೋಧನೆಯ ಈ 'ಮರು ರಚನಾ ಪ್ರಕ್ರಿಯೆ'ಯನ್ನು ಮನಸ್ಸಿನಲ್ಲಿಟ್ಟುಕೊಂಡೇ ಇರಬೇಕು, ಡಾ. ಎಚ್.ಎಸ್. ರಾಘವೇಂದ್ರರಾವ್ ಅವರು ಇದನ್ನೇ ಸಮರ್ಥಿಸುವಂತೇ. . . . . ಸಂಶೋಧನೆಯು ಮರು ರಚನೆಯೇ ವಿನಾ ವಸ್ತುಸ್ಥಿತಿಯನ್ನು ಅದು ಎಂದಿನಿಂದಲೂ ಇರುವ ಹಾಗೆ, ತಟಸ್ಥವಾದ ಭಾಷೆಯಲ್ಲಿ ಹೇಳುವ ಕೆಲಸವಲ್ಲ'[೨೬] ಎನ್ನುತ್ತಾರೆ.

'ತಟಸ್ಥವಾದ ಭಾಷೆಯಲ್ಲಿ ಹೇಳುವುದಲ್ಲ' ಎಂದರೇನು? ಅದು 'ಪಕ್ಷಪಾತದಿಂದ ಕೂಡಿದ ಭಾಷೆಯಾಗಿರಬೇಕು' – ಎಂಬ ಅರ್ಥವಂತೂ ಖಂಡಿತಾ ಆಗಿರಲು ಸಾಧ್ಯವಿಲ್ಲ. 'ಅದು ಚಿಂತನಪೂರ್ಣವಾದ ಭಾಷೆ' ಎಂದೇ ಇಲ್ಲಿನ ಅರ್ಥ. 'ಅದೊಂದು ಮರು ರಚನೆ' ಎಂದು ಹೆಚ್.ಎಸ್.ಆರ್. ಹೇಳುವುದು ಬಹುಶಃ ಇದೇ ಅರ್ಥದಲ್ಲಿಯೇ. ಇದಕ್ಕೆ ಉದಾಹರಣೆಯಾಗಿ ಕನ್ನಡದಿಂದ ಹಲವು ಉದಾಹರಣೆಗಳನ್ನು ಕೊಡಬಹುದು. ಕೆಲವು ಹಳಗನ್ನಡ ಪದ್ಯಪಾಠಗಳು ಮತ್ತು ಶಾಸನ ಪಾಠಗಳ ನಿಷ್ಕರ್ಷೆ ಕುರಿತಾಗಿ ನಮ್ಮಲ್ಲಿ ನಡೆದಿರುವ ಚರ್ಚೆಗಳು ಇದಕ್ಕೊಂದು ಉದಾಹರಣೆ. ಡಾ. ಹಂಪ ನಾಗರಾಜಯ್ಯನವರು ತಮ್ಮ ಪ್ರಸಿದ್ಧ ಕೃತಿಯಾದ 'Rashtrakutas of Malakhed and some Jaina epigraph'. ಕೃತಿಯಲ್ಲಿ ಮಾಡಿರುವ ಮುಖ್ಯವಾದೊಂದು ಕೆಲಸವೆಂದರೆ ಹಲವು ಶಾಸನಗಳಲ್ಲಿ ಚೆದುರಿ ಹೋಗಿದ್ದ ಮಾಹಿತಿಗಳನ್ನು ಸುಸಂಬದ್ಧವಾದ ರೀತಿಯಲ್ಲಿ ಜೋಡಿಸಿ ರಾಷ್ಟ್ರಕೂಟರ ಕಾಲದಲ್ಲಿದ್ದ ಜೈನ ಸಂಸ್ಕೃತಿಯ ಚಿತ್ರಣವನ್ನು ಪುನಾರಚಿಸಿರುವುದು. (ರಾಷ್ಟ್ರಕೂಟರ ಬಗ್ಗೆ ಶ್ರೇಷ್ಠ ಕೆಲಸವನ್ನು ೬೦ ವರ್ಷಗಳ ಹಿಂದೆ ಮಾಡಿದ್ದವರು ಡಾ. ಅಳ್ತೇಕರ್. ಅವರ ಕೆಲಸವನ್ನು ಡಾ. ಹಂಪನಾ ಸಮರ್ಥವಾಗಿ ಮುಂದುವರಿಸಿದ್ದಾರೆಂದು ಆ ಕೃತಿಯ ಬಿಡುಗಡೆ ಸಂದರ್ಭದಲ್ಲಿ ಹೇಳಿದ ಪ್ರೊ. ಎ.ವಿ. ನರಸಿಂಹಮೂರ್ತಿಯವರು 'ಹಂಪನಾ' ಅವರನ್ನು 'ಅಭಿನವ ಅಳ್ತೇಕರ್' ಎಂದು ಕರೆಯಬಹುದು' – ಎಂದಿದ್ದರು).

ಹೀಗೆ ಸಂಶೋಧನೆಯ ಪರಿಕಲ್ಪನೆಯು 'ಸತ್ಯವನ್ನು ಕಂಡುಹಿಡಿಯುವುದು' ಎಂಬಲ್ಲಿಂದ ಆರಂಭವಾಗಿ 'ಅದೊಂದು ಭ್ರಮೆ' ಎಂಬ ವಿರುದ್ಧ ಕೋನವನ್ನು ಸ್ಪರ್ಶಿಸಿ ಮತ್ತೆ 'ಅದೊಂದು ಪುನಾರಚನೆ' ಎಂಬಲ್ಲಿಗೆ ಬಂದಿತು. ಇವೆಲ್ಲ ಪರಸ್ಪರ ವಿರುದ್ಧವಾದ ನಿಲುವುಗಳೇನೂ ಅಲ್ಲವೆಂಬುದು ಈವರೆಗಿನ ವಿವರಣೆಯಿಂದ ಸ್ಪಷ್ಟವಾಗುತ್ತದೆ. ಪರಿಕಲ್ಪನೆಯ ವ್ಯಾಖ್ಯೆಯಲ್ಲಾಗಿರುವ ಈ ಮಾರ್ಪಾಟುಗಳು ಸಂಶೋಧನೆಯ ಸ್ವರೂಪವನ್ನು ಹೆಚ್ಚೆಚ್ಚು ಖಚಿತಗೊಳಿಸುತ್ತಾ ಅದರ ವ್ಯಾಪ್ತಿಯನ್ನು ನಿರ್ದಿಷ್ಟಗೊಳಿಸುತ್ತಾ ಹೋಗಿವೆ.

ಒಟ್ಟಿನಲ್ಲಿ ಸಂಶೋಧನೆ ಎನ್ನುವುದು ಬುದ್ಧಿಪೂರ್ವಕವಾಗಿ ನಡೆಯುವ ಒಂದು ಅಧ್ಯಯನ. ಈ ಸಂದರ್ಭದಲ್ಲಿ ಡಾ. ಎಚ್.ಎಸ್. ಶ್ರೀಮತಿಯವರ ಈ ಮಾತುಗಳನ್ನು ಗಮನಿಸಬಹುದು.

'ಸಾಹಿತ್ಯ ಕೃತಿಗಳಲ್ಲಿ ಬದುಕು, ಲೋಕ ಗ್ರಹಿಕೆ ಎಂಬ ಸಂಗತಿಗಳು ವೈವಿಧ್ಯಮಯ ಸಂಕೇತಗಳಲ್ಲಿ ದಾಖಲಾಗುತ್ತವೆ. ಸಮುದಾಯ ಅಧ್ಯಯನಗಳಿಗೆ ಈ ಸಂಕೇತಗಳನ್ನು ವಿಸಂಕೇತಿಸಿ ಅಧ್ಯಯನ ಮಾಡುವುದು ಉಪಯುಕ್ತವಾಗುತ್ತದಾದರೆ ಸಾಹಿತ್ಯಾಧ್ಯಯನಗಳಿಗೆ ಸಮುದಾಯ ಅಧ್ಯಯನಗಳಿಂದ ದೊರಕುವ ವಿವರಗಳು ಸೃಜನಶೀಲತೆಯ ಮೂಲಶಕ್ತಿ ಹಾಗೂ ಆಶಯಗಳನ್ನು ಗ್ರಹಿಸುವಲ್ಲಿ ನೆರವನ್ನೀಯುತ್ತವೆ. ಬುದ್ಧಿಪೂರ್ವಕವಾಗಿ ನಡೆಯುವ ಈ ಶೋಧವನ್ನು 'ಸಂಶೋಧನೆ' ಎಂಬ ಹೆಸರಿನಲ್ಲಿ ಕರೆಯಲಾಗುತ್ತದೆ. ಆದರೆ ಇಲ್ಲಿ ನಡೆಯುವುದು ಹೊರ ಕಣ್ಣಿಗಷ್ಟೇ ಕಾಣುವ ಸಂಗತಿಗಳಾಚೆಗೆ ನಡೆದು ಒಳಗಣ್ಣುಗಳಿಗೆ ಅಗತ್ಯವಾಗಿ ಬೇಕಾದ ಬೆಳಕಿನ ಹುಡುಕಾಟ. ಇದು ಪ್ರಜ್ಞಾಪೂರ್ವಕವಾಗಿ ಕಲ್ಪಿಸಿಕೊಳ್ಳಬೇಕಾದ ಹಾದಿ, ಇದನ್ನು ವೈಧಾನಿಕತೆ ಎನ್ನಬಹುದಾದರೆ, ಈ ಕ್ರಮದಲ್ಲಿ ನಿರೀಕ್ಷಿಸುವ ಫಲಿತಾಂಶ ಬೆಳಕಿನ 'ಕಾಣ್ಕೆ' ಯಾಗಿರುತ್ತದೆ'.[೧೭]

ಡಾ. ಶ್ರೀಮತಿ ಅವರು 'ಸಾಹಿತ್ಯಾಧ್ಯಯನ ಮತ್ತು ಮಹಿಳಾ ಅಧ್ಯಯನ' ಕ್ಷೇತ್ರದಲ್ಲಿನ ಸಂಶೋಧನೆಯ ಬಗ್ಗೆ ಹೇಳುತ್ತಾ ಈ ಮಾತುಗಳನ್ನು ಹೇಳಿದ್ದರೂ ಸಹ, ಆ ಸಂದರ್ಭದಿಂದಾಚೆಗೆ ಸಹ ಅವು ನಿಲ್ಲತಕ್ಕದ್ದಾಗಿವೆ. ಅಂದರೆ, ಅವರು ಇಲ್ಲಿ ಸಂಶೋಧನೆಯ ಸ್ವರೂಪದ ಕುರಿತಾಗಿ ಹೇಳುವ ಮಾತುಗಳು ಎಲ್ಲ ಕ್ಷೇತ್ರದಲ್ಲಿನ ಸಂಶೋಧನೆಗಳ ಬಗ್ಗೆ ನಾವು ಬಹುಮಟ್ಟಿಗೆ ಒಪ್ಪಿಕೊಳ್ಳಬಹುದಾದ ಪರಿಕಲ್ಪನೆಯಾಗುತ್ತದೆ. ಇದೇ ವ್ಯಾಖ್ಯೆಯನ್ನು ಮಾರಿ ಮತ್ತು ರೆಡ್‌ಮ್ಯಾನ್ (Marry and Redman) ಅವರ ತುಂಬ ಸಂಕ್ಷೇಪಿಸಿ ಹೀಗೆ ಹೇಳಿದ್ದಾರೆ.

'Research is a careful and systematic effort of giving new knowledge.'[೧೮]

'ಸಂಶೋಧನೆ ವ್ಯಕ್ತಿಯಿಂದ ನಡೆಯುವುದಾದರೆ ಅದೂ ಒಂದು ಸೃಜನಶೀಲ ಕಾರ್ಯವೇ' – ಎಂದು ಈ ಹಿಂದೆ ಹೇಳಿದ್ದರೂ ಸಹ, ಸೃಜನಶೀಲ ಸಾಹಿತ್ಯ ರಚನೆ ಹಾಗೂ ಸಾಹಿತ್ಯ ವಿಮರ್ಶೆಗಳಲ್ಲಿ ಲೇಖಕನಿಗಿರುವಷ್ಟು ಸ್ವಾತಂತ್ರ್ಯ ಸಂಶೋಧಕನಿಗಿರುವುದಿಲ್ಲ. ಸೃಜನಶೀಲ ಲೇಖಕ (ಅಂದರೆ – ಕವಿ/ಕತೆಗಾರ/ಕಾದಂಬರಿಕಾರ– ಇತ್ಯಾದಿ) ಹಾಗೂ ವಿಮರ್ಶಕನನ್ನು ಹೀಗೇಕೆ ಹೇಳಿದಿರಿ?' ಎಂದು ಕೇಳಿದರೆ 'ಅದು ನನ್ನ ದೃಷ್ಟಿಕೋನ ಮಾತ್ರ ನೀವು ಒಪ್ಪಬೇಕೆಂದೇನಿಲ್ಲ' – ಎಂದು ಹೇಳಿಬಿಟ್ಟರೆ ಮುಗಿಯಿತು. ಆದರೆ ಸಂಶೋಧನೆ ವೈಯಕ್ತಿಕ ನೆಲೆಯಲ್ಲಿಯೇ ನಡೆದರೂ ಅವನು ಹಾಗೆ ಹೇಳುವಂತಿಲ್ಲ. . . . "ಸಂಶೋಧಕ ಮಾತ್ರ ತಾನು ಏನು ಹೇಳಿದರೂ ಸಾಧಾರಪೂರ್ವಕ ಹೇಳಬೇಕಾಗುತ್ತದೆ. ಅವನು ಆಧಾರವಿಲ್ಲದೆ ಏನೂ ಹೇಳುವುದಿಲ್ಲ. ಅಂತೆಯೇ ಅವನು ಏನಾದರೂ ಹೇಳಿದರೆ ಯಾವ

ಆಧಾರದಿಂದ ಹೇಗೆ ಹೇಳುವಿರಿ? ಎಂದು ಸಂಶೋಧಕನನ್ನು ಯಾರು ಬೇಕಾದರೂ ಪ್ರಶ್ನಿಸಬಹುದಾಗಿದೆ, ಆದ್ದರಿಂದ ಸಂಶೋಧಕ ಪ್ರಶ್ನಾತೀತನಾಗಿರಲಾರ".[೧೯]

ಸಂಶೋಧಕ ಪ್ರಶ್ನಾತೀತನಲ್ಲ, ತನ್ನ ಬರಹಕ್ಕೆ ಆತ ಉತ್ತರದಾಯಿ ಎಂಬುದೇನೋ ನಿಜ. ಆದರೆ ಈ ಜವಾಬ್ದಾರಿ ಹೇರಿಕೆಯೇ ಆತನನ್ನು ನಾವು ನಿರ್ಲಕ್ಷಿಸಲಾರದ ವ್ಯಕ್ತಿಯನ್ನಾಗಿಯೂ ಮಾಡಿದೆ. ಸಂಶೋಧಕರು ಹಲವು ಸಾಕ್ಷ್ಯಗಳ ಆಧಾರದಿಂದ ನಿರೂಪಿಸಿದ ಸಂಗತಿಯನ್ನು ನಾವು ನಿರ್ಲಕ್ಷಿಸಿ ನಮ್ಮದೇ ಕಲ್ಪನೆಯನ್ನು ತೇಲಿಬಿಡಲಾಗದು. ಅಥವಾ ನಮ್ಮ ಭಿನ್ನಮತಕ್ಕೆ ಒಂದು ಎಳೆಯಷ್ಟು ಆಧಾರವಿದ್ದು ಅದಕ್ಕೆ ವಿರುದ್ಧವಾದ ಹಲವು ಅಂಶಗಳು ಆಗಲೇ ಸಾಧಾರವಾಗಿ ಸ್ಥಾಪಿತವಾಗಿದ್ದರೆ, ಇವನ್ನೆಲ್ಲಾ ನಿರ್ಲಕ್ಷಿಸಿ ನಮ್ಮ ಒಂದೇ ಎಳೆಯ ಆಧಾರದ ಮೇಲೆ ಬೇರೊಂದು ಸಿದ್ಧಾಂತವನ್ನು ಮಂಡಿಸಿದರೆ ಅದು ಗ್ರಾಹ್ಯವಾಗಲಾರದು. ಒಂದೆರಡು ಉದಾಹರಣೆಗಳಿಂದ ಇದನ್ನು ಸ್ಪಷ್ಟಪಡಿಸಹುದು. ಶ್ರೀ ಹ.ಕ. ರಾಜೇಗೌಡ ಅವರು ಹಿಂದೆ ಹಾಸನದಲ್ಲಿ ನಡೆದ ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ 'ಹೊಸ ಸಂಶೋಧನೆಗಳು' ಎಂಬ ಗೋಷ್ಠಿಯಲ್ಲಿ 'ಶಾಂತಲೆ ಶೈವಳು' ಎಂಬ ವಿಚಾರವಾಗಿ ತಮ್ಮ ಪ್ರಬಂಧವನ್ನು ಮಂಡಿಸಿದರು. ಅದಕ್ಕೆ ಮುಖ್ಯ ಆಧಾರ ಶಾಂತಲೆಯ ತಂದೆ ಶೈವನಾಗಿದ್ದರಿಂದ, ತಂದೆಯ ಧರ್ಮ ಮಕ್ಕಳಿಗೆ ಬರುವುದರಿಂದ ಆಕೆ ಶೈವಳೆನಿಸಿಕೊಳ್ಳುತ್ತಾಳೆ ಎಂಬುದು. ಅದೇ ರೀತಿ ಡಾ. ಎಂ.ಎಂ. ಕಲಬುರ್ಗಿಯವರು ಒಂದೆಡೆ ಉಪನ್ಯಾಸ ನೀಡುತ್ತಾ "ಅತ್ತಿಮಬ್ಬೆ ಜೈನಳಾಗಿರಲಿಲ್ಲ, ಆಕೆ ಶೈವಳಾಗಿದ್ದಳು. ಆ ಕಾರಣದಿಂದಲೇ ಗಂಡನ ಮರಣಾನಂತರ ಅವನ ಪರೋಕ್ಷ ವಿನಯಾರ್ಥಕವಾಗಿ ಶಿವಾಲಯವನ್ನು ಕಟ್ಟಿಸಿದಳು. ಈ ಬಗ್ಗೆ ಶಾಸನವಿದೆ" ಎಂದರು. ಈ ಇಬ್ಬರೂ ಮಹನೀಯರು ಗಮನಕ್ಕೆ ತೆಗೆದುಕೊಳ್ಳದ ಒಂದು ಅಂಶವಿದೆ. ಅದೆಂದರೆ ಹತ್ತು ಹನ್ನೆರಡನೇ ಶತಮಾನದಲ್ಲಿ ಜಾತಿ ವ್ಯವಸ್ಥೆ ಈಗಿರುವಷ್ಟು ಬಿಗಿಯಾಗಿರಲಿಲ್ಲ. ಪತಿ ಪತ್ನಿಯರು ಭಿನ್ನಧರ್ಮಗಳನ್ನು ಪಾಲಿಸುತ್ತಾ ಅನ್ಯೋನ್ಯವಾಗಿ ಬಾಳುತ್ತಿದ್ದುದಕ್ಕೆ ಶಾಂತಲೆಯ ತಾಯ್ತಂದೆಯರು ಹಾಗೂ ಅತ್ತಿಮಬ್ಬೆ ಮತ್ತು ಅವಳ ಪತಿ ನಾಗಿದೇವ ಒಳ್ಳೆಯ ಉದಾಹರಣೆಯಾಗಿದ್ದರು. 'ತಂದೆಯ ಧರ್ಮವೇ ಮಕ್ಕಳಿಗೆ' ಅಥವಾ 'ಪತಿಯ ಧರ್ಮವೇ ಪತ್ನಿಯದೂ ಸಹ' ಎಂಬ ರೂಢಿ ಬಂದದ್ದು ಅನಂತರದಲ್ಲಿ. ಈ ಅಂಶಗಳನ್ನು ಮರೆತರೆ ಮೇಲೆ ಹೇಳಿದಂಥ ನಿಲುವಿಗೆ ನಾವು ತಲುಪುತ್ತೇವೆ. ಇಂಥ ಸಂದರ್ಭಗಳಲ್ಲಿ – 'ಸತ್ಯವನ್ನು ಶೋಧಿಸುತ್ತಾರೆಂಬುದೇ ಒಂದು ಭ್ರಮೆ' ಎಂಬ ಕೆ.ವಿ. ನಾರಾಯಣ ಅವರ ಮಾತನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಆದರೆ ಎಲ್ಲಾ ಸಂದರ್ಭಕ್ಕೂ ಅವರ ಈ ಮಾತು ಬಹುಶಃ ಹೊಂದಿಕೆಯಾಗದು.

ಇದೇ ಸಂದರ್ಭದಲ್ಲಿಯೇ ಸಂಶೋಧಕ ಪ್ರಾಮಾಣಿಕವಾಗಿ ಪ್ರಯತ್ನಿಸಿದರೂ ತಪ್ಪು ನಿರ್ಣಯಗಳಿಗೆ ಬಂದಾಗ ಬೇರೆಯವರು ಆ ವಿಷಯವಾಗಿ ಮರುಶೋಧನೆ ನಡೆಸಿ ಸರಿಯಾದ ನಿರ್ಣಯಗಳಿಗೆ ತಲುಪಿ ಮನ್ನಣೆ ಪಡೆದಿರುವುದು ಕನ್ನಡ ಸಾಹಿತ್ಯ ಸಂಶೋಧನೆಯಲ್ಲಿ ಅಪರೂಪವೇನೂ ಅಲ್ಲ. ಇದಕ್ಕೂ ಒಂದೆರಡು ಉದಾಹರಣೆಗಳನ್ನು ಕೊಡಬಹುದು. ದಿ.ಎಂ. ಗೋವಿಂದ ಪೈರವರು 'ವಡ್ಡಾರಾಧನೆ'ಯ ಕಾಲದ ಬಗ್ಗೆ ಪ್ರಕಟಿಸಿದ ಸಂಶೋಧನೆಯ ಸಾಕ್ಷ್ಯಾಧಾರಗಳನ್ನು ಪುನರ್ವಿಮರ್ಶಿಸಿ ಎಂಟು ವರ್ಷಗಳ ನಂತರ ದಿ. ಡಾ. ಆ. ನೇ ಉಪಾಧ್ಯೆಯವರು ಪ್ರಕಟಿಸಿದ ಹೊಸ ಶೋಧವು ಗೋವಿಂದ ಪೈಯವರ ವಾದ ಅಸಮರ್ಥನೀಯವೆಂದು ತೋರಿಸಿಕೊಟ್ಟಿತು. ಆಗ ಹಲವು ಕನ್ನಡ ವಿದ್ವಾಂಸರು ಬೇಸರಗೊಂಡರಾದರೂ ಈಗ ನಿಂತಿರುವುದು ಉಪಾಧ್ಯೆ ಅವರ ಶೋಧವೇ ಹೊರತು

ಗೋವಿಂದ ಪೈಯವರದ್ದಲ್ಲ.[೨೦] ಅದೇ ರೀತಿ, ಗಂಗಾಧರಂ ಶಾಸನದಲ್ಲಿ ಉಕ್ತವಾಗಿದ್ದ ಪಂಪನ ತಾಯಿಯ ಹೆಸರಿನ ಉಲ್ಲೇಖದ ಬಗ್ಗೆ ಅನುಮಾನ ವ್ಯಕ್ತಪಡಿಸಿ ಆಗಿನ್ನೂ ಯುವಕನಾಗಿದ್ದ ಡಾ. ಎಂ.ಎಂ. ಕಲಬುರ್ಗಿಯವರು ಸ್ವತಃ ಅಲ್ಲಿಗೆ ಹೋಗಿ ಆ ಶಾಸನದ ಪ್ರತಿ ತೆಗೆದು ಆ ಹೆಸರಿನ ಸರಿಯಾದ ರೂಪ ಹೀಗೆ – ಎಂದು ಲೇಖನ ಬರೆದಾಗ ಸ್ವತಃ ಡಿ.ಎಲ್.ಎನ್. ಅದನ್ನು ಮೆಚ್ಚಿಕೊಂಡು ತಮ್ಮ ಅಭಿಪ್ರಾಯವನ್ನು ತಿದ್ದಿಕೊಂಡರಂತೆ[೨೧] ಆದ್ದರಿಂದ 'ಸಂಶೋಧಕ ಸತ್ಯವನ್ನು ಶೋಧಿಸುತ್ತಾನೆಂಬುದು ಒಂದು ಭ್ರಮೆ' ಎಂಬ ಮಾತು ಪೂರ್ಣ ಸತ್ಯವಲ್ಲ, ಅದು ಒಂದು ಪಾರ್ಶ್ವದ ಅಥವಾ ಕೆಲವು ಸನ್ನಿವೇಶಗಳಲ್ಲಿನ ಸತ್ಯವಷ್ಟೇ.

ಸಂಶೋಧನೆಯನ್ನು ಕುರಿತು ಇನ್ನೆರಡು ಬಗೆಯ ಪರಿಕಲ್ಪನೆಗಳನ್ನು ಡಾ. ಸಂಗಮೇಶ ಸವದತ್ತಿಮಠ ನೀಡಿದ್ದಾರೆ. "ಸಂಶೋಧನೆ– ಎನ್ನುವುದು ಆಕರ ಸಾಮಗ್ರಿಗಳ ಮೂಲಕ ಪುನಾರಚಿಸಿ ಅಥವಾ ಪುನಾಪರಿಶೀಲಿಸಿ ಇತಿವೃತ್ತಿಗಳೊಂದಿಗೆ ಅದರ ಅಂದಂದಿನ ಪ್ರಸ್ತುತತೆಯನ್ನು ಸ್ಪಷ್ಟಪಡಿಸುವುದಾಗಿದೆ. Past is to be made perfect in present ಎಂದು ಅದನ್ನು ಹೇಳಬಹುದು.[೨೨] ಈ ವ್ಯಾಖ್ಯೆಯ ಮೊದಲ ಭಾಗವು ಹಿಂದೆ ಉಲ್ಲೇಖಿಸಿದ ಡಾ. ಹೆಚ್.ಎಸ್. ರಾಘವೇಂದ್ರರಾವ್ ಅವರ "ಸಂಶೋಧನೆಯೂ ಒಂದು ಪುನಾರಚನೆ" ಎಂಬ ಮಾತಿಗೆ ಸರಿ ಹೊಂದುತ್ತದೆ. ಆದರೆ ವ್ಯಾಖ್ಯೆಯ ಉತ್ತರಾರ್ಧಕ್ಕೆ ಒಂದು ಸೀಮಿತತೆ ಇದೆ. ಅದು ಸಂಶೋಧನ ಪ್ರಬಂಧವನ್ನು ರಚಿಸುವಾಗ ಇಟ್ಟುಕೊಳ್ಳುವ ಸಾಮಾನ್ಯ ಚೌಕಟ್ಟಿನ ಒಂದು ಭಾಗವನ್ನು ನಿರ್ದೇಶಿಸುತ್ತದೆ. (ಇದನ್ನು ಅವರು ಅಲ್ಲಿಯೇ ಮುಂದೆ ವಿವರಿಸಿದ್ದಾರೆ) ಹಿಂದಿನ ಕಾಲಕ್ಕೆ ಸಂಬಂಧಿಸಿದ ಒಂದು ಶೋಧ ಸಮಕಾಲೀನ ದಿನಗಳಿಗೂ ಹೇಗೆ ಪ್ರಸ್ತುತ (relevant) ಎಂಬುದನ್ನು ಸ್ಪಷ್ಟಪಡಿಸಬೇಕಾದ್ದು ಸಂಶೋಧನೆಯ ಕೆಲಸ ಎಂದು ಇದರ ಅರ್ಥ. ಒಂದು ಕೃತಿಯ ಕಲಾತ್ಮಕತೆ, ಪ್ರತಿಪಾದಿತ ವಿಷಯಗಳು – ಇಂಥಾದ್ದರ ಪ್ರಸ್ತುತತೆಯನ್ನು ಹೇಳಬೇಕಾದ ಸಂದರ್ಭದಲ್ಲಿ ಈ ಮಾತು ನಿಜ. ಆದರೆ ಕವಿಯ ಕಾಲ ದೇಶ ನಿರ್ಣಯ, ಪದ್ಯವೊಂದರ ಪಾಠ ನಿರ್ಣಯದಂಥ ಸಂಶೋಧನೆಗಳ ಸಂದರ್ಭದಲ್ಲಿ ಪ್ರಸ್ತುತತೆಯನ್ನು ಸಾಬೀತು ಪಡಿಸಬೇಕಾದ ಅಗತ್ಯವಿರುವುದಿಲ್ಲ. ಆದ್ದರಿಂದ ಈ ಪರಿಕಲ್ಪನೆ ಕೂಡ ಸೀಮಿತ ಸಂದರ್ಭಗಳಿಗಷ್ಟೇ ಸೂಕ್ತವಾಗಬಲ್ಲುದು.

ಡಾ. ಸವದತ್ತಿಮಠ ಅವರು ಸಾಹಿತ್ಯ ಸಂಶೋಧನೆಗೆ ನೀಡುವ ಮತ್ತೊಂದು ವ್ಯಾಖ್ಯೆ ಸ್ವೀಕಾರಾರ್ಹವಾಗಿದೆ. ಅವರೆನ್ನುತ್ತಾರೆ. – 'ಸಾಹಿತ್ಯದ ಅಂತರಸ್ತರಗಳನ್ನು, ಅದರ ಅನನ್ಯತೆಯನ್ನು, ಸತ್ವ, ಸತ್ಯಗಳನ್ನು, ವೈಶಿಷ್ಟ್ಯವನ್ನು ಸಶಾಸ್ತ್ರೀಯವಾಗಿ ಅನಾವರಣಗೊಳಿಸುವ ವ್ಯವಸ್ಥಿತ ಬರವಣಿಗೆಯ ಕ್ರಿಯೆಯೇ ಸಾಹಿತ್ಯ ಸಂಶೋಧನೆ'[೨೩] ಈ ಪರಿಕಲ್ಪನೆ ಸಾಹಿತ್ಯ ಸಂಶೋಧನೆಯನ್ನು ಕುರಿತಂತೆ ಸಮಗ್ರವೂ ದೋಷ ದೂರವೂ ಆಗಿದೆ.

ಹೀಗೆ, ಸಂಶೋಧನೆಯನ್ನು ಕುರಿತ ಪರಿಕಲ್ಪನೆ ಆಗಾಗ ಪರಿಷ್ಕಾರಗೊಳುತ್ತಾ, ಸಂಶೋಧನೆಯ ವಿವಿಧ ಉದ್ದೇಶಗಳಿಗೆ ತನ್ನನ್ನು ಒಗ್ಗಿಸಿಕೊಳ್ಳುತ್ತಾ ಸಾಗಿದೆ. ಇಲ್ಲಿ ನೆನಪಿಡಬೇಕಾದ ಅಂಶವೆಂದರೆ ಸಂಶೋಧನೆಯನ್ನು ಕುರಿತ ಯಾವ ವ್ಯಾಖ್ಯೆಯೂ ನಿರುಪಯೋಗಿಯಲ್ಲ ಹಾಗೂ ಪೂರ್ಣ ತಿರಸ್ಕಾರಾರ್ಹವಲ್ಲ ಎಂಬುದು. ಯಾವ ದೃಷ್ಟಿಕೋನದಿಂದ ಸಂಶೋಧನೆಯನ್ನು ಒಬ್ಬ ಸಂಶೋಧಕ ಕೈಗೆತ್ತಿಕೊಂಡಿದ್ದಾನೆ ಎಂಬುದರ ಆಧಾರದ ಮೇಲೆ ಆತನು ಸ್ವೀಕರಿಸಬೇಕಾದ ಪರಿಕಲ್ಪನೆ ನಿರ್ಧಾರವಾಗುತ್ತದೆ.

ಅಡಿ ಟಿಪ್ಪಣಿಗಳು

೧. ಡಾ. ಎಂ. ಚಿದಾನಂದಮೂರ್ತಿ – 'ಸಂಶೋಧನೆ'– ಪ್ರ. ಡಿ.ವಿ.ಕೆ. ಮೂರ್ತಿ ಪ್ರಕಾಶನ, ಮೈಸೂರು–೪. ಪುಟ–೧೩.
೨. ಅಲ್ಲೇ.
೩. ಅಲ್ಲೇ – ಪು. ೧೪
೪. Quoted by Stephen Lock [Editor-British Medical Journal] in the forward to the book- 'RESEARCH' BY Clifford Hawkins and Macro Sorgi. Pub: Narosa Publishing House 6, Community Centre, Panchaseel Park, New-Delhi–೧೧೦೦೧೭, First Pub–೧೯೮೭.
೫. ಡಾ. ಎಂ. ಚಿದಾನಂದಮೂರ್ತಿ 'ಸಂಶೋಧನೆ' (ಪೂರ್ವೋಕ್ತ) ಪು. ೧೪.
೬. ಅಲ್ಲೇ ಪು–೧೫.
೭. ಡಾ. ಅಮರೇಶ ನುಗಡೋಣಿ (ಸಂ) – 'ಕನ್ನಡ ಸಂಶೋಧನೆಯ ವೈಧಾನಿಕತೆಗಳು' ಕೃತಿಯಲ್ಲಿನ ಡಾ. ಕೆ.ವಿ. ನಾರಾಯಣ ಅವರ ಲೇಖನ 'ಸಂಶೋಧನೆ': ಪರಿಕಲ್ಪನೆ: ಪು.೨. ಪ್ರ. ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ, ಪ್ರಮು: ೨೦೦೮.
೮. ಅದೇ ಗ್ರಂಥ. ಪ್ರೊ. ಸಿ.ಎನ್. ರಾಮಚಂದ್ರನ್ ಅವರ ಲೇಖನ–ಸಂಶೋಧನೆಯ ಸ್ವರೂಪ ಟಿಪ್ಪಣಿಗಳು' ಪು–೨೧. ಅದೇ ಗ್ರಂಥದಲ್ಲಿ ಡಾ. ಮೊಗಳ್ಳಿ ಗಣೇಶ್ ಅವರ ಲೇಖನ– 'ದೇಶಿ ಸಂಶೋಧನಾ ವಿಧಾನ: ಪು. ೧೨೭. ೧೨೮.
೯. ಅಲ್ಲೇ – ಪು. ೧೨೪
೧೦. ಅಲ್ಲೇ – ಪು. ೧೨೮
೧೧. ಡಾ. ಸಿ. ನಾಗಭೂಷಣ– ಕನ್ನಡ ಸಂಶೋಧನ ಸಮೀಕ್ಷೆ : ಪು. ೬.
೧೨. Clifford Hawkins, Macro Sorgi (Ed.) Research: article- 'Planning and protocol'- by Martin J. Kendall and Clifford Hawkins, P. ೧೨.ಕ
೧೩. ಡಾ. ಅಮರೇಶ ನುಗಡೋಣಿ (ಸಂ). 'ಕನ್ನಡ ಸಂಶೋಧನೆಯ ವೈಧಾನಿಕತೆ' ಡಾ. ಛಾಯಾ ದೇಗಾಂವ್‌ಕರ್ ಅವರ ಲೇಖನ– ಸ್ತ್ರೀವಾದಿ ಸಂಶೋಧನಾ ವಿಧಾನಗಳು: ಸ್ವರೂಪ ಹಾಗೂ ಅಗತ್ಯತೆ: ಪು.೩೯.
೧೪. ಅದೇ ಗ್ರಂಥದಲ್ಲಿ ಡಾ. ಕೇಶವಮೂರ್ತಿ ಅವರ ಲೇಖನ – 'ಸಂಶೋಧನೆಗೂ ನಮ್ಮದೇ ಪರಿಕರಗಳ ಅಗತ್ಯವಿದೆ'. ಪುಟ. ೪೬.
೧೫. ಅದೇ ಕೃತಿ ಡಾ. ಹೆಚ್.ಎಸ್. ರಾಘವೇಂದ್ರರಾವ್ ಅವರ ಲೇಖನ – 'ಸಾಹಿತ್ಯ ಸಂಶೋಧನೆಯು ವೈಧಾನಿಕತೆ'. ಪುಟ.೨೩.
೧೬ .'ಕನ್ನಡ ಸಂಶೋಧನೆಯಲ್ಲಿ ವೈಚಾರಿಕತೆ' ಎಂಬ ಪೂರ್ವೋಕ್ತ ಗ್ರಂಥದಲ್ಲಿಯ ಡಾ. ಕೆ.ವಿ. ನಾರಾಯಣ ಅವರ ಪೂರ್ವೋಲ್ಲೇಖಿತ ಲೇಖನವನ್ನು ನೋಡಿ.
೧೭ .ಡಾ. ಎಚ್.ಎಸ್. ರಾಘವೇಂದ್ರರಾವ್ – ಪೂರ್ವೋಕ್ತ ಲೇಖನ: 'ಕನ್ನಡ ಸಂಶೋಧನೆಯು ವೈಧಾನಿಕತೆಗಳು' ಗ್ರಂಥದಲ್ಲಿ ಪುಟ. ೬೧.
೧೮. ಡಾ. ಅಮರೇಶ ನುಗಡೋಣಿ (ಸಂ) – ಪೂರ್ವೋಕ್ತ ಗ್ರಂಥದಲ್ಲಿನ ಡಾ. ಎಚ್.ಎಸ್. ಶ್ರೀಮತಿ ಅವರ ಲೇಖನ 'ಸಾಹಿತ್ಯಾಧ್ಯಯನ ಮತ್ತು ಮಹಿಳಾ ಅಧ್ಯಯನ' ಪುಟ. ೩೨.
೧೯. Quoted by Dr. H. Comerasmy, University of Brighton, U.K. (Website: WWW.slideshare.net).

೨೦. ಡಾ. ಸಂಗಮೇಶ ಸವದತ್ತಿಮಠ – 'ಕನ್ನಡ ಸಾಹಿತ್ಯ ಮತ್ತು ಸಂಶೋಧನೆ: ಮಾರ್ಗ ಮತ್ತು ಇತಿಹಾಸ' ಪು. ೩೩. ಪ್ರ: ರೂಪರಶ್ಮಿ ಪ್ರಕಾಶನ, ಧಾರವಾಡ – ೮: ತೃ. ಮು. ೨೦೧೦.

೨೧. ವಿವರಗಳಿಗೆ ನೋಡಿ ನಾಡೋಜ ಪ್ರೊ. ಹಂಪ ನಾಗರಾಜಯ್ಯ (ಸಂ) 'ಆ. ನೇ ಉಪಾಧ್ಯೆ ಅವರ ಕನ್ನಡ ಬರಹಗಳು' ಕೃತಿಯಲ್ಲಿ 'ಸಾಹಿತಿ ಎಂ. ಗೋವಿಂದ ಪೈ' ಲೇಖನ ಪು. ೩೨೪–೫. ಪ್ರ. ಕನ್ನಡ ಸಾಹಿತ್ಯ ಪರಿಷತ್ತು ಪ್ರ.ಮು.೨೦೧೧.

೨೨. ವಿವರಗಳಿಗೆ ನೋಡಿ ಡಾ. ಎಸ್.ಪಿ. ಪದ್ಮಪ್ರಸಾದ್. 'ಅನುಸಂಧಾನ' ಲೇಖನ ಸಂಕಲನದಲ್ಲಿ ಡಾ. ಕಲಬುರ್ಗಿಯವರನ್ನು ಕುರಿತ ಲೇಖನ. ಪ್ರ: ಪ್ರಕಾಶ ಸಾಹಿತ್ಯ ಅರಳೇಪೇಟೆ, ಬೆಂಗಳೂರು. ಪ್ರ.ಮು. – ೨೦೧೪

೨೩. ಡಾ. ಸಂಗಮೇಶ ಸವದತ್ತಿ ಮಠ – 'ಪೂರ್ವೋಕ್ತ ಗ್ರಂಥ–ಪುಟ ೭'.

■

ಸಂಶೋಧನೆ

೩

ಸಂಶೋಧನೆಯ ಪಾಶ್ಚಾತ್ಯ ಮತ್ತು ದೇಶಿ ನೆಲೆಗಳು

ಡಾ. ಸಿ. ನಾಗಣ್ಣ

ಇತ್ತೀಚಿನವರೆಗೂ ಇಂಗ್ಲಿಷ್ ಅಧ್ಯಯನಗಳಲ್ಲಿ ಸಂಶೋಧನಾ ವಿಧಾನಗಳ ಬಗ್ಗೆ ಹೆಚ್ಚು ಚರ್ಚಿಸುತ್ತಿರಲಿಲ್ಲ. ೧೯೮೦ರ ದಶಕದಲ್ಲಿ ಸ್ನಾತಕೋತ್ತರ ಪದವಿ ಅಭ್ಯಾಸ ಮಾಡುತ್ತಿದ್ದವರಿಗೂ ಇದರ ಪರಿಚಯ ಅಷ್ಟಾಗಿ ಇರಲಿಲ್ಲ. ನೀವು ಮಾಡಿದುದೇ ಸಂಶೋಧನೆ. ಮೌಖಿಕ ಪರೀಕ್ಷೆಯಲ್ಲಿ ಮಾತ್ರ ಸಂಶೋಧನೆಗೆ ಹೇಗೆ ನಡೆಯಿತು ಎಂಬುದರ ಬಗ್ಗೆ ಪ್ರಸ್ತಾಪವಿರುತ್ತಿತ್ತೇ ಹೊರತು; ಉಳಿದಂತೆ ಇದರ ಬಗ್ಗೆ ಮೌನವಹಿಸಬಹುದಾದ ಅವಕಾಶವಿದ್ದಿತು. ೧೯೯೦ರ ದಶಕದ ಉತ್ತರಾರ್ಧದಲ್ಲಿ ಸಂಶೋಧನೆಯ ತರಬೇತಿಯ ಬಗ್ಗೆ ಮಾತನಾಡತೊಡಗಿದಾಗ ಸಂಶೋಧನಾ ವಿಧಾನಗಳ ಬಗ್ಗೆ ಹೆಚ್ಚು ಚರ್ಚೆಯಾಗಲು ಪ್ರಾರಂಭವಾಯಿತು.

ವಿಶೇಷವಾಗಿ ಇಂಗ್ಲೆಂಡಿನಲ್ಲಿ ಬಹುತೇಕ ಇಂಗ್ಲಿಷ್ ಅಧ್ಯಯನದ ಬೋಧಕರು ಕ್ರಿಯಾಶೀಲವಾದ ಸಂಶೋಧನೆಯಲ್ಲಿ ತೊಡಗಿದ್ದಾರೆ; ಹಾಗಾಗಿ ಗುರುತರವಾದ ಬದಲಾವಣೆಯನ್ನು ಸ್ಥಾಪಿಸುವ ಅವರ ಸಂಶೋಧನೆ ಸಂಶೋಧನಾ ವಿಧಾನವನ್ನನುಸರಿಸಿಯೇ ನಡೆದಿರುವುದು ಗೋಚರವಾಗುತ್ತದೆ. ಆದಾಗ್ಯೂ ಇಂಥ ಗಮನ ಸೆಳೆಯುವ ಫಲಿತಾಂಶವನ್ನು ಪಡೆಯುವ ಹಾದಿಯಲ್ಲಿ ತಾನು ಅನುಸರಿಸಿದ ವಿಧಾನ ಯಾವುದು ಎಂಬುದರ ಬಗ್ಗೆ ಅವರು ಹೆಚ್ಚು ಹೇಳಿಕೊಳ್ಳದಿರುವುದು ಕಂಡು ಬಂದಿದೆ. ಸಾಮಾನ್ಯವಾಗಿ ಜನಜನಿತವಾಗಿರುವ ಧೋರಣೆಯೆಂದರೆ "ಸಂಶೋಧನಾ ವಿಧಾನವನ್ನು ತಿಳಿಸಿ ಹೇಳಲು ಸಾಧ್ಯವಿಲ್ಲ. ಸಂಶೋಧನೆ ಮಾಡುತ್ತಲೇ ನೀವು ಕಲಿಯುವಿರಿ" (Sadie Williams, Postgraduate Training in Research Methods: Current Practice and Future Needs in English, 2003, London : English Subject Centre, Royal Holloway College). ಇಂಥ ಒಂದು ತರಬೇತಿಯಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿಯೊಬ್ಬ ಹೇಳಿದ ಮಾತು ಮನನೀಯವಾಗಿದೆ : "ಈ ಸಂಶೋಧನಾ ವಿಧಾನದ ಬಗ್ಗೆ ನನ್ನ ಗುಂಪಿನಲ್ಲಿದ್ದ

ಪ್ರತಿಯೊಬ್ಬನೂ ನಿರಾಸಕ್ತನಾಗಿದ್ದ. ನನ್ನ ಮಾರ್ಗದರ್ಶಕರ ಜೊತೆ ನಾವು ಕಲಿತುದಷ್ಟೇ ಲಾಭ." ಇನ್ನೊಬ್ಬ ವಿದ್ಯಾರ್ಥಿ ಹೇಳುತ್ತಾನೆ : "ತುಂಬಾ ಉಪಯುಕ್ತವಾದ ಸಂಗತಿಯೆಂದರೆ ನನ್ನಷ್ಟಕ್ಕೆ ನಾನು ಸುತ್ತಾಡಿದ್ದು ; ಆ ಸುತ್ತಾಟದಲ್ಲಿ ನನಗೆ ಅಗತ್ಯವಾದದ್ದನ್ನು ನಾನು ತಿಳಿದುಕೊಂಡೆ." ಇಂಥ ಸಂಶೋಧನಾ ವಾತಾವರಣದಲ್ಲಿ ಸಾಮಾನ್ಯವಾಗಿ ನಮ್ಮ ಅರಿವಿಗೆ ಬರುವ ವಿಚಾರವೆಂದರೆ 'ಮಾಡುವುದರ ಮೂಲಕ ನೀವು ಕಲಿಯುತ್ತೀರಿ.' ಸಂಶೋಧನಾ ತರಬೇತಿಯನ್ನು ವ್ಯವಸ್ಥಿತವಾಗಿ ನೀಡಿದ ವಾತಾವರಣ ಸೃಷ್ಟಿಯಾಗಿರಲು ಕಾರಣ ಸಂಶೋಧನೆಯಲ್ಲಿ ವ್ಯಕ್ತಿಗತವಾದ ವಿಧಾನವೇ ಪ್ರಧಾನವಾಗಿದ್ದು "research collaboration" ಎಂಬ ಮಾರ್ಗ ಅಪರೂಪವಾಗಿರುವುದು. ಮಾನವಿಕ ವಿಭಾಗದ ಇತರ ಶಿಸ್ತುಗಳಲ್ಲಿ ಸಂಶೋಧನಾ ವಿಧಾನ ಮುಖ್ಯಪಾತ್ರ ವಹಿಸಬಹುದಾದರೂ ಈವತ್ತಿಗೂ ಆಂಗ್ಲ ಅಧ್ಯಯನಗಳಲ್ಲಿ ಇದರ ಪಾತ್ರ ಗೌಣವಾಗಿಯೇ ಉಳಿದಿದೆ. ಆದರೆ ೨೦೦೩ರಲ್ಲಿ ಹೊರಬಂದಂಥ ಸಂಶೋಧನಾ ವರದಿ (Sadie William, ೨೦೦೩) ಗಮನ ಸೆಳೆಯುವಂಥದ್ದಾಗಿದೆ. ೨೦೦೨ನೆಯ ಇಸವಿಯಲ್ಲಿ Arts and Humanities Research Board (AHRB) Postgraduate Review ಹೊರಬಂದಿತ್ತು. ಈ ವರದಿ 'ಸಂಶೋಧನಾ ಸಂಸ್ಕೃತಿಯನ್ನು ಪೋಷಿಸ'ಬೇಕೆಂದು ಸ್ಪಷ್ಟವಾಗಿ ತಿಳಿಸಿತ್ತು ; 'ಸಂಶೋಧನಾ ತರಬೇತಿಯಲ್ಲಿ ಉತ್ತಮ ವಿಧಾನವನ್ನು ಅಳವಡಿಸಬೇಕಾದ' ಅಗತ್ಯತೆಯ ಬಗ್ಗೆಯೂ ಗಮನ ಸೆಳೆದಿತ್ತು. Economic and Social Research Council (ESRC) ಈಗಾಗಲೇ ಸಂಶೋಧನೆಯ ಹಾದಿಯನ್ನು ಸ್ಪಷ್ಟವಾಗಿ ಗುರುತಿಸಿದ್ದ ಹಿನ್ನಲೆಯಲ್ಲಿ ಆಂಗ್ಲ ಅಧ್ಯಯನಗಳಲ್ಲೂ ಇದು ಸಾಧ್ಯವಾಗಬೇಕೆಂದು ಪಟ್ಟು ಹಿಡಿದಂತೆ ಕಾಣುತ್ತದೆ.

ಚಾರಿತ್ರಿಕವಾಗಿ ಸಂಶೋಧನಾ ತರಬೇತಿಗೆ ಹೆಚ್ಚು ಗಮನ ಹರಿಸಿಲ್ಲ ಎಂಬ ಸಂಗತಿಯನ್ನು ಎಎಚ್ಆರ್‌ಬಿ ಸ್ಪಷ್ಟಪಡಿಸಿದೆ. ಕೆಲವು ಕೌಶಲಗಳನ್ನು ಕರಗತ ಮಾಡಿಕೊಳ್ಳುವುದಕ್ಕಷ್ಟೇ ನಮ್ಮ ಗಮನ ಕೇಂದ್ರೀಕೃತವಾಗದೆ ಸಂಶೋಧನಾ ವಿಧಾನಗಳು ಸಂಶೋಧನಾ ತರಬೇತಿಯ ಒಂದು ಭಾಗವಾಗಬೇಕು ಎಂದು ವಾದಿಸುವುದುಂಟು. ೨೦೦೪ರಿಂದ ಎಎಚ್ಆರ್‌ಬಿ ಸಂಶೋಧನೆಗೆ ಅರ್ಜಿ ಹಾಕುವ ವಿದ್ಯಾರ್ಥಿ ಅತ್ಯಗತ್ಯವಾಗಿ ಸಂಶೋಧನಾ ವಿಧಾನಗಳ ಬಗ್ಗೆ ಖಚಿತವಾಗಿ ಬರೆಯಬೇಕೆಂದು ಸೂಚಿಸಿದೆ. ನಾನು ಹಿಡಿಯುವ ಹಾದಿ ಹೇಗೆ ಇತರ ಹಾದಿಗಳಿಗಿಂತ ಭಿನ್ನ? ಏತಕ್ಕಾಗಿ ಈ ಮಾರ್ಗವನ್ನನುಸರಿಸುತ್ತಿದ್ದೇನೆ ಎಂಬುದನ್ನು ವಿದ್ಯಾರ್ಥಿ ಸ್ಪಷ್ಟಪಡಿಸಬೇಕು. ಸಂಶೋಧನಾ ವಿದ್ಯಾರ್ಥಿಗಳಲ್ಲಿ ಸಮರ್ಪಕವಾದ ರೀತಿಯಲ್ಲಿ ಸಂಶೋಧನಾ ಕೌಶಲಗಳನ್ನು, ತಂತ್ರಗಳನ್ನು ಮತ್ತು ಸಾಮರ್ಥ್ಯಗಳನ್ನು ಉಂಟು ಮಾಡಲು ಎಎಚ್ಆರ್‌ಬಿ ಸಾಕಷ್ಟು ಸೂತ್ರಗಳನ್ನು ಕುರಿತು ಧ್ಯಾನಿಸಿದೆ.

"ಇಂಗ್ಲಿಷ್ ಸಬ್ಜೆಕ್ಟ್ ಸೆಂಟರ್" ನೀಡಿದ ವರದಿ(೨೦೦೩)ಯಲ್ಲಿ ಸಂಶೋಧನಾ ತರಬೇತಿಗೆ ಆದ್ಯತೆ ನೀಡಲಾಗಿದೆ. ಬೇರೆ ಬೇರೆ ಕಾಲಘಟ್ಟಗಳನ್ನು ಅಧ್ಯಯನ ಮಾಡುವಾಗ ವಿಭಿನ್ನ ರೀತಿಯ ಕೌಶಲಗಳನ್ನು ಅಳವಡಿಸಿಕೊಳ್ಳಬೇಕಾದ ಅಗತ್ಯವಿರುತ್ತದೆ. ಉದಾಹರಣೆಗೆ ಮಧ್ಯಯುಗೀನ ಹಸ್ತಪ್ರತಿ ಹಿಡಿದು ಕೆಲಸ ಮಾಡುವುದು; ಹದಿನೆಂಟನೆಯ ಶತಮಾನದ ಒಂದು ಪಾಂಡಿತ್ಯಪೂರ್ಣವಾದ ಪಠ್ಯವನ್ನು ಸಂಪಾದಿಸುವುದು ; ರೂಪಕದ ಚರಿತ್ರೆಯನ್ನು ಕುರಿತು ಬರೆಯುವುದು ಅಥವಾ ವಸಾಹತೋತ್ತರ ಸಿದ್ಧಾಂತವನ್ನು ಕುರಿತು ವ್ಯಾಖ್ಯಾನಿಸುವುದು – ಇದೆಲ್ಲ ಭಿನ್ನ ಬಗೆಯ ಕೌಶಲಗಳನ್ನು ಬೇಡುವಂಥದ್ದಾಗಿದೆ. ಹಾಗೆ ಹೇಳುವಾಗ ಮೇಲೆ ಹೆಸರಿಸಿದ ವರದಿ ನಮಗೆ ಚಿರಪರಿಚಿತವಾದ ಒಂದು ಸಂಗತಿಯ ಕಡೆ

ನಮ್ಮ ಗಮನಸೆಳೆಯುತ್ತದೆ; ಆ ಸಂಗತಿಯೇನೆಂದರೆ: "ಒಂದು ಗುಂಪಿನ ವಿದ್ಯಾರ್ಥಿಗಳಿಗೆ ನೀವು ಬೋಧಿಸುವ ಕ್ರಮದಲ್ಲಿ ಒಂದು ಮಿತಿಯಿರುತ್ತದೆ. ಒಬ್ಬ ವ್ಯಕ್ತಿಗೆ ಅಗತ್ಯವಾದಂಥ ಕೌಶಲಗಳು ಪ್ರತ್ಯೇಕವಾಗಿರುತ್ತವೆ" ಹಾಗೆಯೇ "ಕೌಶಲಗಳನ್ನು ಸಂಶೋಧನೆಯಿಂದ ಬೇರ್ಪಡಿಸಿ ನೋಡಬಹುದು ಎಂಬ ಧೋರಣೆಯೇ ಸಾಧುವಲ್ಲ..... ತರಬೇತಿಯಲ್ಲೇ ಇಲ್ಲಿಯ ಹಲವು ಕೌಶಲಗಳನ್ನು ಯುವ ವಿದ್ವಾಂಸರು ಕರಗತ ಮಾಡಿಕೊಡುತ್ತಾರೆ..... ಹಾಗಾಗಿ ಸರ್ವೇಸಾಮಾನ್ಯವಾಗಿ ನಡೆಸುವಂಥ ಬೋಧನೆಯ ಮೂಲಕ ಇದನ್ನು ತಲುಪಿಸಲಾಗುವುದಿಲ್ಲ."

ಈ ಅಭಿಪ್ರಾಯದ ಬೆಂಬಲದಲ್ಲೇ ಮುಂದುವರಿದು ಹೇಳುವುದಾದರೆ ಸಾಮಾನ್ಯವಾಗಿ ಮಾನವಿಕ ವಿಭಾಗಗಳಲ್ಲಿ ನಡೆಯುವಂಥ ಸಂಶೋಧನೆ ಹಾಗೂ ಆಂಗ್ಲ ಅಧ್ಯಯನಗಳಲ್ಲಿ ನಡೆಯುವಂಥ ಸಂಶೋಧನೆ ವ್ಯಕ್ತಿಗತ ನೆಲೆಯಲ್ಲಿ ನಡೆಯುತ್ತದೆ. ಯಾವುದೋ ಒಂದು ಗೊತ್ತಾದ ಸಂಶೋಧನಾ ಯೋಜನೆ ನಿರೀಕ್ಷಿಸುವ ವಿಧಾನವನ್ನು ಯುವ ವಿದ್ವಾಂಸರು ತಮ್ಮ ಚರ್ಚೆಯ ಯಾತ್ರೆಯಲ್ಲೇ ಕಂಡುಕೊಳ್ಳುತ್ತಾರೆ ಎಂಬುದು ಇಲ್ಲಿಯ ಅಭಿಪ್ರಾಯ. ಒಬ್ಬ ಯುವ ವಿದ್ವಾಂಸ ಸ್ನಾತಕೋತ್ತರ ಮಟ್ಟದಲ್ಲಿ ತನ್ನದಾಗಿಸಿಕೊಳ್ಳುವ ಸಂಶೋಧನಾ ವಿಧಾನವನ್ನು ತನ್ನ ಶೈಕ್ಷಣಿಕ ಬದುಕಿನುದ್ದಕ್ಕೂ ಅನುಸರಿಸಿ ಮುಂದುವರೆಯುತ್ತಾನೆ/ಳೆ ಎಂಬ ಇಂಗಿತವೂ ಇಲ್ಲಿದೆ. ಆದರೆ ಕಾಲಕಳೆದಂತೆ ಸಂಶೋಧನಾ ವಿಧಾನಗಳಲ್ಲಿ ಬದಲಾವಣೆ ಅನಿವಾರ್ಯ ಎಂಬ ವಿಚಾರ ನಮಗೆ ಮನದಟ್ಟಾಗಿದೆ. ಒಂದು ಕಾಲದಲ್ಲಿ ತಮ್ಮ ಮಹಾಪ್ರಬಂಧ ಬರೆಯುವ ಕಾಲಕ್ಕೆ ಅನುಸರಿಸಿದ ವಿಧಾನವನ್ನೇ ತಮ್ಮ ಬದುಕಿನುದ್ದಕ್ಕೂ ಸಂಶೋಧಕರು ಅನುಸರಿಸುತ್ತಾರೆ ಎಂಬ ತೀರ್ಮಾನಕ್ಕೆ ಬರಲು ಸಾಧ್ಯವಿಲ್ಲ. ಒಂದು ಗೊತ್ತಾದ ಯೋಜನೆಯ ಅಗತ್ಯಕ್ಕೆ ವಿದ್ವಾಂಸ ಒಂದು ವಿಧಾನವನ್ನನುಸರಿಸಿ ಸಂಶೋಧನೆಯನ್ನು ನಿರ್ವಹಿಸಿದರೆ, ಭವಿಷ್ಯದ ಅಗತ್ಯವನ್ನು ಮನಗಂಡು ಆತ ಮುಂದೆ ಬೇರೊಂದು ವಿಧಾನವನ್ನನುಸರಿಸುವುದು ಆಶ್ಚರ್ಯವಲ್ಲ.

ಆಂಗ್ಲ ಅಧ್ಯಯನಗಳಲ್ಲಿ ಸಾಮಾನ್ಯವಾಗಿ ಕೇಳಿ ಬರುವ ಅಭಿಪ್ರಾಯವಿದು: "ಅಂತಿಮವಾಗಿ, ಮುಖ್ಯವಾಗುವುದು ಓದು ಮತ್ತು ಪಠ್ಯ. ಗ್ರಂಥಾಲಯದಲ್ಲಿ ನಿಮಗೆ ಅಗತ್ಯವಾದ ಗ್ರಂಥ ಎಲ್ಲಿದೆ ಎಂಬುದನ್ನು ತಿಳಿಯಬೇಕು.... ಒಟ್ಟಿನಲ್ಲಿ ನಿಮ್ಮ ಪಠ್ಯಗಳು ನಿಮಗೆ ಗೊತ್ತಿರಬೇಕು." ಇಂಥ ಅಭಿಪ್ರಾಯದಲ್ಲಿ ಎದ್ದು ಕಾಣುವ ಸಂಗತಿಯೆಂದರೆ ಪಠ್ಯದ ವಿಶ್ಲೇಷಣೆಯೇ ಆಂಗ್ಲ ಸಂಶೋಧನೆಯ ಪ್ರಧಾನ ಭೂಮಿಕೆ ಎಂಬುದು. ಆದರೆ ೨೦೦೧ರ Research Assessment Exerciseನ ಪಂಡಿತ ಮಂಡಳಿ ನೀಡಿರುವ ನಿರೂಪ ಸ್ಪಷ್ಟಪಡಿಸಿರುವಂತೆ ಆಂಗ್ಲಭಾಷಾಧ್ಯಯನವೆಂದರೆ ಪಠ್ಯವಿಶ್ಲೇಷಣೆಯಷ್ಟೇ ಅಲ್ಲ, ಅದಕ್ಕಿಂತಲೂ ಹೆಚ್ಚಿಗೆ ಇರುವಂಥದ್ದು.

ಉದಾಹರಣೆಗೆ ಆತ್ಮಚರಿತ್ರೆ ಅಥವಾ ಜೀವನ ಚರಿತ್ರೆಯನ್ನು ಕುರಿತು ಸಂಶೋಧನೆ ಮಾಡುವವರ ವಿಧಾನ ಭಿನ್ನವಾಗಿರುತ್ತದೆ. ಈ ವಲಯದ ಸಂಶೋಧನೆ ಹೇಗೆ ಭಿನ್ನ ಎಂದು ಕೇಳುವ ಮೊದಲು ಕೆಲವು ಮೂಲಭೂತ ಸಂಗತಿಗಳನ್ನು ಸ್ಪಷ್ಟಪಡಿಸಿಕೊಳ್ಳಬೇಕು. ಆರಂಭದಲ್ಲೇ ಕೇಳಿಕೊಳ್ಳಬೇಕಾದ ಪ್ರಶ್ನೆಯೆಂದರೆ, ನಾವು ಸಂಶೋಧನೆಯನ್ನು ಮಾಡುವುದಾದರೂ ಏತಕ್ಕೆ. 'ಸಂಶೋಧನೆ ಮಾಡುವುದು' ಶೈಕ್ಷಣಿಕ ಬದುಕಿನ ಅವಿಭಾಜ್ಯ ಅಂಗವಾಗಿದೆ. ಸಂಶೋಧನೆ 'ಮಾಡುತ್ತಿಲ್ಲ' ಎಂದರೆ ಆಶ್ಚರ್ಯ ಪಡಬೇಕಾದ ಸಂಗತಿಯಾಗುತ್ತದೆ. 'ಸಂಶೋಧನೆಯಲ್ಲಿ ಸಕ್ರಿಯವಾಗಿಲ್ಲ' ಎಂದು ಒಬ್ಬ ವ್ಯಕ್ತಿಯನ್ನು

ಬಣ್ಣಿಸಿದರೆ ಆತ ಯಾರ ಲೆಕ್ಕಾಚಾರದಲ್ಲೂ ಸೇರ್ಪಡೆಯಾಗಿಲ್ಲ ಎಂದಾಗುತ್ತದೆ. ಜೊತೆಗೆ ಅಂಥ ವ್ಯಕ್ತಿ ಪದವಿ ತರಗತಿಗಳಿಗೆ ಪಾಠ ಮಾಡುವ ಕ್ರಿಯೆಯಲ್ಲಿ ಹಾಗಾಗಿ ತೊಡಗಬಹುದಾಗಿದೆ. 'ಸಂಶೋಧನೆ ಮಾಡುವುದು' ಎಂದರೆ ಒಬ್ಬ ಅಧ್ಯಾಪಕ ಅಥವ ಶೈಕ್ಷಣಿಕ ವಲಯದ ವ್ಯಕ್ತಿ ಅನಿವಾರ್ಯವಾಗಿ ಕೈಗೊಳ್ಳಲೇಬೇಕಾದ ವ್ರತ ಎಂದು ಭಾವಿಸಲು ಸಾಧ್ಯವಿಲ್ಲ. ಈಗ ಸಂಶೋಧನೆ ಮಾಡಲು ಹಲವು ಕಾರಣಗಳಿರುತ್ತವೆ; ಅವುಗಳಲ್ಲಿ ಉದ್ಯೋಗ ಕೂಡ ಒಂದು. ಜೀವನ ಚರಿತ್ರೆ ಅಥವಾ ಆತ್ಮಚರಿತ್ರೆಗಳ ಬಗ್ಗೆ ಸಂಶೋಧನೆ ಮಾಡುವವರನ್ನು ಗಮನಿಸುವಾಗ ಇನ್ನೊಬ್ಬರ ಬಗ್ಗೆ ತಿಳಿದುಕೊಳ್ಳಲು ಅವರಿಗೆ ಅದಮ್ಯವಾದ ಆಕಾಂಕ್ಷೆಯಿರುವುದು ಸ್ಪಷ್ಟವಾಗುತ್ತದೆ. ಆಧುನಿಕ ಪ್ರಪಂಚ ಅಥವಾ ಆಧುನಿಕ ಪಶ್ಚಿಮ ವ್ಯಕ್ತಿಗಳ ಬದುಕಿಗೆ ಜ್ಞಾನ ಮತ್ತು ಶಿಕ್ಷಣ ಅತ್ಯಗತ್ಯವೆಂದು ತಿಳಿಸುತ್ತದೆ. ಹಾಗಾಗಿ ಜೀವನ ಚರಿತ್ರೆ ಅಥವಾ ಆತ್ಮಚರಿತ್ರೆಯ ಬಗ್ಗೆ ಸಂಶೋಧನೆ ಮಾಡುವವರು ಇನ್ನೊಬ್ಬರ ಬದುಕನ್ನು ಕುರಿತ ಮಾಹಿತಿ ಮುಖ್ಯವೆಂದು ಬಗೆಯುವುದು ಸಹಜವೇ ಆಗಿದೆ. ಜೀವನ ಚರಿತ್ರೆ ಅಥವಾ ಆತ್ಮಚರಿತ್ರೆಗೆ ವಿಷಯವಾಗಿರತಕ್ಕವರು ಸಂಶೋಧಕರ ಪರಿಸರದಲ್ಲೇ ಬಾಳಿದವರಾಗಿರುತ್ತಾರೆ. ಪಾಶ್ಚಾತ್ಯ ಸಂಸ್ಕೃತಿಯಲ್ಲಿ ವ್ಯಕ್ತಿಗಳು ತಮ್ಮ ಬದುಕಿನ ವಿವರಗಳನ್ನು ಸಂಪೂರ್ಣವಾಗಿ ಬಿಟ್ಟು ಕೊಡುತ್ತಿರುವ ಹಿನ್ನೆಲೆಯಲ್ಲಿ ಜೀವನಚರಿತ್ರೆ ಅಥವಾ ಆತ್ಮಚರಿತ್ರೆ ಸಂಶೋಧನೆಯ ವಿಷಯವಾಗಿ ಮುಂದುವರಿಯಲು ಸಾಧ್ಯವೆ ಎಂಬ ಶಂಕೆ ಕೂಡ ವಿದ್ವಾಂಸರನ್ನು ಕಾಡುತ್ತಿದೆ. ತಾವು ಅಧ್ಯಯನ ಮಾಡುವ ವ್ಯಕ್ತಿಗಳಂತೆಯೇ ಸಂಶೋಧನೆ ಮಾಡುವವರೂ ಸಹ ಲೈಂಗಿಕತೆಯ ಬಗ್ಗೆ, ಮೌಲ್ಯ ವ್ಯವಸ್ಥೆಯ ಬಗ್ಗೆ ಹಾಗೂ ತಮ್ಮ ಹುಚ್ಚಿನ ಹಿನ್ನಲೆಯ ಬಗ್ಗೆ ಮುಕ್ತವಾಗಿರಬೇಕಾಗುತ್ತದೆ.

ಈ ಬಗೆಯ ಮುಕ್ತತೆಯಿಂದಾಗುವ ಲಾಭವೆಂದರೆ ಸಂಶೋಧಕ ಇನ್ನೊಬ್ಬರ ಬದುಕನ್ನು ಅರ್ಥಮಾಡಿಕೊಳ್ಳುವ ವಿಧಾನದಲ್ಲಿ ಆತ ಬರೇ ಮಾಹಿತಿ ಸಂಗ್ರಹಿಸುವುದಿಲ್ಲ; ಅದಕ್ಕಿಂತ ಹೆಚ್ಚಿನದನ್ನು ಸಾಧಿಸುತ್ತಿರುತ್ತಾನೆ. ಆಂಗ್ಲಭಾಷೆಯಲ್ಲಿ ಹೊರಬಂದ ಆತ್ಮ/ಜೀವನ ಚರಿತ್ರೆಗಳನ್ನು ಗಮನಿಸುವಾಗ ೧೯೬೭ನೆಯ ಇಸವಿಯನ್ನು ಒಂದು ಪ್ರಮುಖ ಸಂವತ್ಸರವೆಂದು ಭಾವಿಸಬಹುದಾಗಿದೆ. ಏಕೆಂದರೆ ಆ ವರ್ಷ ಮೈಕೇಲ್ ಹಾಲ್ರಾಯ್ಡ್ ಲಿಟ್ಟನ್ ಸ್ಟ್ರ್ಯಾಚಿ ಅವರು ಜೀವನಚರಿತ್ರೆಯನ್ನು ಬರೆದದ್ದು. ಹಾಲ್ರಾಯ್ಡ್ ತನ್ನ ಬರಹದಲ್ಲಿ ಸ್ಪಷ್ಟವಾಗಿ ತಿಳಿಸಿದ ಸ್ಟ್ರ್ಯಾಚಿ ಸಲಿಂಗಕಾಮಿ ಎಂದು. ಜೊತೆಗೆ ಆತನ (ಸ್ಟ್ರ್ಯಾಚಿಯ) ಸ್ನೇಹಿತರ ಲೈಂಗಿಕತೆಯೂ ಸಹ ಬಹಳ ಸಂಕೀರ್ಣವೂ ಆ ಕಾಲದಲ್ಲಿ ಪ್ರಚಲಿತವಿದ್ದ ಭಿನ್ನವೂ ಆಗಿದ್ದಿತು. ೧೯೬೦ರ ದಶಕದಲ್ಲಿ ಚಾಲ್ತಿಗೆ ಬಂದ ಮುಕ್ತ ಲೈಂಗಿಕತೆಯ ವಾತಾವರಣ ವ್ಯಕ್ತಿಗಳ ಲೈಂಗಿಕಾಸಕ್ತಿಯ ಬಗ್ಗೆ ಮುಜುಗರವಿಲ್ಲದೆ ಮಾತನಾಡುವಂತೆ ಪ್ರೇರೇಪಿಸಿತು. ಖಾಸಗಿ ಅವಕಾಶಗಳು ಅಥವಾ ಖಾಸಗಿತನದಲ್ಲಿ ರಹಸ್ಯವೇನೂ ಇಲ್ಲ ಎಂದು ನಂಬುವ ಸನ್ನಿವೇಶದಲ್ಲಿ ಸಂಶೋಧಕ ಒಬ್ಬರ ಬದುಕನ್ನು ವ್ಯಾಖ್ಯಾನಿಸುವ ಒತ್ತಡಕ್ಕೆ ಒಳಗಾಗುತ್ತಾನೆಯೇ ಹೊರತು ಬರೆ ದಾಖಲು ಮಾಡಲು ತೊಡಗುವುದಿಲ್ಲ.

ಬದಲಾದ ಪ್ರವೃತ್ತಿಯಲ್ಲಿ ಆತ್ಮ/ಜೀವನ ಚರಿತ್ರೆಯಲ್ಲಿ ಸಂಶೋಧಕ ವ್ಯಕ್ತಿಯನ್ನು ಹುಡುಕುವುದಕ್ಕೆ ಬದಲು ಓದುಗನನ್ನು ಮೆಚ್ಚಿಸುವ ಕ್ರಮವನ್ನು ಅನುಸರಿಸುತ್ತಾನೆ. ಒಂದು ಕಾಲದಲ್ಲಿ ಆ ವ್ಯಕ್ತಿಯ ಬಗೆಗೆ ಹೆಚ್ಚಿನ ಮಾಹಿತಿ ಅಗತ್ಯವೆಂದು ಅನಿಸಿದ್ದರೆ ಈಗ ಆ ವ್ಯಕ್ತಿಯನ್ನು ಒಂದು ತಿಳುವಳಿಕೆಯ ಪರಿಸರದಲ್ಲಿ ವ್ಯಾಖ್ಯಾನಿಸುವುದು ಹೇಗೆ ಎಂಬುದರ ಕಡೆ ಗಮನ ಹರಿಯತೊಡಗಿತು. ಆಧುನಿಕ ಆತ್ಮ/ಜೀವನ ಚರಿತ್ರೆಯನ್ನು ಕುರಿತಾದ ಅಧ್ಯಯನದಲ್ಲಿ ಬಹುತೇಕ ವೈಯಕ್ತಿಕ ಜೀವನ ಅಷ್ಟು ಮುಖ್ಯವಲ್ಲವೆಂಬ ವಿರೋಧಾಭಾಸದ

ತೀರ್ಮಾನವನ್ನು ತಲುಪಲಾಗುತ್ತಿದೆ. ಒಬ್ಬ ವ್ಯಕ್ತಿ ಒಂದು ನಿಗದಿತ ಪರಿಸರದಲ್ಲಿ ಹೇಗೆ ರೂಪಿತನಾದ ಎಂಬುದು ಮುಖ್ಯವಾಗುತ್ತದೆಯೇ ಹೊರತು, ಈ ಬಾಹ್ಯ ಪರಿಸ್ಥಿತಿಯನ್ನು ಹೊರತುಪಡಿಸಿ ಅವನ ಬಗ್ಗೆಯೇ ಬದುಕಲು ಸಾಧ್ಯವೇ ಎಂಬ ಪ್ರಶ್ನೆ ಗೌಣವಾಗುತ್ತದೆ. ಆತ್ಮ/ಜೀವನ ಚರಿತ್ರೆ ಒಬ್ಬ ವ್ಯಕ್ತಿಯ ಮೇಲೆಯೇ ಗಮನವನ್ನು ಕೇಂದ್ರೀಕರಿಸುವುದರಿಂದ ಈ ಪ್ರಕಾರದ ಲಕ್ಷಣವೆಂದರೆ ಅದು ದೌರ್ಬಲ್ಯವಾಗಿ ಪರಿಣಮಿಸುತ್ತದೆ. ಒಬ್ಬ ವ್ಯಕ್ತಿಯ ಬದುಕು ವೈಯಕ್ತಿಕತೆ ಹಾಗೂ ಸಾರ್ವಜನಿಕತೆಯ ಸಂಕೀರ್ಣ ಮಿಶ್ರಣ ಎಂದು ಬಗೆದಾಗಂತೂ ಈ ದೌರ್ಬಲ್ಯ ಇನ್ನೂ ಢಾಳಾಗಿ ಕಾಣುತ್ತದೆ. ಆತ್ಮ/ಜೀವನ ಚರಿತ್ರೆಯನ್ನು ಮಾನವಿಕಗಳಲ್ಲಾಗಲೀ ಅಥವಾ ಸಮಾಜ ವಿಜ್ಞಾನಗಳಲ್ಲಾಗಲೀ ಸಂಶೋಧನೆಯ ಸಾಧನವಾಗಿ ಬಳಸಬಹುದೆ ಎಂಬ ಪ್ರಶ್ನೆಯೂ ಮುಖ್ಯವಾಗುತ್ತದೆ. ಸುಪ್ರಸಿದ್ಧ ಹಾಲಿವುಡ್ ನಟಿ ಮೆರಿಲಿನ್ ಮಗ್ರೊ ಅವರ ಜೀವನ ಚರಿತ್ರೆಯನ್ನು ಸಾರಾ ಚರ್ಚ್‌ವೆಲ್ ಅನ್ನುವವರು ಬರೆದಿದ್ದಾರೆ (೨೦೦೪ ದ ಮೆನಿ ಲೈವ್ಸ್ ಆಫ್ ಮೆರಿಲಿನ್ ಮನ್ರೊ). ಅದರ ಪುಸ್ತಕ ಪರಿಚಯ ಬರೆಯುತ್ತ ಆಂಡ್ರ್ಯೂ ಒ'ಹಗಾನ್ ಹೀಗೆ ಹೇಳುತ್ತಾನೆ.

"ಕೆಲವು ಮಂದಿ ಇರುವುದೊಂದು ಹೊರಜಗತ್ತಿಗೆ ತೋರಿಸಿಕೊಳ್ಳುವುದೊಂದು. ಆ ಕಾರಣದಿಂದಲೇ ಮೆರಿಲಿನ್ ಮನ್ರೊ ಆಧುನಿಕ ಸಂಸ್ಕೃತಿಯ ಸಂತಳಾದದ್ದು. ಹಾಗಾಗಿ ಆ ವ್ಯಕ್ತಿಯ ವಾಸ್ತವ ಕಥೆಗಿಂತ ಕಥೆಯ ಬಗ್ಗೆ ಹೆಚ್ಚು ಆಸಕ್ತಿ ತಾಳಿ ಎಂದು ನಮಗೆ ತಿಳಿಸುತ್ತಾರೆ..... ಏಕೆಂದರೆ ಒಬ್ಬ ವ್ಯಕ್ತಿಯ ವಿಷಯವಾಗಿ ಎಲ್ಲವನ್ನೂ ಹೇಳಿಯಾದ ಮೇಲೆ ಹೊಸ ಬರಹಗಾರರಿಗೆ ಬರೆಯಲು ಏನಿರುತ್ತದೆ – ಹೇಳಿದ್ದನ್ನೆಲ್ಲ ಅಲ್ಲಗೆಳೆಯುವುದಲ್ಲದೆ?"

ಒ'ಹಗಾನ್ ಕೇಳುವುದೇನೆಂದರೆ ಆತ್ಮ/ಜೀವನ ಚರಿತ್ರೆಗಳಲ್ಲಿ ತಥ್ಯಾಂಶದ ಸ್ಥಾನವೇನು? ಎಂದು. ಆತನ ತೀರ್ಮಾನ ಇದು: "ಬದುಕಿನ ನಂತರದ ಬದುಕು ಜೀವನಕ್ಕಿಂತ ಹೆಚ್ಚು ಆಸಕ್ತಿದಾಯಕವಲ್ಲ; ಅದು ಒಂದು ಮುಂದುವರಿಯಷ್ಟೇ ಎಂದು ಹೇಳಬಹುದು." ಆ ಅರ್ಥದಲ್ಲಿ ನಮ್ಮ ಬದುಕಿನ ಯಜಮಾನಿಕೆಯನ್ನು ನಾವು ಇನ್ನೊಬ್ಬರಿಗೆ ಒಪ್ಪಿಸಿಬಿಡುತ್ತೇವೆಯಲ್ಲವೆ? ಎಂದು ಆತ ಕೇಳುತ್ತಾನೆ.

ಮೆರಿಲಿನ್ ಮನ್ರೊ, ರಾಜಕುಮಾರಿ ಡಯಾನಾ ರೀತಿಯಲ್ಲೇ ಜನಸ್ತೋಮದ ಆರಾಧ್ಯ ದೈವವಾದಳು, ಅದ್ಭುತವೂ ಆದಳು. ಇಪ್ಪತ್ತು ಹಾಗೂ ಇಪ್ಪತ್ತೊಂದನೆಯ ಶತಮಾನಗಳಿಗೆ ಸೇರಿದ ಈ ತರಹದ ವ್ಯಕ್ತಿಗಳು ನಮ್ಮ ರೀತಿಯಲ್ಲೇ ಇದ್ದರೂ ತಮ್ಮ ಬಗೆಗಿನ ಫ್ಯಾಂಟಸಿಗಳನ್ನೂ ಅಭಿನಯಿಸಿ ತೋರಿಸಿದರು. ಭಾವನಾತ್ಮಕ ಬದುಕು ನಿರ್ಣಾಯಕವಾದ ಸಂಗತಿ ಎನ್ನುವ ಹಾಗೆ ಸಾಮಾಜಿಕ ಪ್ರಪಂಚ ನಮ್ಮನ್ನು ನಾವು ರೂಪಿಸಿಕೊಳ್ಳಲು ಹಲವು ಮಾರ್ಗಗಳನ್ನು ತೆರೆದು ತೋರುತ್ತದೆ. ಈ ಕಾರಣದಿಂದ ನಮ್ಮ ಬದುಕನ್ನಾಗಲೀ ಇತರರ ಬದುಕನ್ನಾಗಲಿ ಅರ್ಥಪೂರ್ಣವಾಗಿ ವ್ಯಾಖ್ಯಾನಿಸಲು ಕಷ್ಟ ಸಾಧ್ಯವಾಗಿದೆ. ಮೆರಿಲಿನ್ ಮನ್ರೊ ಬಗ್ಗೆಯಾಗಲಿ ಅಥವಾ ರಾಜಕುಮಾರಿ ಡಯಾನಾ ಬಗ್ಗೆಯಾಗಲಿ ನಾವು ಅರಿತುಕೊಳ್ಳಬೇಕಾದ ಸಂಗತಿಯೆಂದರೆ ಅವರ ಬದುಕಿನ ಕೆಲವು 'ಸಂಗತಿಗಳು' ನಮಗೆ ಎಂದೆಂದೂ ನಿಗೂಢವಾಗಿ ಉಳಿಯುತ್ತವೆಯೆಂಬುದು. ಮೆರಿಲಿನ್ ಮನ್ರೊ ಮತ್ತು ಡಯಾನಾ ಸಮಕಾಲೀನ ಜಗತ್ತಿನಲ್ಲಿ 'ಗ್ಲೋಬಲ್ ಐಕಾನ್' ಆದರು. ಅದನ್ನು ತಿಳಿಯಲು ತವಕ ಪಡುವುದೂ ಸಹ ಆಧುನಿಕ ಪ್ರಪಂಚದ ಒಂದು 'ಅಗತ್ಯ'ವಾಗಿ ಪರಿಣಮಿಸಿರುವುದು ಸಹಜವೇ.

ಆತ್ಮ/ಜೀವನ ಚರಿತ್ರೆ ಪ್ರಾಟೆಸ್ಟೆಂಟ್ ಸಮಾಜದಲ್ಲಿ ಹೆಚ್ಚು ಪ್ರಚಲಿತವಿರುವುದನ್ನು ಗಮನಿಸಬಹುದಾಗಿದೆ. ಇದಕ್ಕೆ ಕಾರಣ ಪ್ರಾಟೆಸ್ಟೆಂಟ್‌ವಾದ ವ್ಯಕ್ತಿಗಳು ಹೆಚ್ಚು ಆತಂಕಗೊಳ್ಳುವಂತೆ ಮಾಡಿದ್ದು. ನಿವೇದನೆಯ ಅವಕಾಶವಿರುವುದು ಕ್ಯಾಥೊಲಿಕ್‌ರಲ್ಲಿ ; ಸಂತರನ್ನು ಕುರಿತು ಪ್ರಾರ್ಥನೆ ಸಲ್ಲಿಸಬಹುದಾದ್ದು ಅಲ್ಲಿಯೇ. ಪಶ್ಚಾತ್ತಾಪದ ಮೂಲಕ ಪಾಪವನ್ನು ಪರಿಹರಿಸಿಕೊಳ್ಳಬಹುದಾದ ಅವಕಾಶ ಅಲ್ಲುಂಟು. ಹಾಗಾಗಿ ಪ್ರಾಟೆಸ್ಟೆಂಟರು ಇವುಗಳ ಗೈರುಹಾಜರಿಯಲ್ಲಿ ಅತ್ಯಂತ ನೈಷ್ಠಿಕ ಜೀವನವನ್ನು ಬಾಳಬೇಕಾದಂಥ ಪ್ರಮೇಯ ಒದಗಿತು. ಹಾಗಾಗಿಯೇ ಮ್ಯಾಕ್ಸ್‌ವೆಬರ್ ಹೇಳುವುದು:

ವ್ಯಕ್ತಿ ಮುಕ್ತಿಯನ್ನು ಹೊಂದಬೇಕಾದರೆ "He was to follow his path alone to meet a destiny which had been decreed for him from eternity. No one could help him." (The Protestant Ethic and the Spirit of Capitalism, ೧೯೭೬)

ಹಾಗಾಗಿ ಮಹಿಳೆಯರು ಹಾಗೂ ಪುರುಷರು ತಾವು ಹೊಂದಿರುವ ಭಯದಿಂದ ಬಿಡುಗಡೆ ಪಡೆಯಲಾಗದೆ ಮುಂದುವರಿದಿದ್ದಾರೆ. ತತ್ವಜ್ಞಾನಿಗಳು ಅವರಿಗೆ ಒತ್ತಿ ಹೇಳುವುದೇನೆಂದರೆ ಎದುರಿಗಿರುವ ಗಾಢಾಂಧಕಾರ ಕರಗುವಂಥದಲ್ಲ ; ಇದರ ಗಾಢತೆ ಇನ್ನೂ ಹೆಚ್ಚುವಂಥದ್ದು. ಅದೇ ರೀತಿ ರಾಜಕಾರಣಿಗಳು ಈ ಅಂಧಕಾರವನ್ನು ನಿಭಾಯಿಸಬೇಕಾದ್ದು ನಿಮ್ಮ ಕರ್ತವ್ಯ, ನಿಮ್ಮ ತಲೆನೋವು ಎನ್ನುತ್ತಾರೆ. ಆಧುನಿಕೋತ್ತರತೆ ಎನ್ನುವುದು ಈ ಭಯವನ್ನೇನೂ ತಗ್ಗಿಸಿಲ್ಲ. ಆಧುನಿಕೋತ್ತರತೆ ಈ ಭಯವನ್ನು ಖಾಸಗಿಗೊಳಿಸಿತು. ಭಯವನ್ನು ಖಾಸಗಿಗೊಳಿಸಿದರೆ ಮಾನಸಿಕ ಶಾಂತಿ ದೊರೆಯದು. ಆದರೆ ವರ್ಗಗಳು, ರಾಷ್ಟ್ರಗಳು ಅಥವಾ ಜನಾಂಗಗಳು ಕಾದಾಡುವುದು ಏತಕ್ಕೆ ಎಂಬುದನ್ನೂ ವಿವರಿಸಬಲ್ಲದು.

ಇಪ್ಪತ್ತೊಂದನೆಯ ಶತಮಾನದಲ್ಲಿ ಪಶ್ಚಿಮ ಒಳಗಾಗಿರುವ ಸಂಕಟಗಳಲ್ಲಿ ಸಾಧನೆ ಮಾಡಲೇಬೇಕೆಂಬ ಒತ್ತಡ ಬಹಳ ಪ್ರಮುಖವಾದದ್ದು. ಇಂಥ ಸನ್ನಿವೇಶದಲ್ಲಿ ವ್ಯಕ್ತಿಯ ನೈತಿಕ ವರ್ತನೆಯ ಬಗ್ಗೆ ಯಾರಿಂದಲೂ ನಿಗಾ ಇಡಲಾಗುವುದಿಲ್ಲ ; ಹಾಗಾಗಿ ಲೈಂಗಿಕತೆ, ಮಾದಕ ವಸ್ತುಗಳು ಹಾಗೂ ರಾಕ್ ಅಂಡ್ ರೋಲ್ ಜಯಗಳಿಸಿವೆ. ಈ ಹಿನ್ನಲೆಯಲ್ಲಿ ಎಲಿಜಬೆತ್ ವಿಲ್ಸನ್ ಎಂಬುವವರು 'ಈಗ ನಾವೆಲ್ಲ ಸುಖವಿಲಾಸಿಗಳು' ಎಂಬ ಮಾತು ಅರ್ಥವತ್ತಾಗಿದೆ. ನಮ್ಮ ಮನಸ್ಸು, ನಮ್ಮ ಶರೀರ ಖಾಸಗಿ ಸ್ಥಳದಲ್ಲಿ ತಮ್ಮ ಖಾಸಗಿ ಹಾದಿಯನ್ನು ತುಳಿಯಬಹುದು ; ಆದರೆ ಸಾರ್ವಜನಿಕ ಸ್ಥಳದಲ್ಲಿ ಬಂಡವಾಳಶಾಹಿಯ ನಿರೀಕ್ಷೆಯನ್ನು ತಣಿಸಲೇಬೇಕಾದ ಅನಿವಾರ್ಯತೆಯನ್ನು ಎದುರಿಸುತ್ತವೆ.

ಆತ್ಮ/ಜೀವನ ಚರಿತ್ರೆ ಸಂಶೋಧನೆಗೆ ವಸ್ತುವಾಗುವ ಹಿನ್ನೆಲೆಯಲ್ಲಿ ನಾವು ಗಮನಿಸಬೇಕಾದ ಸಂಗತಿಯೆಂದರೆ ಆತ್ಮ/ಜೀವನ ಚರಿತ್ರೆಯ ಪ್ರಕಾರ ಹೆಚ್ಚು ಜನಪ್ರಿಯವಾದಂತಿಲ್ಲ ಇದು ವ್ಯಕ್ತಿಯ ಬಗ್ಗೆ ಹೆಚ್ಚು ಹೇಳದೆ ವ್ಯಕ್ತಿ ಮತ್ತು ಪ್ರಸ್ತುತ ಶತಮಾನದ ನಡವಳಿಕೆಯ ಮಧ್ಯದ ಸಂಬಂಧದ ಬಗ್ಗೆ ಹೇಳತೊಡಗುತ್ತದೆ. ಜೇಮ್ಸ್ ಬಾಸ್‌ವೆಲ್, ಸ್ಯಾಮುಯೆಲ್ ಜಾನ್ಸನ್‌ನ ಬಗ್ಗೆ ಬರೆದಾಗ ಆತನಿಗೆ ತನ್ನ ವಸ್ತುವಿನ ಬಗ್ಗೆ ಒಂದು ಖಚಿತವಾದ ನಿಲುವಿತ್ತು. ಇತರರ ಜೀವನ ಚರಿತ್ರೆಗಳನ್ನು ಗಮನಿಸುವಾಗ ಈ ಬಗೆಯ ಖಚಿತತೆ ನಮಗೆ ಕಾಣದಿರಬಹುದು. ಇದಕ್ಕೆ ಕಾರಣ ಜೇಮ್ಸ್ ಬಾಸ್‌ವೆಲ್ ಸಹಜ ಸನ್ನಿವೇಶ ('ನಾರ್ಮಲ್')ವೆಂದು ಚಿತ್ರಿಸಿರುವುದು ಇತರರ ಕಾಲಕ್ಕೆ ಸಹಜ ಸನ್ನಿವೇಶವಾಗಿ ಉಳಿಯದಿರಬಹುದು. ಆತ್ಮ/ಜೀವನಚರಿತ್ರೆಯನ್ನು ಅಭ್ಯಾಸ ಮಾಡುವಾಗ ಗಮನಿಸಬೇಕಾದ

ಮುಖ್ಯ ಅಂಶ ಎಂದರೆ ಸುತ್ತುವರೆದ ಸಂಸ್ಕೃತಿ ವ್ಯಕ್ತಿ ಜೀವನದಲ್ಲಿ ವಹಿಸಿದ ಪಾತ್ರ ಎಂಥದು ಎಂಬುದನ್ನು ಗುರುತಿಸದೆ ಇರುವುದು. ಒಂದು ತರಹ ಸ್ವಯಂಭೂ ಪ್ರಜ್ಞೆ ಇಂಥ ಆತ್ಮ/ಜೀವನಚರಿತ್ರಕಾರರನ್ನು ನಿಯಂತ್ರಿಸುತ್ತಿರುತ್ತದೆ. ನಮಗೆ ಒಂದು ವೈಯಕ್ತಿಕ ಬದುಕು ಇರುವಂತೆಯೇ ಒಂದು ಸಾಮಾಜಿಕ ಬದುಕು ಇರುತ್ತದೆ. ವ್ಯಕ್ತಿಗಳು ಆತ್ಮ ಚರಿತ್ರೆಯನ್ನು ಬರೆಯುವಾಗ ಒಂದು ನಿರ್ದಿಷ್ಟ ಸಂಸ್ಕೃತಿಯ ವಿರುದ್ಧ ಹೋರಾಡಿದವರಂತೆ ತಮ್ಮನ್ನು ತಾವು ಚಿತ್ರಿಸಿಕೊಳ್ಳುತ್ತಾರೆ. ಸಿಮೊನ್ ದಿ ಬೊವಾ ಮೆಮಾಯ್ರ್ಸ್ ಆಫ್ ಎ ಡ್ಯೂಟಿಫುಲ್ ಡಾಟರ್ ಬರೆದಾಗ ಒಂದು ನಿರ್ದಿಷ್ಟ ಸಾಮಾಜಿಕ ಸನ್ನಿವೇಶದಿಂದ ಪಲಾಯನ ಮಾಡುತ್ತಿದ್ದೇನೆ ಎಂಬ ಉಲ್ಲಾಸದಲ್ಲಿ ದಾಖಲಿಸಿರುವರು. ಒಂದು ಬೌದ್ಧಿಕ ವಲಯದ ಬದುಕಿನ ಕಡೆಗೆ ನಾನು ಚಲಿಸುತ್ತಿದ್ದೇನೆ ಎಂಬ ಹರ್ಷ ಆ ಬರವಣಿಗೆಯ ಉದ್ದಕ್ಕೂ ಗೋಚರವಾಗುತ್ತಿದೆ. ಆದರೆ ಮುಂದೆ ಸಾಗುತ್ತಿರುವ ಹಾದಿ ಅಥವಾ ಎಟುಕಿಸಿಕೊಂಡ ತಾಣ ಬಿಟ್ಟು ಬಂದ ತಾಣದ ಒಂದು ಭಾಗವೇ ಆಗಿದೆ ಎಂಬ ಸತ್ಯವನ್ನು ಈ ಬರಹ ದಾಖಲು ಮಾಡುವುದಿಲ್ಲ.

ಆತ್ಮ/ಜೀವನ ಚರಿತ್ರೆಗಳ ಪ್ರಾಮುಖ್ಯತೆ ಇರುವುದು ಮನುಷ್ಯರ ಅತಿಯಾದ ಸಾಮಾಜಿಕ ವಿವರಗಳ ವಿರುದ್ಧ ಅವು ರಕ್ಷಣೆಯ ಗೋಡೆಗಳಿಂತಿರುವ ಕಾರಣದಿಂದ. ವ್ಯಕ್ತಿಗಳನ್ನು ವರ್ಗ, ಲಿಂಗ, ಜನಾಂಗಗಳಡಿಯಲ್ಲಿ ಸೇರ್ಪಡೆ ಮಾಡಿದೆವೆಂದರೆ ವ್ಯಕ್ತಿಗಳ ನಡುವಿನ ವ್ಯತ್ಯಾಸವನ್ನು ನಾವು ಮರೆಮಾಡಿಬಿಡುತ್ತೇವೆ; ಅಷ್ಟೇ ಅಲ್ಲ ಸಾಮಾಜಿಕ ಜೀವನದ ಪಟುತ್ವವನ್ನೂ ಕಡೆಗಾಣಿಸುತ್ತೇವೆ.

ಅಮೆರಿಕನ್ ಕವಿಯಿತ್ರಿ ಸಿಲ್ವಿಯಾ ಪ್ಲಾತ್ ಅವರ ಬಗ್ಗೆ ಬಂದಿರುವ ಬೇರೆ ಬೇರೆ ಜೀವನಚರಿತ್ರೆಗಳನ್ನು ಗಮನಿಸುವಾಗ ಕಂಡುಬರುವ ಸಂಗತಿಯೆಂದರೆ ಸಾಮಾಜಿಕ ಪ್ರಪಂಚ ಆಕೆಯ ಬದುಕಿನ ಹೊರಗೇ ಉಳಿದಿರುವುದು. ಜೆನೆಟ್ ಮ್ಯಾಲ್ಕಮ್ ಬರೆದಿರುವ ಪ್ಲಾತ್‌ಳ ಜೀವನ ಚರಿತ್ರೆ **ದ ಸೈಲೆಂಟ್ ವುಮನ್** ಇದಕ್ಕೆ ಒಂದು ಉತ್ತಮ ಉದಾಹರಣೆ. ಸಿಲ್ವಿಯಾ ಪ್ಲಾತ್‌ಳ ಗಂಡ ಟೆಡ್ ಹ್ಯೂಸ್ ಈ ಜೀವನಚರಿತ್ರೆಯಲ್ಲಿ ಒಬ್ಬ ಒಳ್ಳೆಯ ವ್ಯಕ್ತಿಯಾಗಿ ಹೊರಹೊಮ್ಮುತ್ತಾನೆ ; ಲೇಖಕಿ ಪ್ಲಾತ್‌ಳನ್ನು ತಪ್ಪಿತಸ್ಥಳನ್ನಾಗಿ ಚಿತ್ರಿಸಿದ್ದಾಳೆ. "The dynamics of plath's relationship to the English social world, and English cultural expectations, is seldom emphasised in accounts of her life" (Mary Evoms : "Auto/Biography as a Research Methods.")

ಅಂದ ಮೇಲೆ ಹೆಜ್ಜೆ ಹೆಜ್ಜೆಗೂ ಸಿಲ್ವಿಯಾ ಪ್ಲಾತ್ ಬದುಕಿದ್ದ ಪರಿಸರವನ್ನೇ ಗಮನದಲ್ಲಿರಿಸಿಕೊಂಡು ಅವಳ ಜೀವನ ಚಿತ್ರವನ್ನು ಕಟ್ಟಿಕೊಡಬೇಕೆಂದು ಅರ್ಥವಲ್ಲ ; ಆದರೆ ಆಕೆ ನಿರ್ವಾತದಲ್ಲಿ ಬದುಕಿರದಿದ್ದ ಕಾರಣ ಸುತ್ತಮುತ್ತಲ ಪ್ರಪಂಚದ ಚಿತ್ರಣ ನೀಡಬೇಕಾದ್ದೂ ಅಗತ್ಯವೆ. ಪ್ಲಾತ್‌ಳ ಜೀವನ ಚರಿತ್ರೆಗಳಲ್ಲಿ ಅದು ಕಾಣದಾಗಿದೆ.

ಪ್ಲಾತ್ ಮತ್ತು ಹ್ಯೂಸ್‌ರ ದಾಂಪತ್ಯದಲ್ಲಿ ವೈಯಕ್ತಿಕವಾದದ್ದು ಮತ್ತು ಸಾಂಸ್ಕೃತಿಕವಾದದ್ದು ಬೆಸೆದಿರುವುದನ್ನು ನಾವು ಕಾಣುತ್ತೇವೆ. ಈ ಪತಿ–ಪತ್ನಿಯರ ಸಂಬಂಧದ ಬಗ್ಗೆ ಬಹಳಷ್ಟು ವ್ಯಾಖ್ಯಾನ ಲಭ್ಯವಿರುವುದಾದರೂ ಯುದ್ಧೋತ್ತರ ಬ್ರಿಟನ್ ಮತ್ತು ಯುದ್ಧೋತ್ತರ ಅಮೇರಿಕದ ಬಗ್ಗೆ ಕೊಂಚವೂ ಉಲ್ಲೇಖವಿಲ್ಲ ; ಇದು ಆಶ್ಚರ್ಯಕರವಾದ ಅಂಶ. ಪ್ಲಾತ್‌ಳ ಸಾಹಿತ್ಯದಲ್ಲಿ ಅತಿ/ಅಭಾವ, ವೈಯಕ್ತಿಕತೆ/ಸಾಮುದಾಯಕತೆ, ಸಾಮಾಜಿಕ ಜನತಂತ್ರ/ ರಾಜಕೀಯ ಜನತಂತ್ರ ಇತ್ಯಾದಿ ದ್ವಂದ್ವಗಳ ವಿಚಾರ ಪ್ರಸ್ತಾಪವೇ ಆಗುವುದಿಲ್ಲ. ಹಾಗಾಗಿ ಜೆನೆಟ್ ಮ್ಯಾಲ್ಕಮ್ ಬರೆದಿರುವ **ದ ಸೈಲೆಂಟ್ ವುಮೆನ್**‌ನಲ್ಲಿ ಪ್ಲಾತ್ ಬ್ರಿಟೀಷ್

ಸಂಸ್ಕೃತಿಯೊಡನೆ ಹೊಂದಾಣಿಕೆ ಮಾಡಿಕೊಳ್ಳಲು ಅಸಾಧ್ಯವಾದ ಪರಿಸ್ಥಿತಿಯೇ ಚಿತ್ರಿತವಾಗಿದೆ. ದೇಶೀಯರು ವಿದೇಶೀಯರನ್ನು ಒಳಗೆ ಬಿಟ್ಟುಕೊಡುವುದಿಲ್ಲ.

ಆತ್ಮ/ಜೀವನ ಚರಿತ್ರೆಯಲ್ಲಿ ಸಾಮಾಜಿಕ ಜಗತ್ತು ಪಾತ್ರಗಳ ಪರಿಧಿಯಿಂದ ಹೊರಗೆ ಉಳಿಯುವ ಸಾಧ್ಯತೆಯೇ ಹೆಚ್ಚು. 'Dynamic of the social world' ಆತ್ಮ ಚರಿತ್ರೆಯಲ್ಲಿ ಗೌಣವಾಗಲು ಏನು ಕಾರಣವೊ ತಿಳಿಯದು. ವ್ಯಕ್ತಿಗಳಾದ ನಮ್ಮನ್ನ ಪಶ್ಚಿಮ ಸಾಮಾಜಿಕ ನಿಯೋಗಿಗಳೆಂದು ಅಷ್ಟು ಸುಲಭವಾಗಿ ಬಗೆಯಲಾರದು ; ಆದರೆ ವೈಯಕ್ತಿಕ ಚೇತನವನ್ನು ಜತನಗೊಳಿಸಿಕೊಳ್ಳುವತ್ತ ಕೆಲವರು ಜಾಗ್ರತರಾಗಿರುವರು. ಸಿಲ್ವಿಯಾ ಪ್ಲಾತ್ ನಿಸ್ಸಂದೇಹವಾಗಿ ಈ ಗುಂಪಿಗೆ ಸೇರಿದ ವ್ಯಕ್ತಿಯಾಗಿದ್ದಾಳೆ. ಪ್ಲಾತ್ ೧೯೬೩ನೆಯ ಇಸವಿಯಲ್ಲಿ ತೀರಿಕೊಂಡಾಗ ಆಕೆಗೆ ಕೇವಲ ಮೂವತ್ತುವರ್ಷ ವಯಸ್ಸು. ಆ ವೇಳೆಗೆ ಆಕೆಯ ಬಗ್ಗೆ ಏನೇನೂ ಬರಹ ಬಂದಿರಲಿಲ್ಲ ; ಆದರೆ ಆಕೆ ಮರಣ ಹೊಂದಿದ ನಂತರ ಚಿಕ್ಕ ವಯಸ್ಸಿಗೆ ತೀರಿಕೊಂಡ ಸುಪ್ರಸಿದ್ಧ ರೊಮ್ಯಾಂಟಿಕ್ ಕವಿಗಳ ಸಾಲಿಗೆ ಆಕೆ ಸೇರಿ ಹೋದರು.

ಆತ್ಮಚರಿತ್ರೆ ಅಥವಾ ಜೀವನಚರಿತ್ರೆಯೇ ಸಂಶೋಧನೆಗೆ ಮೂಲ ಎನ್ನುವ ಸಂದರ್ಭದಲ್ಲಿ ಲೇಖಕ, ವಸ್ತು ಮತ್ತು ಸಂಸ್ಕೃತಿ ಮುಖ್ಯವಾಗಬೇಕು. ಏಕೆಂದರೆ ಲೇಖಕರಾದ ನಾವು ಕೇವಲ ಸಮಾಜವನ್ನು ನಿರ್ಭಾವುಕವಾಗಿ ನೋಡುತ್ತಿರುವ ನೋಟಕರಲ್ಲ, ಅಥವಾ ಬೇರೊಬ್ಬ ವ್ಯಕ್ತಿಯ ಬಗ್ಗೆ ಮಾಹಿತಿಯನ್ನು ಸಂಗ್ರಹಿಸುತ್ತಿರುವ ಸಂಗ್ರಹಕಾರರೂ ಅಲ್ಲ. ನಾವು ಬದುಕುತ್ತಿರುವ ಸಮಾಜದ ಮೌಲ್ಯಗಳನ್ನು, ಚಿಂತನದ್ರವ್ಯವನ್ನು ನಾವು ಹೊತ್ತು ಸಾಗುತ್ತಿರುತ್ತೇವೆ. ಇದನ್ನು ನಾವು ಅರ್ಥಮಾಡಿಕೊಂಡರೆ ಆತ್ಮ/ಜೀವನ ಚರಿತ್ರೆಯ ಲೇಖಕರು 'ಪ್ರಚ್ಛನ್ನ ವಸ್ತು'ಗಳಾಗಿ ಗೋಚರವಾಗತೊಡಗುತ್ತಾರೆ. ಕೆಲವು ಲೇಖಕರು ಇತರ ಲೇಖಕರಿಗಿಂತ ಹೆಚ್ಚು ಪಾರದರ್ಶಕವಾಗಿರುತ್ತಾರೆ.

ಸಿಲ್ವಿಯಾ ಪ್ಲಾತ್‌ಳ ಜೀವನ ಚರಿತ್ರೆಯನ್ನು ಬರೆದಿರುವ ಇನ್ನೊಬ್ಬ ಲೇಖಕಿ/ಲೇಖಕಿ ಆ್ಯನ್ ಸ್ಟೀವನ್‌ಸನ್ ಪ್ಲಾತ್‌ಳ ಹೇಳುವ ಮಾತೊಂದು ಹೀಗಿದೆ: "ಪ್ಲಾತ್ ತನ್ನ ಮನಸ್ಸು ಒಪ್ಪಿದ ವಲಯ ವಿಹಾರಿಯಾಗಿ ಪ್ಲಾತ್ ಕಾಣಿಸಿಕೊಳ್ಳುತ್ತಾಳೆ : ಮದುವೆ, ತಾಯ್ತನ, ನೇರ್ಪಾಗಿ ಕಾಪಿಟ್ಟುಕೊಂಡ 'ಗೃಹಕೃತ್ಯ'. ಆ ಗಾಜಿನ ಪಂಜರದಲ್ಲಿ ಬಂದಿಯಾಗಿಸಿದ್ದು ಕೇವಲ ತಪ್ಪು ಕಲ್ಪನೆಯಲ್ಲ ಒಂದು ತರಹ ಅಂಧತ್ವ, ಅಪೂರ್ಣವಾದ ಕಲ್ಪನೆ." ಸಿಲ್ವಿಯಾ ಪ್ಲಾತ್‌ಳನ್ನು ಅತ್ಯಂತ ನಿರ್ದಯವಾಗಿ ಸ್ಟೀವೆನ್ಸನ್ ಟೀಕೆ ಮಾಡಿರುವುದು ಇಲ್ಲಿ ಕಾಣುತ್ತದೆ. ಹಾಗಾಗಿ ವಸ್ತುನಿಷ್ಠವಾಗಿ ಪ್ಲಾತ್‌ಳ ಜೀವನವನ್ನು ಓದುಗರಿಗೆ ಒದಗಿಸುವುದಕ್ಕೆ ಬದಲಾಗಿ ಆಕೆಯೇ ಪ್ಲಾತ್‌ಳನ್ನು ಎದುರಾಳಿಯನ್ನಾಗಿ ಮಾಡಿಕೊಂಡು ಕದನಕ್ಕೆ ದುಮುಕಿದಂತೆ ಭಾಸವಾಗುತ್ತದೆ.

ಆತ್ಮ/ಜೀವನ ಚರಿತ್ರೆಗಳಲ್ಲಿ ಪ್ರಚ್ಛನ್ನ ವಸ್ತುಗಳನ್ನು (hidden subject) ಅರ್ಥ ಮಾಡಿಕೊಳ್ಳುವುದು ಒಂದು ಬಗೆಯಾದರೆ ಕೃತಿಗಳ ಸರಹದ್ದುಗಳನ್ನು ಗುರುತಿಸುವುದೂ ಅಷ್ಟೇ ಮುಖ್ಯ. ಜೀವನ ಚರಿತ್ರೆಗಳಲ್ಲಿ ಮೌನದ ವಲಯಗಳಿರುತ್ತವೆ. ಹೇಳದೇ ಇರುವುದು, ಹೇಳಲಾಗದ್ದು ಹಾಗೂ ನಾವು ಎಂದು ಅರ್ಥಮಾಡಿಕೊಳ್ಳಲಾಗದ್ದು. ಸ್ಟೀವೆನ್ಸನ್ ಬರೆದಿರುವ ಜೀವನ ಚರಿತ್ರೆಯಲ್ಲಿ ಟೆಡ್ ಹ್ಯೂಸ್ ತಪ್ಪನ್ನೇ ಮಾಡದವನಾಗಿ ಗೋಚರಿಸುತ್ತಾನೆ. ಇದರಿಂದ ಏನು ತಿಳಿಯುತ್ತದೆ ಎಂದರೆ ಜೀವನ ಚರಿತ್ರಕಾರರು ತಮ್ಮ ಪಾತ್ರಗಳನ್ನ ನಿಖರವಾಗಿ ನಾಯಕರಂತೆ, ನಾಯಕಿಯರಂತೆ ಅಥವಾ ಖಳನಾಯಕರಂತೆ ಚಿತ್ರಿಸಬಲ್ಲರು. ಈ ತರಹ ಒಮ್ಮೆ ಪಾತ್ರಗಳನ್ನು ಎರಕದಲ್ಲಿ ಹುಯ್ದರೆ ಆಮೇಲೆ ಅವರನ್ನು ಬದಲಾಯಿಸಲು ಸಾಧ್ಯವೇ ಇಲ್ಲ.

ಆತ್ಮ/ಜೀವನ ಚರಿತ್ರೆ ಯಾವಾಗಲೂ ಪಾತ್ರಗಳು ಬದುಕುತ್ತಿರುವ ಪರಿಸರವನ್ನು ಸ್ಪಷ್ಟವಾಗಿಯೇ ನೀಡಬೇಕಾಗುತ್ತದೆ. ಸುತ್ತುವರೆದಿರುವ ಸಾಮಾಜಿಕ ಪ್ರಪಂಚವನ್ನು ಮರೆಮಾಚುವ ಜೀವನಚರಿತ್ರಕಾರರು ನಿಜವನ್ನು ನುಡಿಯುತ್ತಿರುವುದಿಲ್ಲ. ಪ್ರಜ್ಞಾ ಪೂರ್ವಕವಾಗಿ ಅವರು ಮರೆಮಾಚುತ್ತಿರುವ ಸಂಗತಿಯೇ ಬದಲಾವಣೆ ಮತ್ತು ಸೃಜನಶೀಲತೆಯ ಮೂಲನೆಲೆಯನ್ನು ನಮಗೆ ತಿಳಿಸಬಲ್ಲದು ಎಂಬುದೂ ಸತ್ಯವೇ.

ಹೀಗೆ ಪಾಶ್ಚಾತ್ಯ ಸಂಶೋಧನಾ ಪ್ರಪಂಚದಲ್ಲಿ "ಆತ್ಮ/ಜೀವನ ಚರಿತ್ರೆ"ಯಂತೆಯೇ "ಮೌಖಿಕ ಚರಿತ್ರೆ" ಸಂಶೋಧನಾ ವಿಧಾನವಾಗಬಹುದು; "ದೃಶ್ಯೀಯ ಮಾನವಶಾಸ್ತ್ರ" ಮತ್ತು "ದೃಶ್ಯೀಯ ಸಮಾಜಶಾಸ್ತ್ರ"ವೆಂಬ ಮಾನವಿಕಗಳಲ್ಲಿ "ದೃಶ್ಯೀಯ ವಿಧಾನಗಳು" ಮುಖ್ಯವಾಗುತ್ತದೆ. "ಕಥನ ವಿಶ್ಲೇಷಣೆ" ಇನ್ನೊಂದು ಪ್ರಮುಖವಾದ ವಿಧಾನ. "ಪ್ರಮಾಣ ವಿಧಾನ" (Quantitative Method) ಅಷ್ಟೇ ಪರಿಣಾಮಕಾರಿ ವಿಧಾನವಾಗಿದೆ. "ಪಠ್ಯೀಯ ವಿಶ್ಲೇಷಣೆ" ಸಂಶೋಧನಾ ವಿಧಾನವಾಗಿ ; "ಸೃಜನಶೀಲ ಬರವಣಿಗೆ" ಇನ್ನೊಂದು ವಿಧಾನವಾಗಿ – ಹೀಗೆ ಹಲವು ಸಾಧ್ಯತೆಗಳನ್ನು ಅನ್ವೇಷಣೆ ಮಾಡಿದ್ದಾರೆ.

* * * *

ಭೂಗೋಳ ವಿಜ್ಞಾನ ನಕ್ಷೆ ಮತ್ತು ಛಾಯಾಚಿತ್ರಗಳನ್ನು ತನ್ನ ಯೋಜನೆಗಾಗಿ ಎಂದಿನಿಂದಲೂ ಪ್ರಧಾನವಾಗಿ ಬಳಸುತ್ತಾ ಬಂದಿದೆ. ಅದೇ ರೀತಿ ಭೌತವಿಜ್ಞಾನಗಳೂ ಸಹ ಚಿತ್ರಗಳನ್ನು ಉಪಯೋಗಿಸಿ ತನ್ನ ಸಂಶೋಧನೆಗೆ ಪುರಾವೆ ಒದಗಿಸುತ್ತಾ ಇವೆ. ಸುದ್ದಿ ಚಿತ್ರಗಳನ್ನು ಬಿಂಬಿಸುವ ಭಾವಚಿತ್ರಗಳು ಮಾನವಶಾಸ್ತ್ರ ವಿಧಾನದಲ್ಲಿ ಬಳಕೆಯಾಗುತ್ತಿವೆ ; ಹಾಗಾಗಿ ವಿಜ್ಞಾನ ಮತ್ತು ವಿಜ್ಞಾನ ಅಧ್ಯಯನಗಳ ಗಡಿಗಳಲ್ಲಿರುವವರು ಇದನ್ನು ಹೆಚ್ಚು ಹೆಚ್ಚು ಚಾಲ್ತಿಗೆ ತರುತ್ತಿದ್ದಾರೆ. ಕಲಾ ಚರಿತ್ರಕಾರರು ವೈಜ್ಞಾನಿಕ ಚಿತ್ರಗಳನ್ನು ಅಭ್ಯಸಿಸುವ ಕ್ರಮ ಸಹ ರೂಢಿಗೆ ಬರುತ್ತಿದೆ. ಹೀಗೆ ಚಿತ್ರಗಳು ಅಂತರ್‌ಶಿಸ್ತೀಯ ನೆಲೆಗಳಲ್ಲಿ ಬಳಕೆಯಾಗುತ್ತಿರುವ ಪ್ರಸ್ತುತದಲ್ಲಿ ಹೊಸ ಅಧ್ಯಯನ ಕ್ಷೇತ್ರವೊಂದು ಕಾಣಿಸಿಕೊಂಡು ಇದನ್ನು ದೃಶ್ಯೀಯ ಸಂಸ್ಕೃತಿ ಎಂದು ಹೆಸರಿಸಲಾಗಿದೆ.

ದೃಶ್ಯೀಯ ಸಂಸ್ಕೃತಿ ಎಂಬುದು ಗ್ರಂಥ ಪ್ರಪಂಚಕ್ಕೂ ಚಾಚಿಕೊಳ್ಳುತ್ತಿರುವ ಬೆಳವಣಿಗೆಯನ್ನೂ ಕಾಣುತ್ತಿದ್ದೇವೆ. ಅನೇಕ ಪುಸ್ತಕಗಳ ರಕ್ಷಾಕವಚಗಳಲ್ಲಿ ವರ್ಣ ಚಿತ್ರವಿರುತ್ತವೆ, ಛಾಯಾಚಿತ್ರಗಳಿರುತ್ತವೆ. ಅದೇ ರೀತಿ ಯಾವುದೇ ಚಿತ್ರ ಕಣ್ಣಿಗೆ ಬಿದ್ದರೂ ಅದರ ಜೊತೆಯಲ್ಲಿ ಒಂದು ಅಕ್ಷರ ರೂಪದ ವರ್ಣನೆಯೂ ಇದ್ದೇ ಇರಬೇಕು. ಕಲಾ ಗ್ಯಾಲರಿಯಲ್ಲಿ ವರ್ಣಚಿತ್ರಗಳಿಗೆ ಶೀರ್ಷಿಕೆಗಳಿರುತ್ತವೆ ; ಕೆಲವು ವೇಳೆ ಅವುಗಳ ಬೆಲೆಯ ಚೀಟಿ ಇರುತ್ತದೆ ; ಅನೇಕ ಜಾಹಿರಾತುಗಳಿಗೆ ಆಧಾರವಾದಂಥದ್ದು ಅವುಗಳನ್ನು ಹಿಡಿದಿಡುವ ಪಠ್ಯ. ಚರ್ಚುಗಳಲ್ಲಿ ಕಂಡು ಬರುವ ಕಲೆಯನ್ನು ಅರ್ಥ ಮಾಡಿಕೊಳ್ಳಲು ಜೊತೆಯಲ್ಲಿ ಒಂದು ಕೈಪಿಡಿ ಬಳಸುತ್ತಾರೆ ; ಅಥವಾ ಮಾರ್ಗದರ್ಶಿಯೊಬ್ಬ ವಿವರಿಸಿ ಹೇಳುತ್ತಿರುತ್ತಾನೆ ; ಚಲನಚಿತ್ರಗಳನ್ನ ಸಾಮಾನ್ಯವಾಗಿ ಚಿತ್ರ ವಿಮರ್ಶೆಯ ಬೆಂಬಲದಿಂದ ಅಥವಾ ಅದರಲ್ಲಿ ನಟಿಸಿರುವ ತಾರೆಯರ ಸಂದರ್ಶನಗಳ ಮುಖೇನ ವೀಕ್ಷಿಸುವ ವಾಡಿಕೆಯಿದೆ. ನಕ್ಷೆಗಳಿಗೆ ಸಹಾಯ ಸಲಕರಣೆಗಳಿರುತ್ತವೆ ; ಕುಟುಂಬ ಭಾವಚಿತ್ರಗಳಿಗೆ ಅದರದೇ ಆದ ಕಥೆಗಳನ್ನು ಹೆಣೆದಿರುತ್ತಾರೆ.

ಚಿತ್ರಗಳು ಮತ್ತು ಬರೆದ ಅಥವಾ ಆಡಿದ ಮಾತುಗಳು ಒಂದು ಆಪ್ತ ಸಂಬಂಧದಲ್ಲಿ ಕಾಣಿಸಿಕೊಳ್ಳುತ್ತವೆ. ಆದರೆ ಅವುಗಳನ್ನು ವಿವರಿಸಿ ಹೇಳುವ ವಿಮರ್ಶಾ ಸಾಧನಗಳು ಅವು

ಬೇರೆ ಬೇರೆ ಎಂತಲೋ ಅಥವಾ ಒಂದು ಇನ್ನೊಂದಕ್ಕಿಂತ ಕಡಿಮೆ ಎಂತಲೋ ನಮ್ಮ ಅಂದಾಜಿನ ಹಾದಿ ತಪ್ಪಿಸುವುದುಂಟು. ಆಂಗ್ಲ ಸಾಹಿತ್ಯಾಧ್ಯಯನದ ಸಂದರ್ಭದಲ್ಲಿ ಪಠ್ಯದ ಜೊತೆಗೆ ಕಾಣಿಸಿಕೊಳ್ಳುವ ಚಿತ್ರಗಳ ಬಗ್ಗೆ ಒಂದು ಬಗೆಯ ಅಲಕ್ಷ್ಯ ಮೊದಲಿನಿಂದಲೂ ಚಾಲ್ತಿಯಲ್ಲಿದೆ. ಪಠ್ಯವನ್ನು ಚಿತ್ರದ ಸಮೇತ ಪರಿಗಣಿಸಿ ಅಂತರಂಗದ ಉದ್ದೇಶವನ್ನು ಸೂಕ್ಷ್ಮದೃಷ್ಟಿಯಿಂದ ಭೇದಿಸುವ ಕ್ರಮ ಇನ್ನೂ ಕಂಡು ಬರುತ್ತಿಲ್ಲ.

ಸಾಹಿತ್ಯ ಪಠ್ಯಗಳನ್ನು ಚಿತ್ರದ ಸಮೀಪ ಇಟ್ಟು ಅಥವಾ ಚಿತ್ರದ ಸಮೇತ ಅಧ್ಯಯನ ಮಾಡದ ಪರಿಪಾಠ ಹೊಸತಲೆಮಾರಿನ ವಿದ್ವಾಂಸರಿಗೆ ವಿಚಿತ್ರ ನಡವಳಿಕೆಯಾಗಿ ಕಾಣಿಸತೊಡಗಿದೆ. "Why split things apart when they are almost always found in spacial proximity?" ಎಂಬುದು ಅವರು ಕೇಳುವ ನ್ಯಾಯಯುತವಾದ ಪ್ರಶ್ನೆ. ಸಮೀಪದಲ್ಲೇ ಯಾವಾಗಲೂ ಚಿತ್ರ ಮತ್ತು ಪಠ್ಯ ಗೋಚರವಾಗುವಾಗ ಅವುಗಳನ್ನು ಕೃತಕವಾಗಿ ದೂರ ಇಟ್ಟು ನೋಡುವ ಹುನ್ನಾರವೇಕೆ? ಆದಾಗ್ಯೂ ಈ ದೂರವಿರಿಸುವ ರೂಢಿ ಈಗಾಗಲೇ ಜನಜನಿತವಾಗಿದೆ.

"ಒಂದು ಚಿತ್ರ ಅದು ಸುಮ್ಮನೆ ಬರೆದ ಚಿತ್ರವಾಗಿರುವುದಿಲ್ಲ. ಸಾಮಾಜಿಕ ವ್ಯತ್ಯಯವನ್ನು ಪ್ರತಿಫಲಿಸಲು ನೀಡಿದಂಥ ಒಂದು ರಚನೆ. ಹಾಗಾಗಿ ಒಂದು ಚಿತ್ರವನ್ನು ಅರ್ಥ ಮಾಡಿಕೊಳ್ಳುವುದೆಂದರೆ ಅದು ಎಸಗುವ ಸಾಮಾಜಿಕ ಕಾರ್ಯವನ್ನು ಅರ್ಥ ಮಾಡಿ ಕೊಂಡಂತೆ. ಅದು ಒಳಗೊಳ್ಳುವ ಅಥವಾ ಹೊರಗುಳಿಸುವ ತತ್ವವನ್ನು ಅರಿತಂತೆ. ಅದು ಕೂಡ ಮಾಡುವ ಪಾತ್ರಗಳನ್ನು ಪತ್ತೆ ಮಾಡುವುದು, ಅವು ಹೇಗೆ ವಿತರಣೆಗೊಂಡಿವೆ ಎಂದು ತಿಳಿಯಲು ಹಾಗೂ ಅದು ನೈಸರ್ಗಿಕಗೊಳಿಸುವ ಶ್ರೇಣೀಕರಣ ಮತ್ತು ವ್ಯತ್ಯಯಗಳನ್ನು ಅರಿಯಲು ಸಹ ಸಹಾಯವಾಗುವುದು" (Fyfe, G. and J.Law (೧೯೮೮), 'Introduction : on the invisibility of the visible.' in G.Fyfe and J.Law (eds), Picturing power : visual Depiction and Social Relations, London : Routledge, pp. 1-14)

ದೃಶ್ಯೀಯ ಬಿಂಬಗಳನ್ನು ವಿಮರ್ಶಾತ್ಮಕವಾಗಿ ನೋಡಬೇಕಾದದ್ದು ಅಗತ್ಯ ; ಏಕೆಂದರೆ ಸಾಮಾಜಿಕ ವ್ಯತ್ಯಾಸಗಳು ಮತ್ತು ಶ್ರೇಣೀಕರಣಗಳನ್ನು ಮೂಲಕ ಅರ್ಥ ಮಾಡಿಕೊಳ್ಳಲು ಸಾಧ್ಯ. ವಿಮರ್ಶಾತ್ಮಕವಾದ ತಿಳುವಳಿಕೆಗೆ ದೃಶ್ಯೀಯ ಚಿತ್ರಗಳು ಅತ್ಯಗತ್ಯವೆಂದು ಧಾರಾಳವಾಗಿ ಹೇಳಬಹುದು. ಎಲ್ಲ ಕಲಾ ಚರಿತ್ರಕಾರರೂ ಸಹ ಚಿತ್ರದ ರೂಪ ಮತ್ತು ಒಳತಿರುಳನ್ನು ಅರಿಯುವ ಪ್ರಯತ್ನ ಮಾಡಿಯೇ ಮಾಡುತ್ತಾರೆ. ಇದನ್ನೇ 'Compositional interpretation' ಅಥವಾ ರಾಚನಿಕ ವ್ಯಾಖ್ಯಾನ ಎಂದು ಕರೆಯುವುದು. ಕಲಾ ಚರಿತ್ರೆಯಲ್ಲಿ ಪರಿಣತರಾಗದವರಿಗೆ ಚಿತ್ರ ನೋಡಿ ವ್ಯಾಖ್ಯಾನ ಮಾಡುವ ವಿಧಾನ ಕರಗತವಾಗುವುದು ಕಷ್ಟ. ಒಂದು ವಿಶಿಷ್ಟ ಸಂವೇದನೆಯನ್ನು ಈ ವಿಧಾನ ಬೇಡುತ್ತದೆ.

'Composition' ಅಂದರೆ ಒಂದು ಚಿತ್ರದ ರಚನೆ ಅಥವಾ ಶಿಲ್ಪ. ಅದರ ಎಲ್ಲ ಸಾಮಗ್ರಿಗಳೂ ಹೇಗೆ ಕೂಡಿಕೊಂಡಿವೆ ಎಂಬ ವಿಚಾರ. ಶಿಲ್ಪ ಎಂದ ಕೂಡಲೇ ಅದು ಏಕಾಕೃತಿಯೆಂದು ಭಾವಿಸುವ ಅಗತ್ಯವಿಲ್ಲ. ಏಕೆಂದರೆ ಅದರ ಹೊಂದಾಣಿಕೆಯಲ್ಲಿ ಹಲವು ಭಾಗಗಳು ಭಾಗವಹಿಸುವ ಸಾಧ್ಯತೆ ಇರುತ್ತದೆ. ಪ್ರಥಮವಾಗಿ ಯಾವುದೇ ರಚನೆಯಲ್ಲಿ ತಿರುಳು ಎಂಬುದು ಇರುತ್ತದೆ. ಯಾವ ಚಿತ್ರವಾದರೂ ಏನನ್ನು ತೋರಿಸುತ್ತದೆ ಎಂಬ ಸಂಗತಿಯೇ ಅದರ ತಿರುಳು ಅಥವಾ ಜೀವಾಳ. ಕೆಲವು ಚಿತ್ರಗಳನ್ನು ನೋಡಿದ ಕೂಡಲೇ

ತಮ್ಮೊಳಗಿರುವುದೇನು ಎಂಬ ವಿಚಾರವನ್ನು ಬಿಟ್ಟುಕೊಡಬಹುದು. ಇನ್ನು ಕೆಲವು ಚಿತ್ರಗಳಲ್ಲಿ ಅದು ಸಾಧ್ಯವಾಗದಿರಬಹುದು; ವಿಶೇಷತಃ ಸಾಂಕೇತಿಕತೆಯೇ ವ್ಯಾವಹಾರಿಕವಾಗಿದ್ದ ಕಾಲಘಟ್ಟದ ಚಿತ್ರಗಳು ತಕ್ಷಣವೇ ತಮ್ಮ ಅರ್ಥಗಳನ್ನು ಬಿಟ್ಟುಕೊಡದಿರಬಹುದು. ಆ ನಂತರ ಒಂದು ಚಿತ್ರದ ಬಣ್ಣಗಳು. ಇವುಗಳನ್ನು ಅವುಗಳ ಚಹರೆಯಿಂದ ಗುರುತಿಸಬಹುದು; ಅವುಗಳ ಸಾಂದ್ರತೆಯಿಂದ ಮತ್ತು ಅವುಗಳ ಮೌಲ್ಯದಿಂದ (ತೆಳುವಾಗಿದೆಯೇ, ದಟ್ಟವಾಗಿದೆಯೇ ಎಂಬುದರಿಂದ) ಗುರುತಿಸಬಹುದು. ಆದರೆ ಈ ಬಣ್ಣಗಳು ಒಟ್ಟಿಗೆ ಹೇಗೆ ಕೆಲಸ ಮಾಡುತ್ತವೆ ಎಂಬುದೂ ಸಹ ಅಷ್ಟೇ ಮುಖ್ಯ. ಚೆನ್ನಾಗಿ ಅವು ಹೊಂದಿಕೊಂಡಿವೆಯೇ ಇಲ್ಲವೆ? ಯಾವ ಬಣ್ಣ ಉಪಯೋಗಿಸಿರುವುದರಿಂದ ಏನು ಎದ್ದು ಕಾಣುತ್ತಿದೆ? ಯಾವುದಾದರೂ ಒಂದು ಬಣ್ಣವನ್ನು ಮತ್ತೆ ಮತ್ತೆ ಉಪಯೋಗಿಸಿರುವುದರಿಂದ ಒಂದು ಚಿತ್ರದ ಭಾಗಗಳಿಗೆ ಸಂಬಂಧ ಏರ್ಪಡಿಸಲಾಗಿದೆಯೇ? ಕೆಲವು ಬಣ್ಣಗಳು ವಿಶೇಷವಾದ ಅರ್ಥವನ್ನೇನಾದರೂ ಸೂಸುತ್ತಿರುವುವೆ? ಬೆಳಕಿನ ಮೂಲ ಎಲ್ಲಿದೆ? ಅದು ಯಾವ ತರಹದ ಬೆಳಕು ಅದರ ಪರಿಣಾಮ ಏನು? ಇವೆಲ್ಲ ಪ್ರಶ್ನೆಗಳು ಉದ್ಭವವಾಗುತ್ತದೆ.

ಇಂಥ ಪ್ರಶ್ನೆಗಳು ಇನ್ನೊಂದು ವಿಧವಾದ ಪ್ರಶ್ನೆಗಳೊಡನೆ ವಿಲೀನವಾಗುತ್ತವೆ. ಚಿತ್ರ ಆಂತರ್ಯದಲ್ಲಿ ವಿನ್ಯಾಸಗೊಂಡಿರುವ ಬಗೆ ಹೇಗೆ ? ಅದರಲ್ಲಿ ಆಕಾರಗಳು ಮತ್ತು ಹಿನ್ನೆಲೆಯಿದೆಯೆ? ಅದರ ಗಾತ್ರಗಳಿರುವುದಿಲ್ಲ ಮತ್ತು ಅವುಗಳಲ್ಲೊಂದು ಸಮತೋಲನ ಇದೆಯೇ ಇಲ್ಲವೇ? ಚಿತ್ರದೊಳಗಿನ ಗಾತ್ರಗಳಲ್ಲಿ ಯಾವ ಬಗೆಯ ಚಲನೆ ಅಥವಾ ಲಯವಿದೆ? ಯಾವುದಾದರೂ ಪರಿಪ್ರೇಕ್ಷ್ಯದಲ್ಲಿ ಚಿತ್ರಕ್ಕೆ ಆಳವನ್ನು ಸೂಚಿಸಲಾಗಿದೆಯೇ ಅಥವಾ ಅದು ಚಪ್ಪಟೆಯಾಗಿದೆಯೇ? ಒಂದು ಚಿತ್ರವನ್ನು ನೋಡಬೇಕಾದ ಸ್ಥಾನವನ್ನು ನಿರ್ದೇಶಿಸಲಾಗಿದೆಯೇ? ಅಂತಿಮವಾಗಿ – ಇದು ಬಹಳ ಮುಖ್ಯವಾದ ವಿಷಯ, ಏಕೆಂದರೆ ಇದರಿಂದಲೇ ಒಂದು ವಿಸ್ಮಯ ಹೊರಡುವುದು – ಈ ಬೇರೆ ಬೇರೆ ಸಂಗತಿಗಳು ವೀಕ್ಷಕನ ಮೇಲೆ ಬೀರುವ ಪರಿಣಾಮ ಎಂಥದ್ದು? ಒಂದು ಚಿತ್ರದ ಧ್ವನಿಯನ್ನು ಹಿಡಿಯುವ ಅದರ ಇಂಗಿತವನ್ನು ಅರಿಯುವ, ಅದರ ಗುಣವೈಶಿಷ್ಟ್ಯವನ್ನು ಗಮನಿಸುವ ಅದರ ಚಹರೆಯನ್ನು ಒಳಗೊಳ್ಳುವ ವಿಧಾನವಿದು.

ಒಟಿದು ಚಿತ್ರವನ್ನು ವೀಕ್ಷಿಸುವಾಗ ಅದರ ತಿರುಳು, ಬಣ್ಣ, ಅವಕಾಶದ ಸಂರಚನೆ, ಬೆಳಕು ಮತ್ತು ಅಭಿವ್ಯಕ್ತಿಯ ಉತ್ಕಟತೆ – ಇವುಗಳನ್ನು ವ್ಯಾಖ್ಯಾನಿಸುವಷ್ಟು ಪ್ರೌಢಿಮೆ ಬರಬೇಕು. ಚಿತ್ರ ಗಳನ್ನು ಅರ್ಥಮಾಡಿಕೊಳ್ಳುವ ಕ್ರಮ ಸಂಶೋಧನಾ ವಿಧಾನಗಳಲ್ಲಿ ಮುಖ್ಯವಾದ ಅಂಗ ಗಳಲ್ಲಿ ಒಂದು. ಆದಾಗ್ಯೂ ದೃಶ್ಯೀಯ ಚಿತ್ರವನ್ನು ವಿಮರ್ಶಾತ್ಮಕವಾಗಿ ವ್ಯಾಖ್ಯಾನಿಸುವಾಗ ಕೇವಲ ರಾಚನಿಕ ವ್ಯಾಖ್ಯಾನವಷ್ಟೇ ಸಾಕಾಗುವುದಿಲ್ಲ. ಅದರ ಬಹುದೊಡ್ಡ ಮಿತಿ ಅಂದರೆ ಚಿತ್ರವನ್ನು ಮಾತ್ರ ಗಮನದ ಕೇಂದ್ರದಲ್ಲಿರಿಸಿಕೊಂಡು ವ್ಯವಹರಿಸುವುದು. ಚಿತ್ರದ ಜೊತೆ ಜೊತೆಗೇ ಬರುವ ಬರಹದ ಸಾಂಗತ್ಯದ ಬಗ್ಗೆ ಅದು ಮೌನವಹಿಸುತ್ತದೆ ಚಿತ್ರ ಮತ್ತು ಅದರ ಜೊತೆಗೆ ಬರುವ ಬರಹ ಮುಖ್ಯ ಏಕೆಂದರೆ ಅವುಗಳ ಅಂತರ್‌ಸಂಬಂಧ ಹಾಗಿರುತ್ತದೆ. ನಿಗದಿತ ವೀಕ್ಷಕರು ಒಂದು ಚಿತ್ರವನ್ನು ಹೇಗೆ ಉಪಯೋಗಿಸಬಹುದು, ವ್ಯಾಖ್ಯಾನಿಸಬಹುದು ಎಂಬುದರ ಬಗ್ಗೆ ಕೂಡ ಸಹಾಯವಿಲ್ಲದ ಕಾರಣ ಇನ್ನಿತರ ಸಂಶೋಧನಾ ವಿಧಾನಗಳನ್ನೂ ಅನುಸರಿಸಬೇಕಾದ ಅಗತ್ಯವಿದೆಯೆಂದು ತಜ್ಞರು ಅಭಿಪ್ರಾಯಪಡುತ್ತಾರೆ.

* * * *

'ಕಥನ ವಿಶ್ಲೇಷಣೆ' ಸಂಶೋಧನಾ ವಿಧಾನಗಳಲ್ಲಿ ಇನ್ನೊಂದು ಪ್ರಮುಖವಾದ ಮಾರ್ಗ. ಇಲ್ಲಿ ಭಾಷೆಯನ್ನು ಕುರಿತ ಜಿಜ್ಞಾಸೆಗೆ ಒತ್ತು ಬೀಳುತ್ತದೆ ಹಾಗೂ ಬರಹ ಮತ್ತು ಆಡುವ ಪ್ರಭೇದಗಳೆರಡನ್ನೂ ಪರಿಗಣಿಸಲಾಗುತ್ತದೆ. ಪಠ್ಯ ವಿಶ್ಲೇಷಣೆಗಿಂತ ಇದು ಭಿನ್ನ, ಹೇಗೆಂದರೆ ಆರಂಭದಲ್ಲೇ ಇದು ಭಾಷೆಯೆಂಬುದು ತಟಸ್ಥವಲ್ಲ ಎಂಬ ಗ್ರಹಿಕೆಯಿಂದಲೇ ಹೊರಡುತ್ತದೆ. 'ಸಂವಹನದ ಎಲ್ಲ ಘಟನೆಗಳೂ'– ಕಾದಂಬರಿಯ ಓದು, ನಾಟಕಗಳು, ಕಾವ್ಯ, ಒಂದು ಜಾಹಿರಾತು, ಒಂದು ಸಂಭಾಷಣೆ ಅಥವಾ ಒಂದು ಸಂದರ್ಶನ – ಜಗತ್ತನ್ನು ಅರ್ಥ ಮಾಡಿಕೊಳ್ಳುವ ದಿಶೆಯಲ್ಲಿ ನಾವು ಮಾತನಾಡುವ ಒಂದು ಕ್ರಮವನ್ನು ಸೂಚಿಸುತ್ತವೆ. ಇದರಲ್ಲಿ ಉತ್ಪತ್ತಿ ಮಾಡುವವರು (ಲೇಖಕ, ಭಾಷಣಕಾರ) ಮತ್ತು ಗ್ರಾಹಕ (ಓದುಗ, ಶ್ರೋತೃ) ಇಬ್ಬರೂ ಒಳಗೊಳ್ಳುತ್ತಾರೆ. ಹಾಗಾಗಿ, ಕಥನ ವಿಶ್ಲೇಷಣೆಯೆಂಬುದು ಭಾಷೆಯ ಬಳಕೆಯ ಸಿದ್ಧಾಂತವನ್ನೂ (ಭಾಷೆ ತಟಸ್ಥವಲ್ಲ ಎಂಬ ಗ್ರಹಿಕೆಯನ್ನು ಒಳಗೊಂಡು) ಬಳಕೆಯಾಗುವ ಭಾಷೆಯನ್ನು ವಿಶ್ಲೇಷಿಸುವ ವಿಧಾನವನ್ನು ಸೂಚಿಸುತ್ತದೆ.

ಕಥನ ವಿಶ್ಲೇಷಣೆಯಲ್ಲಿ ಎರಡು ಆಯಾಮಗಳಿವೆ: ಒಂದು ಭಾಷೆಯ ಬಳಕೆಯ ವಿನ್ಯಾಸವನ್ನು ಅರಿಯುವುದು; ಉದಾಹರಣೆಗೆ 'ನಾನು' ಅಥವಾ 'ನಾವು' ಎಂಬ ಸರ್ವನಾಮವನ್ನು ಒಬ್ಬ ಭಾಷಣಕಾರ/ನಿರೂಪಕ ಬಳಸಿದಾಗ ಆ ಭಾಷಣಕಾರ/ನಿರೂಪಕನ ಸ್ಥಾನಮಾನ ಯಾವ ರೀತಿ ಪ್ರಭಾವಕ್ಕೊಳಗಾಗುತ್ತದೆ ಎಂಬುದು. ಇನ್ನೊಂದು, ಭಾಷೆಯ ವಿನ್ಯಾಸ ಒಂದು ಚಟುವಟಿಕೆ ಅಥವಾ ಪ್ರಕ್ರಿಯೆಯಾಗಿ ಹೇಗೆ ಬಳಕೆಯಾಗಿದೆ ಎಂಬುದು. ಉದಾಹರಣೆಗೆ, ಒಂದು ಸಂಭಾಷಣೆಯಲ್ಲಿ ಒಬ್ಬ ಮಾತುಗಾರ ಎಷ್ಟು ನುಡಿಯ ಅವಕಾಶವನ್ನು ಬಳಸಿಕೊಳ್ಳುತ್ತಾನೆ ಎಂಬುದು. ಕಥನ ವಿಶ್ಲೇಷಣೆಯ ಗುರಿಯೆಂದರೆ 'ವಿಶದಪಡಿಸುವ ಉಕ್ತಿ'ಯ ಮೂಲಕ ಭಾಷೆ ಹೇಗೆ ಬಳಕೆಯಾಗಿದೆ ಎಂಬುದನ್ನು ಕಂಡು ಹಿಡಿಯುವುದು. ಈ ವಿಧಾನದಿಂದ 'ಭಾಷೆಯ ಬಳಕೆ ಹಾಗೂ ಅಭ್ಯಾಸದ ನಡುವಿನ ಸಂಬಂಧ'ವನ್ನು ಪತ್ತೆಮಾಡಲಾಗುವುದು.

ಕಥನವೆಂಬುದಕ್ಕೆ ಹಲವಾರು ಅರ್ಥಗಳಿವೆ. ಬರೇ ಆಡುವ ಮಾತಿಗೆ ಅದು ಸಂಬಂಧಿಸಿದ್ದಿರಬಹುದು, ಬರಹಕ್ಕೂ ಅನ್ವಯವಾಗಬಹುದು; ಒಟ್ಟಿನಲ್ಲಿ ಒಂದು ನಿಗದಿತ ಸನ್ನಿವೇಶದಲ್ಲಿ ಉಪಯೋಗಿಸಿದ ಭಾಷೆಯ ಕ್ರಮವನ್ನು ಅದು ಪ್ರತಿನಿಧಿಸುತ್ತದೆ. ಅದಕ್ಕೆ ಅದರದೇ ಆದ ವಿಧಾನವಿರುತ್ತದೆ. ಉದಾಹರಣೆಗೆ ವೈದ್ಯಕೀಯ ಕಥನ, ಕಾನೂನು ಕಥನ, ವೈಜ್ಞಾನಿಕ ಕಥನ– ಎಂದೆಲ್ಲ ನಾವು ಹೇಳುವುದುಂಟು. ಕಥನವು ಒಂದು ನಿಗದಿತ ಸಂದರ್ಭದಲ್ಲಿ ಮಾಡುವ ಹೇಳಿಕೆಗಳ ಒಂದು ಸಮೂಹವನ್ನು ಪ್ರತಿನಿಧಿಸಬಹುದು. ಹಾಗಾಗಿ ಆಯಾ ಕಥನಗಳು ಒಂದು ವಿಶಿಷ್ಟ ನುಡಿಗಟ್ಟುಗಳನ್ನು, ಭಾಷೆಯ ಬಳಕೆಯನ್ನು ನಿರೀಕ್ಷಿಸುತ್ತವೆ. ಉದಾಹರಣೆಗೆ ಕಿನ್ನರ ಕಥೆಗಳು 'ಒಂದನೊಂದು ಕಾಲದಲ್ಲಿ.....' ಎಂದು ಆರಂಭವಾಗುವುದನ್ನು ಸಸಿನವೆಂದು ಸ್ವೀಕರಿಸುತ್ತವೆ; ಆದರೆ 'ಕ್ರಿಸ್ತನಿಗರ್ಪಿಸಿಕೊಂಡ........' ಎಂಬ ಆರಂಭ ಧಾರ್ಮಿಕ ಉಪದೇಶದಲ್ಲಿ ಮಾತ್ರ ಕಂಡು ಬರುತ್ತದೆ. ಈ ಹಿನ್ನಲೆಯಲ್ಲಿ ಹೇಳುವುದಾದರೆ, ಕಥನಗಳು ಕೆಲವು ರೀತಿಯ ಉಕ್ತಿಯನ್ನು ಮೇಲೆ ತಂದು ಇನ್ನು ಕೆಲವು ಬಗೆಯ ನುಡಿಗಳನ್ನು ಹತ್ತಿಕ್ಕುತ್ತವೆ. ಹಾಗಾಗಿ ಭಾಷೆಯೆಂಬುದು ಅರ್ಥವನ್ನು ರವಾನಿಸುವ ಒಂದು ತಟಸ್ಥ ವಾಹಕವಲ್ಲ; ಪ್ರಪಂಚದ ಬಗೆಗಿನ ನಮ್ಮ ಅರಿವನ್ನು ರೂಪಿಸುವ ಅಥವಾ ಬದಲಾಯಿಸುವ ಒಂದು ಸಂಗತಿಯಾಗಿದೆ. ಈ ದೃಷ್ಟಿಯಿಂದ ಗಮನಿಸುವಾಗ, ಅಧಿಕಾರ ಶಿಲ್ಪವೆಂಬುದು ಭಾಷೆಯಿಂದಲೇ ರೂಪಿತವಾಗುವುದು, ಭಾಷೆಯೇ ಅದನ್ನು ಎತ್ತಿ ಹಿಡಿಯುವುದು. ಭಾಷೆಯ ಬಳಕೆಯ ಬದಲಾವಣೆಯಿಂದ ಅದನ್ನು ಬದಲಾಯಿಸಬಹುದು.

ಪ್ರಬಲವಾದ ಕಥನಕ್ಕೆ ಪ್ರತಿರೋಧ ಒಡ್ಡಲು ಸಾಧ್ಯವಾಗುವುದೂ ಭಾಷೆಯ ಬಳಕೆಯಿಂದ ಎಂಬ ರೀತಿ ಮನನಯೋಗ್ಯವಾಗಿದೆ.

ಸಂಶೋಧನೆಯಲ್ಲಿ ಕಥನ ವಿಶ್ಲೇಷಣೆ ಎಂಬುದು ಸಂದರ್ಭ, ಸನ್ನಿವೇಶ ಹಾಗೂ ಸಂಶೋಧಕ ಕೈಕೊಂಡಿರುವ ಕ್ಷೇತ್ರ (ಶಿಸ್ತು)ವನ್ನಾಧರಿಸಿ ಬೇರೆ ಬೇರೆ ಮಾರ್ಗವನ್ನು ಅನುಸರಿಸಬೇಕಾಗುತ್ತದೆ. ಸಂಶೋಧನಾ ವಿಧಾನವಾಗಿ ಕಥನ ವಿಶ್ಲೇಷಣೆ ವಿಕಾಸವಾಗುತ್ತಲೇ ಇರುತ್ತದೆ.

ವಿಮರ್ಶಾತ್ಮಕ ಕಥನ ವಿಶ್ಲೇಷಣೆ: ಈ ವಿಧಾನದಲ್ಲಿ ವ್ಯಕ್ತವಾಗುವ ಸಂಗತಿಯೆಂದರೆ ಪ್ರಧಾನ ಸಂಸ್ಥೆಗಳಾದ ಸರ್ಕಾರ ಹೊರಡಿಸುವ ಕಥನ ಪ್ರಪಂಚದ ಒಂದು ನಿಗದಿತ ರೂಪವನ್ನು ನಿರ್ಮಿಸುವುದನ್ನು ನಮಗೆ ತಿಳಿಸುತ್ತದೆ. ಹಾಗಾಗಿ ಈ ಬಗೆಯ ಕಥನ ವಿಶ್ಲೇಷಣೆ ಭಾಷೆ, ವಸ್ತು ಹಾಗೂ ಸಾಮಾಜಿಕ ಪ್ರಕ್ರಿಯೆಯ ನಡುವಿನ ಸಂಬಂಧ ಅದರ ಗಮನದ ಕೇಂದ್ರದಲ್ಲಿದೆ. ಈ ವಿಧಾನದ ಪ್ರಕಾರ ಕೆಲವು ಸಂಗತಿಗಳು ಗ್ರಹೀತವಾಗುತ್ತವೆ.

* ಭಾಷೆ ಮತ್ತು ಕಥನದ ಕ್ರಮಗಳು (ಪಠ್ಯಗಳ ನಿರ್ಮಾಣ ಮತ್ತು ಅವುಗಳ ಸ್ವೀಕರಣೆ) ಪ್ರಪಂಚವನ್ನು ರೂಪಿಸುತ್ತವೆ.
* ಕಥನವೇ ಸಾಮಾಜಿಕ-ಸಾಂಸ್ಕೃತಿಕ ಪ್ರಪಂಚದ ನಿರ್ಮಾಣದಲ್ಲಿ ಪ್ರಧಾನ ಪಾತ್ರ ವಹಿಸುವುದು.
* ಒಂದು ನಿಗದಿತ ಸನ್ನಿವೇಶದಲ್ಲಿ ಉಪಯೋಗಿಸಲ್ಪಡುವ ಭಾಷೆಯೇ ಸಂಶೋಧನೆಯ ಪ್ರಧಾನ ಲಕ್ಷ್ಯ.
* ಕಥನವೆಂಬುದು 'ತಟಸ್ಥ'ವಲ್ಲ: ಅದರ ಮೂಲಕವೇ ಅಧಿಕಾರದ ಸಂಬಂಧಗಳು ಸಮಾಜದಲ್ಲಿ ರೂಪಿತವಾಗುವುದು.
* ಕಥನ ಚಾರಿತ್ರಿಕವಾಗಿ ಸ್ಥಾನ ಪಡೆಯುವುದರಿಂದ ಕಾಲದಿಂದ ಕಾಲಕ್ಕೆ ಅದು ಬದಲಾಗುತ್ತಿರುತ್ತದೆ.
* ಕಥನವು ಭಾಷೆಯ ವಿಮರ್ಶಾತ್ಮಕ ಪರೀಕ್ಷೆಯನ್ನು ಪರಿಗಣಿಸಬೇಕಾಗಿರುವುದರಿಂದ ಬದಲಾವಣೆಗೆ ಇದು ಅಗತ್ಯವಾಗಿದೆ.

ಹಾಗಾಗಿ ಭಾಷೆ 'ಪ್ರಪಂಚ'ಕ್ಕೆ ಸಂಬಂಧಿಸಿದ್ದಾಗಿರುತ್ತದೆ; ಏಕಕಾಲದಲ್ಲಿ ಅದಕ್ಕೆ ನಿಗದಿತ ಅರ್ಥವನ್ನು ನೀಡುವ ಮೂಲಕ ಬದಲಾಯಿಸುತ್ತದೆ. ಪಠ್ಯಗಳು ಸೈದ್ಧಾಂತಿಕ ಸಂಘರ್ಷಕ್ಕೆ ಇಳಿಯಲು ಹಿಂದು ಮುಂದು ನೋಡುವುದಿಲ್ಲ. ಉದಾಹರಣೆಗೆ ಜೇನ್ ಆಸ್ಟನ್‌ಗಳ ಕಾದಂಬರಿ **ಹಮ್ಮುಬಿಮ್ಮು (ಪ್ರೈಡ್ ಅಂಡ್ ಪ್ರಿಜುಡೀಸ್)**ವಿನ ಮೊದಲನೆಯ ವಾಕ್ಯವನ್ನು ತೆಗೆದುಕೊಳ್ಳಿ: **"**ಶ್ರೀಮಂತನಾದ ಒಂಟಿ ಮನುಷ್ಯನೊಬ್ಬನಿಗೆ ಒಬ್ಬಳು ಹೆಂಡತಿ ಬೇಕು ಎಂಬುದು ಸಾರ್ವತ್ರಿಕವಾಗಿ ಸ್ಥಾಪಿತವಾದ ಸತ್ಯವಾಗಿದೆ.**"** ಜೇನ್ ಆಸ್ಟನ್ ಈ ರೀತಿ ಘೋಷಿಸುವ ಮೂಲಕ ಇತರ ಸಾಧ್ಯತೆಗಳನ್ನು ತಳ್ಳಿಹಾಕಿದ್ದಾಳೆ. ಒಂಟಿಯಾಗಿರುವ ಶ್ರೀಮಂತ ವ್ಯಕ್ತಿ ಸಲಿಂಗಕಾಮಿಯಾಗಿರಬಹುದು; ಆವಾಗ ಅವನಿಗೆ ಹೆಂಡತಿಯ ಅವಶ್ಯಕತೆ ಇರುವುದಿಲ್ಲ. ಆದರೆ ಜೇನ್ ಆಸ್ಟನ್‌ಳ ಕಥನ ಇದಕ್ಕೆ ಜಾಗ ಕೊಡುವುದಿಲ್ಲ. ಹಾಗಾಗಿ, ಕಥನ ವಿಶ್ಲೇಷಣೆಯಲ್ಲಿ ನಾವು ಗಮನಿಸತಕ್ಕ ವಿಚಾರವೆಂದರೆ ಒಂದು ಪಠ್ಯ ಕೇವಲ ಭಾಷಿಕ ಲಕ್ಷಣಗಳನ್ನು ಮಾತ್ರ ನಮಗೆ ತಲುಪಿಸುತ್ತಿರುವುದಿಲ್ಲ. ಬದಲಾಗಿ ಒಂದು ನಿಗದಿತ ಪ್ರಪಂಚದ ದೃಷ್ಟಿಕೋನವನ್ನು ರವಾನಿಸುತ್ತಿರುತ್ತದೆ. ಹಾಗಾಗಿ, ರಾಬರ್ಟ್ಸ್ ನೋಲ್ಸ್ ಎಂಬುವವರು

ಸಾಹಿತ್ಯ ಪಾಠವನ್ನು ಕುರಿತು ನೀಡಿರುವ ವ್ಯಾಖ್ಯಾನ ಅರ್ಥಪೂರ್ಣವಾಗಿದೆ: "ಸಾಹಿತ್ಯ ಪಾಠ್ಯವೆಂಬುದು ಒಂದು ಚಾರಿತ್ರಿಕ ಸಂದರ್ಭದಲ್ಲಿ ಒಬ್ಬ ವ್ಯಕ್ತಿ ಹಲವು ವ್ಯಕ್ತಿಗಳ ಉತ್ಪನ್ನವಾಗಿದ್ದು ಒಂದು ನಿಗದಿತ ಕಥನದಲ್ಲಿ ರೂಪ ಪಡೆದಿರುತ್ತದೆ; ಹಾಗೂ ಆ ಸಂದರ್ಭದಲ್ಲಿ ಅವರಿಗೆ ಲಭ್ಯವಾಗುವ ವ್ಯಾಕರಣ, ಅರ್ಥ ಮತ್ತು ಸಾಂಸ್ಕೃತಿಕ ಸಂಜ್ಞೆಗಳ ಮೂಲಕ ವ್ಯಕ್ತಿಗಳ ವ್ಯಾಖ್ಯಾನದ ಆಧಾರದ ಮೇಲೆ ಆ ಕಥನ ಅರ್ಥ ಪಡೆದುಕೊಳ್ಳುತ್ತದೆ" (Robert Scholes, Semiotics and Interpretation, New Haven : Yale University Press. ೧೯೮೨)

ಪಠ್ಯಗಳಲ್ಲಿ ಸೈದ್ಧಾಂತಿಕವಾದ ನಿಲುವುಗಳು ಢಾಳಾಗಿರುವಂಥ ಸಂದರ್ಭಗಳಲ್ಲಿ ಕಥನ ವಿಶ್ಲೇಷಣೆಯ ಸಂಶೋಧನಾ ವಿಧಾನ ಉಪಯುಕ್ತವೆನಿಸುತ್ತದೆ. ಗಣಕಯಂತ್ರವನ್ನು ಉಪಯೋಗಿಸಿ ಮಾಡುವ ಸಂಶೋಧನೆಯಲ್ಲಿ ಪರಿಣತಿಯನ್ನು ಸಾಧಿಸುವುದು ಈ ಕಾಲದ ಅಗತ್ಯವಾದರೂ ಒಂದು ನಿಗದಿತ ಸಂಶೋಧನೆಗೆ ಅದು ಸೀಮಿತವಾಗುವ ಸಾಧ್ಯತೆಯಿದೆ. ಅಷ್ಟೊಂದು ಬಂಡವಾಳ ಹಾಕಿ, ಅಷ್ಟೊಂದು ಸಮಯವನ್ನು ವಿನಿಯೋಗಿಸಿದ ಬಳಿಕ ನಾವು ಉಪಯೋಗಿಸಿದ ಯಂತ್ರಾಂಶ ಮತ್ತು ತಂತ್ರಾಂಶವನ್ನು ಮುಂದುವರಿದು ಬಳಸದೇ ಹೋದರೆ ವ್ಯರ್ಥವಾಗುತ್ತದೆ. ಕೆಲವು ತಜ್ಞರ ಪ್ರಕಾರ ಸಂಶೋಧಕರು ಯಂತ್ರಾಂಶ ಉಪಕರಣಗಳನ್ನು ಬಳಸುವುದರಲ್ಲಿ ಪರಿಣತಿ ಪಡೆಯುವುದರಿಂದ ಅವರ ವಿಶ್ಲೇಷಣಾ ಕೌಶಲ ವೃದ್ಧಿಸಿ ಸಂಕೀರ್ಣವಾದ ದತ್ತಾಂಶಗಳಿಂದ ಮಾಹಿತಿ ಶಿಲ್ಪವನ್ನು ರಚಿಸುವ ಕ್ರಮವನ್ನು ಕರಗತ ಮಾಡಿಕೊಳ್ಳುತ್ತಾರೆ. ಅಂತಿಮವಾಗಿ, ಈ ಹೊಸ ವಿಧಾನಗಳನ್ನು ಅನ್ವಯ ಮಾಡಿಕೊಳ್ಳುವ ಮೂಲಕ ಸಂಶೋಧಕರು ತಮ್ಮ ಕ್ಷೇತ್ರದ ವಿಸ್ತಾರ ಮತ್ತು ಮುಂದಿನ ನಡಿಗೆಯನ್ನು ಗುರುತಿಸಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ.

* * * *

ಜನಾಂಗ ವಿವರಣಶಾಸ್ತ್ರ (Ethnography)ದ ಮೂಲಕವೂ ಸಂಶೋಧನೆಯ ವಿಧಾನಗಳನ್ನು ಕಂಡು ಹಿಡಿದುಕೊಳ್ಳುವ ಪ್ರಯತ್ನಗಳಾಗಿವೆ. ಶೈಕ್ಷಣಿಕ ಸಂಸ್ಥೆಗಳಲ್ಲಿ ಜನಾಂಗ ವಿವರಣಶಾಸ್ತ್ರವನ್ನು ಸಾಮಾನ್ಯವಾಗಿ ಸಮಾಜವಿಜ್ಞಾನಗಳ ಅಧ್ಯಯನದಲ್ಲಿ ಅದರಲ್ಲೂ ವಿಶೇಷವಾಗಿ ಮಾನವ ಶಾಸ್ತ್ರದಲ್ಲಿ ಬಳಸಲಾಗುತ್ತಿದೆ. ಮೂಲತಃ ಇದು ವ್ಯಕ್ತಿಗಳ ಸಾಂಸ್ಕೃತಿಕ ವರ್ತನೆಯನ್ನು ಅಧ್ಯಯನ ಮಾಡಿ ವ್ಯಾಖ್ಯಾನಿಸುವುದರಿಂದ ಭಾಗವಹಿಸುವವರ ವೀಕ್ಷಣೆಯ ಮೇಲೆ ಅವಲಂಬಿತವಾಗುತ್ತದೆ. ಜನಾಂಗವಿವರಣಶಾಸ್ತ್ರ ಎಂದ ಕೂಡಲೇ ಎದುರಾಗುವ ಚಿತ್ರವೆಂದರೆ ಆತ ಸಾಮಾನ್ಯವಾಗಿ ತಾನು ಅಧ್ಯಯನ ಮಾಡುವ ಜನರ ನಡುವೆ ವಿಸ್ತೃತವಾದ ಕಾಲದವರೆಗೆ ಇದ್ದು ಸಂವಾದದ ಮೂಲಕ ಆ ಜನರ ಪದ್ಧತಿ ಮತ್ತು ಆಚರಣೆಗಳನ್ನು ಸೂಕ್ಷ್ಮವಾಗಿ ಗಮನಿಸುತ್ತಾನೆ.

ಕ್ಷೇತ್ರದಲ್ಲಿರುವ ಕಾಲಕ್ಕೆ ಜನಾಂಗವಿವರಣ ಶಾಸ್ತ್ರಜ್ಞ ತನ್ನ ವೀಕ್ಷಣೆಯ ವಿವರಗಳನ್ನು ಟಿಪ್ಪಣಿಗಳನ್ನು ಮಾಡಿಕೊಳ್ಳುತ್ತಾನೆ. ಅಲ್ಲಿಂದ ಮನೆಗೆ ಬಂದ ಬಳಿಕ ಆ ಪ್ರತ್ಯೇಕ ಸಮುದಾಯವನ್ನು ಕುರಿತಾದ ಜನಾಂಗವಿವರಣ ಅಧ್ಯಯನವನ್ನು ಕೈಗೊಳ್ಳುತ್ತಾನೆ. ಈ ರೀತಿಯಾಗಿ ಒಬ್ಬ ಜನಾಂಗ ವಿವರಣಶಾಸ್ತ್ರಜ್ಞನನ್ನು ವಿವರಿಸಿದರೆ ಅದು ಅತ್ಯಂತ ಸರಳವೆನಿಸುತ್ತದೆ. ಜನಾಂಗ ವಿವರಣಶಾಸ್ತ್ರವೆಂದರೆ ಮೂಲತಃ ಸಂಶೋಧನಾ ಪ್ರಕ್ರಿಯೆಯನ್ನು ಏಕಕಾಲದಲ್ಲಿ ವಿವರಣಶಾಸ್ತ್ರ ವರದಿಯನ್ನು ತಿಳಿಸುತ್ತದೆ. ಹಾಗಾಗಿ ಇದು 'ಸಂಶೋಧನೆಯ ಅಧ್ಯಯನವೂ ಅಧ್ಯಯನದ ಫಲಿತಾಂಶವೂ' ಆಗಿರುತ್ತದೆ.

ಜನಾಂಗವಿವರಣಶಾಸ್ತ್ರವನ್ನು ಅರಿಯುವಲ್ಲಿ ಸಹಾಯ ಮಾಡಿರುವ ಗ್ರಂಥ: (Writing Culture: The Poetics and Politics of Ethnography ೧೯೮೬) (Ed. James Clifford and George E.Marcus.) ಇದುವರೆಗಿನ ಗೃಹೀತವೆಂದರೆ ಜನಾಂಗವಿವರಣ ಶಾಸ್ತ್ರವೆಂಬುದು 'ಸತ್ಯಗಳನ್ನು' ನಿಸ್ಸಂದಿಗ್ಧವಾಗಿ ಹೇಳುತ್ತದೆ ಎಂಬುದು. ಅಪರಿಚಿತರಾದ ಜನಸಮುದಾಯದ ಬದುಕಿನ ವಿವರಗಳನ್ನು ವೀಕ್ಷಕನೊಬ್ಬ ಸಾಕ್ಷಾತ್ತಾಗಿ ಕಂಡು ಬರೆದ ದಾಖಲೆಯೆಂದು ಜನಜನಿತವಾಗಿತ್ತು; ಆದರೆ ಈಗ ಅರಿವಿಗೆ ಬಂದಿರುವ ಸಂಗತಿಯೆಂದರೆ ಜನಾಂಗ ವಿವರಣಶಾಸ್ತ್ರವೆಂಬುದು ಪಾರ್ಶ್ವಿಕವಾದ ಸತ್ಯಗಳನ್ನು ಹೇಳುತ್ತದೆ; ಇದಕ್ಕೆ ಕಾರಣ ಅದರ ಬರಹದಲ್ಲಿ ತೊಡಗಿರುವವರು ತಮ್ಮ 'ಬದ್ಧತೆ'ಯನ್ನು, ತಮ್ಮ ಇಷ್ಟಾನಿಷ್ಟಗಳನ್ನು ಅದರಲ್ಲಿ ದಾಖಲಿಸಿಬಿಡುತ್ತಾರೆ. Writing Culture... ಎಂಬ ಪುಸ್ತಕ ತಿಳಿಸುವಂತೆ ಜನಾಂಗವಿವರಣಶಾಸ್ತ್ರವನ್ನು 'ಬರೆ ಸಾಹಿತ್ಯ'ವೆಂದು ಬಗೆಯಬಾರದು; ಆದರೆ ಈ ಶಾಸ್ತ್ರ ಬರಹವೇ ಆಗಿರುವುದಂತೂ ನಿಜ.

ಜನಾಂಗವಿವರಣಶಾಸ್ತ್ರಜ್ಞ ಎರಡು ಮುಖ್ಯವಾದ, ಪರಸ್ಪರ ಸಂಬಂಧವುಳ್ಳ ಕ್ಷೇತ್ರಗಳಲ್ಲಿ ಮಧ್ಯ ಪ್ರವೇಶಿಸುತ್ತಾನೆ. ಮೊದಲನೇ ಮಧ್ಯಪ್ರವೇಶಿಕೆ ಎಂದರೆ ದತ್ತಾಂಶವನ್ನು ಸಂಗ್ರಹಿಸಿ ವ್ಯಾಖ್ಯಾನಿಸುವುದರಲ್ಲಿ. ಎರಡನೇ ಮಧ್ಯಪ್ರವೇಶಿಕೆ ಬರಹ ರೂಪದಲ್ಲಿ ಪ್ರಕಟವಾಗುವ ಕಥನದಲ್ಲಿ ತಲುಪುವ ಸಂಶೋಧನಾ ತೀರ್ಮಾನಗಳಲ್ಲಿಯೂ ಇದು ಪ್ರತಿಫಲನವಾಗುತ್ತದೆ. ಹಾಗಾಗಿ, ಒಬ್ಬ ಜನಾಂಗವಿವರಣಶಾಸ್ತ್ರಜ್ಞ ಸಂಶೋಧನ ಪ್ರಕ್ರಿಯೆಯ ಎಲ್ಲ ಆಯಾಮಗಳನ್ನು ಆವರಿಸಿಕೊಳ್ಳುತ್ತಾನೆಯೇ ಹೊರತು ಆತ ತಟಸ್ಥನಾದ, ಪಕ್ಷಪಾತವಿಲ್ಲದ ವೀಕ್ಷಕ ಎಂದು ತಿಳಿಯಲಾಗದು.

ಪಾರಂಪರಿಕವಾಗಿ ಮಾನವಶಾಸ್ತ್ರದೊಳಗೆಯೇ ಜನಾಂಗವಿವರಣಶಾಸ್ತ್ರಜ್ಞರು ಎರಡು ಪ್ರಧಾನ ಪಠ್ಯಗಳನ್ನು ಪ್ರಕಟಿಸುತ್ತಾ ಬಂದಿದ್ದಾರೆ: ತಾವು ಗಮನಿಸುತ್ತಿರುವಂಥ ಜನ ಸಮುದಾಯದ ಜನಾಂಗವಿವರಣೆ ಮತ್ತು ಕ್ಷೇತ್ರಕಾಯ ಪ್ರಕ್ರಿಯೆಯ ಬಗೆಗಿನ ತಮ್ಮ ವೈಯಕ್ತಿಕ ಅನುಭವಗಳು. ಕ್ಷೇತ್ರಕಾರ್ಯದಲ್ಲಿ ಒಬ್ಬ ಜನಾಂಗ ಶಾಸ್ತ್ರಜ್ಞ ತೊಡಗಿರುವಾಗ ಆತ ತನ್ನ ವೈಯಕ್ತಿಕ ದಿನಚರಿಯನ್ನು ದಾಖಲಿಸುವಂಥ ಪರಿಪಾಠಕ್ಕೆ ಪ್ರೋತ್ಸಾಹ ದೊರಕಿಯೇ ಇದೆ. ಒಂದೇ ಪಠ್ಯದಲ್ಲಿ ಇರುವಂಥ ಸಂದರ್ಭದಲ್ಲಿ ಸಾಮಾನ್ಯವಾಗಿ ವೈಯಕ್ತಿಕ ಅನುಭವ ಆರಂಭದ ಭಾಗಗಳಲ್ಲಿ ಕಾಣಿಸುವುದುಂಟು; ಪುಸ್ತಕ ಅಥವಾ ವರದಿಯ ಪ್ರಧಾನ ಭಾಗ ಗಮನಿಸಬೇಕಾದ ಸಾಂಸ್ಕೃತಿಕ ಆಚರಣೆ ಗೋಚರವಾಗುತ್ತದೆ. ಸಂಶೋಧಕನ ಅನುಭವಗಳನ್ನು ಒಳಗೊಳ್ಳುತ್ತಲೇ ಸಾಮಾಜಿಕ ವಿಜ್ಞಾನ ಬೇಡುವ ಅಥವಾ ನಿರೀಕ್ಷಿಸುವ ವಸ್ತುನಿಷ್ಠತೆಯನ್ನು ಕಾಯ್ದುಕೊಳ್ಳುವುದು ಹೇಗೆ ಎಂಬ ಸಮಸ್ಯೆಗೆ ಉತ್ತರ ಕಂಡುಕೊಳ್ಳಬೇಕು.

ಜನಾಂಗವಿವರಣಶಾಸ್ತ್ರ ಸಿದ್ಧವಾಗುವುದು ಮೂಲತಃ ಬಹಿರಂಗದಲ್ಲಿ; ಪ್ರಯೋಗಾಲಯ ದಲ್ಲಿ ಅಲ್ಲ. ಈ ಕ್ಷೇತ್ರದ ಪರಿಣತ ದೀರ್ಘಕಾಲ ಸಾಮಾಜಿಕ ಜೀವನವನ್ನು ವೀಕ್ಷಿಸಿ ಇತರ ಸಂಸ್ಕೃತಿಗಳ ಬಗ್ಗೆ ತಿಳಿಯುತ್ತಾನೆ. ಬೇರೆ ಬೇರೆ ಸಂಶೋಧನ ವಿಧಾನಗಳನ್ನು ಅಳವಡಿಸುವಾಗ ಜನಾಂಗವಿವರಣಶಾಸ್ತ್ರದ ಗಮನ ಭಾಗವಹಿಸಿದವರ ವೀಕ್ಷಣೆ, ಕ್ಷೇತ್ರದಲ್ಲಿ ಪರಿಣತರ ಸಂದರ್ಶನ, ದಾಖಲೆಯ ವಿಶ್ಲೇಷಣೆ, ಆತ್ಮಚರಿತ್ರೆಗೆ ಸಂಬಂಧಿಸಿದ ವಿವರಗಳು– ಎಲ್ಲ ಕಡೆಯೂ ಹರಿಯುತ್ತದೆ. ಈ ವಿಧಾನದಲ್ಲಿ ದತ್ತಾಂಶ ಸಂಗ್ರಹಣೆ ಮತ್ತು ವಿಶ್ಲೇಷಣೆ ಏಕಕಾಲದಲ್ಲಿ ನಡೆಯುತ್ತಿರುತ್ತದೆ. ಮೊದಲು ದತ್ತಾಂಶ ಸಂಗ್ರಹಣೆ ಮಾಡಿ ನಂತರ ವಿಶ್ಲೇಷಣೆ

ಮಾಡುವ ಪರಿಪಾಠವಿಲ್ಲದ್ದರಿಂದ ಸಂಶೋಧಕ ನಿರಂತರವಾಗಿ ತನ್ನ ದತ್ತಾಂಶವನ್ನು ಕುರಿತು ಧ್ಯಾನಿಸುತ್ತಲೇ ವಿಶ್ಲೇಷಣೆ ಮಾಡಬೇಕಾಗುತ್ತದೆ.

ಒಟ್ಟಿನಲ್ಲಿ ಜನಾಂಗವಿವರಣಶಾಸ್ತ್ರ ಒಂದು ಪ್ರಮುಖವಾದ ಸಂಶೋಧನಾ ವಿಧಾನವಾಗಿದ್ದು ಸಾಂಸ್ಕೃತಿಕ ವರ್ತನೆಯನ್ನು ಶೋಧಿಸಲು ಮತ್ತು ವ್ಯಾಖ್ಯಾನಿಸಲು ಪ್ರಯತ್ನಿಸುತ್ತದೆ. ಹಾಗೆ ಮಾಡುವಾಗ ತಾನು ಪರಿಗಣಿಸುವ ಜನಸಮುದಾಯದ ಜೊತೆ ದೀರ್ಘಕಾಲೀನ ಸಂಪರ್ಕ ಮತ್ತು ಸಂವಾದದಲ್ಲಿರುತ್ತದೆ. ಹಾಗಾಗಿ, ಜನಾಂಗವಿವರಣಶಾಸ್ತ್ರ ಬಹಳ ಅರ್ಥಪೂರ್ಣವಾದ ಒಂದು ಅಧ್ಯಯನ ವಿಧಾನವಾಗಿದೆ. ಈ ಶಾಸ್ತ್ರವು ಎರಡು ವಿಧದಲ್ಲಿ ಕಾರ್ಯೋನ್ಮುಖವಾಗುತ್ತದೆ; ಒಂದು ಕಥೆ ಹೇಳುವ ಮಾರ್ಗವಾಗಿ, ಎರಡು ವೈಜ್ಞಾನಿಕ ಸಾಧನವಾಗಿ. ಈ ಶಾಸ್ತ್ರ ಕೇವಲ ಸಂಶೋಧನಾ ಪ್ರಕ್ರಿಯೆಯಾಗಿರದೆ ಸಂಶೋಧನೆಯ ಉತ್ಪನ್ನವೂ ಆಗಿದೆ. ಲಿಖಿತ ಪಠ್ಯ ಒಂದು ಸಾಹಿತ್ಯಿಕ ಕೃತಿಯಾಗುವುದರಿಂದ ವಿಮರ್ಶಾತ್ಮಕ ನೋಟಕ್ಕೂ ಅರ್ಹವಾಗಿರುತ್ತದೆ. ಸಾಹಿತ್ಯ ವಿದ್ವಾಂಸರು ಇದನ್ನು ಗಮನಿಸಬಹುದಾಗಿದೆ. ಜನಾಂಗವಿವರಣಶಾಸ್ತ್ರ ಸಂಶೋಧನವಾಗಿ ಮತ್ತು ಸಂಶೋಧನಾ ಪಠ್ಯವಾಗಿಯೂ ಪರಿಣಮಿಸುವುದರಿಂದ ಸಹಜವಾಗಿಯೇ ಅದು ಅಂತರ್ ಶಾಸ್ತ್ರೀಯ ವಿಶಾಲ ತಳಹದಿಯ ಬಹುಶಿಸ್ತೀಯ ಆಯಾಮವನ್ನು ಪಡೆದುಕೊಳ್ಳುತ್ತದೆ.

* * * *

ಈ ವಿಧಾನಗಳೇ ಅಲ್ಲದೆ ಪಾಶ್ಚಾತ್ಯ ಸಂಶೋಧನಾ ವಿಧಾನಗಳಲ್ಲಿ "ಪಠ್ಯೀಯ ವಿಶ್ಲೇಷಣೆ", "ಸಂದರ್ಶನ ವಿಧಾನ", "ಸಂಶೋಧನಾ ವಿಧಾನವಾಗಿ ಸೃಜನಶೀಲತೆ" ಇವೆಲ್ಲ ಚಾಲ್ತಿಯಲ್ಲಿವೆ. ಸ್ಥಳಾಭಾವದಿಂದಾಗಿ ಆ ವಿಧಾನಗಳನ್ನು ಇಲ್ಲಿ ಚರ್ಚಿಸಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಇನ್ನು ಮುಂದೆ ದೇಶೀಯ ಸಂಶೋಧನೆಯ ವಿಚಾರವಾಗಿ ಕೆಲವು ಸಂಗತಿಗಳನ್ನು ಚರ್ಚಿಸಬಹುದಾಗಿದೆ. "ಸಂಶೋಧನೆ: ಪರಿಕಲ್ಪನೆ" ಎಂಬ ಸಂಗತಿಯನ್ನು ಕುರಿತು ಬರೆಯುತ್ತ ಪ್ರೊ: ಕೆ.ವಿ.ನಾರಾಯಣ ಅವರು ಪ್ರಸ್ತುತ ಸಂದರ್ಭದಲ್ಲಿ 'ಸಂಶೋಧನೆ'ಯನ್ನು ಹೇಗೆ ಅರ್ಥೈಸಲಾಗುತ್ತಿದೆ ಎಂಬುದನ್ನು ವಿಶದಪಡಿಸಿದ್ದಾರೆ:

"ವಿಶ್ವವಿದ್ಯಾನಿಲಯಗಳಲ್ಲಿ ಅಧ್ಯಾಪಕರು ಬೋಧನೆಯೊಡನೆ ಸಂಶೋಧನೆಯನ್ನೂ ನಡೆಸುವ ಹೊಣೆಯನ್ನು ನಿರ್ವಹಿಸುತ್ತಾರೆ. ಸಂಶೋಧನೆಗೆ ಎಲ್ಲ ಚಟುವಟಿಕೆಗಳನ್ನೂ ಮೀಸಲಾಗಿರಿಸಿದ ಸಂಸ್ಥೆಗಳಿವೆ. ಕೈಗಾರಿಕೆಗಳು ಸಂಶೋಧನೆ ಮತ್ತು ಅಭಿವೃದ್ಧಿಗಾಗಿ ವಿಶೇಷ ಘಟಕಗಳನ್ನು ರೂಪಿಸಿರುತ್ತವೆ. ವಾಣಿಜ್ಯೋದ್ಯಮಗಳು ತಮ್ಮ ಉತ್ಪನ್ನಗಳ ಮಾರಾಟಕ್ಕಾಗಿ ವಿವಿಧ ಬಗೆಯ ಸಮೀಕ್ಷೆಗಳನ್ನು ನಡೆಸುತ್ತವೆ. ವಾರ್ತಾ ಮಾಧ್ಯಮಗಳು ಓದುಗ-ಕೇಳುಗ-ನೋಡುಗರನ್ನು ಉದ್ದೇಶಿಸಿ ಸಂಶೋಧನೆಗಳನ್ನು ಕಾಲಕಾಲಕ್ಕೆ ನಡೆಸುತ್ತವೆ. ಇವೆಲ್ಲದರ ಜೊತೆಗೆ ಹವ್ಯಾಸಿ ಸಂಶೋಧಕರೂ ಎಲ್ಲಾ ಕಡೆಯೂ ಇದ್ದಾರೆ. ಈ ವ್ಯಾಪ್ತಿಯನ್ನು ಗಮನಿಸಿದರೆ ಸಂಶೋಧನೆಯೆಂಬುದು ಈಗ ಕೇವಲ ಬೌದ್ಧಿಕ ಚಟುವಟಿಕೆಯಾಗಿ ಉಳಿಯದೆ ಹಲವರ ಶ್ರಮ ಮತ್ತು ಸಂಯೋಗವನ್ನು ಬಯಸುವ ಮತ್ತು ಎಲ್ಲರನ್ನೂ ಒಂದಲ್ಲ ಒಂದು ವಿಧದಲ್ಲಿ ಪ್ರಭಾವಿಸುವ ಸಾಮಾಜಿಕ ಕ್ರಿಯೆಯಾಗಿ ಕಾಣುತ್ತದೆ. ಸಂಶೋಧನೆ ಎಂಬ ಚಟುವಟಿಕೆಯನ್ನು ಇಷ್ಟು ವ್ಯಾಪಕವಾಗಿ ನೋಡಲು ಕೆಲವರು ಸಿದ್ಧರಿಲ್ಲದಿರಬಹುದು. ಅವರು ತಿಳಿಯುವಂತೆ ಇದು ಶುದ್ಧಾಂಗವಾಗಿ ಜ್ಞಾನಸಂಬಂಧಿಯಾದ ಚಟುವಟಿಕೆ ಮಾತ್ರ ಹಾಗಾಗಿ, ಕೆಲವು ನಿರ್ದಿಷ್ಟ ಬಗೆಯ ಚಟುವಟಿಕೆಗಳನ್ನು ಆಯ್ದು ಅವನ್ನು ಸಂಶೋಧನೆಯೆಂದು ಗುರುತಿಸಲು ಬಯಸುತ್ತಾರೆ. "

ಸಂಶೋಧನೆಯಲ್ಲಿ ಸತ್ಯವೆಂಬುದು ನಿರಂತರ ಗತಿಶೀಲಗುಣವುಳ್ಳದ್ದು; ಹಾಗಾಗಿ, ಸತ್ಯ ಏಕಕಾರಿಯಲ್ಲ ಎಂಬ ನಿಜವನ್ನು ಕನ್ನಡ ಸಂಶೋಧಕರು ಕಂಡುಕೊಂಡಿರುವರು. ಆಧುನಿಕೋತ್ತರ ಚಿಂತನೆಗಳ ಪ್ರಭಾವವನ್ನು ಇಲ್ಲಿ ಸ್ಪಷ್ಟವಾಗಿ ಗುರುತಿಸಬಹುದಾಗಿದೆ. "ಸತ್ಯವನ್ನು ಶೋಧಿಸಲು ನಿರ್ಲಿಪ್ತವಾದ, ವಸ್ತುನಿಷ್ಠವಾದ ಅಧ್ಯಯನ ವಿಧಾನವಿರಬೇಕು ಎಂದು ಪ್ರತಿಪಾದಿಸುವ ಸಾಂಪ್ರದಾಯಿಕ ಸಂಶೋಧನ ಚಿಂತನೆಗಳ ಎದುರಿಗೆ ಇಂದು ಆಧುನಿಕೋತ್ತರ ಚಿಂತನೆಗಳ ಸಂದರ್ಭದಲ್ಲಿ ಸತ್ಯವೆನ್ನುವುದು ಒಂದಲ್ಲ ಹಲವು; ಅವು ಸಂಶೋಧಕರ ಸಾಮಾಜಿಕ, ಕಾಲ ದೇಶಗಳ ಹಿನ್ನಲೆಯಲ್ಲಿ ಸೃಷ್ಟಿಯಾಗುವಂತಹವುಗಳು; ಸತ್ಯವೆನ್ನುವುದು ಹುಡುಕುವ ಕ್ರಿಯೆಯಲ್ಲ. ಬದಲಾಗಿ ಅದು ಸಂಶೋಧಕರ ಕಾಲ ದೇಶಗಳ ಹಿನ್ನೆಲೆಯಲ್ಲಿ ಸೃಷ್ಟಿಸಲ್ಪಡುತ್ತದೆ ಎಂಬ ನಿಲುವುಗಳು ಪ್ರಬಲವಾಗುತ್ತಿವೆ" (ಡಿ.ಆರ್. ದೇವರಾಜ್, ಸಂಶೋಧನೆ ಮತ್ತು ಅನ್ಯಜ್ಞಾನ ಶಿಸ್ತುಗಳು", **ಸಮಕಾಲೀನ ಸಂಶೋಧನೆ : ಏನು? ಎತ್ತ?** ೨೦೧೪, ಪು.೪೭)

ಈ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ವಿದ್ವಾಂಸರ ಮುಖ್ಯ ಕಾಳಜಿ ಎಂದರೆ ಸಾಹಿತ್ಯ ವಿಮರ್ಶೆ ಮತ್ತು ಸಾಹಿತ್ಯ ಮೀಮಾಂಸೆಯನ್ನು ಕಟ್ಟಲು ನಡೆಯುತ್ತಿರುವ ದೇಶೀ ಪ್ರಯತ್ನಗಳಿಗೆ ಸರಿಸಮವಾಗಿ ಕನ್ನಡದ್ದೇ ಆದ ಸಂಶೋಧನಾ ಸಿದ್ಧಾಂತವೊಂದನ್ನು ಕಟ್ಟಿಕೊಳ್ಳಲು ಸಾಧ್ಯವೆ ಎಂದು ಚಿಂತನೆ ಏಕೆ ನಡೆಯುತ್ತಿಲ್ಲ ಎಂಬುದು. ಈ ತರಹದ ಜಿಜ್ಞಾಸೆ ನಡೆಯದಿರಲು ಕಾರಣ, ವಿದ್ವಾಂಸರ ಪ್ರಕಾರ, ವಸಾಹತುಶಾಹಿಗಳು ನಡೆಸಿದ ಸಂಶೋಧನೆಯೇ ನಮಗೆ ಮಾದರಿಯಾಗಿದೆ ಎಂಬ ತಿಳುವಳಿಕೆ. ವಾಸ್ತವವಾಗಿ ವಸಾಹತು ಶಾಹಿಗಳ ಮಾರ್ಗಕ್ಕೂ ಮೊದಲು ಕನ್ನಡದಲ್ಲಿ ಅಸ್ತಿತ್ವದಲ್ಲಿದ್ದ ಕವಿರಾಜಮಾರ್ಗಕಾರ, ಕೇಶೀರಾಜ, ವಚನ ಸಂಕಲನಕಾರರು ತೋರಿಸಿದ ದಾರಿಯಿಲ್ಲವೆ? ನಮ್ಮ ಸಮಕಾಲೀನರಾದ ಶಂ.ಬಾ.ಜೋಶಿಯವರು ತೋರಿದ ಮಾರ್ಗವಿಲ್ಲವೆ? ಎಂಬುದು ಇವರ ವಾದ.

ವಸಾಹತೋತ್ತರ ಸಂದರ್ಭದಲ್ಲಿ ಎಡ್ವರ್ಡ್ ಸೈದ್, ನೋಮ್ ಚಾಮ್‌ಸ್ಕಿ, ಗ್ರಾಮ್ಷಿ, ಫೂಕೋ ಮುಂತಾದವರ ಚಿಂತನೆಗಳು ಕನ್ನಡ ಚಿಂತನೆಯನ್ನು ಪ್ರಭಾವಿಸಿರುವ ಕ್ರಮವನ್ನು ಗುರುತಿಸಿರುವ ಈ ವಿದ್ವಾಂಸರು ಇಂದು ನಿರಚನವಾದ, ಮಾರ್ಕ್ಸ್‌ವಾದ, ಸ್ತ್ರೀವಾದ, ನವಚಾರಿತ್ರಿಕವಾದ, ಸಬಾಲ್ಟರ್ನ್ ಓದುಗಳು ಕನ್ನಡ ಸಾಹಿತ್ಯ ಸಂಶೋಧನೆಯ ಮೂಲಕ ನಡೆಯುತ್ತಿವೆ ಎಂಬ ನಿಜವನ್ನು ತಿಳಿಸುತ್ತಾರೆ. ಆದರೆ ಈ ಮಾದರಿಯನ್ನು ಅನುಸರಿಸದೆಯೇ ಕನ್ನಡದ್ದೇ ಆದ, ದೇಶೀಯ ಮಾರ್ಗವನ್ನು ಕಂಡುಕೊಂಡು ಆಧುನಿಕ ಪ್ರಶ್ನೆಗಳಿಗೆ ಸಂಶೋಧನೆಯ ಮೂಲಕ ಉತ್ತರ ಹುಡುಕಲು ಸಾಧ್ಯವಿಲ್ಲವೇ? ಎಂಬ ಜಿಜ್ಞಾಸೆಯು ನಮ್ಮ ವಿದ್ವಾಂಸರದಾಗಿದೆ. ಪಾಶ್ಚಾತ್ಯರಿಂದ ಬಂದ ಒಂದು ಮಾದರಿಯನ್ನು ಪ್ರಜ್ಞಾಪೂರ್ವಕವಾಗಿ ಹೊರಗಿಡಬೇಕಾದ ಪ್ರಮೇಯವನ್ನು ಈ ವಿದ್ವಾಂಸರು ಸಮರ್ಥವಾಗಿ ಚರ್ಚಿಸುವ ರೀತಿ ಕಾಣುವುದಿಲ್ಲ.

ಸಾಹಿತ್ಯ ಅಧ್ಯಯನಗಳು ಆಯಾ ಕಾಲಘಟ್ಟದ ಸಾಮಾಜಿಕ, ರಾಜಕೀಯ ತುರ್ತುಗಳನ್ನು ಆಧರಿಸಿ ಬಹುರೂಪಿಯಾಗಿ ರೂಪುಗೊಳ್ಳುತ್ತಿರುವುದನ್ನು ಅರಿಯಲು ಹೊರಗಿನ ಪ್ರಭಾವ ಸಹಕಾರಿಯಾಗುತ್ತದೆ ಎಂದು ಒಪ್ಪಿಕೊಳ್ಳುತ್ತಲೇ ಅದನ್ನು ನಿರಾಕರಿಸುವುದು ನಮ್ಮ ವಿದ್ವಾಂಸರ ಮನಸ್ಸಿನಲ್ಲಿರುವ ದ್ವಂದ್ವ ಮತ್ತು ಗಲಿಬಿಲಿಗೆ ಹಿಡಿದ ಕನ್ನಡಿಯಾಗಿದೆ. ಜಾಗತೀಕರಣವೆನ್ನುವ ಸತ್ಯಸಂಗತಿಯ ಅಸ್ತಿತ್ವವನ್ನು ನಾವು ಅಂಗೀಕರಿಸಿದ ಕೂಡಲೇ ಅದರೊಟ್ಟಿಗೇ ನುಗ್ಗಿ ಬರುವ ಚಿಂತನಾಕ್ರಮಗಳನ್ನೂ ಒಳಗೆ ಬಿಟ್ಟುಕೊಳ್ಳುವುದು ಅನಿವಾರ್ಯ. ಗಾಳಿಯಲ್ಲಿರುವ

ಆಮ್ಲಜನಕವನ್ನು ಮಾತ್ರ ನಾವು ಶ್ವಾಸಕೋಶದ ಮೂಲಕ ಹೀರಿಕೊಳ್ಳುತ್ತೇವೆ; ಇಂಗಾಲವನ್ನು ತ್ಯಜಿಸುತ್ತೇವೆ. ಆದರೆ ಚಿಂತನೆಗಳನ್ನು ನಾವು ಹೀಗೆ ಸೋಸಿ ಪಡೆಯಲು ಸಾಧ್ಯವಾಗುವುದಿಲ್ಲ. ಜಾಗತೀಕರಣವೆನ್ನುವುದು ಒಂದು ಪ್ಯಾಕೇಜ್. ಹಾಗಾಗಿ ಪಾಶ್ಚಾತ್ಯರ ಚಿಂತನೆಗಳು ನಮ್ಮ ಪ್ರಜ್ಞಾಕೇಂದ್ರದಲ್ಲಿ ಪ್ರತಿಷ್ಠಾಪಿತವಾಗುವುದು ಆಶ್ಚರ್ಯವಲ್ಲ. ಅದು ಇಲ್ಲ ಎಂದು ನಟಿಸಿ ನಮ್ಮದೇ ಆದ ಶುದ್ಧ ಮಾದರಿಯೊಂದಿದೆ ಎಂದು ತಿಳಿಯುವುದು ಬದಲಾದ ಸನ್ನಿವೇಶದಲ್ಲಿ ಸಮಂಜಸವಾಗಲಾರದು.

ಇನ್ನೊಂದು ಗುಂಪಿನ ವಿದ್ವಾಂಸರು ಕನ್ನಡ ಬರಹವನ್ನು ಸರಿಪಡಿಸುವ ಉತ್ಕಟ ಆಸೆಯಿಂದ ಹೊರಟಿರುವ ಡಿ.ಎನ್.ಶಂಕರಭಟ್ಟರ ಪ್ರಯತ್ನಕ್ಕೆ ಕೈಜೋಡಿಸಿದರೆ ಕನ್ನಡ ಸಮಾಜದಲ್ಲಿರುವ ಮೇಲುಕೀಳುಗಳು ತಗ್ಗಬಹುದೆಂದು ತಿಳಿಯುತ್ತಾರೆ. ಆಧುನಿಕತೆ, ಆಧುನಿಕೋತ್ತರ, ನವ್ಯವಾದ, ಪರಂಪರೆ, ವಸಾಹತುಶಾಹಿ, ವಸಾಹತೋತ್ತರ, ಅಭಿವೃದ್ಧಿ, ವಿಶ್ವಾತ್ಮಕ, ಸಂಕಥನ, ಸಂಸ್ಕೃತಿ, ಸಾಂಸ್ಕೃತಿಕ ಅಧ್ಯಯನ, ಸಾಂಸ್ಕೃತಿಕ ಅಸ್ಮಿತೆ, ಸೈದ್ಧಾಂತಿಕ, ಅನನ್ಯತೆ, ಚಾರಿತ್ರಿಕ ಇತ್ಯಾದಿ ಸಂಸ್ಕೃತ ಪದಗಳನ್ನು ಆಮದು ಮಾಡಿಕೊಂಡು ನಮ್ಮ ಸಂಶೋಧನೆಯನ್ನು ಕಟ್ಟುವ ಬದಲು ಕನ್ನಡದ ಅರಿಮೆಯನ್ನು ಕನ್ನಡದಲ್ಲಿಯೇ ಪಡಿಮೂಡಿಸಬಹುದು ಎಂಬುದು ಹೊಸ ಉತ್ಸಾಹದಲ್ಲಿ ಹೊರಟಿರುವವರ ವಾದ. ಮಯ್ಯರಿಮೆ, ಮದ್ದರಿಮೆ, ಬಾನರಿಮೆ, ಎಣಿಕೆಯರಿಮೆ, ಹಣಕಾಸರಿಮೆ, ಏಡಿ ಹುಣ್ಣು, ಗಾಳಿ ಒತ್ತಡಕ, ಮೇಲಾಳು, ದುಂಚಗಲ, ನಡುವಣ ಇತ್ಯಾದಿ ನೂರಾರು ಪದಗಳನ್ನು ಟಂಕಿಸಿ ಈ ವಿದ್ವಾಂಸರು ಪರ್ಯಾಯ ಚಿಂತನೆಯನ್ನು ಒಡ್ಡುತ್ತಿದ್ದಾರೆ.

ಹೊರಗಿನಿಂದ ತಂದುಕೊಂಡ ಚಿಂತನೆಗಳನ್ನು ಕನ್ನಡದಲ್ಲಿ ಹೇಳಲೂ ಕೂಡ ಹೋಗದ ಹಾಗೆ, ಆಗದ ಹಾಗೆ ಚಿಂತನೆಯಲ್ಲಿ, ಮಂಡನೆಯಲ್ಲಿ 'ಇಂಗ್ಲಿಷ್–ಸಂಸ್ಕೃತ' ನುಡಿಗಟ್ಟು, ಪದಗಟ್ಟುಗಳನ್ನೇ ಬಳಸಿ ಬೆಳೆಸಿಕೊಂಡಿರುವುದರ ವಿರುದ್ಧ ಕೆಲವು ವಿದ್ವಾಂಸರು ದನಿಯೆತ್ತಿದ್ದಾರೆ. ಕನ್ನಡ ನಾಳಿನ ಸಮಾಜಕ್ಕೆ ಉಳಿಯಬೇಕೆಂಬ ಇರಾದೆ ಇವರದು. ಒಂದು ಕಾಲ ಘಟ್ಟದವರೆಗೆ ಕನ್ನಡದಲ್ಲಿ ರಚನೆಯಾದ ಸೃಜನಶೀಲ ಕೃತಿಗಳನ್ನು ಕನ್ನಡಿಗರು ಓದುತ್ತಿದ್ದರು, ಅರ್ಥಮಾಡಿಕೊಳ್ಳುತ್ತಿದ್ದರು. ಸಮಸ್ಯೆ ಶುರುವಾದದ್ದು ಸಂಸ್ಕೃತ ಮತ್ತು ಇಂಗ್ಲಿಷ್ ಭಾಷೆಗಳಿಗೆ ಮಣೆ ಹಾಕಲು ತೊಡಗಿದಾಗಿನಿಂದಲೇ. ಈ ಪ್ರಮಾಣದಲ್ಲಿ ಸಂಸ್ಕೃತ ಮತ್ತು ಆಂಗ್ಲಭಾಷೆಯನ್ನು ಅವಲಂಬಿಸುವ ಕಾರಣದಿಂದ ಕನ್ನಡ ಕಣ್ಮರೆಯಾಗುವ ಕಾಲ ದೂರವಿಲ್ಲವೆಂಬುದು ಇವರ ಆತಂಕ. ಹಾಗಾಗಿ ಅವರು ಕೇಳುವ ಪ್ರಶ್ನೆ (ಕೇಳ್ವಿ): "ಕನ್ನಡವನ್ನು ನೆರಳಾಗಿಸಿಕೊಂಡು ಬದುಕುತ್ತಿರುವ 'ಸಂಸ್ಕೃತ'ವು ಇವತ್ತು ತಾನೇ ಕನ್ನಡಕ್ಕೆ ನೆರಳೆಂದು ಬೀಗುವಂತೆ ಆಗಿಬಿಟ್ಟಿದೆಯೇ?" ಕನ್ನಡ ನುಡಿಯಲ್ಲಿಯೇ ಸಂಸ್ಕೃತ ಭಾಷೆ ತಾನೇ ತಾನಾಗಿ ವ್ಯಾಪಿಸಿರುವ ಹಿನ್ನೆಲೆಯಲ್ಲಿ ಪ್ರಜ್ಞಾಪೂರ್ವಕವಾಗಿ ಅದನ್ನು ಹೊರಗಿಟ್ಟು ನಾವು ಹೊಸ ಪದಗಳನ್ನು ಟಂಕಿಸುತ್ತಾ ಕೂರುವುದು ಚಕ್ರವನ್ನು ಹೊಸದಾಗಿ ಕಂಡು ಹಿಡಿಯುವ ವ್ಯರ್ಥ ಸಾಹಸವಾಗಿ ತೋರುವುದಿಲ್ಲವೆ? ಮಲೆಯಾಳಂ ಭಾಷೆಯವರು ಸಂಸ್ಕೃತವನ್ನು ದೊಡ್ಡ ಪ್ರಮಾಣದಲ್ಲಿಯೇ ಸ್ವೀಕರಿಸಿದ್ದಾರೆ. ಹಾಗಾಗಿ ಅವರು ಸಂಶೋಧನೆಯನ್ನು, ಚಿಂತನೆಯನ್ನು ಕೈಕೊಳ್ಳುವಾಗ ಸಿದ್ಧವಾದ ಸಂಸ್ಕೃತದಲ್ಲಿ ವ್ಯವಹರಿಸುವುದರಿಂದ ಅವರು ನಮಗಿಂತ ಮುಂದೆ ಇರುವುದಿಲ್ಲವೆ? ಎಂಬ ಅನಿಸಿಕೆ ನನ್ನದಾಗಿದೆ. ಆಂಗ್ಲ ಭಾಷೆಯನ್ನು ನಾವು ಅತಿಯಾಗಿ ಅವಲಂಬಿಸುವುದು ಸೂಕ್ತವಲ್ಲ ಎಂಬುದೇನೊ ಸರಿ. ಆದರೆ ಆಂಗ್ಲಭಾಷೆಯೂ ಸಹ ಈವತ್ತು ಶುದ್ಧ ರೂಪದಲ್ಲಿ ನಮಗೆ ಲಭ್ಯವಾಗುವುದಿಲ್ಲ. ಬಹುತೇಕ ಪದಗಳನ್ನು ಆಂಗ್ಲರು ಲ್ಯಾಟಿನ್ ಮತ್ತು ಗ್ರೀಕ್ ಮೂಲಗಳಿಂದ ಪಡೆದುಕೊಂಡಿರುವುದು

ಎಲ್ಲರಿಗೂ ತಿಳಿದಿರುವ ಸಂಗತಿಯೇ. ಮಡಿವಂತಿಕೆಯಿಲ್ಲದೆ ಬೆಳೆದ ಭಾಷೆ ಇಂಗ್ಲಿಷ್. ಕನ್ನಡವನ್ನು ಕಾಪಾಡಿಕೊಳ್ಳುವ ನೆಪದಲ್ಲಿ ಇನ್ನೊಂದು ಅತಿಗೆ ಹೋಗಿ ನಾವು ಮಡಿವಂತರಾಗುತ್ತಿದ್ದೇವೆಯೇನೋ ಅನ್ನಿಸುತ್ತಿದೆ.

ಕನ್ನಡದಲ್ಲೇ ಆಲೋಚಿಸಿ ಬರೆಯುವುದು ಅತ್ಯಂತ ಸ್ವಾಗತಾರ್ಹ; ಆದರೆ ವಸ್ತು ಸ್ಥಿತಿಯೇ ಬೇರೆ. ಹಳೆಗನ್ನಡ ಕಬ್ಬಿಣದ ಕಡಲೆ ಎಂದು ಬಗೆದು ಹೆಚ್ಚು ಹೆಚ್ಚು ಅದನ್ನು ಹೊರಗಿಡುವ ಪರಿಪಾಠ ಜನಜನಿತವಾಗಿರುವಾಗ ಅಚ್ಚಕನ್ನಡದಲ್ಲಿಯೇ ವ್ಯವಹರಿಸಬೇಕೆಂದು ನಿರೀಕ್ಷಿಸುವುದು ಒಂದು ಅಸಹಜ ಒತ್ತಡವನ್ನೇ ಹೇರಿದಂತಾಗುತ್ತದೆ. ಹೊಸ ತಲೆಮಾರಿನ ಯುವ ವಿದ್ವಾಂಸರ ನಿತ್ಯವ್ಯವಹಾರದ ಭಾಷೆ ಒಂದು ಬಗೆಯಾಗಿದ್ದು ಅವರ ಶೈಕ್ಷಣಿಕ ತರಬೇತಿಯ ಭಾಷೆ ತೀರಾ ಭಿನ್ನವಾಗಿರುವ ಸಂದರ್ಭದಲ್ಲಿ ಪ್ರತಿರೋಧವುಂಟಾಗುತ್ತದೆ. ಜನರು ಬೀದಿಯಲ್ಲಾಡುವ ಭಾಷೆಗೂ ಒಬ್ಬ ವಿದ್ವಾಂಸ ಬಳಸುವ ಭಾಷೆಗೂ ವ್ಯತ್ಯಾಸವಿದೆಯೆಂಬುದು ಸ್ವವಿದಿತ. ವಿದ್ಯೆಯ ಹಾದಿಯೇ ಹಾಗೆ ವಿಶಿಷ್ಟ ಭಾಷೆಯ ಉಪಯೋಗವನ್ನು ಅನಿವಾರ್ಯಗೊಳಿಸುತ್ತದೆ. ಈ ಹಿನ್ನಲೆಯಲ್ಲಿ ಹೊಸ ಜ್ಞಾನ ನುಗ್ಗಿ ಬರುತ್ತಿರುವಾಗ ನಮ್ಮ ನುಡಿಗಟ್ಟನ್ನು ನಾವು ಟಂಕಿಸುತ್ತಾ ಕೂರುವುದು ತುಂಬಾ ದುಬಾರಿ ಚಟುವಟಿಕೆಯೆಂಬುದು ನನ್ನ ವಿನಮ್ರ ತಿಳುವಳಿಕೆ. ಹಾಗಂತ ನಮ್ಮ ತನವನ್ನು ನಾವು ಸಂಪೂರ್ಣವಾಗಿ ಮರೆತು ಪಾಶ್ಚಾತ್ಯ ಪರಂಪರೆಗೆ ಮತಾಂತರವಾಗಿ ಬಿಡಬೇಕು ಎಂಬುದು ನನ್ನ ಇಂಗಿತವಲ್ಲ.

"ಹಳೆಗನ್ನಡ ಸಾಹಿತ್ಯ ಮತ್ತು ಅದರ ಸಂಶೋಧನೆಯ ಸಾಧ್ಯತೆ" ಎಂಬ ತಮ್ಮ ಲೇಖನದಲ್ಲಿ ಡಾ.ಕೇಶವಶರ್ಮ ಅವರು ಪಂಪನ **ಆದಿಪುರಾಣ**ದ ಒಂದು ಸಂದರ್ಭವನ್ನು ಉಲ್ಲೇಖಿಸಿ ನೀಲಾಂಜನೆಯ ಪೀಕದಾನಿಯನ್ನು ಹಿಡಿಯುವ ಪರಿಚಾರಿಕೆಗೂ ಗೊತ್ತಿರುವ ವಿಚಾರ ಅಂಗಗಳ ಮೂಲಕ ಭಾವಪ್ರಕಟಣೆ ಎಂದು ತಿಳಿಸಿದ್ದಾರೆ. ಮೂವತ್ತೆರಡು ಅಂಗಾಹಾರಗಳೆನ್ನುವಾಗ (ಹಸ್ತಾಭಿನಯದಲ್ಲಿ) ಪತಾಕ, ತ್ರಿ–ಪತಾಕ, ಕರ್ತರೀಮುಖ, ಅರ್ಧಚಂದ್ರ, ಅರಾಲ, ಶುಕತುಂಡ, ಮುಷ್ಠಿ, ಶಿಖರ, ಕಪಿತ್ಥ, ಕಟಕಾಮುಖ, ಸೂಚ್ಯಾಸ್ಥ, ಪದ್ಮಕೋಶ, ಸರ್ಪಶೀರ್ಷಕ, ಮೃಗಶೀರ್ಷ, ಕಾಂಗೂಲ, ಅಲಪದ್ಮ, ಚತುರ, ಭ್ರಮರ, ಹಂಸಾಸ್ಯ, ಹಂಸಪಕ್ಷ, ಸಂದಂಶ, ಮುಕುಲ, ಊರ್ಣನಾಭ ಮತ್ತು ತಾಮ್ರಚೂಡ ಇತ್ಯಾದಿ ಸಂಗತಿಗಳನ್ನು ಕ್ರೋಡೀಕರಿಸಿದ್ದಾರೆ.

ಇವಕ್ಕೆಲ್ಲ ಕನ್ನಡ ಪದಗಳನ್ನು ಟಂಕಿಸಿಕೊಂಡು ಸಂಶೋಧನೆಗೆ ತೊಡಗುವುದು ಸಾಧ್ಯವೆ ಮತ್ತು ಸಾಧುವೆ? ದತ್ತಕವಾಗಿ ಬಂದ ಜ್ಞಾನ ಲಾಭವನ್ನು ನಮ್ಮ ತಲೆಮಾರಿನಲ್ಲಿ ಗರಿಷ್ಠ ಪ್ರಮಾಣದಲ್ಲಿ ಉಪಯೋಗಿಸಿಕೊಂಡು ಅದರ ಉತ್ಪನ್ನವನ್ನು ಮುಂದಿನ ಜನಾಂಗಕ್ಕೆ ಬಳುವಳಿಯಾಗಿ ನೀಡುವ ಪರಿಪಾಠ ಚೇತೋಹಾರಿ. ಪಂಪ ಕನ್ನಡದ ಮೇರು ಕವಿ; ಅವನನ್ನು ಅರ್ಥಮಾಡಿಕೊಂಡು ಸಂಶೋಧನೆಯನ್ನು ಮುಂದುವರಿಸುವಾಗ ಸಂಸ್ಕೃತ ಭಾಷೆಯ ಅವಲಂಬನೆ ನಮಗೆ ಅನಿವಾರ್ಯ ಎಂಬುದು ಕೇಶವಶರ್ಮರ ಚರ್ಚೆಯಿಂದಲೇ ಸಾಬೀತಾಗುತ್ತದೆ.

ಮುಂದುವರಿದು ಕೇಶವಶರ್ಮರು ಹೇಳುವಂತೆ "ಕನ್ನಡಂಗಳೊಳ್" ಎಂದು ಕವಿರಾಜಮಾರ್ಗಕಾರನು ಸೂಚಿಸುವಾಗ ಹಲವು ಕನ್ನಡಗಳೂ ಹಿಂದೆ ಪ್ರಚಲಿತವಿರುವ ಸಾಧ್ಯತೆಯಿರುತ್ತದೆ. ಒಂದು ಪ್ರಾಂತದಲ್ಲಿ ನಿರ್ದಿಷ್ಟವೆನಿಸಿದ ಭಾಷಾಪ್ರಯೋಗ ಇನ್ನೊಂದರಲ್ಲಿ ದೋಷವಾಗಿ ಕಾಣುತ್ತಿದ್ದಿರಬೇಕು. ಹೀಗೆ, ಸರ್ವಸಾಮಾನ್ಯವಾಗಿ ದೋಷಗಳು ಹಾಗೂ

ಪ್ರಾಂತಭೇದಗಳಿಂದ ಸಂಜನಿಸುತ್ತಿದ್ದ ದೋಷಗಳು– ಇವು ಕೂಡಿ, ದೋಷ ಪ್ರಮಾಣ ಅಪರಿಮಿತವಾಗಿರಬೇಕು. "ಕನ್ನಡಂಗಳೊಳ್ ದೋಸಂ ಇನಿತೆಂದು ವಾಸುಗಿಯುಂ ಅರಿಯಲಾರ" ಎಂಬ ಮಾತು ಅರ್ಥಗರ್ಭಿತ. ಸಂಶೋಧನೆಯಲ್ಲಿ ಸರ್ವಮಾನ್ಯವಾಗಿ ಒಪ್ಪಿತವಾಗಿರುವ ಕನ್ನಡದ ಚಹರೆ ಯಾವುದು ಎಂದು ನಿರ್ಧರಿಸುವುದು ಸುಲಭ ಸಾಧ್ಯವಲ್ಲ. ಮಂಗಳೂರು ಕನ್ನಡ, ಮೈಸೂರು ಕನ್ನಡ ಹಾಗೂ ಧಾರವಾಡ ಕನ್ನಡಗಳು ಸ್ಥೂಲವಾಗಿ ನಮಗೆ ದಕ್ಕುವ ಮೂರು ಬಗೆಯ ಕನ್ನಡಗಳು. ಇವಿಷ್ಟರಲ್ಲಿ ಯಾವುದಕ್ಕೆ ಮಾನ್ಯತೆ, ಪ್ರಾಧಾನ್ಯತೆ? ಯಾವ ಒಂದು ಪ್ರಭೇದಕ್ಕೆ ಮಣೆ ಹಾಕಿದರೂ ಉಳಿದೆರಡು ಕ್ರಮದ ನುಡಿಯವರು ಮುನಿಸಿಕೊಳ್ಳುವ ಸಾಧ್ಯತೆ ಇಲ್ಲವೆ? ಆದ್ದರಿಂದ ಇದು ಬಗೆಹರಿಯದ ಸಮಸ್ಯೆಯಾಗಿಯೇ ತೋರುತ್ತದೆ.

ಒಟ್ಟಿನಲ್ಲಿ, ಸಂಶೋಧನೆಯಲ್ಲಿ ಭಾಷೆಯ ಪ್ರಭೇದ ಯಾವುದಿರಬೇಕು ಎಂಬ ತಕರಾರನ್ನೇ ಪ್ರಧಾನವಾಗಿ ಪರಿಗಣಿಸಿ, ಸಂಸ್ಕೃತವನ್ನು ಹೊರಗಿಡಬೇಕು, ಇಂಗ್ಲಿಷ್‌ಅನ್ನು ಹೊರಗಿಡಬೇಕು ಎಂದು ಹಠ ಮಾಡದೆ ನಮ್ಮ ಈವತ್ತಿನ ಜ್ಞಾನಕ್ಕೆ ನಾವು ಪರಿಣಾಮಕಾರಿಯಾಗಿ ಪ್ರತಿಸ್ಪಂದಿಸುವ ಕ್ರಮ ಯಾವುದು ಎಂಬುದನ್ನು ಹುಡುಕಬೇಕಾಗಿದೆ. ಮಾರ್ಕ್ಸ್ ಸಿದ್ಧಾಂತ, ಸ್ತ್ರೀವಾದಿ ಚಿಂತನೆ, ನಿರಚನಾವಾದ, ನವಚಾರಿತ್ರಿಕವಾದ – ಇವೆಲ್ಲ ಕನ್ನಡ ಸಂಶೋಧನೆಯ ಮೂಲಕ ನಡೆಯುತ್ತಿರುವ ಸಂದರ್ಭದಲ್ಲಿ ನಾವು ಸ್ಪಷ್ಟವಾಗಿ ಪ್ರತಿಸ್ಪಂದಿಸುತ್ತಿರುವುದು ಜಾಗತಿಕ ಬೆಳವಣಿಗೆಗಳಿಗೆ ಎಂಬುದನ್ನು ಮರೆಯಬಾರದು. ಮಾರ್ಕ್ಸ್ ಸಿದ್ಧಾಂತ ಹೊಸ ನೀರಾಗಿ ನಮ್ಮ ಬಳಿಗೆ ಬಂದದ್ದು ಸುಳ್ಳೆ? ಸ್ತ್ರೀವಾದ ಬಿಡುಗಡೆಯ ಬೆಳಕಾಗಿ ತೋರುತ್ತಿಲ್ಲವೆ? ಅಲಕ್ಷಿತರ ಚರಿತ್ರೆ ಕೇವಲ ಕಪೋಲಕಲ್ಪಿತವೆ? ಈ ಪ್ರಶ್ನೆಗಳಿಗೆಲ್ಲ ಉತ್ತರ ಸ್ಪಷ್ಟವಾಗಿಯೇ ಇದೆ. "ನೊ ಮ್ಯಾನ್ ಇಸ್ ಆ್ಯನ್ ಐಲ್ಯಾಂಡ್" ಎಂದು ತುಂಬಾ ಅರ್ಥಗರ್ಭಿತವಾಗಿ ಕವಿ ಜಾನ್ ಡನ್ ಮುನ್ನೂರು ವರ್ಷಗಳ ಹಿಂದೆಯೇ ಹೇಳಿದ್ದಾನೆ. 'ಯಾವ ವ್ಯಕ್ತಿಯೂ ದ್ವೀಪವಲ್ಲ' ಎಂಬ ಮಾತು ಎಂದಿಗಿಂತ ಇಂದು ಈ ಮಾತು ಹೆಚ್ಚು ಮಹತ್ವದ್ದಾಗಿದೆ. ಅಂತರ್ ಶಿಸ್ತೀಯವಾದ ಅಧ್ಯಯನ ಹೇಗೆ ಇಂದು ಸಲ್ಲತಕ್ಕ ಜ್ಞಾನಾನ್ವೇಷಣೆಯ ಮಾರ್ಗವಾಗಿದೆಯೋ ಅದೇ ತರಹ ಎಲ್ಲ ದೇಶಗಳ ಜ್ಞಾನದ್ರವ್ಯದಿಂದ ನಾವು ಲಾಭ ಪಡೆದುಕೊಳ್ಳಬೇಕಾಗಿದೆ. ಇಂಥ ಚಾರಿತ್ರಿಕ ಕಾಲಘಟ್ಟದಲ್ಲಿ ಸಂಸ್ಕೃತವನ್ನು ಹೊರಗಿಡಿ, ಇಂಗ್ಲಿಷ್‌ಅನ್ನು ನಿರ್ಬಂಧಿಸಿ ಅಂತ ಹೇಳುತ್ತಾ ಕೂರುವುದು ಮೌಲ್ಯಯುತ ಸಮಯವನ್ನು ಕಳೆದುಕೊಳ್ಳುವ ಕ್ರಮವಾಗಿದೆ. ಕನ್ನಡ ಸಂಶೋಧನೆ ಹೊಸ ಮಾರ್ಗ ಕಂಡುಕೊಳ್ಳುತ್ತಿರುವ ಈ ಹೊತ್ತಿನಲ್ಲಿ ಒಳಗೊಳ್ಳುವ ಕ್ರಿಯೆಗೇ ಒತ್ತು ಕೊಡಬೇಕಾದ್ದು ಅನಿವಾರ್ಯ.

■

೪

ಸಂಶೋಧನೆಯ ಪರಿಕರಗಳು ಮತ್ತು ಅವುಗಳನ್ನು ಬಳಸಿಕೊಂಡ ಬಗೆ

ಡಾ.ಎಂ.ಜಿ.ಮಂಜುನಾಥ

ಕನ್ನಡ ಸಾಹಿತ್ಯ, ಸಂಸ್ಕೃತಿಯನ್ನು ಕುರಿತಂತೆ ನಡೆದಿರುವ ಸಂಶೋಧನೆಯನ್ನು ಹಾಗೂ ಆ ಸಂಶೋಧನೆಯನ್ನು ಮಾಡಿರುವ ಸಂಶೋಧಕರು ತಮ್ಮ ಸಂಶೋಧನೆಗೆ ಬಳಸಿಕೊಂಡಿರುವ ಆಕರ ಸಾಮಗ್ರಿಗಳು ಮತ್ತು ಅವುಗಳನ್ನು ತಮ್ಮ ಸಂಶೋಧನೆಗೆ ಬಳಸಿಕೊಂಡಿರುವ ಬಗೆಯನ್ನು ಕುರಿತು ಪ್ರಸ್ತುತ ಸಂಪ್ರಬಂಧದಲ್ಲಿ ವಿಶ್ಲೇಷಿಸಲಾಗಿದೆ.

ಕನ್ನಡ ನಾಡು, ನುಡಿ, ಇತಿಹಾಸ, ಸಮಾಜ, ಸಂಸ್ಕೃತಿ, ಹಸ್ತಪ್ರತಿಗಳು, ಶಾಸನಗಳು ಮುಂತಾದವುಗಳನ್ನು ಕುರಿತು ಮೊತ್ತಮೊದಲು ಸಂಶೋಧನೆ ನಡೆಸಿದ ಕೀರ್ತಿ ಕರ್ನಲ್ ಮೆಕೆಂಜಿಗೆ ಸಲ್ಲುತ್ತದೆ. ಟಿಪ್ಪುಸುಲ್ತಾನನ ಪತನಾನಂತರ ಮೈಸೂರು ರಾಜ್ಯದ ಭೂಪರಿವೀಕ್ಷಣಾ ಕಾರ್ಯಕ್ಕೆ ನೇಮಕಗೊಂಡ ಕರ್ನಲ್ ಮೆಕೆಂಜಿಯು ಅಂದಿನ ಮೈಸೂರು ರಾಜ್ಯವನ್ನು ಸಂಪೂರ್ಣವಾಗಿ ಸಂಚರಿಸಿ ಸುಮಾರು ಹತ್ತು ವರ್ಷಗಳ ಕಾಲ ನಿರಂತರವಾಗಿ ಪರಿಶ್ರಮದಿಂದ ಕ್ಷೇತ್ರಕಾರ್ಯ ಮಾಡಿ ಅಪಾರವಾದ ಮಾಹಿತಿಯನ್ನು ಕಲೆಹಾಕಿದನು.

ಅಂದಿನ ಮೈಸೂರು ರಾಜ್ಯದ ಎಲ್ಲ ಊರುಗಳು, ಸಣ್ಣಪುಟ್ಟ ಗ್ರಾಮಗಳು, ಕುಗ್ರಾಮಗಳೂ ಸೇರಿದಂತೆ ಬಹುತೇಕ ಸಮಗ್ರವಾಗಿ ಕ್ಷೇತ್ರ ಪರಿವೀಕ್ಷಣೆ ಮಾಡಿ ಆ ಎಲ್ಲ ಪ್ರದೇಶಗಳಲ್ಲಿನ ಜನರ ಆಚಾರ-ವಿಚಾರ, ಜಾತಿ-ಜನಾಂಗ, ಆರ್ಥಿಕ, ಸಾಮಾಜಿಕ ಪರಿಸ್ಥಿತಿ, ದೇವಾಲಯಗಳು, ಶಾಸನಗಳು, ನಾಣ್ಯಗಳು, ಕೈಫಿಯತ್ತುಗಳು ಮುಂತಾದವುಗಳ ಬಗ್ಗೆ ಅಮೂಲ್ಯವಾದ ಮಾಹಿತಿಯನ್ನು ಸಂಗ್ರಹಿಸಿದನು. ಈ ಅವಧಿಯಲ್ಲಿ ಸುಮಾರು ೨೦೭೦ ಕೈಫಿಯತ್ತುಗಳು, ೧೫೬೮ ತಾಳೆಗರಿಯ ಹಸ್ತಪ್ರತಿಗಳು, ೬೨೧೮ ನಾಣ್ಯಗಳು, ೧೦೬ ವಿಗ್ರಹಗಳು, ೨೬೩೦ ಛಾಯಾಚಿತ್ರಗಳು, ೮೦೭೦ ಶಾಸನಗಳ ಪಡಿಯಚ್ಚುಗಳು ಮುಂತಾದವುಗಳನ್ನು ಸಂಗ್ರಹಿಸಿದನು. ಸುಮಾರು ೭೯ ನಕ್ಷೆಗಳನ್ನು ಸ್ವತಃ ತಾನೇ ತಯಾರಿಸಿದನು.

ಹಳೆಯ ಮೈಸೂರು ರಾಜ್ಯಕ್ಕೆ ಸಂಬಂಧಿಸಿದಂತೆ ವೈಜ್ಞಾನಿಕವಾಗಿ ರಚನೆಯಾದ ಅತ್ಯಂತ ಪ್ರಾಚೀನ ನಕ್ಷೆಗಳಲ್ಲಿ ಮೆಕೆಂಜಿ ರಚಿಸಿದ ನಕ್ಷೆಗಳು ಮುಖ್ಯವಾದವುಗಳೆಂದು ಗುರುತಿಸಬಹುದು. ಮೆಕೆಂಜಿಯ ಪ್ರೇರಣೆಯಿಂದ ಹಲವು ಮಂದಿ ಸ್ಥಳೀಯ ವಿದ್ವಾಂಸರು ಸ್ಥಳೀಯ ಇತಿಹಾಸ ಸಂಸ್ಕೃತಿಯನ್ನೊಳಗೊಂಡ ಗ್ರಂಥಗಳನ್ನು ರಚಿಸಿದರು. ಇದಕ್ಕೆ ಅತ್ಯುತ್ತಮ ಉದಾಹರಣೆಯೆಂದರೆ ಕವಿ ದೇವಚಂದ್ರ ರಚಿಸಿರುವ 'ರಾಜಾವಳಿ ಕಥಾಸಾರ'. ಕರ್ನಲ್ ಮೆಕೆಂಜಿಯ ಪ್ರೇರಣೆಯಿಂದಲೇ ತಾನು 'ರಾಜಾವಳಿ ಕಥಾಸಾರ'ವನ್ನು ರಚಿಸಿದ್ದೇನೆಂದು ದೇವಚಂದ್ರನೇ ಹೇಳಿಕೊಂಡಿದ್ದಾನೆ.

ಹಳೆಯ ಮೈಸೂರು ಸಂಸ್ಥಾನದ ಇತಿಹಾಸ, ಸಮಾಜ, ಸಂಸ್ಕೃತಿಯನ್ನು ಕುರಿತಂತೆ ಸ್ವತಃ ಕ್ಷೇತ್ರಕಾರ್ಯ ಮಾಡಿ ಮಾಹಿತಿ ಸಂಗ್ರಹಿಸಿ ನಂಬಲರ್ಹ ಅಧಿಕೃತ ಆಕರಗಳನ್ನು ಆಧರಿಸಿ ಮೆಕೆಂಜಿಯು ಸಂಶೋಧನೆ ಮಾಡಿರುವುದು ಗಮನಾರ್ಹ ಅಂಶ. ಆತನ ಸಂಶೋಧನೆಗಳನ್ನಾಧರಿಸಿ ಆತನನ್ನು ಮಾನವಶಾಸ್ತ್ರಜ್ಞ, ಸಮಾಜಶಾಸ್ತ್ರಜ್ಞ ಹಾಗೂ ಇತಿಹಾಸಕಾರನೆಂದು ಗುರ್ತಿಸಬಹುದು. ಆತನ ಸಂಶೋಧನೆಯು ಬಹುಶಿಸ್ತೀಯ ಮಾದರಿಯ ಸಂಶೋಧನೆಯೆಂದು ಗುರ್ತಿಸಬಹುದು.

ವಾಲ್ಟರ್ ಎಲಿಯಟ್ ಕ್ರಿ.ಶ.೧೮೨೨ರಿಂದ ೧೮೩೩ರವರೆಗೆ ಧಾರವಾಡದಲ್ಲಿ ಕಲೆಕ್ಟರ್‌ನ ಸಹಾಯಕನಾಗಿ ಸೇವೆ ಸಲ್ಲಿಸಿದನು. ಈತನು ಸುಮಾರು ೫೯೫ ಶಾಸನಗಳನ್ನು ಸಂಗ್ರಹಿಸಿದನು. ಲಂಡನ್ನಿನ ರಾಯಲ್ ಏಶಿಯಾಟಿಕ್ ಸೊಸೈಟಿಯ ನಿಯತಕಾಲಿಕೆಯಲ್ಲಿ 'ಹಿಂದೂ ಇನ್‌ಸ್ಕ್ರಿಪ್‌ಷನ್ಸ್' ಎಂಬ ಸಂಶೋಧನಾ ಲೇಖನವೊಂದನ್ನು ಪ್ರಕಟಿಸಿದನು. ಕನ್ನಡ ಶಾಸನಗಳ ಬಗ್ಗೆ ವಿಶೇಷವಾಗಿ ಉತ್ತರ ಕರ್ನಾಟಕದ ಅರಸುಮನೆತನಗಳ ಶಾಸನಗಳ ಬಗ್ಗೆ ಅಪಾರ ಜ್ಞಾನವನ್ನು ಪಡೆದಿದ್ದ ವಾಲ್ಟರ್ ಎಲಿಯೆಟ್ ನೂರಾರು ಶಾಸನಗಳ ಪಡಿಯಚ್ಚುಗಳನ್ನು, ಛಾಯಾಚಿತ್ರಗಳನ್ನು ಸ್ವತಃ ಸಂಗ್ರಹಿಸಿ ಕನ್ನಡ ಶಾಸನಗಳ ಲಿಪಿಯನ್ನು, ಅವುಗಳ ವಿಕಾಸದ ಹಂತಗಳನ್ನು ರಾಜಮನೆತನಗಳ ಕಾಲಾನುಕ್ರಮಣಿಕೆಯೊಂದಿಗೆ ಗುರುತಿಸಿದ್ದಾನೆ. ಈ ಹಿನ್ನೆಲೆಯಲ್ಲಿ ಕನ್ನಡ ಲಿಪಿಶಾಸ್ತ್ರವನ್ನು ಕುರಿತು ಮೊದಲು ವೈಜ್ಞಾನಿಕವಾಗಿ ಬರೆದವನು ವಾಲ್ಟರ್ ಎಲಿಯೆಟ್ ಎಂದು ಗುರುತಿಸಬಹುದು. ಕಲ್ಯಾಣ ಚಾಲುಕ್ಯರ ಇತಿಹಾಸವನ್ನು ಕುರಿತು ವಿಶೇಷವಾಗಿ ಅಧ್ಯಯನ ಮಾಡಿದ ಮೊದಲ ಇತಿಹಾಸಕಾರನೆಂದೂ ಗುರ್ತಿಸಬಹುದು. ಕನ್ನಡನಾಡಿನಲ್ಲಿ ನಾಣ್ಯಶಾಸ್ತ್ರಕ್ಕೆ ಸಂಬಂಧಿಸಿದಂತೆಯೂ ವೈಜ್ಞಾನಿಕವಾಗಿ ಅಧ್ಯಯನ ನಡೆಸಿದ ಮೊದಲಿಗ ಈತನೇ. ಈತನ ಸಂಶೋಧನೆಯು ಸಂಪೂರ್ಣವಾಗಿ ಕ್ಷೇತ್ರಕಾರ್ಯವನ್ನು ಆಧರಿಸಿಯೇ ನಡೆದಿದೆಯೆಂದು ಹೇಳಬಹುದು. ಲಿಪಿಶಾಸ್ತ್ರಜ್ಞ, ಶಾಸನತಜ್ಞ, ಇತಿಹಾಸಕಾರ, ನಾಣ್ಯಶಾಸ್ತ್ರಜ್ಞ ಹೀಗೆ ಹಲವು ಜ್ಞಾನಶಿಸ್ತುಗಳಲ್ಲಿ ಪಾಂಡಿತ್ಯವನ್ನು ಹೊಂದಿದ್ದ ವಾಲ್ಟರ್ ಎಲಿಯಟ್ ತನ್ನ ಸಂಶೋಧನೆಗೆ ಈ ಎಲ್ಲ ಕ್ಷೇತ್ರಗಳ ಪ್ರಾವೀಣ್ಯತೆಯನ್ನೂ ಬಳಸಿಕೊಂಡಿರುವುದನ್ನು ಗುರುತಿಸಬಹುದು.

ಹರ್ಮನ್ ಮೊಗ್ಲಿಂಗ್ ಕ್ರಿ.ಶ.೧೮೩೮ರಲ್ಲಿ ಧಾರವಾಡದಿಂದ ಮಂಗಳೂರಿಗೆ ಬಂದು ದೈವಜ್ಞಾನ ಎಂಬ ಶಾಲೆಯಲ್ಲಿ ಅಧ್ಯಾಪಕನಾಗಿ ವೃತ್ತಿ ಆರಂಭಿಸಿದ. ಮಂಗಳೂರು, ಧಾರವಾಡ, ಕೊಡಗು, ಬಳ್ಳಾರಿ ಜಿಲ್ಲೆಗಳಲ್ಲಿ ವ್ಯಾಪಕವಾಗಿ ಕ್ಷೇತ್ರಕಾರ್ಯ ಮಾಡಿ ಸುಮಾರು ೩೫೪೭ ಗಾದೆಗಳನ್ನು ಸಂಗ್ರಹಿಸಿ 'ಕನ್ನಡ ಗಾದೆಗಳು' ಎಂಬ ಕೃತಿಯೊಂದನ್ನು ಪ್ರಕಟಿಸಿದನು. ನಮ್ಮ ಜನಪದರ ಪಾರಂಪರಿಕ ಜ್ಞಾನದ ಫಲವಾಗಿ ರೂಪುಗೊಂಡ ಗಾದೆಗಳು ಅಧ್ಯಯನ ಯೋಗ್ಯವೆಂದು ಗುರ್ತಿಸಿ, ಗಾದೆಗಳು ತಮ್ಮೊಡಲಿನಲ್ಲಿ ಸಾಂಸ್ಕೃತಿಕ ಮಹತ್ವದ ವಿಚಾರಗಳನ್ನು

ಅಡಗಿಸಿಕೊಂಡಿರುತ್ತವೆಂಬುದನ್ನು ಗುರ್ತಿಸಿ, ಕನ್ನಡ ನಾಡಿನ ಜಾನಪದ ಪ್ರಕಾರವೊಂದನ್ನು ಕುರಿತು ಆಳವಾದ ಕ್ಷೇತ್ರಕಾರ್ಯ ನಡೆಸಿ ವಿದ್ವತ್ಪೂರ್ಣವಾಗಿ ಸಂಪಾದಿಸಿದ ಮೊಟ್ಟಮೊದಲ ಜಾನಪದ ತಜ್ಞನೆಂಬ ಕೀರ್ತಿಗೆ ಹರ್ಮನ್ ಮೊಗ್ಲಿಂಗ್ ಪಾತ್ರರಾಗಿದ್ದಾರೆ.

ಕರ್ನಾಟಕ ಶಾಸನಶಾಸ್ತ್ರ ಪಿತಾಮಹರೆಂದೇ ಪ್ರಸಿದ್ಧರಾದ ಬಿ.ಎಲ್.ರೈಸ್ ಅವರು ೧೮೮೪ರಲ್ಲಿ ಮೈಸೂರು ಸಂಸ್ಥಾನದ ಪ್ರಾಚ್ಯವಸ್ತು ಇಲಾಖೆಯ ನಿರ್ದೇಶಕರಾಗಿ ನೇಮಕಗೊಂಡರು. ಅಂದಿನ ಮೈಸೂರು ರಾಜ್ಯದ ಎಂಟು ಜಿಲ್ಲೆಗಳಾದ ಮೈಸೂರು, ಬೆಂಗಳೂರು, ಕೋಲಾರ, ತುಮಕೂರು, ಹಾಸನ, ಕಡೂರು, ಚಿತ್ರದುರ್ಗ ಹಾಗೂ ಶಿವಮೊಗ್ಗ ಜಿಲ್ಲೆಗಳಾದ್ಯಂತ ಸ್ವತಃ ಕ್ಷೇತ್ರಕಾರ್ಯ ಮಾಡಿ ಶಾಸನಗಳ ಪಡಿಯಚ್ಚುಗಳನ್ನು ತೆಗೆದು ಪಾಠಗಳನ್ನು ಸಿದ್ಧಪಡಿಸಿ ಜಿಲ್ಲಾವಾರು ಶಾಸನ ಸಂಪುಟಗಳನ್ನು ಪ್ರಕಟಿಸಿದರು. 'ಎಪಿಗ್ರಾಫಿಯಾ ಕರ್ನಾಟಿಕ' ಶಾಸನ ಸಂಪುಟಗಳ ಈ ಮಾಲಿಕೆಯಲ್ಲಿ ಒಟ್ಟು ಹನ್ನೆರಡು ಸಂಪುಟಗಳಲ್ಲಿ ಒಟ್ಟು ೮೮೬೯ ಶಾಸನಗಳನ್ನು ಪ್ರಕಟಿಸಿದರು.

ಮೊದನೆಯ ಸಂಪುಟದಲ್ಲಿ ಕೊಡಗಿನ ಶಾಸನಗಳು, ಎರಡನೆಯ ಸಂಪುಟದಲ್ಲಿ ಶ್ರವಣಬೆಳಗೊಳದ ಶಾಸನಗಳು, ಮೂರು ಮತ್ತು ನಾಲ್ಕನೆಯ ಸಂಪುಟಗಳಲ್ಲಿ ಮೈಸೂರು ಜಿಲ್ಲೆಯ ಶಾಸನಗಳು, ಐದನೆಯ ಸಂಪುಟದಲ್ಲಿ ಹಾಸನ ಜಿಲ್ಲೆಯ ಶಾಸನಗಳು, ಆರನೆಯ ಸಂಪುಟದಲ್ಲಿ ಕಡೂರು ಜಿಲ್ಲೆಯ ಶಾಸನಗಳು, ಏಳು ಮತ್ತು ಎಂಟನೆಯ ಸಂಪುಟಗಳಲ್ಲಿ ಶಿವಮೊಗ್ಗ ಜಿಲ್ಲೆಯ ಶಾಸನಗಳು, ಒಂಬತ್ತನೆಯ ಸಂಪುಟದಲ್ಲಿ ಬೆಂಗಳೂರು ಜಿಲ್ಲೆಯ ಶಾಸನಗಳು, ಹತ್ತನೆಯ ಸಂಪುಟದಲ್ಲಿ ಕೋಲಾರ ಜಿಲ್ಲೆಯ ಶಾಸನಗಳು, ಹನ್ನೊಂದನೆಯ ಸಂಪುಟದಲ್ಲಿ ಚಿತ್ರದುರ್ಗ ಜಿಲ್ಲೆಯ ಶಾಸನಗಳು, ಹನ್ನೆರಡನೆಯ ಸಂಪುಟದಲ್ಲಿ ತುಮಕೂರು ಜಿಲ್ಲೆಯ ಶಾಸನಗಳನ್ನು ಸಂಪಾದಿಸಿ ಪ್ರಕಟಿಸಿದ್ದಾರೆ.

ಆಯಾ ಸಂಪುಟದಲ್ಲಿನ ಶಾಸನಗಳ ಐತಿಹಾಸಿಕ, ಸಾಂಸ್ಕೃತಿಕ ಮಹತ್ವದ ಸಂಗತಿಗಳ ಬಗ್ಗೆ ವಿಸ್ತೃತವಾದ ಪ್ರಸ್ತಾವನೆ, ಕೆಲವು ಪ್ರಮುಖ ಶಾಸನಗಳ ಪಡಿಯಚ್ಚುಗಳ ಛಾಯಾಚಿತ್ರ, ಶಬ್ದಸೂಚಿಯನ್ನೂ ಸಹ ನೀಡಿದ್ದಾರೆ. ಅಂದಿನ ಮೈಸೂರು ರಾಜ್ಯದ ಶಾಸನಗಳ ಬಗ್ಗೆ ಶಾಸ್ತ್ರೀಯವಾದ, ವ್ಯವಸ್ಥಿತವಾದ ಸಂಶೋಧನೆಯನ್ನು ದೊಡ್ಡ ಪ್ರಮಾಣದಲ್ಲಿ ಮಾಡಿದ ಪ್ರಾತಃಸ್ಮರಣೀಯರಾದ ಬಿ.ಎಲ್.ರೈಸ್ ಅವರು 'ಎಪಿಗ್ರಾಫಿಯ ಕರ್ನಾಟಿಕ' ಶಾಸನ ಸಂಪುಟಗಳಲ್ಲಿ ಬರೆದಿರುವ ವಿದ್ವತ್ಪೂರ್ಣವಾದ ಪ್ರಸ್ತಾವನೆಯು ಇಂದಿಗೂ ಸಂಶೋಧಕರಿಗೆ ಬಹಳ ಪ್ರಮುಖವಾದ ಆಕರ ಸಾಮಗ್ರಿಯಾಗಿ ಪರಿಣಮಿಸಿದೆ. ರೈಸ್‌ರವರು ಹೀಗೆ ಸಂಪಾದಿಸಿ ಪ್ರಕಟಿಸಿದ ಶಾಸನಗಳನ್ನು ಆಧರಿಸಿ ತಾವೇ ಸ್ವತಃ ಹಲವಾರು ಅಮೂಲ್ಯ ಸಂಶೋಧನ ಗ್ರಂಥಗಳನ್ನು ಸಹ ಪ್ರಕಟಿಸಿದ್ದಾರೆ. ಅವುಗಳಲ್ಲಿ 'ಮೈಸೂರು ಅಂಡ್ ಕೂರ್ಗ್ ಇನ್ಸ್‌ಕ್ರಿಪ್‌ಷನ್ಸ್', 'ಮೈಸೂರು ಗ್ಯಾಸೆಟಿಯರ್', 'ಕೂರ್ಗ್ ಗ್ಯಾಸೆಟಿಯರ್' ಪ್ರಮುಖವಾದ ಗ್ರಂಥಗಳಾಗಿವೆ.

ರೈಸ್ ಅವರು ಶಾಸನಶಾಸ್ತ್ರವಲ್ಲದೆ ಗ್ರಂಥಸಂಪಾದನಾ ಕ್ಷೇತ್ರಕ್ಕೂ ಅದ್ಭುತವಾದ ಕೊಡುಗೆಯನ್ನು ನೀಡಿದ್ದಾರೆ. ತಾಳೆಗರಿಯ ಹಸ್ತಪ್ರತಿಗಳಲ್ಲಿ ನಿಕ್ಷಿಪ್ತವಾಗಿದ್ದ ಕನ್ನಡದ ಅಮೂಲ್ಯ ಸಾಹಿತ್ಯ ಕೃತಿಗಳನ್ನು ಪರಿಶೋಧಿಸಿ ಶಾಸ್ತ್ರೀಯವಾಗಿ ಸಂಪಾದಿಸಿ 'ಬಿಬ್ಲಿಯೋಥಿಕ ಕರ್ನಾಟಿಕ' ಮಾಲೆಯಲ್ಲಿ ಪ್ರಕಟಿಸುವ ಮಹತ್ಸಾಧನೆಯನ್ನು ರೈಸ್ ಅವರು ಮಾಡಿದ್ದಾರೆ. ಈ ಮಾಲಿಕೆಯಲ್ಲಿ ಅಮರಕೋಶ, ನಾಗಚಂದ್ರನ 'ಪಂಪರಾಮಾಯಣ', ನಾಗವರ್ಮನ 'ಕರ್ನಾಟಕ ಭಾಷಾಭೂಷಣ', ಭಟ್ಟಾಕಳಂಕನ 'ಶಬ್ದಾನುಶಾಸನ', ಪಂಪನ 'ವಿಕ್ರಮಾರ್ಜುನ

ವಿಜಯ' ಮೊದಲಾದ ಅಮೂಲ್ಯ ಸಾಹಿತ್ಯ ಕೃತಿಗಳು ಮೊತ್ತಮೊದಲ ಬಾರಿಗೆ ರೈಸ್ ಅವರಿಂದ ಸಂಪಾದಿತವಾಗಿ ಕನ್ನಡ ಸಾರಸ್ವತ ಲೋಕಕ್ಕೆ ಕೊಡುಗೆಯಾಗಿ ದೊರೆತವು.

ಕನ್ನಡ ಸಂಶೋಧನಾ ಕ್ಷೇತ್ರಕ್ಕೆ ತಮ್ಮ ಜೀವನವನ್ನು ಮುಡುಪಿಟ್ಟ ಪಾಶ್ಚಿಮಾತ್ಯ ವಿದ್ವಾಂಸರಲ್ಲಿ ಜೆ.ಎಫ್.ಫ್ಲೀಟ್‌ರೂ ಒಬ್ಬರು. ಇವರ 'ಪಾಲಿ, ಸಂಸ್ಕೃತ ಮತ್ತು ಹಳಗನ್ನಡ ಶಾಸನಗಳು' ಎಂಬ ಗ್ರಂಥವು ಸುಮಾರು ೧೫೦೦ಕ್ಕಿಂತ ಹೆಚ್ಚಿನ ಪುಟಗಳುಳ್ಳ, ೨೫೦ ಹೆಚ್ಚಿನ ಛಾಯಾಚಿತ್ರಗಳನ್ನು ಹೊಂದಿರುವ, ಕನ್ನಡ ನಾಡಿನ ಇತಿಹಾಸ, ಸಂಸ್ಕೃತಿ ಕುರಿತ ವಿದ್ವತ್ಪೂರ್ಣ ಗ್ರಂಥವಾಗಿದೆ. ಫ್ಲೀಟರ ಸಮಕಾಲೀನ ಕಾಲಘಟ್ಟದಲ್ಲಿ ಶಾಸನಶಾಸ್ತ್ರವು ಇನ್ನೂ ಶೈಶವ್ಯಾವಸ್ಥೆಯಲ್ಲಿ ಅಂಬೆಗಾಲಿಡುತ್ತಿದ್ದ ಶಾಸ್ತ್ರವಾಗಿತ್ತು. ಶಾಸನಗಳನ್ನು ಕುರಿತು ಅಧ್ಯಯನ ಮಾಡಬಯಸುವವರಿಗೆ ಅದರ ವಿಧಿ ವಿಧಾನಗಳನ್ನು ತಿಳಿಸಿಕೊಡುವಂತಹ ಶಾಸ್ತ್ರ ಗ್ರಂಥವೊಂದರ ಅವಶ್ಯಕತೆಯಿತ್ತು. ಇದನ್ನು ಮನಗಂಡು ಫ್ಲೀಟರು ರಚಿಸಿದ 'ಭಾರತೀಯ ಶಾಸನಶಾಸ್ತ್ರ' ಗ್ರಂಥವೂ ಇಂದಿಗೂ ಈ ವಿಷಯವನ್ನು ಕುರಿತ ಆಚಾರ್ಯ ಕೃತಿಯಾಗಿ ಪರಿಗಣಿಸಲ್ಪಟ್ಟಿದೆ. ಫ್ಲೀಟರು ರಚಿಸಿದ 'ಮದ್ರಾಸ್ ಮ್ಯಾನುಯಲ್' ಗ್ರಂಥವು ಇಡೀ ದಕ್ಷಿಣ ಭಾರತದ ಸಮಗ್ರ ಇತಿಹಾಸವನ್ನು ಕಟ್ಟಿಕೊಡುವ ಮಹತ್ವದ ಗ್ರಂಥವಾಗಿದ್ದು, ಸುಮಾರು ೧೮೦೦ ಪುಟಗಳನ್ನು ಹೊಂದಿದೆ. ಈ ಕೃತಿಯು ಕನ್ನಡನಾಡಿನ ಇತಿಹಾಸ, ಧಾರ್ಮಿಕ ಚರಿತ್ರೆ, ಸಾಮಾಜಿಕ ಚರಿತ್ರೆ, ಕಲೆ–ವಾಸ್ತುಶಿಲ್ಪ, ಭಾಷೆ, ಸಾಹಿತ್ಯ, ಸಂಸ್ಕೃತಿಗಳ ಬಗ್ಗೆ ಮಹತ್ವದ ಮಾಹಿತಿಯನ್ನು ನೀಡುವ ವಿಶಿಷ್ಟ ಗ್ರಂಥವಾಗಿದೆ.

ಫ್ಲೀಟರು ಜಾನಪದ ಕ್ಷೇತ್ರಕ್ಕೂ ಅತ್ಯಂತ ಶ್ರೇಷ್ಠಮಟ್ಟದ ಕೊಡುಗೆಯನ್ನು ನೀಡಿದ್ದಾರೆ. ಅವರು ತಮ್ಮ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಸಂಗ್ರಹಿಸಿದ ೩೬ ಲಾವಣಿಗಳನ್ನು ಇಂಗ್ಲಿಷ್ ಅನುವಾದಗಳೊಂದಿಗೆ, ವಿದ್ವತ್ಪೂರ್ಣವಾದ ಪ್ರಸ್ತಾವನೆಯೊಂದಿಗೆ ಪ್ರಕಟಿಸಿದ್ದಾರೆ. ಹೀಗೆ ಬಹುಶ್ರುತ ವಿದ್ವಾಂಸರಾಗಿದ್ದ ಫ್ಲೀಟರು ಕನ್ನಡ ಭಾಷೆ, ಸಾಹಿತ್ಯ, ಕನ್ನಡ ನಾಡಿನ ಇತಿಹಾಸ, ಸಂಸ್ಕೃತಿ, ಜಾನಪದ ಮುಂತಾದ ಹಲವು ಕ್ಷೇತ್ರಗಳಿಗೆ ನೀಡಿರುವ ಕೊಡುಗೆ ಗುಣ ಹಾಗೂ ಪ್ರಮಾಣ ಎರಡರ ದೃಷ್ಟಿಯಿಂದ ಅಗಾಧವಾದುದು ಮತ್ತು ಮಹತ್ವವಾದುದ್ದೆಂದು ಹೇಳಬಹುದು.

ಬಿ.ಎಲ್.ರೈಸ್ ಅವರು ಮೈಸೂರು ಪ್ರಾಚ್ಯವಸ್ತು ಇಲಾಖೆಯ ನಿರ್ದೇಶಕರಾಗಿದ್ದಾಗ, ಅವರಿಗೆ ಸಹಾಯಕರಾಗಿ ವೃತ್ತಿಗೆ ಸೇರ್ಪಡೆಗೊಂಡು, ರೈಸರ ನಿವೃತ್ತಿಯ ನಂತರ ಪ್ರಾಚ್ಯ ವಸ್ತು ಇಲಾಖೆಯ ನಿರ್ದೇಶಕರಾದ ಆರ್.ನರಸಿಂಹಾಚಾರ್ಯರು ರೈಸ್ ಅವರಂತೆಯೇ ಬಹುಶ್ರುತ ವಿದ್ವಾಂಸರು. ಹಲವು ಜ್ಞಾನಶಿಸ್ತುಗಳಲ್ಲಿ ಅಪಾರ ಪಾಂಡಿತ್ಯ ಹೊಂದಿದ್ದ ವಿದ್ವಾಂಸರು. ಸುಮಾರು ೧೬ ವರ್ಷಗಳ ಕಾಲ ಸ್ವತಃ ಪರಿಶ್ರಮದಿಂದ ಕ್ಷೇತ್ರ ಪರಿವೀಕ್ಷಣೆ ಮಾಡಿ ಸುಮಾರು ಐದು ಸಾವಿರಕ್ಕಿಂತ ಹೆಚ್ಚಿನ ಸಂಖ್ಯೆಯ ಶಾಸನಗಳನ್ನು ಪರಿಶೋಧಿಸಿ 'ಎಪಿಗ್ರಾಫಿಯಾ ಕರ್ನಾಟಿಕ' ಶಾಸನ ಸಂಪುಟಗಳ ಮಾಲಿಕೆಯಲ್ಲಿ ಅನುಬಂಧ ಸಂಪುಟಗಳಾಗಿ ಪ್ರಕಟಿಸಿದರು. ರೈಸ್‌ರವರು ಪ್ರಕಟಿಸಿದ್ದ ಎಪಿಗ್ರಾಫಿಯಾ ಕರ್ನಾಟಿಕದ ಎರಡನೆಯ ಸಂಪುಟದ ಪರಿಷ್ಕೃತ ಆವೃತ್ತಿಯಲ್ಲಿ ಹೊಸದಾಗಿ ೩೫೦ ಶಾಸನಗಳನ್ನು ಪ್ರಕಟಿಸಿದರು. ಆ ಸಂಪುಟದ ಪ್ರಸ್ತಾವನೆಯಲ್ಲಿ ಶ್ರವಣಬೆಳಗೊಳದ ಜೈನಬಸದಿಗಳ ವಾಸ್ತು–ಶಿಲ್ಪದ ಬಗ್ಗೆಯೂ ಅಮೂಲ್ಯವಾದ ಮಾಹಿತಿಯನ್ನು ನೀಡಿದ್ದಾರೆ.

ಮೈಸೂರಿನ ಪುರಾತತ್ವ ಇಲಾಖೆಯ ವಾರ್ಷಿಕ ವರದಿಗಳಲ್ಲಿ (ಎಂ.ಎ.ಆರ್) ಹಳೆ ಮೈಸೂರು ಪ್ರದೇಶದಲ್ಲಿದ್ದ ಸುಮಾರು ೧೦೦೦ ದೇವಾಲಯಗಳು ಮತ್ತಿತರ ಪ್ರಾಚೀನ ಕಟ್ಟಡಗಳ ವಾಸ್ತುಶಿಲ್ಪ, ಮೂರ್ತಿಶಿಲ್ಪ ಮುಂತಾದವುಗಳ ಬಗ್ಗೆ ವಿಸ್ತಾರವಾದ ವರದಿಗಳನ್ನು ಬರೆದು ಪ್ರಕಟಿಸಿದರು. ಕರ್ನಾಟಕದ ವಾಸ್ತುಶಿಲ್ಪವನ್ನು ಕುರಿತು ಸಂಶೋಧನೆ ಮಾಡಬಯಸುವ ಸಂಶೋಧಕರಿಗೆ ಇಂದಿಗೂ ಇವು ಅಮೂಲ್ಯ ಆಕರ ಸಾಮಗ್ರಿಗಳಾಗಿವೆ. ಹೊಯ್ಸಳ ಶೈಲಿಯು ಚಾಲುಕ್ಯ ಶೈಲಿಗಿಂತಲೂ ಭಿನ್ನವಾದ, ವೈಶಿಷ್ಟ್ಯಪೂರ್ಣವಾದ ಶೈಲಿಯೆಂದು ಗುರುತಿಸಿದ ಶ್ರೇಯಸ್ಸು ಆರ್.ನರಸಿಂಹಾಚಾರ್ಯರಿಗೆ ಸಲ್ಲುತ್ತದೆ. ಅದುವರೆಗೂ ಚಾಲುಕ್ಯ ಶೈಲಿಯಲ್ಲೇ ಹೊಯ್ಸಳ ಶೈಲಿಯನ್ನು ಅಂತರ್ಗತಗೊಳಿಸಿ ಗುರುತಿಸಲಾಗುತ್ತಿತ್ತು. ಸೋಮನಾಥಪುರ, ಬೇಲೂರು, ದೊಡ್ಡಗದ್ದವಳ್ಳಿಯ ದೇವಾಲಯಗಳನ್ನು ಕುರಿತು ಪ್ರತ್ಯೇಕವಾದ ಕಿರುಹೊತ್ತಿಗೆಗಳನ್ನೂ ಆರ್.ನರಸಿಂಹಾಚಾರ್ಯ ಅವರು ರಚಿಸಿದ್ದಾರೆ.

ಶಾಸನಶಾಸ್ತ್ರ, ವಾಸ್ತುಶಿಲ್ಪ, ಪುರಾತತ್ವಶಾಸ್ತ್ರಗಳಲ್ಲದೆ ಸಾಹಿತ್ಯ ಕ್ಷೇತ್ರದಲ್ಲೂ ಆರ್.ನರಸಿಂಹಾಚಾರ್ಯರು ಮಹತ್ಸಾಧನೆ ಮಾಡಿದ್ದಾರೆ. ಆರ್.ನರಸಿಂಹಾಚಾರ್ಯರ ಮತ್ತೊಂದು ಗಣನೀಯ ಕೊಡುಗೆಯೆಂದರೆ ಅವರು ರಚಿಸಿದ 'ಕರ್ನಾಟಕ ಕವಿಚರಿತೆ'ಯ ಸಂಪುಟಗಳೆಂದು ಹೇಳಬಹುದು. ಕನ್ನಡ ಸಾಹಿತ್ಯದ ಆರಂಭ ಕಾಲಘಟ್ಟದ ಕವಿಗಳಿಂದ ಹಿಡಿದು ಹತ್ತೊಂಬತ್ತನೆಯ ಶತಮಾನದವರೆಗಿನ ಕನ್ನಡದ ಸಮಗ್ರ ಸಾಹಿತ್ಯ ಚರಿತ್ರೆಯನ್ನು ಕುರಿತ ಅತ್ಯಂತ ಮಹತ್ವಪೂರ್ಣ ಮಾಹಿತಿಯೊಳಗೊಂಡ ಶ್ರೇಷ್ಠ ಗ್ರಂಥವೆಂದು ಕರ್ನಾಟಕ ಕವಿಚರಿತೆಯು ಪರಿಗಣಿತವಾಗಿದೆ. ರೈಸರು ಆರಂಭಿಸಿದ 'ಬಿಬ್ಲಿಯೋಥಿಕ ಕರ್ನಾಟಿಕ' ಮಾಲಿಕೆಯಲ್ಲಿ 'ಕಾವ್ಯಾವಲೋಕನ', 'ಕರ್ನಾಟಕ ಭಾಷಾಭೂಷಣ', 'ಶಬ್ದಾನುಶಾಸನ' ಮೊದಲಾದ ಗ್ರಂಥಗಳನ್ನು ನರಸಿಂಹಾಚಾರ್ಯರು ಸಂಪಾದಿಸಿ ಪ್ರಕಟಿಸಿದ್ದಾರೆ.

ಪ್ರಾಕ್ತನಶಾಸ್ತ್ರದಲ್ಲಿ ಹೆಚ್ಚಿನ ಪಾಂಡಿತ್ಯವನ್ನು ಗಳಿಸಿದ್ದ ನರಸಿಂಹಾಚಾರ್ಯರು ಚಿತ್ರದುರ್ಗದ ಚಂದ್ರವಳ್ಳಿ, ತಲಕಾಡು, ಹಾಸನ, ಹಳೇಬೀಡುಗಳಲ್ಲಿ ವೈಜ್ಞಾನಿಕವಾಗಿ ಉತ್ಖನನ ಮಾಡಿ, ಉತ್ಖನನದ ವರದಿಗಳನ್ನು ಪ್ರಕಟಿಸಿದ್ದಾರೆ. ಹಲವು ಪ್ರಾಚೀನ ನಿವೇಶನಗಳನ್ನು, ಸುಮಾರು ೪೦೦೦ಕ್ಕಿಂತ ಹೆಚ್ಚಿನ ಸಂಖ್ಯೆಯ ಪ್ರಾಚೀನ ನಾಣ್ಯಗಳನ್ನು ಪರಿಶೋಧಿಸಿ ಅವುಗಳನ್ನು ವೈಜ್ಞಾನಿಕವಾಗಿ ಅಭ್ಯಸಿಸಿ ಸಂಶೋಧನಾ ಲೇಖನಗಳನ್ನು ಪ್ರಕಟಿಸಿದ್ದಾರೆ. ಪ್ರಾಕ್ತನಶಾಸ್ತ್ರದ ಬಗೆಗಿನ ಅವರ ಸಾಧನೆಯ ಫಲಿತವಾಗಿ ಆರ್.ನರಸಿಂಹಾಚಾರ್ಯರಿಗೆ 'ಪ್ರಾಕ್ತನಶಾಸ್ತ್ರ ವಿಮರ್ಶನ ವಿಚಕ್ಷಣ' ಎಂಬ ಬಿರುದು ಸಹ ಪ್ರಾಪ್ತವಾಯಿತು.

ಕನ್ನಡದ ಪ್ರಾಚೀನ ಶಾಸನಗಳಲ್ಲಿನ ಕಾವ್ಯಾತ್ಮಕ ಅಂಶಗಳುಳ್ಳ ಪದ್ಯ ಭಾಗಗಳನ್ನು ಸಂಕಲಿಸಿರುವ 'ಶಾಸನ ಪದ್ಯಮಂಜರಿ' ಎಂಬ ಕೃತಿಯೊಂದನ್ನು ಸಹ ಆರ್. ನರಸಿಂಹಾಚಾರ್ಯರು ಸಂಪಾದಿಸಿದ್ದಾರೆ. ಒಟ್ಟಾರೆ ಆರ್.ನರಸಿಂಹಾಚಾರ್ಯ ಅವರ ಕ್ಷೇತ್ರಕಾರ್ಯ, ಬಹುಭಾಷಾ ಪ್ರೌಢಿಮೆ, ಇತಿಹಾಸ, ಪುರಾತತ್ವ, ಸಾಹಿತ್ಯ, ಶಾಸನಶಾಸ್ತ್ರ, ಗ್ರಂಥಸಂಪಾದನಾಶಾಸ್ತ್ರ, ನಾಣ್ಯಶಾಸ್ತ್ರ ಮುಂತಾದ ಬಹುಶ್ರುತ ಜ್ಞಾನದ ಫಲವಾಗಿ ಕನ್ನಡ ನಾಡಿನ ಸಾಂಸ್ಕೃತಿಕ ಕ್ಷೇತ್ರಕ್ಕೆ ಮಹತ್ವದ ಕೊಡುಗೆಯು ಲಭ್ಯವಾಗಿದೆ.

ವಚನಶಾಸ್ತ್ರ ಪಿತಾಮಹರೆಂದೇ ಪ್ರಸಿದ್ಧರಾದ ಫಕೀರಪ್ಪ ಗುರುಬಸಪ್ಪ ಹಳಕಟ್ಟಿ ಅವರು ಮೂಲತಃ ವೃತ್ತಿಯಿಂದ ವಕೀಲರಾದರೂ ಪ್ರವೃತ್ತಿಯಿಂದ ಸಂಶೋಧಕರೆಂದು ಪ್ರಸಿದ್ಧರಾಗಿದ್ದಾರೆ. ವಚನ ಸಾಹಿತ್ಯದ ಬಗ್ಗೆ ಅಪಾರ ಆಸಕ್ತಿ ಮತ್ತು ಜ್ಞಾನವನ್ನು ಹೊಂದಿದ್ದ

ಹಳಕಟ್ಟಿ ಅವರು ಬಸವಣ್ಣ, ಅಲ್ಲಮಪ್ರಭು, ಸಿದ್ಧರಾಮ, ಚೆನ್ನಬಸವಣ್ಣ ಮುಂತಾದವರ ವಚನಗಳನ್ನು ಶಾಸ್ತ್ರೀಯವಾಗಿ ಸಂಪಾದಿಸಿ ಪ್ರಕಟಿಸಿದ್ದಾರೆ. ಹಳಕಟ್ಟಿ ಅವರು ಅಪಾರ ಶ್ರಮವಹಿಸಿ ಊರೂರು ಸುತ್ತಿ ಅಜ್ಞಾತವಾಗಿ ಉಳಿದಿದ್ದ ನೂರಾರು ತಾಳೆಗರಿಯ ಕಟ್ಟುಗಳನ್ನು ಸಂಗ್ರಹಿಸಿದರು. ಅವರ ಪರಿಶ್ರಮದ ಫಲವಾಗಿ ಅವರ ಸಂಗ್ರಹದಲ್ಲಿ ಸುಮಾರು ಒಂದು ಸಾವಿರಕ್ಕಿಂತಲೂ ಹೆಚ್ಚಿನ ಸಂಖ್ಯೆಯ ತಾಳೆಗರಿಗಳ ಕಟ್ಟುಗಳು ಸೇರ್ಪಡೆಗೊಂಡವು. ಇವರ ಸಂಶೋಧನೆಯ ಫಲವಾಗಿ ಮೂನ್ನೂರಕ್ಕಿಂತಲೂ ಹೆಚ್ಚಿನ ಸಂಖ್ಯೆಯ ವಚನಕಾರರು ಮೊತ್ತಮೊದಲ ಬಾರಿಗೆ ಹೊರಜಗತ್ತಿಗೆ ಪರಿಚಯಗೊಂಡರು.

ಹಳಕಟ್ಟಿ ಅವರು ವಚನ ಸಾಹಿತ್ಯವನ್ನು ಕುರಿತು ತಮ್ಮ ಸಂಶೋಧನೆಗಳನ್ನು ಪ್ರಕಟಿಸಲು 'ಶಿವಾನುಭವ' ಎಂಬ ನಿಯತಕಾಲಿಕೆಯನ್ನು ಹಾಗೂ ಗ್ರಂಥ ಮಾಲಿಕೆಯನ್ನು ಆರಂಭಿಸಿ ಅವುಗಳ ಮೂಲಕ ವಚನ ಸಾಹಿತ್ಯವನ್ನು ತಮ್ಮ ಸಂಶೋಧನೆಯ ಫಲಿತವಾಗಿ ಬೆಳಕಿಗೆ ತಂದರು. ಶಿವಾನುಭವ ಗ್ರಂಥಮಾಲಿಕೆಯ ಮೂಲಕ ೬೮ ಗ್ರಂಥಗಳನ್ನು ಪ್ರಕಟಿಸಿದರು. 'ವಚನಸಾಹಿತ್ಯ ಸಾರ' ಎಂಬ ಮೂರು ಸಂಪುಟಗಳ ಮೂಲಕ ವಚನ ಸಾಹಿತ್ಯದಲ್ಲಿ ಅಡಕವಾಗಿರುವ ಜೀವನ ಮೌಲ್ಯಗಳು, ಷಟ್‌ಸ್ಥಲಗಳು, ವೀರಶೈವ ಧರ್ಮದ ಆಚಾರ-ವಿಚಾರಗಳನ್ನು ಕುರಿತ ತಲಸ್ಪರ್ಶಿ ವಿಶ್ಲೇಷಣೆ ಮಾಡಿರುವುದನ್ನು ಗುರುತಿಸಬಹುದು. ಹಳಕಟ್ಟಿಯವರು ಪ್ರಕಟಿಸಿದ 'ಶೂನ್ಯಸಂಪಾದನೆ' ಕೃತಿಯು ಈ ವಿಷಯವನ್ನು ಕುರಿತ ಮೊತ್ತಮೊದಲ ಗ್ರಂಥವಾಗಿದೆ. ಶಿವಾನುಭವ ಗ್ರಂಥಮಾಲೆಯಲ್ಲಿ ಹಳಕಟ್ಟಿಯವರು ಪ್ರಕಟಿಸಿದ 'ಶಿವಶರಣರ ಚರಿತ್ರೆಗಳು', 'ಶಿವಾನುಭವ ಶಬ್ದಕೋಶ' ಮುಂತಾದವು ವೀರಶೈವ ಧರ್ಮಕ್ಕೆ ಸಂಬಂಧಿಸಿದಂತೆ ಹಳಕಟ್ಟಿಯವರ ಅತ್ಯಂತ ಮಹತ್ವದ ಕೊಡುಗೆ ಎಂದು ಪರಿಗಣಿಸಲ್ಪಟ್ಟಿದೆ. ವಚನ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಹಳಕಟ್ಟಿಯವರು ಸಂಗ್ರಹಿಸಿದ ಆಕರಗಳು ತದನಂತರದ ಕಾಲಘಟ್ಟದಲ್ಲಿ ಈ ವಿಷಯವನ್ನು ಕುರಿತಂತೆ ಮಾಡಿದ ಎಲ್ಲ ಸಂಶೋಧನೆಗಳಿಗೂ ಮೂಲ ಆಕರಗಳೆಂದು ಪರಿಗಣಿಸಲಾಗಿದೆ ಎಂದು ಹೇಳಬಹುದು.

ಹಳಕಟ್ಟಿ ಅವರಂತೆಯೇ ವಚನಸಾಹಿತ್ಯ ಕ್ಷೇತ್ರಕ್ಕೆ ಅತ್ಯಂತ ಶ್ರೇಷ್ಠ ಕೊಡುಗೆ ನೀಡಿದ ಉತ್ತಂಗಿ ಚೆನ್ನಪ್ಪನವರು ವೀರಶೈವ ಧರ್ಮ ಮತ್ತು ಕ್ರೈಸ್ತ ಧರ್ಮ ಎರಡು ಧರ್ಮಗಳಿಗೂ ಸಂಬಂಧಿಸಿದಂತೆಯೂ ಶ್ರೇಷ್ಠಮಟ್ಟದ ಸಂಶೋಧನೆ ಮಾಡಿ ತಮ್ಮ ಸಂಶೋಧನೆಯ ಫಲಿತವನ್ನು ಪ್ರಕಟಿಸಿದ್ದಾರೆ. ಆದಯ್ಯನ ಸುಮಾರು ನಾಲ್ಕು ನೂರು ವಚನಗಳನ್ನು, ಮೋಳಿಗೆ ಮಾರಯ್ಯನ ಸುಮಾರು ಎಂಟು ನೂರು ವಚನಗಳನ್ನು ಹಾಗೂ ಸರ್ವಜ್ಞನ ವಚನಗಳನ್ನು ಮೊದಲ ಬಾರಿಗೆ ಶಾಸ್ತ್ರೀಯವಾಗಿ ಸಂಪಾದಿಸಿ ಸಾರಸ್ವತ ಲೋಕಕ್ಕೆ ಕೊಡುಗೆಯಾಗಿ ನೀಡಿದ್ದಾರೆ. 'ಬಸವೇಶ್ವರನೂ ಮತ್ತು ಕರ್ನಾಟಕ ಅಭ್ಯುದಯವೂ', 'ಬಸವೇಶ್ವರ ಅಸ್ಪೃಶ್ಯರ ಉದ್ಧಾರವೂ' ಗ್ರಂಥಗಳ ಮೂಲಕ ಅಂದಿನ ಸಮಾಜದಲ್ಲಿ ಅಸ್ಪೃಶ್ಯತೆ, ಜಾತಿಪದ್ಧತಿ ಮುಂತಾದ ಸಾಮಾಜಿಕ ಅನಿಷ್ಟಗಳ ಪರಿಹಾರಕ್ಕೋಸ್ಕರ ಪ್ರಾಮಾಣಿಕ ಪ್ರಯತ್ನ ಮಾಡಿದ್ದಾರೆ. 'ಅನುಭವ ಮಂಟಪದ ಐತಿಹಾಸಿಕತೆ', 'ಲಿಂಗಾಯತ ಧರ್ಮ ಮತ್ತು ಕ್ರೈಸ್ತಧರ್ಮ', 'Anubhava Mantapa, A Complete Concordance to the Bhagawadgita' (ಭಗದ್ಗೀತಾ ಪದ ಪ್ರಯೋಗ ಕೋಶ), 'Ellamma, A Godess of South India' (ಎಲ್ಲಮ್ಮ : ದಕ್ಷಿಣ ಭಾರತದ ದೇವತೆ) ಮುಂತಾದ ಸಂಶೋಧನ ಗ್ರಂಥಗಳು ಉತ್ತಂಗಿ ಚೆನ್ನಪ್ಪನವರ ಬಹುಶ್ರುತ ಜ್ಞಾನ, ಅಗಾಧ ಪಾಂಡಿತ್ಯಕ್ಕೆ, ವಿದ್ವತ್ತಿಗೆ ಸಾಕ್ಷಿಯಾಗಿವೆ. ವೀರಶೈವ ಧರ್ಮ, ಹಿಂದೂಧರ್ಮ, ಕ್ರೈಸ್ತಧರ್ಮ – ಈ ಮೂರೂ ಧರ್ಮಗಳ ಬಗ್ಗೆ ಅಪಾರ ಪಾಂಡಿತ್ಯವನ್ನು

ಹೊಂದಿದ್ದ ಚೆನ್ನಪ್ಪನವರ ಸಂಶೋಧನೆ ಮತ್ತು ಅಗಾಧ ಜ್ಞಾನದ ಫಲವಾಗಿ ಈ ಸಂಶೋಧನಾ ಗ್ರಂಥಗಳು ರಚನೆಯಾದವೆಂದು ಹೇಳಬಹುದು.

ಮಂಜೇಶ್ವರ ಗೋವಿಂದಪೈ ಅವರು ಕವಿಯಾಗಿ, ಕಥೆಗಾರರಾಗಿ, ಭಾಷಾವಿಜ್ಞಾನಿಯಾಗಿ, ಇತಿಹಾಸಕಾರರಾಗಿ, ಶಾಸನತಜ್ಞರಾಗಿ, ಸಂಶೋಧಕರಾಗಿ, ಕನ್ನಡ ಸಾರಸ್ವತಲೋಕಕ್ಕೆ ಬಹಳ ಶ್ರೇಷ್ಠ ಕೊಡುಗೆಯನ್ನು ನೀಡಿದ್ದಾರೆ. ಗೋವಿಂದಪೈ ಅವರ ಸುಮಾರು ೧೩೦ಕ್ಕಿಂತಲೂ ಹೆಚ್ಚಿನ ಸಂಶೋಧನ ಲೇಖನಗಳಲ್ಲಿ ಹಳಗನ್ನಡ ಮತ್ತು ನಡುಗನ್ನಡ ಕುರಿತ ಸಂಪ್ರಬಂಧಗಳ ಸಂಖ್ಯೆ ೫೫, ತುಳುನಾಡಿನ ಇತಿಹಾಸವನ್ನು ಕುರಿತಂತೆ ೨೧, ಕರ್ನಾಟಕ ಇತಿಹಾಸವನ್ನು ಕುರಿತಂತೆ ೨೨, ಭಾರತದ ಇತಿಹಾಸವನ್ನು ಕುರಿತಂತೆ ೧೬, ಶಬ್ದಾರ್ಥ ವ್ಯಾಖ್ಯಾನವನ್ನು ಕುರಿತಂತೆ ೬, ಧರ್ಮ ತತ್ವಜ್ಞಾನ ಇತ್ಯಾದಿ ಕುರಿತಂತೆ ೮, ಹೊಸಗನ್ನಡ ಸಾಹಿತ್ಯ ಕುರಿತಂತೆ ೧೫ ಸಂಪ್ರಬಂಧಗಳನ್ನು ಪ್ರಕಟಿಸಿದ್ದಾರೆ. 'ಕಾರ್ಕಳದ ಗೊಮ್ಮಟ ಬೆಟ್ಟದ ಶಿಲಾಲೇಖಗಳು', 'ಶಾತವಾಹನರು', 'ಚಾಲುಕ್ಯ ವಿಕ್ರಮ ಪಟ್ಟಬಂಧದ ತೇದಿ', 'ಕರ್ನಾಟಕದ ನಿಷ್ಪತ್ತಿ' ಮುಂತಾದ ಸಂಪ್ರಬಂಧಗಳು ಗೋವಿಂದ ಪೈ ಅವರ ಚಾರಿತ್ರಿಕ ಜ್ಞಾನಕ್ಕೆ ಸಾಕ್ಷಿಯಾಗಿವೆ. ಗೋವಿಂದ ಪೈ ಅವರು ಜಾನಪದ ಕ್ಷೇತ್ರ ಕುರಿತಂತೆಯೂ ಮಹತ್ವದ ಸಂಶೋಧನೆ ಮಾಡಿದ್ದಾರೆ. ಕರಾವಳಿ ಕರ್ನಾಟಕದ ಜಾನಪದ ಕುರಿತಂತೆ ಕ್ಷೇತ್ರ ಪರಿವೀಕ್ಷಣೆ ಮಾಡಿ ಅಪಾರ ಮಾಹಿತಿಯನ್ನು ಸಂಗ್ರಹಿಸಿದುದರ ಫಲಿತವಾಗಿ 'ದಕ್ಷಿಣ ಕನ್ನಡ ಜಿಲ್ಲೆಯ ಜಾನಪದ ಕಲಾ ವೈಭವ' ಎಂಬ ವಿದ್ವತ್ಪೂರ್ಣ ಸಂಪ್ರಬಂಧವನ್ನು ಗೋವಿಂದ ಪೈ ಅವರು ಪ್ರಕಟಿಸಿದರು. ಈ ಸಂಶೋಧನೆ ಕರ್ನಾಟಕದ ಕರಾವಳಿ ಪ್ರದೇಶದ ಜಾನಪದವನ್ನು ಕುರಿತ ಮೊತ್ತಮೊದಲಿನ ಸಂಶೋಧನೆಯೆಂದು ಗುರುತಿಸಬಹುದು.

ಕನ್ನಡ ಸಾಹಿತ್ಯವನ್ನು ಕುರಿತಂತೆ ಆರಂಭ ಕಾಲಘಟ್ಟದಲ್ಲಿ ಸಂಶೋಧನೆ ಮಾಡಿದ ಪ್ರಾತಃಸ್ಮರಣೀಯರ ಪಟ್ಟಿಯಲ್ಲಿ ಡಾ.ಎ.ವೆಂಕಟಸುಬ್ಬಯ್ಯನವರ ಹೆಸರು ಅತ್ಯಂತ ಪ್ರಮುಖವಾದುದು. ಹಳಗನ್ನಡ ಕವಿಗಳ ಇತಿವೃತ್ತ, ಪಂಚತಂತ್ರ, ವೇದಗಳು, ಭಾರತಶಾಸ್ತ್ರ (Indogy) ಇವುಗಳಲ್ಲಿ ಅತ್ಯಂತ ಹೆಚ್ಚಿನ ಆಸಕ್ತಿ ಮತ್ತು ಪಾಂಡಿತ್ಯವನ್ನು ಹೊಂದಿದ್ದ ಎ.ವೆಂಕಟಸುಬ್ಬಯ್ಯನವರು ಕನ್ನಡ, ಇಂಗ್ಲೀಷ್, ಸಂಸ್ಕೃತ, ಪ್ರಾಕೃತ, ಜರ್ಮನ್ ಮುಂತಾದ ಹಲವು ಭಾಷೆಗಳಲ್ಲಿ ಪಾಂಡಿತ್ಯವನ್ನು ಹೊಂದಿದ್ದ ಬಹುಶ್ರುತ ವಿದ್ವಾಂಸರು. ಇತಿಹಾಸ, ಶಾಸನಶಾಸ್ತ್ರ, ಪುರಾತತ್ತ್ವಶಾಸ್ತ್ರ ಮುಂತಾದವುಗಳ ಬಗ್ಗೆಯೂ ಅಪಾರ ಜ್ಞಾನವನ್ನು ಹೊಂದಿದ್ದ ವಿದ್ವಾಂಸರಾಗಿದ್ದರು. ವೆಂಕಟಸುಬ್ಬಯ್ಯನವರು ರಚಿಸಿದ 'ಕೆಲವು ಕನ್ನಡ ಕವಿಗಳ ಜೀವನ ಕಾಲ ವಿಚಾರ' ಕೃತಿಯು ಕನ್ನಡ ಸಂಶೋಧನೆಯಲ್ಲಿ ಒಂದು ನೂತನ ಮಾರ್ಗವನ್ನೇ ಸೃಷ್ಟಿಸಿದೆ. ನಮ್ಮ ಕನ್ನಡ ಸಾರಸ್ವತಲೋಕದಲ್ಲಿ ಕೆಲವು ಪ್ರಾಚೀನ ಕವಿಗಳ ಜೀವನ, ಕಾಲ, ದೇಶ, ಇತಿವೃತ್ತಿಗಳನ್ನು ಕುರಿತಂತೆ ಹಲವು ಅಭಿಪ್ರಾಯ ಭೇದಗಳಿದ್ದ ಸಂದರ್ಭದಲ್ಲಿ ವೆಂಕಟಸುಬ್ಬಯ್ಯನವರು ಆಯಾ ಕವಿಗಳ ಸಾಹಿತ್ಯ ಕೃತಿಗಳಲ್ಲಿನ ಆಂತರಿಕ ಹಾಗೂ ಬಾಹ್ಯ ಆಧಾರಗಳ ಹಿನ್ನೆಲೆಯಲ್ಲಿ ಆ ಕವಿಗಳ ಬಗ್ಗೆ ಖಚಿತವಾಗಿ ಮಾಹಿತಿಯನ್ನು ಒದಗಿಸಿದ್ದಾರೆ. ಇದು ಕನ್ನಡ ಸಾಹಿತ್ಯ ಚರಿತ್ರೆಗೆ ಎ.ವೆಂಕಟಸುಬ್ಬಯ್ಯನವರ ಬಹುದೊಡ್ಡ ಸಾರ್ವಕಾಲಿಕ ಶ್ರೇಷ್ಠ ಸಂಶೋಧನಾ ಕೊಡುಗೆ ಎಂದು ಗುರುತಿಸಲಾಗಿದೆ.

ವೆಂಕಟಸುಬ್ಬಯ್ಯನವರು ಪಂಚತಂತ್ರವನ್ನು ಕುರಿತು ಕನ್ನಡ, ಇಂಗ್ಲೀಷ್ ಮತ್ತು ಜರ್ಮನ್ ಭಾಷೆಗಳಲ್ಲಿ ಬರೆದ ೧೪ ಸಂಶೋಧನಾ ಲೇಖನಗಳು ಜಗತ್ಪ್ರಸಿದ್ಧವಾಗಿವೆ. ವಿಷ್ಣುಶರ್ಮನ ಪಂಚತಂತ್ರ ಹಾಗೂ ಬೇರೆ ಪರಂಪರೆಯ ಪಂಚತಂತ್ರಗಳು, ಕನ್ನಡದ ದುರ್ಗಸಿಂಹನ

'ಪಂಚತಂತ್ರ', ವಸುಭಾಗಭಟ್ಟನ ಪರಂಪರೆಯ ಕೃತಿಗಳು, ಪಂಚತಂತ್ರ ಕಥೆಯ ಶಿಲ್ಪ ಕಥಾನಕಗಳು, ಮುಂತಾದವುಗಳ ಬಗ್ಗೆ ಅಪಾರ ಮಾಹಿತಿಯನ್ನು ಹೊಂದಿರುವ ಈ ಸಂಪ್ರಬಂಧಗಳು ಪಂಚತಂತ್ರದ ಬಗ್ಗೆ ದೇಶ ವಿದೇಶಗಳಲ್ಲಿನ ಜನರಿಗೆ ಅಮೂಲ್ಯ ಮಾಹಿತಿಯನ್ನು ನೀಡುವಂತಹ ಸಂಶೋಧನೆಗಳಾಗಿವೆ. ವೆಂಕಟಸುಬ್ಬಯ್ಯನವರ 'The chronalogy of the Western Chalukyas of Kalyan' ಎಂಬ ಸಂಶೋಧನ ಲೇಖನ ಕಲ್ಯಾಣ ಚಾಲುಕ್ಯರಿಗೆ ಸಂಬಂಧಿಸಿದಂತಹ ಮಹತ್ವದ ಸಂಶೋಧನೆಯಾಗಿದೆ. 'Sum shaka dates in Inscriptions' ಎಂಬ ಸಂಶೋಧನಾ ಗ್ರಂಥವೂ ಶಾಸನಗಳಲ್ಲಿ ಕಾಲಗಣನೆಗೆ ಸಂಬಂಧಿಸಿದಂತೆ ಮಹತ್ವದ ಸಂಶೋಧನ ಗ್ರಂಥವೆಂದು ಹೇಳಬಹುದು. 'A Twelth Century University in Mysore' ಎಂಬ ಸಂಶೋಧನ ಲೇಖನವು ಪ್ರಾಚೀನ ಕಾಲಘಟ್ಟದ ಘಟಿಕಾಸ್ಥಾನವಾಗಿದ್ದ ಬಳ್ಳಿಗಾವೆಯಲ್ಲಿನ ಶೈಕ್ಷಣಿಕ ಚಟುವಟಿಕೆಗಳ ಬಗ್ಗೆ ಮಾಹಿತಿ ನೀಡುವ ಮಹತ್ವದ ಸಂಶೋಧನಾ ಲೇಖನವಾಗಿದೆ. ಒಟ್ಟಾರೆ ವೆಂಕಟಸುಬ್ಬಯ್ಯನವರ ಬಹುಶ್ರುತ ಜ್ಞಾನ, ಹಲವು ಜ್ಞಾನಶಿಸ್ತುಗಳಲ್ಲಿನ ಪಾಂಡಿತ್ಯ, ಕ್ಷೇತ್ರಕಾರ್ಯ ಸಂದರ್ಭದಲ್ಲಿ ಸ್ವತಃ ಸಂಗ್ರಹಿಸಿದ ಮಾಹಿತಿ ಉಪಲಬ್ಧ ಆಕರಗಳ ವಿಶ್ಲೇಷಣೆಯ ಫಲಿತವಾಗಿ ರೂಪುಗೊಂಡ ಸಂಶೋಧನೆಯು ಮಹತ್ವದ ಕೊಡುಗೆ ಎಂದು ಹೇಳಬಹುದು.

ವಿಮರ್ಶೆಗೆ ಸಂಶೋಧನೆಯ ಮೌಲ್ಯವನ್ನು ತಂದು ಕೊಟ್ಟವರೆಂದರೆ ಮುಳಿಯ ತಿಮ್ಮಪ್ಪಯ್ಯನವರು. ಶ್ರೀಯುತರ 'ನಾಡೋಜ ಪಂಪ', 'ಕವಿರಾಜಮಾರ್ಗ ವಿವೇಕ' ಕೃತಿಗಳು ಮೂಲತಃ ವಿಮರ್ಶನ ಗ್ರಂಥಗಳಾಗಿದ್ದರೂ ಅವುಗಳಿಗೆ ಸಂಶೋಧನೆಯ ಮೌಲ್ಯವೂ ಲಭ್ಯವಾಗಿರುವುದು ತಿಮ್ಮಪ್ಪಯ್ಯನವರ ಸಂಶೋಧನೆ ಪ್ರಜ್ಞೆ ಮತ್ತು ಪಾಂಡಿತ್ಯದಿಂದ ಎಂಬುದನ್ನು ಗುರುತಿಸಬಹುದು. ಪಂಪನ 'ಆದಿಪುರಾಣ' ಮತ್ತು 'ವಿಕ್ರಮಾರ್ಜುನ ವಿಜಯ' ಕೃತಿಗಳನ್ನು ಕುರಿತಂತೆ ಮುಳಿಯ ತಿಮ್ಮಪ್ಪಯ್ಯ ನಡೆಸಿದ ಅಧ್ಯಯನದ ಫಲವಾಗಿ ಪಂಪನ ಕೃತಿಗಳಲ್ಲಿ ಪಂಪನ ಆಶ್ರಯದಾತನಾದ ಅರಿಕೇಸರಿಯ ಪೂರ್ವಜರ ಬಗೆಗಿನ ಐತಿಹಾಸಿಕ, ಸಾಂಸ್ಕೃತಿಕ ವಿಚಾರಗಳು ಮೊದಲ ಬಾರಿಗೆ ಬೆಳಕು ಕಂಡವು. ಪಂಪನ ಇತಿವೃತ್ತವನ್ನು ಕುರಿತಂತೆಯೂ ತಿಮ್ಮಪ್ಪಯ್ಯನವರು ಹಲವು ಮಹತ್ವದ ವಿಚಾರಗಳನ್ನು ಗುರತಿಸಿದ್ದಾರೆ. ತಿಮ್ಮಪ್ಪಯ್ಯನವರ 'ಕವಿರಾಜಮಾರ್ಗ ವಿವೇಕ' ಕೃತಿಯಲ್ಲಿ ಕವಿರಾಜಮಾರ್ಗದ ಕರ್ತೃತ್ವದ ವಿಚಾರ, ನೃಪತುಂಗ ಅಮೋಘವರ್ಷನ ಹಾಗೂ ರಾಷ್ಟ್ರಕೂಟರ ಇತಿಹಾಸ ಮತ್ತು ರಾಷ್ಟ್ರಕೂಟರ ಸಾಂಸ್ಕೃತಿಕ ಕೊಡುಗೆಗಳ ಬಗ್ಗೆ ಮಹತ್ವದ ಮಾಹಿತಿಯನ್ನು ನೀಡಲಾಗಿದೆ. ತಿಮ್ಮಪ್ಪಯ್ಯನವರ ಮತ್ತೊಂದು ಮಹತ್ವದ ಕೊಡುಗೆಯಾದ 'ಪಾರ್ತಿಸುಬ್ಬ' ಕೃತಿಯು ಕರಾವಳಿ ಪರಿಸರದ ತೆಂಕುತಿಟ್ಟ ಯಕ್ಷಗಾನದ ಶ್ರೇಷ್ಠ ಕವಿಯೆಂಬ ಕೀರ್ತಿಗೆ ಭಾಜನವಾದ ಪಾರ್ತಿಸುಬ್ಬನನ್ನು ಹಾಗೂ ಆತನ ಯಕ್ಷಗಾನ ಕೃತಿಗಳ ವಿಶ್ಲೇಷಣೆಗಳನ್ನೊಳಗೊಂಡ ಮಹತ್ವದ ಕೃತಿಯಾಗಿದೆ. ಪಾರ್ತಿಸುಬ್ಬನ ಇತಿವೃತ್ತ ಹಾಗೂ ಆತನ ಯಕ್ಷಗಾನ ಪ್ರಸಂಗಗಳ ಬಗ್ಗೆ ಸಮಗ್ರವಾದ ಮಾಹಿತಿಯನ್ನು ನೀಡುವ ಅಮೂಲ್ಯವಾದ ಸಂಶೋಧನಾ ಗ್ರಂಥವಾಗಿದೆ.

ಮೈಸೂರಿನ ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ ಆಸ್ಥಾನ ವಿದ್ವಾಂಸರಾಗಿದ್ದ ಎರ್ತೂರು ಶಾಂತಿರಾಜಶಾಸ್ತ್ರಿಗಳು ಕನ್ನಡ, ಸಂಸ್ಕೃತ, ಪ್ರಾಕೃತ, ತುಳು, ಹಿಂದಿ ಭಾಷೆಗಳಲ್ಲಿ ಪ್ರಕಾಂಡ ಪಂಡಿತರಾಗಿದ್ದರು. ಪ್ರಾಚೀನ ಕನ್ನಡ ಕಾವ್ಯಗಳ ಗ್ರಂಥ ಸಂಪಾದನೆ, ಸಂಸ್ಕೃತ, ಪ್ರಾಕೃತ, ಹಿಂದಿ ಹಾಗೂ ಹಳಗನ್ನಡ ಕೃತಿಗಳ ಹೊಸಗನ್ನಡ ಅನುವಾದ ಕ್ಷೇತ್ರಗಳಿಗೆ ಅಪಾರ

ಕೊಡುಗೆ ನೀಡಿರುವ ಶಾಂತಿರಾಜಶಾಸ್ತ್ರಿಗಳು ಜೈನ ಸಾಹಿತ್ಯ ಕ್ಷೇತ್ರಕ್ಕೆ ನೀಡಿರುವ ಕೊಡುಗೆ ಅತ್ಯಂತ ಮಹತ್ವದ್ದಾಗಿದೆ. ತಾಳೆಗರಿ ಹಸ್ತಪ್ರತಿಗಳ ರೂಪದಲ್ಲೇ ಉಳಿದು ಬಂದಿದ್ದ ಹಲವಾರು ಅಮೂಲ್ಯ ಸಾಹಿತ್ಯ ಕೃತಿಗಳನ್ನು ಪ್ರಪ್ರಥಮ ಬಾರಿಗೆ ಶಾಂತಿರಾಜಶಾಸ್ತ್ರಿಗಳು ಸಂಪಾದಿಸಿ ಪ್ರಕಟಿಸುವ ಮೂಲಕ ಸಾಹಿತ್ಯ ಲೋಕಕ್ಕೆ ಕೊಡುಗೆ ನೀಡಿದರು. ಮೂರನೇ ಮಂಗರಸನ 'ನೇಮಿಜಿನೇಶನ ಸಂಗತಿ', ಬಾಹುಬಲಿ ಕವಿಯ 'ನಾಗಕುಮಾರಚರಿತ್ರೆ', ರತ್ನಾಕರವರ್ಣಿಯ 'ಶತಕ ತ್ರಯಗಳು', 'ಜಿನಭಕ್ತಿಸಾರ', ಬ್ರಹ್ಮಶಿವ ಕವಿಯ 'ತ್ರೈಲೋಕ್ಯ ಚೂಡಾಮಣಿ ಸ್ತೋತ್ರ', 'ನೋಂಪಿಯ ಕಥೆಗಳು' ಮುಂತಾದ ಜೈನ ಸಾಹಿತ್ಯ ಕೃತಿಗಳನ್ನು ಸಂಪಾದಿಸಿ ಪ್ರಕಟಿಸಿದರು. ಈ ಕೃತಿಗಳ ಪ್ರಸ್ತಾವನೆಯಲ್ಲಿ ಆಯಾ ಕೃತಿಗಳ ಕರ್ತೃವಿನ ಇತಿವೃತ್ತ, ಆಯಾ ಸಾಹಿತ್ಯ ಕೃತಿಗಳನ್ನು ಕುರಿತ ಉನ್ನತ ವಿಮರ್ಶೆ ಮುಂತಾದವುಗಳಿಂದ ಕೂಡಿವೆ. ಶಾಂತಿರಾಜ ಶಾಸ್ತ್ರಿಗಳ ಅತ್ಯಂತ ಶ್ರೇಷ್ಠ ಕೊಡುಗೆ ಎಂದು ಪರಿಗಣಿತವಾಗಿರುವುದು ಇವರು ಅನುವಾದಿಸಿದ 'ಮಹಾಪುರಾಣ' ಕನ್ನಡ ಅನುವಾದ. 'ಜಿನಸೇನಾಚಾರ್ಯರಿಂದ ರಚಿತವಾದ 'ಪೂರ್ವಪುರಾಣ' ಹಾಗೂ ಗುಣಭದ್ರಾಚಾರ್ಯರಿಂದ ರಚಿತವಾದ 'ಉತ್ತರಪುರಾಣ' ಎರಡನ್ನೂ ಸೇರಿಸಿ ಮಹಾಪುರಾಣವೆಂದು ಕರೆಯಲಾಗುತ್ತದೆ. ಕನ್ನಡದ ಎಲ್ಲ ಜೈನ ಸಾಹಿತ್ಯ ಕೃತಿಗಳಿಗೂ ಮೂಲ ಆಕರ ಗ್ರಂಥವಾಗಿರುವ ಮಹಾಪುರಾಣವನ್ನು ಹೊಸಗನ್ನಡಕ್ಕೆ ಅನುವಾದಿಸುವ ಮೂಲಕ ಶಾಂತಿರಾಜಶಾಸ್ತ್ರಿಗಳು ಕನ್ನಡ ಸಾಹಿತ್ಯಕ್ಕೆ ಮಹತ್ವದ ಕೊಡುಗೆಯನ್ನು ನೀಡಿದ್ದಾರೆ. ಈ ಗ್ರಂಥವು ಕೇವಲ ಅನುವಾದ ಕೃತಿಯಾಗಿ ಉಳಿಯದೆ ಜೈನ ಸಾಹಿತ್ಯದ ಪರಂಪರೆಯನ್ನು ವಿವರಿಸುವ ಶ್ರೇಷ್ಠ ಸಂಶೋಧನ ಗ್ರಂಥವಾಗಿ ಪರಿಣಮಿಸಿರುವುದು ಗಮನಾರ್ಹ ಅಂಶವಾಗಿದೆ.

ಪ್ರಾಚೀನ ಕಾವ್ಯಗಳ ಗ್ರಂಥ ಸಂಪಾದನ ಕ್ಷೇತ್ರ ಒಂದನ್ನೇ ಅತ್ಯಂತ ಪ್ರಮುಖವಾಗಿ ತಮ್ಮ ಸಂಶೋಧನ ಕ್ಷೇತ್ರಕ್ಕೆ ಆಯ್ಕೆ ಮಾಡಿ ಮಹತ್ವದ ಸಾಧನೆ ಮಾಡಿದ ವಿದ್ವಾಂಸರೆಂದರೆ ಎಚ್.ಶೇಷಅಯ್ಯಂಗಾರ್. ಮದ್ರಾಸು ವಿಶ್ವವಿದ್ಯಾನಿಲಯದ ಕನ್ನಡ ವಿಭಾಗದಲ್ಲಿ ಪ್ರಾಧ್ಯಾಪಕರಾಗಿದ್ದ ಡಾ.ಎಚ್.ಶೇಷಅಯ್ಯಂಗಾರ್ ಅವರು ೧೯೨೯ರಲ್ಲಿ 'ಕರ್ನಾಟಕ ಕವಿರಾಜಮಾರ್ಗ' ಕೃತಿಯನ್ನು ಸಂಪಾದಿಸಿದರು. ನಂತರ ಸಾಳ್ವನ 'ರಸರತ್ನಾಕರ' ಕೃತಿಯನ್ನು ಆರು ಹಸ್ತಪ್ರತಿಗಳ ಸಹಾಯದಿಂದ ಸಂಪಾದಿಸಿದರು. ನಾಗವರ್ಮನ 'ಅಭಿಧಾನ ವಸ್ತುಕೋಶ'ವನ್ನು ಎರಡು ಹಸ್ತಪ್ರತಿಗಳ ಸಹಾಯದಿಂದ ಸಂಪಾದಿಸಿದರು. ತದನಂತರ ಎರಡನೇ ಗುಣವರ್ಮನ 'ಪುಷ್ಪದಂತ ಪುರಾಣ', ಕೇಶಿರಾಜನ 'ಶಬ್ದಮಣಿದರ್ಪಣ' ಕೃತಿಯನ್ನು ಸಂಪಾದಿಸಿ ಪ್ರಕಟಿಸಿದರು. ಎರಡನೇ ನಾಗವರ್ಮನ 'ಅಭಿಧಾನ ರತ್ನಮಾಲಾ' ಕೃತಿಯನ್ನು ಏಕೈಕ ಹಸ್ತಪ್ರತಿಯ ಸಹಾಯದಿಂದ ಸಂಪಾದಿಸಿ ಪ್ರಕಟಿಸಿದರು.

ಬೇರೆ ಹಸ್ತಪ್ರತಿಗಳ ಲಭ್ಯವಿಲ್ಲದೇ ಏಕೈಕ ಹಸ್ತಪ್ರತಿಯು ದೊರೆತ ಸಂದರ್ಭದಲ್ಲಿ ಸಂಪಾದಿಸುವ ಶ್ರಮ ವರ್ಣಿಸಲು ಅಸಾಧ್ಯ. ದೊರೆತಿರುವ ಏಕೈಕ ಪ್ರತಿಯು ನಾಶವಾದರೆ ಅದು ಕನ್ನಡ ಸಾಹಿತ್ಯಕ್ಕೆ ದೊಡ್ಡ ನಷ್ಟವಾಗುತ್ತದೆ. ಆದ್ದರಿಂದ ಉಪಲಬ್ಧವಾಗಿದ್ದ ಏಕೈಕ ಹಸ್ತಪ್ರತಿ ಆಧರಿಸಿ ಬಹಳ ಪರಿಶ್ರಮದಿಂದ 'ಅಭಿಧಾನ ರತ್ನಮಾಲಾ' ಕೃತಿಯನ್ನು ಸಂಪಾದಿಸಿ ಪ್ರಕಟಿಸಿದರು. ಅದೇ ರೀತಿ ಇವರು ಸಂಪಾದಿಸಿ ಪ್ರಕಟಿಸಿರುವ 'ಔಷಧಿಕೋಶಂ' ಗ್ರಂಥವು ನಮ್ಮ ನಾಡಿನ ಪರಂಪರಾಗತವಾದ ವೈದ್ಯ ಪದ್ಧತಿಯಾದ ಆಯುರ್ವೇದದಲ್ಲಿ ವಿವಿಧ ಕಾಯಿಲೆಗಳಿಗೆ ನೀಡುವ ಔಷಧಗಳನ್ನು ಕುರಿತಾದ ವೈದ್ಯ ಶಾಸ್ತ್ರಗ್ರಂಥವಾಗಿದೆ. ಇದನ್ನು ಸಹ ಶೇಷಅಯ್ಯಂಗಾರ್‌ರವರು ಏಕೈಕ ಹಸ್ತಪ್ರತಿಯ ಸಹಾಯದಿಂದ ಸಂಪಾದಿಸಿದರು. ಕರ್ಣಪಾಯನ 'ನೇಮಿನಾಥಪುರಾಣಂ' ಕೃತಿಯನ್ನು ನಾಲ್ಕು ಹಸ್ತಪ್ರತಿಗಳ ಸಹಾಯದಿಂದ

ಸಂಪಾದಿಸಿದರು.೧೯೪೨ರಲ್ಲಿ ಮಂಗರಾಜನ 'ಖಗೇಂದ್ರ ಮಣಿ ದರ್ಪಣ' ಕೃತಿಯನ್ನು ಆರು ಹಸ್ತಪ್ರತಿಗಳಿಂದ ಸಂಪಾದಿಸಿದರು. ಇದು ಸಹ ಆಯುರ್ವೇದ ವೈದ್ಯಶಾಸ್ತ್ರವೆಂಬುದು ಗಮನಾರ್ಹ. ಶೇಷಅಯ್ಯಂಗಾರರು ಪ್ರಾಚೀನ ಸಾಹಿತ್ಯ ಕೃತಿಗಳೊಂದಿಗೆ ಆಯುರ್ವೇದ ವೈದ್ಯಶಾಸ್ತ್ರಗಳನ್ನು ಸಹ ವಿದ್ವತ್ಪೂರ್ಣವಾಗಿ ಸಂಪಾದಿಸಿ ಪ್ರಕಟಿಸುವುದರೊಂದಿಗೆ ವೈದ್ಯಕೀಯ ಕ್ಷೇತ್ರಕ್ಕೂ ಶ್ರೇಷ್ಠ ಕೊಡುಗೆಯನ್ನು ನೀಡಿದ್ದಾರೆ.

ಐವತ್ತರ ದಶಕದಲ್ಲಿ ಕರ್ನಾಟಕದ ಸಾಂಸ್ಕೃತಿಕ ಪರಂಪರೆಯನ್ನು ಕುರಿತಂತೆ ಮಹತ್ವದ ಸಂಶೋಧನೆ ಮಾಡಿದ ಕಪಟರಾಳ ಕೃಷ್ಣರಾಯರು ವೃತ್ತಿಯಿಂದ ವಕೀಲರು, ಆದರೆ ಪ್ರವೃತ್ತಿಯಿಂದ ಸಂಸ್ಕೃತಿ ಶೋಧಕರು. ಇವರ ಸಂಶೋಧನೆಯ ಫಲಿತವಾಗಿ ಹೊರಬಂದ 'ಕರ್ನಾಟಕ ಲಾಕುಳಶೈವರ ಇತಿಹಾಸ' ಕೃತಿಯಿಂದ ಪ್ರಾಚೀನ ಕರ್ನಾಟಕದಲ್ಲಿ ಲಕುಲೀಶ ಪಾಶುಪತ ಪಂಥದ ಬಗ್ಗೆ ಅಮೂಲ್ಯ ಮಾಹಿತಿಯು ಹೊರ ಪ್ರಪಂಚಕ್ಕೆ ತಿಳಿಯಿತು. ತದನಂತರ ಕೃಷ್ಣರಾಯರು ರಚಿಸಿದ 'ನಮ್ಮ ನಾಡು-ನುಡಿಯ ಇತಿಹಾಸ' ಕೃತಿಯು ಕನ್ನಡನಾಡಿನ ಹಾಗೂ ಕನ್ನಡ ಭಾಷೆಯ ಪ್ರಾಚೀನತೆಯ ಬಗ್ಗೆ, ನಮ್ಮ ಪರಂಪರೆಯ ಬಗ್ಗೆ ಮಹತ್ವದ ಸಂಗತಿಗಳನ್ನು ಅನಾವರಣಗೊಳಿಸಿತು. ತದನಂತರ ಪ್ರಕಟವಾದ 'ಕರ್ನಾಟಕ ಸಂಸ್ಕೃತಿಯ ಸಂಶೋಧನೆ' ಕೃತಿಯಲ್ಲಿ ೨೨ ಸಂಪ್ರಬಂಧಗಳಿವೆ. ಇವುಗಳಲ್ಲಿ 'ಅಲ್ಲಮಪ್ರಭು ಶಿವಾನುಭವ ಮಂಟಪವು ಐತಿಹಾಸಿಕವೇ', 'ವೀರಶೈವ ಸಂಪ್ರದಾಯ', 'ಅಲ್ಲಮಪ್ರಭು ಮತ್ತು ನಾಥ ಸಂಪ್ರದಾಯ', 'ಕರ್ನಾಟಕ-ಮಹಾರಾಷ್ಟ್ರದಲ್ಲಿ ಚೈತನ್ಯ ಸಂಪ್ರದಾಯ', 'ಬಸವೇಶ್ವರ ಮತ್ತು ಸ್ತ್ರೀ ಸ್ವಾತಂತ್ರ್ಯ', 'ಕನ್ನಡ ಶಾಸನಗಳ ಅಭ್ಯಾಸ', 'ಹಳಗನ್ನಡ-ಹೊಸಗನ್ನಡ ಐತಿಹಾಸಿಕ ವಿವೇಚನೆ', 'ಹರಿದಾಸ ಪರಂಪರೆ', 'ರೇವಣಸಿದ್ಧರ ಕಾಲದ ವಿಚಾರ' ಮುಂತಾದ ಹಲವಾರು ಮಹತ್ವದ ಸಂಶೋಧನ ಲೇಖನಗಳು ಈ ಕೃತಿಯಲ್ಲಿವೆ. ಯಾದಗಿರಿ ಜಿಲ್ಲೆಯ ಚಿತ್ತಾಪುರ ತಾಲ್ಲೂಕಿನ ಸನ್ನತಿಯು ಬೌದ್ಧ ಧರ್ಮದ ಕೇಂದ್ರವಾಗಿತ್ತು ಎನ್ನುವುದನ್ನು ಮೊತ್ತಮೊದಲು ಪತ್ತೆಹಚ್ಚಿದವರು ಕಪಟರಾಳ ಕೃಷ್ಣರಾಯರು. ಇವರ ಸಂಶೋಧನ ಲೇಖನಗಳಲ್ಲಿನ ವಿಚಾರಗಳು ಶಾಸನ, ಇತಿಹಾಸ ಮತ್ತಿತರ ಪೂರಕ ಸಾಹಿತ್ಯ ಕೃತಿಗಳ ಆಧಾರಗಳ ಹಿನ್ನೆಲೆಯಲ್ಲಿ ರಚನೆಯಾಗಿರುವುದರಿಂದ ಖಚಿತತೆಯಿಂದ ಕೂಡಿರುವುದು ಗಮನಾರ್ಹ ಅಂಶವಾಗಿದೆ.

ಹವ್ಯಾಸಿ ಸಂಶೋಧಕರು ಹಾಗೂ ಇತಿಹಾಸಕಾರರೂ ಆದ ಹುಲ್ಲೂರು ಶ್ರೀನಿವಾಸ ಜೋಯಿಸರು ಇತಿಹಾಸದ ಮೇಲೆ ಬೆಳಕು ಚೆಲ್ಲುವಂತಹ ಸುಮಾರು ಇನ್ನೂರು ಸಂಶೋಧನ ಲೇಖನಗಳನ್ನು ಮತ್ತು ಹತ್ತು ಸಂಶೋಧನಾ ಗ್ರಂಥಗಳನ್ನು ಬರೆದಿದ್ದಾರೆ. ಚಿತ್ರದುರ್ಗವು ಇವರ ಕಾರ್ಯಕ್ಷೇತ್ರದ ಕೇಂದ್ರವಾಗಿತ್ತು. ಚಿತ್ರದುರ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ ಕುರಿತಂತೆ ಮಹತ್ವದ ಸಂಶೋಧನೆಯನ್ನು ಮಾಡಿದ್ದಾರೆ. ಚಿತ್ರದುರ್ಗ ಜಿಲ್ಲೆಯಲ್ಲಿ ಬೌದ್ಧ ಧರ್ಮದ ಕುರುಹುಗಳನ್ನು ಮೊದಲು ಪತ್ತೆಹಚ್ಚಿದ ಶ್ರೇಯಸ್ಸು ಶ್ರೀನಿವಾಸ ಜೋಯಿಸರಿಗೆ ಸಲ್ಲುತ್ತದೆ. 'ಹೊಯ್ಸಳ ಅನ್ವಯ ಪ್ರತಾಪ', 'ಹೊಯ್ಸಳ ವಿನಯಾದಿತ್ಯ', 'ಬಾಚಣ್ಣ ದಂಡನಾಯಕ', 'ವೀರ ರಮಣಿ ಓಬವ್ವ', 'ಉಚ್ಚಂಗಿ ಗಿರಿನಾಥ', 'ಜೈನಭಾರತದಲ್ಲಿ ಚಾರಿತ್ರಿಕ ವಿಷಯಗಳು', 'ಶ್ರವಣಬೆಳಗೊಳಕ್ಕೆ ಬಂದ ಚಂದ್ರಗುಪ್ತ ಯಾರು', 'ಗೊಮ್ಮಟೇಶ್ವರ ಪ್ರತಿಷ್ಠಾಪನೆಯ ಕಾಲ', 'ಶಂಕರಾಚಾರ್ಯರ ಕಾಲ ನಿರ್ಣಯ' ಮುಂತಾದ ಹತ್ತು ಹಲವು ವಿಷಯಗಳನ್ನು ಕುರಿತ ಸಂಶೋಧನ ಲೇಖನಗಳನ್ನು ಜೋಯಿಸರು ಪ್ರಕಟಿಸಿದ್ದಾರೆ. ಚಿತ್ರದುರ್ಗ ಜಿಲ್ಲೆಯ ಇತಿಹಾಸ ಮತ್ತು ಪಾಳೇಗಾರರ ಬಗ್ಗೆ ಮಹತ್ವದ ಸಂಶೋಧನೆಗಳನ್ನು ಮಾಡಿದ್ದಾರೆ. ಈ ವಿಷಯಗಳ ಬಗೆಗಿನ ಎಲ್ಲ ರೀತಿಯ ಆಕರ ಸಾಮಗ್ರಿಗಳನ್ನು

ಬಳಸಿಕೊಂಡು ಪರಿಪೂರ್ಣವೆನ್ನುವಂತೆ ಸಂಶೋಧನೆ ಮಾಡಿರುವುದು ಶ್ರೀನಿವಾಸ ಜೋಯಿಸರ ಹೆಗ್ಗಳಿಕೆಯಾಗಿದೆ. ಚಿತ್ರದುರ್ಗ ಇತಿಹಾಸದ ಬಗ್ಗೆ ರಚಿತವಾಗಿದ್ದ 'ಚಿತ್ರದುರ್ಗದ ಬಖೈರು' ಶ್ರೀನಿವಾಸ ಜೋಯಿಸರು ಸಂಪಾದಿಸಿದ ಗ್ರಂಥ ಸಂಪಾದನ ಕ್ಷೇತ್ರಕ್ಕೆ ಮಹತ್ವದ ಕೊಡುಗೆಯಾಗಿದೆ.

ಕನ್ನಡ ನಾಡಿನ ಸಾಂಸ್ಕೃತಿಕ ಚರಿತ್ರೆಯ ರಚನೆಗೆ ಪುರಾತತ್ವ ಶೋಧಗಳನ್ನು, ಉತ್ಖನನಗಳ ಫಲಿತಗಳನ್ನು ಆಕರಗಳನ್ನಾಗಿ ಬಳಸಿಕೊಂಡ ವಿದ್ವಾಂಸರೆಂದರೆ ಡಾ.ಎಂ.ಎಚ್.ಕೃಷ್ಣ ಅವರು. ಚಿತ್ರದುರ್ಗ ಜಿಲ್ಲೆಯ ಚಂದ್ರವಳ್ಳಿ ಮತ್ತು ರಾಯಚೂರು ಜಿಲ್ಲೆಯ ಬ್ರಹ್ಮಗಿರಿಯಲ್ಲಿ ವೈಜ್ಞಾನಿಕವಾಗಿ ಉತ್ಖನನ ನಡೆಸಿದ ಎಂ.ಎಚ್.ಕೃಷ್ಣ ಅವರು ಚಂದ್ರವಳ್ಳಿಯಲ್ಲಿ ಶಾತವಾಹನರ ಸಂಸ್ಕೃತಿಯ ಅವಶೇಷಗಳನ್ನು, ಶಾತವಾಹನರ ನಾಣ್ಯಗಳನ್ನು ಪತ್ತೆಹಚ್ಚಿದರು. ಅಶೋಕನ ಬ್ರಹ್ಮಗಿರಿ ಶಾಸನೋಕ್ತವಾದ ಪ್ರಾಚೀನ ಇಸಿಲ ಪಟ್ಟಣದ ಅವಶೇಷಗಳನ್ನು ಪತ್ತೆಹಚ್ಚಿದರು.

ಸುಮಾರು ಎರಡು ಸಾವಿರ ಅಪ್ರಕಟಿತ ಶಾಸನಗಳನ್ನು ಪರಿಶೋಧಿಸಿ ಎಪಿಗ್ರಾಫಿಯ ಕರ್ನಾಟಿಕ ಅನುಬಂಧ ಸಂಪುಟಗಳಲ್ಲಿ ಮತ್ತು ಮೈಸೂರು ಪುರಾತತ್ವ ಇಲಾಖೆಯ ವಾರ್ಷಿಕ ವರದಿಗಳಲ್ಲಿ ಪ್ರಕಟಿಸಿದರು. ಕದಂಬ ವಂಶದ ಸಂಸ್ಥಾಪಕನಾದ ಮಯೂರಶರ್ಮನ ಚಂದ್ರವಳ್ಳಿ ಶಾಸನವನ್ನು ಪರಿಶೋಧಿಸಿ ಪ್ರಕಟಿಸಿದರು. ತನ್ಮೂಲಕವಾಗಿ ಕದಂಬರ ಇತಿಹಾಸ ರಚನೆಗೆ ಮೂಲ ಆಕರವಾದ ಅಮೂಲ್ಯ ಶಾಸನವೊಂದನ್ನು ಕೃಷ್ಣ ಅವರು ಪತ್ತೆ ಹಚ್ಚಿದಂತಾಯಿತು. ಅದೇ ರೀತಿ ಕನ್ನಡದ ಅತ್ಯಂತ ಪ್ರಾಚೀನವಾದ ಶಾಸನವೆಂಬ ಕೀರ್ತಿಗೆ ಭಾಜನವಾಗಿರುವ ಹಲ್ಮಿಡಿ ಶಾಸನವನ್ನು ಪತ್ತೆಹಚ್ಚಿ ಪ್ರಕಟಿಸಿದರು. ಕದಂಬರು, ಪಲ್ಲವರು, ಆಳುಪರು ಮುಂತಾದ ಅರಸು ಮನೆತನಗಳ ರಾಜಕೀಯ ಚರಿತ್ರೆ, ಕನ್ನಡ ಭಾಷೆಯ ಅವಸ್ಥಾಂತರಗಳು, ಪೂರ್ವದ ಹಳಗನ್ನಡ ಭಾಷೆಯ ಸ್ವರೂಪ, ವ್ಯಾಕರಣ ಪ್ರಕ್ರಿಯೆಗಳು ಮುಂತಾದವುಗಳನ್ನು ಕುರಿತು ಅಧ್ಯಯನ ಮಾಡಬಯಸುವವರಿಗೆ ಅತ್ಯಂತ ಪ್ರಮುಖ ಆಕರವಾದ ಹಲ್ಮಿಡಿ ಶಾಸನವನ್ನು ಪತ್ತೆಹಚ್ಚಿ ಪ್ರಕಟಿಸಿದ ಕೀರ್ತಿ ಡಾ.ಎಂ.ಎಚ್.ಕೃಷ್ಣ ಅವರಿಗೆ ಸಲ್ಲುತ್ತದೆ.

ಕರ್ನಾಟಕದ ಬೇರೆ ಬೇರೆ ಪ್ರದೇಶಗಳಲ್ಲಿ ಪರಿಶೋಧಿತವಾಗಿದ್ದ ಸುಮಾರು ೬೦೦೦ ಪ್ರಾಚೀನ ನಾಣ್ಯಗಳನ್ನು ವ್ಯವಸ್ಥಿತವಾಗಿ ಅಧ್ಯಯನಮಾಡಿ ವಿವರಣಾತ್ಮಕ ಸೂಚಿಯನ್ನು ತಯಾರಿಸಿದರು. ಕೃಷ್ಣ ಅವರು ನಾಣ್ಯಶಾಸ್ತ್ರದಲ್ಲಿ ಅತ್ಯಂತ ಹೆಚ್ಚಿನ ಪ್ರಾವೀಣ್ಯತೆಯನ್ನು ಹೊಂದಿದ್ದು ದಕ್ಷಿಣ ಭಾರತದ ಪ್ರಾಚೀನ ನಾಣ್ಯಗಳ ಬಗ್ಗೆಯೇ ಸಂಶೋಧನೆ ನಡೆಸಿ ಡಾಕ್ಟರೇಟ್ ಪದವಿಯನ್ನು ಪಡೆದಿರುವುದನ್ನು ಸ್ಮರಿಸಬಹುದು.

ಮೈಸೂರು ಪುರಾತತ್ವ ಇಲಾಖೆಯ ನಿರ್ದೇಶಕರಾಗಿದ್ದ ಎಂ.ಎಚ್.ಕೃಷ್ಣ ಅವರು ಹಲವಾರು ತಾಳೆಯೋಲೆಯ ಹಸ್ತಪ್ರತಿಗಳನ್ನು ಪತ್ತೆ ಹಚ್ಚಿ ಹಲವು ಹಸ್ತಪ್ರತಿಗಳ ಸಹಾಯದಿಂದ ಅವುಗಳ ಪಠ್ಯಗಳನ್ನು ಸಿದ್ಧಪಡಿಸಿ ಹೈದರ್‌ನಾಮ, ಮಲ್ಲಿಕಾರ್ಜುನನ ಸೂಕ್ತಿಸುಧಾರ್ಣವ, ಕೊಡಗಿನ ಕೈಫಿಯತ್ತು, ವಿದ್ಯಾರಣ್ಯ ಕಾಲಜ್ಞಾನ, ಪದ್ಮಪುರಾಣದ ಟೀಕು ಮುಂತಾದವುಗಳನ್ನು ಸಂಪಾದಿಸಿ ಪ್ರಕಟಿಸಿದರು. ಎಂ.ಎಚ್.ಕೃಷ್ಣ ಅವರು ನೂರಾರು ಶಾಸನಗಳ ಪಡಿಯಚ್ಚುಗಳು ಹಾಗೂ ಛಾಯಾಚಿತ್ರಗಳನ್ನು ಅಧ್ಯಯನ ಮಾಡಿ ಲಿಪಿಸ್ವರೂಪವನ್ನು ಗುರುತಿಸಿ ಕನ್ನಡ ಲಿಪಿಗಳ ವಿಕಾಸದ ಹಂತಗಳನ್ನು ಕುರಿತು ಕನ್ನಡ ಲಿಪಿಗಳ ಪಟ್ಟಿಕೆಗಳನ್ನು(ಚಾರ್ಟ್) ವೈಜ್ಞಾನಿಕವಾಗಿ ತಯಾರಿಸಿದ್ದಾರೆ.

ಗ್ರಂಥ ಸಂಪಾದನ ಕ್ಷೇತ್ರದಲ್ಲಿ ಮಹತ್ವದ ಸಾಧನೆ ಮಾಡಿರುವ ಶಿ.ಶಿ.ಬಸವನಾಳರು ವಿರೂಪಾಕ್ಷ ಪಂಡಿತನ ಚನ್ನಬಸವ ಪುರಾಣ, ಚಾಮರಸನ ಪ್ರಭುಲಿಂಗಲೀಲೆ, ನಾಗವರ್ಮನ ಕಾವ್ಯಾವಲೋಕನ, ಷಡಕ್ಷರ ದೇವನ 'ಶಬರ ಶಂಕರ ವಿಳಾಸ', ಹರಿಹರನ 'ರೇವಣಸಿದ್ದೇಶ್ವರದೇವರ ರಗಳೆ' ಬಸವಣ್ಣನವರ 'ಷಟ್‌ಸ್ಥಳದ ವಚನಗಳು', ಬಸವಲಿಂಗ ಶರಣರ ಕೃತಿಗಳು ಮುಂತಾದ ಅಮೂಲ್ಯವಾದ ಸಾಹಿತ್ಯ ಕೃತಿಗಳನ್ನು ಸಂಪಾದಿಸಿ ಕನ್ನಡ ಸಾರಸ್ವತ ಲೋಕಕ್ಕೆ ಕೊಡುಗೆಯಾಗಿ ನೀಡಿದ್ದಾರೆ.

ಕಾವ್ಯಾವಲೋಕನ ಕೃತಿಯ ಪ್ರಸ್ತಾವನೆಯಲ್ಲಿ ಇಮ್ಮಡಿ ನಾಗವರ್ಮನ ಕಾಲ, ಆತನ ಕೃತಿಗಳನ್ನು ಪರಿಚಯಿಸುವುದರೊಂದಿಗೆ ಕನ್ನಡದ ಅಲಂಕಾರ ಗ್ರಂಥಗಳ ಬಗ್ಗೆ ವಿಸ್ತೃತವಾಗಿ ಮಾಹಿತಿ ನೀಡಿದ್ದಾರೆ. ಕವಿರಾಜಮಾರ್ಗ ಹಾಗೂ ಕಾವ್ಯಾವಲೋಕನಗಳ ತೌಲನಿಕ ಅಧ್ಯಯನವನ್ನು ಮಾಡಿದ್ದಾರೆ. ಸುಮಾರು ೧೩೪ ಪುಟಗಳ ವಿಸ್ತೃತವಾದ ಪ್ರಸ್ತಾವನೆಯಲ್ಲಿ ಅಲಂಕಾರ ಶಾಸ್ತ್ರದ ಬಗ್ಗೆ ಹಾಗೂ ಅಲಂಕಾರಶಾಸ್ತ್ರ ಗ್ರಂಥಗಳ ಬಗ್ಗೆ ಸಮಗ್ರವಾಗಿ ವಿವೇಚಿಸಿದ್ದಾರೆ. 'ಮೈಲಾರ ಬಸವಲಿಂಗ ಶರಣರ ಕೃತಿಗಳು' ಸಂಪುಟದಲ್ಲಿ 'ಷಟ್‌ಸ್ಥಲ ವೀರಶೈವ ಸಿದ್ಧಾಂತ' 'ಗುರುಕರುಣ ತ್ರಿವಿಧಿ', 'ಶಿವಾನುಭವ ದರ್ಪಣ' 'ಲಿಂಗಪೂಜಾ ವಿಧಾನ' ಮುಂತಾದ ಕೃತಿಗಳನ್ನು ಸಂಕಲಿಸಿ ಸಂಪಾದಿಸಲಾಗಿದೆ. ಈ ಕೃತಿಯ ಸಂಪಾದನೆಯೊದಿಗೆ ಬಸವಲಿಂಗ ಶರಣರ ಸಮಗ್ರ ಕೃತಿಗಳನ್ನು ಮೊತ್ತಮೊದಲ ಬಾರಿಗೆ ಕನ್ನಡ ಸಾರಸ್ವತ ಲೋಕಕ್ಕೆ ಪರಿಚಯಿಸಿದಂತಾಯಿತು. ಬಸವನಾಳರು 'ಕಮಲಾಚಲ ಕೋಟೆಯ ಕೈಫಿಯತ್ತು' ಕೃತಿಯನ್ನು ಪರಿಶೋಧಿಸಿ ಪ್ರಕಟಿಸುವ ಮೂಲಕ ಕಮಲಾಚಲ ಕೋಟೆಯ ಬಗೆಗಿನ ಚಾರಿತ್ರಿಕ ದಾಖಲೆಗಳನ್ನು ಬೆಳಕಿಗೆ ತಂದದ್ದು ಇತಿಹಾಸ ಕ್ಷೇತ್ರಕ್ಕೆ ಮಹತ್ವದ ಕೊಡುಗೆಯಾಗಿದೆ.

ಹರಿದಾಸ ಸಾಹಿತ್ಯವನ್ನು ಕುರಿತ ಸಂಶೋಧನೆಗೆ ತಮ್ಮ ಜೀವನವನ್ನು ಮುಡಿಪಾಗಿಟ್ಟಂತೆ ಶ್ರಮಿಸಿದ ವಿದ್ವಾಂಸರಾದ ಗೋರೆಬಾಳ ಹನುಮಂತರಾಯರ ಸಾಧನೆ ಮಹತ್ವಪೂರ್ಣವಾದುದು. ಹಲವಾರು ವರ್ಷಗಳ ಕಾಲ ನಾಡಿನ ಉದ್ದಗಲಕ್ಕೂ ಏಕಾಂಗಿಯಾಗಿ ಸಂಚರಿಸಿ ಕ್ಷೇತ್ರ ಪರಿವೀಕ್ಷಣೆ ಮಾಡಿ ಹಲವಾರು ಅಮೂಲ್ಯ ಸಾಹಿತ್ಯ ಕೃತಿಗಳನ್ನು ಸಂಶೋಧಿಸಿ ಶಾಸ್ತ್ರೀಯವಾಗಿ ಪರಿಷ್ಕರಿಸಿ ವಿದ್ವತ್ಪೂರ್ಣವಾದ ಪ್ರಸ್ತಾವನೆಗಳೊಂದಿಗೆ ಪ್ರಕಟಿಸಿದರು. ಸುಮಾರು ನಾಲ್ಕು ಸಾವಿರದ ಐದುನೂರು ಪದಗಳು, ಸುಮಾರು ಒಂದು ಸಾವಿರ ಸುಳಾದಿಗಳು, ಸುಮಾರು ಏಳು ನೂರು ಉಗಾಭೋಗಗಳನ್ನು ಪರಿಶೋಧಿಸಿ ಪ್ರಕಟಿಸಿದರು. ಪ್ರಾಣೇಶದಾಸರ ೨೫೨ ಕೀರ್ತನೆಗಳು, ಗುರುಪ್ರಾಣೇಶದಾಸರ ೧೮ ಕೀರ್ತನೆಗಳು, ಶ್ರೀಶ ಪ್ರಾಣೇಶದಾಸರ ೧೪ ಕೀರ್ತನೆಗಳು, ವರದೇಶ ವಿಠಲರ 'ಸ್ವಪ್ನವೃಂದಾವನಾಖ್ಯಾನ'ವನ್ನು ಸಂಪಾದಿಸಿ ಪ್ರಕಟಿಸಿದರು.

ಹನುಮಂತರಾಯರು 'ಸುಮಧ್ವವಿಜಯ'ವನ್ನು ಕನ್ನಡಕ್ಕೆ ಅನುವಾದಿಸಿ ವ್ಯಾಖ್ಯಾನ ರೂಪದಲ್ಲಿ ವಿವರಣೆಯೊಂದಿಗೆ ಪ್ರಕಟಿಸಿದುದು ಮಹತ್ವದ ಕೊಡುಗೆಯೆಂದು ಹೇಳಬಹುದು. ಅದೇ ರೀತಿ ಜಗನ್ನಾಥದಾಸರ 'ಹರಿಕಥಾಮೃತಸಾರ'ವನ್ನು ೬ ಸಂಪುಟಗಳಲ್ಲಿ ವಿಸ್ತಾರವಾದ ಪ್ರಸ್ತಾವನೆಯೊಂದಿಗೆ ಪ್ರಕಟಿಸಿದರು. 'ವಾಮನ ಪುರಾಣ', 'ಪಾಂಚರಾತ್ರ ಆಗಮ', ವ್ಯಾಸತೀರ್ಥರ 'ಧ್ಯಾನಾನುಭವ', ರಾಘವೇಂದ್ರ ತೀರ್ಥರ 'ಭಗವದ್ಧ್ಯಾನ' ವ್ಯಾಸತತ್ವಜ್ಞರ 'ಮಾನಸಸ್ಮೃತಿ' ಮುಂತಾದ ಕೃತಿಗಳನ್ನು ಮೊತ್ತಮೊದಲ ಬಾರಿಗೆ ಸಂಪಾದಿಸಿ ಪ್ರಕಟಿಸಿದರು. ವಿಜಯದಾಸ, ಗೋಪಾಲದಾಸ, ನರಹರಿತೀರ್ಥ, ಶ್ರೀಪಾದರಾಜ ಮೊದಲಾದ ದಾಸವರೇಣ್ಯರ ಕೃತಿಗಳನ್ನು ಸಂಪಾದಿಸಿ ಪ್ರಕಟಿಸುವುದರೊಂದಿಗೆ ಹರಿದಾಸ ವಾಙ್ಮಯವನ್ನು

ಕುರಿತಂತೆ ಶ್ರೇಷ್ಠಮಟ್ಟದ ಕೊಡುಗೆಯನ್ನು ಹನುಮಂತರಾಯರು ಕನ್ನಡ ಸಾರಸ್ವತಲೋಕಕ್ಕೆ ನೀಡಿದ್ದಾರೆ.

ಡಾ.ಕೆ.ಜಿ.ಕುಂದಣಗಾರರು ಹಳೆಯ ಮುಂಬೈ ಕರ್ನಾಟಕದ ನಾಲ್ಕು ಜಿಲ್ಲೆಗಳು ಮತ್ತು ಕೊಲ್ಲಾಪುರ ಸಂಸ್ಥಾನದ ಪ್ರದೇಶದಾದ್ಯಂತ ಕ್ಷೇತ್ರಕಾರ್ಯ ಮಾಡಿ ಅಲ್ಲಿಯ ಪ್ರತಿಯೊಂದು ಹಳ್ಳಿಗಳಲ್ಲೂ ಸುತ್ತಾಡಿ ಅಪ್ರಕಟಿತ ಶಾಸನಗಳನ್ನು ಪತ್ತೆಹಚ್ಚಿ, ಪಡಿಯಚ್ಚುಗಳನ್ನು ತೆಗೆದು ಶಾಸನ ಪಾಠಗಳನ್ನು ಸಿದ್ಧಗೊಳಿಸಿ ಆ ಎಲ್ಲಾ ಶಾಸನಗಳ ಐತಿಹಾಸಿಕ, ಸಾಂಸ್ಕೃತಿಕ ಅಂಶಗಳನ್ನು ಕ್ರೋಢೀಕರಿಸಿ 'ಇನ್ಸ್‌ಕ್ರಿಪ್‌ಶನ್ಸ್ ಇನ್ ನಾರ್ದನ್ ಕರ್ನಾಟಕ ಅಂಡ್ ದಿ ಕೊಲ್ಲಾಪುರ ಸ್ಟೇಟ್' ಎಂಬ ಸಂಶೋಧನಾ ಗ್ರಂಥವನ್ನು ಪ್ರಕಟಿಸಿದರು. ಈ ಪ್ರದೇಶದಲ್ಲಿನ ಪ್ರಾಚೀನ ನಾಣ್ಯಗಳನ್ನು ಕುರಿತು ವಿಸ್ತೃತವಾಗಿ ಅಧ್ಯಯನ ನಡೆಸಿ ಸಂಶೋಧನೆ ನಡೆಸಿ ಪುಸ್ತಕವೊಂದನ್ನು ಪ್ರಕಟಿಸಿದ್ದಾರೆ. ಉತ್ತರ ಕರ್ನಾಟಕದ ಶಾಸನಗಳ ಬಗ್ಗೆ ಮಹತ್ವದ ಸಂಶೋಧನೆ ನಡೆಸಿದ ಕುಂದಣಗಾರರು ಉತ್ತರ ಕರ್ನಾಟಕದ ಶಾಸನಗಳ ಮಹತ್ವ, ಸ್ವಾದಿಯ ಇತಿಹಾಸ, ಗೋಕಾಕ್ ರಟ್ಟರ ಇತಿಹಾಸ ಮತ್ತು ಸಂಸ್ಕೃತಿ, ಕರ್ನಾಟಕದಲ್ಲಿ ಪಾಶುಪತರು ಮತ್ತು ಶೈವರು, ಕರ್ನಾಟಕದಲ್ಲಿ ನಾಥಪಂಥೀಯರು ಮುಂತಾದ ಹಲವಾರು ಮಹತ್ವದ ಸಂಶೋಧನಾ ಲೇಖನಗಳನ್ನು ಪ್ರಕಟಿಸಿದ್ದಾರೆ. ತಮ್ಮ ಸಂಶೋಧನೆಗಳಿಗೆ ಆಧಾರವಾಗಿ ನಂಬಲರ್ಹವಾದಂತಹ ಶಾಸನಾಧಾರಗಳು, ಮತ್ತಿತರ ಪೂರಕ ಆಧಾರಗಳನ್ನು ನೀಡುವುದರೊಂದಿಗೆ ಖಚಿತವಾದ ಮಾಹಿತಿಯನ್ನು ನೀಡಿರುವುದನ್ನು ಗುರುತಿಸಬಹುದು.

ಕನ್ನಡ ನಾಡು ನುಡಿಯನ್ನು ಕುರಿತ ಸಂಶೋಧಕರಲ್ಲಿ ಅಗ್ರಗಣ್ಯರಾದ ಶಂ.ಬಾ.ಜೋಷಿಯವರ ಸಂಶೋಧನೆಯು ಕೆಲವೊಮ್ಮೆ ದೂರಾನ್ವಯವೆನಿಸಿದರೂ ಅವರ ಸಂಶೋಧನೆಗಳ ಮಹತ್ವ ಕಡಿಮೆಯೆನಿಸುವುದಿಲ್ಲ. ಶಂ.ಬಾ. ಜೋಷಿಯವರು 'ಕರ್ನಾಟಕ ಸಂಸ್ಕೃತಿಯ ಪೂರ್ವ ಪೀಠಿಕೆ', 'ಕನ್ನುಡಿಯ ಹುಟ್ಟು', 'ಕನ್ನಡದಿ ನೆಲೆ', 'ಕಣ್ಮರೆಯಾದ ಕನ್ನಡ, ಮಹಾರಾಷ್ಟ್ರದ ಮೂಲ 'ಕನ್ನಡ ನುಡಿಯ ಜೀವಾಳ, 'ಹಾಲುಮತ ದರ್ಶನ', 'ಋಗ್ವೇದ ಸಾರ', 'ನಾಗ ಪ್ರತಿಮಾ ವಿಚಾರ' ಮುಂತಾದ ಕೃತಿಗಳನ್ನು ರಚಿಸಿದ್ದಾರೆ. ಈ ಎಲ್ಲಾ ಕೃತಿಗಳ ರಚನೆಯಲ್ಲಿ ಶಂ.ಬಾ.ಜೋಷಿಯವರು ಇತಿಹಾಸ, ಮಾನವಶಾಸ್ತ್ರ, ಶಾಸನಶಾಸ್ತ್ರ, ಜಾನಪದ, ಪುರಾಣ, ಧರ್ಮಶಾಸ್ತ್ರ, ಮುಂತಾದ ಹಲವು ಶಾಸ್ತ್ರಗಳನ್ನು ಆಧರಿಸಿ ಬಹುಶಿಸ್ತೀಯ ಸಂಶೋಧನಾ ಮಾದರಿಯಲ್ಲಿ ಹಲವು ಮೂಲಗಳಿಂದ ಆಕರ ಸಾಮಗ್ರಿಗಳನ್ನು ಬಳಸಿಕೊಂಡು ತಮ್ಮದೇ ಆದ ಸಂಶೋಧನಾ ಮಾದರಿಯೊಂದನ್ನು ರೂಪಿಸಿಕೊಂಡು ಸಂಶೋಧನೆ ನಡೆಸಿ ಈ ಕೃತಿಗಳನ್ನು ರಚಿಸಿದ್ದಾರೆ. ಜೋಷಿಯವರು ರಚಿಸಿರುವ ಹಾಲುಮತದರ್ಶನ ಕೃತಿಯು ಹಾಲುಮತದ ಬಗ್ಗೆ ಸಮಗ್ರವಾಗಿ ಮಾಹಿತಿಯನ್ನು ನೀಡುವ ಮಹತ್ವದ ಸಂಶೋಧನಾ ಗ್ರಂಥವೆಂದು ಹೇಳಬಹುದು.

ಪ್ರಾಚೀನ ಸಾಹಿತ್ಯದ ಸಂಪಾದನೆ, ಶಾಸನಗಳ ಪರಿಶೋಧನೆ, ಜನಪದ ಸಾಹಿತ್ಯ, ವಾಸ್ತುಶಿಲ್ಪ, ಪುರಾತತ್ವ, ಮೂರ್ತಿಶಿಲ್ಪ, ವ್ಯಾಕರಣಶಾಸ್ತ್ರ, ಇತಿಹಾಸ, ಸಂಸ್ಕೃತಿ, ಮುಂತಾದ ಎಲ್ಲಾ ಕ್ಷೇತ್ರಗಳಲ್ಲಿಯೂ ಮಹತ್ವದ ಸಾಧನೆ ಮಾಡಿರುವ ಆರ್.ಎಸ್.ಪಂಚಮುಖಿಯವರ ಕೊಡುಗೆ ಅಪಾರವಾದುದು. ಬೆಳಗಾವಿಯ ಹೊರವಲಯದಲ್ಲಿರುವ ವಡಗಾಂವ ಮಾಧವಪುರದಲ್ಲಿ ಉತ್ಖನನ ನಡೆಸಿ ಶಾತವಾಹನರ ಸಂಸ್ಕೃತಿಯ ಹಲವಾರು ಅವಶೇಷಗಳನ್ನು, ಬ್ರಾಹ್ಮೀಲಿಪಿ ಮತ್ತು ಪ್ರಾಕೃತ ಭಾಷೆಯ ಹಲವಾರು ಶಾಸನಗಳನ್ನು ಮೊದಲಬಾರಿಗೆ ಪರಿಶೋಧಿಸಿದರು. ಬಾದಾಮಿಯ ಬಂಡೆಯೊಂದರ ಮೇಲಿದ್ದ ಒಂದನೆಯ ಪುಲಿಕೇಶಿಯ ಶಿಲಾಶಾಸನವನ್ನು ಪತ್ತೆಹಚ್ಚಿ ಪ್ರಕಟಿಸಿದರು. ಬಾದಾಮಿ,

ಐಹೊಳೆ, ಪಟ್ಟದಕಲ್ಲು ಮುಂತಾದ ಸ್ಥಳಗಳಲ್ಲಿನ ದೇವಾಲಯಗಳ ವಾಸ್ತುಶಿಲ್ಪವನ್ನು ಕುರಿತಂತೆ ಸಮಗ್ರವಾಗಿ ಅಧ್ಯಯನ ನಡೆಸಿ ವಾಸ್ತುಶಿಲ್ಪ ಗ್ರಂಥಗಳನ್ನು ಪ್ರಕಟಿಸಿದರು.

ಉತ್ತರ ಕರ್ನಾಟಕದಾದ್ಯಂತ ಕ್ಷೇತ್ರಕಾರ್ಯ ಮಾಡಿ ನೂರಾರು ಅಪ್ರಕಟಿತ ಶಾಸನಗಳನ್ನು ಪರಿಶೋಧಿಸಿ 'ಕರ್ನಾಟಕ ಇನ್ಸ್‌ಕ್ರಿಪಶನ್ಸ್' ಮಾಲಿಕೆಯಲ್ಲಿ ಮೂರು ಶಾಸನ ಸಂಪುಟಗಳನ್ನು ಧಾರವಾಡ ವಿಶ್ವವಿದ್ಯಾಲಯದ ಕನ್ನಡ ಸಂಶೋಧನಾ ಸಂಸ್ಥೆಯ ಮೂಲಕ ಪ್ರಕಟಿಸಿದರು. ಕರ್ನಾಟಕದ ಸಣ್ಣಪುಟ್ಟ ಅರಸು ಮನೆತನಗಳ ಬಗ್ಗೆ ಸಂಶೋಧನೆ ನಡೆಸಿ ಅದರ ಫಲಿತವಾಗಿ 'ಕರ್ನಾಟಕದ ಅರಸು ಮನೆತನಗಳು' ಎಂಬ ಮಹತ್ವದ ಪುಸ್ತಕವನ್ನು ಪ್ರಕಟಿಸಿದರು. ಆರಂಭ ಕಾಲದಿಂದ ಕ್ರಿ.ಶ. ೧೦ನೇ ಶತಮಾನದವರೆಗಿನ ಇತಿಹಾಸವನ್ನು ನಿರೂಪಿಸುವ 'ಕರ್ನಾಟಕ ಇತಿಹಾಸ ಭಾಗ-೧, 'ಮುಂಬೈ ರಾಜ್ಯದಲ್ಲಿ ಕನ್ನಡ ಸಂಶೋಧನೆ', 'ಭಾರತ ದೇಶದ ಸಂಸ್ಕೃತಿಯ ಪರಿಚಯ' ಮುಂತಾದ ಸಂಶೋಧನಾ ಗ್ರಂಥಗಳನ್ನು ಪ್ರಕಟಿಸಿದ್ದಾರೆ. 'ಕವಿಜಿಹ್ವಾ ಬಂಧನಂ' ಎಂಬ ಪ್ರಾಚೀನ ಸಾಹಿತ್ಯ ಕೃತಿಯನ್ನು ಹಲವು ಹಸ್ತಪ್ರತಿಗಳ ಸಹಾಯದಿಂದ ಸಂಪಾದಿಸಿ ಪ್ರಕಟಿಸಿದ್ದಾರೆ. ಪಂಚಮುಖಿಯವರು ಕರ್ನಾಟಕದ ಹರಿದಾಸ ಸಾಹಿತ್ಯವನ್ನು ಕುರಿತ ಮಹತ್ವದ ಸಂಶೋಧನಾ ಗ್ರಂಥವನ್ನು ಪ್ರಕಟಿಸಿದ್ದಾರೆ. ಕೇಶಿರಾಜನ 'ಶಬ್ದಮಣಿ ದರ್ಪಣ'ದ ಸೂತ್ರಗಳನ್ನು ಕುರಿತು ಭಾಷಾವೈಜ್ಞಾನಿಕ ಅಧ್ಯಯನವನ್ನು ನಡೆಸಿ ಪ್ರಕಟಿಸಿದ್ದಾರೆ. ಹೀಗಾಗಿ ವ್ಯಾಕರಣ ಮತ್ತು ಭಾಷಾಶಾಸ್ತ್ರ ಕ್ಷೇತ್ರಕ್ಕೂ ಪಂಚಮುಖಿಯವರ ಕೊಡುಗೆ ಮಹತ್ವದೆಂದು ಹೇಳಬಹುದು. ಹಲವಾರು ಜನಪದ ಗೀತೆಗಳನ್ನು ಸಹ ಸಂಪಾದಿಸಿ ಪ್ರಕಟಿಸುವುದರ ಮೂಲಕ ಜಾನಪದ ಕ್ಷೇತ್ರಕ್ಕೂ ಶ್ರೇಷ್ಠ ಕೊಡುಗೆಯನ್ನು ನೀಡಿದ್ದಾರೆ.

ಕನ್ನಡ ನಾಡಿನ ರಾಜಕೀಯ ಚರಿತ್ರೆ, ಧಾರ್ಮಿಕ ಚರಿತ್ರೆ, ಸಾಮಾಜಿಕ ಚರಿತ್ರೆ ಹಾಗೂ ಸಾಂಸ್ಕೃತಿಕ ಚರಿತ್ರೆಯನ್ನು ಕುರಿತು ಉಪಲಬ್ಧ ಆಕರಗಳನ್ನು ಸಮರ್ಥವಾಗಿ ಬಳಸಿಕೊಂಡು ವಿಶ್ಲೇಷಿಸಿ ಸಂಶೋಧನಾ ಗ್ರಂಥಗಳನ್ನು ಪ್ರಕಟಿಸಿದ ಶ್ರೇಷ್ಠ ಇತಿಹಾಸಕಾರರೆಂದರೆ ಡಾ.ಬಿ.ಎ.ಸಾಲೆತ್ತೂರ. ವಿಜಯನಗರ ಸಾಮ್ರಾಜ್ಯದ ರಾಜಕೀಯ ಮತ್ತು ಸಾಮಾಜಿಕ ಚರಿತ್ರೆಯ ಬಗ್ಗೆ ಹಲವು ವರ್ಷಗಳ ಕಾಲ ಸಂಶೋಧನೆ ನಡೆಸಿ 'The Social and Political life in the Vijaynagar Empire' ಎಂಬ ಮಹಾಪ್ರಬಂಧವನ್ನು ಲಂಡನ್ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿ ಪಿಎಚ್.ಡಿ ಪದವಿಯನ್ನು ಪಡೆದ ಸಾಲೆತ್ತೂರ ಅವರು ಮಧ್ಯಕಾಲೀನ ಜೈನಧರ್ಮದ ಬಗ್ಗೆಯೂ ಅಪಾರವಾದ ಮಾಹಿತಿಯನ್ನು ಸಂಗ್ರಹಿಸಿ ಸಂಶೋಧನೆ ನಡೆಸಿದುದರ ಫಲವಾಗಿ 'ಮೆಡಿವಲ್ ಜೈನಿಸಂ' ಎಂಬ ಸಂಶೋಧನಾ ಗ್ರಂಥವೊಂದನ್ನು ಪ್ರಕಟಿಸಿದರು. ಈ ಗ್ರಂಥದಲ್ಲಿ ಮಧ್ಯಕಾಲೀನ ಕರ್ನಾಟಕದಲ್ಲಿನ ಜೈನಧರ್ಮದ ಸ್ಥಿತಿಗತಿಗಳ ಬಗ್ಗೆ ಸಮಗ್ರವಾಗಿ ಮಾಹಿತಿಯನ್ನು ನೀಡಲಾಗಿದೆ.

ಉತ್ತರ ಕರ್ನಾಟಕದಲ್ಲಿ ಕ್ಷೇತ್ರ ಪರಿವೀಕ್ಷಣೆಮಾಡಿ ನೂರಾರು ಹೊಸ ಶಾಸನಗಳನ್ನು ಪರಿಶೋಧಿಸಿ ಅವುಗಳನ್ನು 'ಕರ್ನಾಟಕ ಇನ್ಸ್ ಕ್ರಿಪ್‌ಶನ್ಸ್' ಸಂಪುಟ-೪ರಲ್ಲಿ ಪಂಚಮುಖಿಯವರು ಪ್ರಕಟಿಸಿದರು. ಬಾದಾಮಿ ಮತ್ತು ಪಟ್ಟದಕಲ್ಲುಗಳ ದೇವಾಲಯಗಳ ಬಗ್ಗೆ ಸಂಶೋಧನೆ ನಡೆಸಿ 'A Guide to Badami', 'A Guide to the Pattadakal Temple' ಎಂಬ ಗ್ರಂಥಗಳನ್ನು ರಚಿಸಿದ್ದಾರೆ. ಕನ್ನಡ ಸಂಶೋಧನಾ ಸಂಸ್ಥೆಯ ಹಸ್ತಪ್ರತಿ ಭಂಡಾರದಲ್ಲಿನ ತಾಳೆಗರಿಯ ಹಸ್ತಪ್ರತಿಗಳನ್ನು ಕುರಿತು ಅಧ್ಯಯನ ನಡೆಸಿ 'ವಿವರಣಾತ್ಮಕ ಸೂಚಿ' ಸಂಪುಟವನ್ನು ಸಿದ್ಧಪಡಿಸಿ 'Discriptive List of Manuscripts' 'Vol IV' ಪ್ರಕಟಿಸಿದರು.

ಪುರಾತತ್ವ ಶೋಧಗಳು, ಶಾಸನಗಳು, ನಾಣ್ಯಗಳು, ವಿದೇಶಿ ಪ್ರವಾಸಿಗಳ ವರದಿಗಳು, ಸಾಹಿತ್ಯ ಕೃತಿಗಳು ಮುಂತಾದ ಆಕರ ಸಾಮಗ್ರಿಗಳನ್ನು ಯಥೋಚಿತವಾಗಿ ಬಳಸಿಕೊಂಡು ಪಾಶ್ಚಿಮಾತ್ಯ ದೇಶಗಳೊಂದಿಗೆ ಹಾಗೂ ಪೌರಾತ್ಯ ದೇಶಗಳೊಂದಿಗೆ ಭಾರತದ ಸಂಬಂಧವನ್ನು ಕುರಿತು 'India's Relations with the West' ಮತ್ತು 'India's Relations with East' ಎಂಬ ಎರಡು ಸಂಶೋಧನಾ ಗ್ರಂಥಗಳನ್ನು ಸಾಲೆತ್ತೂರರು ಪ್ರಕಟಿಸಿದ್ದಾರೆ. ಈ ಕೃತಿಗಳಲ್ಲಿ ಪ್ರಾಚೀನ ಕಾಲಘಟ್ಟದಲ್ಲಿ ಭಾರತವು ರೋಮನ್ ಚಕ್ರಾಧಿಪತ್ಯದೊಂದಿಗೆ ಮತ್ತು ಚೀನಾ ದೇಶದೊಂದಿಗೆ ಹೊಂದಿದ್ದ ರಾಜಕೀಯ ಮತ್ತು ಸಾಂಸ್ಕೃತಿಕ ಸಂಬಂಧಗಳನ್ನು ಕುರಿತು ತಲಸ್ಪರ್ಶಿಯಾಗಿ ವಿಶ್ಲೇಷಿಸಿದ್ದಾರೆ. ಪ್ರಾಚೀನ ಭಾರತದಲ್ಲಿನ ರಾಜಕೀಯ ವಿಚಾರಧಾರೆಗಳನ್ನು ಕುರಿತು ಸಾಲೆತ್ತೂರರು 'Anciant Indian Thought and Institutions' ಎಂಬ ಉದ್ಗ್ರಂಥದಲ್ಲಿ ಮೊತ್ತಮೊದಲ ಬಾರಿಗೆ ವೈಶಿಷ್ಟ್ಯ ಪೂರ್ಣ ಮಾಹಿತಿಯನ್ನು ಅನಾವರಣಗೊಳಿಸಿದ್ದಾರೆ. ವೇದಗಳು, ಉಪನಿಷತ್ತುಗಳು, ಪುರಾಣಗಳು, ಕೌಟಿಲ್ಯನ ಅರ್ಥಶಾಸ್ತ್ರ, ರಾಮಾಯಣ, ಮಹಾಭಾರತಗಳು ಮುಂತಾದ ಭಾರತದ ಪ್ರಾಚೀನ ವಾಙ್ಮಯ ಸಂಪತ್ತನ್ನು ಮೂಲಆಕರವಾಗಿ ಬಳಸಿಕೊಂಡು ಸಂಶೋಧನೆ ನಡೆಸಿದುದರ ಫಲಿತವಾಗಿ ಈ ಗ್ರಂಥವು ರಚನೆಯಾಗಿದೆ ಎಂದು ಗುರುತಿಸಬಹುದು.

ಕವಿ ಹಾಗೂ ಜಾನಪದ ತಜ್ಞ ಎಂದೇ ಪ್ರಸಿದ್ಧರಾಗಿರುವ ಮಧುರಚೆನ್ನರು ಸಂಶೋಧನಾ ಕ್ಷೇತ್ರಕ್ಕೆ ಮಹತ್ತರವಾದ ಕೊಡುಗೆ ನೀಡಿದ್ದಾರೆ. ಹವ್ಯಾಸಿ ಸಂಶೋಧಕರಾಗಿದ್ದ ಮಧುರಚೆನ್ನರು ಶಾಸನ ಶಾಸ್ತ್ರ, ಲಿಪಿಶಾಸ್ತ್ರ, ಇತಿಹಾಸ, ಜಾನಪದ, ಭಾಷಾವಿಜ್ಞಾನ, ವ್ಯಾಕರಣ, ಮಾನವಶಾಸ್ತ್ರ, ಸಂಸ್ಕೃತ ಸಾಹಿತ್ಯ ಮುಂತಾದ ಹತ್ತು ಹಲವು ವಿಷಯವನ್ನು ಕುರಿತು ಸಂಶೋಧನೆಯನ್ನು ಮಾಡಿರುವುದು ಮಹತ್ವದ ಸಂಗತಿಯಾಗಿದೆ.

ಬಸವಣ್ಣನವರ ಇತಿವೃತ್ತಕ್ಕೆ ಸಂಬಂಧಿಸಿದ ಮಹತ್ವದ ಮಾಹಿತಿಗಳನ್ನು ಹೊಂದಿರುವ ಅರ್ಜುನವಾಡದ ಶಾಸನ, ಅಭಿನವ ಪಂಪ ನಾಗಚಂದ್ರನ ಬಗ್ಗೆ ಮಹತ್ವದ ಮಾಹಿತಿಗಳನ್ನು ಹೊಂದಿರುವ ಬಿಜಾಪುರದ ಶಿಲಾಶಾಸನ, ಕರ್ನಾಟಕದಲ್ಲಿನ ಕಾಳಾಮುಖರ ಬಗ್ಗೆ ಅಪರೂಪದ ಮಾಹಿತಿಯನ್ನು ಹೊಂದಿರುವ ಬಳ್ಳಿಗಾವೆಯ ಶಾಸನಗಳನ್ನು ಕುರಿತಂತೆ ಸಮಗ್ರವಾಗಿ ಮಾಹಿತಿಯನ್ನು ನೀಡುವ ಸಂಶೋಧನಾ ಲೇಖನಗಳನ್ನು ಮಧುರಚೆನ್ನರು ಪ್ರಕಟಿಸಿದ್ದಾರೆ. ಇಮ್ಮಡಿ ಪುಲಿಕೇಶಿಯ ಸೇನಾಧಿಪತಿಯಾಗಿದ್ದ ರವಿಕೀರ್ತಿಯ ಐಹೊಳೆ ಶಾಸನದ ಆಧಾರದಿಂದ ಮಹಾಕವಿ ಕಾಳಿದಾಸನ ಕಾಲವನ್ನು ನಿರ್ಣಯಿಸಿದುದು ಸಂಸ್ಕೃತ ಸಾಹಿತ್ಯ ಚರಿತ್ರೆಯಲ್ಲಿ ಮಹತ್ವದ ಶೋಧವಾಗಿ ಪರಿಗಣಿಸಲ್ಪಟ್ಟಿದೆ.

೧೯೩೪ರಲ್ಲಿ ಮಧುರ ಚೆನ್ನರು ಪ್ರಕಟಿಸಿದ 'ಕನ್ನಡ ಪ್ರಾಚೀನ ಲಿಪಿ ಬೋಧಿನಿ' ಪುಸ್ತಕವು ಕನ್ನಡ ಲಿಪಿ ಶಾಸ್ತ್ರವನ್ನು ಕುರಿತ ಪ್ರಾಚೀನ ಕೃತಿಯಾಗಿದೆ. ಕನ್ನಡ ಲಿಪಿ ವಿಕಾಸದ ಹಂತಗಳನ್ನು ವೈಜ್ಞಾನಿಕವಾಗಿ ವಿವರಿಸುವ ಪುಸ್ತಕವಾಗಿದೆ. ಮಧುರಚೆನ್ನರು ತಮ್ಮ ಗೆಳೆಯರ ಬಳಗದೊಂದಿಗೆ ಕೂಡಿಕೊಂಡು 'ಗರತಿಯ ಹಾಡು', 'ಜೀವನ ಸಂಗೀತ', 'ಮಲ್ಲಿಗೆ ದಂಡೆ' ಮುಂತಾದ ಜನಪದ ಸಾಹಿತ್ಯ ಸಂಗ್ರಹಗಳನ್ನು ಸಂಪಾದಿಸಿ ಪ್ರಕಟಿಸಿದ್ದಾರೆ. ಈ ಕೃತಿಗಳು ಜಾನಪದ ಸಾಹಿತ್ಯದ ಸಂಪಾದನೆಯ ಆರಂಭ ಕಾಲಘಟ್ಟದ ಮಹತ್ವದ ಪ್ರಯತ್ನಗಳೆಂದು ಗುರುತಿಸಲಾಗಿದೆ. ಜಾನಪದ ಸಾಹಿತ್ಯದ ಮಹತ್ವವನ್ನರಿತು ಅವುಗಳನ್ನು ಹೊರಜಗತ್ತಿಗೆ ಪರಿಚಯಿಸುವ ಅಗತ್ಯತೆಯನ್ನರಿತು ಮಧುರಚೆನ್ನರು ಮತ್ತು ಅವರ ಗೆಳೆಯರು ಮಾಡಿದ ಸಾಮೂಹಿಕ ಸಂಶೋಧನೆಯ ಫಲವಾಗಿ ಈ ಕೃತಿಗಳು ರಚನೆಯಾಗಿವೆ. ಮಧುರ ಚೆನ್ನರು

ರಚಿಸಿದ 'ಆರ್ಯ–ದ್ರಾವಿಡ ಭಾಷಾ ಸಮನ್ವಯ' ಎಂಬ ಸಂಶೋಧನಾ ಗ್ರಂಥವು ಭಾಷಾ ವಿಜ್ಞಾನಕ್ಕೆ ಮಧುರ ಚೆನ್ನರ ಮಹತ್ವದ ಕೊಡುಗೆಯಾಗಿದೆ. ದ್ರಾವಿಡರು ಮತ್ತು ಆರ್ಯ ಜನಾಂಗಗಳು, ಅವರ ಭಾಷೆಗಳು ಮುಂತಾದವುಗಳ ಬಗ್ಗೆ ಆ ಕಾಲಘಟ್ಟದಲ್ಲಿ ಉಪಲಬ್ಧವಿದ್ದ ಎಲ್ಲಾ ಆಕರ ಸಾಮಗ್ರಿಗಳನ್ನು ಪರಿಪೂರ್ಣವಾಗಿ ಬಳಸಿಕೊಂಡು ನಡೆಸಿದ ಸಂಶೋಧನೆಯ ಫಲಿತವಾಗಿ ಈ ಗ್ರಂಥವು ರೂಪುಗೊಡಿದೆ.

ಕರ್ನಾಟಕದ ಇತಿಹಾಸ ಮತ್ತು ಸಂಸ್ಕೃತಿಯನ್ನು ಕುರಿತ ಸಂಶೋಧನಾ ಕ್ಷೇತ್ರಕ್ಕೆ ಮಹತ್ವದ ಕೊಡುಗೆಯನ್ನು ನೀಡಿರುವ ಪ್ರಾತಃಸ್ಮರಣೀಯರಲ್ಲಿ ಒಬ್ಬರಾದ ಎಸ್. ಶ್ರೀಕಂಠಶಾಸ್ತ್ರಿಯವರು 'Sources of Karnataka History' ಎಂಬ ಶ್ರೇಷ್ಠ ಸಂಶೋಧನಾ ಗ್ರಂಥವೊಂದನ್ನು ರಚಿಸಿದ್ದಾರೆ. ಕನ್ನಡನಾಡಿನ ಇತಿಹಾಸದ ಪುನಾರಚನೆಯ ಆಕರ ಸಾಮಗ್ರಿಗಳನ್ನು ಕುರಿತು ವಿವರಣಾತ್ಮಕ ಮತ್ತು ವಿಶ್ಲೇಷಣಾತ್ಮಕ ಅಧ್ಯಯನದ ಸ್ವರೂಪದಲ್ಲಿರುವ ಈ ಗ್ರಂಥದಲ್ಲಿ ಕರ್ನಾಟಕದ ಇತಿಹಾಸ ಮತ್ತು ಸಂಸ್ಕೃತಿಗಳ ಅಧ್ಯಯನಕ್ಕೆ ಆಕರಗಳಾದ ಶಾಸನಗಳು, ಸಾಹಿತ್ಯ ಕೃತಿಗಳು, ವಿದೇಶಿ ಪ್ರವಾಸಿಗಳ ವರದಿಗಳು, ಮುಂತಾದವುಗಳನ್ನು ಕುರಿತು ಸಮಗ್ರವಾಗಿ ವಿವೇಚಿಸಲಾಗಿದೆ. ಶ್ರೀಕಂಠಶಾಸ್ತ್ರಿಗಳ 'ಭಾರತೀಯ ಸಂಸ್ಕೃತಿ' ಕೃತಿಯು ಸಿಂಧೂ ಸಂಸ್ಕೃತಿ, ಆರ್ಯ, ದ್ರಾವಿಡ ಸಂಸ್ಕೃತಿ, ಶಿಲಾಯುಗ ಸಂಸ್ಕೃತಿ, ಮುಂತಾದ ಪ್ರಾಚೀನ ಭಾರತದಲ್ಲಿನ ಎಲ್ಲ ಸಂಸ್ಕೃತಿಗಳ ಬಗೆಗಿನ ಮಹತ್ವದ ಸಂಶೋಧನೆಯಾಗಿದೆ. ಶ್ರೀಕಂಠಶಾಸ್ತ್ರಿಗಳ 'ಹೊಯ್ಸಳ ವಾಸ್ತುಶಿಲ್ಪ' ಎಂಬ ಗ್ರಂಥವು ಪ್ರಾಚೀನ ಕರ್ನಾಟಕವನ್ನಾಳಿದ ಹೊಯ್ಸಳರ ಕಾಲಘಟ್ಟದಲ್ಲಿ ರಚನೆಯಾದ ನೂರಾರು ದೇವಾಲಯಗಳ ವಾಸ್ತುಶಿಲ್ಪ ಹಾಗೂ ಮೂರ್ತಿಶಿಲ್ಪವನ್ನು ಕುರಿತು ರಚಿತವಾದ ಮಹತ್ವದ ಕೃತಿಯಾಗಿದೆ. ಹೊಯ್ಸಳರ ಕಾಲದಲ್ಲಿ ಅವರ ಸಾಮ್ರಾಜ್ಯದಾದ್ಯಂತ ನಿರ್ಮಾಣಗೊಂಡ ಏಕಕೂಟಾಚಲ, ದ್ವಿಕೂಟಾಚಲ, ತ್ರಿಕೂಟ, ಚತುಷ್ಕೂಟ, ಪಂಚಕೂಟ, ಸಾಂಧಾರ ಶೈಲಿ, ನಿರಂಧಾರ ಶೈಲಿ, ಸರ್ವತೋಭದ್ರಶೈಲಿ, ಭೂಮಿಜ ಶೈಲಿ. ಹೀಗೆ ಹಲವು ಶೈಲಿಗಳಲ್ಲಿ ನಿರ್ಮಾಣಗೊಂಡ ಹೊಯ್ಸಳ ವಾಸ್ತುಶಿಲ್ಪ ಮತ್ತು ಮೂರ್ತಿಶಿಲ್ಪಗಳಿಗೆ ಸಂಬಂಧಿಸಿದ ಅಪರೂಪದ ಸಂಶೋಧನಾ ಗ್ರಂಥವಾಗಿದೆ. ಈ ಗ್ರಂಥವನ್ನು ರಚಿಸಲು ಶ್ರೀಕಂಠಶಾಸ್ತ್ರಿಯವರು ನಾಡಿನಾದ್ಯಂತ ಸ್ವತಃ ಕ್ಷೇತ್ರಕಾರ್ಯಮಾಡಿ ಮಾಹಿತಿಯನ್ನು ಸಂಗ್ರಹಿಸಿ ವಾಸ್ತುಶಿಲ್ಪಶಾಸ್ತ್ರ ಗ್ರಂಥಗಳು ಹಾಗೂ ಶಾಸನಗಳನ್ನು ಆಕರಗಳಾಗಿ ಬಳಸಿಕೊಂಡು ಈ ಗ್ರಂಥವನ್ನು ರಚಿಸಿದ್ದಾರೆ.

ಸುಮಾರು ಐವತ್ತಕ್ಕಿಂತಲೂ ಹೆಚ್ಚಿನ ಸಂಶೋಧನಾ ಲೇಖನಗಳನ್ನು ರಚಿಸಿರುವ ಶ್ರೀಕಂಠಶಾಸ್ತ್ರಿಯವರು ಚಿತ್ರಕಲೆ, ವಾಸ್ತುಶಿಲ್ಪ, ಮೂರ್ತಿ ಶಿಲ್ಪ, ವಚನ ಸಾಹಿತ್ಯ, ವಚನಕಾರರು, ಇತಿಹಾಸ, ಸಂಸ್ಕೃತಿ ಮುಂತಾದವುಗಳನ್ನು ಕುರಿತು ಹೊಸ ವಿಚಾರಗಳನ್ನು ಈ ಲೇಖನಗಳ ಮೂಲಕ ಅನಾವರಣಗೊಳಿಸಿದ್ದಾರೆ.

ಭಾಷಾವಿಜ್ಞಾನ ಮತ್ತು ನಿಘಂಟುಶಾಸ್ತ್ರಕ್ಕೆ ಶ್ರೇಷ್ಠ ಕೊಡುಗೆಯನ್ನು ನೀಡಿರುವ ಎಂ. ಮರಿಯಪ್ಪಭಟ್ಟರು ಹಲವಾರು ನಿಘಂಟುಗಳನ್ನು ವಿದ್ವತ್ಪೂರ್ಣವಾಗಿ ಸಂಪಾದಿಸಿ ಪ್ರಕಟಿಸಿದ್ದಾರೆ. ಕ್ರಿ.ಶ.೧೮೯೪ರಲ್ಲಿ ಪ್ರಕಟವಾಗಿದ್ದ ಕಿಟೆಲ್ ನಿಘಂಟನ್ನು ಸುಮಾರು ಎಂಟು ವರ್ಷಗಳ ಕಾಲ ಶ್ರಮವಹಿಸಿ, ಪರಿಷ್ಕರಿಸಿ, ವಿಸ್ತರಿಸಿ ಸುಮಾರು ೮೦೦೦೦ ಪದಗಳನ್ನು ಸೇರ್ಪಡೆಗೊಳಿಸಿ ನಾಲ್ಕು ಸಂಪುಟಗಳಲ್ಲಿ ಸುಮಾರು ೨ ಸಾವಿರ ಪುಟಗಳೊಂದಿಗೆ ಮರಿಯಪ್ಪ ಭಟ್ಟರು ಪ್ರಕಟಿಸಿದರು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಳಕೆಯಲ್ಲಿರುವ ತುಳುಭಾಷೆಗೆ ಇಂಗ್ಲೀಷ್ ಭಾಷೆಯಲ್ಲಿ ಅರ್ಥವನ್ನು ನೀಡಿ, ತುಳು–ಇಂಗ್ಲಿಷ್ ನಿಘಂಟನ್ನು ಪ್ರಕಟಿಸಿದರು.

ಈ ನಿಘಂಟಿನಲ್ಲಿ ಸುಮರು ೮೫೦೦ ತುಳುಭಾಷೆಯ ಶಬ್ದಗಳಿಗೆ ಇಂಗ್ಲಿಷ್‌ನಲ್ಲಿ ಅರ್ಥವನ್ನು ನೀಡಲಾಗಿದೆ.

ಮರಿಯಪ್ಪ ಭಟ್ಟರು ತೆಲುಗಿನ ಎನ್.ವೆಂಕಟರಾವ್, ತಮಿಳಿನ ಆರ್.ಪಿ.ಸೇತುಪಿಳ್ಳೈ ಮತ್ತು ಮಲೆಯಾಳಂನ ಎಸ್.ಕೆ.ನಾಯರ್ ಅವರೊಂದಿಗೆ ಸೇರಿ ರಚಿಸಿರುವ 'Dravidian Comparative Vocabulary, Vol-I' ಎಂಬ ದ್ರಾವಿಡ ಭಾಷಾ ತೌಲನಿಕ ಶಬ್ದಕೋಶವು ದ್ರಾವಿಡ ಭಾಷಾವಿಜ್ಞಾನಕ್ಕೆ ಮಹತ್ವದ ಕೊಡುಗೆಯಾಗಿದೆ. ಸುಮಾರು ೭೦೦೦ ಶಬ್ದಗಳಿಗೆ ಕನ್ನಡ, ತಮಿಳು, ತೆಲುಗು, ಮಲೆಯಾಳಂ ಮತ್ತು ತುಳು ಭಾಷೆಗಳಲ್ಲಿ ಜ್ಞಾತಿ ಪದಗಳನ್ನು ಈ ಗ್ರಂಥದಲ್ಲಿ ನೀಡಲಾಗಿದೆ. ಭಾಷಾ ವಿಜ್ಞಾನ ಮತ್ತು ನಿಘಂಟುಶಾಸ್ತ್ರದಲ್ಲಿನ ಮರಿಯಪ್ಪಭಟ್ಟರ ಪಾಂಡಿತ್ಯಕ್ಕೆ ಈ ಗ್ರಂಥವು ನಿದರ್ಶನವಾಗಿದೆ ಎಂದು ಹೇಳಬಹುದು. ಈ ಕ್ಷೇತ್ರದಲ್ಲಿನ ಇವರ ಪಾಂಡಿತ್ಯದ ಫಲವಾಗಿ ಕನ್ನಡ-ಕನ್ನಡ ನಿಘಂಟು, ಇಂಗ್ಲಿಷ್-ಕನ್ನಡ ನಿಘಂಟು, ತುಳು-ಇಂಗ್ಲಿಷ್ ನಿಘಂಟುಗಳ ಸಂಪಾದನಾ ಕಾರ್ಯದಲ್ಲಿಯೂ ಮರಿಯಪ್ಪಭಟ್ಟರು ಸೇವೆ ಸಲ್ಲಿಸಿದ್ದಾರೆ.

ಮರಿಯಪ್ಪಭಟ್ಟರು ರಚಿಸಿರುವ 'ಕನ್ನಡ ಸಂಸ್ಕೃತಿ' ಕೃತಿಯಲ್ಲಿ ಸಮಾಜ-ಸಂಸ್ಕೃತಿ, ಕವಿ-ಕಾವ್ಯ, ಭಾಷೆ-ವ್ಯಾಕರಣ, ಎಂಬ ಮೂರು ಅಧ್ಯಾಯಗಳಲ್ಲಿ ಕನ್ನಡ ಸಂಸ್ಕೃತಿಯನ್ನು ಕುರಿತು ವಿಶ್ಲೇಷಿಸಲಾಗಿದೆ. ಮರಿಯಪ್ಪಭಟ್ಟರು ಗ್ರಂಥ ಸಂಪಾದನಾ ಕ್ಷೇತ್ರದಲ್ಲಿಯೂ ಮಹತ್ವದ ಕೊಡುಗೆಯನ್ನು ನೀಡಿದ್ದಾರೆ. ಗುಣಚಂದ್ರನ 'ಛಂದಸ್ಸಾರ', ವರ್ಧಮಾನಪುರಾಣ, ಪಾರ್ಶ್ವನಾಥ ಪುರಾಣ, ಜಾತಕ ತಿಲಕ, ವಿಷ್ಣುಪುರಾಣ ಮುಂತಾದವುಗಳನ್ನು ಶಾಸ್ತ್ರೀಯವಾಗಿ ಸಂಪಾದಿಸಿದ್ದಾರೆ. ಶಾಸನ ಶಾಸ್ತ್ರ ಕ್ಷೇತ್ರಕ್ಕೂ ಮರಿಯಪ್ಪ ಭಟ್ಟರ ಕೊಡುಗೆ ಮಹತ್ವದ್ದಾಗಿದೆ. ಅವರು ಸಂಪಾದಿಸಿರುವ 'Selected Kannada Inscription' ಕೃತಿಯಲ್ಲಿ ಕನ್ನಡದ ಹಲವಾರು ವೈಶಿಷ್ಟ್ಯಪೂರ್ಣ ಶಾಸನಗಳನ್ನು ವಿಸ್ತಾರವಾದ ಪ್ರಸ್ತಾಪನೆಯೊಂದಿಗೆ ಸಂಪಾದಿಸಿ ಪ್ರಕಟಿಸಿದ್ದಾರೆ. ಹೀಗೆ ಹಲವು ಬೇರೆ-ಬೇರೆ ಕ್ಷೇತ್ರಗಳಿಗೆ ಸಂಬಂಧಿಸಿದ ಆಕರಗಳನ್ನು ಬಳಸಿಕೊಂಡು ಮರಿಯಪ್ಪಭಟ್ಟರು ಕೊಡುಗೆಯನ್ನು ನೀಡಿದ್ದಾರೆಂದು ಹೇಳಬಹುದು.

ಪ್ರಾಚೀನ ಸಾಹಿತ್ಯ ಮತ್ತು ಗ್ರಂಥ ಸಂಪಾದನಾ ಕ್ಷೇತ್ರದಲ್ಲಿ ಮಹತ್ಸಾಧನೆಯನ್ನು ಮಾಡಿರುವ ಡಿ.ಎಲ್.ನರಸಿಂಹಾಚಾರ್ಯರು ಹಲವಾರು ಹಸ್ತಪ್ರತಿಗಳನ್ನು ಪರಿಶೋಧಿಸಿ ಮೊತ್ತಮೊದಲ ಬಾರಿಗೆ ಹಲವಾರು ಅಮೂಲ್ಯ ಸಾಹಿತ್ಯ ಕೃತಿಗಳನ್ನು ವಿಸ್ತಾರವಾದ ಪ್ರಸ್ತಾವನೆಗಳೊಂದಿಗೆ ವಿದ್ವತ್ಪೂರ್ಣವಾಗಿ ಸಂಪಾದಿಸಿ ಕನ್ನಡ ಸಾರಸ್ವತ ಲೋಕಕ್ಕೆ ಕೊಡುಗೆಯಾಗಿ ನೀಡಿದ್ದಾರೆ. ಸಕಲ ವೈದ್ಯ ಸಂಹಿತಾ ಸಾರಾರ್ಣವ, ಕರ್ನಾಟಕ ಮಹಾಭಾರತ ಭೀಷ್ಮಪರ್ವ, ನಾಗಚಂದ್ರನ 'ಪಂಪರಾಮಾಯಣ ಸಂಗ್ರಹ', ರಾಘವಾಂಕ ಕವಿಯ 'ಸಿದ್ಧರಾಮಚಾರಿತ್ರ್ಯ', ಶಿವಕೋಟ್ಯಾಚಾರ್ಯನ 'ವಡ್ಡಾರಾಧನೆ', ಶಾಂತಿನಾಥನ 'ಸುಕುಮಾರ ಚರಿತಂ', ಕೇಶಿರಾಜನ 'ಶಬ್ದಮಣಿದರ್ಪಣ', 'ಗೋವಿನ ಹಾಡು' ಮುಂತಾದ ಕೃತಿಗಳನ್ನು ಮೊತ್ತಮೊದಲ ಬಾರಿಗೆ ಡಿ.ಎಲ್.ನರಸಿಂಹಾಚಾರ್ಯರು ಸಂಪಾದಿಸಿ ಪ್ರಕಟಿಸಿದ್ದಾರೆ.

ಹರಿಹರನ ಜೀವನಚರಿತ್ರೆ ಮತ್ತು ಆತನ ಕೃತಿಗಳನ್ನು ಕುರಿತು ಡಿ.ಎಲ್.ಎನ್ ಅವರು ತಮ್ಮ ಸಂಶೋಧನೆಯ ಫಲವಾಗಿ 'ಹಂಪೆಯ ಹರಿಹರ' ಕೃತಿಯನ್ನು ಪ್ರಕಟಿಸಿದ್ದಾರೆ. ಪ್ರಾಚೀನ ಕನ್ನಡ ಕಾವ್ಯಗಳಲ್ಲಿನ ಕಠಿಣ ಶಬ್ದಗಳ ಅರ್ಥ, ಆ ಶಬ್ದಗಳ ನಿಷ್ಪತ್ತಿಯನ್ನು ಕುರಿತಂತೆ ವಿವೇಚಿಸಿರುವ 'ಶಬ್ದವಿಹಾರ' ಎಂಬ ಕೃತಿಯನ್ನು ರಚಿಸಿದ್ದಾರೆ. ಪಂಪನ 'ವಿಕ್ರಮಾರ್ಜುನ

ವಿಜಯ' ಕೃತಿಗೆ ಬರೆದ ಸವಿಸ್ತಾರ ವ್ಯಾಖ್ಯಾನ ಗ್ರಂಥವೇ 'ಪಂಪಭಾರತ ದೀಪಿಕೆ', ಡಿ.ಎಲ್.ಎನ್. ಅವರ ಹಲವಾರು ಸಂಶೋಧನಾ ಲೇಖನಗಳು ಕನ್ನಡ ಸಾಹಿತ್ಯ ಚರಿತ್ರೆಗೆ ಅನುಪಮ ಕೊಡುಗೆಯಾಗಿವೆ. ಅಗ್ಗಳದೇವ, ಅಭಿನವ ಪಂಪನ ಕಾಲವಿಚಾರ, ಕವಿ ಲಕ್ಷ್ಮೀಶ, ಕೆಲವರು ವಚನಕಾರರು, ಕೆಲವು ರಗಳೆಯ ಕವಿಗಳು, ಚೌಂಡರಸನ ಕಾಲ ವಿಚಾರ, ನಾಲ್ಕನೆಯ ಮಂಗರಸ, ಬಸವಣ್ಣನ ವಚನಗಳ ಕೆಲವು ಪಾಠಗಳು, ವಿಜಯನಗರ ಕಾಲದ ಸಾಹಿತ್ಯ, ಮುಂತಾದ ಸಂಶೋಧನಾ ಲೇಖನಗಳು ಡಿ.ಎಲ್.ಎನ್. ಅವರ ಬಹುಶೃತತ್ವ, ವಿದ್ವತ್ ಹಾಗೂ ಪರಿಶ್ರಮದ ಫಲಿತವಾಗಿ ರೂಪುಗೊಂಡಿವೆ ಎಂದು ಹೇಳಬಹುದು.

ಹೈದರಾಬಾದ್ ಕರ್ನಾಟಕ ಪ್ರದೇಶದ ಶಾಸನಗಳು, ಇತಿಹಾಸ ಸಂಸ್ಕೃತಿಯ ಬಗ್ಗೆ ಮಹತ್ವದ ಸಂಶೋಧನೆ ಮಾಡಿ ಕರ್ನಾಟಕದ ಸಾಂಸ್ಕೃತಿಕ ಚರಿತ್ರೆಯ ಪುನರ್‌ರಚನೆಗೆ ಶ್ರೇಷ್ಠ ಕೊಡುಗೆ ನೀಡಿದ ಸಂಶೋಧಕರೆಂದರೆ ಡಾ.ಪಿ.ಬಿ.ದೇಸಾಯಿ. ಕೊಪ್ಪಳ ಜಿಲ್ಲೆಯ ಯಲಬುರ್ಗ ತಾಲ್ಲೂಕಿನಾದ್ಯಂತ ಸ್ವತಃ ಕ್ಷೇತ್ರಕಾರ್ಯ ಮಾಡಿ ೫೩ ಅಪ್ರಕಟಿತ ಶಾಸನಗಳನ್ನು ಪರಿಶೋಧಿಸಿ, ಅವುಗಳ ಪಾಠಗಳನ್ನು ಸಿದ್ಧಗೊಳಿಸಿ, ಆ ಎಲ್ಲ ಶಾಸನಗಳ ಐತಿಹಾಸಿಕ, ಸಾಂಸ್ಕೃತಿಕ ಮಹತ್ವವನ್ನು ಕುರಿತು ವಿಸ್ತಾರವಾದ ಪೀಠಿಕೆಯೊಡನೆ 'ಕೊಪ್ಪಳ ಜಿಲ್ಲೆಯ ಶಾಸನಗಳು' ಎಂಬ ಶಾಸನ ಸಂಪುಟವೊಂದನ್ನು ಡಾ.ಪಿ.ಬಿ.ದೇಸಾಯಿಯವರು ೧೯೫೭ರಲ್ಲಿ ಪ್ರಕಟಿಸಿದರು. ತದನಂತರ ಕೊಪ್ಪಳ, ಮಾನ್ವಿ, ಲಿಂಗಸುಗೂರು ಮತ್ತು ಯಲಬುರ್ಗಾ ತಾಲ್ಲೂಕುಗಳಲ್ಲಿ ಕ್ಷೇತ್ರ ಪರಿವೀಕ್ಷಣೆ ಮಾಡಿ ಹಲವಾರು ಹೊಸ ಶಾಸನಗಳನ್ನು ಪತ್ತೆ ಹಚ್ಚಿ ಆ ಶಾಸನಗಳ ಪಾಠಗಳನ್ನು ವಿವರವಾದ ಪ್ರಸ್ತಾವನೆಯೊಡನೆ 'A Corpus of Inscriptions in the Kannada Districts of Hyderabad State' ಎಂಬ ಇಂಗ್ಲೀಷ್ ಗ್ರಂಥವೊಂದನ್ನು ಪ್ರಕಟಿಸಿದರು.

ಉತ್ತರ ಕರ್ನಾಟಕ ಪ್ರದೇಶಕ್ಕೆ ಹೊಂದಿಕೊಂಡಂತಿರುವ ಆಂಧ್ರ ಪ್ರದೇಶದ ಭಾಗಗಳಲ್ಲಿ ಕನ್ನಡ ಶಾಸನಗಳು ಹೇರಳವಾಗಿ ದೊರೆಯುವುದನ್ನು ಗುರುತಿಸಿದ ದೇಸಾಯಿಯವರು ಆಂಧ್ರಪ್ರದೇಶದಾದ್ಯಂತ ಕ್ಷೇತ್ರಕಾರ್ಯ ಮಾಡಿ ಅಪ್ರಕಟಿತ ಕನ್ನಡ ಶಾಸನಗಳನ್ನು ಗುರುತಿಸಿ ಅವುಗಳ ಪಡಿಯಚ್ಚುಗಳನ್ನು ತೆಗೆದು, ಶಾಸನ ಪಾಠಗಳನ್ನು ಸಿದ್ಧಗೊಳಿಸಿ, ಅವುಗಳನ್ನು 'Kannada Inscriptions of Andhra Pradesh' ಎಂಬ ಹೆಸರಿನಲ್ಲಿ ಪ್ರಕಟಿಸಿದರು. ಆಂಧ್ರ ಪ್ರದೇಶದಲ್ಲಿನ ಕೆಲವು ಆಯ್ದ ಶಿಲಾಶಾಸನಗಳನ್ನು ಕುರಿತು ಪ್ರತ್ಯೇಕವಾಗಿ 'Select stone Inscriptions of Andhra Pradesh' ಎಂಬ ಮತ್ತೊಂದು ಪುಸ್ತಕವನ್ನು ಸಹ ಪ್ರಕಟಿಸಿದರು. ಪಿ.ಬಿ.ದೇಸಾಯಿಯವರು ತಮ್ಮ ಹಲವು ವರ್ಷಗಳ ಸಂಶೋಧನೆಯ ಫಲವಾಗಿ 'South Indian Inscriptions Vol-XV', 'Bambay Karnataka Inscriptions' ಎಂಬ ಶಾಸನ ಸಂಪುಟಗಳನ್ನು ಪ್ರಕಟಿಸಿದರು. ಈ ಸಂಪುಟಗಳಲ್ಲಿ ೨೦೦ಕ್ಕಿಂತಲೂ ಹೆಚ್ಚಿನ ಅಪ್ರಕಟಿತ ಶಾಸನಗಳನ್ನು ಮೊತ್ತಮೊದಲ ಬಾರಿಗೆ ಪ್ರಕಟಿಸಿದುದು ದೇಸಾಯಿಯವರ ಮಹತ್ಸಾಧನೆಯೆಂದು ಹೇಳಬಹುದು.

ವಿಜಯನಗರ ಸಾಮ್ರಾಜ್ಯವನ್ನು ಕುರಿತಂತೆ ದೇಸಾಯಿಯವರ ಸಂಶೋಧನೆಯ ಫಲಿತವಾಗಿ 'ವಿಜಯನಗರ ಸಾಮ್ರಾಜ್ಯ' ಎಂಬ ಗ್ರಂಥವು ಪ್ರಕಟವಾಗಿದೆ. ಈ ಸಂಶೋಧನಾ ಗ್ರಂಥದಲ್ಲಿ ವಿಜಯನಗರ ಸಾಮ್ರಾಜ್ಯದ ಸ್ಥಾಪನೆ, ಆ ಸಾಮ್ರಾಜ್ಯವನ್ನು ಆಳಿದ ಸಂಗಮ, ಸಾಳ್ವ, ತುಳುವ, ಅರವೀಡು ಮನೆತನದ ಎಲ್ಲಾ ಅರಸರ ರಾಜಕೀಯ ಮತ್ತು ಸಾಂಸ್ಕೃತಿಕ

ಸಾಧನೆಗಳು, ವಿಜಯನಗರ ಸಾಮ್ರಾಜ್ಯದ ಅವನತಿ, ವಿಜಯನಗರ ವಾಸ್ತುಶಿಲ್ಪ, ವಿಜಯನಗರ ಅರಸರ ಕಾಲದ ಸಾಹಿತ್ಯಕ ಕೊಡುಗೆಗಳು ಮುಂತಾದವುಗಳ ಬಗ್ಗೆ ಸಮಗ್ರವಾಗಿ ವಿಶ್ಲೇಷಿಸಲಾಗಿದೆ. ವಿಜಯನಗರ ಸಾಮ್ರಾಜ್ಯದ ಬಗ್ಗೆ ಅದುವರೆಗಿನ ಎಲ್ಲಾ ಸಂಶೋಧನೆಗಳನ್ನು ದೇಸಾಯಿಯವರು ಆಕರವಾಗಿ ಬಳಸಿಕೊಂಡು ಸಮಗ್ರವಾಗಿ ವಿಶ್ಲೇಷಿಸಿದ್ದಾರೆ.

ಪಿ.ಬಿ.ದೇಸಾಯಿಯವರ ಮತ್ತೊಂದು ಸಂಶೋಧನಾ ಗ್ರಂಥವೆಂದರೆ 'Jainism in South India and some Jaina Epigraphs' ಈ ಗ್ರಂಥದಲ್ಲಿ ಕರ್ನಾಟಕ, ಆಂಧ್ರಪ್ರದೇಶ ಮತ್ತು ತಮಿಳು ನಾಡುಗಳಲ್ಲಿನ ಜೈನಧರ್ಮದ ಬಗ್ಗೆ ಸಮಗ್ರವಾಗಿ ವಿಶ್ಲೇಷಿಸಲಾಗಿದೆ. ದಕ್ಷಿಣ ಭಾರತಕ್ಕೆ ಜೈನಧರ್ಮದ ಆಗಮನ, ಉನ್ನತಿ, ಅವನತಿ, ದಕ್ಷಿಣ ಭಾರತದ ರಾಜವಂಶಗಳು ಜೈನಧರ್ಮಕ್ಕೆ ನೀಡಿದ ಪ್ರೇರಣೆ ಮತ್ತು ಪ್ರೋತ್ಸಾಹಗಳು, ಜೈನಧರ್ಮದ ಅವನತಿಗೆ ಕಾರಣಕರ್ತವಾದ ಅಂಶಗಳು ಮುಂತಾದವುಗಳ ಬಗ್ಗೆ ಉಪಲಬ್ಧವಿರುವ ಶಾಸನಗಳು ಮತ್ತು ಸಾಹಿತ್ಯ ಗ್ರಂಥಗಳ ಆಧಾರದಿಂದ ದೇಸಾಯಿಯವರು ತಲಸ್ಪರ್ಶಿಯಾಗಿ ವಿಶ್ಲೇಷಿಸಿದ್ದಾರೆ. ಈ ಗ್ರಂಥದಲ್ಲಿ ಜೈನಧರ್ಮಕ್ಕೆ ಸಂಬಂಧಿಸಿದ ೫೩ ಮಹತ್ವದ ಶಾಸನಗಳನ್ನು ಅವುಗಳ ಪಠ್ಯಗಳೊಂದಿಗೆ ವಿಶ್ಲೇಷಿಸಿರುವುದು ಮಹತ್ವದ ಅಂಶವಾಗಿದೆ. ದೇಸಾಯಿಯವರು ರಚಿಸಿರುವ ಮತ್ತೊಂದು ಮಹತ್ವದ ಗ್ರಂಥವೆಂದರೆ 'Basaveshwara and His Times'. ಈ ಗ್ರಂಥದಲ್ಲಿ ಕನ್ನಡ ನಾಡಿನ ಶ್ರೇಷ್ಠ ಸಮಾಜ ಸುಧಾರಕರಾದ ಬಸವಣ್ಣ ಮತ್ತು ಆತನ ಸಮಕಾಲೀನ ಕಾಲಘಟ್ಟದ ಐತಿಹಾಸಿಕ, ಸಾಮಾಜಿಕ, ಧಾರ್ಮಿಕ ಪರಿಸ್ಥಿತಿಯ ಬಗ್ಗೆ ಸಮಗ್ರವಾಗಿ ವಿಶ್ಲೇಷಿಸಲಾಗಿದೆ. ಬಸವಣ್ಣನ ಬಗ್ಗೆ ಅಧ್ಯಯನ ಮಾಡಬಯಸುವವರಿಗೆ ಇಂದಿಗೂ ಇದೊಂದು ಅತ್ಯಂತ ಪ್ರಮುಖ ಆಕರ ಗ್ರಂಥವಾಗಿದೆ.

ದೇಸಾಯಿಯವರ ತಮ್ಮ ಜೀವಮಾನವನ್ನೆಲ್ಲಾ ಕನ್ನಡ ನಾಡು–ನುಡಿ, ಇತಿಹಾಸ, ಸಂಸ್ಕೃತಿಯನ್ನು ಕುರಿತ ಅಧ್ಯಯನ ಮತ್ತು ಸಂಶೋಧನೆಗೆ ಮೀಸಲಾಗಿಟ್ಟಿದ್ದರು. ತತ್ಫಲವಾಗಿ ಕನ್ನಡದಲ್ಲಿ ಸುಮಾರು ೨೨೦, ಇಂಗ್ಲೀಷಿನಲ್ಲಿ ಸುಮಾರು ನೂರಕ್ಕೂ ಹೆಚ್ಚಿನ ಸಂಖ್ಯೆಯ ಸಂಶೋಧನಾ ಲೇಖನಗಳನ್ನು ರಚಿಸಿದ್ದಾರೆ. ಈ ಸಂಶೋಧನಾ ಲೇಖನಗಳ ರಚನೆಗೆ ಶಾಸನಗಳು ಸಾಹಿತ್ಯ ಕೃತಿಗಳು, ವಿದೇಶಿ ಪ್ರವಾಸಿಗರ ಬರಹಗಳು, ಸ್ವಂತ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಶೋಧಿಸಿದ ವಿಚಾರಗಳು, ಈ ಹಿಂದಿನ ಇತಿಹಸಕಾರರ ಸಂಶೋಧನಾ ಗ್ರಂಥಗಳು, ಮುಂತಾದ ಎಲ್ಲ ಆಕರ ಸಾಮಗ್ರಿಗಳನ್ನು ಯಥೋಚಿತವಾಗಿ ತಮ್ಮ ಸಂಶೋಧನೆಗೆ ಆಕರವಾಗಿ ಬಳಸಿಕೊಂಡು ನಡೆಸಿದ ಅಧ್ಯಯನದ ಫಲಿತವಾಗಿ ರೂಪುಗೊಂಡಿವೆ ಎನ್ನಬಹುದು.

ಕರ್ನಾಟಕದ ಇತಿಹಾಸ ಸಂಸ್ಕೃತಿಗಳನ್ನು ಕುರಿತಂತೆ ಮಹತ್ವದ ಸಂಶೋಧನೆ ಮಾಡಿದ ವಿದ್ವಾಂಸರಾದ ಜಿ.ಎಸ್. ಗಾಯಿಯವರು ಕರ್ನಾಟಕದ ಶಾಸನಗಳನ್ನು ತಮ್ಮ ಸಂಶೋಧನೆಗೆ ಆಕರವಾಗಿ ಬಳಸಿದ ಶಾಸನ ತಜ್ಞರೆಂದು ಗುರುತಿಸಬಹುದು. ಹಳಗನ್ನಡ ಮತ್ತು ಪೂರ್ವದ ಹಳಗನ್ನಡ ಭಾಷೆಯ ಶಾಸನಗಳನ್ನು ಕುರಿತು ವಿಸ್ತೃತವಾಗಿ ಸಂಶೋಧನೆ ನಡೆಸಿ, ಆ ಶಾಸನಗಳ ವ್ಯಾಕರಣವನ್ನು ಕುರಿತು ಶಾಸ್ತ್ರೀಯವಾಗಿ ವ್ಯಾಖ್ಯಾನಿಸಿದ ಕೀರ್ತಿ ಜಿ.ಎಸ್.ಗಾಯಿಯವರದ್ದು. ಗಾಯಿಯವರು ತಮ್ಮ ಪಿಎಚ್.ಡಿ. ಪದವಿಗೋಸ್ಕರ ಕ್ರಿ.ಶ.೮,೯,೧೦ನೇ ಶತಮಾನದ ಕನ್ನಡ ಶಾಸನಗಳನ್ನು ಕುರಿತು ನಡೆಸಿದ ಸಂಶೋಧನೆಯ ಫಲವಾಗಿ ಅವರಿಗೆ ಪಿಎಚ್.ಡಿ. ಪದವಿ ದೊರೆಯುವುದರೊಂದಿಗೆ ಅವರು ರಚಿಸಿದ

ಮಹಾಪ್ರಬಂಧದ ಪರಿಷ್ಕೃತ ರೂಪವು 'Historical Grammer of old Kannada Inscriptions' ಎಂಬ ಹೆಸರಿನಲ್ಲಿ ಪ್ರಕಟವಾಗಿದೆ.

ಜಿ.ಎಸ್.ಗಾಯಿಯವರು ಹಲವು ಸಂಶೋಧನಾ ಗ್ರಂಥಗಳನ್ನು ಪ್ರಕಟಿಸಿದ್ದಾರೆ. ಅವುಗಳಲ್ಲಿ 'Some Selected Inscriptions', 'Inscriptions of the Early Gupta Kings', 'Indian History', 'Epigraphy and Culture' ಕೃತಿಗಳು ಮುಖ್ಯವಾದವು. ಗಾಯಿಯವರು 'South Indian Inscriptions' ೨೦ನೇ ಸಂಪುಟವನ್ನು ಸಂಪಾದಿಸಿ ಪ್ರಕಟಿಸಿದ್ದಾರೆ. ಗಾಯಿಯವರು ಕನ್ನಡ ನಾಡು-ನುಡಿ, ಇತಿಹಾಸ, ಸಂಸ್ಕೃತಿಗೆ ಸಂಬಂಧಿಸಿದಂತೆ ೬೦ ಸಂಶೋಧನಾ ಲೇಖನಗಳನ್ನು ಪ್ರಕಟಿಸಿದ್ದಾರೆ. ಕರ್ನಾಟಕದ ಶಾಸನಗಳನ್ನು ಕುರಿತಂತೆ ಗಾಯಿಯವರು ತಮ್ಮ ಸಂಶೋಧನೆಯ ಫಲಿತವಾಗಿ 'Epigrapia Indica'ದಲ್ಲಿ ೪೨ ಸಂಪ್ರಬಂಧಗಳನ್ನು ಇಂಗ್ಲೀಷಿನಲ್ಲಿ ಪ್ರಕಟಿಸಿದ್ದಾರೆ.

ಕನ್ನಡ ನಾಡಿನ ತಾಳೆಗರಿಗಳಲ್ಲಿ ನಿಕ್ಷಿಪ್ತವಾಗಿದ್ದ ಸಾಹಿತ್ಯ ಕೃತಿಗಳನ್ನು ಕುರಿತು ವಿಶೇಷವಾಗಿ ಸಂಶೋಧನೆ ಮಾಡಿದ ವಿದ್ವಾಂಸರೆಂದರೆ ಡಾ.ಎಚ್.ದೇವೀರಪ್ಪನವರು. ಅವರ ಸಂಶೋಧನಾ ಪಥವು ಆರಂಭವಾದುದು ರಸಋಷಿ ಕುವೆಂಪುರವರ ಮಾರ್ಗದರ್ಶನದಲ್ಲಿ ಎಂಬುದು ಗಮನಾರ್ಹ. ದೇವೀರಪ್ಪನವರು ಕುವೆಂಪುರವರ ಮಾರ್ಗದರ್ಶನದಲ್ಲಿ 'ಭಕ್ತಿ ತತ್ತ್ವ ಮತ್ತು ಕನ್ನಡ ಸಾಹಿತ್ಯದಲ್ಲಿ ಅದರ ಮೈದೋರಿಕೆ' ಎಂಬ ಸಂಶೋಧನೆಯೊಂದಿಗೆ ಸಂಶೋಧನಾ ಕ್ಷೇತ್ರದಲ್ಲಿ ಸಾಧನೆಯ ಹೆಜ್ಜೆಯನ್ನಿಟ್ಟರು. ತದನಂತರ ಗ್ರಂಥ ಸಂಪಾದನ ಕ್ಷೇತ್ರದಲ್ಲಿ ಅತ್ಯಂತ ಹೆಚ್ಚಿನ ಆಸಕ್ತಿಯಿಂದ ಸಂಶೋಧನೆಗೆ ತೊಡಗಿಸಿಕೊಂಡರು. ತತ್ಫಲವಾಗಿ ಹರಿಹರನ 'ಗಿರಿಜಾಕಲ್ಯಾಣ ಮಹಾಪ್ರಬಂಧಂ', ರನ್ನನ 'ಅಜಿತತೀರ್ಥಂಕರ ಪುರಾಣತಿಲಕಂ', ಜನ್ನನ 'ಅನಂತನಾಥ ಪುರಾಣಂ', ಸಿಂಗಿರಾಜನ 'ಸಿಂಗಿರಾಜಪುರಾಣ', ಲಕ್ಕಣ ದಂಡೇಶನ 'ಶಿವತತ್ವ ಚಿಂತಾಮಣಿ', ಉಡುತಡಿಯ ಮಹಾದೇವಿಯಕ್ಕನ ರಗಳೆ, ಜೇಡರ ದಾಸಿಮಯ್ಯನ ವಚನಗಳು, ಮುಂತಾದ ಸಾಹಿತ್ಯ ಕೃತಿಗಳನ್ನು ಪರಿಷ್ಕರಿಸಿ ಪ್ರಕಟಿಸಿದರು. ಚನ್ನವೀರ ಜಂಗಮದೇವನ ಷಟ್ಸ್ಥಲ ವಲ್ಲಭ, ಹರಿಹರನ 'ಶರಣಚರಿತ ಮಾನಸ' ಕೃತಿಗಳನ್ನು ಸಂಪಾದಿಸಿ ಪ್ರಕಟಿಸಿದರು. 'ಶರಣಚರಿತ ಮಾನಸ' ಗ್ರಂಥದಲ್ಲಿ ಹತ್ತು ಹಸ್ತಪ್ರತಿಗಳ ಆಧಾರದಿಂದ ಹರಿಹರನು ರಚಿಸಿರುವ ೨೪ ಪುರಾತನರ ರಗಳೆಗಳನ್ನು ಶಾಸ್ತ್ರೀಯವಾಗಿ ಪರಿಷ್ಕರಿಸಿ ಸಂಪಾದಿಸಲಾಗಿದೆ. ಈ ಗ್ರಂಥದಲ್ಲಿನ ಸುಮಾರು ೨೧೮ ಪುಟಗಳ ಸುದೀರ್ಘ ಪ್ರಸ್ತಾವನೆಯಲ್ಲಿ ಹರಿಹರನ ಇತಿವೃತ್ತ, ಆತನ ರಗಳೆಗಳ ಪ್ರಮುಖ ಲಕ್ಷಣಗಳು, ಕಥಾವಸ್ತು, ಶೈಲಿ, ಮತ್ತಿತರ ವಿಷಯಗಳನ್ನು ಕುರಿತು ಸಮಗ್ರವಾಗಿ ವಿಶ್ಲೇಷಿಸಿದ್ದಾರೆ.

ದೇವೀರಪ್ಪನವರು ರಚಿಸಿರುವ ಸುಮಾರು ೫೦ಕ್ಕೂ ಹೆಚ್ಚಿನ ಸಂಖ್ಯೆಯ ಸಂಶೋಧನಾ ಲೇಖನಗಳು 'ಸಂಶೋಧನಾ ಸಂಪುಟ' ಎಂಬ ಗ್ರಂಥದಲ್ಲಿ ಪ್ರಕಟವಾಗಿವೆ. ಅವುಗಳಲ್ಲಿ ಕವಿಚರಿತೆಯನ್ನು ಕುರಿತ ೯ ಲೇಖನಗಳು, ಕವಿಕಾವ್ಯ ಕುರಿತ ೧೦ ಲೇಖನಗಳು, ವಚನ ಸಂಪಾದನೆಯನ್ನು ಕುರಿತ ೬ ಲೇಖನಗಳು, ಛಂದಸ್ಸನ್ನು ಕುರಿತ ೩ ಲೇಖನಗಳು, ಶಬ್ದಾರ್ಥ ವಿಶ್ಲೇಷಣೆಯನ್ನು ಕುರಿತ ೮ ಲೇಖನಗಳು. ಇತರ ಸಂಕೀರ್ಣ ವಿಷಯವನ್ನು ಕುರಿತ ೧೫ ಸಂಪ್ರಬಂಧಗಳಿವೆ. ಈ ಸಂಪುಟದಲ್ಲಿನ ಲೇಖನಗಳನ್ನು ಗಮನಿಸಿದರೆ ದೇವೀರಪ್ಪನವರ ವಿದ್ವತ್ತು ಬಹುಶ್ರುತತ್ವ, ಸಂಶೋಧನೆಗೆ ಆಕರಗಳನ್ನು ಬಳಸಿಕೊಂಡ ಬಗೆ ಹಾಗೂ ಅವರ ಸಂಶೋಧನೆ ನಿಷ್ಠೆಯ ಅರಿವಿಗೆ ಬರುತ್ತದೆ. ಹಸ್ತಪ್ರತಿ ಭಂಡಾರಗಳಲ್ಲಿ ಅಜ್ಞಾತವಾಗಿ

ಹುದುಗಿದ್ದ ಜ್ಞಾನ ಸಂಪತ್ತನ್ನು ಅನಾವರಣಗೊಳಿಸಿ ಸಾಹಿತ್ಯ ವಲಯಕ್ಕೆ ಕೊಡುಗೆಯಾಗಿ ನೀಡಿದ ದೇವೀರಪ್ಪನವರ ಕೊಡುಗೆ ಮಹತ್ವದ್ದೆಂದು ಗುರುತಿಸಬಹುದು.

ಗ್ರಂಥ ಸಂಪಾದನಾ ಕ್ಷೇತ್ರದಲ್ಲಿಯೇ ಮಹತ್ವದ ಕೊಡುಗೆ ನೀಡಿದ ಮತ್ತೊಬ್ಬ ಶ್ರೇಷ್ಠ ಸಂಶೋಧಕರಾದ ಡಾ.ಎಲ್.ಬಸವರಾಜ ಅವರು ಪ್ರಕಟಿಸಿದ 'ಅಲ್ಲಮನ ವಚನಚಂದ್ರಿಕೆ' ಗ್ರಂಥವನ್ನು ಸಂಪಾದಿಸಲು ೧೨ ಹಸ್ತಪ್ರತಿಗಳು, ಹಳಕಟ್ಟಿಯವರು ಸಂಪಾದಿಸಿದ 'ಪ್ರಭು ದೇವರ ವಚನಗಳು' ಎಂಬ ಪುಸ್ತಕ, 'ವಚನಸಾರ' ಮತ್ತು 'ಶೂನ್ಯ ಸಂಪಾದನೆ' ಮತ್ತಿತರ ಕೃತಿಗಳನ್ನು ಆಕರವಾಗಿ ಬಳಸಿಕೊಂಡು ಸಂಪಾದಿಸಿದ್ದಾರೆ. ಈ ಸಂಪುಟದಲ್ಲಿ ಅಲ್ಲಮನ ೧೨೯೪ ವಚನಗಳಿವೆ. ಬಸವರಾಜರು ಸಂಪಾದಿಸಿದ 'ಶಿವದಾಸ ಗೀತಾಂಜಲಿ' ಕೃತಿಯಲ್ಲಿ ಬಸವಾದಿ ಶಿವಶರಣರ ೧೮೮ ಹಾಡುಗಳಿವೆ. ಈ ಸಂಪುಟವನ್ನು ಸಂಪಾದಿಸಲು ಬಸವರಾಜ ಅವರು ಮಹಾಲಿಂಗನ ಏಕೋತ್ತರ ಶತಸ್ಥಳದ ೨ ಹಸ್ತಪ್ರತಿಗಳು, ಜಕ್ಕಣನ ಏಕೋತ್ತರ ಶತಸ್ಥಳದ ೭ ಹಸ್ತಪ್ರತಿಗಳು, ವಚನಕಾರರ ವಚನಗಳು ಮತ್ತು ಹಾಡುಗಳು ಹಾಗೂ ಶಿವಯೋಗ ಪ್ರದೀಪಿಕೆಯ ಹಸ್ತಪ್ರತಿಗಳನ್ನು ಆಕರಗಳಾಗಿ ಬಳಸಿಕೊಂಡಿದ್ದಾರೆ.

ಈ ಗ್ರಂಥದಲ್ಲಿನ ಸುಮಾರು ೧೪೦ ಪುಟಗಳ ವಿಸ್ತಾರವಾದ ಪ್ರಸ್ತಾವನೆಯಲ್ಲಿ ಕರ್ನಾಟಕ ಸಂಗೀತ ಕ್ಷೇತ್ರಕ್ಕೆ ಶಿವಶರಣರು ನೀಡಿದ ಕೊಡುಗೆಯನ್ನು ಕುರಿತು ಮಹತ್ವದ ಮಾಹಿತಿಯನ್ನು ನೀಡಿದ್ದಾರೆ. ಕರ್ನಾಟಕ ಸಂಗೀತಕ್ಕೆ ಶಿವಶರಣರೇ ಮೊದಲ ವಾಗ್ಗೇಯಕಾರರು, ಅವರ ಹಾಡುಗಳು ರಾಗ, ತಾಳ, ಲಯ ಬದ್ಧವಾಗಿದ್ದು, ಹಾಡುವಂತಹ ಕೀರ್ತನ ಸಾಹಿತ್ಯ ಎಂಬುದನ್ನು ಆಧಾರ ಸಹಿತ ನಿರೂಪಿಸಿದ್ದಾರೆ. ಹಾಗಾಗಿ ಇದು ಶರಣ ಸಾಹಿತ್ಯವನ್ನು ಕುರಿತ ಹಾಗೂ ಸಂಗೀತಶಾಸ್ತ್ರವನ್ನು ಕುರಿತ ಮಹತ್ವದ ಸಂಶೋಧನಾ ಗ್ರಂಥವಾಗಿದೆ. ಈ ಕೃತಿಯನ್ನು ಕುರಿತು ಡಿ.ಎಲ್.ನರಸಿಂಹಾಚಾರ್ಯರೇ ಇದೊಂದು ಶ್ರೇಷ್ಠ ಸಂಪಾದನಾ ಕೃತಿಯೆಂದು ಗುರುತಿಸಿರುವುದು ಮಹತ್ವದ ಸಂಗತಿಯಾಗಿದೆ.

ತದನಂತರದ ಕಾಲಘಟ್ಟದಲ್ಲಿ ಬಸವರಾಜು ಅವರು ಬಸವಣ್ಣನ ವಚನಗಳು, ಕೇಶಿರಾಜನ ಶಬ್ದಮಣಿದರ್ಪಣ, ಮಹಾದೇವನ ಮಹಾಲಿಂಗೇಂದ್ರ ವಿಜಯ, ಪಂಪನ ಆದಿಪುರಾಣ, ನಿಜಗುಣ ಶಿವಯೋಗಿಯ ತತ್ವದರ್ಶನ, ಶಿವಗಣ ಪ್ರಸಾದಿ ಮಹಾದೇವಯ್ಯನ ಶೂನ್ಯ ಸಂಪಾದನೆ, ಮುಂತಾದ ಗ್ರಂಥಗಳನ್ನು ಹಲವು ಹಸ್ತಪ್ರತಿಗಳನ್ನು ಆಕರಗಳಾಗಿ ಬಳಸಿಕೊಂಡು ಶಾಸ್ತ್ರೀಯವಾಗಿ ಸಂಪಾದಿಸಿ ಪ್ರಕಟಿಸಿದ್ದಾರೆ. ಎಲ್.ಬಸವರಾಜು ಅವರಿಗೆ ಉಪಲಬ್ಧವಾಗಿದ್ದ ಹಸ್ತಪ್ರತಿಯೊಂದರಲ್ಲಿ ಸರ್ವಜ್ಞನ ವಚನಗಳ ಅಂಕಿತವು 'ಪರಮಾರ್ಥ' ಎಂದು ಇದ್ದುದರಿಂದ 'ಪರಮಾರ್ಥ' ಎಂಬ ಹೆಸರಿನಲ್ಲಿ ಸರ್ವಜ್ಞನ ವಚನಗಳನ್ನು ಸಂಪಾದಿಸಿ ಪ್ರಕಟಿಸಿದರು. ತದನಂತರದ ಕಾಲಘಟ್ಟದಲ್ಲಿ ದೊರೆತ ಹಸ್ತಪ್ರತಿಗಳಲ್ಲಿ ಸರ್ವಜ್ಞ ಎಂಬ ಅಂಕಿತವೇ ಇರುವುದನ್ನು ಗಮನಿಸಿ 'ಸರ್ವಜ್ಞನ ವಚನಗಳು' ಎಂಬ ಹೆಸರಿನಲ್ಲಿಯೇ ಮತ್ತೊಂದು ಸಂಪುಟವನ್ನು ಸಂಪಾದಿಸಿ ಪ್ರಕಟಿಸಿದರು. ಈ ಸಂಪುಟದಲ್ಲಿ ಸರ್ವಜ್ಞನ ಅಂಕಿತದಲ್ಲಿರುವ ೧೬೫೨ ವಚನಗಳನ್ನು ಸಂಕಲಿಸಲಾಗಿದೆ. ಇವುಗಳಲ್ಲಿ ೯೯೦ ವಚನಗಳು ಮಾತ್ರ ಸರ್ವಜ್ಞನಿಂದ ರಚನೆಗೊಂಡಿವೆ. ಉಳಿದ ೬೬೨ ವಚನಗಳು ಸರ್ವಜ್ಞನ ವಚನಗಳ ರೀತಿಯಲ್ಲಿಯೇ ಬೇರೆ ಯಾರೋ ಅಜ್ಞಾತರಿಂದ ರಚಿತವಾದವುಗಳೆಂದು ಆಂತರಿಕ ಮತ್ತು ಬಾಹ್ಯ ಆಧಾರಗಳಿಂದ ಬಸವರಾಜ ಅವರು ನಿರೂಪಿಸಿದ್ದಾರೆ.

ಕನ್ನಡದ ಜಾನಪದ ಗೀತೆಗಳನ್ನು ಕುರಿತಂತೆ ಸಂಶೋಧನೆ ನಡೆಸಿ ಮಹಾಪ್ರಬಂಧವನ್ನು ರಚಿಸಿ ಪಿಎಚ್.ಡಿ. ಪದವಿ ಪಡೆದ ಮೊತ್ತ ಮೊದಲ ಸಂಶೋಧಕರೆಂದು ಕೀರ್ತಿಗೆ

ಭಾಜನರಾಗಿರುವ ಬಿ.ಎಸ್.ಗದ್ದಗೀಮಠರ ಸಂಶೋಧನಾ ಕೊಡುಗೆ ಅನನ್ಯವಾದುದು. ಜಾನಪದ ಸಾಹಿತ್ಯದ ಬಗ್ಗೆ ಅಪಾರವಾದ ಆಸಕ್ತಿಯನ್ನು ಹೊಂದಿದ್ದ ಗದ್ದಗೀಮಠ ಅವರು ಉತ್ತರ ಕರ್ನಾಟಕದ ಮರಿಗುದ್ದಿ, ನಾಗರಾಳ, ಹಲಗಲಿ, ಬಾಗಲಕೋಟೆ, ಕೂಡಲಸಂಗಮ, ತಾಳಿಕೋಟೆ, ಮುಂತಾದ ಸ್ಥಳಗಳಲ್ಲಿ ಕ್ಷೇತ್ರಕಾರ್ಯ ಮಾಡಿ ಸ್ವಂತ ಪರಿಶ್ರಮದಿಂದ ಹಲವಾರು ಜನಪದ ಗೀತೆಗಳನ್ನು ಸಂಗ್ರಹಿಸಿದರು. ಅವುಗಳನ್ನು ನಾಲ್ಕು ನಾಡಪದಗಳು, ಕಂಬಿಯ ಹಾಡುಗಳು, ಜನತಾ ಗೀತೆಗಳು ಎಂಬ ಸಂಪುಟಗಳಲ್ಲಿ ಪ್ರಕಟಿಸಿದರು. ತದನಂತರದ ಕಾಲಘಟ್ಟದಲ್ಲಿ ಗದ್ದಗೀಮಠರು ಕ್ಷೇತ್ರ ಕಾರ್ಯದಲ್ಲಿ ಸಂಗ್ರಹಿಸಿದ ಜಾನಪದ ಸಾಹಿತ್ಯ ಕೃತಿಗಳನ್ನು 'ಮಲ್ಲಮಲ್ಲಾಣಿ', 'ಕುಮಾರರಾಮನ ದುಂದುಮೆ', 'ಲೋಕಗೀತೆಗಳು' ಎಂಬ ಮೂರು ಗ್ರಂಥಗಳಾಗಿ ಪ್ರಕಟಿಸಿದ್ದಾರೆ. ಗದ್ದಗೀಮಠರ ಪಿಎಚ್.ಡಿ ಮಹಾಪ್ರಬಂಧವಾದ 'ಕನ್ನಡ ಜಾನಪದ ಗೀತೆಗಳು' ಕೃತಿಯಲ್ಲಿ ಸುಗ್ಗಿಯ ಹಾಡುಗಳು, ದಾಂಪತ್ಯ ಗೀತೆಗಳು, ಮಕ್ಕಳ ಹಾಡುಗಳು, ಶಿವಶರಣರನ್ನು ಕುರಿತ ಜನಪದ ಗೀತೆಗಳು, ಕುಮಾರ ರಾಮ, ಕಿತ್ತೂರಿನ ಚೆನ್ನಮ್ಮ, ನರಗುಂದ ಬಂಡಾಯ ಮುಂತಾದ ಐತಿಹಾಸಿಕ ಕಥನ ಗೀತಗಳು, ಜಾನಪದ ರಾಮಾಯಣ ಮಹಾಭಾರತಗಳು, ಹಂತಿಯ ಹಾಡುಗಳು, ಜಾನಪದ ಗೀತೆಗಳ ಛಂದಸ್ಸು ಮುಂತಾದವುಗಳನ್ನು ಕುರಿತು ತಮ್ಮ ಸ್ವಂತ ಕ್ಷೇತ್ರಕಾರ್ಯದಲ್ಲಿ ಸಂಗ್ರಹಿಸಿದ ಜಾನಪದ ಸಾಹಿತ್ಯವನ್ನು ಆಕರವಾಗಿ ಬಳಸಿಕೊಂಡು ವಿಶ್ಲೇಷಿಸಿರುವುದು ಮಹತ್ವದ ಅಂಶವೆಂದು ಗುರುತಿಸಬಹುದು.

ಉತ್ತರ ಕರ್ನಾಟಕ ಪ್ರದೇಶದಲ್ಲಿ ಗ್ರಂಥಸಂಪಾದನಾ ಕ್ಷೇತ್ರದಲ್ಲಿ ಮಹತ್ವದ ಸಂಶೋಧನೆ ಮಾಡಿದ ಮತ್ತೊಬ್ಬ ವಿದ್ವಾಂಸರೆಂದರೆ ಡಾ.ಆರ್.ಸಿ.ಹಿರೇಮಠ ಅವರು. ಬಸವಪುರಾಣ, ಪದ್ಮರಾಜ ಪುರಾಣ, ರಾಜಶೇಖರ ವಿಳಾಸ, ಸೋಮನಾಥ ಚಾರಿತ್ರ್ಯ, ತ್ರಿಷಷ್ಠಿ ಪುರಾತನ ಚಾರಿತ್ರ್ಯ, ಕೊಟ್ಟೂರು ಬಸವೇಶ್ವರ ಚಾರಿತ್ರ್ಯ, ಬಸವರಾಜ ವಿಜಯ, ಮೋಹನ ತರಂಗಿಣಿ, ಪ್ರಭುಲಿಂಗ ಲೀಲೆ, ಮುಂತಾದ ಕಾವ್ಯಗಳನ್ನು ಆರ್.ಸಿ.ಹಿರೇಮಠರು ಹಲವು ಹಸ್ತಪ್ರತಿಗಳನ್ನು ಆಕರಗಳಾಗಿ ಬಳಸಿಕೊಂಡು ಪರಿಷ್ಕರಿಸಿ ಪ್ರಕಟಿಸಿದ್ದಾರೆ.

ಚನ್ನಬಸವಣ್ಣ, ಸಿದ್ಧರಾಮ, ಮಹಾದೇವಿಯಕ್ಕ, ಅಮ್ಮುಗೆ ರಾಯಮ್ಮ, ನೀಲಮ್ಮ, ಲಿಂಗಮ್ಮ, ಅಕ್ಕಮ್ಮ, ಅಖಂಡೇಶ್ವರ ವಚನಗಳು, ಸಕಲ ಪುರಾತನರ ವಚನಗಳು, ಶೂನ್ಯ ಸಂಪಾದನೆ, ವೀರಶೈವ ಚಿಂತಾಮಣಿ, ಮುಕ್ತಿ ಕಂಠಾಭರಣ, ಕೈವಲ್ಯದರ್ಪಣ ಮುಂತಾದಂತಹ ವಚನ ಸಾಹಿತ್ಯ ಮತ್ತು ವೀರಶೈವ ಸಾಹಿತ್ಯ ಕೃತಿಗಳನ್ನು ಆರ್.ಸಿ. ಹಿರೇಮಠರು ಸಂಪಾದಿಸಿ ಪ್ರಕಟಿಸಿದ್ದಾರೆ.

ಆರ್.ಸಿ.ಹಿರೇಮಠರು ಭಾಷಾವಿಜ್ಞಾನ ಕ್ಷೇತ್ರದಲ್ಲಿಯೂ ಮಹತ್ವದ ಸಂಶೋಧನೆ ಮಾಡಿದ್ದಾರೆ. ದ್ರಾವಿಡ ಭಾಷೆಗಳು ಮತ್ತು ಇಂಡೋ ಆರ್ಯನ್ ಭಾಷೆಗಳ ಬಗ್ಗೆ ಅವರು ಹಲವು ವರ್ಷಗಳ ಕಾಲ ಸಂಶೋಧನೆ ನಡೆಸುವುದುದರ ಫಲವಾಗಿ 'Linguistic Investigation of some problems on the Relationship of Indo Aryan and Dravidian Languages' ಎಂಬ ಮಹಾಪ್ರಬಂಧವನ್ನು ರಚಿಸಿ ಪಿಎಚ್.ಡಿ. ಪದವಿಯನ್ನು ಗಳಿಸಿದ್ದಾರೆ. ಹಿರೇಮಠರು ವರ್ಣನಾತ್ಮಕ ಭಾಷಾವಿಜ್ಞಾನದ ಬಗ್ಗೆ ವಿಶೇಷವಾದ ಪರಿಜ್ಞಾನವನ್ನು ಹೊಂದಿದ್ದು, ಆ ಕ್ಷೇತ್ರದಲ್ಲಿ ಅಧ್ಯಯನ ನಡೆಸಿದ್ದರ ಫಲವಾಗಿ 'Structure of Kannada' ಎಂಬ ಗ್ರಂಥವನ್ನು ರಚಿಸಿದ್ದಾರೆ. ದ್ರಾವಿಡ ಭಾಷೆ ಮತ್ತು ಜನಾಂಗವನ್ನು ಕುರಿತು ಆಳವಾಗಿ ಅಧ್ಯಯನ ನಡೆಸಿ 'The Genesis and Growth of Dravidian' ಎಂಬ

ಗ್ರಂಥವೊಂದನ್ನು ಪ್ರಕಟಿಸಿದ್ದಾರೆ. ಹಿರೇಮಠರು ಕರ್ನಾಟಕದಲ್ಲಿನ ಬೌದ್ಧ ಧರ್ಮದ ಬಗ್ಗೆಯೂ ತಲಸ್ಪರ್ಶಿಯಾಗಿ ಅಧ್ಯಯನ ನಡೆಸಿ 'Buddhism in Karnataka' ಎಂಬ ಕೃತಿಯೊಂದನ್ನು ಪ್ರಕಟಿಸಿದ್ದಾರೆ.

ಪ್ರಾಚೀನ ಕಾಲಘಟ್ಟದಲ್ಲಿ ಕನ್ನಡ ಭಾಷೆ, ಕನ್ನಡಿಗರು ಹಾಗೂ ಕನ್ನಡ ನಾಡಿನ ಗಡಿಯು ವ್ಯಾಪಿಸಿದ್ದ ಪ್ರದೇಶಗಳನ್ನು ಕುರಿತು ಆರ್.ಸಿ.ಹಿರೇಮಠರು ಅಪಾರವಾಗಿ ಸಂಶೋಧನೆ ನಡೆಸಿದ್ದಾರೆ. ಈ ಸಂಶೋಧನೆಗಳಿಗೆ ಆಕರವಾಗಿ ಕನ್ನಡ ಶಾಸನಗಳು, ಕರ್ನಾಟಕದ ಇತಿಹಾಸ, ಸ್ಥಳನಾಮಗಳು, ವ್ಯಕ್ತಿನಾಮಗಳು, ಸ್ಥಳಪುರಾಣಗಳು, ಪ್ರಾಕ್‌ಚಾರಿತ್ರಿಕ ಸಂಶೋಧನೆಗಳು, ವಿದೇಶಿ ಪ್ರವಾಸಿಗರ ವರದಿಗಳು, ಸಾಹಿತ್ಯ ಕೃತಿಗಳು ಮತ್ತಿತರ ಹಲವು ಆಕರ ಸಾಮಗ್ರಿಗಳನ್ನು ತೌಲನಿಕವಾಗಿ ವಿಶ್ಲೇಷಿಸಿ ಸಂಶೋಧನೆ ನಡೆಸಿದ್ದಾರೆ. ಈ ಸಂಶೋಧನೆಗಳ ಫಲವಾಗಿ 'ಕಾವೇರಿ ಗೋದೆಯರ ಆಚೆಗಿದ್ದ ಕನ್ನಡ ನಾಡು', 'ಕರ್ನಾಟಕ ಮಹಾರಾಷ್ಟ್ರ', ಕನ್ನಡ ನಾಡು ನುಡಿ–ಗಡಿ ಮುಂತಾದ ಸಂಶೋಧನಾ ಗ್ರಂಥಗಳನ್ನು ಪ್ರಕಟಿಸಿದ್ದಾರೆ.

ತುಳುನಾಡು ಅಂದರೆ ದಕ್ಷಿಣಕನ್ನಡ ಜಿಲ್ಲೆಯ ಬಗ್ಗೆ ವಿಶೇಷವಾಗಿ ಮಹತ್ವದ ಸಂಶೋಧನೆ ಮಾಡಿದ ವಿದ್ವಾಂಸರೆಂದರೆ ಪಿ.ಗುರುರಾಜ ಭಟ್ಟರು. ತುಳುನಾಡಿನಲ್ಲಿಯೇ ಹುಟ್ಟಿ ಬೆಳೆದ ಗುರುರಾಜ ಭಟ್ಟರು ತುಳುನಾಡಿನ ಇತಿಹಾಸ, ಸಂಸ್ಕೃತಿಗಳನ್ನು ಕುರಿತು ಸೂಕ್ಷ್ಮ ಸಂಶೋಧನೆ ನಡೆಸಿ ಹೊರಜಗತ್ತಿನ ಎದುರಿಗೆ ಅನಾವರಣ ಮಾಡಿದ ಶ್ರೇಷ್ಠ ಸಂಶೋಧಕರಾಗಿದ್ದಾರೆ. ಅವರು ರಚಿಸಿದ 'ತುಳುನಾಡು' ಕೃತಿಯು ತುಳುನಾಡಿನ ಇತಿಹಾಸ ಮತ್ತು ಸಮಾಜವನ್ನು ಕುರಿತ ಮಹತ್ವದ ಗ್ರಂಥವಾಗಿದೆ. ತುಳುನಾಡಿನ ರಾಜಕೀಯ ಮತ್ತು ಸಾಂಸ್ಕೃತಿಕ ಇತಿಹಾಸವನ್ನು ಕುರಿತಂತೆ ಉಪಲಬ್ಧವಿರುವ ಎಲ್ಲಾ ಆಕರ ಸಾಮಗ್ರಿಗಳನ್ನು ಹಾಗೂ ಕ್ಷೇತ್ರಾಧ್ಯಯನ, ಕ್ಷೇತ್ರಕಾರ್ಯದಲ್ಲಿ ಸಂಗ್ರಹಿಸಿದ ಮಾಹಿತಿಗಳನ್ನು ಬಳಸಿಕೊಂಡು ಗುರುರಾಜ ಭಟ್ಟರು ಹಲವು ವರ್ಷಗಳ ಸಂಶೋಧನೆಯ ಫಲವಾಗಿ 'A Political and Cultural History of Tulunadu from Earliest time to 1600 A.D' ಎಂಬ ಮಹಾಪ್ರಬಂಧವನ್ನು ರಚಿಸಿ ಪಿಎಚ್.ಡಿ. ಪದವಿಯನ್ನು ಪಡೆದರು.

ಪಿಎಚ್.ಡಿ. ಸಂಶೋಧನೆಗೋಸ್ಕರ ಗುರುರಾಜಭಟ್ಟರು ತುಳುನಾಡಿನಾದ್ಯಂತ ವ್ಯಾಪಕವಾಗಿ ಕ್ಷೇತ್ರಕಾರ್ಯ ಮಾಡಿದರು. ಆ ಸಂದರ್ಭದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತ ಪ್ರತಿಗ್ರಾಮದಲ್ಲಿಯೂ ಕ್ಷೇತ್ರಪರಿವೀಕ್ಷಣೆ ನಡೆಸಿ ಅಲ್ಲಿಯ ದೇವಾಲಯಗಳ ವಾಸ್ತುಶಿಲ್ಪ, ಮೂರ್ತಿಶಿಲ್ಪ, ಶಾಸನಗಳು, ವೀರಗಲ್ಲುಗಳು, ಮಾಸ್ತಿಗಲ್ಲುಗಳು, ನಿಸದಿ ಶಾಸನಗಳು, ಇಗರ್ಜಿಗಳು, ಜೈನ ಬಸದಿಗಳು, ಮಸೀದಿಗಳು, ಕೋಟೆಕೊತ್ತಲಗಳು, ಭಿತ್ತಿಚಿತ್ರಗಳು, ಹಸ್ತಪ್ರತಿಗಳು ಮೊದಲಾದವುಗಳ ಬಗ್ಗೆಯೂ ಅಪಾರವಾದ ಮಾಹಿತಿಗಳನ್ನು ಸಂಗ್ರಹಿಸಿದರು. ಹಾಗೆ ಸಂಗ್ರಹಿಸಿದ ಆಕರ ಸಾಮಗ್ರಿಗಳನ್ನು ಬಳಸಿಕೊಂಡು 'Antiquities of South Canara' ಎಂಬ ಗ್ರಂಥವನ್ನು ಪ್ರಕಟಿಸಿದ್ದಾರೆ. ಈ ಗ್ರಂಥದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಸ್ಮಾರಕಗಳಿಗೆ ಸಂಬಂಧಿಸಿದ ಅಪರೂಪದ ಛಾಯಾಚಿತ್ರಗಳನ್ನು ಪ್ರಕಟಿಸಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯ ಬಗ್ಗೆ ಸಂಶೋಧನೆ ಮಾಡಿ ಅಂಬಲಪಾಡಿಯ ಇತಿಹಾಸ, ಶಿವಳ್ಳಿಯ ಸಂಕ್ಷಿಪ್ತ ಇತಿಹಾಸ, ದಕ್ಷಿಣ ಕನ್ನಡದ ತುಳುವರು, ತುಳುವ ಸಂಸ್ಕೃತಿ, ಕದ್ರಿ ಶ್ರೀ ಮಂಜುನಾಥ ದೇವಾಲಯ, ಬಾರಕೂರು ಮುಂತಾದ ಸಂಶೋಧನಾ ಗ್ರಂಥಗಳನ್ನು ಪ್ರಕಟಿಸಿದ್ದಾರೆ.

ಗ್ರಂಥಸಂಪಾದನಾ ಕ್ಷೇತ್ರದಲ್ಲಿ ಮಹತ್ವದ ಸಾಧನೆ ಮಾಡಿರುವ ಎನ್.ಬಸವಾರಾಧ್ಯರು ಹಲವಾರು ಪ್ರಾಚೀನ ಸಾಹಿತ್ಯ ಕೃತಿಗಳನ್ನು ಸಂಪಾದಿಸಿ ಕೊಡುಗೆಯಾಗಿ ನೀಡಿದ್ದಾರೆ. ನರಹರಿಯ 'ತೊರವೆ ರಾಮಾಯಣ', ರಾಘವಾಂಕನ 'ಹರಿಶ್ಚಂದ್ರ ಕಾವ್ಯ', ನೀಲಕಂಠಾಚಾರ್ಯ ಪಂಡಿತನ 'ಆರಾಧ್ಯ ಚಾರಿತ್ರ್ಯ', 'ಚೇರಮ ಕಾವ್ಯ', 'ಉದ್ಭಟದೇವ ಚರಿತ್ರೆ', 'ತ್ರಿಪುರ ದಹನ ಸಾಂಗತ್ಯ', 'ಧರ್ಮನಾಥ ಪುರಾಣ', 'ಚತುರಾಚಾರ್ಯ ಚಾರಿತ್ರ್ಯ', 'ನವಮುಗ್ಧ ಲೀಲೆ' ಮುಂತಾದ ಸಾಹಿತ್ಯ ಕೃತಿಗಳನ್ನು ಹಲವಾರು ಹಸ್ತಪ್ರತಿಗಳನ್ನು ಆಕರವಾಗಿ ಬಳಸಿಕೊಂಡು ಸಂಪಾದಿಸಿದ್ದಾರೆ.

ಅಬ್ಬಲೂರು ಚರಿತೆ ಕೃತಿಯನ್ನು ನಾಲ್ಕು ಹಸ್ತಪ್ರತಿಗಳ ಸಹಾಯದಿಂದ ಸಂಪಾದಿಸಿದ ಬಸವಾರಾಧ್ಯರು ಅಬ್ಬಲೂರಿನ ಶಿಲಾಶಾಸನ, ಏಕೋರಾಮಿತಂದೆಗಳ ರಗಳೆ, ಭೀಮ ಕವಿಯ 'ಬಸವ ಪುರಾಣ', ಲಕ್ಕಣ ದಂಡೇಶನ 'ಶಿವಾತತ್ವ ಚಿಂತಾಮಣಿ' ಮೊದಲಾದ ಕೃತಿಗಳಲ್ಲಿನ ಏಕಾಂತ ರಾಮಯ್ಯನ ಬಗೆಗಿನ ವಿವರಗಳನ್ನು ಈ ಗ್ರಂಥದಲ್ಲಿ ಅನುಬಂಧ ರೂಪದಲ್ಲಿ ನೀಡಿದ್ದಾರೆ.

ನಿಘಂಟು ಶಾಸ್ತ್ರದ ಬಗ್ಗೆಯೂ ಅಪಾರವಾಗಿ ಕೆಲಸ ಮಾಡಿರುವ ಬಸವಾರಾಧ್ಯರು 'ಹಳಗನ್ನಡದ ನಿಘಂಟು'ನ್ನು ೩೯ ವೈವಿಧ್ಯಮಯವಾದ ಹಸ್ತಪ್ರತಿಗಳನ್ನು ಆಕರವಾಗಿ ಬಳಸಿಕೊಂಡು ವಿದ್ವತ್ಪೂರ್ಣವಾಗಿ ಪರಿಷ್ಕರಿಸಿರುವುದು ಮಹತ್ವದ ಸಾಧನೆಯಾಗಿದೆ. ರನ್ನಕಂದ, ಶಬ್ದಮಣಿದರ್ಪಣ, ಕರ್ನಾಟಕ ಶಬ್ದಸಾರ, ಕರ್ನಾಟಕ ನಿಘಂಟು, ಚತುರಾಸ್ಯ ನಿಘಂಟು, ಕಬ್ಬಿಗರ ಭಾರತ ನಿಘಂಟು, ಕವಿಕಂಠಾಭರಣಂ, ಶಬ್ದಾರ್ಥಕೋಶ ಮುಂತಾದ ಹತ್ತು ಪ್ರಾಚೀನ ನಿಘಂಟುಗಳನ್ನು ಆಕರವಾಗಿ ಬಸವಾರಾಧ್ಯರು ಬಳಸಿಕೊಂಡಿರುವುದು ಗಮನಾರ್ಹ.

ಶಾಸನಶಾಸ್ತ್ರ ವಿಷಯದಲ್ಲಿ ಮಹತ್ವದ ಸಾಧನೆ ಮಾಡಿದ ಸಂಶೋಧಕರೆಂದರೆ ಡಾ.ಬಿ.ಆರ್.ಗೋಪಾಲ್. ಶಾಸನ, ಇತಿಹಾಸ, ವಾಸ್ತುಶಿಲ್ಪ, ಕಲೆಗಳು ಮುಂತಾದವುಗಳ ಬಗ್ಗೆ ಅಪಾರವಾದ ವಿದ್ವತ್ತನ್ನು ಹೊಂದಿದ್ದ ಗೋಪಾಲ್ ಅವರು ಹಲವಾರು ಶ್ರೇಷ್ಠ ಸಂಶೋಧನಾ ಗ್ರಂಥಗಳನ್ನು ರಚಿಸಿದ್ದಾರೆ. 'South Indian Inscription'ನ ೧೫ ಮತ್ತು ೧೭ನೇ ಸಂಪುಟಗಳ ಸಂಪಾದಕರಾಗಿ ಕಾರ್ಯ ನಿರ್ವಹಿಸಿದ ಗೋಪಾಲ್ ಅವರು ಕರ್ನಾಟಕ ವಿಶ್ವವಿದ್ಯಾನಿಲಯದ ಪ್ರಕಟಣೆಗಳಾದ 'Karnatak Inscriptions' ಸಂಪುಟ ೫ ಮತ್ತು ೬ರ ಸಂಪಾದಕರಾಗಿಯೂ ಕಾರ್ಯ ನಿರ್ವಹಿಸಿದ್ದಾರೆ. ಬನವಾಸಿ ಕದಂಬರ ಶಾಸನಗಳನ್ನು ಸಂಪಾದಿಸಿ, 'Corpus of Kadamba Inscriptions' ಎಂಬ ಗ್ರಂಥವೊಂದನ್ನು ಪ್ರಕಟಿಸಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಪ್ರಕಟಣೆಯಾದ 'ಎಪಿಗ್ರಾಫಿಯಾ ಕರ್ನಾಟಿಕಾ' ಶಾಸನ ಸಂಪುಟಗಳ ಪರಿಷ್ಕರಣೆ ಯೋಜನೆಯ ಸಂಪಾದಕರಾಗಿ ಕಾರ್ಯ ನಿರ್ವಹಿಸಿ ೯ ಸಂಪುಟಗಳ ಪ್ರಕಟಣೆಗೆ ಕಾರಣಕರ್ತರಾಗಿದ್ದಾರೆ. ಈ ಸಂಪುಟಗಳಲ್ಲಿ ಸಾವಿರಾರು ಹೊಸ ಶಾಸನಗಳನ್ನು ಪರಿಶೋಧಿಸಿ ಸಂಕಲಿಸುವುದರೊಂದಿಗೆ ಈ ಹಿಂದೆ ರೈಸ್ ಅವರು ಪ್ರಕಟಿಸಿದ್ದ ಶಾಸನಗಳನ್ನು ಪರಿಷ್ಕರಿಸಿ ವಿವರವಾದ ಪ್ರಸ್ತಾವನೆಗಳೊಂದಿಗೆ ಪ್ರಕಟಿಸಿರುವುದು ಗಮನಾರ್ಹ ಅಂಶ.

ಬಾ.ರಾ.ಗೋಪಾಲ್ ಅವರ ಪಿಎಚ್.ಡಿ. ಸಂಶೋಧನಾ ಗ್ರಂಥವಾದ 'The Chalukyas of Kalyana and The Kalachuris' ಗ್ರಂಥವು ಕಲ್ಯಾಣ ಚಾಲುಕ್ಯರು ಮತ್ತು ಕಲಚೂರಿಯರನ್ನು ಕುರಿತ ಮಹತ್ವದ ಸಂಶೋಧನಾ ಗ್ರಂಥವೆಂದು ಹೇಳಬಹುದು. ಈ

ಗ್ರಂಥದಲ್ಲಿ ಕಲ್ಯಾಣ ಚಾಲುಕ್ಯರು ಮತ್ತು ಕಲಚೂರಿಗಳ ಬಗ್ಗೆ ಉಪಲಬ್ಧವಾಗಿರುವ ಮಹತ್ವದ ಆಕರ ಗ್ರಂಥವೆನಿಸಿದೆ. ಗೋಪಾಲ್ ಅವರು ರಚಿಸಿರುವ 'Minor dynastys of South India Vol-I' ಗ್ರಂಥವು ಕರ್ನಾಟಕದ ಸಣ್ಣಪುಟ್ಟ ಮನೆತನಗಳ ಇತಿಹಾಸವನ್ನು ಕುರಿತ ಅಧಿಕೃತ ಪ್ರಮಾಣ ಗ್ರಂಥವಾಗಿದೆ. ಸಂಪೂರ್ಣವಾಗಿ ಶಾಸನಗಳನ್ನಾಧರಿಸಿ ರಚಿತವಾಗಿರುವ ಈ ಗ್ರಂಥವು ಕರ್ನಾಟಕದ ಬಹುತೇಕ ಎಲ್ಲ ಸಣ್ಣಪುಟ್ಟ ಅರಸುಮನೆತನಗಳ ಚರಿತ್ರೆಯನ್ನು ದಾಖಲಿಸುವ ಮಹತ್ವದ ಗ್ರಂಥವಾಗಿದೆ.

ಗೋಪಾಲ ಅವರು ರಚಿಸಿರುವ 'Sri Ramanuja in Karnataka' ಗ್ರಂಥವು ಕರ್ನಾಟಕಕ್ಕೆ ರಾಮಾನುಜಾಚಾರ್ಯರು ಆಗಮಿಸಿ ಹೊಯ್ಸಳ ರಾಜ್ಯದಲ್ಲಿನ ವಾಸ್ತವ್ಯದ ಬಗ್ಗೆ ಉಪಲಬ್ಧ ಆಕರ ಸಾಮಗ್ರಿಗಳ ಹಿನ್ನೆಲೆಯಲ್ಲಿ ವಸ್ತುನಿಷ್ಠವಾಗಿ ನಡೆಸಿದ ಸಂಶೋಧನೆಯ ಫಲಶ್ರುತಿಯಾಗಿದೆ. ಕರ್ನಾಟಕದ ವಾಸ್ತುಶಿಲ್ಪ, ವಿಜಯನಗರದ ವಾಸ್ತುಶಿಲ್ಪ ಮುಂತಾದವುಗಳನ್ನು ಕುರಿತು ಗೋಪಾಲ್ ಅವರು ಮಹತ್ವದ ಗ್ರಂಥಗಳನ್ನು ಬರೆದಿದ್ದಾರೆ. 'ಕರ್ನಾಟಕದಲ್ಲಿ ನವಶಿಲಾಯುಗ', 'ಕನ್ನಡ ನಾಡಿನ ಐತಿಹಾಸಿಕ ಮಹಾಪುರುಷರು', 'ಬಾದಾಮಿ ಚಾಲುಕ್ಯರು', 'ಐಹೊಳೆ', 'ಬನವಾಸಿ', 'ಹೊರನಾಡಿನಲ್ಲಿ ಆಳಿದ ರಾಜವಂಶಗಳು', 'ಕಲ್ಯಾಣದ ಚಾಲುಕ್ಯರು', 'ಬನವಾಸಿಯ ಕದಂಬರು' ಮುಂತಾದ ಹಲವಾರು ಸಂಶೋಧನಾ ಲೇಖನಗಳನ್ನು ಗೋಪಾಲರು ರಚಿಸಿದ್ದಾರೆ. ಈ ಎಲ್ಲ ಸಂಶೋಧನೆಗಳಿಗೆ ಗೋಪಾಲ್ ಅವರು ಮೂಲ ಆಕರವಾಗಿ ಶಾಸನಗಳನ್ನು ಬಳಸಿದ್ದಾರೆ. ಆನುಷಂಗಿಕ ಆಕರವಾಗಿ ಇತಿಹಾಸ ಗ್ರಂಥಗಳನ್ನು ಬಳಸಿಕೊಂಡಿರುವುದು ಗಮನಾರ್ಹ.

ಶಾಸನಗಳು, ಸಾಹಿತ್ಯ, ವಚನ ಸಾಹಿತ್ಯ, ಭಾಷಾ ವಿಜ್ಞಾನ, ಜಾನಪದ, ಸಂಸ್ಕೃತಿ ಮುಂತಾದ ಕ್ಷೇತ್ರಗಳಲ್ಲಿ ಸಂಶೋಧನೆ ಮಾಡಿದ ಮಹತ್ವದ ಸಂಶೋಧಕರಾದ ಡಾ.ಎಂ.ಚಿದಾನಂದ ಮೂರ್ತಿಯವರ ಕೊಡುಗೆ ಅನನ್ಯವಾದುದು. ಕ್ರಿ.ಶ.೪೫೦ರಿಂದ ೧೧೫೦ರವರೆಗಿನ ಕನ್ನಡ ಶಾಸನಗಳನ್ನು ಕುರಿತು ನಡೆಸಿದ ಅಧ್ಯಯನದ ಫಲವಾಗಿ ಚಿದಾನಂದಮೂರ್ತಿಯವರು 'ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ' ಎಂಬ ಮಹಾಪ್ರಬಂಧವನ್ನು ರಚಿಸಿ ಪಿಎಚ್.ಡಿ. ಪದವಿಯನ್ನು ಪಡೆದಿದ್ದಾರೆ. ಈ ಗ್ರಂಥದಲ್ಲಿ ಪ್ರಾಚೀನ ಕರ್ನಾಟಕದಲ್ಲಿ ಅಸ್ತಿತ್ವದಲ್ಲಿದ್ದ ಬೌದ್ಧಧರ್ಮ, ಜೈನಧರ್ಮ, ಶೈವಧರ್ಮ, ವೈಷ್ಣವ ಧರ್ಮ, ವೀರಶೈವ ಧರ್ಮ, ಪ್ರಾಚೀನ ಕರ್ನಾಟಕದ ವೀರಜೀವನ, ಸಾಮಾಜಿಕ ಜೀವನ, ಪ್ರಾಚೀನ ಕಾಲಘಟ್ಟದ ವಿದ್ಯಾಭ್ಯಾಸ ಪದ್ಧತಿ, ಆಡಳಿತ ಪದ್ಧತಿ ಮೊದಲಾದವುಗಳ ಬಗ್ಗೆ ಉಪಲಬ್ಧವಿದ್ದ ಎಲ್ಲ ಶಾಸನಗಳನ್ನು ಪ್ರಾಥಮಿಕ ಆಕರವಾಗಿ ಬಳಸಿಕೊಂಡು ಅಮೂಲ್ಯವಾದ ಮಾಹಿತಿಯನ್ನು ಪ್ರಪ್ರಥಮವಾಗಿ ಅನಾವರಣಗೊಳಿಸಿದ್ದಾರೆ.

ಚಿದಾನಂದ ಮೂರ್ತಿಯವರ 'ಶೂನ್ಯ ಸಂಪಾದನೆಯನ್ನು ಕುರಿತು' ಎಂಬ ಗ್ರಂಥವು ಶೂನ್ಯ ಸಂಪಾದನೆಯ ಹಿನ್ನೆಲೆಯಲ್ಲಿ ವೀರಶೈವ ಧರ್ಮದ ಉಗಮ ಹಾಗೂ ವಿಕಾಸವನ್ನು ಕುರಿತು ಒಳನೋಟಗಳನ್ನು ಬೀರುವ ಮಹತ್ವದ ಸಂಶೋಧನಾ ಗ್ರಂಥವೆಂದು ಹೇಳಬಹುದು. 'ವಚನ ಸಾಹಿತ್ಯ' ಕೃತಿಯು ಇಡೀ ವಚನ ಸಾಹಿತ್ಯದ ಬಗ್ಗೆ ಸಮಗ್ರವಾದ ಮಾಹಿತಿಯನ್ನು ನೀಡುವ ಕೃತಿಯಾಗಿದೆ. 'ಲಿಂಗಾಯತ ಅಧ್ಯಯನಗಳು', 'ಪೂರ್ಣಸೂರ್ಯಗ್ರಹಣ : ಒಂದು ಸಮಾಜೋ–ಸಾಂಸ್ಕೃತಿಕ ಸಮೀಕ್ಷೆ', 'ಕರ್ನಾಟಕ ಸಂಸ್ಕೃತಿ', 'ಛಂದೋತರಂಗ', 'ವೀರಗಲ್ಲುಗಳು ಮತ್ತು ಮಾಸ್ತಿಕಲ್ಲುಗಳು' ಅಪರೂಪದ ಮಾಹಿತಿಗಳನ್ನು ನೀಡುವ ಸಂಶೋಧನಾ ಗ್ರಂಥಗಳಾಗಿವೆ. ನಾಡಿನ ಪ್ರಮುಖ ವಿದ್ವತ್ ಪತ್ರಿಕೆಗಳಲ್ಲಿ ಪ್ರಕಟಿಸಿದ

ಅಥವಾ ಬೇರೆ ಬೇರೆ ವಿಚಾರ ಸಂಕಿರಣಗಳಲ್ಲಿ, ವಿಚಾರ ಗೋಷ್ಠಿಗಳಲ್ಲಿ ಚಿದಾನಂದ ಮೂರ್ತಿಯವರು ಮಂಡಿಸಿದ ವಿದ್ವತ್ ಪ್ರಬಂಧಗಳ ಸಂಕಲನಗಳಾದ 'ಸಂಶೋಧನಾ ತರಂಗ', 'ವಾಗರ್ಥ', 'ಪಗರಣ', 'ಹೊಸತು ಹೊಸತು' ಮುಂತಾದವು ಮಹತ್ವದ ಕೊಡುಗೆಗಳಾಗಿವೆ.

ಕನ್ನಡ ನಾಡು-ನುಡಿಯು ಕಾವೇರಿಯಿಂದ ಹಿಡಿದು ಗೋದಾವರಿ ಪರಿಸರದವರೆಗೆ ಹಾಗೂ ಅದರಿಂದ ಆಚೆಗೂ ವ್ಯಾಪಿಸಿದ್ದ ಬಗೆಗೆ, ಮಧ್ಯ ಮಹಾರಾಷ್ಟ್ರದವರೆಗೆ ದೊರೆತಿರುವ ಕನ್ನಡ ಶಾಸನಗಳ ಹಿನ್ನೆಲೆಯಲ್ಲಿ 'ಭಾಷಿಕ ಬೃಹತ್ ಕರ್ನಾಟಕ' ಎಂಬ ಸಂಶೋಧನಾ ಗ್ರಂಥವನ್ನು ಚಿದಾನಂದಮೂರ್ತಿಯವರು ರಚಿಸಿದ್ದಾರೆ. 'ಸಾಂಸ್ಕೃತಿಕ ಬೃಹತ್ ಕರ್ನಾಟಕ' ಕೃತಿಯಲ್ಲಿ ಕನ್ನಡ ಸಂಸ್ಕೃತಿಯ ಎಳೆಗಳು, ಕನ್ನಡನಾಡಿನಿಂದ ಬಹುದೂರದವರೆಗೆ ನೇಪಾಳದವರೆಗೂ ವ್ಯಾಪಿಸಿರುವುದನ್ನು ಶಾಸನಾಧಾರ ಸಹಿತ ವಿವರಿಸಿದ್ದಾರೆ.

ಶಾಸನಶಾಸ್ತ್ರ, ಇತಿಹಾಸ, ಭಾಷಾವಿಜ್ಞಾನ, ಜಾನಪದ, ಗ್ರಂಥಸಂಪಾದನೆ, ಜೈನಶಾಸ್ತ್ರ, ಸಾಹಿತ್ಯ ಮುಂತಾದ ಎಲ್ಲ ಕ್ಷೇತ್ರಗಳಲ್ಲಿಯೂ ಮಹತ್ವದ ಕೊಡುಗೆ ನೀಡಿರುವ ಸಮಕಾಲೀನ ಸಂದರ್ಭದ ಶ್ರೇಷ್ಠ ಸಂಶೋಧಕರಾದ ಹಂ.ಪ.ನಾಗರಾಜಯ್ಯ ಅವರ ಸಾಧನೆ ಅನುಪಮವಾದುದು. 'ವಡ್ಡಾರಾಧನೆ-ಸಮಗ್ರ ಅಧ್ಯಯನ' ಎಂಬ ವಿಷಯವನ್ನು ಕುರಿತು ಸಂಶೋಧನೆ ನಡೆಸಿ ಪಿಎಚ್.ಡಿ. ಪದವಿಯನ್ನು ಪಡೆದ ಹಂಪನಾ ಅವರು ಹಲವು ವರ್ಷಗಳ ನಂತರ ವಡ್ಡಾರಾಧನೆಯ ಬಗ್ಗೆ ಮತ್ತಷ್ಟು ಸಂಶೋಧನೆ ನಡೆಸಿ ವಡ್ಡಾರಾಧನೆಯ ಕರ್ತೃ ಶಿವಕೋಟ್ಯಾಚಾರ್ಯನಲ್ಲ 'ಭ್ರಾಜಿಷ್ಣು', ವಡ್ಡಾರಾಧನೆಯ ನಿಜವಾದ ಹೆಸರು 'ಆರಾಧನಾ ಕರ್ನಾಟ ಟೀಕಾ', ವಡ್ಡಾರಾಧನೆಯ ರಚನೆಯ ಕಾಲ ಕ್ರಿ.ಶ.ಸುಮಾರು ೮೦೦ ಎಂದು ಆಧಾರ ಸಹಿತ ನಿರೂಪಿಸಿದ್ದಾರೆ.

ಹಂಪನಾ ಅವರು ರಚಿಸಿರುವ 'ದ್ರಾವಿಡ ಭಾಷಾ ವಿಜ್ಞಾನ', 'ದ್ರಾವಿಡ ಸಂಖ್ಯಾ ವಾಚಕಗಳು' ಭಾಷಾ ವಿಜ್ಞಾನದ ವಿದ್ಯಾರ್ಥಿಗಳಿಗೆ ಅಮೂಲ್ಯ ಆಕರ ಗ್ರಂಥಗಳು. ಹಂಪನಾ ಅವರು ರತ್ನಾಕರವರ್ಣಿಯ 'ಭರತೇಶ ವೈಭವ', ಪಂಪನ 'ವಿಕ್ರಮಾರ್ಜುನ ವಿಜಯ ಸಂಗ್ರಹ', ಸಾಳ್ವನ 'ಸಾಳ್ವಭಾರತ', ನೇಮಿಚಂದ್ರನ 'ನೇಮಿನಾಥ ಪುರಾಣ', ಪೊನ್ನನ 'ಶಾಂತಿಪುರಾಣ', ಭ್ರಾಜಿಷ್ಣುವಿನ 'ವಡ್ಡಾರಾಧನೆ', ಚಂದ್ರಸಾಗರ ವರ್ಣಿಯ ಕೃತಿಗಳು, ತಿರುಮಲಾರ್ಯನ 'ಅಪ್ರತಿಮ ವೀರಚರಿತೆ', 'ನಾಗಕುಮಾರ ಷಟ್ಪದಿ', 'ಧನ್ಯಕುಮಾರ ಚರಿತೆ', 'ಜಯನೃಪ ಕಾವ್ಯ ಸಂಗ್ರಹ', 'ಫಣಿಕುಮಾರ ಕಥಾಸಾಹಿತ್ಯ', 'ವೀರಜಿನೇಂದ್ರ ಚರಿತೆ' ಮುಂತಾದ ಕಾವ್ಯಗಳನ್ನು ಹಲವಾರು ಹಸ್ತಪ್ರತಿಗಳ ಸಹಾಯದಿಂದ ಸಂಪಾದಿಸಿದ್ದಾರೆ. ಈ ಎಲ್ಲ ಕೃತಿಗಳಲ್ಲಿ ಆಯಾ ಕೃತಿಗಳ ಕವಿ ಕಾವ್ಯ ವಿಚಾರಗಳನ್ನು ಕುರಿತು ವಿದ್ವತ್ಪೂರ್ಣವಾದ ಪ್ರಸ್ತಾವನೆಯನ್ನು ಪರಿಪೂರ್ಣವಾಗಿ ರಚಿಸಿದ್ದಾರೆ.

ಹಂಪನಾ ಅವರ 'ಯಕ್ಷಯಕ್ಷಿಯರು' ಗ್ರಂಥವು ಜೈನ ಧರ್ಮದ ಶಾಸನ ದೇವತೆಗಳಾದ ಯಕ್ಷಯಕ್ಷಿಯರನ್ನು ಕುರಿತ ಸಂಶೋಧನಾ ಗ್ರಂಥ. ಇಪ್ಪತ್ತನಾಲ್ಕು ಜೈನ ತೀರ್ಥಂಕರರಿಗೂ ಪ್ರತ್ಯೇಕವಾದ ಬೇರೆಬೇರೆ ಯಕ್ಷಯಕ್ಷಿಯರು ಇರುತ್ತಾರೆ. ಅವರ ಆಯುಧಗಳು, ಲಾಂಛನಗಳು, ವಾಹನಗಳು, ಎಲ್ಲವೂ ಬೇರೆಯಾಗಿದ್ದು, ಪ್ರತ್ಯೇಕವಾದ ಲಕ್ಷಣವನ್ನು ಹೊಂದಿರುತ್ತಾರೆ. ಆ ಎಲ್ಲ ವಿವರಣೆಗಳೊಂದಿಗೆ ಎಲ್ಲ ಯಕ್ಷಯಕ್ಷಿಯರ ರೇಖಾಚಿತ್ರಗಳನ್ನು ನೀಡಿರುವುದು ಈ ಗ್ರಂಥದ ವೈಶಿಷ್ಟ್ಯವಾಗಿದೆ. 'ಶಾಸನಗಳಲ್ಲಿ ಎರಡು ವಂಶಗಳು', 'ಸಾಂತರರು-ಒಂದು ಅಧ್ಯಯನ', 'ಕವಿವರ ಕಾಮಧೇನು ಅತ್ತಿಮಬ್ಬೆ', 'ವಿಷ್ಣುವರ್ಧನ-

ವಿಜಯಾದಿತ್ಯ–ಕೀರ್ತಿವರ್ಮ', 'ಬಾಹುಬಲಿ ಅಂಡ್ ಬಾದಾಮಿ ಚಾಲುಕ್ಯಾಸ್' ಮುಂತಾದ ಸಂಶೋಧನಾ ಗ್ರಂಥಗಳನ್ನು ರಚಿಸಿದ್ದಾರೆ.

'ಕರ್ನಾಟಕದ ಜಾತ್ರೆಗಳು', 'ಆಕಾಶ ಜಾನಪದ', 'ವಡ್ಡಾರಾಧನೆ ಮತ್ತು ಜಾನಪದ' ಮುಂತಾದ ಕೃತಿಗಳು ಜಾನಪದ ಕ್ಷೇತ್ರಕ್ಕೆ ಹಂಪನಾ ಅವರ ಮಹತ್ವದ ಕೊಡುಗೆಗಳಾಗಿವೆ. ಹಂಪನಾ ಅವರ ಸಂಶೋಧನಾ ಲೇಖನಗಳ ಸಂಕಲನ ಗ್ರಂಥಗಳಾದ 'ಕಮ್ಮಟದ ಕಿಡಿಗಳು' ಮತ್ತು 'ಚಂದ್ರಕೊಡೆ' ಗ್ರಂಥಗಳು ಸಂಶೋಧನಾ ಕ್ಷೇತ್ರಕ್ಕೆ ಮಹತ್ವದ ಕೊಡುಗೆಗಳಾಗಿವೆ. ಈ ಸಂಪುಟಗಳಲ್ಲಿನ ಪ್ರತಿಯೊಂದು ಲೇಖನವೂ ಹಲವಾರು ಶಾಸನಗಳನ್ನು ಆಕರವಾಗಿ ಬಳಸಿಕೊಂಡು ರಚಿಸಲ್ಪಟ್ಟ ವಿದ್ವತ್ ಪ್ರಬಂಧಗಳಾಗಿವೆ. ಶಾಸನಶಾಸ್ತ್ರ, ಇತಿಹಾಸ, ಜೈನಶಾಸ್ತ್ರ, ಪ್ರಾಚೀನ ಸಾಹಿತ್ಯ ಹೀಗೆ ಬಹುಶಿಸ್ತೀಯ ಸಂಶೋಧನಾ ಮಾದರಿಗೆ ಹಂಪನಾ ಅವರ ಸಂಶೋಧನೆಯು ಶ್ರೇಷ್ಠ ನಿದರ್ಶನವೆಂದು ಹೇಳಬಹುದು.

ಸಂಶೋಧನ ಕ್ಷೇತ್ರದಲ್ಲಿ ಅಭೂತಪೂರ್ವ ಸಾಧನೆ ಮಾಡಿದ ಏಕೈಕ ಸಂಶೋಧಕಿ ಎಂದರೆ ಡಾ.ಕಮಲಾ ಹಂಪನಾ ಎಂದು ಹೇಳಬಹುದು. 'ಚಾವುಂಡರಾಯ ಪುರಾಣ'ವನ್ನು ಹಲವು ಹಸ್ತಪ್ರತಿಗಳು ಮತ್ತು ಮುದ್ರಿತ ಪ್ರತಿಯೊಂದರ ಸಹಾಯದಿಂದ ಸಂಪಾದಿಸುವುದರೊಂದಿಗೆ ಕಮಲಾ ಹಂಪನಾ ಅವರು ಗ್ರಂಥ ಸಂಪಾದನ ಕ್ಷೇತ್ರಕ್ಕೆ ದೊಡ್ಡ ಕೊಡುಗೆಯೊಂದನ್ನು ನೀಡಿದರು. ಶ್ರೀ ಕೆ.ಆರ್.ಶೇಷಗಿರಿಯವರೊಂದಿಗೆ ಸಿದ್ಧಪಡಿಸಲಾದ ಈ ಸಂಪುಟದ ಪ್ರಸ್ತಾವನೆಯು ಜೈನ ಸಾಹಿತ್ಯ ಪರಂಪರೆಯ ಬಗ್ಗೆ ಸಮಗ್ರವಾಗಿ ಮಾಹಿತಿ ನೀಡುತ್ತದೆ.

ಕಮಲಾ ಹಂಪನಾ ಅವರು ಸಂಪಾದಿಸಿದ ಶಾಂತಿನಾಥನ 'ಸುಕುಮಾರಚರಿತೆ ಸಂಗ್ರಹ'ದ ಪ್ರಸ್ತಾವನೆಯು ಶಾಂತಿನಾಥ ಕವಿಯ ಇತಿವೃತ್ತ ಹಾಗೂ ಸುಕುಮಾರ ಚರಿತ್ರೆಯ ಮೂಲಚೂಲಗಳ ಬಗ್ಗೆ ಮಹತ್ವದ ಸಂಗತಿಗಳನ್ನು ದಾಖಲಿಸಿದೆ. ಕಮಲಾ ಹಂಪನಾ ಅವರ 'ಬದ್ಧವಣ' ಕೃತಿಯು ಜೈನ ಸಾಹಿತ್ಯ ಸಂಸ್ಕೃತಿಗೆ ಸಂಬಂಧಿಸಿದಂತೆ ರಚಿಸಿರುವ ಸಂಶೋಧನಾ ಪ್ರಬಂಧಗಳ ಸಂಕಲನ ಗ್ರಂಥವಾಗಿದೆ. ಜೈನಮುನಿಗಳು, ಕಂತಿಯರು, ಶ್ರಾವಕ ಶ್ರಾವಕಿಯರು, ರಾಜರಾಣಿಯರು, ಮಾಂಡಲಿಕರು, ದಂಡನಾಯಕರು ಮುಂತಾದವರನ್ನು ಕುರಿತಂತೆ ಕನ್ನಡ ನಾಡಿನ ಶಾಸನಗಳಲ್ಲಿ ಉಪಲಬ್ಧವಾಗಿರುವ ಮಾಹಿತಿಗಳನ್ನು ಆಧರಿಸಿ ರಚಿಸಿದ ಸಂಪ್ರಬಂಧಗಳನ್ನು ಈ ಸಂಪುಟದಲ್ಲಿ ಸಂಗ್ರಹಿಸಲಾಗಿದೆ. ಇವುಗಳನ್ನು ರಚಿಸಲು ಶಾಸನಗಳನ್ನು ಮೂಲ ಆಕರವಾಗಿ ಬಳಸಿಕೊಳ್ಳುವುದರೊಂದಿಗೆ ಸಾಹಿತ್ಯ ಕೃತಿಗಳನ್ನು ಮತ್ತು ಇತಿಹಾಸ ಗ್ರಂಥಗಳನ್ನು ಆನುಷಂಗಿಕ ಆಕರವಾಗಿ ಬಳಸಿಕೊಂಡಿರುವುದು ಗಮನಾರ್ಹ.

'ಬಿತ್ತರ' ಕೃತಿಯೂ ಸಹಾ ಜೈನ ಸಾಹಿತ್ಯ ಸಂಸ್ಕೃತಿಯನ್ನು ಕುರಿತ ಸಂಪ್ರಬಂಧಗಳ ಸಂಕಲನವಾಗಿದೆ. ಈ ಸಂಪುಟದಲ್ಲಿ ರೋಣದ ಬಸದಿ, ಕರ್ನಾಟಕದ ಅರಸು ಮನೆತನಗಳು ಮತ್ತು ಜೈನ ಧರ್ಮ, ಕರ್ಮಸಿದ್ಧಾಂತ, ಅನೇಕಾಂತವಾದ, ಭವಾವಳಿ, ಜೈನಭಾರತಗಳು ಮುಂತಾದ ಮಹತ್ವದ ಸಂಶೋಧನಾ ಪ್ರಬಂಧಗಳಿವೆ. ಶಾಸನಗಳು, ಇತಿಹಾಸ, ಸಾಹಿತ್ಯ ಕೃತಿಗಳು ಮತ್ತು ಜೈನಶಾಸ್ತ್ರ ಸಾಹಿತ್ಯ ಕೃತಿಗಳನ್ನು ಆಕರಗಳನ್ನಾಗಿ ಬಳಸಿಕೊಂಡು ಇಲ್ಲಿಯ ಸಂಪ್ರಬಂಧಗಳನ್ನು ರಚಿಸಲಾಗಿದೆ.

'ಬೊಂಬಾಳ' ಸಂಪುಟದಲ್ಲಿಯೂ ಜೈನ ಸಾಹಿತ್ಯ ಹಾಗೂ ಜೈನ ಧರ್ಮವನ್ನು ಕುರಿತ ಸಂಪ್ರಬಂಧಗಳಿವೆ. ಮೂರನೆಯ ಮಂಗರಸ, ಕರ್ನಾಟಕದಲ್ಲಿ ಜೈನಧರ್ಮ, ಮಹಾವೀರ ಕಥಾಚಕ್ರ, ತಮಿಳುನಾಡಿನ ಜೈನ ಮಠಗಳು, ಪಂಚಲೋಹದ ಗೋಮಟೇಶ್ವರ ಪ್ರತಿಮೆಗಳು

ಮುಂತಾದ ಸಂಶೋಧನ ಪ್ರಬಂಧಗಳುಳ್ಳ ಈ ಸಂಪುಟದಲ್ಲಿನ ಲೇಖನಗಳನ್ನು ರಚಿಸಲು ಶಾಸನಗಳನ್ನು ಮೂಲ ಆಕರವಾಗಿ ಬಳಸಿಕೊಳ್ಳಲಾಗಿದೆ. ಈ ಲೇಖನಗಳಿಗೆ ಪ್ರಾಚೀನ ಕನ್ನಡ ಸಾಹಿತ್ಯ ಕೃತಿಗಳು, ಇತಿಹಾಸ ಗ್ರಂಥಗಳನ್ನು ಆನುಷಂಗಿಕ ಆಕರವಾಗಿ ಬಳಸಿಕೊಳ್ಳಲಾಗಿದೆ. ತಮಿಳುನಾಡಿನ ಜೈನ ಮಠಗಳು, ಶಾಂತಿನಾಥ ಬಸದಿಗಳು, ಪಂಚಲೋಹದ ಗೋಮಟೇಶ್ವರ ಪ್ರತಿಮೆಗಳನ್ನು ಕುರಿತ ಲೇಖನಗಳನ್ನು ರಚಿಸಲು ಕ್ಷೇತ್ರಕಾರ್ಯದಲ್ಲಿ ದೊರೆತಿರುವ ಮಾಹಿತಿಯನ್ನು ಸಹಾ ಬಳಸಿಕೊಂಡಿರುವುದನ್ನು ಗುರ್ತಿಸಬಹುದು.

ಕಮಲಾ ಹಂಪನಾ ಅವರ ಸಮಗ್ರ ಸಾಹಿತ್ಯ ಸಂಪುಟಗಳು ಇತ್ತೀಚೆಗೆ ಪ್ರಕಟವಾಗಿವೆ. ಅವುಗಳಲ್ಲಿ ಐದನೆಯ ಸಂಪುಟವಾದ 'ಭರಣಿ' ಎಂಬ ಸ್ತ್ರೀ ಸಂವೇದನೆಯ ಲೇಖನಗಳ ಸಂಪುಟದ ಮೂರನೆಯ ಭಾಗವಾದ 'ಬೆಕ್ಕಸ' ಎಂಬಲ್ಲಿನ ಸಂಪ್ರಬಂಧಗಳನ್ನು ನೋಡಿದರೆ ಎಂತಹವರೂ ಬೆಕ್ಕಸ ಬೆರಗಾಗುವಂತಹ ಲೇಖನಗಳಿವೆ. ರಾಷ್ಟ್ರಕೂಟರ ಕಾಲದ ಮಹಿಳಾ ಸಮಾಜ, ಮಹಿಳೆ ಮತ್ತು ಜೈನಧರ್ಮ, ಶಾಸನಗಳ ಬೆಳಕಿನಲ್ಲಿ ಅಭಿಲಷಿತಾರ್ಥ ಚಿಂತಾಮಣಿ, ಶಾಸನಗಳಲ್ಲಿ ಜೈನ ಮಹಿಳೆಯರು, ಕಂತಿಯರು, ಕನ್ನಡದ ಏಕೈಕ ಕವಯತ್ರಿ ನಾಗಲದೇವಿ, ಕರಾವಳಿ ಪ್ರದೇಶದ ಶಾಸನೋಕ್ತ ಮಹಿಳೆಯರು, ಪ್ರಾಚೀನ ಜೈನ ಸಾಧಕಿಯರು, ಮೈದಾಳದ ಪದ್ಮಾವತಿ ಕೆರೆ ಮುಂತಾದ ಮಹತ್ವದ ಸಂಶೋಧನಾ ಲೇಖನಗಳು ಈ ಭಾಗದಲ್ಲಿವೆ. ಇಲ್ಲಿರುವ ಎಲ್ಲ ಸಂಪ್ರಬಂಧಗಳಿಗೆ ಶಾಸನಗಳೇ ಮೂಲ ಆಕರಗಳಾಗಿರುವುದು ಗಮನಾರ್ಹ.

ಕಮಲಾ ಹಂಪನಾ ಅವರ ಸಮಗ್ರ ಸಾಹಿತ್ಯ ಸಂಪುಟ 'ಬತೇರಿ'ಯಲ್ಲಿ ವಿಮರ್ಶಾತ್ಮಕ ಲೇಖನಗಳ ಸಂಪುಟದಲ್ಲಿನ ವಿಮರ್ಶಾ ಲೇಖನಗಳಲ್ಲಿ ಬಹುಪಾಲು ಸಂಶೋಧನಾ ಲೇಖನಗಳ ಮೌಲ್ಯವನ್ನು ಹೊಂದಿರುವುದನ್ನು ಗುರ್ತಿಸಬಹುದು. ಕುಮಾರವ್ಯಾಸಭಾರತ ಮತ್ತು ಜೈನಭಾರತಗಳು, ಹೈದರಾಬಾದ್ ಕರ್ನಾಟಕದ ಜೈನ ಸಾಹಿತ್ಯ, ಮೂರು ಜೈನ ಪುರಾಣಗಳು, ಪಾಯಣ್ಣ ವ್ರತಿ, ನಯಸೇನ, ವಡ್ಡಾರಾಧನೆ, ಪಂಪ ಕವಿಯ ಪ್ರಭಾವ, ಕನ್ನಡ ಸಾಹಿತ್ಯದಲ್ಲಿ ಬಾಹುಬಲಿಯ ಪರಿಕಲ್ಪನೆ, ನೇಮಿಚಂದ್ರ, ಕನಕದಾಸರ ಕೃತಿಗಳಲ್ಲಿ ಬಂಡಾಯ ಪ್ರಜ್ಞೆ, ರತ್ನಾಕರವರ್ಣಿಯ ಒಳಹೊರಗುಗಳು ಮುಂತಾದ ಸಂಪ್ರಬಂಧಗಳನ್ನು ರಚಿಸಲು ಕನ್ನಡ ಸಾಹಿತ್ಯವನ್ನು ಮೂಲ ಆಕರವಾಗಿ ಬಳಸಿಕೊಳ್ಳಲಾಗಿದೆ.

'ಮಹಾಮಂಡಲೇಶ್ವರಿ ರಾಣಿ ಚೆನ್ನಭೈರಾದೇವಿ ಮತ್ತು ಇತರ ರಾಣಿಯರು' ಕೃತಿಯು ಒಂದು ವೈಶಿಷ್ಟ್ಯಪೂರ್ಣವಾದ ಸಂಶೋಧನಾ ಗ್ರಂಥವೆಂದು ಹೇಳಬಹುದು. ಕರ್ನಾಟಕದ ಪಶ್ಚಿಮ ಕರಾವಳಿ ಪ್ರದೇಶದ ಅರಸು ಮನೆತನಗಳ ರಾಣಿಯರನ್ನು ಕುರಿತ ಈ ಗ್ರಂಥದಲ್ಲಿ ಕರಾವಳಿ ಪ್ರದೇಶದ ರಾಜಕೀಯ ಚರಿತ್ರೆ ಮತ್ತು ಸಾಂಸ್ಕೃತಿಕ ಚರಿತ್ರೆಯ ಬಗ್ಗೆ ಸಮಗ್ರವಾಗಿ ವಿಶ್ಲೇಷಿಸಲಾಗಿದೆ. ಗೇರುಸೊಪ್ಪೆಯ ಇತಿಹಾಸ, ನಾಗಲದೇವಿ, ವೀರಾದೇವಿ, ಪದುಮಲದೇವಿ, ಚೆನ್ನಾದೇವಿ, ಚೆನ್ನಾಭೈರಾದೇವಿ, ಅಬ್ಬಕ್ಕದೇವಿ, ನಗಿರೆ ರಾಜ್ಯದ ಇತಿಹಾಸ ಹಾಗೂ ಹಾಡುವಳ್ಳಿಯ ಇತಿಹಾಸವನ್ನು ಸಹಾ ಈ ಕೃತಿಯಲ್ಲಿ ವಿವರಿಸಲಾಗಿದೆ. ಶಾಸನ ಸಾಹಿತ್ಯ ಹಾಗೂ ವಿದೇಶಿ ಪ್ರವಾಸಿಗಳ ಪ್ರವಾಸ ಸಾಹಿತ್ಯವನ್ನು ಮೂಲ ಆಕರವಾಗಿ ಬಳಸಿಕೊಂಡು ಈ ಸಂಶೋಧನ ಗ್ರಂಥವನ್ನು ರಚಿಸಲಾಗಿದೆ. ಬೇರೆ ವಿದ್ವಾಂಸರು ರಚಿಸಿರುವ ಸಂಶೋಧನ ಗ್ರಂಥಗಳು, ಇತಿಹಾಸ ಗ್ರಂಥಗಳು ಹಾಗೂ ಸಾಹಿತ್ಯ ಕೃತಿಗಳನ್ನು ಆನುಷಂಗಿಕ ಆಕರವಾಗಿ ಬಳಸಿಕೊಂಡಿರುವುದು ಗಮನಾರ್ಹ.

ಕಮಲಾ ಹಂಪನಾ ಅವರು ರಚಿಸಿರುವ 'ಆಚಾರ್ಯ ಸೋಮದೇವಸೂರಿಯ ನೀತಿವಾಕ್ಯಾಮೃತ' ಕೃತಿಯು 'ಸಂಸ್ಕೃತ ನೀತಿವಾಕ್ಯಾಮೃತ'ದ ಕನ್ನಡದ ಭಾವಾನುವಾದ. ಈ ಪುಸ್ತಕದ ಪ್ರಸ್ತಾವನೆಯಲ್ಲಿ ಸೋಮದೇವ ಸೂರಿಯ ಇತಿವೃತ್ತದ ಬಗ್ಗೆ ಅಭೂತಪೂರ್ವ ಮಾಹಿತಿಗಳನ್ನು ನೀಡಲಾಗಿದೆ. ಸೋಮದೇವ ಸೂರಿಯ ಯಶಸ್ತಿಲಕ ಚಂಪೂ, ನೀತಿವಾಕ್ಯಾಮೃತ, ಸೋಮದೇವಸೂರಿಯ ನಿಷಧಿ ಶಾಸನಗಳನ್ನು ಕುರಿತು ಸಮಗ್ರವಾಗಿ ಮಾಹಿತಿಯನ್ನು ಪ್ರಸ್ತಾವನೆಯಲ್ಲಿ ನೀಡಿರುವುದನ್ನು ಗುರುತಿಸಬಹುದು.

ಶಾಸನಶಾಸ್ತ್ರ, ಜಾನಪದ, ಇತಿಹಾಸ, ಸಂಸ್ಕೃತಿ, ಸಾಹಿತ್ಯ ಹೀಗೆ ಹಲವು ಕ್ಷೇತ್ರಗಳಲ್ಲಿ ಮಹತ್ವದ ಸಂಶೋಧನೆ ಮಾಡಿರುವ ಸಮಕಾಲೀನ ಸಂದರ್ಭದ ಅತ್ಯಂತ ಶ್ರೇಷ್ಠ ಸಂಶೋಧಕರಲ್ಲೊಬ್ಬರಾದ ಡಾ.ಎಂ.ಎಂ.ಕಲಬುರ್ಗಿ ಅವರು 'ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ' ಎಂಬ ವಿಷಯವನ್ನು ಕುರಿತು ಸಂಶೋಧನೆ ಮಾಡಿ ಪಿಎಚ್.ಡಿ. ಪದವಿಯನ್ನು ಪಡೆದರು. ಈ ಮಹಾಪ್ರಬಂಧವು ಪಂಪಪೂರ್ವಯುಗದ ಎಲ್ಲ ಕನ್ನಡ ಶಾಸನಗಳನ್ನು, ಶಾಸನ ಕವಿಗಳನ್ನು ಹಾಗೂ ಕಾವ್ಯಾತ್ಮಕ ಅಂಶಗಳುಳ್ಳ ಶಾಸನಗಳನ್ನು ಹಾಗೂ ಕನ್ನಡ ಸಾಹಿತ್ಯವನ್ನು ಕುರಿತ ತಲಸ್ಪರ್ಶಿ ಅಧ್ಯಯನವಾಗಿದೆಯೆಂದು ಹೇಳಬಹುದು.

ಕಲ್ಬುರ್ಗಿಯವರು 'ಬಸವಣ್ಣನವರನ್ನು ಕುರಿತ ಶಾಸನಗಳು', 'ಶಾಸನಗಳಲ್ಲಿ ಶಿವಶರಣರು', 'ಶಾಸನ ವ್ಯಾಸಂಗ', ಮಾರ್ಗ ಸಂಪುಟ ೧, ೨, ೩, ಮತ್ತು ೪, 'ಸಮಾಧಿ ಬಲಿದಾನ ವೀರಮರಣ ಸ್ಮಾರಕಗಳು' ಮುಂತಾದ ಹಲವಾರು ಮಹತ್ವದ ಸಂಶೋಧನಾ ಗ್ರಂಥಗಳನ್ನು ಪ್ರಕಟಿಸಿದ್ದಾರೆ. ಶಾಸನ ವ್ಯಾಸಂಗ ಸಂಪುಟ ಒಂದರಲ್ಲಿ ಒಂದನೇ ಗುಣವರ್ಮ, ಪಂಪ, ರನ್ನ, ನಾಗಚಂದ್ರ, ಮಲ್ಲಿಕಾರ್ಜುನ, ಚಂದ್ರರಾಜ ಮುಂತಾದ ಸುಪ್ರಸಿದ್ಧ ಕವಿಗಳ ಕಾವ್ಯಗಳಲ್ಲಿನ ಪದ್ಯಗಳು ಶಾಸನಗಳಲ್ಲಿ ಉಲ್ಲೇಖಗೊಂಡಿರುವುದನ್ನು ಗುರ್ತಿಸಿದ್ದಾರೆ. ಅತ್ತಿಮಬ್ಬೆಯ ಲಕ್ಕುಂಡಿ ಶಾಸನದ ಪ್ರಭಾವವು ಶ್ರವಣಬೆಳಗೊಳದ ಸಾವಿಯಬ್ಬೆಯ ವೀರಗಲ್ಲಿನ ಮೇಲೆ ಆಗಿರುವುದನ್ನು ಗುರ್ತಿಸಿದ್ದಾರೆ. ಶಾಸನ ವ್ಯಾಸಂಗ ಸಂಪುಟ ಎರಡರಲ್ಲಿ ನೆಲುವಿಗೆ ಶಾಂತಯ್ಯ, ಕೊಂಡಗುಳಿ ಕೇಶಿರಾಜ, ಉಳಿಯುಮೇಶ್ವರ, ಚಿಕ್ಕಯ್ಯ ಮುಂತಾದ ಶಿವಶರಣರನ್ನು ಕುರಿತ ಶಾಸನಗಳನ್ನು ಗುರುತಿಸಿದ್ದಾರೆ. ಕಪ್ಪೆ ಅರಭಟ್ಟನ್, ಕವಡೆಯಬೊಪ್ಪ, ಪುಲಿಗೆರೆಯ ವೀರಶೈವ ಪರಂಪರೆ, ಪುಲಿಗೆರೆಯ ಸೋಮನಾಥನ ಪ್ರತಿಷ್ಠಾಪನೆಯ ಕಾಲ ಮುಂತಾದ ಲೇಖನಗಳಿವೆ.

'ಸಮಾಧಿ ಬಲಿದಾನ ವೀರಮರಣ ಸ್ಮಾರಕಗಳು' ಕೃತಿಯಲ್ಲಿ ಪ್ರಾಚೀನ ಕರ್ನಾಟಕದಲ್ಲಿ ಅಸ್ತಿತ್ವದಲ್ಲಿದ್ದ ಲೌಕಿಕ ಮರಣ, ಧಾರ್ಮಿಕ ಮರಣಗಳ ಪ್ರಭೇದಗಳಾದ ಮಾಸ್ತಿ, ವೇಳೆವಾಳಿ, ಲೆಂಕವಾಳಿ, ಕೀಳ್ಗುಂಟೆ, ಸಿಡಿದಲೆ, ಗರುಡ, ಸಲ್ಲೇಖನ ಮುಂತಾದ ಆತ್ಮ ಬಲಿದಾನ ಸ್ಮಾರಕಗಳ ಬಗ್ಗೆ ಸಮಗ್ರವಾಗಿ ವಿವರಿಸಿದ್ದಾರೆ. ಮಹಾರಾಷ್ಟ್ರದ ಕನ್ನಡ ಶಾಸನಗಳು ಕೃತಿಯಲ್ಲಿ ಕರ್ನಾಟಕದ ಉತ್ತರ ಗಡಿಗೆ ಹೊಂದಿಕೊಂಡಂತಿರುವ ಮಹಾರಾಷ್ಟ್ರದ ನಾಂದೇಡ, ಉಸ್ಮನಾಬಾದ್, ಲಾತೂರ್, ಸೊಲ್ಲಾಪುರ, ಸಾಂಗ್ಲಿ, ಕೊಲ್ಲಾಪುರ ಜಿಲ್ಲೆಗಳಲ್ಲಿ ದೊರೆತಿರುವ ಕನ್ನಡ ಶಾಸನಗಳ ಬಗ್ಗೆ ಮಹತ್ವದ ಮಾಹಿತಿಯನ್ನು ನೀಡಿದ್ದಾರೆ.

ಮಾರ್ಗ ಸಂಪುಟ ಒಂದು, ಎರಡು, ಮೂರು ಮತ್ತು ನಾಲ್ಕು ಈ ಎಲ್ಲ ಸಂಪುಟಗಳಲ್ಲಿ ಪ್ರತಿಯೊಂದರಲ್ಲಿಯೂ ತಲಾ ನೂರು ಸಂಶೋಧನಾ ಲೇಖನಗಳಿವೆ. ಪಂಪನ ಧರ್ಮಪುರ, ಪಂಪನ ತಮ್ಮ ಜಿನವಲ್ಲಭ, ರಾಷ್ಟ್ರಕೂಟ ಶಂಕರ ಗಂಡ, ಬಸವಣ್ಣನವರ ವಂಶಜರ ಕವಿಳಾಸಪುರ, ಬಸವಪೂರ್ವ–ಬಸವೋತ್ತರ ಕಾಲದ ಶೈವ ಸ್ವರೂಪ, ಕೊಲ್ಲಿಪಾಕೆಯ ಕನ್ನಡ

ಶಾಸನಗಳು, ಶಾಸನಗಳಲ್ಲಿ ಬಾದುಬ್ಬೆ, ಪಂಪನ ವಂಶಜರು, ಕಟ್ಟುತ್ತ ಬಂದ ಕಲ್ಯಾಣಗಳು, ಚಾಗದ ಕಂಬ ಬೀರದ ಶಾಸನ ಮುಂತಾದ ಮಹತ್ವದ ಸಂಶೋಧನ ಲೇಖನಗಳಿವೆ.

ಒಟ್ಟಾರೆ ಕಲ್ಬುರ್ಗಿಯವರ ಸಂಶೋಧನೆಯನ್ನು ಆಕರ ಸಂಶೋಧನೆ, ವಿಶ್ಲೇಷಣಾತ್ಮಕ ಸಂಶೋಧನೆ ಮತ್ತು ವ್ಯಾಖ್ಯಾನಾತ್ಮಕ ಸಂಶೋಧನೆ ಎಂದು ಮೂರು ಭಾಗವಾಗಿ ವಿಂಗಡಿಸಬಹುದು. ಕಲ್ಬುರ್ಗಿಯವರ ಕೃಷ್ಣದೇವರಾಯನು ಕನ್ನಡ ದ್ರೋಹಿ, ಅತ್ತಿಮಬ್ಬೆ ಹಾಗೂ ಚಾವುಂಡರಾಯರು ಜೈನರಲ್ಲ ಜೈನ ಒಕ್ಕಲುಗಳು ಮುಂತಾದ ಕೆಲವು ಸಂಶೋಧನೆಗಳು ಸಂಶೋಧಕರಲ್ಲಿ ಚರಿತ್ರಕಾರರಲ್ಲಿ ಹಲವಾರು ಚರ್ಚೆಗಳು ಹಾಗೂ ವಾಗ್ವಾದಗಳನ್ನು ಹುಟ್ಟುಹಾಕಿವೆ. ಈ ಬಗೆಗಿನ ಚರ್ಚೆಗಳು ಇಂದಿಗೂ ನಡೆಯುತ್ತಲೇ ಇವೆ ಎನ್ನುವುದು ಗಮನಾರ್ಹ.

ಗ್ರಂಥ ಸಂಪಾದನಾ ಕ್ಷೇತ್ರಕ್ಕೆ ತಮ್ಮ ಜೀವಮಾನವನ್ನೇ ಮುಡುಪಾಗಿಟ್ಟಂತೆ ದುಡಿಯುತ್ತಿರುವ ಶ್ರೀ ಬಿ.ಎಸ್.ಸಣ್ಣಯ್ಯನವರು ಈ ಕ್ಷೇತ್ರಕ್ಕೆ ಕೊಟ್ಟಿರುವ ಕೊಡುಗೆ ಅನರ್ಘ್ಯ-ವಾದದ್ದು. ನೇಮಿಚಂದ್ರನ 'ನೇಮಿನಾಥ ಪುರಾಣ'ವನ್ನು ಸಂಪಾದಿಸುವುದರೊಂದಿಗೆ ಗ್ರಂಥಸಂಪಾದನಾ ಕ್ಷೇತ್ರಕ್ಕೆ ಸಣ್ಣಯ್ಯನವರ ಕೊಡುಗೆ ಆರಂಭವಾಯಿತು. ನಾಲ್ಕು ಹಸ್ತಪ್ರತಿಗಳು ಮತ್ತು ಒಂದು ಮುದ್ರಿತ ಪ್ರತಿಯ ಸಹಾಯದಿಂದ 'ನೇಮಿನಾಥ ಪುರಾಣ'ವನ್ನು ಸಣ್ಣಯ್ಯನವರು ಸಂಪಾದಿಸಿದರು. ಮಹಾಬಲನ 'ನೇಮಿನಾಥ ಪುರಾಣ'ವನ್ನು ಮೂರು ಹಸ್ತಪ್ರತಿಗಳನ್ನು ಬಳಸಿ ಸಂಪಾದಿಸಿದರು. ಬಂಧುವರ್ಮನ 'ನೇಮಿನಾಥ ಪುರಾಣ'ವನ್ನು (ಹರಿವಂಶಾಭ್ಯುದಯ) ಏಕೈಕ ಹಸ್ತಪ್ರತಿಯನ್ನು ಆಧರಿಸಿ ಸಂಪಾದಿಸಿದರು. ಬಂಧುವರ್ಮನ 'ಜೀವಸಂಬೋಧನೆ'ಯನ್ನು ನಾಲ್ಕು ಹಸ್ತಪ್ರತಿಗಳು ಮತ್ತು ಒಂದು ಮುದ್ರಿತ ಪ್ರತಿಯನ್ನು ಬಳಸಿಕೊಂಡು ಸಂಪಾದಿಸಿದರು. ಬಂಧುವರ್ಮನ 'ಸತಿಧರ್ಮಸಾರ'ವನ್ನು ಏಕೈಕ ಹಸ್ತಪ್ರತಿಯನ್ನು ಆಕರವಾಗಿ ಬಳಸಿಕೊಂಡು ಸಂಪಾದಿಸಿದರು.

ಮೂಡಬಿದರೆಯ ಜೈನಮಠದ ಹಸ್ತಪ್ರತಿ ಭಂಡಾರದಲ್ಲಿ ಯಾರ ದೃಷ್ಟಿಗೂ ಗೋಚರವಾಗದೆ ಅಜ್ಞಾತವಾಗಿದ್ದ ಇಮ್ಮಡಿ ನಾಗವರ್ಮನ 'ವರ್ಧಮಾನ ಪುರಾಣ'ದ ಹಸ್ತಪ್ರತಿಯನ್ನು ಪತ್ತೆಹಚ್ಚಿ, ಆ ಏಕೈಕ ಹಸ್ತಪ್ರತಿಯನ್ನು ಆಕರವಾಗಿ ಬಳಸಿಕೊಂಡು ವರ್ಧಮಾನ ಪುರಾಣವನ್ನು ಸಣ್ಣಯ್ಯನವರು ವಿದ್ವತ್ಪೂರ್ಣವಾಗಿ ಸಂಪಾದಿಸಿದ್ದಾರೆ. ಏಕೈಕ ಹಸ್ತಪ್ರತಿಯನ್ನು ಸಂಪಾದನಾ ಕಾರ್ಯಕ್ಕೆ ಬಳಸಿಕೊಂಡದ್ದರಿಂದ ಆ ಹಸ್ತಪ್ರತಿಯಲ್ಲಿನ ತ್ರುಟಿತ ಭಾಗಗಳು ಹಾಗೂ ಲಿಪಿಕಾರ ಸ್ಖಾಲಿತ್ಯಗಳನ್ನು ಸಂಪೂರ್ಣವಾಗಿ ತಿದ್ದುಪಡಿ ಮಾಡಿ ಸಂಪಾದಿಸುವಲ್ಲಿ ಸಣ್ಣಯ್ಯನವರ ಶ್ರಮವನ್ನು ಮತ್ತು ಪಾಂಡಿತ್ಯವನ್ನು ನಾವು ಗಮನಿಸಬಹುದು.

ಸಣ್ಣಯ್ಯನವರು ರನ್ನನ 'ಸಾಹಸಭೀಮವಿಜಯ', 'ಅಜಿತಪುರಾಣ', ಲಕ್ಷ್ಮೀಶನ 'ಜೈಮಿನಿ ಭಾರತ'ಗಳನ್ನು ಡಾ.ರಾಮೇಗೌಡ ಅವರೊಡನೆ ಸಂಪಾದಿಸಿದ್ದಾರೆ. ಈ ಕೃತಿಗಳ ಸಂಪಾದನೆ ಈ ಹಿಂದಿನ ಪರಿಷ್ಕರಣಗಳಿಗಿಂತಲೂ ಉತ್ತಮವಾಗಿರುವುದನ್ನು ಗುರುತಿಸಬಹುದು. ಸಣ್ಣಯ್ಯನವರು ಮೋಳಿಗೆಮಾರಯ್ಯನ ವಚನಗಳ ಪರಿಷ್ಕರಣೆಗೆ ಹತ್ತು ಹಸ್ತಪ್ರತಿಗಳನ್ನು ಆಕರವಾಗಿ ಬಳಸಿಕೊಂಡಿರುವುದು ಗಮನಾರ್ಹ. ಮಧುವಯ್ಯಗಳ ವಚನಗಳನ್ನು ಒಂಬತ್ತು ಹಸ್ತಪ್ರತಿಗಳ ನೆರವಿನಿಂದ ಸಂಪಾದಿಸಿದ್ದಾರೆ. ಕುಮಾರವಾಲ್ಮೀಕಿಯ 'ತೊರವೆ ರಾಮಾಯಣ'ವನ್ನು ಎಂಟು ಹಸ್ತಪ್ರತಿಗಳ ನೆರವಿನಿಂದ ಸಂಪಾದಿಸಿದ್ದಾರೆ.

ಸಣ್ಣಯ್ಯನವರು 'ಸೊಬಗಿನ ಸೋನೆ', 'ಮದನಮೋಹಿನಿಯ ಕಥೆ', 'ವರ್ಧಮಾನ ಚರಿತೆ', 'ವರ್ಧಮಾನ ಪುರಾಣ', 'ಬಸವ ಶಿಖಾಮಣಿ', 'ಭುಜಬಲಿ ಚರಿತೆ' ಮುಂತಾದ ಸಾಂಗತ್ಯ ಕೃತಿಗಳನ್ನು ಸಂಪಾದಿಸಿದ್ದಾರೆ. ಹಳಗನ್ನಡ ಗದ್ಯ ಕೃತಿಯಾದ ದೇವಚಂದ್ರ ಕವಿ ಕೃತ 'ರಾಜಾವಳಿ ಕಥಾಸಾರ'ವನ್ನು ಮೂರು ಹಸ್ತಪ್ರತಿಗಳ ಸಹಾಯದಿಂದ ಸಣ್ಣಯ್ಯನವರು ಸಂಪಾದಿಸಿದರು. ಏಕೈಕ ಹಸ್ತಪ್ರತಿಯ ಸಹಾಯದಿಂದ 'ನೀತಿಸಾರೋದಯ' ಕೃತಿಯನ್ನು ಸಂಪಾದಿಸಿದರು. ಆಯುರ್ವೇದ ವೈದ್ಯಶಾಸ್ತ್ರ ಗ್ರಂಥವಾದ 'ಸಕಲ ವೈದ್ಯ ಸಂಹಿತಾ ಸಾರಾರ್ಣವ' ಕೃತಿಯನ್ನು ಮೂರು ಹಸ್ತಪ್ರತಿಗಳನ್ನು ಆಕರವಾಗಿ ಬಳಸಿಕೊಳ್ಳುವುದರೊಂದಿಗೆ ಪರಿಣತರಾದ ಆಯುರ್ವೇದ ವೈದ್ಯರ ನೆರವಿನೊಂದಿಗೆ ಗದ್ಯಾನುವಾದ ಸಹಿತ ಪ್ರಕಟಿಸಿದ್ದಾರೆ.

ನೇಮಿಚಂದ್ರ ಸಿದ್ಧಾಂತ ಚಕ್ರವರ್ತಿಗಳು ರಚಿಸಿರುವ 'ಗೊಮ್ಮಟಸಾರ'ವನ್ನು ಕೇಶವಣ್ಣನ ಕನ್ನಡ ಟೀಕು ಸಹಿತ ಸಂಪಾದಿಸಿ ಪ್ರಕಟಿಸಿದ್ದಾರೆ. ಮಹಲಿಂಗರಂಗನ 'ಅನುಭವಾಮೃತ'ವನ್ನು ಗದ್ಯಾನುವಾದ ಸಹಿತ ಸಂಪಾದಿಸಿ ಪ್ರಕಟಿಸಿದ್ದಾರೆ. ಬೊಮ್ಮಯ್ಯನ 'ವೈದ್ಯಕಂದ', ಆಯುರ್ವೇದ ನಿಘಂಟಾದ 'ಔಷಧಿಕೋಶ', ಒಂದನೇ ಮಂಗರಾಜನ 'ಖಗೇಂದ್ರಮಣಿ ದರ್ಪಣ' ಮುಂತಾದ ವೈದ್ಯಶಾಸ್ತ್ರ ಗ್ರಂಥಗಳನ್ನು ಸಹಾ ಗದ್ಯಾನುವಾದ ಸಹಿತ ಸಂಪಾದಿಸಿ ಸಣ್ಣಯ್ಯನವರು ಪ್ರಕಟಿಸಿದ್ದಾರೆ.

ತಾಳೆಗರಿ ಹಸ್ತಪ್ರತಿಗಳು ಮತ್ತು ಕಾಗದದ ಹಸ್ತಪ್ರತಿಗಳು ಹಾಗೂ ಕೆಲವೊಮ್ಮೆ ಪ್ರಕಟಿತ ಗ್ರಂಥಗಳನ್ನು ಸಹಾ ತಮ್ಮ ಸಂಪಾದನಾ ಕಾರ್ಯಕ್ಕೆ, ಸಂಶೋಧನೆಗೆ ಮೂಲ ಆಕರವಾಗಿ ಬಳಸಿಕೊಂಡು ಸಣ್ಣಯ್ಯನವರು ಅಮೂಲ್ಯ ಸಾಹಿತ್ಯ ಕೃತಿಗಳನ್ನು, ಆಯುರ್ವೇದ ಶಾಸ್ತ್ರ ಗ್ರಂಥಗಳನ್ನು ಸಂಪಾದಿಸಿ ಪ್ರಕಟಿಸಿದ್ದಾರೆ. ದೇಶದಾದ್ಯಂತ ಸ್ವತಃ ತಾವೇ ಕ್ಷೇತ್ರಕಾರ್ಯ ಮಾಡಿ ಹಸ್ತಪ್ರತಿಗಳನ್ನು ಹಲವಾರು ಖಾಸಗಿ ಭಂಡಾರಗಳಲ್ಲಿ, ಮಠಗಳ ಹಸ್ತಪ್ರತಿ ಭಂಡಾರಗಳಲ್ಲಿ ಕಷ್ಟಪಟ್ಟು ಪರಿಶೋಧಿಸಿದ್ದಾರೆ. ಅವುಗಳನ್ನು ಆಕರವಾಗಿ ಬಳಸಿಕೊಂಡು ಸಂಶೋಧನೆ ಮಾಡಿದ್ದಾರೆಂಬುದು ಗಮನಾರ್ಹ.

ಹಸ್ತಪ್ರತಿಶಾಸ್ತ್ರ, ಗ್ರಂಥಸಂಪಾದನೆ, ವೀರಶೈವ ಸಾಹಿತ್ಯ ಮುಂತಾದವುಗಳನ್ನು ಕುರಿತು ಮಹತ್ವದ ಸಂಶೋಧನೆ ಮಾಡಿದ ಎಸ್.ಶಿವಣ್ಣ ಅವರ ಕೊಡುಗೆ ಮಹತ್ವದ್ದಾಗಿದೆ. ಕನ್ನಡ ಸಾಹಿತ್ಯ ಚರಿತ್ರೆಯ ಪುನಾರಚನೆಯ ಸಂದರ್ಭದಲ್ಲಿ ಶಿವಣ್ಣ ಅವರ ಸಂಶೋಧನೆಗಳನ್ನು ಉಲ್ಲೇಖಿಸಲೇಬೇಕಾದ ಅನಿವಾರ್ಯತೆ ಇರುವುದು ಗಮನಾರ್ಹ. ಶಿವಣ್ಣನವರು ರಚಿಸಿರುವ 'ಕರ್ನಾಟಕ ಕವಿಚರಿತೆಯ ಅನುಕ್ತ ಕೃತಿ ಸೂಚಿ'ಯಲ್ಲಿ ಆರ್.ನರಸಿಂಹಾಚಾರ್ಯರ 'ಕರ್ನಾಟಕ ಕವಿಚರಿತೆಯ ಸಂಪುಟ'ಗಳಲ್ಲಿ ಉಲ್ಲೇಖಗೊಂಡಿರದ ಸುಮಾರು ೨೭೭೯ ಕೃತಿಗಳನ್ನು ಮೊತ್ತಮೊದಲ ಬಾರಿಗೆ ಪರಿಚಯಿಸಿದ್ದಾರೆ. ಗದುಗಿನ ತೋಂಟದಾರ್ಯ ಮಠದ 'ಹಸ್ತಪ್ರತಿ ಸೂಚಿ, ಸಂಪುಟ–೧'ರಲ್ಲಿ ೧೩೯೭ ಕೃತಿಗಳನ್ನು ಪರಿಚಯಿಸಿದ್ದಾರೆ. 'ವೀರಶೈವ ಅಪ್ರಕಟಿತ ಗ್ರಂಥ ಸೂಚಿ'ಯಲ್ಲಿ ಕ್ರಿ.ಶ.೧೯೦೦ರವರೆಗೆ ರಚಿತವಾದ ೧೭೭೩ ಕೃತಿಗಳನ್ನು ಪರಿಚಯಿಸಿದ್ದಾರೆ. ಚಿತ್ರದುರ್ಗದ ಬೃಹನ್ಮಠದ 'ಹಸ್ತಪ್ರತಿ ಸೂಚಿ' ಸಂಪುಟದಲ್ಲಿ ೩೬೦೦ ಕೃತಿಗಳನ್ನು ಪರಿಚಯಿಸಿದ್ದಾರೆ. ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರ ಹಾಗೂ ಕನ್ನಡ ಸಾಹಿತ್ಯ ಪರಿಷತ್ತಿನ ಹಸ್ತಪ್ರತಿ ಭಂಡಾರದಲ್ಲಿನ ಹಸ್ತಪ್ರತಿ ಸೂಚಿ ಸಂಪುಟವನ್ನೂ ಸಹ ಶಿವಣ್ಣನವರು ರಚಿಸಿದ್ದಾರೆ. ಈ ಎಲ್ಲವೂ ಹಸ್ತಪ್ರತಿಗಳ ವಿವರಣಾತ್ಮಕ ಸೂಚಿ ಸಂಪುಟಗಳಾಗಿವೆ. ಒಟ್ಟಾರೆ ಎಸ್.ಶಿವಣ್ಣನವರು ರಚಿಸಿರುವ ಹಸ್ತಪ್ರತಿ ಸೂಚಿ

ಸಂಪುಟಗಳಲ್ಲಿ ಉಲ್ಲೇಖಿತವಾದ ಕೃತಿಗಳ ಸಂಖ್ಯೆ ಸುಮಾರು ಹದಿನೈದು ಸಾವಿರಕ್ಕಿಂತಲೂ ಹೆಚ್ಚು ಎಂಬುದು ಗಮನಾರ್ಹ ಅಂಶ.

ಶಿವಣ್ಣನವರು ಮುರಿಗೆ ಶಾಂತವೀರಸ್ವಾಮಿಗಳ ಕೃತಿಗಳು, ಯತಿ ಬಸವಲಿಂಗೇಶಕೃತ ತೋಂಟದ ಸಿದ್ದೇಶ್ವರ ಸಾಂಗತ್ಯ ಮುಂತಾದ ಕೃತಿಗಳನ್ನು ಸಂಪಾದಿಸಿ ಪ್ರಕಟಿಸಿದ್ದಾರೆ. ಶಿವಣ್ಣನವರು ಸಂಪಾದಿಸಿದ 'ಸಂಕೀರ್ಣ ವಚನ ಸಂಪುಟ-೬'ರಲ್ಲಿ ಅನೇಕ ಅಪ್ರಕಟಿತ ವಚನಗಳನ್ನು ಮೊತ್ತ ಮೊದಲ ಬಾರಿಗೆ ಪರಿಶೋಧಿಸಿ ಪ್ರಕಟಿಸಲಾಗಿದೆ. 'ಹೊಸ ವಚನಗಳು' ಎಂಬ ಕೃತಿಯಲ್ಲಿ ಅಲ್ಲಮನ ೧೦, ಬಸವಣ್ಣನ ೧೫, ಚನ್ನಬಸವಣ್ಣನ ೩೪, ನೀಲಮ್ಮನ ೧೨೬, ಅಕ್ಕಮಹಾದೇವಿಯ ೭೮ ವಚನಗಳೂ ಸೇರಿದಂತೆ ಒಟ್ಟು ೩೧೦ ಹೊಸ ವಚನಗಳನ್ನು ಮೊದಲ ಬಾರಿಗೆ ಪರಿಶೋಧಿಸಿ ಸಾರಸ್ವತ ಲೋಕಕ್ಕೆ ಕೊಡುಗೆಯಾಗಿ ನೀಡಿದ್ದಾರೆ.

ಶಂಕರದೇವಕೃತ 'ಶಂಕರದೇವರ ಕಂದಗಳು', 'ಶಂಕರದೇವರ ಸ್ವರ ವಚನಗಳು', ಕೊಂಡುಗುಳಿ ಕೇಶಿರಾಜಕೃತ 'ಕೇಶಿರಾಜ ಡಣಾಯಕರ ಕಂದ', 'ಮಹಾಂತ ದೇಶಿಕರ ಬಸವ ಭಕ್ತಿಸಾರ', ಶೃಂಗಾರಮ್ಮ ವಿರಚಿತ 'ಪದ್ಮಿನೀ ಕಲ್ಯಾಣ', 'ಕೈವಲ್ಯ ಕಲ್ಪವಲ್ಲರಿ', 'ಸಿದ್ಧಲಿಂಗ ಸ್ತೋತ್ರ ಪರಿಮಳ' ಮೊದಲಾದ ಕೃತಿಗಳನ್ನು ವಿದ್ವತ್ಪೂರ್ಣ ಪ್ರಸ್ತಾವನೆಯೊಂದಿಗೆ ಶಿವಣ್ಣನವರು ಸಂಪಾದಿಸಿ ಪ್ರಕಟಿಸಿರುವುದನ್ನು ಗಮನಿಸಬಹುದು.

ಒಟ್ಟಾರೆ ಕನ್ನಡ ನಾಡು-ನುಡಿ, ಸಾಹಿತ್ಯ-ಸಂಸ್ಕೃತಿಯನ್ನು ಕುರಿತ ಸಂಶೋಧನೆಗೆ ಸಂಶೋಧಕರು ಶಾಸನಗಳು, ಹಸ್ತಪ್ರತಿಗಳು, ನಾಣ್ಯಗಳು, ಪುರಾತತ್ವ ಶೋಧನೆ ಮುಂತಾದವುಗಳನ್ನು ಮೂಲ ಆಕರ ಸಾಮಗ್ರಿಗಳನ್ನಾಗಿ ಬಳಸಿಕೊಂಡಿರುವುದಲ್ಲದೆ ಸ್ವತಃ ಕ್ಷೇತ್ರಕಾರ್ಯ ಮಾಡಿ ಹೊಸಹೊಸ ವಿಚಾರಗಳನ್ನು ಪರಿಶೋಧಿಸಿ ತಮ್ಮ ಸಂಶೋಧನಾ ಬರಹಕ್ಕೆ ಆಕರವಾಗಿ ಬಳಸಿಕೊಂಡಿರುವುದನ್ನು ಗಮನಿಸಬಹುದು. ಈ ಸಂಶೋಧನೆಗಳು ಸಾಹಿತ್ಯ, ಇತಿಹಾಸ, ಶಾಸನಶಾಸ್ತ್ರ, ನಾಣ್ಯಶಾಸ್ತ್ರ, ಜಾನಪದ, ಭಾಷಾವಿಜ್ಞಾನ, ಹಸ್ತಪ್ರತಿಶಾಸ್ತ್ರ, ಸಮಾಜಶಾಸ್ತ್ರ, ಪುರಾತತ್ವಶಾಸ್ತ್ರ, ವಾಸ್ತುಶಿಲ್ಪ, ಮೂರ್ತಿಶಿಲ್ಪ ಮುಂತಾದ ಹಲವು ಅನ್ಯಜ್ಞಾನ ಶಿಸ್ತುಗಳನ್ನೊಳಗೊಂಡ ಬಹುಶಿಸ್ತೀಯ ಸಂಶೋಧನೆಗಳಾಗಿವೆಯೆಂದು (ಮಲ್ಟಿಡಿಸಿಪ್ಲಿನರಿ ರೀಸರ್ಚ್) ಗುರ್ತಿಸಬಹುದು.

■

೫

ಸಂಶೋಧನೆ ಮತ್ತು ಸಂಸ್ಕೃತಿ

ಡಾ. ತಾಳ್ತಜೆ ವಸಂತಕುಮಾರ

ಮನುಷ್ಯನು ತನ್ನ ಬಾಳಿನ ಉದ್ದಕ್ಕೂ ಅಪ್ರಜ್ಞಾಪೂರ್ವಕವಾಗಿ ಒಂದಲ್ಲ ಒಂದು ವಿಧದ ಅನ್ವೇಷಣೆಯಲ್ಲಿ ತೊಡಗಿಕೊಂಡಿರುತ್ತಾನೆ. ಅವನ ಸಂವೇದನೆ, ಸಾಮರ್ಥ್ಯ, ಆಂತರಿಕ ಸಂವಿಧಾನ, ಜೀವನದರ್ಶನ, ತಾತ್ವಿಕ ತಿಳುವಳಿಕೆಗಳಿಗೆ ಅನುಗುಣವಾಗಿ ಈ ಅನ್ವೇಷಣೆಯು ವಿಭಿನ್ನ ನೆಲೆಗಳನ್ನು ಪಡೆಯುತ್ತದೆ. ಎಂದರೆ ಕ್ರಮಬದ್ಧವಾದ ಶಿಕ್ಷಣವನ್ನು ಪಡೆಯದ ವ್ಯಕ್ತಿಯೂ ತನ್ನದೇ ಆದ ರೀತಿಗಳಲ್ಲಿ ಜೀವನದ ಹೊಸ ಸಾಧ್ಯತೆಗಳನ್ನು ಹುಡುಕುತ್ತಾ, ಬದುಕಿನಲ್ಲಿ ಅವುಗಳನ್ನು ಅಳವಡಿಸುತ್ತಾ ಹೋಗುತ್ತಾನೆ. ಒಂಟಿ ಕಾಂಡವಷ್ಟೇ ಇರುವ ತೆಂಗಿನ ಮರವನ್ನು ಏರುವ ತಳೆಯಂಥ ಸಾಧನವನ್ನು ಕಂಡುಹುಡುಕಿದಾಗ, ವಿಸ್ತಾರವಾದ ಜಲರಾಶಿಯನ್ನು ಹರಿಗೋಲಿನ ಮೂಲಕ ಮೊದಲ ಬಾರಿಗೆ ಹಾಯ್ದಾಗ, ಸನ್ನೆಗೋಲನ್ನು ಆಧರಿಸಿ, ತನಗೆ ಸವಾಲಾಗಿದ್ದ ಭಾರವನ್ನು ಮೀಟಿ ಎತ್ತಿದಾಗ ಅವನ ಅನುಭವ ಅದೆಷ್ಟು ರೋಮಾಂಚಕವಾಗಿದ್ದಿರಬೇಕು! ಈ ಸ್ವೋಪಜ್ಞತೆ–ಅನನ್ಯತೆಗಳು ಮನುಷ್ಯನ ಬದುಕಿನ ಮೂಲ ಪ್ರೇರಣೆಗಳೇ ಆಗಿವೆ.

ಈ ಪ್ರಕ್ರಿಯೆಯಲ್ಲಿ ಮನುಷ್ಯನ ಗ್ರಹಿಕೆಯ ಸಾಮರ್ಥ್ಯವು ನಿರ್ಣಾಯಕ ಪಾತ್ರವನ್ನು ವಹಿಸುತ್ತದೆ. 'ಹಳ್ಳಿಯ ಜಾತ್ರೆ'ಯೆಂಬ ಪರಿಕಲ್ಪನೆಯು ವಿವಿಧ ನೆಲೆಗಳಲ್ಲಿ ಜೀವಂತವಾಗುವ ರೀತಿಯನ್ನು ನೆನಪಿಸಿಕೊಳ್ಳಿ. ಕುಟುಂಬದ ಎಳೆಯ ಸದಸ್ಯನಿಗೆ ಪೀಪಿ, ತುತ್ತೂರಿ, ರುಚಿಯಾದ ತಿಂಡಿಗಳಿಂದ ಕೂಡಿದ ವರ್ಣವೈವಿಧ್ಯಗಳು ಕಣ್ಣ ಮುಂದೆ ಬರುತ್ತವೆ, ಹದಿಹರೆಯಕ್ಕೆ ಸಮವಯಸ್ಕರ ಕಣ್ಣುಗಳಿಗೆ ಕಣ್ಣು ಕೂಡಿಸುವ ರಮ್ಯ ಕಲ್ಪನೆಗಳು ಗರಿಕೆದರುತ್ತವೆ, ವಿವಾಹಿತ ದಂಪತಿಗಳಿಗೆ ಬದುಕಿನ ಜಂಜಡದಾಚೆಗೆ ಸರಿದು ಸಂಭ್ರಮಿಸುವ ಕ್ಷಣಗಳು ಕಚಗುಳಿಯಿಡುತ್ತವೆ. ಮಧ್ಯವಯಸ್ಕರಿಗೆ ಹಳೆಯ ನೆನಪುಗಳ ಓಕುಳಿಯಾಟವು ಮೈನವಿರೇಳಿಸುತ್ತದೆ, ಹಿರಿಯರಿಗೆ ಭಾವಲೋಕವೊಂದರ ಸ್ಪಷ್ಟಾಸ್ಪಷ್ಟ ಚಿತ್ರಗಳು ಉತ್ಸಾಹವನ್ನು

ಹುಟ್ಟಿಸುತ್ತವೆ... ಹೀಗೆ ಪ್ರತಿ ವ್ಯಕ್ತಿಯೂ ವೈವಿಧ್ಯಮಯವಾದ ಬದುಕಿನ ನಿರ್ದಿಷ್ಟ ಅಂಶವೊಂದನ್ನು ಮಾತ್ರ ಗ್ರಹಿಸುತ್ತಾನೆ.

ಎಷ್ಟೋ ಸಂದರ್ಭಗಳಲ್ಲಿ ಈ ಗ್ರಹಿಕೆಯ ಮುಂದಿನ ಹಂತವಾದ ಚಿಂತನೆಯಲ್ಲಿ ಅವನು ತೊಡಗಿಕೊಳ್ಳುತ್ತಾನೆ. ನಿರ್ದಿಷ್ಟ ವಸ್ತುವೊಂದು ಹಾಗೇ ಏಕೆ ಇರಬೇಕು? ಅದರ ಸೃಷ್ಟಿಗೆ ಏನಾದರೂ ವಿಶಿಷ್ಟವಾದ ಉದ್ದೇಶವಿರಬಹುದೇ? ಅದರ ಹಿಂದಿನ ಪ್ರೇರಣೆಗಳಾವುವು? ಅಲ್ಲಿ ಬದಲಾವಣೆಯ ಅವಶ್ಯಕತೆಯಿದೆಯೇ? ಈ ಜಗತ್ತಿನೊಂದಿಗೆ ಅದಕ್ಕಿರುವ ಸಂಬಂಧದ ಸ್ವರೂಪವೇನು?... ಮುಂತಾದ ಪ್ರಶ್ನೆಗಳು ಅವನನ್ನು ಕಾಡುತ್ತವೆ.

ಈ ಚಿಂತನೆಯು ಗಂಭೀರವಾದ ನೆಲೆಗಳಿಗೆ ಏರಿದಂತೆಲ್ಲ, ಮನುಷ್ಯನ ಕಾಣ್ಕೆಗಳು ಮಾಗುತ್ತ ಹೋಗುತ್ತವೆ; ಸಾಂದ್ರಗೊಳ್ಳುತ್ತವೆ. ಈ ಪ್ರಕ್ರಿಯೆಯಲ್ಲಿ ಅವನು ತನ್ನ ಅನಿಸಿಕೆಗಳಿಗೆ ಪರ–ವಿರುದ್ಧವಾದ ಸಾಕ್ಷ್ಯಗಳನ್ನು ಸಂಗ್ರಹಿಸುತ್ತಾ, ಅವುಗಳನ್ನು ವಿಶ್ಲೇಷಿಸುತ್ತಾ ತಾತ್ಕಾಲಿಕವಾದ ನಿರ್ಣಯಗಳಿಗೆ ತಲುಪುತ್ತಾನೆ. ಒಂದರ್ಥದಲ್ಲಿ ಈ ಪರಿಕ್ರಮದಲ್ಲಿ ಗ್ರಹಿಕೆಗೆ ಮೂಲವಾದ ದ್ರವ್ಯವು ಕ್ಷೀಣವಾಗುತ್ತ ಹೋಗುತ್ತದೆ.

ಸೃಜನಶೀಲ ಸಾಹಿತ್ಯದ ಉದಾಹರಣೆಯೊಂದರ ಮೂಲಕ ಇದನ್ನು ಸ್ಪಷ್ಟಪಡಿಸಬಹುದು. ವಿನಾಯಕರ ಮಹಾಕಾವ್ಯ 'ಭಾರತ ಸಿಂಧು ರಶ್ಮಿ'ಗೆ ವಿಶಿಷ್ಟವಾದ ಹಲವು ನೆಲೆಗಳಿವೆ. ವೈದಿಕ ಸಾಹಿತ್ಯದ ಪುನರ್‌ಸೃಷ್ಟಿ, ಮೌಲ್ಯ ಸಂಘರ್ಷ, ವ್ಯಕ್ತಿತ್ವದ ವಿಕಸನ, ಕಾವ್ಯಾತ್ಮಕತೆ, ಜನಾಂಗಗಳ ವೈಷಮ್ಯ, ಮುಕ್ತ ಛಂದದ ಸಾಧ್ಯತೆಗಳು, ಬದುಕಿನ ಸಂಕೀರ್ಣತೆ, ಜೀವಪ್ರೀತಿ... ಹೀಗೆ ಹಲವಾರು ಆಯಾಮಗಳನ್ನು ಅದು ಪಡೆಯುತ್ತದೆ. ಸಾಹಿತ್ಯದ ವಿದ್ಯಾರ್ಥಿಯೊಬ್ಬ ಅದನ್ನು ಓದುತ್ತಾನೆನ್ನೋಣ. ತನ್ನ ಗ್ರಹಿಕೆಯ ಸಾಮರ್ಥ್ಯಕ್ಕೆ ಅನುಗುಣವಾಗಿ, ಈ ಅಂಶಗಳಲ್ಲಿ ಕೆಲವನ್ನು ಅವನು ಗ್ರಹಿಸುತ್ತಾನೆ. ಆ ಗ್ರಹಿಕೆಯ ಒಂದಂಶವು ಮಾತ್ರವೇ ಅವನ ಸಂವೇದನೆಗಳಿಗೆ ವಸ್ತುಗಳಾಗುತ್ತವೆ, ಅವುಗಳಲ್ಲಿ ಕೆಲವು ಅವನ ಚಿತ್ತವೃತ್ತಿಯನ್ನು ತಲುಪುತ್ತವೆ, ಅವನನ್ನು ಚಿಂತನೆಗೆ ಹಚ್ಚುತ್ತವೆ. ಆದರೆ 'ಭಾರತ ಸಿಂಧು ರಶ್ಮಿ'ಯ ಅನೇಕ ಆಯಾಮಗಳು ಅಧ್ಯಯನಕ್ಕೆ ಕನ್ನೆನೆಲವಾಗಿಯೇ ಉಳಿದುಬಿಡುತ್ತವೆ; ವಿವಿಧ ಸಾಧ್ಯತೆಗಳನ್ನು ಒಪ್ಪಿಕೊಳ್ಳುತ್ತವೆ.

ಹೀಗೆ ಚಿಂತನೆಯ ಫಲವಾಗಿ, ಮನುಷ್ಯನು ಸಂಶೋಧನೆಯ ತಾತ್ವಿಕ ಅಭಿವ್ಯಕ್ತಿಯನ್ನು ಸಾಧಿಸುತ್ತಾನೆ. ತಾನು ತಲುಪಿದ ನಿರ್ಣಯಗಳನ್ನು ಲೋಕಮುಖಕ್ಕೆ ಸಾದರಪಡಿಸುತ್ತಾನೆ. ಯಾವುದೇ ಅನ್ವೇಷಣೆಯು ಇಲ್ಲಿಗೆ ನಿಂತು ಬಿಟ್ಟರೆ ಅದರ ಉದ್ದೇಶವು ಸಾಧನೆಯಾಗಲಾರದು. ಇದು ಸಂಶೋಧನೆಯ ಒಂದು ಹಂತವನ್ನು ಸೂಚಿಸುತ್ತದೆಯೇ ಹೊರತಾಗಿ ಅದರ ಅಂತಿಮ ನೆಲೆಯನ್ನಲ್ಲ.

ತಂತ್ರ ವಿಜ್ಞಾನದ ಉದಾಹರಣೆಯನ್ನು ತೆಗೆದುಕೊಂಡಾಗ ಈ ವಿಚಾರವು ಸ್ಪಷ್ಟವಾಗುತ್ತದೆ. "ಧ್ವನಿ ತರಂಗಗಳು ವಾತಾವರಣದಲ್ಲಿ ಪ್ರದೇಶದಿಂದ ಪ್ರದೇಶಕ್ಕೆ ನಿರ್ದಿಷ್ಟ ಆವರ್ತನ ಕ್ರಮದಲ್ಲಿ ಸಂಚರಿಸುತ್ತವೆ" ಎನ್ನುವ ಪರಿಜ್ಞಾನವು ತಾತ್ವಿಕ ನೆಲೆಯಲ್ಲಿಯೇ ಉಳಿದುಬಿಟ್ಟರೆ ಅದು 'ಬುದ್ಧಿ ಸಂವೇದ್ಯ'ವಾಗುತ್ತದೆ; ಅದನ್ನು ಆಧರಿಸಿ ರೇಡಿಯೋದಂಥ ಉಪಕರಣವನ್ನು ರೂಪಿಸುವುದು ಸಾಧ್ಯವಾದಾಗ ಮಾತ್ರ ಅದಕ್ಕೆ ಆನ್ವಯಿಕ ಮಹತ್ವವು ಬರುತ್ತದೆ.

ಇದೇ ಪ್ರಮೇಯವನ್ನು ಸ್ವಲ್ಪ ಉದಾರಗೊಳಿಸಿಕೊಂಡು, ಕನ್ನಡ ಸಾಹಿತ್ಯದ ಸಂದರ್ಭಕ್ಕೂ ಅನ್ವಯಿಸುವುದು ಸಾಧ್ಯವಾಗುತ್ತದೆ. ಪ್ರಯೋಗಶೀಲವಾದ ಸಾಹಿತ್ಯ ಪ್ರಜ್ಞೆಯು ಹೊಸಗನ್ನಡ ಕಾವ್ಯದ ಸಾಧ್ಯತೆಗಳನ್ನು ಪರಿಶೀಲಿಸಿ, ಅವುಗಳನ್ನು ದೃಢಪಡಿಸಿದುದರಿಂದ, ಇಲ್ಲಿ ಒಂದು

ಹೊಸ ಅಭಿವ್ಯಕ್ತಿ ಮಾಧ್ಯಮವು ಅಸ್ತಿತ್ವಕ್ಕೆ ಬಂತು. ಇಂತಹ ಚಿತ್ತವೃತ್ತಿಯೇ ಸಂಶೋಧನೆಯ ಸಂದರ್ಭದಲ್ಲಿ ಕ್ರಿಯಾಶೀಲವಾಗುವ ಮೂಲ ತತ್ತ್ವಗಳಲ್ಲಿ ಒಂದಾಗಿದೆ.

ಸಂಶೋಧನೆಯು ಯಾವ ದೃಷ್ಟಿಯಿಂದಲೂ ಹೊಸ ಸೃಷ್ಟಿಯಲ್ಲ. ಅದು ಸೃಷ್ಟಿಯಲ್ಲಿರುವ, ಬೆಳಕಿಗೆ ಬಾರದ ಹೊಸ ಅಂಶಗಳನ್ನು ಗುರುತಿಸುವ ಪ್ರಯತ್ನ, ಅವುಗಳ ಹರಹನ್ನು ವಿಸ್ತರಿಸುವ, ಪ್ರಯೋಗ ಹಾಗೂ ಉಪಯುಕ್ತತೆಯನ್ನು ನಿಶ್ಚಿತಗೊಳಿಸುವ ಕ್ರಿಯೆಯಾಗಿದೆ. ಈ ಕ್ಷೇತ್ರದ ಶಿಸ್ತುಬದ್ಧವಾದ ಬೆಳವಣಿಗೆಗೆ ಅದರ ತಾತ್ತ್ವಿಕ ತಳಹದಿ ಹಾಗೂ ಪ್ರಾಯೋಗಿಕ ಮುಖಗಳೆರಡೂ ಪುಷ್ಟಿಗೊಳ್ಳಬೇಕಾದ ಅಗತ್ಯವಿದೆ. ಇದಕ್ಕೆ ಹಿನ್ನೆಲೆಯಾಗಿ, ಇಂದಿನ ನಮ್ಮ ಸಂಶೋಧನೆಯು ಸಾಗುತ್ತಿರುವ ದಿಸೆಯನ್ನು ಸ್ಪಷ್ಟಪಡಿಸಿಕೊಳ್ಳುವುದರೊಂದಿಗೆ ಅದು ಪಡೆದುಕೊಳ್ಳಬೇಕಾಗಿರುವ ವಿಭಿನ್ನ ಆಯಾಮಗಳನ್ನು ಗುರುತಿಸಿಕೊಳ್ಳುವ ಪ್ರಯತ್ನಗಳನ್ನು ಮಾಡಬೇಕಾಗಿದೆ.

ಈಗಾಗಲೇ ಪ್ರಸ್ತಾಪಿಸಿದಂತೆ, ಸಂಶೋಧನೆಯ ಮೂಲ ಉದ್ದೇಶವೇ ಸತ್ಯದ ಶೋಧನೆಯಾಗಿದೆ. ಮಾನವಿಕ ಶಾಸ್ತ್ರಗಳ ಮಟ್ಟಿಗೆ ಹೇಳುವುದಾದರೆ, ಇಂದಿನ ಸಂಶೋಧನೆಯು ನಿರ್ದಿಷ್ಟ ಫಲಿತಾಂಶಗಳನ್ನು ಪಡೆಯುವ ಮಾಧ್ಯಮ ಮಾತ್ರವಾಗಿ – ಹೆಚ್ಚಿನ ಸಂದರ್ಭಗಳಲ್ಲಿ – ಬಳಕೆಯಾಗುತ್ತಿದೆ. ವಾಸ್ತವವಾಗಿ ಅದರ ಆನ್ವಯಿಕ ಮಹತ್ವದ ಮೇಲೇ ಅದರ ಮೌಲ್ಯವು ಅವಲಂಬಿತವಾಗಿರುತ್ತದೆ ಎಂಬ ಅಂಶವು ನಮಗೆ ಮರವೆಯಾಗುತ್ತಿದೆ.

ಸಂಶೋಧನೆಯು ಮೂಲತಃ ಎರಡು ನೆಲೆಗಳಲ್ಲಿ ಪ್ರವರ್ತಿಸುತ್ತದೆ.

೧. **ತಾತ್ವಿಕ ಸಂಶೋಧನೆ (Fundamental Research) :** ತಾತ್ವಿಕ ಸಂಶೋಧನೆಯು, ಒಂದು ಸಿದ್ಧಾಂತವನ್ನು ಸ್ಥಾಪಿಸುವಲ್ಲಿಗೆ ಅಥವಾ ಒಂದು ಸಮಸ್ಯೆಯನ್ನು ಪರಿಹರಿಸುವಲ್ಲಿಗೆ ತನ್ನನ್ನು ಮಿತಿಗೊಳಿಸಿಕೊಳ್ಳುತ್ತದೆ. ಆಂತರಿಕ–ಬಾಹ್ಯ ಸಾಕ್ಷ್ಯಾಧಾರಗಳ ಸಂಗ್ರಹ, ತುಲನೆ, ವಿಶ್ಲೇಷಣೆ, ನಿರ್ಣಯಗಳು ಇದರ ಪ್ರತ್ಯೇಕ ಹಂತಗಳನ್ನು ಸೂಚಿಸುತ್ತವೆ. ಕನ್ನಡದ ಅನೇಕ ಸಂಶೋಧಕರು ಈ ದಿಸೆಯಲ್ಲಿ ಸಾಕಷ್ಟು ಗಮನವನ್ನು ಹರಿಸಿದ್ದಾರೆ.

೧. ಎಂ. ಗೋವಿಂದ ಪೈಯವರ, "ನಾಗವರ್ಮರು ಎಷ್ಟು ಮಂದಿ" ಎಂಬ ಲೇಖನ.

೨. ಡಿ. ಎಲ್. ನರಸಿಂಹಾಚಾರ್ಯರ "ವಡ್ಡಾರಾಧನೆ"ಯ ಬಗೆಗಿನ ಸಂಶೋಧನೆ.

ಇಂತಹವುಗಳನ್ನು ಈ ಪ್ರಕಾರದಲ್ಲಿ ಪರಿಗಣಿಸಬಹುದು.

೨. **ಆನ್ವಯಿಕ ಸಂಶೋಧನೆ (Applied Research) :** ಆನ್ವಯಿಕ ಸಂಶೋಧನೆಯು, ಫಲಿತಾಂಶಗಳನ್ನು ವಾಸ್ತವಿಕ ಪ್ರಪಂಚದಲ್ಲಿ ಅಳವಡಿಸಿಕೊಳ್ಳಬಹುದಾದ ರೀತಿಗಳನ್ನು ಸ್ಪಷ್ಟಪಡಿಸುತ್ತದೆ. ವೈಜ್ಞಾನಿಕ ಸಂಶೋಧನೆಯು ಈ ವಿಧವಾದ ಸಂಶೋಧನೆಯಲ್ಲಿ ಹೆಚ್ಚು ಪ್ರವೃತ್ತವಾಗಿರುತ್ತದೆ. ಅಲ್ಲಿ ಕಾರ್ಯ–ಕಾರಣಕ್ಕೆ, ಸಂಬಂಧಕ್ಕೆ ಹೆಚ್ಚು ನಿಖರವಾದ ಒತ್ತು ಸಿಗುತ್ತದೆ. ಸಾಹಿತ್ಯದಂಥ ಮಾನವಿಕ ಶಾಸ್ತ್ರಗಳಲ್ಲಿ ಇಂಥ ನಿರ್ದಿಷ್ಟತೆಯು ಕಷ್ಟ ಸಾಧ್ಯವಾಗುತ್ತದೆ. ಇಲ್ಲಿ ಈ ಸಂಶೋಧನೆಯ ಪ್ರಭಾವವು ಬಹು ಅಲ್ಪ ಪ್ರಮಾಣದ್ದೂ, ನಿಧಾನ ಗತಿಯದ್ದೂ ಆಗುತ್ತದೆ.


ಇಂಥ ಅಧ್ಯಯನಗಳಲ್ಲಿ ಸಂಶೋಧಕನಿಗೆ ಕೆಲವು ಸೌಲಭ್ಯಗಳು ದೊರೆಯುತ್ತವೆ. ಸಾಕ್ಷ್ಯಗಳ ತುಲನೆ, ಸಾಂಸ್ಕೃತಿಕ ಆಚರಣೆಗಳ ಮೂಲಕವೇ ಜನಾಂಗವೊಂದನ್ನು

ಅರ್ಥೈಸಿಕೊಳ್ಳುವ, ಅದರ ಆರಾಧನಾಂಶಗಳನ್ನು ವಿಶ್ಲೇಷಿಸಿಕೊಳ್ಳುವ ಅವಕಾಶಗಳು ಸಂಶೋಧಕನಿಗೆ ಸಿಗುತ್ತವೆ.

ಇಲ್ಲಿ ಆಧುನಿಕ ವಿಮರ್ಶೆಯ ಎರಡು ಪರಿಕಲ್ಪನೆಗಳನ್ನು ಪ್ರಸ್ತಾಪಿಸಬೇಕು. ಅತಿಸ್ಥೂಲ (Generality) ಇಲ್ಲವೆ ಅತಿ ವಿಶಿಷ್ಟ(Specificity)ಗಳೆಂಬ ಎರಡೂ ಅತಿಗಳಿಗೆ ಹೋಗದೆ ಸಾಂಸ್ಕೃತಿಕ ಅಧ್ಯಯನಕಾರನು ಮಧ್ಯಮ ಮಾರ್ಗವೊಂದನ್ನು ಅನುಸರಿಸಬೇಕಾಗುತ್ತದೆ. ಅಂದರೆ ಸಂಶೋಧಕನ ದೃಷ್ಟಿಕೋನ ತೀರಾ ಸ್ಥೂಲವಾಗಿದ್ದಾಗ ಆ ಸಂಶೋಧನೆ ಕೇವಲ ದಾಖಲೆಯಾಗುತ್ತದೆ ಹೊರತಾಗಿ ವಿಶಿಷ್ಟ ಅಂಶಗಳೇನೂ ಅದರಿಂದ ಹೊರಡುವುದಿಲ್ಲ. ಬದಲಿಗೆ ಅದು ತೀರಾ ವಿಶಿಷ್ಟವಾಗಿದ್ದಾಗ ಆ ಸಂಶೋಧನೆಗೆ ವ್ಯಾಪಕ ದೃಷ್ಟಿ ಬರುವುದಿಲ್ಲ.

ಇಂಥ ಸಂಶೋಧಕನಿಗೆ ಎದುರಾಗುವ ತೀವ್ರವಾದ ಸಮಸ್ಯೆಯೆಂದರೆ, ಆತನಿಗೆ ದೊರೆಯುವ ಆಧ್ಯಾತ್ಮಿಕ ವಿವರಣೆ (Metaphysical Explanation)ಗಳು. ಇದರಿಂದಾಗಿ ರೂಢಮೂಲವಾಗಿರುವ ಆಚರಣೆಗಳು ಪ್ರಶ್ನಾತೀತವಾಗಿಯೇ ಉಳಿಯುತ್ತವೆ. ಸಂಶೋಧಕನ ಮೂಲಮಂತ್ರಗಳಾದ 'ಏಕೆ', 'ಹೇಗೆ', 'ಎಲ್ಲಿ'ಗಳಿಗೆ ಅಲ್ಲಿ ಉತ್ತರ ದೊರೆಯುವಂತಿಲ್ಲ. ಎರಡನೆಯದಾಗಿ, ನಿರ್ಧಾರದ ಬಗೆಗಿನ ಸಂದಿಗ್ಧ. ಪರಸ್ಪರ ವಿರುದ್ಧ ಸಾಕ್ಷ್ಯಗಳು ದೊರೆತಾಗ, ಅವಲಂಬಿಸಬೇಕಾದ ಮಾನದಂಡ ಯಾವುದು? ಪರಿಮಾಣ (Quantity)ದ ಆಧಾರವೊಂದೇ ನಿರ್ಣಾಯಕವೇ? ಇದನ್ನು ಇನ್ನೂ ಸ್ವಲ್ಪ ಬೆಳೆಸುವುದಾದರೆ, ಸಾಂಸ್ಕೃತಿಕ ಅಧ್ಯಯನದಲ್ಲಿ ಆದ್ಯತಾಕ್ರಮ (Method of Priority)ವನ್ನು ನಿರ್ಧರಿಸುವ ರೀತಿಯ ನಿಷ್ಕರ್ಷೆ ಆಗಬೇಕಾಗಿದೆ. ಈ 'ಅಧಿಕೃತತೆ'ಯ ನಿರ್ಧಾರದ ಹಂತದಲ್ಲಿ ಒಂದು ಅಪಾಯದ ವಿರುದ್ಧ ಎಚ್ಚರಿಸುತ್ತ, ಚಿಂತಕರು, "ತೀರಾ ತಾರ್ಕಿಕ ನೆಲೆಯಲ್ಲಿ, ಒಂದು ವಿಚಾರದ ಬಗೆಗೆ ಇಬ್ಬರು ಅನ್ವೇಷಕರು ತೀರಾ ವಿರುದ್ಧ ನಿರ್ಧಾರಗಳಿಗೆ ತಲುಪುವ ಪರಿಸ್ಥಿತಿ" ಎಂದಿದ್ದಾರೆ. ಸಂಶೋಧಕ ಕೇವಲ ತನ್ನ ಊಹೆಯನ್ನೇ ಆಧರಿಸಿ ನಿರ್ಧಾರಕ್ಕೆ ತಲುಪುವ ಸಾಧ್ಯತೆಯೂ ಇಲ್ಲಿ ಇದೆ.


ಕ್ಷೇತ್ರಕಾರ್ಯಕ್ಕೆ ಸಂಬಂಧಿಸಿದಂತೆ, ಸಾಂಸ್ಕೃತಿಕ ಅಧ್ಯಯನದ ನಿಖರತೆಗೆ ಸಮಾಜ ವಿಜ್ಞಾನ ನೆರವಾಗಬಹುದು. ಉದಾಹರಣೆಗೆ, ದ್ವಿಧ್ರುವಗಳಂತಹ (Bi-Polar) ಪರಿಕಲ್ಪನೆಗಳು ಕನ್ನಡದ ಸಂದರ್ಭಕ್ಕೂ ಅಳವಡಿಸಿಕೊಳ್ಳಬಹುದಾದವುಗಳೇ ಆಗಿವೆ :



ಆಕೃತಿ ೧ : ದ್ವಿಧ್ರುವಾತ್ಮಕ ಅಭಿವ್ಯಕ್ತಿ

ಇಲ್ಲಿ ನನ್ನ ಉದ್ದೇಶ, ಹೊಸ ದಾರಿಯೊಂದನ್ನು ಹಿಡಿಯುವಾಗ ನಮ್ಮ ಮುಂದೆ ಒಂದು ಮಾದರಿಯನ್ನು ಇಟ್ಟುಕೊಂಡರೆ, ಅದನ್ನು ನಯಗೊಳಿಸುವ ಕಾರ್ಯ ಸುಲಭವಾಗಬಹುದು ಎಂಬುದನ್ನು ಸೂಚಿಸುವುದೇ ಆಗಿದೆ. ಸಂಶೋಧನೆಯ ಹೊಸ ಆಯಾಮಗಳ ಬಗೆಗೆ ಬರೆಯುವಾಗ ನಮ್ಮ ಚಿಂತನೆ ಮುಖ್ಯವಾಗಿ ಎರಡು ದಿಸೆಗಳಲ್ಲಿ ನಡೆಯಬೇಕಾಗುತ್ತದೆ :

೧. ರೂಪ, ಮತ್ತು ೨. ವಸ್ತು




ಆಕೃತಿ ೨ : ಏಕಸೂತ್ರ ಸಂಬಂಧ

ಈ ವಸ್ತುಗಳ ಆಯ್ಕೆಯ ದೃಷ್ಟಿಯಿಂದ ಕೆಲವು ಮಾದರಿಗಳನ್ನು ಪರಿಶೀಲಿಸಬಹುದು :


೧. ವಿವಿಧ ಅಧ್ಯಯನ ಘಟಕಗಳನ್ನು ಏಕಸೂತ್ರವೊಂದು ಪರಸ್ಪರ ಸಂಬಂಧಿಸಿರಬಹುದು.

೨. ಸ್ವತಂತ್ರ ಘಟಕಗಳಾಗಿದ್ದರೂ ಬಹುವ್ಯಾಪಕವಾದ ವಸ್ತುವೊಂದರ ಅಧ್ಯಯನವನ್ನು ಸಮಗ್ರಗೊಳಿಸಬಹುದು. ಇಲ್ಲಿ ನಿಶ್ಚಿತ ಸಂಬಂಧ ಇರಲೇಬೇಕೆಂದಿಲ್ಲ :



ಆಕೃತಿ ೩ : ವ್ಯಾಪಕ ಸಂಬಂಧ

೩. ಪರಸ್ಪರ ಭಿನ್ನವಾದ, ಸ್ವಯಂಪೂರ್ಣವಾದ ಅಧ್ಯಯನ ಘಟಕಗಳ ನಿರ್ದಿಷ್ಟ ಅಂಶವೊಂದು ಎರಡಕ್ಕೂ ಸಮಾನವಾಗಿರಬಹುದು :



ಆಕೃತಿ ೪ : ಸಮಾನ ಅಂಶ

ಇದು ವಸ್ತು ಸಂಬಂಧಿಯಾದ ಮಾತಾದರೆ, ಅಧ್ಯಯನದ ರೂಪದ ಬಗೆಗೆ ನಮ್ಮ ಸಂಶೋಧಕ–ವಿದ್ವಾಂಸರಲ್ಲಿ ಒಮ್ಮತವಿಲ್ಲ. ಪ್ರಕಟಿತ ಕೃತಿಯೊಂದು ಒಳಗೊಳ್ಳಲೇಬೇಕಾದ ಸಂಶೋಧನ ಪರಿಕರಗಳ ಬಗೆಗೆ ತೀರಾ ಅವಜ್ಞೆಯಿರುವುದರಿಂದ ಏಕರೂಪತೆ, ನಿಯತತೆ (Uniformity & Consistency)ಗಳೆರಡೂ ಭಂಗವಾಗುತ್ತದೆ. ಈ ಅಧ್ಯಯನವು ತನ್ನ ಚರ್ಚೆಯನ್ನು ಸಂಶೋಧನ ವಸ್ತುಗಳ ಬಗೆಗೆ ಮಿತಿಗೊಳಿಸಿಕೊಂಡಿದೆಯಾದುದರಿಂದ ಈ ವಿಶ್ಲೇಷಣೆಯು ಇಲ್ಲಿ ಅಪ್ರಸ್ತುತವಾಗುತ್ತದೆ.

ಸಂಶೋಧನೆಯು ಕೇವಲ ಶೈಕ್ಷಣಿಕ ಕ್ರಿಯೆ (Academic Exercise) ಆಗಬಾರದೆಂಬ ತಳಹದಿಯ ಮೇಲೇ ವಸ್ತುವಿನ ಆಯ್ಕೆ ನಡೆಯಬೇಕು. ಎಂದರೆ, ತಾತ್ತ್ವಿಕ ವಿವೇಚನೆಯೊಂದಿಗೆ ಅದರ ಆನ್ವಯಿಕತೆ (Applicability)ಯ ಬಗೆಗೂ ಸಂಶೋಧಕನು ಗಂಭೀರವಾಗಿ ಯೋಚಿಸಿಯೇ ವಸ್ತುವನ್ನು ಆಯ್ದುಕೊಳ್ಳುವುದು ಅಗತ್ಯ. ಇಲ್ಲಿಯೇ ಪ್ರಸ್ತಾಪಿಸಬೇಕಾದ ಇನ್ನೊಂದು ಅಂಶವೆಂದರೆ, ಸಾಂಸ್ಕೃತಿಕ ಅಧ್ಯಯನದ ಹೆಸರಿನಲ್ಲಿ ಜನಾಂಗವೊಂದರ ಬಗೆಗೆ ಬಿಡಿ ವಿವರಗಳನ್ನೂ ದಾಖಲಿಸುವುದರ ಬದಲಿಗೆ ಅದರ ವಿವಿಧ ಅಂಗಗಳನ್ನು ಶಾಸ್ತ್ರೀಯವಾಗಿ ವಿಭಜಿಸಿ ಒಂದೊಂದನ್ನೇ ಕೈಗೆತ್ತಿಕೊಳ್ಳುವುದು ಉತ್ತಮವೆನಿಸುತ್ತದೆ. ಬಹು ವ್ಯಾಪಕವಾದ ಅಧ್ಯಯನ ವಿಷಯಗಳನ್ನು ವಿಶ್ವವಿದ್ಯಾಲಯಗಳ ವಿಭಾಗಗಳು ಅಥವಾ ಉನ್ನತ ಸಂಶೋಧನೆಯಲ್ಲಿ ತೊಡಗಿರುವ ಸಂಸ್ಥೆಗಳಿಗೆ ಬಿಡಬಹುದು. (ಸಾಂಸ್ಥಿಕ ನೆಲೆಯ ಅಧ್ಯಯನಾಂಗಗಳು)

ಇಲ್ಲಿಯೂ ಕೂಡಾ ವಿಷಯದ ಆಯ್ಕೆಯನ್ನು ವೈಯಕ್ತಿಕ ನಿರ್ಣಯಗಳಿಗೆ ಬಿಡುವುದರ ಬದಲಿಗೆ ಆಯಾ ಕ್ಷೇತ್ರದಲ್ಲಿ ತಜ್ಞರಾದವರಿಗೆ ಆ ಕ್ಷೇತ್ರದಲ್ಲಿ ಅಧ್ಯಯನ ಯೋಗ್ಯವಾದ ವಸ್ತುಗಳ ಯಾದಿಯನ್ನು ತಯಾರಿಸುವ ಹೊಣೆಯನ್ನು ಕೊಡಬಹುದು. ಇದು ಒಂದು ಕ್ಷೇತ್ರದೊಳಗೆ ಅಸಮತೋಲನ ತಲೆಹಾಕದಂತೆ ಕಾಯುತ್ತದೆ; ಅದರ ಅಧ್ಯಯನದ ಸಮಗ್ರತೆಗೆ ಸಹಕರಿಸುತ್ತದೆ.

ಇದನ್ನು ಇಲ್ಲಿ ಪ್ರಸ್ತಾಪಿಸಲು ಇನ್ನೊಂದು ಕಾರಣವೂ ಇದೆ. ಸಾಂಸ್ಕೃತಿಕ ಅಧ್ಯಯನವು ಬಹುಮುಖ ಪರಿಜ್ಞಾನವನ್ನು ನಿರೀಕ್ಷಿಸುತ್ತದೆ. ಧಾರ್ಮಿಕ ಮುಖದಲ್ಲಿ ಆಸಕ್ತನಾಗಿರುವ ವ್ಯಕ್ತಿ ಕಲೆಗಳ ವಿಚಾರದಲ್ಲಿ ತೀರಾ ಅಜ್ಞಾನಿಯಾಗಿರುವ ಸಾಧ್ಯತೆಗಳೂ ಇವೆ. ಅಲ್ಲಷ್ಟು-ಇಲ್ಲಷ್ಟು ತೇಪೆ ಹಚ್ಚುವುದರ ಬದಲಿಗೆ ತಮ್ಮ ಅಭಿರುಚಿ ಯೋಗ್ಯತೆಗಳಿಗೆ ತಕ್ಕ ವಸ್ತುವನ್ನೇ ಆಯ್ದುಕೊಂಡಾಗ ಅಧ್ಯಯನ ಗಟ್ಟಿನೆಲೆಯನ್ನು ಪಡೆದುಕೊಳ್ಳುತ್ತದೆ.

ನಿದರ್ಶನಕ್ಕಾಗಿ, ಜನಾಂಗವೊಂದರ 'ಸಂಪ್ರದಾಯ'ದ ಅಧ್ಯಯನವನ್ನು ನೋಡಬಹುದು. ಆ ಜನಾಂಗದ ಎಲ್ಲಾ ಸಂಪ್ರದಾಯಗಳೂ ಒಂದೇ ಮಟ್ಟದ ಅಧ್ಯಯನಕ್ಕೆ ವಸ್ತುಗಳಾಗಲಾರವು. ಉದಾಹರಣೆಗೆ, 'ಧಾರ್ಮಿಕ ಸಂಪ್ರದಾಯ'ಗಳು ತೀರಾ ಮೇಲ್ಮಟ್ಟದ, ವಿಸ್ತೃತವಾದ ಅಧ್ಯಯನದ ವಸ್ತುವಾದರೆ, ಅದೇ ಜನಾಂಗದ 'ವಿವಾಹ ಸಂಪ್ರದಾಯ'ಗಳು ಎಂ.ಎ./ಎಂ.ಫಿಲ್. ಸಂಪ್ರಬಂಧಗಳ ಮಟ್ಟದ ಅಧ್ಯಯನಗಳಿಗೆ ನಿಂತು ಬಿಡಬಹುದು.

ಒಂದೇ ವಸ್ತುವಿಗೆ ಇಂಥ ಬಹುಮುಖೀ ಗಮನ (Multi Angle Approach) ಏಕೆ ಅಗತ್ಯವೆಂಬುದನ್ನೂ ಇಲ್ಲಿಯೇ ಸ್ಪಷ್ಟಪಡಿಸಬೇಕು. ಸಂಶೋಧಕನಿಗೆ ಕೇಂದ್ರ ವಸ್ತುವೊಂದರ ವಿವಿಧ ವಿಭಾಗಗಳ ಅಧ್ಯಯನಕ್ಕೆ ಬೇಕಾದ ತಾತ್ತ್ವಿಕ ತಳಹದಿಯು ಬಹುಮಟ್ಟಿಗೆ ಇರುವುದಿಲ್ಲ. ಆದುದರಿಂದಲೇ ಆತನಿಗೆ ಪರಿಶ್ರಮವಿರುವ ರಂಗದಲ್ಲಿ ಮಾತ್ರ ಆತನ ಪ್ರಮೇಯ (Inference)ಗಳು ಅಧಿಕೃತವಾಗಬಲ್ಲುವು. ಈ ಶಾಸ್ತ್ರೀಯ ತಳಹದಿಯ ಮಹತ್ವವನ್ನು ನಮ್ಮೆಲ್ಲ ಸಂಶೋಧಕರೂ ಮನವರಿಕೆ ಮಾಡಿಕೊಳ್ಳಬೇಕಾದುದು ತತ್ಕಾಲೀನ ಅಗತ್ಯವೇ ಆಗಿದೆ.

'ಸಾಂಸ್ಕೃತಿಕ ಅಧ್ಯಯನ'ದ ಸ್ವರೂಪವು ಮೂಲತಃ ಅಂತರಶಿಸ್ತೀಯವಾದುದು. ಉದಾಹರಣೆಗೆ, ಸಮಕಾಲೀನ ಸಮಾಜವೊಂದರ ವಿವಾಹ ಸಂಪ್ರದಾಯಗಳನ್ನು ತೆಗೆದುಕೊಳ್ಳೋಣ. ಈ ಅಧ್ಯಯನಕ್ಕೆ ಈ ಮುಂದಿನ ಮಗ್ಗುಲುಗಳಿರಬಹುದು : ೧. ಚಾರಿತ್ರಿಕ ಮಾಹಿತಿಗಳು; ೨. ಆಚರಣೆಗಳು (Rituals); ೩. ಧಾರ್ಮಿಕ ವಿಧಿಗಳು-ಆರಾಧನಾಂಶಗಳು; ೪. ಸಮಾಜಶಾಸ್ತ್ರೀಯ ಮಾಹಿತಿಗಳು; ೫. ಸ್ವಭಾವ ಶಾಸ್ತ್ರೀಯ (Anthropological)

ಮಾಹಿತಿಗಳು; ೬. ಸಾಹಿತ್ಯ; ೭. ಆಹಾರ ಪದ್ಧತಿ ಹಾಗೂ ೮. ಇತರ ಜನಾಂಗಗಳ ಮೇಲಿನ ಪ್ರಭಾವ/ಇತರ ಜನಾಂಗಗಳಿಂದ ಪ್ರಭಾವ. ಇವೆಲ್ಲವೂ ಬೇರೆ ಬೇರೆ ಶಿಸ್ತಿಗೆ (Discipline) ಸೇರಿದ ವಿಷಯಗಳು; ಆ ಬಗೆಗಿನ ಮೂಲಭೂತ ತಿಳುವಳಿಕೆಯೊಂದಿಗೇ ಮೊದಲಾಗು ವಂಥವುಗಳು.

ಮೂಲ ಅರ್ಥದಲ್ಲಿ 'ಪ್ರಕೃತಿ'ಯು ವಿವಿಧ ಸಂಸ್ಕಾರಗಳ ಮೂಲಕ ಹಾದುಹೋಗುತ್ತ 'ಸಂಸ್ಕೃತಿ'ಯಾಗಿ ಪರಿವರ್ತಿತವಾಗುತ್ತದೆ; ಸ್ವೀಕಾರಕ್ಕೆ ಯೋಗ್ಯವಾಗುತ್ತದೆ. ಪ್ರಾಕೃತಿಕ ಘಟಕವಾದ ಹಾಲು ಹದವಾಗಿ ಕಾದು, ಸಕ್ಕರೆ–ಕೇಸರಿ–ಯಾಲಕ್ಕಿಗಳ ಮಿಶ್ರಣದೊಂದಿಗೆ ರಸಪುಷ್ಟವಾಗುವ ಕ್ರಿಯೆಗೆ 'ಸಂಸ್ಕೃತಿ' ಪರಿಕಲ್ಪನೆಯನ್ನು ಹೋಲಿಸಬಹುದಾಗಿದೆ. ಇಲ್ಲಿ ಸಂಸ್ಕೃತಿಯೊಂದರ ನಮನಗುಣ ಮತ್ತು ಚಲನಶೀಲತೆಗಳು ನಮಗೆ ಮುಖ್ಯವಾಗುತ್ತದೆ. ಜೈವಿಕ ಘಟಕಕ್ಕೆ ಸಂವಾದಿಯಾಗಿಯೇ, ಕ್ಷಣದಿಂದ ಕ್ಷಣಕ್ಕೆ ಬೆಳೆಯುತ್ತ, ಕೆಲವು ಅಂಶಗಳನ್ನು ಸ್ವೀಕರಿಸುತ್ತಾ, ಕೆಲವನ್ನು ಕಳೆದುಕೊಳ್ಳುತ್ತಾ, ಹಲವನ್ನು ನವೀಕರಿಸಿಕೊಳ್ಳುತ್ತಾ ಪರಿವರ್ತನೆಯ ಹಂತಗಳಲ್ಲಿ ಸಾಗುತ್ತಲೇ ಇರುವುದು ಯಾವುದೇ ಜೀವಂತ ಸಂಸ್ಕೃತಿಯ ಮೂಲ ಲಕ್ಷಣಗಳಲ್ಲಿ ಒಂದಾಗಿದೆ.

ಈ ಹಿನ್ನೆಲೆಯಲ್ಲಿ ನಾವು 'ಸಂಸ್ಕೃತಿ'ಯ ನಿರ್ವಚನವನ್ನು ಅರ್ಥೈಸಿಕೊಳ್ಳಬೇಕಾಗುತ್ತದೆ. ಪ್ರಗತಿಪರವಾದ ಎಲ್ಲಾ ಸಂಸ್ಕೃತಿಗಳಿಗೂ ಸೈದ್ಧಾಂತಿಕ (Ideational) ಭಾವನಾತ್ಮಕ (Sensational) ಮತ್ತು ಆದರ್ಶಪರ (Idealistic) ಎನ್ನುವ ಮೂರು ಮೂಲಭೂತ ನೆಲೆಗಳಿರುತ್ತವೆ. ಇವುಗಳನ್ನು ಸ್ಥೂಲವಾಗಿ "ಸಂಸ್ಕೃತಿಯೊಂದರ ಬಾಹ್ಯ ಮತ್ತು ಆಂತರಿಕ ಸಂವಿಧಾನ (Constitution)ಗಳು" ಎಂದು ಕರೆಯಬಹುದು. ಈ ದೃಷ್ಟಿಯಿಂದ ಸಂಸ್ಕೃತಿಯ ಲಕ್ಷಣಗಳನ್ನು ಕ್ರೋಡೀಕರಿಸುವುದು ಇಲ್ಲಿ ಅಗತ್ಯವೆನಿಸುತ್ತದೆ. ಸಂಗ್ರಹವಾಗಿ ಅವುಗಳನ್ನು ಈ ಕೆಳಗಿನಂತೆ ಸೂಚಿಸಬಹುದು :

೧. ಸಂಸ್ಕೃತಿಯು ಮನುಷ್ಯ ಜನಾಂಗದ ಆಂತರಿಕ–ಬಾಹ್ಯ ಬದುಕನ್ನು ಪ್ರತಿಫಲಿಸುತ್ತದೆ.

೨. ಸಂಸ್ಕೃತಿಯು ಮಾನವಕೃತವಾಗಿರುವುದರಿಂದ ಅದು ಅವನ ಪರಿಸರದಲ್ಲಿ ಸದಾ ಅಸ್ತಿತ್ವದಲ್ಲಿರುತ್ತದೆ.

೩. ಸಂಸ್ಕೃತಿಯು ಜನಾಂಗವೊಂದರ ಜ್ಞಾನಸಂಪತ್ತು (Knowledge), ನಂಬಿಕೆಗಳು (Beliefs), ಕಲಾಪ್ರಕಾರಗಳು (Art Forms), ನೈತಿಕ ನೆಲೆ (Moral Foundation), ಕಾಯಿದೆ (Law), ಆಚರಣೆಗಳು (Customs) ಮುಂತಾದ ಸಂಕೀರ್ಣ ಘಟಕಗಳನ್ನು ಒಳಗೊಳ್ಳುತ್ತದೆ.

೪. ವ್ಯಕ್ತಿಯು ಸಮುದಾಯವೊಂದರ ಸದಸ್ಯನಾಗಿಯೇ ಸಾಂಸ್ಕೃತಿಕ ಘಟಕಗಳನ್ನೂ, ಅಂಶಗಳನ್ನೂ ತನ್ನ ವ್ಯಕ್ತಿತ್ವದ ಅನಿವಾರ್ಯ ಭಾಗಗಳಾಗಿ ಸ್ವೀಕರಿಸುತ್ತಾನೆ.

೫. ಸಾಂಸ್ಕೃತಿಕ ಅಂಶಗಳು ಇತಿಹಾಸದ ಯಾವುದೋ ಒಂದು ಬಿಂದುವಿನಲ್ಲಿ ಸಂಸ್ಕೃತಿಯೊಂದರ ಒಳಗೆ ನುಸುಳಿಕೊಳ್ಳುತ್ತವೆ. ವರ್ತಮಾನದಲ್ಲಿ ಉಸಿರಾಡುತ್ತಲೇ ಭವಿಷ್ಯಕ್ಕೆ ದಾಟುತ್ತವೆ. ಈ 'ನೈರಂತರ್ಯ'ವು ಎಲ್ಲಾ ಸಂಸ್ಕೃತಿಗಳಲ್ಲಿ ಅಂತರ್ಗತವಾಗಿರುತ್ತದೆ.

೬. ಸಂಸ್ಕೃತಿಯು ನಾಗರಿಕತೆಯ ಸಬಲ ಮತ್ತು ಸಮರ್ಥ ವಾಹಕವಾಗಿದೆ.

೭. ಸಂಸ್ಕೃತಿಯು ಸಾಮೂಹಿಕ (Collective) ಸಂದರ್ಭಗಳಲ್ಲಿ, ಹೆಚ್ಚು ಅರ್ಥಪೂರ್ಣವಾಗುತ್ತವೆ. [ಉದಾ : ಪರಂಪರೆ, ಸಾಮೂಹಿಕ ನಡಾವಳಿಗಳು,

ವಿವಾಹದಂಥ ಸಂಸ್ಥೆಗಳು, ಸಾಮೂಹಿಕ ಸೌಂದರ್ಯಪ್ರಜ್ಞೆ, ಸಾಮುದಾಯಿಕ ಸ್ಮೃತಿ, ಸ್ಮರಣಾನುಭವಗಳು ಇತ್ಯಾದಿ]. ಆದುದರಿಂದಲೇ ಸಾಂಸ್ಕೃತಿಕ ಘಟಕಗಳು ಸಾಮೂಹಿಕವಾಗಿ ಹೆಚ್ಚು ಕ್ರಿಯಾತ್ಮಕವಾಗಿರುತ್ತವೆ.

೮. ಸಂಸ್ಕೃತಿಯು ಪರಿವರ್ತನಶೀಲವಾಗಿದೆ.

೯. ಯಾವುದೇ ಸಂಸ್ಕೃತಿಯನ್ನು ಜಾಗತಿಕ ಮತ್ತು ಪ್ರಾದೇಶಿಕ ಲಕ್ಷಣಗಳ ಸಂದರ್ಭದಲ್ಲಿ ಪರಿಶೀಲಿಸಬಹುದಾಗಿದೆ.


ಈ ಅಂಶಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ, ವ್ಯಕ್ತಿಯ ಸಾಮಾಜಿಕ ಬದುಕು ಅನೇಕ ಸಾಂಸ್ಕೃತಿಕ ಘಟಕಗಳ ಸಂಯೋಜನೆ ಎನ್ನುವುದು ಸ್ಪಷ್ಟವಾಗುತ್ತದೆ. ಮಾತ್ರವಲ್ಲ ಅನೇಕ ಸಂಕೀರ್ಣ ಸಾಂಸ್ಕೃತಿಕ ಅಂಶಗಳು ಅವನ ಆಂತರಿಕ-ಬಾಹ್ಯ ಚಟುವಟಿಕೆಗಳನ್ನೂ, ಸಂಬಂಧಗಳನ್ನೂ ನಿಯಂತ್ರಿಸುತ್ತವೆನ್ನುವುದು ಕೂಡಾ ಇಲ್ಲಿ ಸಿದ್ಧವಾಗುತ್ತದೆ.

ಈ ಹಂತದಲ್ಲಿ ಸಂಸ್ಕೃತಿಯೊಂದರ ಅಧ್ಯಯನದ ಹೊಸ ಸಾಧ್ಯತೆಗಳನ್ನು ವಿಶ್ಲೇಷಿಸಬಹುದಾಗಿದೆ. ಸ್ಥೂಲವಾಗಿ, ಸಮಾಜವೊಂದರ ಸಾಂಸ್ಕೃತಿಕ ಅಧ್ಯಯನವು ಅದರ ಸಮಗ್ರ ಚಟುವಟಿಕೆಗಳ ತಲಸ್ಪರ್ಶಿಯಾದ ಅಭ್ಯಾಸವನ್ನು ಒಳಗೊಳ್ಳುತ್ತದೆ. ಇಂಥ ಅಧ್ಯಯನಗಳು, ಸಾಂಸ್ಕೃತಿಕ ಘಟಕಗಳು ಮತ್ತು ಪರಿಕಲ್ಪನೆಗಳ ನಿರ್ವಚನ, ವಿಶ್ಲೇಷಣೆ, ಸಾಂಸ್ಕೃತಿಕ ಸಂಬಂಧಗಳ ನಿಷ್ಕರ್ಷೆ, ಸಾಂಸ್ಕೃತಿಕ ಸಂವಾದಗಳ ಸಾಧ್ಯತೆ ಮುಂತಾದ ಒಳ-ಹೊರ ವಲಯಗಳಿಗೆ ವ್ಯಾಪಿಸಿಕೊಳ್ಳುತ್ತವೆ. ಇಂಥ ಸಾಂಸ್ಕೃತಿಕ ಗಡಿರೇಖೆಗಳನ್ನೂ, ಮಜಲುಗಳನ್ನೂ ಗುರುತಿಸುವ ಕಾರ್ಯವು ಸಮಕಾಲೀನ ಅಗತ್ಯವೇ ಆಗಿದೆ. ಈ ಮಾದರಿಯ ಅಧ್ಯಯನಗಳಿಗೆ ನಿರ್ದಿಷ್ಟ ವಿಧಾನ (Methodology) ಸಾಧನಗಳು (Tools) ತಂತ್ರ (Technique) ಮುಂತಾದವುಗಳನ್ನು ಮೊದಲಾಗಿ ನಿರ್ಧರಿಸಿಕೊಳ್ಳಬೇಕಾಗುತ್ತದೆ. ಈಗಿನ ಅವಶ್ಯಕತೆಯೆಂದರೆ ಸಮಾಜಶಾಸ್ತ್ರದ ವಿಧಾನಗಳನ್ನೂ, ಪರಿಕಲ್ಪನೆಗಳನ್ನೂ "ಸಾಂಸ್ಕೃತಿಕ ಅಧ್ಯಯನ"ದ ಕ್ಷೇತ್ರಗಳಿಗೆ ಪರಿಚಯಿಸಬೇಕಾದುದು. ಈ ದೃಷ್ಟಿಯಿಂದ ನಮ್ಮ ಸಾಂಸ್ಕೃತಿಕ ಸಂಶೋಧನೆಯು ಸಾಗಬಹುದಾದ ದಿಕ್ಕುಗಳ ಸೂಚಿಯನ್ನು ಮುಂದಿಡುವುದು ಇಲ್ಲಿಯ ಉದ್ದೇಶವಾಗಿದೆ.


ಇದಕ್ಕೆ ಹಿನ್ನೆಲೆಯಾಗಿ, ಇಲ್ಲಿ ಬಳಸಲಾಗಿರುವ ಪಾರಿಭಾಷಿಕಗಳ ಸಾಂದರ್ಭಿಕ ಅರ್ಥ (Operational Definition)ಗಳನ್ನೂ, ಸ್ವರೂಪ ವಿನ್ಯಾಸ (Constitutional Design)ಗಳನ್ನೂ ಈ ಕೆಳಗಿನಂತೆ ನಿರೂಪಿಸಬಹುದಾಗಿದೆ.

೧. **ಸಾಂಸ್ಕೃತಿಕ ಅಂಶಗಳು (Cultural Elements)** : ಸ್ಥೂಲವಾಗಿ, ಸಮಾಜವೊಂದರ ಎಲ್ಲ ಸಾಂಸ್ಕೃತಿಕಾಂಶಗಳೂ, ಒಳವಿನ್ಯಾಸಗಳೂ ಒಟ್ಟಾಗಿ 'ಸಾಂಸ್ಕೃತಿಕ ಘಟಕ' (Cultural Unit)ಗಳೆಂಬ ಸಂಜ್ಞೆಯನ್ನೇ ಪಡೆಯುತ್ತವೆ. ಜೈವಿಕ ಘಟಕಗಳಂತೆಯೇ ಇವುಗಳ ಸ್ವರೂಪಗಳಿಗೆ ನಿರ್ದಿಷ್ಟ ಆಯುರ್ಮಾನ(Life Span)ವಿರುತ್ತದೆ. ಅವುಗಳು ತಮ್ಮ ಜೀವಿತಾವಧಿಯಲ್ಲಿ ಅನೇಕ 'ಸಾಂಸ್ಕೃತಿಕ ಉಪಾಂಗ' (Cultural off Shoots)ಗಳಾಗಿ ಒಡೆದುಕೊಳ್ಳುತ್ತವೆ. ಹೊಸ ಸಂರಚನೆಗಳನ್ನು ಸ್ವೀಕರಿಸಿ ಬೇರೆಯೇ ರೂಪಧಾರಣ ಮಾಡುತ್ತವೆ; ಇಲ್ಲವೆ ಬದಲಾದ ಪರಿಸರಗಳಿಗೆ ಪರಕೀಯವಾಗಿಯೇ ಉಳಿದು ನಶಿಸಿ ಹೋಗುತ್ತವೆ. ಇದರ ಅರ್ಥ ಇಷ್ಟೆ. ಒಂದು ಸಾಂಸ್ಕೃತಿಕ ಘಟಕವು ಉಳಿದುಕೊಳ್ಳುತ್ತದೆ. ಆದರೆ ಅದರ ಸ್ವರೂಪವು ನಿರಂತರವಾದ ಸ್ಥಿತ್ಯಂತರಗಳಿಗೆ ಒಳಗಾಗುತ್ತದೆ.

ಈ ಕೆಳಗಿನ ನಕ್ಷೆಯು ಸಾಂಸ್ಕೃತಿಕ ಘಟಕಗಳ ಸಾಮಾನ್ಯ ಪರಿಕಲ್ಪನೆಯನ್ನು ಮಾಡಿಕೊಡುತ್ತದೆ.



ಆಕೃತಿ ೫ – ಸಾಂಸ್ಕೃತಿಕ ಘಟಕಗಳು


ಭಾಷಿಕ (೩)
ಮೌಖಿಕ
ಸಾಹಿತ್ಯಿಕ
ಸಂಜ್ಞಾತ್ಮಕ/
ಸಂವಹನಾತ್ಮಕ
ಭಾವುಕ (೫)
ಧಾರ್ಮಿಕ
ವಿಧ್ಯಾತ್ಮಕ
ಭಾವನಾತ್ಮಕ
ಸೌಂದರ್ಯಾತ್ಮಕ (೬)
ಕಲಾಪ್ರಕಾರ
ಚಿತ್ರ
ನೃತ್ಯ
ಶಿಲ್ಪ
ಸಂಗೀತ
ಜಾನಪದ
ಪ್ರಜ್ಞಾತ್ಮಕ
(ಭಾರತೀಯ ಸ್ತ್ರೀಯ ಚಿತ್ರ)
ಉತ್ಸವ – ದಿನಚರಿ – ನಂಬಿಕೆ – ಆಚರಣೆ – ಸಂಸ್ಕಾರ...

ಈ ಮೇಲಿನ ವಿಭಜನೆಯು ಸ್ವಯಂಪೂರ್ಣವೂ ಅಲ್ಲ; ನಿರ್ದಿಷ್ಟವೂ ಅಲ್ಲ. ಕೇವಲ ಅಭ್ಯಾಸದ ಅನುಕೂಲತೆಗಾಗಿ ಸೂಚಿಸಿದ ವರ್ಗೀಕರಣವಾಗಿರುವುದರಿಂದ ಸಂದರ್ಭಾನುಸಾರವಾದ ವಿಕ್ಷೇಪ (Overlap)ಕ್ಕೆ ಇಲ್ಲಿ ಸದಾ ಅವಕಾಶವಿದೆ. ಈ ಘಟಕಗಳ ಸಮಾಜ ಶಾಸ್ತ್ರೀಯ, ಮಾನವ ಸ್ವಭಾವಶಾಸ್ತ್ರೀಯ, ಚಾರಿತ್ರಿಕ ಮನಶ್ಶಾಸ್ತ್ರೀಯ ಹಾಗೂ ರಚನಾತ್ಮಕ ಆಯಾಮಗಳು ಅಧ್ಯಯನದ ವಿವಿಧ ಸಾಧ್ಯತೆಗಳನ್ನು ಸೂಚಿಸುತ್ತವೆ. ಈ ಮೇಲಿನ ಆಕೃತಿಯನ್ನು, ಈ ದೃಷ್ಟಿಯ ಒಂದು ಮಾದರಿಯಾಗಿ ಕೊಡಲಾಗಿದೆ. ಸಾಂಸ್ಕೃತಿಕ ಘಟಕಗಳ ನಿರ್ಧಾರ, ವರ್ಗೀಕರಣ ಹಾಗೂ ವಿಶ್ಲೇಷಣೆಗಳ ಒಂದು ವಿಧಾನದ ಸೂಚನೆಯಾಗಿ ಇದನ್ನು ಪರಿಗಣಿಸಬಹುದಾಗಿದೆ; ಹೊರತಾಗಿ ಪೂರ್ಣ ಪ್ರಮಾಣದ 'ಸಾಂಸ್ಕೃತಿಕ ಘಟಕಗಳ ಸೂಚಿ' (Cultural Elements Index)ಯಾಗಿ ಅಲ್ಲವೆನ್ನುವುದನ್ನೂ ಇಲ್ಲೇ ಸ್ಪಷ್ಟಪಡಿಸಬೇಕಾಗಿದೆ.

೨. **ಸಾಂಸ್ಕೃತಿಕ ಸಂವಾದ (Cultural Dialogue) :** "ಸಾಂಸ್ಕೃತಿಕ ಸಂವಾದ"ವು ಬಹು ಸಂಸ್ಕೃತಿಗಳ ಭಾಷಿಕ, ಸಾಹಿತ್ಯಿಕ, ಸಾಮಾಜಿಕ ಸಾಧನೆಗಳ ನಿರಂತರ ಆದಾನ-ಪ್ರದಾನವನ್ನು ಸೂಚಿಸುತ್ತದೆ. ಇದು "ಭಾಗೀ ಸಂಸ್ಕೃತಿ" (Participating Culture)ಗಳ ಸಂಕೀರ್ಣವಾದ ಸಾಂಸ್ಕೃತಿಕ ವೈಲಕ್ಷಣ್ಯಗಳ ವಿನ್ಯಾಸವನ್ನು ಅವಲಂಬಿಸಿಯೇ ನಡೆಯುತ್ತದೆ. ಇಲ್ಲಿ ಕೆಲವು ಪಾರಿಭಾಷಿಕಗಳು ಅನಿವಾರ್ಯವಾಗಿ ಪ್ರವೇಶಿಸುತ್ತವೆ.


೧. **ಸಾಂಸ್ಕೃತಿಕ ಸಂವಹನ (Cultural Convergence) :** ಒಂದಕ್ಕಿಂತ ಹೆಚ್ಚು ಸಂಸ್ಕೃತಿಗಳು ನಿರಂತರವಾದ ಸಂಪರ್ಕದಲ್ಲಿದ್ದಾಗ, ಕೆಲವು ಸಾಂಸ್ಕೃತಿಕ ಅಂಶಗಳು ಮೂಲ ಸ್ವಭಾವವನ್ನೂ, ಸ್ವರೂಪವನ್ನೂ ಮರೆತು ಒಂದರೊಡನೊಂದು ಬೆಸೆದುಕೊಂಡು ಹೊಸ ರೂಪದಲ್ಲಿ ಅಸ್ತಿತ್ವಕ್ಕೆ ಬರುತ್ತವೆ. ಈ ಪ್ರಕ್ರಿಯೆಯ ಅಧ್ಯಯನಕ್ಕೆ ಚಾರಿತ್ರಿಕ ದೃಷ್ಟಿಯಿಂದಲೂ ಮಹತ್ವವಿದೆ. [ಉದಾ : ಅಯ್ಯಪ್ಪನ ಆರಾಧನೆ]

೨. **ಸಾಂಸ್ಕೃತಿಕ ಸಮಾನಾಂತರ (Cultural Parallalism) :** ಇಲ್ಲಿ ಅಧ್ಯಯನದ ವಸ್ತುಗಳಾಗಿರುವ ಸಾಂಸ್ಕೃತಿಕಾಂಶಗಳ ಮಧ್ಯೆ ಸ್ಪಷ್ಟವಾದ ಸಾಮ್ಯವನ್ನು ಕಾಣಬಹುದು. ಆದರೆ ಅವುಗಳಲ್ಲಿ ಭಿನ್ನತೆಯೂ ಸಮಾನ ಸ್ತರದಲ್ಲಿಯೇ ಉಳಿದಿರುತ್ತದೆ. ಇಂಥ ಸಂಬಂಧಗಳು – ಸಾಮಾನ್ಯವಾಗಿ– ಭೌಗೋಳಿಕ ಸಾಮೀಪ್ಯವನ್ನು ಸೂಚಿಸುತ್ತವೆ. ಈ ರೀತಿಯ ಅಧ್ಯಯನಗಳು ಸಾಂಸ್ಕೃತಿಕ ಸ್ವೀಕರಣ–ನಿರಾಕರಣಗಳೆರಡರ ನೆಲೆಗಳಲ್ಲಿಯೂ ನಡೆಯಬಹುದಾಗಿದೆ. ಇದಕ್ಕಿಂತ ಸ್ವಲ್ಪ ಬೇರೆಯಾಗುವ ಇನ್ನೊಂದು ಪರಿಕಲ್ಪನೆಯೆಂದರೆ ಸಾಂಸ್ಕೃತಿಕ ಸಾಮ್ಯ (Cultural Resemblance) ಇಲ್ಲಿ ಸಾಂಸ್ಕೃತಿಕಾಂಶಗಳ ನಡುವಿನ ವ್ಯತ್ಯಾಸದ ಪ್ರಮಾಣವೇ ಹೆಚ್ಚಾಗಿರುತ್ತದೆ. ಆದರೆ ಎಲ್ಲಿಯೋ ಹೋಲಿಕೆಯ ಛಾಯೆಯೂ ಅಂತಸ್ಥವಾಗಿರುತ್ತದೆ.

ಇಂಥ 'ಸಂವಾದ'ಗಳು ಸಮರ್ಪಕವಾಗಿ ನಡೆಯಬೇಕಾದರೆ ಮೂರು ಅಂಶಗಳು ಮುಖ್ಯವಾಗುತ್ತವೆ – (೧) ಸಮಾನ ಸಾಂಸ್ಕೃತಿಕ ವಾತಾವರಣ (೨) ಮುಕ್ತ ಮನೋವೃತ್ತಿ. (೩) ಸಮಾನವಾದ ಸಾಂಸ್ಕೃತಿಕ ನಿರ್ದೇಶಕ (Determinant)ಗಳು.

ಪ್ರತಿ ಸಂಸ್ಕೃತಿಯಲ್ಲಿಯೂ ಒಂದು ರೀತಿಯ ಆಂತರಿಕ ಪ್ರತಿರೋಧ (Internal Resistance)ವಿರುವುದು ಈವರೆಗಿನ ಸಂಶೋಧನೆಗಳಿಂದ ಈಗಾಗಲೇ ದೃಢವಾಗಿದೆ. ಈ ಪ್ರತಿರೋಧವು ಮುಖ್ಯವಾಗಿ ಎರಡು ನೆಲೆಗಳಲ್ಲಿ ಅಭಿವ್ಯಕ್ತವಾಗುತ್ತದೆ. ಮೊದಲನೆಯದಾಗಿ, ಎಲ್ಲಾ ಜೀವಂತ ಸಂಸ್ಕೃತಿಗಳೂ ತಮ್ಮ ಸಾಂಸ್ಕೃತಿಕಾಂಶಗಳ ಮೇಲೆ ಸಂಪೂರ್ಣ ಆಧಿಪತ್ಯ (Possession)ವನ್ನು ಬಯಸುತ್ತವೆ. ಇದೇ ಪಾತಳಿಯಲ್ಲಿ ಅವು ಪರಕೀಯ ಸಾಂಸ್ಕೃತಿಕ ಅಂಶಗಳ ದಾಳಿಯನ್ನು ನಿರೋಧಿಸುತ್ತವೆ. ಈ ತಿಕ್ಕಾಟದಲ್ಲಿ ನೈಸರ್ಗಿಕವಾದ, ಶಕ್ತಿಯುತವಾದ ಸಾಂಸ್ಕೃತಿಕಾಂಶದ ಕೈಯೇ ಮೇಲಾಗುತ್ತದೆ. ದುರ್ಬಲವಾದ ಘಟಕವು ಒಂದೋ ಅದರೊಡನೆ ವಿಲೀನವಾಗುತ್ತದೆ, ಇಲ್ಲವೇ ನಾಶವಾಗುತ್ತದೆ.


ಇದೇ ಸಂದರ್ಭದಲ್ಲಿ 'ಸಂವಾದ'ಕ್ಕಿರುವ ತೊಡಕು (Barrier)ಗಳನ್ನು ಪರಿಶೀಲಿಸಬೇಕಾಗುತ್ತದೆ. ಈ ಕೆಳಗಿನ ನಕ್ಷೆಯು ಈ 'ಸಾಂಸ್ಕೃತಿಕ ಸಂವಾದ ವರ್ತುಲ' (Cultural communication cycle)ವನ್ನು ತೋರಿಸುತ್ತದೆ.



ಆಕೃತಿ ೬ : ಸಾಂಸ್ಕೃತಿಕ ಸಂವಾದ ವರ್ತುಲ

ಈ ಹಿನ್ನೆಲೆಯಲ್ಲಿ, ಕೆಳಗಿನ ನಕ್ಷೆಯು 'ಸಾಂಸ್ಕೃತಿಕ ಸಂವಾದ' ಪ್ರಕ್ರಿಯೆಯು ಎದುರಿಸ–ಬೇಕಾಗುವ ಸವಾಲುಗಳನ್ನು ಸಂಗ್ರಹವಾಗಿ ತೋರಿಸುತ್ತದೆ. ಅಂದರೆ, ಆಕೃತಿ ೨ ತೋರಿಸುವ ಸಂವಹನ ವರ್ತುಲವು ಅನೇಕ ಬಾರಿ ಅಪೂರ್ಣವಾಗಿಯೇ ಉಳಿಯುವುದರ ಕಾರಣಗಳನ್ನು ಇದು ಸೂಚಿಸುತ್ತದೆ. ಈ ದೃಷ್ಟಿಯ ಅಭ್ಯಾಸಿಗೆ ಇವುಗಳ ಅರಿವು ಪೂರ್ವಭಾವಿಯಾಗಿಯೇ ಇರಬೇಕೆಂಬ ಉದ್ದೇಶದಿಂದ ಇದನ್ನು ಇಲ್ಲಿ ಕೊಡಲಾಗಿದೆ.

ಈ ನಕ್ಷೆಗೆ ಯಾವುದೇ ಮಾಪಕ(Scale)ವನ್ನು ಬಳಸಲಾಗಿಲ್ಲ.



ಆಕೃತಿ ೭ : ಸಾಂಸ್ಕೃತಿಕ ಸಂವಾದದ ತೊಡಕುಗಳು

ಇದೇ ಪಾತಳಿಯಲ್ಲಿ, ಸಂವಾದವನ್ನು ಉತ್ತೇಜಿಸುವ, ಸಂವಾದ ಚಕ್ರವನ್ನು ಪೂರ್ಣಗೊಳಿಸುವ ಅಂಶಗಳನ್ನೂ ಇಲ್ಲಿ ಪ್ರಸ್ತಾಪಿಸಬೇಕಾಗಿದೆ.

೧. **ಸಾಮೀಪ್ಯ :** ಇದು ಹೆಚ್ಚಾಗಿ ಭೌತಿಕ ಸಾಮೀಪ್ಯವನ್ನು ಸೂಚಿಸುತ್ತದೆ. ಗಡಿಪ್ರದೇಶಗಳ ಸಾಂಸ್ಕೃತಿಕ ಪರಿಸರಗಳು ಈ ದೃಷ್ಟಿಯಿಂದ ಮಹತ್ವದ್ದಾಗಿರುತ್ತವೆ.

೨. **ಸಂಪರ್ಕ :** ವ್ಯಾಪಾರ, ಪ್ರವಾಸೋದ್ಯಮ, ಶೈಕ್ಷಣಿಕ ಸಂಪರ್ಕ, ವಿಚಾರಸಂಕಿರಣಗಳು ಮುಂತಾದವುಗಳು ಈ ನೆಲೆಯಿಂದ ಗಮನಾರ್ಹವಾಗಿವೆ.

೩. **ಸಂಬಂಧ :** ವೈವಾಹಿಕ ಸಂಬಂಧಗಳು, ಸಾಂಸ್ಥಿಕ ಮಟ್ಟದ ಕಾರ್ಯಕ್ರಮಗಳು, ಸಮಾನ ವೇದಿಕೆಗಳು–ಆಸಕ್ತಿಗಳು ಇತ್ಯಾದಿಗಳನ್ನು ಇಲ್ಲಿ ಹೆಸರಿಸಬಹುದು.

೪. **ಆರಾಧನಾ ಪ್ರವೃತ್ತಿ :** ಪರಕೀಯ ಸಂಸ್ಕೃತಿಯ ಕೆಲವು ಘಟಕಗಳು ಅಪಾರವಾದ ಮೆಚ್ಚುಗೆ–ಗೌರವಗಳಿಗೆ ಪಾತ್ರವಾದಾಗ ಅನೈಚ್ಛಿಕವಾಗಿ ಅವು ಸ್ವ–ಸಂಸ್ಕೃತಿಯ ಮೇರೆಯೊಳಗೆ ಕಾಲಿಡುತ್ತವೆ. ನಗರೀಕರಣ ಪ್ರಕ್ರಿಯೆಯನ್ನು ಇದಕ್ಕೆ ಉದಾಹರಣೆಯಾಗಿ ಕೊಡಬಹುದು.


೫. **ಸ್ವೀಕಾರ :** ಸಾಮಾಜಿಕ, ಧಾರ್ಮಿಕ, ಆರ್ಥಿಕ ಕಾರಣಗಳಿಗಾಗಿ–ಅನಿವಾರ್ಯವಾಗಿ–ಯಾದರೂ – ಸಾಂಸ್ಕೃತಿಕ ಅಂಶಗಳು ಸ್ವೀಕರಿಸಲ್ಪಡುತ್ತವೆ. ಉದಾ : ವ್ಯಾಪಾರಿಗಳು ಪ್ರಾದೇಶಿಕ ಭಾಷೆಯೊಂದನ್ನು ಸಂವಹನ ಮಾಧ್ಯಮವಾಗಿ ಸ್ವೀಕರಿಸುವುದರ ಹಿಂದೆ ಆರ್ಥಿಕ ಲಕ್ಷ್ಯವಷ್ಟೇ ಇರುತ್ತದೆ.

೬. **ವಲಸೆ :** ತಲೆಮಾರುಗಳ ಹಿಂದೆ ಒಂದು ಪ್ರದೇಶದಿಂದ ಇನ್ನೊಂದಕ್ಕೆ ವಲಸೆ ಹೋದ ಕುಟುಂಬಗಳಲ್ಲಿ ಕ್ರಮೇಣ ಮೂಲ ಸಾಂಸ್ಕೃತಿಕಾಂಶಗಳು ಖಿಲವಾಗುತ್ತವೆ, ಪ್ರಾದೇಶಿಕ ಸಂಸ್ಕೃತಿಯು ಅವರದಾಗುತ್ತದೆ.

೭. **ನಿರಾಕರಣೆ :** ಕೆಲವು ಸಾಂಸ್ಕೃತಿಕಾಂಶಗಳನ್ನು ತೀವ್ರವಾಗಿ ನಿರಾಕರಿಸುವುದರ ಮೂಲಕವೂ ಅನ್ಯ ಸಂಸ್ಕೃತಿಯೊಂದರೊಂದಿಗೆ ಜೀವಂತ ಸಂವಾದವೇರ್ಪಡುವ ಸಾಧ್ಯತೆಗಳಿವೆ. ಇದನ್ನು ಪಾರಿಭಾಷಿಕವಾಗಿ ಸಾಂಸ್ಕೃತಿಕ ನಿರಾಕರಣೆ (Cultural Rejection) ಎನ್ನುತ್ತಾರೆ.


ಈ ಎಲ್ಲಾ ಘಟಕಗಳೂ ಸ್ವತಂತ್ರವಾದ ಅಧ್ಯಯನಕ್ಕೆ ಯೋಗ್ಯವಾದವುಗಳೇ ಆಗಿವೆ. ಇಲ್ಲಿ ಅವುಗಳ ಸಾಂಸ್ಕೃತಿಕ ಹಾಗೂ ಚಾರಿತ್ರಿಕ ಸಂದರ್ಭಗಳು, ಪ್ರಸ್ತುತ ಪರಿಸ್ಥಿತಿ, ತೊಡಕುಗಳ ಪರಿಹಾರ ಮಾರ್ಗಗಳು, ಸಂಘರ್ಷದ ನೆಲೆಗಳು ಇತ್ಯಾದಿಗಳನ್ನು ಪ್ರತ್ಯೇಕವಾಗಿಯೇ ಅಭ್ಯಾಸ ಮಾಡಬಹುದಾಗಿದೆ. ನಿಗದಿತ ಸಂಶೋಧನಾ ಪರಿಕರ (Standard Research Tool) ಗಳಾದ ಪ್ರಶ್ನಾವಳಿ, ಸಂದರ್ಶನ, ಪರಿಶೀಲನೆಗಳೊಂದಿಗೆ ಅಂಕಿ-ಸಂಖ್ಯೆಗಳ ವಿಶ್ಲೇಷಣೆ (Statistical Analysis)ಯನ್ನು ಈ ದೃಷ್ಟಿಯಿಂದ ಬಳಸಿಕೊಳ್ಳಬಹುದು. ಚಾರಿತ್ರಿಕ ಸಂಶೋಧನೆ ಮತ್ತು ಕ್ಷೇತ್ರಕಾರ್ಯ ವಿಧಾನಗಳೆರಡೂ ಇಲ್ಲಿ ಉಪಯುಕ್ತವಾಗುತ್ತವೆ.

೮. **ಸಾಂಸ್ಕೃತಿಕ ಶೈಥಿಲ್ಯ (Cultural drift) :** ಈ ಶೈಥಿಲ್ಯವು ಎಲ್ಲಾ ಸಾಂಸ್ಕೃತಿಕ ಅಂಶಗಳ ಸಂದರ್ಭಗಳಲ್ಲೂ ಕಾಣಿಸಿಕೊಳ್ಳಬಹುದಾದ ನೈಸರ್ಗಿಕ ಪ್ರಕ್ರಿಯೆಯಾಗಿದೆ. ಇದು ಸಂಸ್ಕೃತಿಯ ಒಳರಚನೆಯಲ್ಲಿಯೇ ಉಂಟಾಗುವ ಸಹಜವಾದ ಒತ್ತಡದ ಕಾರಣದಿಂದಾಗಿರಬಹುದು, ಇಲ್ಲವೇ ಅನಿವಾರ್ಯವಾದ ಬಾಹ್ಯ ಪ್ರಭಾವಗಳ ಪ್ರತಿಕ್ರಿಯೆಯೂ ಆಗಬಹುದು. ಎಂದರೆ, ಈ ಬದಲಾವಣೆಯು ಕೂಡಾ ಸಾಂಸ್ಕೃತಿಕಾಂಶಗಳ ಮೂಲಸತ್ವದ ಸಾಂದ್ರತೆಗೆ ಅನುಗುಣವಾಗಿ ಬೇರೆ ಬೇರೆ ಆಯಾಮಗಳನ್ನು ಪಡೆಯುತ್ತದೆ. ಇಲ್ಲಿ ಸಾಂಸ್ಕೃತಿಕಾಂಶಗಳ ಅಸ್ತಿತ್ವದ ಪ್ರಶ್ನೆಯೂ ಅಡಗಿರುವುದು ಗಮನಾರ್ಹವಾಗಿದೆ. ಈ ಶೈಥಿಲ್ಯವು ಏಕಮುಖ (Unilinear)ವಾಗಿ ನಡೆಯಬಹುದು.




ಆಕೃತಿ ೮ : ಏಕಮುಖ ಸಾಂಸ್ಕೃತಿಕ ಶೈಥಿಲ್ಯ

ಅಂದರೆ, ಸಮಯ ಸರಿದಂತೆ ಅದು ಸಂಪೂರ್ಣ ಮಾಯವಾಗಬಹುದು ಅಥವಾ ಸಂಕೀರ್ಣ ಪರಿಸರ–ಪ್ರಭಾವಗಳಿಗೆ ಒಳಗಾಗಿ ಬಹುಮುಖ (Multilinear) ಪ್ರವರ್ತನೆಯನ್ನು ತೋರಿಸಬಹುದು. ಇಲ್ಲಿ ಸಾಂಸ್ಕೃತಿಕಾಂಶವು ಪೂರ್ಣವಾಗಿ ನಾಶ ಹೊಂದುವುದಿಲ್ಲ. ಬದಲಿಗೆ ಹೊಸತನ್ನು ಅಂಗೀಕರಿಸಿಕೊಂಡು ಬೇರೆಯೇ ರೂಪದಲ್ಲಿ ಮುಂದುವರೆಯುತ್ತದೆ.



ಆಕೃತಿ ೯ : ಬಹುಮುಖ ಸಾಂಸ್ಕೃತಿಕ ಶೈಥಿಲ್ಯ

ಸಂಶೋಧನಾ ವಿಷಯದ ಸ್ಪಷ್ಟ ಪರಿಜ್ಞಾನವಿರುವ, ಸಂಶೋಧನಾ ಪದ್ಧತಿ ಮತ್ತು ಪರಿಕರಗಳನ್ನು ಸಮರ್ಥವಾಗಿ ಬಳಸಬಲ್ಲ ಜಿಜ್ಞಾಸು ಪ್ರವೃತ್ತಿಗೆ ಮಾತ್ರ ಪ್ರಕೃತ ಸಂಸ್ಕೃತಿ ಮತ್ತು ಮೂಲ ಸಂಸ್ಕೃತಿಗಳ ಸಂಬಂಧವನ್ನು ಸ್ಥಾಪಿಸುವುದು ಸಾಧ್ಯವಾಗಬಹುದು. ಇದೇ ನೆಲೆಯಲ್ಲಿ, ಸಂಸ್ಕೃತಿಯೊಂದರಲ್ಲಿ ಅಸ್ತಿತ್ವದಲ್ಲಿದ್ದ ಸಾಂಸ್ಕೃತಿಕಾಂಶವು – ಮಧ್ಯೆ ಮರೆಯಾಗಿದ್ದರೂ ಕೂಡಾ– ಮತ್ತೆ ಮೂಲ ಸ್ವರೂಪದಲ್ಲೇ ಮರಳುವ ಸಾಧ್ಯತೆಯನ್ನೂ ಪರಿಗಣಿಸಬಹುದಾಗಿದೆ. [ಉದಾ : ವಾಸ್ತು, ಪ್ರಕೃತಿಚಿಕಿತ್ಸೆ ಇತ್ಯಾದಿ]



ಆಕೃತಿ ೧೦ : ಸಾಂಸ್ಕೃತಿಕಾಂಶದ ಪುನರಾಗಮನ

ಮುಖ್ಯವಾಗಿ, ಸಾಮಾಜಿಕ–ಸಾಂಸ್ಕೃತಿಕ ನಂಬಿಕೆ, ಆಚರಣೆ, ವಿಧಿ–ನಿಷೇಧ... ಇತ್ಯಾದಿಗಳು ಈ ರೀತಿಯ ಅಧ್ಯಯನಗಳನ್ನು ಅಪೇಕ್ಷಿಸುತ್ತವೆ. ಇಲ್ಲಿ, ಸಂಸ್ಕೃತಿಯೊಂದಕ್ಕೆ ಪ್ರಬಲವಾದ ಧಾರಣಶಕ್ತಿಯಿದ್ದಾಗ ಅದು ಬಾಹ್ಯ–ಆಂತರಿಕ ದಾಳಿಯನ್ನು ಸಮರ್ಥವಾಗಿ ಎದುರಿಸಿ, ತನ್ನ ಸ್ವಂತಿಕೆಯನ್ನು ಕಾಯ್ದುಕೊಳ್ಳುತ್ತದೆನ್ನುವುದು ಗಮನಾರ್ಹವಾಗುತ್ತದೆ.


ಮೂಲ ಸಂಸ್ಕೃತಿಯ ಎಲ್ಲ ಲಕ್ಷಣಗಳನ್ನು ಕಳೆದುಕೊಳ್ಳುವ ಅಪಾಯ ಅಥವಾ ಅದರ ಎಲ್ಲ ಸಾಂಸ್ಕೃತಿಕಾಂಶಗಳು ರೂಪಾಂತರಗೊಳ್ಳುವ ದುರಂತಗಳೆರಡೂ ಇಲ್ಲಿ ಸಂಭವಿಸಬಹುದು. ಈ ದೃಷ್ಟಿಯ ಅಧ್ಯಯನಗಳು ಯಾವುದೋ ಒಂದು ಕಾಲಘಟ್ಟವನ್ನು 'ಮೂಲ ಸಂಸ್ಕೃತಿ'ಯಾಗಿ ಗುರುತಿಸಿಕೊಳ್ಳಬೇಕಾಗುತ್ತದೆ. ಅಂದರೆ, ಈ 'ಮೂಲ' ವಿಶೇಷಣವು ಸಾಪೇಕ್ಷ ಸಂದರ್ಭದಲ್ಲಿ ಮಾತ್ರ ಅನ್ವಯವಾಗುತ್ತದೆ. ಕಾಲಗತಿಯಲ್ಲಿ ಎಷ್ಟು ಹಿಂದೆ ಸರಿಯಲು ಸಾಧ್ಯವಾಗುತ್ತದೆ, ಭೌಗೋಳಿಕವಾಗಿ ಎಷ್ಟು ವಿಸ್ತಾರವನ್ನು ಪಡೆಯಬಹುದಾಗುತ್ತದೆನ್ನುವುದರ ಮೇಲೆ ಇಂಥ ಅಭ್ಯಾಸಗಳ ಅಧಿಕೃತತೆಯು ಅವಲಂಬಿತವಾಗಿದೆ.

ಯಾವುದೇ ಸಾಂಸ್ಕೃತಿಕಾಂಶದ ಶೈಥಿಲ್ಯದ ಅಧ್ಯಯನವನ್ನು ಸ್ವತಂತ್ರ ನೆಲೆಯಲ್ಲಿ ನಡೆಸುವುದು ಕಷ್ಟಸಾಧ್ಯವೆನ್ನುವುದನ್ನು ಇಲ್ಲಿಯೇ ಸ್ಪಷ್ಟಪಡಿಸಬೇಕು. ಸಾಮಾಜಿಕ–ರಾಜಕೀಯ–ಮನೋವೈಜ್ಞಾನಿಕ ಸಂಬಂಧಗಳ ಎಳೆಗಳನ್ನು ಸಾಂಸ್ಕೃತಿಕಾಂಶಗಳ ಸಂದರ್ಭದಲ್ಲಿ ಗ್ರಹಿಸಬಲ್ಲ ಅಭ್ಯಾಸಗಳಷ್ಟೇ ಈ ದೃಷ್ಟಿಯಿಂದ ಸಫಲವಾಗಬಲ್ಲವು, ಅರ್ಥಪೂರ್ಣವಾದ ನಿರ್ಣಯಗಳಿಗೆ ತಲುಪಬಲ್ಲವು.

ಈ ಕೆಳಗಿನ ನಕ್ಷೆಯು ಬಹಳ ಸ್ಥೂಲವಾಗಿ, ಈ ಶೈಥಿಲ್ಯದ ಹಿನ್ನೆಲೆಗಳನ್ನು ಗುರುತಿಸುವ ಪ್ರಯತ್ನವನ್ನು ಮಾಡುತ್ತದೆ. ಇದೊಂದು ಮುಕ್ತ (Open) ಮಾದರಿಯಾಗಿದ್ದು, ಕೇವಲ ಅಭ್ಯಾಸದ ದಿಕ್ಕನ್ನು ಸೂಚಿಸುವಷ್ಟಕ್ಕೆ ಸೀಮಿತವಾಗಿದೆ.

ಇಲ್ಲಿ ಕೇವಲ ಕೆಲವು ಸನ್ನಿವೇಶಗಳನ್ನು ಮಾತ್ರವೇ ಪರಿಶೀಲಿಸಲಾಗಿದೆ. ಈ ರೀತಿಯ ಅಧ್ಯಯನದ ಸಾಧ್ಯತೆಯನ್ನು ಸೂಚಿಸುವ ದೃಷ್ಟಿಯಿಂದ, ದಕ್ಷಿಣ ಕನ್ನಡದ 'ಹವ್ಯಕ ಬ್ರಾಹ್ಮಣರ ಮದುವೆ ಸಂಪ್ರದಾಯ'ವನ್ನು ಒಂದು ಸಾಂಸ್ಕೃತಿಕ ಘಟಕವಾಗಿ ತೆಗೆದುಕೊಂಡು, ಅಲ್ಲಿ ನಡೆದ ಸ್ಥಿತ್ಯಂತರವನ್ನು ಈ ಕೆಳಗೆ ಸೂಚಿಸಲಾಗಿದೆ.

ಇಲ್ಲಿ ೧೯೫೦ನೆಯ ಇಸವಿಯಲ್ಲಿ ರೂಢಿಯಲ್ಲಿದ್ದ ಸಂಪ್ರದಾಯವನ್ನು– ಅಭ್ಯಾಸದ ಸ್ಪಷ್ಟತೆಗಾಗಿ– 'ಮೂಲ ಸಂಸ್ಕೃತಿ'ಯೆಂದೂ ೨೦೧೦ನೆಯ ಇಸವಿಯ ಸಂಪ್ರದಾಯವನ್ನು 'ಪ್ರಕೃತ ಸಂಸ್ಕೃತಿ'ಯೆಂದೂ ಗುರುತಿಸಲಾಗಿದೆ. ಈ ೬೦ ವರ್ಷಗಳ ಕಾಲಖಂಡದಲ್ಲಿ ನಡೆದ ಶೈಥಿಲ್ಯದ ಸ್ವರೂಪದ ಕಲ್ಪನೆಯನ್ನಷ್ಟೇ ಇದು ಕೊಡುತ್ತದೆ.



ಆಕೃತಿ ೧೧. ಸಾಂಸ್ಕೃತಿಕ ಶೈಥಿಲ್ಯ ಪ್ರಕ್ರಿಯೆ – ಕಾರಣ

ಆಕೃತಿ ೧೨. ದಕ್ಷಿಣ ಕನ್ನಡದ ಹವ್ಯಕ ಬ್ರಾಹ್ಮಣರ ಮದುವೆ ಸಂಪ್ರದಾಯದ ಸಾಂಸ್ಕೃತಿಕ ಶೈಥಿಲ್ಯ

ಸಾಂಸ್ಕೃತಿಕ ಅಂಶ	೧೯೫೦ (ಮೂಲ ಸಂಸ್ಕೃತಿ)	೧೯೮೦ (ಸಂಕ್ರಮಣ ಸ್ಥಿತಿ)	೨೦೧೦ (ಶಿಥಿಲ ಸ್ಥಿತಿ)
ವಧೂವರರ ವಯಸ್ಸು	೧೬–೨೨ ವರ್ಷ	೧೮–೨೫ ವರ್ಷ	೨೪–೨೮ ವರ್ಷ
ಗೋತ್ರ	ಸಗೋತ್ರ ವಿವಾಹ ತೀರಾ ನಿಷಿದ್ಧ	ತೀರಾ ಅಪೂರ್ವವಾಗಿ ಸಗೋತ್ರ ವಿವಾಹ	ತೀರಾ ಸಾಮಾನ್ಯ
ಜಾತಕ ಹೊಂದಾಣಿಕೆ	ಅನಿವಾರ್ಯ	ಅನಿವಾರ್ಯವೇ ಅಲ್ಲ	ಐಚ್ಛಿಕ
ಉಪಜಾತಿ/ಒಳಪಂಗಡ	ವಿವಾಹ ಸಂಬಂಧ ನಿಷಿದ್ಧ	ಎಂದಾದರೊಮ್ಮೆ	ಸರ್ವೇ ಸಾಮಾನ್ಯ
ಮುಹೂರ್ತ	ರಾತ್ರಿ/ಹಗಲು	ಹೆಚ್ಚಾಗಿ ಹಗಲು	ರಾತ್ರಿ ಮುಹೂರ್ತ ತೀರಾ ಕಡಿಮೆ
ನಿಷಿದ್ಧಮಾಸ	ಆಷಾಢ	ತೀರಾ ಅಪೂರ್ವವಾಗಿ ನಿಯಮೋಲ್ಲಂಘನೆ	ನಗಣ್ಯ
ಕಾಲಾವಧಿ	೭ ದಿನಗಳು	೩ ದಿನಗಳು	ಒಂದೇ ದಿನ
ವೈದಿಕ ಕ್ರಿಯಾಭಾಗ	ತೀರಾ ಅಗತ್ಯ–ವಿಸ್ತೃತ	ತೀರಾ ಅಗತ್ಯ–ಸಂಕ್ಷಿಪ್ತ	ತೀರಾ ಅಗತ್ಯ–ಹ್ರಸ್ವ
ಸ್ಥಳ	ವಧುವಿನ ಗೃಹ	ವಧುಗೃಹ/ಕಲ್ಯಾಣ ಮಂಟಪ	ಕಲ್ಯಾಣ ಮಂಟಪ
ಆಚರಣಾ ವಿಧಿ	ನಾಂದಿ (೧೦ ದಿನಗಳ ಮೊದಲು) ಮದುವೆ (ಮೊದಲ ದಿನ) ಚತುರ್ಥಿ (೪ನೆಯ ದಿನ) ಕೆರೆ ಮೀಯಾಣ ಸಟ್ಟುಮುಡಿ (೬ನೆಯ ದಿನ) ಜೋಡು ಬಿಡುವ ಸಮ್ಮಾನ; ದಿಂಡು (ನಿಷೇಕ ಪ್ರಸ್ತ)	ನಾಂದಿ (೧೦ ದಿನಗಳ ಮೊದಲು) ಮದುವೆ (ಒಂದು ದಿನ) ಚತುರ್ಥಿ, ಕೆರೆಮೀಯಾಣ ಸಟ್ಟುಮುಡಿ (೨ನೆಯ ದಿನ) ದಿಂಡು ಹೋಮ	ಎಲ್ಲಾ ಉಪಾಂಗಗಳು ಒಂದೇ ದಿನ (ನಾಂದಿಯನ್ನು ಹೊರತುಪಡಿಸಿ)

ಸಾಂಸ್ಕೃತಿಕ ಅಂಶ	೧೯೫೦ (ಮೂಲ ಸಂಸ್ಕೃತಿ)	೧೯೮೦ (ಸಂಕ್ರಮಣ ಸ್ಥಿತಿ)	೨೦೧೦ (ಶಿಥಿಲ ಸ್ಥಿತಿ)
ಅಲಂಕಾರ	ಸಿಂಗಾರ, ಕೇದಗೆ ಮುಂತಾದ ಹೂಗಳ ಬಳಕೆ ಶುದ್ಧ ವೈದಿಕ ವೇಷಧಾರಿಯಾದ ವರ (ಮೇಲಂಗಿಯಿರದ ಉತ್ತರೀಯ)	ಮಲ್ಲಿಗೆ ಚೆಂಡು ಮುಂತಾದ ಖರೀದಿಸಿದ ಅಲಂಕಾರ ವಸ್ತುಗಳು ವರನ ಅಲಂಕಾರದಲ್ಲಿ ಐಚ್ಛಿಕತೆಗೆ ಮಹತ್ವ	ಸಿದ್ಧವಾದ ಕೇಶಾಲಂಕಾರ ಪ್ರಸಾಧನತಜ್ಞರಿಂದ ವಧುವಿನ ಅಲಂಕಾರವೂ ಅಪೂರ್ವವಲ್ಲ ವರನು ಮೇಲಂಗಿಯ ಮೇಲೆ ಉತ್ತರೀಯವನ್ನು ಧರಿಸುತ್ತಾನೆ
ಭೋಜನ ವ್ಯವಸ್ಥೆ	ಅನ್ನಸಂತರ್ಪಣೆ ಜಾತಿ ಬಾಂಧವರಿಗಷ್ಟೇ ಸೀಮಿತ ಪಂಕ್ತಿ ಭೋಜನ	ಪಂಕ್ತಿ ಭೋಜನ; ಸಡಿಲವಾದ ಜಾತಿಪ್ರಜ್ಞೆ	ಸ್ವ-ಸಹಾಯ ಪದ್ಧತಿ ಸಹಭೋಜನ
ಊಟೋಪಚಾರ	ಸರಳ (ಒಂದೇ ಸಿಹಿ) ನೀರುಳ್ಳಿ ಮುಂತಾದವುಗಳಿಗೆ ನಿಷೇಧ	ಸಡಿಲವಾದ ನಿಯಮಗಳು ಅದ್ದೂರಿಯ ಕಡೆಗೆ ವಾಲಿದ ಭೋಜನ	ತೀರಾ ಅದ್ದೂರಿ ಪುಲಾವ್ ಮುಂತಾದ ಆಧುನಿಕ ಖಾದ್ಯಗಳ ಧಾರಾಳ ಬಳಕೆ
ಭೋಜನಕ್ರಮ	ತೀರಾ ಕ್ರಮಾಗತ ಶಿಸ್ತುಬದ್ಧ ಊಟದ ಮಧ್ಯೆ ಭಗವನ್ನಾಮ ಸ್ಮರಣೆ	ಸ್ವಲ್ಪಮಟ್ಟಿಗೆ ಆಧುನಿಕತೆಯತ್ತ ಒಲವು. ಚಲನಚಿತ್ರಗಳ ಹಾಡುಗಳು ಭಾವಗೀತೆಗಳು ಊಟದ ಮಧ್ಯೆ ಪ್ರವೇಶಿಸಿದುವು	ತೀರಾ ಆಧುನಿಕ ಏಕತಾನ
ಉಪಾಂಗಗಳು	ಶೋಬಾನೆ ಹಾಡು-ತಾಳಮದ್ದಳೆ ಹರಿಕಥೆ	ತೀರಾ ಅಪೂರ್ವ	ಹೆಸರೇ ಇಲ್ಲ
ಮನರಂಜನೆ	ಮಂಗಳವಾದ್ಯ ಘೋಷ	ವಾದ್ಯ/ಧ್ವನಿಮುದ್ರಿಕೆಗಳು	ವಿದೇಶೀ ಸಂಗೀತ (!)

ಈ ಕಿರು ಸಮೀಕ್ಷೆಯಿಂದ ಕೆಲವು ಅಂಶಗಳು ಸ್ಪಷ್ಟವಾಗುತ್ತವೆ.

೧. ಹವ್ಯಕ ಸಮಾಜವು ಆಧುನೀಕರಣ ಪ್ರಕ್ರಿಯೆಗೆ ಒಳಗಾಗುತ್ತಲೇ ಇದೆ.

೨. ಹೊರಮೈಯಲ್ಲಿ ಆದಷ್ಟು ತೀವ್ರವಾಗಿ ಅದರ ಆಂತರಿಕ ಸಂವಿಧಾನದಲ್ಲಿ ಏರುಪೇರಾದಂತಿಲ್ಲ.

೩. ಈ ಸಂದರ್ಭಕ್ಕೆ ಸೀಮಿತಗೊಳಿಸಿ, 'ವೈದಿಕ ವಿಧಿಗಳ ಆಚರಣೆ'ಯನ್ನು ದಕ್ಷಿಣ ಕನ್ನಡದ ಹವ್ಯಕ ಸಂಸ್ಕೃತಿಯ ಪ್ರಬಲ ಎಳೆಗಳಲ್ಲಿ ಒಂದಾಗಿ ಗುರುತಿಸಬಹುದು.

ಈ ನೆಲೆಯ ಅಭ್ಯಾಸಿಗಳು ಇದರ ಮುಂದಿನ ಹಂತದಲ್ಲಿ "ಸಾಂಸ್ಕೃತಿಕಾಂಶಗಳ ಸಂರಕ್ಷಕ ವಿಧಾನ"ಗಳ ಶೋಧಕ್ಕೆ ಹೊರಡಬಹುದಾಗಿದೆ, ಪರಿಹಾರೋಪಾಯಗಳನ್ನು ನಿರ್ಧರಿಸ–ಬಹುದಾಗಿದೆ.

ಜಾಗತಿಕ ಸಂಸ್ಕೃತಿ (Global Culture) : ಎಲ್ಲ ಸಂಸ್ಕೃತಿಗಳೂ ಒಂದು ಮೂಲ 'ಜಾಗತಿಕ' ಅಥವಾ 'ಮಾತೃ' ಸಂಸ್ಕೃತಿಯಿಂದ ಕವಲೊಡೆದವುಗಳೇ ಆಗಿವೆ. ಅದರ ಹಲವು ಗುಣಲಕ್ಷಣಗಳು ಪ್ರಕೃತ ಸಂಸ್ಕೃತಿಯಲ್ಲಿ ಮೂಲರೂಪದಲ್ಲೇ ಆಗಲಿ, ಸಂಸ್ಕರಿತ ರೂಪದಲ್ಲೇ ಆಗಲಿ ಇದ್ದೇ ಇರುತ್ತವೆ. ಈ ಪೂರ್ಣ–ಅಂಶ (Whole-Part) ಸಂಬಂಧಗಳನ್ನು ತಾರ್ಕಿಕವಾಗಿ ಸ್ಥಾಪಿಸುವುದರ ಮೂಲಕ ಸಂಸ್ಕೃತಿಯೊಂದರ ಕುತೂಹಲಕಾರಿಯಾದ ಬೇರುಗಳ ಅನ್ವೇಷಣೆಯು ಸಾಧ್ಯವಾಗಬಹುದು. ಈ 'ಮಹತ್ ಸಂಸ್ಕೃತಿ'ಯೊಂದಿಗಿನ ಸಂಬಂಧದ ಘನಿಷ್ಠತೆ ಹಾಗೂ ಜೀವಂತಿಕೆಗಳು ಬಹುಮಟ್ಟಿಗೆ ಸಾಂಸ್ಕೃತಿಕಾಂಶಗಳ ಚಲನಶೀಲತೆ (Mobility)ಯನ್ನು, ಸ್ವೀಕಾರಾರ್ಹತೆ (Adaptability)ಯನ್ನು ನಿರ್ಧರಿಸುತ್ತವೆ. ಈ ಸ್ವೀಕಾರಾರ್ಹತೆಯೇ ಸಂಸ್ಕೃತಿಯೊಂದರ ಆದಾನ–ಪ್ರದಾನ ಯೋಗ್ಯತೆಯ ಮಾನದಂಡವೂ ಆಗುತ್ತದೆ.

ಸಮಾಜವೊಂದರ ಮೌಲ್ಯವ್ಯವಸ್ಥೆ (Value System)ಯು ಇಂಥ ಅಧ್ಯಯನಗಳಲ್ಲಿ ಗಮನಾರ್ಹವಾದ ಪಾತ್ರವನ್ನು ವಹಿಸುತ್ತದೆ. ಸಂಸ್ಕೃತಿಯೊಂದನ್ನು ಅದರ 'ಸಾಂಸ್ಕೃತಿಕ ವಲಯ' (Cultural Area)ಗಳಿಂದಾಚೆಗೆ ಒಯ್ಯುವ ವಾಹಕವಾಗಿ ಈ ಮೌಲ್ಯ ವ್ಯವಸ್ಥೆಯನ್ನು ಪರಿಗಣಿಸಬೇಕಾಗುತ್ತದೆ. ಅಂದರೆ, ಪ್ರತಿ ಸಂಸ್ಕೃತಿಗೂ ತನ್ನದೇ ಆದ ಭೌಗೋಳಿಕ, ಭಾವನಾತ್ಮಕ ಹಾಗೂ ರಚನಾತ್ಮಕ ವಲಯಗಳಿರುತ್ತವೆ. ಅವುಗಳ ವ್ಯಾಪ್ತಿಯನ್ನು ವಿಸ್ತರಿಸುವ ಕೆಲಸವನ್ನು ಈ ಮೌಲ್ಯ ವ್ಯವಸ್ಥೆಯು ಮಾಡುತ್ತದೆ. ಈ ಎಲ್ಲಾ ಉಪವಿಭಾಗಗಳ ಅಧ್ಯಯನಗಳತ್ತ ಲಕ್ಷ್ಯವನ್ನು ವಹಿಸುವ ಜ್ಞಾನಶಾಖೆಯನ್ನು 'ಸಂಸ್ಕೃತಿಶಾಸ್ತ್ರ' (Culturology) ಎಂದು ಹೆಸರಿಸಿ, ಸಮಾಜಶಾಸ್ತ್ರದಿಂದ ಪ್ರತ್ಯೇಕಿಸಬಹುದು.

ಪ್ರತಿಯೊಂದು ಸಂಸ್ಕೃತಿಗೂ ತನ್ನದೇ ಆದ ಸಾಂಸ್ಕೃತಿಕ ಕೇಂದ್ರ (Cultural Focus) ವೊಂದು ಇದ್ದೇ ಇರುತ್ತದೆ. ಉದಾಹರಣೆಗೆ : 'ತೋಡ' ಸಂಸ್ಕೃತಿಯು ಮೂಲತಃ ಎಮ್ಮೆಯನ್ನು ಪೂಜಿಸುವಂತಹದ್ದು. ತೋಡರ ಎಲ್ಲ ಸಾಂಸ್ಕೃತಿಕ ಘಟಕಗಳಲ್ಲೂ ಎಮ್ಮೆಗೆ ನಿರ್ದಿಷ್ಟ ಸ್ಥಾನವೊಂದು ಮೀಸಲಾಗಿರುತ್ತದೆ. ಇಂಥ ಸಾಂಸ್ಕೃತಿಕ ಕೇಂದ್ರಗಳ ಗುರುತಿಸುವಿಕೆ, ಜಾಗತಿಕ ಸಂದರ್ಭದಲ್ಲಿ ಅವುಗಳ ವಿಶ್ಲೇಷಣೆಗಳೂ ಕೂಡಾ ಸದ್ಯ ಕಾಲೀನ ಅಗತ್ಯಗಳೇ ಆಗಿವೆ.

ಇಷ್ಟಲ್ಲದೆ, ಎಲ್ಲಾ ಸಂಸ್ಕೃತಿಗಳಲ್ಲೂ ಹಲವಾರು ಸೂಕ್ಷ್ಮಗಳು, ವೈರುಧ್ಯಗಳು, ಜೀವ ವಿರೋಧಿಯಾದ ನಿಲುವುಗಳು ಇರುತ್ತವೆ. ವಸ್ತುನಿಷ್ಠವಾದ ದೃಷ್ಟಿಗೆ ಈ ಧನ-ಋಣ ಲಕ್ಷಣಗಳೆಲ್ಲವೂ ಅಧ್ಯಯನದ ವಸ್ತುಗಳಾಗುತ್ತವೆ. ಉದಾಹರಣೆಗೆ, ಗಂಡನ ಎಂಜಲು ತಟ್ಟೆ ಅಥವಾ ಎಲೆಯಲ್ಲಿಯೇ ಹೆಂಡತಿಯು ಊಟ ಮಾಡಬೇಕೆನ್ನುವುದು ಹವ್ಯಕ ಬ್ರಾಹ್ಮಣರ ಮನೆಗಳಲ್ಲಿ ಪಾಲಿಸುತ್ತಿದ್ದ ಸಂಪ್ರದಾಯಗಳಲ್ಲಿ ಒಂದು. ಇಪ್ಪತ್ತನೆಯ ಶತಮಾನದ ಕೊನೆಯವರೆಗೂ ಸುಶಿಕ್ಷಿತ ವರ್ಗದವರಲ್ಲಿ ಕೂಡಾ- ಈ ರೂಢಿಯು ಇನ್ನೂ ಅಲ್ಲಿ, ಇಲ್ಲಿ ಉಳಿದುಕೊಂಡದ್ದಿದೆ. ಮುಂಬಯಿಯಂಥ ಮಹಾನಗರಗಳಿಗೆ ವಲಸೆ ಹೋಗುವಾಗ ಕೂಡಾ ಅವರು ಈ ಅನಿಷ್ಟ ಸಂಪ್ರದಾಯವನ್ನು ಜೊತೆಗೇ ಒಯ್ದ ನಿದರ್ಶನಗಳೂ ಇವೆ. ಇಂಥ ಅಮಾನುಷ ದೃಷ್ಟಿಯ ಮೂಲವನ್ನು ಅರ್ಥೈಸಿಕೊಳ್ಳುವುದು ಸಾಂಸ್ಕೃತಿಕ ಅಧ್ಯಯನದ ವ್ಯಾಪ್ತಿಯ ಒಳಗೇ ಬರುತ್ತದೆ.

ಇದರ ಇನ್ನೊಂದು ಮಗ್ಗುಲಿನಲ್ಲಿ, ಪ್ರತಿಯೊಂದು ಸಂಸ್ಕೃತಿಯ ಉದಾತ್ತ ಅಂಶಗಳನ್ನು, ಉದಾರವಾದಿತ್ವವನ್ನು ಗುರುತಿಸುವುದರ ಮೂಲಕವೂ ಸಾಂಸ್ಕೃತಿಕ ಐಕ್ಯ (Cultural Intigration) ಸ್ಥಾನಗಳನ್ನು ನಿರ್ದೇಶಿಸಬಹುದು. ತಾತ್ವಿಕವಾಗಿ, ಇಂಥ ಆದರ್ಶದ ಕಲ್ಪನೆಯೇ 'ಪರಿಪೂರ್ಣ ಸಂಸ್ಕೃತಿ' (Perfect Culture) ಅಥವಾ 'ಸಂಪೂರ್ಣ ಸಂಸ್ಕೃತಿ' (Whole Culture) ಮುಂತಾದ ಪರಿಕಲ್ಪನೆಗಳಿಗೆ ಅವಕಾಶ ಮಾಡಿಕೊಡುತ್ತದೆ. ಅಂಥ ಒಂದು 'ಜಾಗತಿಕ ಸಂಸ್ಕೃತಿ'ಯಿರುವ ಬಗೆಗಿನ ಪ್ರಾಮಾಣಿಕ ಸಂದೇಹಗಳನ್ನು ಇಟ್ಟುಕೊಂಡು ಕೂಡಾ, ಜಾಗತಿಕ ಸಂಸ್ಕೃತಿಗೆ ಯೋಗದಾನ ನೀಡಬಲ್ಲ ಸಾಂಸ್ಕೃತಿಕಾಂಶಗಳು ಎಲ್ಲ ಪ್ರಾದೇಶಿಕ ಸಂಸ್ಕೃತಿಗಳಲ್ಲೂ ಇದ್ದೇ ಇವೆ ಎಂದು ನಿರ್ವಿವಾದವಾಗಿ ಹೇಳಬಹುದು. ಅವುಗಳನ್ನು ಮುಕ್ತ ಮನಸ್ಸಿನಿಂದ ಶಾಸ್ತ್ರೀಯವಾಗಿ ಗುರುತಿಸಿ, ವರ್ಗೀಕರಿಸಿ, ಪರಿಷ್ಕರಿಸುವ ಕಾರ್ಯವು ಮಾತ್ರ ನಡೆಯಬೇಕಾಗಿದೆ.

ಸಾಂಸ್ಕೃತಿಕ ಅಧ್ಯಯನಗಳ ಅಗತ್ಯ ಹಾಗೂ ಸಾಧ್ಯತೆಗಳ ಹಿನ್ನೆಲೆಯಲ್ಲಿ, ಸಾಂಸ್ಕೃತಿಕಾಂಶಗಳು ಅಭಿವ್ಯಕ್ತವಾಗುವ ಮಾಧ್ಯಮಗಳನ್ನು ಪರಿಗಣಿಸಬೇಕಾಗುತ್ತದೆ. ಸಮಾಜವೊಂದರ ಸಂವೇದನೆಗಳಿಗೆ ದನಿ ನೀಡುವ ಚಿತ್ರ, ಶಿಲ್ಪ, ಸಾಹಿತ್ಯ ಮುಂತಾದ ಸೃಷ್ಟಿಶೀಲ ಕಲಾಪ್ರಕಾರಗಳು ಈ ದೃಷ್ಟಿಯಿಂದ ಮಹತ್ವದ ಮಾಹಿತಿಗಳನ್ನು ನೀಡುತ್ತವೆ.

ಸಾಂಸ್ಕೃತಿಕ ಚರಿತ್ರೆಯ ವಿನ್ಯಾಸ ಹಾಗೂ ಪುನರ್ ರಚನೆಯ ದೃಷ್ಟಿಗಳಿಂದ ಸಾಹಿತ್ಯದ ಕೊಡುಗೆಯು ಮಹತ್ವದ್ದಾಗಿದೆ. ಸಾಂಸ್ಕೃತಿಕ ಸಂಶೋಧನೆಯ ಈ ಆಯಾಮವು ಸಂಶೋಧಕನ ತಾಳ್ಮೆಗೆ, ಪರಿಶ್ರಮಕ್ಕೆ, ಶಿಸ್ತಿಗೆ, ಶಾಸ್ತ್ರೀಯ ದೃಷ್ಟಿಕೋನಕ್ಕೆ ಸವಾಲಾಗುತ್ತದೆ. ಸಾಹಿತ್ಯದ ಸಹಾಯದಿಂದ ಸಾಂಸ್ಕೃತಿಕ ಚರಿತ್ರೆಯ ನಿರ್ಮಾಣವು ಅಧ್ಯಯನದ ಇನ್ನೊಂದು ಸಾಧ್ಯತೆಯನ್ನು ಸೂಚಿಸುತ್ತದೆ. ಅಂದರೆ, ಒಂದೆಡೆಯಿಂದ ಸಮಕಾಲೀನ ಸಂಸ್ಕೃತಿಯನ್ನು ಇದು ಲಕ್ಷ್ಯದಲ್ಲಿರಿಸಿಕೊಂಡರೆ, ಇನ್ನೊಂದೆಡೆಯಿಂದ ಆ ಮೂಲಕ ಪುನರ್ ರಚನೆಯನ್ನು ಪಡೆಯುವ ಸಂಸ್ಕೃತಿಯ ಚರಿತ್ರೆಯ ಬಗೆಗೆ ಆಸಕ್ತವಾಗುತ್ತದೆ. ಇಂಥ ಅಧ್ಯಯನಗಳು ಸಮಾಜವೊಂದರ ಸಾಂಸ್ಕೃತಿಕ ಘಟಕಗಳನ್ನು ಪ್ರತ್ಯೇಕಿಸುವ, ಬೇರೆ ಬೇರೆ ಸಾಹಿತಿಗಳು ಅವುಗಳ ಸಾಂಸ್ಕೃತಿಕಾಂಶಗಳನ್ನು ಚಿತ್ರಿಸಿದ ರೀತಿಗಳನ್ನು ಸಂಗ್ರಹಿಸುವ ಭಿನ್ನ ನೆಲೆಗಳಿಂದ ಇವುಗಳನ್ನು ಗ್ರಹಿಸಿ, ವರ್ಗೀಕರಿಸುವ ಕಾರ್ಯಗಳನ್ನು ಬಹಳ ಎಚ್ಚರದಿಂದ ಮಾಡ-ಬೇಕಾಗುತ್ತದೆ. ಇದರ ವ್ಯಾಪ್ತಿಯನ್ನು ಸ್ವಲ್ಪ ವಿಸ್ತರಿಸಿ, ಸಂಸ್ಕೃತಿಯೊಂದರ ಚಿತ್ರಣವನ್ನು ಒಂದು ಪೂರ್ಣ ಘಟಕವಾಗಿ ತೆಗೆದುಕೊಳ್ಳಬಹುದಾಗಿದೆ.

ಉದಾಹರಣೆಗೆ, ಶಿವರಾಮ ಕಾರಂತ, ವೈದೇಹಿ ಮೊದಲಾದ ಸಾಹಿತಿಗಳು ಚಿತ್ರಿಸುವ ಕೋಟ ಸಮಾಜ. ವಸ್ತುವು ಒಂದೇ ಆದರೂ ನೋಡುವ ದೃಷ್ಟಿಗಳಲ್ಲಿ ವ್ಯತ್ಯಾಸವಿರುವುದು ಸ್ಪಷ್ಟವಾಗುತ್ತದೆ. ಈ ಹೋಲಿಕೆಯನ್ನು ಬಹಳ ಸ್ಥೂಲ ನೆಲೆಗೆ ನಿಲ್ಲಿಸುವುದಾದರೆ, ಕಾರಂತರ ದೃಷ್ಟಿಯಲ್ಲಿ ಕೋಟ ಸಮಾಜವು ಒಂದು ಸಾಮಾಜಿಕ ಘಟಕವಾದರೆ ವೈದೇಹಿಯವರಿಗೆ ಅದೊಂದು ಸಾಹಿತ್ಯಕ್ಕೆ ವಸ್ತುವಾಗಬಲ್ಲ ಸಾಂಸ್ಕೃತಿಕ ವಲಯ. ಆದುದರಿಂದ, ಒಬ್ಬರ ಚಿತ್ರಣದಲ್ಲಿ ಆ ಸಮಾಜದ ಬಾಹ್ಯ ರಚನೆ, ಹೊರ ಮುಖವಾದ ಸಂಬಂಧಗಳು, ದೌರ್ಬಲ್ಯಗಳು ಇದ್ದರೆ ಇನ್ನೊಬ್ಬರು ಅದರ ಸಾಮೂಹಿಕ ಸಂವೇದನೆಗಳನ್ನು ಹೆಚ್ಚು ಸ್ತ್ರೀವಾದಿ ನೆಲೆಯಿಂದ ಗ್ರಹಿಸುತ್ತಾರೆ. ಈ ಎಲ್ಲ ಮಗ್ಗುಲುಗಳ ವ್ಯವಸ್ಥಿತವಾದ ಸಂಕಲನವು ಆ ಸಮಾಜದ ಎಲ್ಲ ಮುಖಗಳನ್ನು, ಸಂಕೀರ್ಣತೆಗಳನ್ನು, ಒಳಸುಳಿಗಳನ್ನು ಸಮರ್ಪಕವಾಗಿ ದಾಖಲಿಸಬಲ್ಲುದು.

ಸಾರಾ ಅಬೂಬಕ್ಕರ್, ಫಕೀರ್ ಮಹ್ಮದ್ ಕಟ್ಪಾಡಿ, ಬೊಳ್ವಾರು ಮಹಮದ್ ಕುಂಞಿ ಮುಂತಾದವರು ಹೊರಜಗತ್ತಿಗೆ ಅಪರಿಚಿತವಾಗಿದ್ದ 'ಸಂವೃತ ಸಂಸ್ಕೃತಿ' ಯೊಂದನ್ನು ತಮ್ಮ ಬರೆವಣಿಗೆಗಳ ಮೂಲಕ ಪರಿಚಯಿಸುತ್ತಿದ್ದಾರೆ; ಆದರೆ ಅಭಿವ್ಯಕ್ತಿಯ ನೆಲೆಗಳು ಬೇರೆಯಾಗುತ್ತವೆ. ಹೀಗೆ ಸಮಕಾಲೀನ ಸಾಹಿತ್ಯವು ಈ ದೃಷ್ಟಿಯ ಅಧ್ಯಯನಗಳಿಗೆ ವಿಪುಲ ಅವಕಾಶಗಳನ್ನು ಕಲ್ಪಿಸುತ್ತದೆ. ಇದನ್ನು ಸ್ವಲ್ಪ ವಿಸ್ತರಿಸುವುದಾದರೆ, ಒಂದೇ ಸಮಾಜದ ಚಿತ್ರಣವು ಬೇರೆ ಬೇರೆ ಕಾಲಖಂಡಗಳಲ್ಲಿ ಹೇಗೆ ಬೇರಾಗುತ್ತದೆ ಎನ್ನುವುದರ ಅಭ್ಯಾಸವು ಅದರ ಚಾರಿತ್ರಿಕ ಸ್ಥಿತ್ಯಂತರಗಳಿಗೆ ಕನ್ನಡಿಯಾಗುತ್ತದೆ. ಅಂದರೆ, ಸಂಸ್ಕೃತಿಯೊಂದರ ಬದಲಾವಣೆಗಳ ಹಂತಗಳನ್ನು ಈ ರೀತಿಯಿಂದ ಗುರುತಿಸಬಹುದು.

ಪಂಪನ 'ಆದಿಪುರಾಣ' ಮತ್ತು ರತ್ನಾಕರವರ್ಣಿಯ 'ಭರತೇಶ ವೈಭವ'ಗಳನ್ನು ಉದಾಹರಣೆಗಾಗಿ ತೆಗೆದುಕೊಂಡರೆ, ಬಾಹುಬಲಿ–ಭರತರ ಸಂಘರ್ಷದ ಹಿನ್ನೆಲೆಯಲ್ಲಿ ಒಂದು ಒಳ್ಳೆಯ ನಿದರ್ಶನವಿದೆ. ಪಂಪನಲ್ಲಿ ವೈರಾಗ್ಯದ ಹಿನ್ನೆಲೆ ಮತ್ತು ಸಂದರ್ಭಗಳಿಗೆ ಸಾಕಷ್ಟು ಆಂತರಿಕವಾದ, ತಾರ್ಕಿಕವಾದ ಬೆಳವಣಿಗೆಯು ಕಾಣಿಸುತ್ತದೆ. ಆದರೆ ಅದೇ 'ಭರತೇಶ ವೈಭವ'ದಲ್ಲಿ ಅ–ವೈರಾಗ್ಯಪರವಾದ ಒಂದು ಒಳಧ್ವನಿ ಉದ್ದಕ್ಕೂ ಕಾಣಿಸಿ, ಒಟ್ಟು ಸಂದರ್ಭದ ಗಹನತೆಯನ್ನು ಸರಳಗೊಳಿಸುತ್ತದೆ; ದುರ್ಬಲಗೊಳಿಸುತ್ತದೆ.

ಎಲ್ಲಾ ಸಾಂಸ್ಕೃತಿಕ ಪರಿಸರಗಳಿಗೂ ಭೌತಿಕ (Terrestrial) ಮತ್ತು ಪಾರಮಾರ್ಥಿಕ (Celestial) ಎನ್ನುವ ಎರಡು ನೆಲೆಗಳಿರುತ್ತವೆ. ಎಲ್ಲ ಸಂಸ್ಕೃತಿಗಳ ತಿರುಳಿರುವುದು ಈ ಎರಡೂ ನೆಲೆಗಳ ಸಾಮರಸ್ಯದಲ್ಲಿ. ಅವು ಪ್ರತಿಪಾದಿಸುವ, ನಂಬುವ, ಆಚರಿಸುವ ಮೌಲ್ಯಗಳು ಇದರ ಒಂದು ಪಾತಳಿಯನ್ನು ಗುರುತಿಸುತ್ತವೆ. ಈ ಮೌಲ್ಯಗಳು ಸಮುದಾಯವೊಂದರ ಭೌತಿಕ, ಸಾಮಾಜಿಕ, ಸಾಂಸ್ಕೃತಿಕ ಮತ್ತು ಮಾನಸಿಕ ಸ್ವಾಸ್ಥ್ಯ ರಕ್ಷಣೆಗೆ ಅನಿವಾರ್ಯವಾಗಿವೆ. ಈ ಮೌಲ್ಯಗಳನ್ನು ಸಾಮಾಜಿಕ–ಮನಶ್ಶಾಸ್ತ್ರೀಯ (Socio-Psychological) ಮತ್ತು ಜ್ಞಾನಮೀಮಾಂಸಕ (Epistimological) ದೃಷ್ಟಿಗಳಿಂದ ಪರಿಗ್ರಹಿಸುವ ಸಾಹಿತ್ಯ ಕೃತಿಗಳು ಕನ್ನಡದ ಸಂದರ್ಭದಲ್ಲಂತೂ ಹೇರಳವಾಗಿವೆ.

ಈ ನೆಲೆಯ ಅಧ್ಯಯನಗಳು ಸಂಸ್ಕೃತಿಯೊಂದರ ಮೌಲ್ಯನಕ್ಷೆ (Value Map) ಹಾಗೂ ಮೌಲ್ಯ ರಚನೆ(Value Structure)ಗಳ ಸ್ಪಷ್ಟ ಕಲ್ಪನೆಯೊಂದಿಗೆ ಮೊದಲಾಗುತ್ತವೆ.

'ಲೋಕಸಂಗ್ರಹ', 'ಲೋಕದೃಷ್ಟಿ', 'ಲೋಕಕಲ್ಯಾಣ'ಗಳಂಥ ಪರಿಕಲ್ಪನೆಗಳು ಈ ದೃಷ್ಟಿಯಿಂದ ಪ್ರಸ್ತುತವಾಗುತ್ತವೆ.

ಉದಾಹರಣೆಗೆ, ಭೈರಪ್ಪನವರಂಥ ಸಾಹಿತಿಗಳು ಮೌಲ್ಯ ಸಂಘರ್ಷ (Value Clash)ವನ್ನು ಬಹಳ ಕಲಾತ್ಮಕವಾಗಿ ಹಿಡಿದಿಡುತ್ತಾರೆ. ಆದರೆ ನಿರ್ದಿಷ್ಟ ಮೌಲ್ಯ ನಿರ್ಣಯ (Value Judgement)ಗಳಿಗೆ ತಲುಪುವುದೇ ಇಲ್ಲ. ಇದನ್ನು ಸ್ಪಷ್ಟಪಡಿಸಬೇಕಾದರೆ, ಅವರ ಕೃತಿಗಳ ಬಾಹ್ಯ ಚೌಕಟ್ಟು ಬದಲಾವಣೆಯನ್ನು, ಪ್ರಗತಿಪರ ಧೋರಣೆಗಳನ್ನು ಹೊಂದಿರುತ್ತದೆ. ಆದರೆ, ಅಂತರಂಗದಲ್ಲಿ ಸಾಂಪ್ರದಾಯಿಕವಾದ ಮೌಲ್ಯ ವ್ಯವಸ್ಥೆಗೇ ಒತ್ತು ಕೊಡುತ್ತಾರೆ. ಈ ಅಂತಸ್ಸತ್ವವನ್ನು ಗ್ರಹಿಸುವ ಸಂಶೋಧಕನಿಗೆ ಮಾತ್ರ ಅವರು ಪ್ರತಿಪಾದಿಸುವ ಮೌಲ್ಯ ವ್ಯವಸ್ಥೆಯನ್ನು ಗುರುತಿಸುವುದು ಸಾಧ್ಯವಾಗುತ್ತದೆ.

ಅನಂತಮೂರ್ತಿಯವರ ಬರೆಹಗಳಲ್ಲಿ ಕೂಡಾ ಮೌಲ್ಯ ಸಂಘರ್ಷವಿದೆಯೇ ಹೊರತಾಗಿ ತಾತ್ವಿಕ-ಆನ್ವಯಿಕ ನೆಲೆಗಳಲ್ಲಿ ಮೌಲ್ಯ ಪ್ರತಿಪಾದನೆಯು ಕಂಡುಬರುವುದಿಲ್ಲ. ಈ ದೃಷ್ಟಿಯಿಂದ, ಸಮಕಾಲೀನ ಬರೆಹಗಳ ಪುನಾ ಮೌಲ್ಯಮಾಪನವು ಸಂಶೋಧನೆಯ ಹೊಸ ಸಾಧ್ಯತೆಗಳನ್ನು ಸೂಚಿಸುತ್ತದೆ.

ಸೃಷ್ಟಿಶೀಲ ಸಾಹಿತ್ಯದಲ್ಲಿ 'ಅನ್ವೇಷಣೆ'ಯು ಒಂದು ಆದಿಮ ಪ್ರತಿಮೆ (Archetype) ಯಾಗಿ ವ್ಯಕ್ತವಾಗಿರುವುದನ್ನು ಕಾಣುತ್ತೇವೆ. ಈ ಹುಡುಕಾಟವೇ ಒಳಮುಖವಾಗಿ ಪ್ರವೃತ್ತವಾದಾಗ, ಸಾಂಸ್ಕೃತಿಕ ಬೇರುಗಳ ಹುಡುಕಾಟ, ಅದರಿಂದ ಹುಟ್ಟಿಕೊಳ್ಳುವ ತಳಮಳ, ಘರ್ಷಣೆ, ತುಮುಲಗಳು ಸಾಹಿತ್ಯದಲ್ಲಿ ಅಭಿವ್ಯಕ್ತವಾಗುವ ರೀತಿಯೂ ಅನನ್ಯವೇ ಆಗುತ್ತದೆ. 'ಕಾನೂರು ಸುಬ್ಬಮ್ಮ ಹೆಗ್ಗಡತಿ', 'ಮರಳಿ ಮಣ್ಣಿಗೆ' ಮುಂತಾದ ಕಾದಂಬರಿಗಳಲ್ಲಿ ಈ ಬೇರುಗಳ ಹುಡುಕಾಟದ ಅನೇಕ ಮುಖಗಳು ಚಿತ್ರಿತವಾಗಿವೆ.

ಕನ್ನಡದ ಸಣ್ಣ ಕಥೆಗಳಲ್ಲಿಯೂ ಈ ಬಗೆಯ ಚಿತ್ರಣಗಳನ್ನು ಧಾರಾಳವಾಗಿ ಕಾಣುತ್ತೇವೆ. ತನ್ನ ಸಾಂಸ್ಕೃತಿಕ ಮೂಲದ ಸೆಳೆತ, ಅದರಿಂದ ದೂರ ಸರಿಯುತ್ತಿರುವುದರ ಬಗೆಗೆ ಖೇದ, ಪರಿಸ್ಥಿತಿಯನ್ನು ನಿಭಾಯಿಸಲಾರದ ಅಸಹಾಯಕತೆಗಳ ಮೂಲಕ ಈ ಪಾತ್ರಗಳು ಸಂಕೀರ್ಣ ಜಗತ್ತೊಂದನ್ನು ತೆರೆಯುತ್ತವೆ.

ಸಮುದಾಯದ ಸಾಂಸ್ಕೃತಿಕ ಅಗತ್ಯಗಳಿಗೆ ಅನುಗುಣವಾಗಿ, ಸಾಹಿತ್ಯವೂ ತನ್ನ ರೂಪ-ಆಶಯಗಳನ್ನು ಬದಲಾಯಿಸಿಕೊಳ್ಳುವುದನ್ನು ಇತಿಹಾಸದ ಉದ್ದಕ್ಕೂ ಕಾಣುತ್ತೇವೆ. ಅಂದರೆ, ಪರಿವರ್ತನಶೀಲವಾದ ಸಂಸ್ಕೃತಿಯು ಸಾಹಿತ್ಯವನ್ನು ನಿಯಂತ್ರಿಸುವ ಪ್ರಬಲ ಶಕ್ತಿಗಳಲ್ಲಿ ಒಂದಾಗಿದೆ. ತಕ್ಷಣವೇ ಕೊಡಬಹುದಾದ ಉದಾಹರಣೆಯೆಂದರೆ, ಕನ್ನಡ ದಲಿತ ಸಾಹಿತ್ಯ ಪರಂಪರೆ. ನಿರ್ದಿಷ್ಟ ಕಾಲಖಂಡದ ಸಾಂಸ್ಕೃತಿಕ ಅಗತ್ಯವನ್ನು ಆ ಕಾಲದ ವಿಶಿಷ್ಟ ಸಾಹಿತ್ಯ ಪ್ರಕಾರವು ಪೂರೈಸುತ್ತದೆ. ಹೀಗಾಗದೆ, ಒಂದುವೇಳೆ ನಿರ್ದಿಷ್ಟ ಸಾಂಸ್ಕೃತಿಕ ಬೇಡಿಕೆ ಅಥವಾ ತುರ್ತು ಇರದೆ ಇದ್ದಾಗ ಒಂದು ಸಾಹಿತ್ಯ ಪ್ರಕಾರವು ಮೈದೋರಿದರೆ ಅದು ಅಲ್ಪಾಯುಷಿಯೇ ಆಗುತ್ತದೆ. (ಉದಾ : ಕನ್ನಡದ ನವ್ಯ ಪರಂಪರೆ).

ಈ ರೀತಿಯಲ್ಲಿ ಕನ್ನಡದ ಅಧ್ಯಯನದಲ್ಲಿ 'ಸಾಂಸ್ಕೃತಿಕ ವಿವೇಚನೆ'ಯ ಅಂಶವನ್ನು ಸೇರಿಸುವ ದೃಷ್ಟಿಯಿಂದ ಇಲ್ಲಿ ಕೆಲವು ವಿಚಾರಗಳನ್ನು ಪ್ರಸ್ತುತಗೊಳಿಸಿದೆ. ಇದನ್ನು

ಮುಂದುವರೆಸಿ, ಅನ್ವಯಗೊಳಿಸುವ ಅವಶ್ಯಕತೆಯಿದೆ. 'ಸಾಂಸ್ಕೃತಿಕ ಸಂವಾದ' (Cultural Dialogue)ದ ಮೂಲಕ ನಮ್ಮ ಹಳಗನ್ನಡ–ನಡುಗನ್ನಡದ ಕೃತಿಗಳನ್ನು ಅಭ್ಯಾಸ ಮಾಡಬೇಕು. ಇತರ ವಿಧಾನಗಳು ಅನವಶ್ಯಕ ಎಂಬುದು ಇಲ್ಲಿಯ ಅರ್ಥವಲ್ಲ. 'ಸಾಂಸ್ಕೃತಿಕ ಸಂವಾದ'ವೂ ಒಂದು ಸಶಕ್ತ ಉಪಕರಣವಾಗಬೇಕು ಎಂಬುದಷ್ಟೇ ಇಲ್ಲಿಯ ಆಶಯವಾಗಿದೆ.

■

ಸಂಶೋಧನೆ

೬

ಸಂಶೋಧನ ಬರಹಗಳ ಭಾಷೆ

ಡಾ. ಸೋಮಶೇಖರಗೌಡ

ಯಾವ ಸಂದರ್ಭದಲ್ಲೂ ಭಾಷೆ ಸಂವಹನ ಮಾಧ್ಯಮವಾಗಿ ಕೆಲಸ ನಿರ್ವಹಿಸುತ್ತದೆ. ಆದರೆ ಹಾಗೆ ಅದು ಸಂವಹನವಾಗಿ ಸೇವೆ ಸಲ್ಲಿಸುವಾಗ ತನ್ನ ವ್ಯಾಪ್ತಿಯನ್ನು ಗುರುತಿಸಿಕೊಳ್ಳುವ ಪ್ರಯತ್ನಕ್ಕೆ ಮುಂದಾಗುವುದಿಲ್ಲ. ಹಾಗಾಗಿ, ಭಾಷೆಗೆ ತನ್ನ ಬಳಕೆಯ ವ್ಯಾಪ್ತಿಯನ್ನು ಅಂದಾಜು ಮಾಡುವ ಶಕ್ತಿ ಇಲ್ಲ. ಭಾಷೆ ಸಂವಹನ ಎಂದಷ್ಟೇ ಹೇಳುವಾಗ, ಅದರ ಹಾಸುಬೀಸು ಎತ್ತಣಿಂದೆತ್ತವಾದರೂ ಗೋಚರವಾಗಬಹುದು. ಆದ್ದರಿಂದಲೇ ಒಂದು ಭಾಷಿಕ ನೆಲೆಗಳನ್ನು ನಿರ್ದಿಷ್ಟವಾಗಿ ಹೀಗೇ ಎಂದು ಖಚಿತವಾಗಿ ಹೇಳಲು ಸಾಧ್ಯವಿಲ್ಲ. ಇದು ಕನ್ನಡ ಭಾಷೆಗೆ ಮಾತ್ರವಲ್ಲ; ಎಲ್ಲಾ ಭಾಷೆಗಳ ಸಂದರ್ಭದಲ್ಲೂ ಹಾಗೆಯೇ ಇರುತ್ತದೆ. ಭಾಷಿಕವಾಗಿ ವಸ್ತು ವಿವರಗಳನ್ನು ಗಮನಿಸುವಾಗ, ಒಂದು ನಿರ್ದಿಷ್ಟತೆಯ ವಿಚಾರ ಇರುತ್ತಾದರೂ, ಅದು ಭಾಷೆಯ ಮಿತಿಯನ್ನು ಹೇಳುವುದಿಲ್ಲ. ಈ ಹಿನ್ನೆಲೆಯಲ್ಲಿ ಸಂಶೋಧನ ಬರಹಗಳ ಭಾಷೆಯನ್ನು ಗಮನಿಸಬೇಕಾಗುತ್ತದೆ. ಒಂದು ಸಂದರ್ಭವನ್ನು ಗ್ರಹಿಸುವ ರೀತಿ, ಅದಕ್ಕೆ ಬಳಸುವ ಭಾಷೆಯ ಮಿಡಿತವನ್ನು ಅವಲಂಬಿಸಿರುತ್ತದೆ.

ಸಂಶೋಧನೆಯನ್ನು ಒಂದು ಸಮಗ್ರ ತಾತ್ವಿಕ ಚೌಕಟ್ಟಿನಲ್ಲಿ ನೋಡಬೇಕಾಗುತ್ತದೆ. ಸಂಶೋಧನೆಯ ಆರಂಭಿಕ ಲಕ್ಷಣವೇ ಸಮಗ್ರವಾದುದನ್ನು ಹೇಳುವ ಮತ್ತು ಸಮಗ್ರವಾಗಿ ಗ್ರಹಿಸುವ ರೀತಿಗೆ ಸಂಬಂಧಿಸಿರುತ್ತದೆ. ಒಂದು ವಿಷಯದ ಬಗ್ಗೆ ಸಂಶೋಧನೆ ಮಾಡುವುದು ಎಂದರೆ, ಆ ವಿಷಯದ 'ಅ'ಯಿಂದ 'ಳ'ವರೆಗಿನ ವಿವರಗಳನ್ನು ಕಲೆಹಾಕಿ, ಸಂಶೋಧನೆಯ ಶೀರ್ಷಿಕೆ ಏನಿದೆಯೊ ಅದಕ್ಕೆ ಪೂರಕವಾಗಿ ಕ್ರೋಡೀಕರಿಸಿಕೊಂಡು ಅಧ್ಯಯನ ಮಾಡುವ ಕ್ರಮ ಆಗಿರುತ್ತದೆ. ಇಲ್ಲಿ ಸಂಶೋಧಕ ತನ್ನ ಗ್ರಹಿಕೆಯ ಆಳ-ಅಗಲಗಳನ್ನು ಹೇಗೆ ನಿರ್ವಚಿಸಿಕೊಳ್ಳುತ್ತಾನೆ ಎಂಬುದನ್ನು ಗ್ರಹಿಸಿಕೊಂಡೇ, ಅದಕ್ಕೆ ಪೂರಕವಾಗಿ ಬಳಸುವ ಭಾಷೆಯ ಸ್ವರೂಪವನ್ನು ನಿರ್ಧಾರ ಮಾಡಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಸಂಶೋಧನೆಯಲ್ಲಿ

ಬಳಕೆಯಾಗುವ ಭಾಷೆಯ ಸ್ವರೂಪ ಬೇರೆಬೇರೆಯಾಗಿರುತ್ತದೆಯೇ ಎಂಬ ಪ್ರಶ್ನೆ ಸಹಜವಾಗಿ ಮೂಡುತ್ತದೆ. ಇದನ್ನು ಅರಿಯಬೇಕಾದರೆ, ಕೈಗೊಳ್ಳಲಿರುವ ಸಂಶೋಧನೆಯ ಸ್ವರೂಪವನ್ನು ಅದರ ಭಾಷಿಕ ಪರಿಭಾಷೆಯೊಳಗಿಟ್ಟೇ ಅಧ್ಯಯನ ಮಾಡಬೇಕು.

ಶುದ್ಧ ವ್ಯಾಕರಣ ಹಿನ್ನೆಲೆಯನ್ನಿಟ್ಟುಕೊಂಡಿರುವ ಹಾಗೂ ಹಾಗೆಯೇ ವ್ಯಾಕರಣ ಹಿನ್ನೆಲೆಯಲ್ಲಿ ಸಂಶೋಧನೆಯ ಜಾಡು ಸಾಗುವ ರೀತಿಗೆ ಯಾವ ಭಾಷಾಸ್ವರೂಪ ಹೊಂದುತ್ತದೊ ಅದನ್ನು ಆ ಸಂದರ್ಭದ ಅಭಿವ್ಯಕ್ತಿಯಾಗಿಟ್ಟುಕೊಳ್ಳಬೇಕಾಗುತ್ತದೆ. ಯಾಕೆಂದರೆ, ಸಂಶೋಧಕ ಯಾವ ಸಂದರ್ಭದ ವಸ್ತು, ವಿಷಯಗಳೊಡನೆ ಸಂವಾದ ನಡೆಸುತ್ತಾನೊ ಆ ಸಂದರ್ಭವೇ ತನಗೆ ಬೇಕಾದ ಭಾಷೆಯ ಅಗತ್ಯತೆಯನ್ನು ಕಂಡುಕೊಳ್ಳುತ್ತದೆ. ಶುದ್ಧ ವ್ಯಾಕರಣ ಹಿನ್ನೆಲೆ ಇರುವ ಸಂಶೋಧನೆಗೆ ಆಧುನಿಕ ಸಂದರ್ಭದ ಸಂಶೋಧನೆಗಾಗಿ ಬಳಸುವ ಭಾಷೆಯನ್ನು ಗ್ರಹಿಕೆಯಾಗಿ ರೂಪಿಸಿಕೊಳ್ಳಬೇಕು ಎನ್ನುವುದು ಸರಿಯಾದ ಕ್ರಮವಾಗುವುದಿಲ್ಲ. ಸಂಶೋಧನೆಗೆ ತನ್ನದೇ ಆದ ನ್ಯಾಯ ಸಿಂಧುತ್ವ ಇದೆ. ಅದನ್ನು ಮೀರಿ ಆ ಸಂಶೋಧನೆ ತನ್ನನ್ನು ಗುರುತಿಸಿಕೊಳ್ಳಲಾರದು. ವ್ಯಾಕರಣ ಒಂದು ಶಾಸ್ತ್ರಬದ್ಧವಾದ ಸಂಶೋಧನ ಕ್ರಮವಾಗಿರುವಾಗ, ಭಾಷಿಕ ಸ್ವರೂಪವೂ ಅದರ ಮೈಯಾಂತು ತನ್ನನ್ನು ನಿರ್ವಚಿಸಿಕೊಳ್ಳಬೇಕಾಗುತ್ತದೆ. ಹಾಗೆ ಭಾಷೆಗೂ ಒಂದು ನಿರ್ವಚನ ಇದೆ ಎನ್ನುವಾಗ, ಅದು ತನ್ನ ಆ ನಿರ್ವಚನವನ್ನು ಸ್ವತಂತ್ರವಾಗಿ ತೋರಿಸಿಕೊಳ್ಳಬಾರದು ಎನ್ನಲಾದೀತೆ? ಒಂದು ವೇಳೆ ಭಾಷೆಯ ಸಾಂಸ್ಕೃತಿಕತೆಯನ್ನು ಸಂಶೋಧನೆಯ ಸಾಂಸ್ಕೃತಿಕತೆಗೆ ಕ್ರೋಡೀಕರಿಸಿಕೊಂಡರೆ, ಅಂದರೆ ಭಾಷೆಯ ಸಾಂಸ್ಕೃತಿಕ ಮಹತ್ವವನ್ನು ಸಂಶೋಧನೆಯ ಸಾಂಸ್ಕೃತಿಕ ಮಹತ್ವದೊಡನೆ ಏಕೀಭರ್ವಿಸುವಾಗ ಮೂಡುವ ಆಂತರಿಕ ಗ್ರಾಹ್ಯ ಗ್ರಾಂಥಿಕ ನಿಕಷವನ್ನು ಒಟ್ಟು ಸಾಂಸ್ಕೃತಿಕ ಚೌಕಟ್ಟಿನಲ್ಲಿಟ್ಟು ನೋಡಬೇಕಾಗುತ್ತದೆ. ಇದು ಸಂಶೋಧನೆ ಮತ್ತು ಭಾಷೆ ಎಂಬ ಎರಡು ಸಮ ಬಿಂದುಗಳ ಒಡನಾಟದ ಪ್ರಕ್ರಿಯೆಯಾಗುತ್ತದೆ. ಒಂದು ಸ್ಥಿತಿ ಘಟಿಸುತ್ತದೆ ಎಂದರೆ ಅದನ್ನು ಪ್ರಕ್ರಿಯಾರೂಪದಲ್ಲಿಯೇ ನೋಡುವ ಮತ್ತು ಗ್ರಹಿಸುವ ಎರಡೂ ನೆಲೆಗಳು ಕ್ರಿಯಾರೂಪದಲ್ಲಿ ಜರುಗಬೇಕಾಗುತ್ತದೆ. ವ್ಯಾಕರಣವನ್ನು ಒಂದು ಶಾಸ್ತ್ರೀಯ ಪಾಂಡಿತ್ಯ ನೆಲೆಯಲ್ಲಿ ಗ್ರಹಿಸುವುದಾದರೆ, ಅದಕ್ಕೆ ಪ್ರಮುಖ ಕಾರಣವಾಗಿ ನಿಲ್ಲುವುದು ಭಾಷೆಯೇ. ಹೀಗೆ ಒಂದು ಭಾಷೆಯ ಸಂವಹನ ಶಕ್ತಿ ಇದ್ದೂ ವ್ಯಾಕರಣ ನಿರ್ವೇಗ ಸ್ಥಿತಿಯಲ್ಲಿ ಅಂದರೆ ಭಾಷೆಯ ಒಂದು ಸ್ಥಿತಿಸ್ಥಾಪಕತ್ವ ಗುಣವಾಗಿ ವ್ಯಾಕರಣದ ಬೀಸು ಇದೆ ಎಂದಾಗ, ಆ ಬಗೆಯ ಸಂಶೋಧನೆ ಕೂಡ ಸ್ಥಿತಿಸ್ಥಾಪಕತ್ವ ಗುಣದಲ್ಲೇ ಇರುತ್ತದೆ ಮತ್ತು ಗ್ರಹಿಸುವಾಗ ಅದೇ ನೆಲೆಯಲ್ಲಿ ಪ್ರಕ್ರಿಯಾ ಸಂಹಿತೆಯಲ್ಲಿ ಗ್ರಹಿಸಲು ಸಂಶೋಧಕ ಸಿದ್ಧನಾಗಬೇಕಾಗುತ್ತದೆ.

ಸಂಶೋಧನೆ ಯಾಕೆ ಘಟಿಸುತ್ತಿದೆ ಎಂಬುದು ಸ್ಪಷ್ಟವಾದರೆ, ಅದಕ್ಕೆ ಅನುಗುಣವಾಗಿ ಭಾಷೆಯ ಪ್ರಾಯೋಗಿಕತೆಯೂ ಸಿದ್ಧಿಸುತ್ತದೆ. ಭಾಷೆ ಸಂಶೋಧನೆಯ ನೆಲೆಯಿಂದ ಅನಾವರಣಗೊಳ್ಳುತ್ತದೆ ಎನ್ನುವುದಕ್ಕಿಂತ, ಸಂಶೋಧಕನ ತಾತ್ವಿಕ ಧೋರಣೆ ಮೂಲಕ ಅದು ನಿರ್ಧಾರವಾಗುತ್ತದೆ ಎನ್ನುವುದೇ ಸರಿ. ಸಂಶೋಧನೆಯನ್ನು ಯಾವ ಉದ್ದೇಶಕ್ಕಾಗಿ ಕೈಗೊಳ್ಳಲಾಗುತ್ತಿದೆ ಎಂಬುದು ಸ್ಪಷ್ಟವಾಗಿ ಸಂಶೋಧಕನ ಅಂತರಾಳವನ್ನು ಹೊಕ್ಕರೆ, ಭಾಷೆಯ ನಡಿಗೆ ಕೂಡ ಆ ಅಂತರಾಳದಲ್ಲೇ ಬೆರೆತು ಪ್ರಕಟಗೊಳ್ಳುತ್ತದೆ. ಅಂದರೆ, ಸಂಶೋಧನೆಯ ದೃಷ್ಟಿಕೋನ ಮತ್ತು ಸಂಶೋಧಕನ ತಾತ್ವಿಕತೆ ಎರಡೂ ಕೂಡಿಕೊಂಡಾಗ ನಂತರದಲ್ಲಿ ನಿರ್ಮಾಣವಾಗುವ ಭಾಷೆಯ ಮೈ ತನ್ನಿಂತಾನೇ ಮೈದಾಳುತ್ತದೆ.

ಸಂಶೋಧನೆಯಲ್ಲಿ ಹೇಗೆ ವಿಭಾಗಗಳನ್ನು ಮಾಡಿಕೊಳ್ಳಬಹುದೋ ಹಾಗೆಯೇ ಅದರ ಬರಹದ ಭಾಷೆಯಲ್ಲೂ ವಿಭಾಗ ಕ್ರಮಗಳು ಇರುತ್ತವೆ. ಸಂಶೋಧನೆಯ ಅನನ್ಯತೆ ಭಾಷೆಯ ಶರೀರವನ್ನು ನಿರ್ಧರಿಸುತ್ತದೆ ಎಂದು ಈ ಮುನ್ನ ಹೇಳಿದಾಗ ಅದರ ಹಿನ್ನೆಲೆಯಲ್ಲಿ ಕೆಲಸ ಮಾಡಿದ್ದು ಈ ದೃಷ್ಟಿಕೋನವೇ. ಅಂದರೆ, ಸಂಶೋಧಕನ ವೈಯಕ್ತಿಕ ಮತ್ತು ಸಾಮಾಜಿಕ, ಸಾಂಸ್ಕೃತಿಕ ವಾತಾವರಣ, ಆತನ ಸಂಶೋಧನೆಯ ಪೂರ್ಣ ಶರೀರವನ್ನು ದಿಗ್ದರ್ಶಿಸುವಂತೆ, ಭಾಷೆಯ ಸ್ಥಿತಿಸ್ಥಾಪಕತೆಯನ್ನೂ ದೃಷ್ಟಿಗೋಚರಿಸುತ್ತದೆ. ಯಾವುದು ಆಲೋಚನೆಯ ಸಾಂಗತ್ಯವನ್ನು ಬಯಸುತ್ತದೆ. ಯಾವುದು ತಾತ್ವಿಕವಾದ ಅನುಲೋಪವನ್ನು ಸ್ವೀಕರಿಸುತ್ತದೆ, ಯಾವುದು ವ್ಯಕ್ತಿಗತ ನಿರೀಕ್ಷೆಗಳಲ್ಲಿ ತೋಯುತ್ತದೆ, ಯಾವುದು ಪರಿಸರದ ಸಾಮಾಜಿಕ ಮತ್ತು ಸಾಂಸ್ಕೃತಿಕ ಒಡನಾಟಗಳನ್ನು ಅಪೇಕ್ಷಿಸುತ್ತದೆ, ಅದು ಆಲೋಚನೆ ಹಾಗೂ ಭಾಷೆಯ ಧಾರಣಶಕ್ತಿಯನ್ನು ಅಂತಿಮವಾಗಿ ಕಡೆಯುತ್ತದೆ. ಇಷ್ಟಲ್ಲದೆ ಬೇರಾವುದೂ ಅದರ ಸಾಮೀಪ್ಯವನ್ನೂ ತಲುಪಲಾರದು. ಈ ಬಗೆಯ ಸ್ನಿಗ್ಧ ಮತ್ತು ಗಾಢವೆನಿಸುವ ಪ್ರಭಾವಗಳು, ಒಂದು ಪರಿಸರದಿಂದ ಮೂಡಿಬಂದು ಸೃಜನಶೀಲ ಮನಃಸ್ಥಿತಿಯನ್ನು ಆವರಿಸಿಕೊಂಡು ನಿಲ್ಲುತ್ತದೋ ಆಗ ಅದನ್ನು ಈ ಪರಿಕರಗಳು ಗಾಢವಾಗಿ ಪ್ರಭಾವಿಸಿಕೊಂಡು ಒಳಗೆ ಸೆಳೆದುಕೊಳ್ಳುತ್ತವೆ. ಹೀಗೆ ಸೆಳೆದುಕೊಳ್ಳುವ ಅಂಶಗಳು ಪರಿಣಾಮಕಾರಿಯಾಗಿದ್ದರೆ, ಅದರ ಮೂಲಕ ಜನಿಸುವ ಆಲೋಚನೆ ಮತ್ತು ಭಾಷೆಯ ಸಂಯೋಜನೆ ಕೂಡ ಅಷ್ಟೇ ಪರಿಣಾಮಕಾರಿಯಾಗಿರುತ್ತದೆ. ಜೊತೆಗೆ ಪೂರ್ವಗ್ರಹವಲ್ಲದ ಒಂದು ಸ್ವತಂತ್ರ ದೃಷ್ಟಿಕೋನ ಅಲ್ಲಿ ಭಾಷೆಯ ಮೂಲಕ ಮೈದಳೆಯುತ್ತದೆ. ಇದೇ ಒಂದು ಸಂಶೋಧನೆಯ ವಿಸ್ತಾರ ಮತ್ತು ಗಮ್ಯತೆಯನ್ನು ಬಹಿರಂಗಗೊಳಿಸುತ್ತದೆ.

ಯಾಕೆಂದರೆ, ಸಂಶೋಧನೆಯಷ್ಟೇ ಅಲ್ಲ ಯಾವುದೇ ಬರಹದ ಜೀವಾಳ ಅದಕ್ಕೆ ಸಂಬಂಧಪಟ್ಟ (ತಾತ್ವಿಕ) ಆಲೋಚನೆ ಮತ್ತು ಭಾಷೆಯೇ ಆಗಿರುತ್ತದೆ. ಅವೆರಡನ್ನೂ ಒಂದು ಬರಹದಿಂದ ಪ್ರತ್ಯೇಕಿಸಿದರೆ ಉಳಿಯುವುದು ಏನೂ ಇರುವುದಿಲ್ಲ. ಸಂಶೋಧಕನ ಮನಃಸ್ಥಿತಿ ಮತ್ತು ಸಂಶೋಧನೆಯ ಸಮಸ್ಯೆಗಳ ಬಗ್ಗೆ ಅವನ ನಿಲುವುಗಳೇನು ಎಂಬುದು ತಿಳಿಯುವುದು ಆಲೋಚನೆ ಮತ್ತು ಭಾಷೆಯ ಮೂಲಕವೇಯಾದ್ದರಿಂದ, ಸಂಶೋಧನೆಯಲ್ಲಿ ಈ ಎರಡಕ್ಕೇ ಹೆಚ್ಚಿನ ಆದ್ಯತೆ. ಈ ಎರಡು ಸಂಶೋಧಕನನ್ನು ಗಾಢವಾಗಿ ಪ್ರಭಾವಿಸಿದ್ದರೆ ಅಥವಾ ಎರಡೂ ಅವನೊಳಗೆ ಸಹಜವಾಗಿ ಮೈದಾಳಿದ್ದರೆ, ಸಂಶೋಧನೆಯ ಉಳಿದ ಆಕರಗಳು ತೊಂದರೆಯಿಲ್ಲದೆ ತನ್ನಿಂದತಾನೇ ಸಿದ್ಧಿಸುತ್ತವೆ. ನನಗನಿಸುವ ಮಟ್ಟಿಗೆ, ಸಂಶೋಧನೆಗೆ ಸಂಬಂಧಿಸಿದ ವಿಸ್ತಾರವಾದ ಓದು, ಆ ಓದಿನ ಸಂದರ್ಭದಲ್ಲಿ ಒಂದು ನಿರ್ದಿಷ್ಟ ರೂಪ ಪಡೆಯುವ ಪೂರಕ ಟಿಪ್ಪಣಿಗಳು, ಸಂಶೋಧನೆಯ ದಿಕ್ಕನ್ನು ನಿಧಾನಕ್ಕೆ ತನ್ನ ತೆಕ್ಕೆಗೆ ತೆಗೆದುಕೊಳ್ಳುವ ಸವಾಲೊಡ್ಡುವ ಪೂರಕ ಗ್ರಂಥಗಳು – ಇವಷ್ಟು ಸಂಶೋಧನೆಯಲ್ಲಿ ಆಲೋಚನೆ ಮತ್ತು ಭಾಷೆಯ ಮೇಲೆ ಇನ್ನಿಲ್ಲದ ಪ್ರಭಾವ ಬೀರಿ ಆ ಎರಡರ ದಿಕ್ಕನ್ನು ನಿರ್ಧರಿಸುತ್ತವೆ. ಸಂಶೋಧಕ ತನ್ನ ದಾರಿ ಯಾವುದಾಗಬೇಕು ಎಂಬುದನ್ನು ಈ ಸಂಗತಿಗಳು ನಿರ್ಧರಿಸುತ್ತವೆ. ಕೆಲವೊಮ್ಮೆ ಸಂಶೋಧಕ ತನ್ನ ಪಥವನ್ನು ಸಂಶೋಧನೆಯ ಪ್ರವೇಶಕ್ಕೆ ಮುನ್ನವೇ ಹೀಗೆ ಎಂದು ಪೂರ್ವನಿಗದಿಗೊಳಿಸಿಕೊಂಡಿದ್ದರೆ, ಈ ಸಂಶೋಧನೆಯ ಆಕರಗಳು ಅದನ್ನು ಪಲ್ಲಟಗೊಳಿಸಿಬಿಡುತ್ತವೆ. ಹೀಗಾಗಿ, ಹಾಗೆ ಪಲ್ಲಟಕ್ಕೊಳಗಾಗುವ ಸಂಶೋಧಕನ ಮುನ್ನಿರೀಕ್ಷೆಗಳು ಶಕ್ತಿಯುತವಾಗಿದ್ದರೆ, ಹೊರ ಸಿದ್ಧಮಾದರಿಗಳಿಂದ ಅದು ಅಷ್ಟಾಗಿ ಪ್ರಭಾವಗೊಳ್ಳದಿದ್ದರೆ ತನ್ನದೇ ಆದ ಸ್ವತಂತ್ರ ಮಾರ್ಗವನ್ನೂ ಅದು

ಕಂಡುಕೊಳ್ಳುತ್ತದೆ. ಇದು ಸಾಧ್ಯವಾದರೆ ಆ ಸಂಶೋಧನೆಯ ತಾತ್ವಿಕತೆ ಮತ್ತು ಭಾಷೆಯ ಬಳಕೆ ನಿತ್ಯನೂತನವಾಗಿ ಹೊರಹೊಮ್ಮುವ ಸಾಧ್ಯತೆ ಇರುತ್ತದೆ.

ಸಂಶೋಧನೆಯ ಪೂರ್ವಸಿದ್ಧತೆಯಲ್ಲಿ ಸಂಶೋಧಕ ತನಗೆ ದತ್ತವಾಗುವ ಆಕರಗಳನ್ನು ಹೇಗೆ ಸ್ವೀಕರಿಸುತ್ತಾನೆ ಎಂಬ ಸಂಗತಿ ಮೇಲೆ ಅವನ ಸ್ವೋಪಜ್ಞತೆ ನಿರ್ಧಾರವಾಗುತ್ತದೆ. ಸಂಶೋಧಕನಿಗೆ ಮತ್ತು ಸಂಶೋಧಕನ ಆಲೋಚನಾಕ್ರಮ ಗಟ್ಟಿಯಾಗಿದ್ದರೆ, ಅವನ ಪರಿಸರ ಅವನ ಆಲೋಚನಾಕ್ರಮದ ಅಳಿಸಲಾಗದ ಪ್ರಭಾವ ಬೀರಿದ್ದರೆ, ಅವನ ಅದುವರೆಗಿನ ಗಂಭೀರವಾದ ಓದು ಆ ಸಂದರ್ಭದ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲುವಂತಿದ್ದರೆ, ಇಷ್ಟೆಲ್ಲವೂ ಯಾವ ಉಷಾರಿಗೂ ಒಳಗಾಗದೆ ಸಹಜವಾಗಿ ನಡೆದಿದೆ ಮತ್ತು ಮುಂದೆಯೂ ಹಾಗೆಯೇ ನಡೆಯುತ್ತದೆ ಎಂಬುದು ಸಂಶೋಧಕನಿಗೆ ಪ್ರಾಮಾಣಿಕವಾಗಿ ಗಮನಕ್ಕೆ ಬಂದರೆ, ಅದರಿಂದ ಹೊರಡುವ ಅಂತಿಮ ಫಲಿತಾಂಶ ಕೂಡ ಅಷ್ಟೇ ಗಟ್ಟಿಯಾಗಿರುತ್ತದೆ ಮತ್ತು ಪ್ರಭಾವಬೀರುವಂತೆ ಪರಿಣಾಮಕಾರಿಯಾಗಿರುತ್ತದೆ. ಕೆಲವೊಮ್ಮೆ ಸಂಶೋಧಕ ಆಕರಗಳ ಮೇಲೆ ಹೆಚ್ಚು ಅವಲಂಬನೆಯಾದಾಗ, ಆಲೋಚನೆ ಮತ್ತು ಭಾಷೆಗಳು ಬಡವಾಗುವ ಸಾಧ್ಯತೆ ಇರುತ್ತದೆ. ಯಾಕೆಂದರೆ, ಆಕರಗಳು ಕಡು ಕತ್ತಲಲ್ಲಿ ಸಾಗುವ ಪಥಿಕನಿಗೆ ಒಂದು ಸಣ್ಣದೇ ಸಣ್ಣ ಎನಿಸುವ ಬೆಳಕಿಂಡಿಯನ್ನು ಮಾತ್ರ ತೋರುತ್ತದೆ. ಆದರೆ ಅದೇ ದಾರಿ ತುಂಬಾ ಚೆಲ್ಲಿಕೊಳ್ಳುವ ಬೆಳಕಾಗುವುದಿಲ್ಲ. ಹಾಗೆ ಆಗಲೂಬಾರದು. ಆ ಎಚ್ಚರ ಸಂಶೋಧಕನಿಗೆ ಇದ್ದರೆ, ಸಂಶೋಧನೆಯ ಬೀಸು ದೊಡ್ಡದಾಗಿರುತ್ತದೆ. ಉದ್ದೇಶದಲ್ಲಿ ಅದು ದೊಡ್ಡದರಲ್ಲಿ ನಿರಾಯಾಸವಾಗಿ ಸಾಧಿಸುತ್ತದೆ. ಇಲ್ಲಿ ನಿರಾಯಾಸ ಎನ್ನುವುದು ಹೊರಗಿನ ಸಂಗತಿಗಳಿಂದ ಗಾಢನಾಗಿ ಪ್ರಭಾವಿತವಾಗದೆ ಉಳಿಯುವ ಸ್ಥಿತಿ ಎಂದು ಮಾತ್ರವೇ ಅರ್ಥ. ಯಾಕೆಂದರೆ, ಸಂಶೋಧನೆಯಲ್ಲಿ ಗಾಢವಾದ ಶ್ರಮವಿಲ್ಲದೆ ಏನೂ ಸಿದ್ಧಿಸುವುದಿಲ್ಲ. ಆದರೆ ಆ ಶ್ರಮ ಸಂಶೋಧನೆಯ ಪಥದಲ್ಲಿ ಸತ್ಯವನ್ನು ಸಾಕ್ಷಾತ್ಕರಿಸಿಕೊಳ್ಳುವುದಕ್ಕೆ ವಿನಿಯೋಗವಾಗಬೇಕು. "………. ಸಂಶೋಧಕನು ಎಲ್ಲವನ್ನೂ ಪ್ರಶ್ನಿಸುವ ಮತ್ತು ಒಂದು ವಿಷಯದ ಎಲ್ಲಾ ಆಯಾಮಗಳನ್ನು ಪರಿಗಣಿಸುವ 'ಜಿಜ್ಞಾಸುವಾಗಿರಬೇಕು'. ಸತ್ಯಶೋಧನೆಯೇ ಸಂಶೋಧಕನ ಗುರಿ, ನಿಜ. ಆದರೆ, ಸತ್ಯಕ್ಕೆ ನಾನಾ ಮುಖಗಳಿಸಿ ಮತ್ತು ಅವೆಲ್ಲವನ್ನೂ ದರ್ಶಿಸುವುದು ಸುಲಭವಲ್ಲ ಎಂಬ ಅರಿವೂ ಸಂಶೋಧಕನಿಗಿರಬೇಕು. ಸುಲಭ ಹಾಗೂ ಸರಳೀಕೃತ ತೀರ್ಮಾನಗಳು ಎಂದಿಗೂ ಪ್ರಶ್ನಾರ್ಹವೇ ನಾವು ಒಪ್ಪಿಕೊಳ್ಳುವ ಮತ್ತು ಕೊಡುವ 'ಸಾಕ್ಷ್ಯ'ದ ವಿಶ್ವಸನೀಯತೆಯೇ ನಮ್ಮ ಕೊನೆಯ ತೀರ್ಮಾನಗಳ ವಿಶ್ವಸನೀಯತೆಯನ್ನು ನಿರ್ಧರಿಸುತ್ತದೆ" (ಡಾ. ಸಿ.ಎನ್.ರಾಮಚಂದ್ರನ್, 'ಕನ್ನಡ ಸಂಶೋಧನೆಯ ವೈಧಾನಿಕತೆಗಳು', ೨೦೦೮, ಪುಟ. ೨೧). ಈ ಸಂಗತಿ ಕೂಡ ತೀರ್ಮಾನಗಳ ವಿಶ್ವಸನೀಯತೆಯ ಮೇಲೆ ಬೆಳಕು ಚೆಲ್ಲುವಂತೆ, ಆಲೋಚನೆ ಮತ್ತು ಬರವಣಿಗೆಯ ಮೇಲೆ ತನ್ನದೇ ಆದ ಪ್ರಭಾವ ಬೀರುತ್ತದೆ. ಸಂಶೋಧನೆ ಒಂದು ಸಮಸ್ಯೆಯನ್ನು ಆಳವಾಗಿ ಅಧ್ಯಯನ ಮಾಡುತ್ತದೆ. ಅಂದಾಗ, ಅದಕ್ಕೆ ಸಂಯಮ ಮತ್ತು ಸ್ಪಂದನಶೀಲತೆ ಬೇಕೇಬೇಕು. ಸ್ಪಂದನಶೀಲತೆ ಯಾಕೆಂದರೆ, ಒಂದು ಆಕರ ಒಂದು ಹಿನ್ನೆಲೆಯನ್ನು ಅಥವಾ ವಿವರವನ್ನು ಕೊಡಬಹುದು. ಇನ್ನೊಂದು ಆಕರ ಬೇರೊಂದು ಬಗೆಯ ಹಿನ್ನೆಲೆ ಅಥವಾ ವಿವರವನ್ನು ಮನಗಾಣಿಸಬಹುದು. ಇವೆರಡಕ್ಕೂ ಸಂಶೋಧಕ ಸ್ಪಂದಿಸಬೇಕಾಗುತ್ತದೆ. ಹಾಗೆಯೇ, ಸಂಯಮ ಸಂಶೋಧನೆಯ ಒಂದು ಪ್ರಮುಖ ಭಾಗ. ಇಲ್ಲಿ ಅವಸರ ಸಲ್ಲದು. ಅವಸರಕ್ಕೆ ಬುರಾ(ಚಿಂತನೆ) ಕೊಟ್ಟರೆ ಹಲವು ಪ್ರಮಾದಗಳು ಘಟಿಸುವ ಅಪಾಯವಿರುತ್ತದೆ. ಆದ್ದರಿಂದ ಯಾವುದೇ ಮಾಹಿತಿಯನ್ನು

ಒಂದಲ್ಲ ಹಲವು ಬಾರಿ ಭಿನ್ನ ಭಿನ್ನ ಆಕರಗಳೊಡನೆ ತುಲನಾತ್ಮಕವಾಗಿ ಪೃಥಕ್ಕರಿಸಿ ನೋಡಿದಾಗ ಮಾತ್ರ ಅದರ ಮೂಲ ಸ್ರೋತ ಸಂಶೋಧಕನಿಗೆ ಲಭ್ಯವಾಗುತ್ತದೆ.

ಇದೇ ಸಂದರ್ಭದಲ್ಲಿ ಇನ್ನೊಂದು ಪ್ರಶ್ನೆ ಮುನ್ನೆಲೆಗೆ ಬರುತ್ತದೆ. ಸಂಶೋಧನೆಯ ಭಾಷಿಕ ನೆಲೆಗಳು ಮುಖ್ಯವಾಗಿ ಯಾವ ಆಶಯಗಳು ಅವಲಂಬಿಸಿರುತ್ತವೆ ಎನ್ನುವುದು ಆ ಪ್ರಶ್ನೆ. ಇದಕ್ಕೆ ಉತ್ತರ ಅಷ್ಟು ಸುಲಭವಿಲ್ಲ. ಇದಕ್ಕೆ ಸಂಬಂಧಪಟ್ಟ ಆಶಯಗಳು ಸಂಶೋಧಕರಿಂದ ಸಂಶೋಧಕರಿಗೆ ವ್ಯತ್ಯಾಸವಾಗುತ್ತವೆ. ಹಾಗೆ ವ್ಯತ್ಯಾಸವಾಗುವ ಆಶಯಗಳು ಮತ್ತೆ ಪಾರಿಸರಿಕ ಆಕರಗಳಿಗೆ ಋಣಿಯಾಗಿರುತ್ತವೆ. ಪರಿಸರ ಒಬ್ಬ ವ್ಯಕ್ತಿಯ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರವಹಿಸುವುದರಿಂದ, ಆ ಬೆಳವಣಿಗೆಯ ಒಂದು ಭಾಗವಾದ ಸಂಶೋಧನಾ ಪ್ರವೃತ್ತಿಯೂ ಅದರಿಂದ ಹೊರತಾಗಿರುವುದಿಲ್ಲ. ಭಾಷೆಯ ಮೇಲೆ ಅದರ ಪ್ರಭಾವ ದಟ್ಟವಾಗಿರುತ್ತದೆ. ಒಂದು ಸಮಸ್ಯೆಯನ್ನು ಸಂಶೋಧಕನೊಬ್ಬ ಅಭ್ಯಾಸ ಮಾಡುತ್ತಿದ್ದಾನೆಂದರೆ, ಪರೋಕ್ಷವಾಗಿ ಅವನು ತನ್ನ ಪರಿಸರವನ್ನು ಅಧ್ಯಯನ ಮಾಡುತ್ತಾನೆಂದೇ ಅರ್ಥವಾಗುತ್ತದೆ. ಬಾಲ್ಯದಿಂದ ಅವನು ಕೇಳಿದ, ನೋಡಿದ, ಗ್ರಹಿಸಿದ ದಾಖಲು ಮಾಡಿಕೊಂಡ ಆಕರಗಳು ಮಾನಸಿಕ ಸ್ತರದಲ್ಲಿ ಶೇಖರಣೆಯಾಗಿ, ಒಂದು ಅನುಕೂಲ ಸಂದರ್ಭದಲ್ಲಿ ಅದು ಹೊರಬರುತ್ತದೆ. ಆ ಅನುಕೂಲ ಸಂದರ್ಭವನ್ನು ಆ ವ್ಯಕ್ತಿಯೇ ನಿರ್ಮಾಣ ಮಾಡಿಕೊಳ್ಳಬೇಕು. ಒಂದು ವಸ್ತುವನ್ನು ಯಾವ ಪರಿಮಾಣದಲ್ಲಿ ಅಧ್ಯಯನ ಮಾಡುತ್ತೇವೆ ಎನ್ನುವುದಕ್ಕಿಂತ, ಹೇಗೆ ಮತ್ತು ಯಾಕೆ ಅಧ್ಯಯನ ಮಾಡಲಾಗುತ್ತಿದೆ ಎಂಬುದು ಮುಖ್ಯವಾದಾಗ, ಭಾಷಿಕ ಚೌಕಟ್ಟಿನ ಸೀಮಿತ ವಲಯ ಸಾಂಸ್ಕೃತಿಕ ಮತ್ತು ಸಾಮಾಜಿಕ ಅಂಗೋಪಾಂಗಗಳಲ್ಲಿ ವಿಸ್ತೃತವಾಗಿ ಗಮನಸೆಳೆಯುತ್ತವೆ. ಒಂದು ವಸ್ತು ಯಾವಾಗ ಪರಿಮಾಣಾತ್ಮಕ ನೆಲೆಯಿಂದ ಪರಿಣಾಮಾತ್ಮಕ ಸ್ಥಿತಿಗೆ ಚಲಿಸುತ್ತದೊ ಆಗ ಅದರಿಂದ ಸಂಶೋಧಕನಿಗೆ ದೊರೆಯುವ ಆಕರಗಳು ಹೆಚ್ಚಿರುತ್ತವೆ. ಇದು ಆ ಸಂಶೋಧಕನ ಭಾಷಿಕ ಸ್ಥಿತಿಯ ಮೇಲೂ ಗಂಭೀರವಾದ ಪರಿಣಾಮವನ್ನುಂಟು ಮಾಡುತ್ತದೆ.

ಸಂಶೋಧನಾ ಬರಹದ ಭಾಷಿಕ ವಿನ್ಯಾಸಗಳು ತನಗೆ ತಾನೇ ನಿರ್ಧಾರಗೊಳ್ಳುವುದಿಲ್ಲ. ಅದರ ಹಿನ್ನೆಲೆಯಲ್ಲಿ ಹಲವು ಸಂಗತಿಗಳು ಕೆಲಸ ಮಾಡುತ್ತವೆ. ಮುಖ್ಯವಾಗಿ, ಸಂಶೋಧಕ ಯಾವ ಸಮಸ್ಯೆಯನ್ನು ಮುಂದಿಟ್ಟುಕೊಂಡು ಅಧ್ಯಯನ ಮಾಡುತ್ತಿದ್ದಾನೆ ಎಂಬುದು ಆ ಅಧ್ಯಯನಕ್ಕೆ ಒದಗಿಬರುವ ಭಾಷಿಕ ವಿನ್ಯಾಸವನ್ನು ಮುಖ್ಯವಾಗಿ ಪ್ರಭಾವಿಸುತ್ತದೆ. ಸೃಜನಶೀಲ ಸಮಸ್ಯೆಗಳಿಗೆ ಅದಕ್ಕೆ ಅನುಗುಣವಾದ ಭಾಷಿಕ ವಿನ್ಯಾಸ ರೂಪುಗೊಂಡರೆ, ಸೃಜನೇತರ ಸಮಸ್ಯೆಗಳ ಅಧ್ಯಯನದಲ್ಲಿ ಅದನ್ನು ಪೂರಕವಾಗಿಸುವ ಭಾಷಾ ಸ್ವರೂಪ ಸಿದ್ಧವಾಗುತ್ತದೆ. ನಿದರ್ಶನಕ್ಕೆ ಒಂದೆರಡು ಸಂಪ್ರಬಂಧಗಳನ್ನು ಇಲ್ಲಿ ಗಮನಿಸಬಹುದು.

ಆಧುನಿಕ ಕನ್ನಡ ಕಥಾಸಾಹಿತ್ಯದಲ್ಲಿ ಸಾಂಸ್ಕೃತಿಕ ಸಂಘರ್ಷ – ಎಂಬ ಸಂಪ್ರಬಂಧವನ್ನು ಡಾ. ಎನ್.ಕೆ.ಕೋದಂಡರಾಮ ಅವರು ೧೯೯೫ರಲ್ಲಿ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಮಂಡಿಸಿ ಪಿಎಚ್.ಡಿ. ಪದವಿ ಪಡೆದಿದ್ದಾರೆ. ಅಲ್ಲಿ ಅವರು ನಿರ್ವಚಿಸಿಕೊಂಡಿರುವ ಅಧ್ಯಯನದ ಸ್ವರೂಪ ಮತ್ತು ಭಾಷಿಕ ವಿನ್ಯಾಸಗಳನ್ನು ಸ್ಪಷ್ಟವಾಗಿ ಪರಿಚಯಿಸಿಕೊಡಲಾಗಿದೆ. ಇಲ್ಲಿ ಅಧ್ಯಯನದ ಸ್ವರೂಪವನ್ನು ಸಾಹಿತ್ಯದ ಕಾಲಘಟ್ಟದ ಹಿನ್ನೆಲೆಯನ್ನು ಗಮನಿಸಿ ವರ್ಗೀಕರಿಸಿಕೊಳ್ಳಲಾಗಿದೆ. ಈ ವರ್ಗೀಕರಣ ಬಹಳ ಸರಳವಾಗಿದೆ ಮತ್ತು ಕನ್ನಡ ಸಾಹಿತ್ಯದಲ್ಲಿ ಉಂಟಾದ ಸಾಹಿತ್ಯಿಕ ಅವಸ್ಥಾಂತರಗಳನ್ನು ಗಮನದಲ್ಲಿಟ್ಟುಕೊಂಡ ಅಧ್ಯಯನ

ಕ್ರಮಗಳನ್ನು ಇಲ್ಲಿ ಕಾಣಬಹುದು. ನವೋದಯ, ಪ್ರಗತಿಶೀಲ, ನವ್ಯ, ಬಂಡಾಯ, ದಲಿತ, ಮಹಿಳಾ ಚಳವಳಿಗಳಲ್ಲಿ ಪ್ರಮುಖವಾದ ಸಾಹಿತ್ಯಿಕ ದಾಖಲೆಗಳನ್ನು ಸಾಂಸ್ಕೃತಿಕವಾಗಿ ದಾಖಲು ಮಾಡಲಾಗಿದೆ. ಇದು ಅದುವರೆಗಿನ ಈ ವಿಷಯದ ಸಂಶೋಧನಾ ಸಮಸ್ಯೆಗಳಲ್ಲಿ ಹೊಸತು ಎನಿಸುವುದರಿಂದ, ಡಾ. ಕೋದಂಡರಾಮ ಹೊಸತೇ ಅನಿಸುವ ಅನ್ವೇಷಣಾ ಮಾದರಿಯನ್ನು ತಮ್ಮ ಅಧ್ಯಯನ ಕ್ರಮಕ್ಕೆ ಒಡ್ಡಿಕೊಂಡಿದ್ದಾರೆ. ಇದರಲ್ಲಿ ಮುಖ್ಯವಾಗಿ ಗಮನಿಸಬೇಕಾದ್ದು, ಅದರ ಭಾಷಿಕ ಚೌಕಟ್ಟು ನಿರ್ವಚನಗೊಳ್ಳುವುದು ಆ ವಿಭಾಗಕ್ರಮವನ್ನು ಅನುಸರಿಸುವ ಸಂಶೋಧನಾ ಶಿಸ್ತಿನಲ್ಲೇ ಇದೆ.

ಆ ಸಂಪ್ರಬಂಧದ ಭಾಷಿಕ ಲಯ ಮತ್ತು ಅದರ ಸಂಶ್ಲೇಷಣಾತ್ಮಕತೆ ಪೂರ್ಣವಾಗಿ ಆ ಸಮಸ್ಯೆಯ ಒಡಲಿನಿಂದಲೇ ಹುಟ್ಟಿದೆ. ಕನ್ನಡ ಸಾಹಿತ್ಯದ ಸಾಂಸ್ಕೃತಿಕ ಪಲ್ಲಟಗಳನ್ನು ಗಟ್ಟಿಯಾಗಿ ಹೇಳಿಕೊಳ್ಳುವಾಗ ಡಾ. ಕೋದಂಡರಾಮ ಅವರಿಗೆ ಅದನ್ನು ಪರಿಣಾಮಕಾರಿಯಾಗಿ ಸಂಭಾಳಿಸುವ ಭಾಷಾಸಿದ್ಧಿ ಬೇಕಿತ್ತು. ಅದನ್ನು ಅವರು ಕರಗತ ಮಾಡಿಕೊಂಡು, ಅದೇ ಭಾಷಿಕ ಲಯವನ್ನು ಉಳಿಸಿಕೊಂಡು ಮುಂದುವರಿಯುತ್ತಾರೆ. ಹಾಗಾಗಿ ಅವರು ಸಂಶೋಧನೆಯ ಬಹಿರ್‌ಶಿಸ್ತನ್ನು ಉದ್ದೇಶಪೂರ್ವಕವಾಗಿ ಮಾಡಲು ಪ್ರಯತ್ನ ಮಾಡುತ್ತಾರೆ. ಇಲ್ಲಿ ಭಾಷೆ ನೀರಿನ ಸುತ್ತ ಕಂಗೊಳಿಸುವ ದ್ವೀಪದಂತೆ ಅತ್ಯಾಕರ್ಷಕವಾಗಿ ಕಾಣುತ್ತದೆ. ಹೊಸ ಅಧ್ಯಯನ ಕ್ರಮ ಇಲ್ಲಿ ಅನಾವರಣವಾಗುವುದರಿಂದ, ಉಲ್ಲೇಖಗಳ ಸಂಖ್ಯೆ ಬಹಳ ಕಡಿಮೆ ಅಥವಾ ಇಲ್ಲವೆಂದರೂ ನಡೆಯುತ್ತದೆ. ಆದರೆ ಪರಾಮರ್ಶನ ಗ್ರಂಥಗಳ ಒಂದು ಪಟ್ಟಿ ಇಲ್ಲಿದೆ. ಅದರಲ್ಲೂ ಆಯ್ಕೆ ಇದೆ. ಕನ್ನಡ ಕಥನ ಕಲೆಯ ದೇಶಿ ಚಿಂತನ ಕ್ರಮವನ್ನು ಅವರು ಪರಿಚಯಿಸುವ ಸಾಹಸ ಮಾಡಿ ಯಶಸ್ವಿಯಾಗಿದ್ದಾರೆ. ಅದಕ್ಕೆ ಅನುರೂಪವಾದ ಭಾಷಾವಿನ್ಯಾಸವೂ ಅವರಿಗೆ ಸಿದ್ಧಿಸಿದೆ. ಆ ಸಂಪ್ರಬಂಧಕ್ಕೆ ಬೇಕಾದ ತಾತ್ವಿಕತೆಯನ್ನು ಭಾಷಿಕ ವಿನ್ಯಾಸದ ಮೂಲಕವೇ ಅವರು ರೂಪಿಸಿಕೊಂಡಿರುವುದನ್ನು ಇಲ್ಲಿ ಕಾಣಬಹುದು.

ಇನ್ನೊಂದು ನಿದರ್ಶನ: ಡಾ. ಬಸವರಾಜ ಕಲ್ಗುಡಿ ಅವರು ಬೆಂಗಳೂರು ವಿಶ್ವವಿದ್ಯಾನಿಲಯಕ್ಕೆ ೧೯೮೩ರಲ್ಲಿ ಸಲ್ಲಿಸಿದ ಮಧ್ಯಕಾಲೀನ ಭಕ್ತಿ ಮತ್ತು ಅನುಭಾವ ಸಾಹಿತ್ಯ ಹಾಗೂ ಚಾರಿತ್ರಿಕ ಪ್ರಜ್ಞೆ ಕುರಿತ ಸಂಪ್ರಬಂಧವನ್ನು ಕೂಡ ಭಾಷಿಕ ವಿನ್ಯಾಸಕ್ಕೆ ಗಮನಿಸಬಹುದು. ಕನ್ನಡದಲ್ಲಿ ೧೨ನೇ ಶತಮಾನ ಹಲವು ಕಾರಣಗಳಿಂದ ವಿಶಿಷ್ಟವಾಗಿದೆ. ಅದರ ಭಾಷಿಕ ವಿನ್ಯಾಸವೇ ಅದ್ಭುತವಾಗಿ ಕನ್ನಡವನ್ನು ಕಾಪಾಡಿಕೊಂಡಿದೆ. ಹಾಗಂತ ಅವರು, ವಚನ ಚಳವಳಿಯ ತಾತ್ವಿಕ ನೆಲೆಗಳನ್ನು ಬಹಳ ಗಾಢವಾಗಿ ಚರ್ಚೆಗೆ ಒಳಪಡಿಸಿದ್ದಾರೆ. ವಚನ ಸಾಹಿತ್ಯ ಸಂಕೀರ್ಣವಾದ ಭಾಷಿಕ ಸವಾಲುಗಳನ್ನು ಕೂಡ ಗೆದ್ದು ಮುಂದೆ ಸಾಗುತ್ತದೆ. ಅದಕ್ಕೆ ಆರಂಭದ ಸ್ಥಾನ ವಚನಗಳಲ್ಲಿ ಕಾಣುವ ಜನಪದ ನಿಲುವಿನಿಂದ ದಕ್ಕಿದೆಯಾದರೂ ಭಾಷೆಯ ಮೂಲಕ ಹೇಳುವ ಕ್ರಮ ಕೂಡ ವಿಶಿಷ್ಟವಾಗಿದೆ. ಹೀಗೆ ಸಂವಹನದಲ್ಲಿ ಪರಿಣಾಮ ಸಾಧಿಸುವಿಕೆ ಮತ್ತು ತಾತ್ವಿಕತೆಯನ್ನು ಭಾಷಿಕ ನೆಲೆಯಲ್ಲಿ ಹಿಡಿದಿಡುವ ಪ್ರಯತ್ನವನ್ನು ವಚನಕಾರರು ಬಹಳ ಅದ್ಭುತವಾಗಿ ಮಾಡಿದರೆಂದೇ ಹೇಳಬೇಕು. ತನ್ನ ಕಾಲದಲ್ಲಿ ಪ್ರಬಲವಾಗಿದ್ದ ಸಮಾಜ ವಿರೋಧಿ ಮತ್ತು ಮಾನವ ವಿರೋಧಿ ಆಶಯಗಳನ್ನು ಎದುರು ಹಾಕಿಕೊಂಡೇ ತಾತ್ವಿಕವಾಗಿ ಸಂಚಲನವನ್ನುಂಟು ಮಾಡಿದ ವಚನಕಾರರಲ್ಲಿ ಪ್ರಮುಖರನ್ನು ಸಾಮಾಜಿಕ ಮತ್ತು ಸಾಂಸ್ಕೃತಿಕ ಅಡಿದಾವರೆಯಲ್ಲೇ ಕಲ್ಗುಡಿ ಅವರು ಅಧ್ಯಯನ ಮಾಡಿರುವ ಕ್ರಮ ಮಾದರಿಯಾಗಿದೆ. ಇಲ್ಲಿ ಯಾವ ಸಂಶೋಧನಾ ಮಾನದಂಡಗಳನ್ನು ಗುರುತಿಸಬಹುದು? ಆದರೆ ಯಾವುದೇ ಸಂಶೋಧನೆ

ತನ್ನ ಕ್ಷೇತ್ರದ ಮಾನದಂಡಗಳನ್ನು ಗಮನದಲ್ಲಿಟ್ಟುಕೊಂಡು ಮುಂದುವರಿಯುವುದಿಲ್ಲ. ಆ ಸಮಸ್ಯೆಗೆ ಸಂಬಂಧಿಸಿದ ಅಧ್ಯಯನ ಕ್ರಮ ಮುಂದುವರಿದಂತೆ ಸಂಶೋಧನಾ ಮಾದರಿಯೊಂದು ತನ್ನಿಂತಾನೆ ರೂಪುಗೊಳ್ಳುತ್ತದೆ. ನಂತರ ಅದು ಯಾವುದೋ ಒಂದಕ್ಕೆ ಸಂಬಂಧ ಕಲ್ಪಿಸಿಕೊಳ್ಳುತ್ತದೆ. ಬಹುಶಃ ಎಲ್ಲ ಸಂಶೋಧನೆಗಳೂ ಇದೇ ಕ್ರಮದಲ್ಲಿ ಸಾಗುತ್ತದೆ ಎನಿಸುತ್ತದೆ.

ಬಸವರಾಜ ಕಲ್ಗುಡಿ ಅವರು ಪ್ರಮುಖ ವಚನಕಾರರ ಪ್ರಮುಖ ಧಾರೆಗಳನ್ನು ಮುಂಚೂಣಿಗೆ ತಂದು ಅಧ್ಯಯನ ಮಾಡುವಾಗ, ಯಾವ ಭಾಷಿಕ ಕ್ರಮದಲ್ಲಿ ಹೇಳಿದರೆ ಅದು ಹೆಚ್ಚು ಪರಿಣಾಮಕಾರಿಯಾಗಿರಬಲ್ಲದು ಎಂಬುದನ್ನು ಮೊದಲೇ ಗುರುತಿಸಿಕೊಂಡು, ಆ ಭಾಷಿಕ ಕ್ರಮದಲ್ಲಿ ಮುಂದುವರಿದಿದ್ದಾರೆ. ಯಾಕೆಂದರೆ, ವಚನ ಸಾಹಿತ್ಯವನ್ನು ಅಧ್ಯಯನ ಮಾಡುವಾಗ ಆಧುನಿಕ ಕನ್ನಡ ಸಾಹಿತ್ಯಕ್ಕೆ ಅನ್ವಯವಾಗುವ ಭಾಷಿಕ ಕ್ರಮಕ್ಕಿಂತ ಭಿನ್ನವಾದ ಆಯಾಮ ಬೇಕಾಗುತ್ತದೆ. ಆ ಭಿನ್ನ ಭಾಷಿಕ ಕ್ರಮವನ್ನು ಈ ಸಂಪ್ರಬಂಧ ರಚನೆಯ ಸಂದರ್ಭದಲ್ಲಿ ಕಲ್ಗುಡಿ ಅವರು ನಿರ್ವಚಿಸಿಕೊಂಡಿದ್ದಾರೆ. ಭಾಷಿಕ ಸ್ಥಿತಿ ಸೂಕ್ಷ್ಮಧಾರೆಯಲ್ಲಿ ಅಸ್ತಿತ್ವ ಪಡೆಯುವುದರಿಂದ ಯಾವ ಅಧ್ಯಯನ ಮಾದರಿ ಯಾವ ಭಾಷಿಕ ಕ್ರಮವನ್ನು ಪೋಷಿಸುತ್ತದೆ ಎಂಬುದನ್ನು ಆ ಸಂದರ್ಭವೇ ನಿರ್ಧರಿಸುತ್ತದೆ.

ಭಾರತೀಯ ಸಂಸ್ಕೃತಿಯನ್ನು ವೈಜ್ಞಾನಿಕ ಧಾರೆಗಳ ಮೂಲಕ ಅಧ್ಯಯನ ಮಾಡಿದ ಶಂ.ಬಾ.ಜೋಶಿ ಅವರು ಒಂದು ಕಡೆ ಈ ಮಾತು ಹೇಳುತ್ತಾರೆ. "ಭಾಷೆ ಮೂಲತಃ ಸಾಂಕೇತಿಕವಿದೆ. ಈ ಸಂಕೇತ ಪ್ರತಿಮೆಗಳು ಇತಿಹಾಸದ ಕಕ್ಷೆಗೆ ಒಳಗಾಗಿವೆ" ಎಂಬ ಮಾತು ಭಾಷೆಯ ಅಪಾರ ಸಾಧ್ಯತೆಗಳನ್ನು ತೆರೆದಿಡುತ್ತದೆ. ಭಾಷೆಗೆ ಯಾವ ಸಾಮರ್ಥ್ಯ ಇದೆಯೊ ಅದು ಯಾವಾಗಲೂ ಇದ್ದದ್ದೇ. ಆದರೆ, ಆ ಸಾಮರ್ಥ್ಯ ಕಾಲದಿಂದ ಕಾಲಕ್ಕೆ ಬದಲಾಗುತ್ತಿರುತ್ತದೆ ಮತ್ತು ಆ ಕಾಲದ ಅಗತ್ಯತೆಯನ್ನು ಪೂರ್ಣಮಾಡಲು ಸಿದ್ಧವಾಗಿರುತ್ತದೆ. ಭಾಷೆಯ ಈ ಸ್ಥಿತಿಸ್ಥಾಪಕ ಗುಣದಿಂದಲೇ, ಅದು ಲಯವಾಗದೆ ತನ್ನನ್ನು ಅನವರತ ರಕ್ಷಿಸಿಕೊಂಡು, ಸಂವಹನ ಸಾಧ್ಯತೆಗಳನ್ನು ವಿಸ್ತರಿಸಿಕೊಂಡು ಬರಲು ಸಾಧ್ಯವಾಗಿದೆ. ಈ ಮಾತು ಸಂಶೋಧನೆಯ ಸಂದರ್ಭಕ್ಕೆ ಇನ್ನೂ ಹೆಚ್ಚು ಸಂಗತವಾಗುತ್ತದೆ.

ಭಾಷೆಗೆ ನೆನಪುಗಳಿವೆ

ನಮ್ಮ ನಡುವೆ ಅಸ್ತಿತ್ವದಲ್ಲಿರುವ ಎಲ್ಲದಕ್ಕೂ ಇತಿಹಾಸವಿದೆ. ಆದರೆ ಆ ಇತಿಹಾಸ ಒಂದು ಸಾಂದರ್ಭಿಕ ಘಟ್ಟಕ್ಕೆ ಸೀಮಿತವಾಗಿದ್ದರೆ, ಯಾವುದು ಅಂತಹ ಸ್ಥಿತಿಯನ್ನು ನೆಮ್ಮಿಕೊಂಡಿರುತ್ತದೊ ಅದಕ್ಕೆ ಭವಿಷ್ಯ ಇರುವುದಿಲ್ಲ. ಯಾವುದಕ್ಕೆ ಭೂತ, ವರ್ತಮಾನಗಳನ್ನೂ ಕಾಯ್ದುಕೊಂಡು ಭವಿಷ್ಯಮುಖಿಯಾಗುವ ಶಕ್ತಿ, ಸಾಮರ್ಥ್ಯ ಇರುತ್ತದೊ ಅದಕ್ಕೆ ಸದಾಕಾಲ ತನ್ನ ಶಕ್ತಿ, ಸಾಮರ್ಥ್ಯವನ್ನು ಉಳಿಸಿಕೊಳ್ಳುವ ಬದ್ಧತೆ ಇರುತ್ತದೆ. ಇದು ಭಾಷೆಯ ವಿಚಾರದಲ್ಲಿ ಅಕ್ಷರಶಃ ನಿಜವಾದ ಮಾತು. ಯಾಕೆಂದರೆ, ಭಾಷೆಯ ಮುಖ್ಯ ಲಕ್ಷಣ ಸಂವಹನಶೀಲತೆಯನ್ನು ಸಾಧ್ಯಮಾಡುವುದು. ಇದು ಭಾಷೆಯ ಜನನದೊಡನೆ ಅಂಟಿಕೊಂಡು ಬಂದ ಲಕ್ಷಣ. ಭಾಷೆಯನ್ನು ಬಳಸುವವರ ಸಾಮರ್ಥ್ಯಕ್ಕೆ ಅನುಗುಣವಾಗಿ ಈ ಸಂವಹನಶೀಲತೆಯ ಪ್ರಮಾಣ ಮತ್ತು ಪರಿಣಾಮ ನಿರ್ಧಾರವಾಗುತ್ತದೆ.

ಸಂಶೋಧನಾ ಬರಹಕ್ಕೆ ಈ ತೆರನ ಅಂದರೆ ಭೂತ, ವರ್ತಮಾನ ಮತ್ತು ಭವಿಷ್ಯ ಧಾರೆಗಳನ್ನು ಗ್ರಹಿಸುವ ಮತ್ತು ಪರಿಣಾಮಕಾರಿಯಾಗಿ ಪ್ರಕಟಿಸುವ ಶಕ್ತಿ ಇದೆ. ಅದನ್ನು ಭಾಷೆ ಮಾಡುತ್ತದೆ. ಸಂಶೋಧನೆಯ ಭಾಷಿಕ ವಿನ್ಯಾಸ ಹೀಗೆ ಮೂರು ಕಾಲಗಳ ಆನುಷಂಗಿಕ

ನಿಲುಗಡೆಗಳನ್ನು ಕೈವಶಮಾಡಿಕೊಂಡು ಮುನ್ನಡೆಯಾಗುತ್ತದೆ. ಭಾಷೆಗೆ ಯಾವತ್ತೂ ಕಾಲಾತೀತವಾದ ದರ್ಶನವಿದೆ. ಆದರೆ, ಆ ಕಾಲಾತೀತವಾದ ದರ್ಶನವನ್ನು ಗ್ರಹಿಸುವ ಮತ್ತು ಪ್ರಕಟಿಸುವ ಶಕ್ತಿ ಇರುವುದು ಕೂಡ ಭಾಷೆಗೆಯೇ. ಹಾಗೆ ಭಾಷೆಯ ಮಹತ್ವ ಕಾಲಾತೀತವಾದುದು ಎನ್ನುವಾಗ, ಕಾಲದೊಳಗಿನ ಸಂಗತಿಗಳನ್ನು ಅದು ನಿರ್ಲಕ್ಷಿಸುತ್ತದೆ ಎಂದು ಅರ್ಥವಲ್ಲ. ಅಂತಹ ಸಂಗತಿಗಳನ್ನು ಬೇರೆ ಯಾವುದೇ ಪ್ರಕ್ರಿಯೆಗಿಂತ ಭಾಷೆಯೇ ಹೆಚ್ಚು ಪರಿಣಾಮಕಾರಿಯಾಗಿ ನಿರ್ವಚನಗೊಳಿಸುತ್ತದೆ. ಮತ್ತು ತನ್ನೊಡಲಿನಲ್ಲಿ ಅದನ್ನು ಕಾಪಿಟ್ಟುಕೊಳ್ಳುತ್ತದೆ. ಹಾಗೆ ಕಾಪಿಟ್ಟುಕೊಂಡ ವಸ್ತು ಸಂಗತಿಗಳನ್ನು ಕಾಲಧರ್ಮಕ್ಕೆ ಅನುಗುಣವಾಗಿ ಪ್ರಕಟಗೊಳಿಸುತ್ತದೆ. ಬಹುಶಃ ಅಂತಹದೊಂದು ಸಿದ್ಧಿ ಸಾಧ್ಯವಾಗುವುದು ಸಂಶೋಧನೆ ಮೂಲಕವೇ ಎಂಬುದು ನನ್ನ ಗ್ರಹಿಕೆ.

ಭಾಷೆಗೆ ಕಾಲಾತೀತವಾದ ಚಲನೆ ಇದೆ. ಆ ಚಲನೆಯೇ ವಸ್ತು-ಸಂಗತಿಗಳ ನೆನಪುಗಳನ್ನು ರಕ್ಷಿಸುತ್ತದೆ. ಯಾವುದೋ ಕಾಲಘಟ್ಟದ ವಿವರಗಳನ್ನು ಸಾವಿರಾರು ವರ್ಷಗಳ ನಂತರ ಭಾಷೆ ಪರಿಣಾಮಕಾರಿಯಾಗಿ ಸಂವಹನ ಮಾಡಬಲ್ಲದು. ಸಾವಿರಾರು ವರ್ಷಗಳ ಇತಿಹಾಸವನ್ನು ವರ್ತಮಾನಕ್ಕೆ ತಂದುಕೊಡುವ ಶಕ್ತಿ ಇರುವುದು ಭಾಷೆಗೆ ಎಂಬುದು ನಿರ್ವಿವಾದ. ಆದರೆ, ಭಾಷೆಯ ಈ ಸಾಧ್ಯತೆಯನ್ನು ಆಗುಮಾಡುವುದು ಸಂಶೋಧನೆ. ಹೀಗೆ ಭಾಷೆಯ ಶಕ್ತಿಸಾಮರ್ಥ್ಯವನ್ನು ಸಂಶೋಧನೆ ಸಾರ್ಥಕ ಮಾಡುತ್ತದೆ. ಹಾಗೆಯೇ ಸಂಶೋಧನೆಯ ತಾರ್ಕಿಕ ಮತ್ತು ತಾತ್ವಿಕ ಅನುಸಂಧಾನವನ್ನು ಭಾಷೆ ಮುಂದೆ ಮುಂದಕ್ಕೆ ಕೊಂಡೊಯ್ಯುತ್ತದೆ. ಇದು ಭಾಷೆ ಮತ್ತು ಸಂಶೋಧನೆಗಳ ಮಹತ್ವವನ್ನು ತಿಳಿಸುತ್ತದೆ. ಹಾಗಾಗಿ ಭಾಷೆ ಮತ್ತು ಸಂಶೋಧನೆ ಎರಡೂ ಪ್ರಧಾನ ಆಶಯಗಳಾಗಿ ಗಮನ ಸೆಳೆಯುತ್ತವೆ.

ಭಾಷೆಗೆ ಇರುವ ನೆನಪುಗಳು ಸಾಕಾರವಾಗುವುದು ಬರಹದ ಮೂಲಕವೇ. ಯಾವುದೇ ಭಾಷೆ ತನ್ನ ಅಸ್ಮಿತೆಯನ್ನು ಬರಹದ ಮೂಲಕ ಮಾತ್ರ ಉಳಿಸಿಕೊಳ್ಳುತ್ತದೆ. ಹಾಗೆ ಉಳಿಸಿಕೊಳ್ಳುವ ಶಕ್ತಿ ಇರುವ ಏಕೈಕ ಮಾಧ್ಯಮ ಈ ಭಾಷೆ. ತಾಂತ್ರಿಕ ಆಲೋಚನೆಗಳು ಭಾಷೆಯ ಮಹತ್ವವನ್ನು ಕಡಿಮೆಮಾಡಿವೆ ಎಂಬ ಮಾತಿದೆ. ಆದರೆ, ಆ ತಾಂತ್ರಿಕವಾದುದು ತನ್ನ ಅಸ್ತಿತ್ವವನ್ನು ಕಾಪಾಡಿಕೊಳ್ಳಲು ಒಂದು ಸಂವಹನ ಸಾಧ್ಯತೆ ಬೇಕೇ ಬೇಕು. ಅದು ನೇರವಾಗಿ ಭಾಷೆ ಆಗಿಲ್ಲದಿರಬಹುದು. ಆದರೆ ಅಂತಿಮವಾಗಿ ಅದೂ ಕೂಡ ಭಾಷೆಯ ಪ್ರವರ್ಗಕ್ಕೆ ಸೇರುತ್ತದೆ. ಅಡಕತಟ್ಟೆ(ಸಿ.ಡಿ)ಗಳಲ್ಲಿ ಧ್ವನಿ ಮೂಲಕ ಜ್ಞಾನವನ್ನು ಸಂರಕ್ಷಿಸುವ ವಿಧಾನ ತಾಂತ್ರಿಕವಾಗಿ ಇನ್ನಷ್ಟು ಸುಧಾರಣೆ ಆಗಿರಬಹುದಾದರೂ, ಆ ಧ್ವನಿಗೆ ಒಂದು ಭಾಷೆ ಅಂತ ಇದ್ದೇ ಇರುತ್ತದೆ. ಹಾಗಾಗಿ ಭಾಷಿಕ ವಿನ್ಯಾಸ ಅಕ್ಷರದ ಮೂಲಕ ಮಾತ್ರವೇ ಅಲ್ಲ ಬೇರೆ ಬೇರೆ ಸ್ವರೂಪದಲ್ಲೂ ಮೈಪಡೆಯುತ್ತದೆ.

ಆದ್ದರಿಂದ ಭಾಷೆಯ ನೆನಪಿನ ಶಕ್ತಿಯನ್ನು ಬೇರಾವುದೂ ಆಕ್ರಮಿಸಿಕೊಳ್ಳಲಾರದು. ಸಂಶೋಧನೆಯ ಇಡೀ ಹಂದರವನ್ನು ಭಾಷೆಯ ಸಾಂಕೇತಿಕತೆ ಮತ್ತು ಪ್ರತಿಮಾಕರಣವೇ ಹಿಡಿದುಕೊಳ್ಳುತ್ತದೆ. ಹಾಗಾಗಿ, ಸಂಶೋಧನೆಯ ಫಲಿತ ಪರಿಣಾಮಕಾರಿಯಾಗಿ ಇನ್ನೊಬ್ಬರಿಗೆ ಅಥವಾ ಇನ್ನೊಂದು ಕಾಲಘಟ್ಟಕ್ಕೆ ಸಂವಹನವಾಗಬೇಕಾದರೆ ಆ ಕೆಲಸವನ್ನು ಭಾಷೆಯೇ ಮಾಡಬೇಕು.

ಸೃಜನಾತ್ಮಕ ಕೃತಿಗಳಲ್ಲಿ ಶೈಲಿ ಮತ್ತು ಭಾಷೆಗೆ ಮುಖ್ಯಸ್ಥಾನ. ಆದರೆ ಸಂಶೋಧನೆಯಲ್ಲಿ ಇದಕ್ಕೆ ಅಷ್ಟು ಪ್ರಾಧಾನ್ಯತೆ ಇಲ್ಲ. ಇಲ್ಲಿ ವಿಷಯ ನಿರೂಪಣೆಯೇ ಪ್ರಮುಖವಾದುದು"

(ಡಾ. ಬಿ.ವ್ಹಿ.ಶಿರೂರ, ಸಂಶೋಧನೆಯ ಸ್ವರೂಪ, ೨೦೦೮, ಪುಟ. ೧೬೪). ಈ ಮಾತು ಸಂಶೋಧನೆಯ ಸಂದರ್ಭದಲ್ಲಿ ನಿಜ. ಆದರೆ, ಸಂಶೋಧನೆಯ ಶ್ರಮ ಪ್ರಕಟವಾಗುವುದೇ ಭಾಷೆಯ ಮೂಲಕ ಎಂದಿರುವಾಗ, ಆ ಭಾಷೆಯನ್ನೇ ಅವಜ್ಞೆಗೆ ಈಡುಮಾಡುವುದು ಎಷ್ಟು ಸರಿ? ಸಂಶೋಧನೆಯಲ್ಲಿ ವಿಷಯ ನಿರೂಪಣೆಯೇ ಪ್ರಮುಖ ಎನ್ನುವಾಗ, ಆ ನಿರೂಪಣೆ ಕೂಡ ಭಾಷೆಯನ್ನು ಆಧರಿಸಿರುತ್ತದೆ. ಭಾಷೆ ಎಲ್ಲ ಸಂದರ್ಭದಲ್ಲಿ ಎಲ್ಲವೂ ಆಗಿರುವುದಿಲ್ಲ. ಹಾಗಂತ ಅದನ್ನು ನೇಪಥ್ಯದಲ್ಲಿರಿಸಿ ಅಭಿಪ್ರಾಯ ಮಂಡನೆ ಮಾಡುತ್ತೇನೆ ಎನ್ನುವುದು ಕೆನೆಯನ್ನು ಪಡೆದು ಹಾಲನ್ನು ಚೆಲ್ಲಿಬಿಡುತ್ತೇನೆ ಎಂದಂತಾಗುತ್ತದೆ. ಸಂಶೋಧನೆಗೆ ವ್ಯಕ್ತಿ ತೊಡಗಿಸಿಕೊಳ್ಳುವುದು ಭಾಷೆಯ ಮೂಲಕವೇ. ಅದು ಅಂತಿಮವಾಗುವುದೂ ಭಾಷೆಯ ಮೂಲಕವೇ. ಆಲೋಚನೆ ಸ್ಫುರಿಸುವುದೇ ಭಾಷೆಯಿಂದ. ಆಲೋಚನೆಯ ಹಿನ್ನೆಲೆಯಲ್ಲಿ ಅದಕ್ಕೆ ಕಾರಣವಾಗುವ ವಸ್ತು, ಸಂಗತಿಗಳು ಇರಬಹುದು. ಆ ವಸ್ತು, ಸಂಗತಿಗಳು ಸಂಶೋಧನೆಗೆ ಪ್ರೇರಣೆ ನೀಡಿದಾಗ, ಅದನ್ನು ಪರಿಣಾಮಕಾರಿಯಾಗಿ ಸಂವಹನಗೊಳಿಸುವುದು ಭಾಷೆ. ಅದು ಸಂಶೋಧನಾತ್ಮಕ ಸೆಲೆಯಾಗಿ ಕೆಲಸ ಮಾಡುತ್ತದೆ.

ವಿಷಯವನ್ನು ಪರಿಣಾಮಕಾರಿಯಾಗಿ ನಿರೂಪಣೆ ಮಾಡುವಂತೆ, ಆ ನಿರೂಪಣೆಯನ್ನು ಓದುಗ ಸಹಿಸಿಕೊಳ್ಳುವಂತೆ ಮಾಡುವ ಸಾಧ್ಯತೆ ಇರುವುದು ಭಾಷೆಗೆ ಎಂಬುದು ತಿಳಿದ ಸಂಗತಿ. ಆದರೆ ಭಾಷೆಯನ್ನು ಪರಿಣಾಮಕಾರಿಯಾಗಿ ದುಡಿಸಿಕೊಳ್ಳುವುದು ಮತ್ತು ಮುಖ್ಯವಾಗುವುದು ಸೃಜನಶೀಲ ಕೃತಿಗಳಲ್ಲಿ ಎಂದು ಹೇಳಿದಾಗ, ಭಾಷೆಯ ಮಹತ್ವವನ್ನೇ ಕಡೆಗಣಿಸಿದಂತಾಗುತ್ತದೆ. ಸೃಜನಶೀಲ ಪ್ರತಿಭೆಗೂ ಪರಿಣಾಮಕಾರಿ ನಿರೂಪಣಾ ಸಾಮರ್ಥ್ಯ ಬೇಕು. ಆ ನಿರೂಪಣೆಯನ್ನು ಗ್ರಹೀತ ಶಕ್ತಿಯಾಗಿಸುವ ಮತ್ತು ನೆನಪಿನ ಧಾರಣ ಶಕ್ತಿಯಾಗುವಂತೆ ಮಾಡಲು ಭಾಷೆ ತನ್ನನ್ನು ತೇದುಕೊಳ್ಳುತ್ತದೆ.

ಸಂಶೋಧನೆಯಲ್ಲಿ ಪರಿಣಾಮಕಾರಿ ನಿರೂಪಣೆ ಇದ್ದರಷ್ಟೇ ಸಾಕೆ? ಆ ನಿರೂಪಣೆ ಪರಿಣಾಮಕಾರಿ ಅಂತ ಸಿದ್ಧಿಸುವುದು ಭಾಷೆಯೇ ಆಗಿರುತ್ತದೆ. ಅಭಿಪ್ರಾಯ ಮಂಡನೆಯನ್ನು ಸಂವಹನಗೊಳಿಸುವ ಮತ್ತು ನಿರೂಪಣೆಯ ಸ್ವರೂಪವನ್ನು ಹೃದ್ಯವಾಗಿಸುವ ಭಾಷೆ ತನ್ನ ಮಹತ್ವವನ್ನು ಹೆಚ್ಚಿಸಿಕೊಂಡಲ್ಲದೆ ಸಂಶೋಧನೆ ಯಶಸ್ವಿಯಾಗಲಾರದು. ಭಾಷೆಯು ಪರಿಣಾಮಕಾರಿಯಾಗಿ ಬಳಕೆಯಾಗದಿದ್ದರೆ, ನಿರೂಪಣೆ ಸಪ್ಪೆಯಾಗುತ್ತದೆ. ಆಗ ಆ ಸಂಶೋಧನೆಯ ಓದು ತಲೆಬೇನೆ ತರಿಸುತ್ತದೆ.

ಯಾವುದೇ ಕೃತಿ ಓದಿಸಿಕೊಳ್ಳುವುದು ಪರಿಣಾಮಕಾರಿ ನಿರೂಪಣೆ ಮತ್ತು ಅದಕ್ಕೆ ಪೂರಕವಾಗಿ ಬಳಕೆಯಾಗುವ ಭಾಷೆಯ ಸೊಗಡಿನಿಂದ. ಅದು ಸೃಜನಶೀಲ ಮತ್ತು ಸೃಜನೇತರ ಎರಡೂ ಪ್ರಕಾರಕ್ಕೂ ಹೊಂದುತ್ತದೆ. ಸೃಜನಶೀಲ ಪ್ರಕಾರಕ್ಕೆ ಭಾಷಾ ಬಳಕೆ ಹೆಚ್ಚು ಪರಿಣಾಮಕಾರಿಯಾಗಿರಬೇಕು ಹಾಗೂ ಸೃಜನೇತರ ಪ್ರಕಾರಕ್ಕೆ ಅದರ ಅಗತ್ಯ ಅಷ್ಟು ಇಲ್ಲ ಎಂದು ಹೇಳುವುದು, ಎರಡೂ ಪ್ರಕಾರಗಳ ನಡುವೆ ಉದ್ದೇಶಪೂರ್ವಕ ವಿಂಗಡಣೆ ಮಾಡಿದಂತಾಗುತ್ತದೆ. ಹಾಗೆ ನೋಡಿದರೆ, ಇಂಥ ವಿಭಾಗ ಕ್ರಮವನ್ನು ಸೃಜನಶೀಲ ಮತ್ತು ಸೃಜನೇತರ ಎಂದು (ಸಾಹಿತ್ಯವನ್ನು) ವಿಭಾಗ ಮಾಡಿಕೊಂಡಿದ್ದು ಅಧ್ಯಯನ ಕಾರಣಕ್ಕಾಗಿ. ಆ ಅಧ್ಯಯನ ಕಾರಣಕ್ಕೂ ಅಂಥ ವಿಭಾಗಕ್ರಮ ಅಗತ್ಯವಿರಲಿಲ್ಲ. ಆದರೆ ಆ ಭಿನ್ನತೆಯನ್ನು ಎಲ್ಲ ಸಂದರ್ಭದಲ್ಲೂ ನಾವು ಆಲಂಗಿಸಿಕೊಳ್ಳಬೇಕಿಲ್ಲ.

ಸಂಶೋಧನೆಯ ಶಿಸ್ತಿಗೆ ಒಳಪಡುವ ಆಕರ ಅದು ಯಾವುದಾಗಿದ್ದರೂ, ಅದರ ಮಹತ್ವ ಮತ್ತು ಅಗತ್ಯದ ಕಾರಣದಿಂದ ಅದಕ್ಕೆ ಸಲ್ಲಲೇಬೇಕಾದ ಗೌರವವನ್ನು ಕೊಡಬೇಕಾಗುತ್ತದೆ.

ಸಂಶೋಧಕ ಇಂಥ ಮನಸ್ಥಿತಿಯಲ್ಲೇ ತನ್ನ ಕಾಯಕವನ್ನು ಮುಂದುವರಿಸಬೇಕು. ಸಂಶೋಧನೆಯನ್ನು ಯಾವ ತಾತ್ವಿಕ ಹಿನ್ನೆಲೆಯಲ್ಲಿ ನೋಡಲಾಗುತ್ತದೆ ಎಂಬುದೂ ಅದರ ಭಾಷಿಕ ವಿನ್ಯಾಸದ ಮೇಲೆ ಪರಿಣಾಮಬೀರುತ್ತದೆ. ಕನ್ನಡದಲ್ಲಿ ಆರಂಭದ ಸಂಶೋಧನಾ ಬರಹಗಳನ್ನು ಅಧ್ಯಯನ ಮಾಡಿದರೆ, ಹೇಳುವುದು ಮುಖ್ಯವಾಗಿತ್ತೇ ಹೊರತು ಹೇಳುವ ರೀತಿ ಮುಖ್ಯವಾಗಿರಲಿಲ್ಲ. ಅನಂತರದ ದಿನಗಳಲ್ಲಿ ಭಾಷೆಯ ಸೂಕ್ಷ್ಮ ತಾಣಗಳ ಬಗ್ಗೆ ಹೆಚ್ಚು ಹೆಚ್ಚು ಅಧ್ಯಯನ ನಡೆದಂತೆ ಮತ್ತು ಸೃಜನಶೀಲ ಪ್ರಕಾರದಲ್ಲಿ ಭಾಷೆಗೆ ಹೆಚ್ಚು ಮನ್ನಣೆ ದೊರೆಯತೊಡಗಿದಂತೆ ಸಂಶೋಧನಾ ಬರಹದ ಭಾಷೆಯೂ ತನ್ನ ಸ್ವರೂಪದಲ್ಲಿ ಬದಲಾವಣೆ ಮಾಡಿಕೊಳ್ಳುವುದು ಸಾಧ್ಯವಾಯಿತು. ಕನ್ನಡದಲ್ಲಿ ಕಾಲಾನುಕ್ರಮದಲ್ಲಿ ನಡೆದ ಈ ಭಾಷಿಕ ವಿನ್ಯಾಸದ ಹೊರಳುವಿಕೆಯ ಸೂಕ್ಷ್ಮಗಳನ್ನು ಸಂಶೋಧನೆಯೂ ಗಂಭೀರವಾಗಿ ಗಮನಿಸಿಕೊಂಡೇ ಬಂದಿದೆ. ಸಂ.ಶಿ.ಭೂಸನೂರಮಠ, ಫ.ಗು.ಹಳಕಟ್ಟಿ ಅವರ ಸಂದರ್ಭದಲ್ಲಿ ವಚನಸಾಹಿತ್ಯಕ್ಕೆ ಸಂಬಂಧಿಸಿದಂತೆ ನಡೆದ ಅಧ್ಯಯನ ಕ್ರಮದಲ್ಲಿ ಬಳಕೆಯಾದ ಭಾಷೆಗೂ, ಅದೇ ವಚನಸಾಹಿತ್ಯ ಕುರಿತು ಮುಂದಿನ ದಿನಗಳಲ್ಲಿ ಜಿ.ಎಸ್.ಶಿವರುದ್ರಪ್ಪ, ಎಲ್.ಬಸವರಾಜು, ಬಸವರಾಜ ಕಲ್ಗುಡಿ ಮೊದಲಾದವರು ನಡೆಸಿದ ಅಧ್ಯಯನ ಕ್ರಮದ ಬರಹದ ಭಾಷೆಗೂ ಸಾಕಷ್ಟು ವ್ಯತ್ಯಾಸಗಳು ಕಾಣುತ್ತವೆ. ಒಂದು ಸಮಸ್ಯೆಯನ್ನು ಕುರಿತು ನಡೆಸುವ ಆಲೋಚನಾ ಕ್ರಮ ಭಾಷೆಯ ವಿಧಿವಿಧಾನದ ಮೇಲೆ ದೊಡ್ಡ ಪರಿಣಾಮ ಬೀರುತ್ತದೆ. ಕಲ್ಗುಡಿ ಅವರು ನಡೆಸಿದ ವಚನ ಅಧ್ಯಯನವನ್ನು ಫ.ಗು.ಹಳಕಟ್ಟಿ ಅವರು ವಚನ ಸಾಹಿತ್ಯ ಅಧ್ಯಯನಕ್ಕೆ ಬಳಸಿದ ಭಾಷಿಕ ವಿನ್ಯಾಸದಲ್ಲಿ ಮಂಡಿಸಲು ಸಾಧ್ಯವಾಗುವುದಿಲ್ಲ. ಯಾಕೆಂದರೆ ಒಂದು ಆಲೋಚನಾ ಕ್ರಮಕ್ಕೆ ಅದರದ್ದೇ ಆದ ಭಾಷಿಕ ವಿನ್ಯಾಸವೂ ಇರುತ್ತದೆ. ಆ ವಿನ್ಯಾಸದ ಮೂಲಕವೇ ಆ ಆಲೋಚನೆಗಳನ್ನು ಮಂಡಿಸಬೇಕು. ಹೀಗೆ ಇಪ್ಪತ್ತನೇ ಶತಮಾನದ ಆರಂಭ ಮತ್ತು ಅಂತ್ಯದ ಭಾಷಿಕ ವಿನ್ಯಾಸದಲ್ಲಿ ಸಾಕಷ್ಟು ಬದಲಾವಣೆಗಳನ್ನು ಕಾಣುತ್ತೇವೆ. ಈ ಬದಲಾವಣೆಗಳು ಸಹಜವಾಗಿ ಆ ಸಂದರ್ಭದಲ್ಲಿ ಅಸ್ತಿತ್ವದಲ್ಲಿರುವ ಭಾಷೆಯ ಮೇಲೆ ಸ್ವರೂಪಾಂತರ್ಗತ ಪರಿಣಾಮಗಳನ್ನು ಬೀರುತ್ತವೆ. ಕನ್ನಡ ಭಾಷೆಯಲ್ಲಾದ ಅವಸ್ಥಾಂತರಗಳನ್ನು ಈ ಹಿನ್ನೆಲೆಯಲ್ಲಿಯೇ ಪರಿಗಣಿಸಬೇಕು.

ಭಾಷೆಯ ವೈಜ್ಞಾನಿಕ ಕ್ರಮದ ಬೆಳವಣಿಗೆ ಹಾಗೂ ಸಂಶೋಧನೆ ಸಂದರ್ಭದಲ್ಲಿ ಅದಕ್ಕಿರುವ ನೆನಪಿನ ಶಕ್ತಿಗೇ ಹೆಚ್ಚು ಆದ್ಯತೆ ಕೊಡಬೇಕಾಗುತ್ತದೆ. ಸಂಶೋಧನೆಯಲ್ಲಿ ನೆನಪು ಅಥವಾ ಜ್ಞಾಪಕಶಕ್ತಿಗೆ ತನ್ನದೇ ಆದ ಸ್ಥಾನ ಇದೆ. ಒಂದು ಸಂದರ್ಭದಲ್ಲಿ ಚರ್ಚೆಯಾದ ಸಂಗತಿ ಇನ್ನೊಂದು ಸಂದರ್ಭದಲ್ಲಿ ಬೇರೊಂದು ಚರ್ಚೆಗೆ ಪೂರಕವಾಗಿ ಕಾಣಿಸಿಕೊಳ್ಳಬಹುದು. ಇದು ಸಾಧ್ಯವಾಗುವುದು ಆಲೋಚನೆ ಮತ್ತು ಭಾಷೆಗೆ ಇರುವ ನೆನಪಿನ ಶಕ್ತಿಯಿಂದ. ಸಂಶೋಧನಾ ಆಲೋಚನೆಯನ್ನು ನೆನಪಿನ ಸಂಸರ್ಗದಲ್ಲಿ ಉಳಿಸಿಕೊಂಡಾಗ ಅದು ಹೆಚ್ಚು ಹೆಚ್ಚು ಅನುರಣನಗೊಳ್ಳುತ್ತಿರುತ್ತದೆ. ಆದರೆ ಈ ನೆನಪು ತನ್ನ ಹಳೆಯ ಮಾದರಿಯಲ್ಲೇ ಮುಂದಿನ ಸಂಶೋಧನೆಯ ನಡೆಯ ಮೇಲೆ ನೇರ ಪರಿಣಾಮಬೀರದಂತೆ ಎಚ್ಚರವಹಿಸಬೇಕು. ಆ ಎಚ್ಚರ ಇಲ್ಲದಿದ್ದರೆ ಸಂಶೋಧನೆಯ ಗಾಂಭೀರ್ಯವನ್ನು ಅದು ಹಾಳುಮಾಡುವುದರ ಜತೆಗೆ, ಅಭಿಪ್ರಾಯಗಳು ಪುನರಾವರ್ತನೆಯಾಗುವ ಅಪಾಯ ಇರುತ್ತದೆ.

ಭಾಷೆ ಅಭಿಪ್ರಾಯವನ್ನು ಹಂಚಿಕೊಳ್ಳುವ ಕಾರಣಕ್ಕಾಗಿಯೇ ಹುಟ್ಟಿದ್ದು. ಅದರ ಮೊದಲ ಕರ್ತವ್ಯವೇ ಅದು. ಹಾಗೆ ಅಭಿಪ್ರಾಯವನ್ನು ವಿನಿಮಯ ಮಾಡಿಕೊಳ್ಳುವ ಮತ್ತು ಮನಸ್ಸು ಅಥವಾ ಬುದ್ಧಿ ಗ್ರಹಿಸಿದ್ದನ್ನು ದಾಖಲಿಸುವ ಕೆಲಸ ಅದರ ಪ್ರಾಥಮಿಕ ಕರ್ತವ್ಯವಾಗಿತ್ತು.

ದಾಖಲಿಸುವುದೆಂದರೆ ಬರವಣಿಗೆ ಮೂಲಕ ಅಲ್ಲ. ಮನಸ್ಸಿನ ಗ್ರಹಿಕೆಯನ್ನು ಮನಸ್ಸಿನ ನೆರವಿನಿಂದ ಭಾಷೆ ಸಂಗ್ರಹಿಸುತ್ತದೆ ಅಥವಾ ದಾಖಲಿಸುತ್ತದೆ. ಸಹಜವಾಗಿ ನಡೆಯುವ ಈ ಪ್ರಕ್ರಿಯೆಯಲ್ಲಿ ಭಾಷೆ ತನ್ನನ್ನು ತಾನು ಆವಾಹಿಸಿಕೊಳ್ಳುವ ದೋಷಕ್ಕೆ ಕೆಲವೊಮ್ಮೆ ಗುರಿಯಾಗುತ್ತದೆ. ಯಾಕೆಂದರೆ, ಭಾಷೆಗೆ ದಾಖಲು ಮಾಡುವ ಕೆಲಸಕ್ಕಿಂತ ವಿನಿಮಯ ಅಥವಾ ಸಂವಹನ ಮಾಡುವ ಗುಣವೇ ಹೆಚ್ಚು ಕರ್ತವ್ಯಮುಖಿಯಾದುದು. ಅದಕ್ಕಿಂತ ಬೇರೆ ತೆರನ ಕರ್ತವ್ಯಕ್ಕೆ ಅದು ಸಜ್ಜಾದಾಗ ಹೊಸ ಪರಿಸರಕ್ಕೆ ಹೊಂದಿಕೊಳ್ಳಲು ಪ್ರಯತ್ನಿಸುವಾಗ ಒಮ್ಮೊಮ್ಮೆ ಮನುಷ್ಯ ಕರ್ತವ್ಯವಿಮುಖವಾಗುವಂತೆ ಭಾಷೆಯೂ ನರಳುತ್ತದೆ. ಈ ಬಗೆಯ ಭಾಷಿಕ ದೋಷ ಆಗದಿರಬೇಕಾದರೆ, ಯಾವ ಸಮಸ್ಯೀಕರಣದ ಸಂದರ್ಭದಲ್ಲಿ ಯಾವ ಭಾಷಾವಿನ್ಯಾಸವನ್ನು ಕ್ರಮಾನುಗತಗೊಳಿಸಿಕೊಳ್ಳಬೇಕು ಎಂಬ ಎಚ್ಚರ ಇರಬೇಕು. ನನಗನಿಸುವಂತೆ ಸೃಜನಶೀಲ ಬರವಣಿಗೆ ಮಾಡುವುದಕ್ಕಿಂತ, ಸೃಜನೇತರ ಬರವಣಿಗೆ ಹೆಚ್ಚು ಸಾವಧಾನವಾಗಿ ಮಾಡುತ್ತದೆ. ಯಾಕೆಂದರೆ, ಸೃಜನೇತರ ಬರವಣಿಗೆ ಸಾವಧಾನ ಇರುತ್ತದೆ. ಆದರೆ, ಸೃಜನಶೀಲ ಬರವಣಿಗೆಗೆ ವೇಗ ಹೆಚ್ಚು. ಅಲ್ಲಿ ಭಾವನೆಯ ಕರ್ಷಣಕ್ಕೆ ಒಳಗಾಗಿ ಭಾಷೆ ಕೆಲಸ ಮಾಡುವುದರಿಂದ, ಆ ವೇಗವನ್ನು ಅದು ಒಡಲಿನಲ್ಲೇ ಇಟ್ಟುಕೊಂಡಿರುತ್ತದೆ. ಅಂತಹ ಆವೇಗ ಸಂಶೋಧನೆಯಲ್ಲಿ ಇರುವುದಿಲ್ಲ. ಭಾವನೆಗಳ ವೇಗೋತ್ಕರ್ಷಕ್ಕೆ ಅಲ್ಲಿ ಅವಕಾಶ ಇಲ್ಲ. ಸಮಸ್ಯೆಗಳನ್ನು ನಿರ್ಮಮಕಾರವಾಗಿ ವಿಶ್ಲೇಷಿಸುವ, ಅದರ ಸತ್ಯದರ್ಶನವನ್ನು ಅಷ್ಟೇ ನಿಷ್ಕಲ್ಮಶವಾಗಿ ನಿರೂಪಿಸುವ ಸಾಮರ್ಥ್ಯವನ್ನು ಸಂಶೋಧಕ ತೋರಬೇಕಾಗುತ್ತದೆ. ಕೆಲವೊಮ್ಮೆ ಇದು ಸಾಧ್ಯವಾಗದೆಯೂ ಇರಬಹುದು. ನಮ್ಮಲ್ಲೂ ಅಂಥ ದೋಷಪೂರಿತ ಸಂಶೋಧನೆ ಸಾಕಷ್ಟು ನಡೆದಿದೆ. ಕನ್ನಡ ಭಾಷಿಕ ಫಲಿತಗಳನ್ನು ಧಾರ್ಮಿಕ ಪ್ರಕ್ಷೇಪಣೆಗೆ ಬಳಸಿಕೊಂಡು, ಸಂಶೋಧನೆಯ ಮಾರ್ಗವನ್ನೇ ಅಧೀರಗೊಳಿಸಿರುವ ಪರಿಸ್ಥಿತಿ ಒಂದು ಕಾಲಘಟ್ಟದಲ್ಲಿ ಎದುರಾಗಿತ್ತು. ಅದನ್ನು ಜಯಿಸಿ ಕನ್ನಡ ಸಂಶೋಧನೆ ಸಾಕಷ್ಟು ಮುಂದೆ ಸಾಗಿದೆ. ಅಂತಹ ದೋಷಕ್ಕೆ ಭಾಷಿಕ ದೌರ್ಬಲ್ಯ ಕಾರಣವಲ್ಲ. ಸಂಶೋಧಕನಾಗಿರುವ ವ್ಯಕ್ತಿಯ ವೈಯಕ್ತಿಕ ದೋಷಗಳು ಅದನ್ನು ಆಗುಮಾಡಿಕೊಳ್ಳುವಂತೆ ಪ್ರೇರೇಪಿಸುತ್ತವೆ. ಈ ಪ್ರೇರಣೆಯನ್ನು ನಿಯಂತ್ರಿಸಿಕೊಳ್ಳದ ಸಂಶೋಧಕನಿಂದ ಅಂತಹ ತಪ್ಪುಗಳು ಸಹಜವಾಗಿ ಘಟಿಸುತ್ತವೆ. ಅಲ್ಲಿ ಭಾಷಿಕ ವಿನ್ಯಾಸದಲ್ಲಿ ಕಾಣದ ದೋಷಗಳನ್ನು ಹುಡುಕುವುದು ಸರಿಯಲ್ಲ. ದೋಷಗಳು ಆಗುವುದು ವೈಯಕ್ತಿಕ ದೌರ್ಬಲ್ಯದಿಂದ. ಅದು ಇಲ್ಲಿ ಭಾಷೆಯಲ್ಲಿ ಅಲ್ಲ, ವ್ಯಕ್ತಿಯಲ್ಲಿ ಇರುತ್ತದೆ. ಸಮಸ್ಯೀಕರಣವನ್ನು ಪ್ರವೇಶಿಸುವ ವ್ಯಕ್ತಿ ಅದನ್ನು ಗೆಲ್ಲಲಾಗದಿದ್ದರೆ, ಆತ ಸಂಶೋಧನಾ ಕ್ಷೇತ್ರವನ್ನು ಪ್ರವೇಶ ಮಾಡದಿರುವುದೇ ಉಚಿತ.

ಬಹುಮುಖ್ಯವಾಗಿ ಇನ್ನೊಂದು ಸಂಗತಿಯನ್ನು ಇಲ್ಲೇ ಚರ್ಚಿಸಬೇಕು. ಸಂಶೋಧನಾ ಬರಹದ ಭಾಷೆ ಸ್ಪಷ್ಟವಾಗಿರಬೇಕು. ಸಂದಿಗ್ಧಕ್ಕೆ ಗೊಂದಲಕ್ಕೆ, ಎರಡು ಅರ್ಥ ಕೊಡದಂತೆ, ಹೇಳಬೇಕಾದುದನ್ನು ನೇರವಾಗಿ ಹೇಳಬೇಕು ಎಂಬ ಅಭಿಪ್ರಾಯ ಇದೆ. ಇದು ಸರಿ. ಇದರಲ್ಲಿ ಭಿನ್ನಾಭಿಪ್ರಾಯ ಇಲ್ಲ. ಆದರೆ ಬಳಕೆಯಾಗುವ ಭಾಷೆ ಸರಳವಾಗಿರಬೇಕು ಎಂಬ ಸಾಮಾನ್ಯ ಅಭಿಪ್ರಾಯವೊಂದಿದೆ. ಇದು ಎಲ್ಲ ಸಂದರ್ಭದಲ್ಲೂ ಪಾಲನೆಯಾಗುವ ಮಾತಲ್ಲ. ಯಾಕೆಂದರೆ, ಸಂಶೋಧಕ ಯಾವ ಸಮಸ್ಯೆಯನ್ನು ಅಧ್ಯಯನಕ್ಕೆ ಸ್ವೀಕರಿಸುತ್ತಾನೆ ಎಂಬ ಆಧಾರದ ಮೇಲೆ ಭಾಷೆಯ ಸ್ವರೂಪ ನಿರ್ಧಾರವಾಗುತ್ತದೆ. ಆದ್ದರಿಂದಲೇ ಭಾಷಿಕ ವಿನ್ಯಾಸ ಆಲೋಚನಾ ಕ್ರಮವನ್ನು ಅನುಸರಿಸಿ ಪರಿವರ್ತನೆಗೆ ಒಳಗಾಗುತ್ತದೆ ಎನ್ನುವುದು. ಭಾಷೆಯ ವಿನ್ಯಾಸ ಬಳಕೆಯಾಗುವ ಸಂದರ್ಭದಲ್ಲಿ ನಿರ್ಧಾರವಾಗುತ್ತದೆ. ಈ ಕಾರಣದಿಂದ ಭಾಷೆಯ ಸ್ಥಿತಿಸ್ಥಾಪಕ ಗುಣವನ್ನು ಚಲನಶೀಲಗೊಳಿಸುವ ಸಾಧ್ಯತೆ ವ್ಯಕ್ತವಾಗುವುದು, ಆ

ಪರಿಮಿತಿಯನ್ನು ಮೀರುವ ಅಧ್ಯಯನಾಕಾಂಕ್ಷೆ ಪ್ರಬಲವಾಗಿದ್ದಾಗ ಇದನ್ನು ಬರಿದೆ ಪ್ರಾಸಂಗಿಕವಾಗಿ ನೋಡುವುದಕ್ಕಿಂತ, ಸಂಶೋಧಕ ತನ್ನ ಅಭ್ಯಾಸ ಕ್ರಮದಲ್ಲಿ ಆಗುವ ಏರಿಳಿತದ ಮೂಲಕ ಅದನ್ನು ಆಗುಮಾಡಿಕೊಳ್ಳಬೇಕು. ಹಾಗಾಗಿ ಭಾಷೆ ಪ್ರಾಥಮಿಕ ಸ್ತರದಲ್ಲಿ ಆಯ್ಕೆಯ ಗುಣವನ್ನು ಕಾಪಿಟ್ಟುಕೊಂಡಿರುತ್ತದೆ. ಆ ಗುಣ ಸಾಪೇಕ್ಷವಾಗಿರುವುದರಿಂದ, ಭಾಷಿಕ ವಿನ್ಯಾಸವನ್ನು ಸಂಶೋಧಕ ತನ್ನ ಆಲೋಚನಾ ಕ್ರಮದ ರೀತಿನೀತಿಗೆ ಹೇಗೆ ಬೇಕೊ ಹಾಗೆ ಹೊಂದಿಸಿಕೊಳ್ಳುವ ಸಾಮರ್ಥ್ಯ ತೋರಬೇಕಾಗುತ್ತದೆ. ಆ ಸಾಮರ್ಥ್ಯ ಸಂಶೋಧಕನಿಗೆ ಇದ್ದರೆ, ಭಾಷೆಯ ಸಾಪೇಕ್ಷತಾ ಸ್ತರ ಸಂಶೋಧನೆಯ ಅವಶ್ಯಕತೆಯನ್ನು ಈಡೇರಿಸುವಂತೆ ಸಜ್ಜುಗೊಳ್ಳುತ್ತದೆ.

ಭಾಷೆಯ ಸ್ಥಿತಿಸ್ಥಾಪಕ ಗುಣಕ್ಕಿಂತ ಅದರ ಸಾಪೇಕ್ಷ ಗುಣದ ಬಗ್ಗೆ ಸೃಜನಶೀಲ ಪ್ರಕಾರಕ್ಕೆ ಇರುವಂತೆ ಸೃಜನೇತರ ಪ್ರಕಾರಕ್ಕೂ ಆಸಕ್ತಿ ಇರುತ್ತದೆ. ಸ್ಥಿತಿಸ್ಥಾಪಕತೆ ಭಾಷೆಯನ್ನು ಸ್ಥಿರೀಕರಿಸುವ ಪ್ರಯತ್ನ ಮಾಡುತ್ತದೆ. ಭಾಷೆಗೆ ಅಂತಹ ಸ್ಥಿತಿ ಒದಗಿದರೆ, ಅದು ತನ್ನ ಚಲನೆಯನ್ನು ಕಳೆದುಕೊಂಡು ನಿಸ್ತೇಜಗೊಳ್ಳುತ್ತದೆ. ಆದರೆ, ಯಾರು ಭಾಷೆಯನ್ನು ತಮ್ಮ ಅಭಿವ್ಯಕ್ತಿಯ ಮಾಧ್ಯಮವನ್ನಾಗಿ ಮಾಡಿಕೊಳ್ಳಲು ಬಯಸುತ್ತಾರೊ ಅವರು ಅದರ ಆ ಎಲ್ಲ ಸಾಧ್ಯತೆಯನ್ನು ಸೂರೆಗೊಳ್ಳಲು ಪ್ರಯತ್ನಿಸಬೇಕು. ಆಗ ಭಾಷೆಯ ಸ್ಥಿತಿಸ್ಥಾಪಕ ಗುಣ ಸಾಪೇಕ್ಷ ಗುಣವಾಗಿ ಪರಿವರ್ತನೆಯಾಗುತ್ತದೆ. ಭಾಷೆಯಲ್ಲಿ ಈ ಪರಿವರ್ತನೆಯಾದರೆ ಅಥವಾ ತನ್ನ ಸಾಮರ್ಥ್ಯದ ಮೂಲಕ ಲೇಖಕ ಅಥವಾ ಸಂಶೋಧಕ ಅದನ್ನು ಸಾಧ್ಯ ಮಾಡಿಕೊಂಡರೆ ಭಾಷೆಗೆ ತೆರೆದುಕೊಳ್ಳುವ ವಿಪುಲ ಅವಕಾಶಗಳು ದೊರೆಯುವುದರ ಜತೆಗೆ, ಧಾರಣೆಯಾಗುವ ಆಲೋಚನೆ ಅಥವಾ ಚಿಂತನೆ ಹೆಚ್ಚು ಹೆಚ್ಚು ಪ್ರಮಾಣದಲ್ಲಿ ಹೊಳಹುಗಳನ್ನು ಕ್ರೋಡೀಕರಿಸಿಕೊಳ್ಳುತ್ತದೆ. ಈ ಸಾಧ್ಯತೆ ಸೃಜನಶೀಲತೆಗೆ ಇರುವಂತೆ ಸೃಜನೇತರ ಸಂದರ್ಭಕ್ಕೂ ಮಹತ್ತರವಾಗಿ ಕಾಣುತ್ತದೆ. ಭಾಷೆಯನ್ನು ಬಳಸುವುದಕ್ಕಿಂತ ಪ್ರಯೋಗಿಸಿದರೆ ಅದರಿಂದ ಹೆಚ್ಚು ಅನುಕೂಲಗಳು ಲಭ್ಯವಾಗುತ್ತವೆ. ಭಾಷೆಯ ಬಳಕೆಯ ಸ್ತರಕ್ಕಿಂತ ಪ್ರಾಯೋಗಿಕ ಸ್ತರ ಬರವಣಿಗೆಗೆ ಹೆಚ್ಚು ಆಪ್ತ. ಹೀಗಾಗಿ ಬರವಣಿಗೆಯಲ್ಲಿ ಅಂದರೆ ಮುಖ್ಯವಾಗಿ ಸಂಶೋಧನೆಯಲ್ಲಿ ಆ ಬಗೆಯ ಪ್ರಾಯೋಗಿಕ ಸ್ತರದ ನಡೆಗಳನ್ನು ಪಡೆದುಕೊಂಡಷ್ಟೂ, ಆ ಸಂಶೋಧನೆಯ ಅಧಿಕೃತತೆ ಹೆಚ್ಚು ಪ್ರಮಾಣದಲ್ಲಿ ಅನಾವರಣವಾಗುತ್ತದೆ.

ಹಾಗೆಯೇ ಸೃಜನಶೀಲ ಸಂದರ್ಭದ ಭಾಷಾ ಪ್ರಯೋಗಕ್ಕಿಂತ ಸಂಶೋಧನಾ ಬರವಣಿಗೆಯ ಭಾಷೆ ಹೆಚ್ಚು ಅಧಿಕೃತ ಆಯಾಮಪಡೆಯುತ್ತದೆ. ಸಂಶೋಧನೆಯಲ್ಲಿ ನಿಖರತೆಗೆ ಆದ್ಯತೆ ಇರುವುದರಿಂದ, ಭಾಷೆಯೂ ಅದಕ್ಕೆ ಅನುಗುಣವಾಗಿ ತನ್ನನ್ನು ಗುರುತಿಸಿಕೊಳ್ಳಬೇಕಾಗುತ್ತದೆ. ಈ ಗುಣದಿಂದ ಭಾಷೆಗೆ ಶಿಸ್ತುಪ್ರಾಪ್ತವಾಗುತ್ತದೆ. ಭಾಷೆ ಬಳಸುವವರ ಅಧೀನ. ಆದರೆ, ಆ ಅಧೀನ ಪರಿಕಲ್ಪನೆಗೆ ಸಂಶೋಧನೆಯಲ್ಲಿ ಹೆಚ್ಚು ಸ್ವಾತಂತ್ರ್ಯವಿಲ್ಲ. ಸಂಶೋಧನೆಯ ಫಲಿತಗಳು ನಿಖರವಾಗಿರಬೇಕೆಂದರೆ ಅದರಲ್ಲಿ ಭಾಷೆಯ ನಿಖರತೆಯೂ ಸೇರಿರುತ್ತದೆ. ಸಂಶೋಧನೆಯ ಗಾಂಭೀರ್ಯ ಅದರ ಸಹವರ್ತಿಗೆ ಎಲ್ಲವನ್ನೂ ತನ್ನಂತೆಯೇ ಗ್ರಹಿಸುತ್ತದೆ. ಅದಕ್ಕೆ ಹೊರತಾದ ಅಂದರೆ ಸಂಶೋಧನಾ ಸಾಧ್ಯತೆಗಳನ್ನು ಹೊರತುಪಡಿಸಿದ ಸಂಗತಿಗಳು ಇಲ್ಲಿ ಅನಪೇಕ್ಷಣೀಯವಾಗುತ್ತವೆ. ಆದ್ದರಿಂದ ಸೃಜನಶೀಲ ಬರವಣಿಗೆಯ ಭಾಷೆಗಿರುವ ಸುಲಲಿತತೆ ಸಂಶೋಧನಾ ಬರಹದ ಭಾಷೆಗೆ ಇರುವುದಿಲ್ಲ. ಸಂಶೋಧನೆಯಲ್ಲಿ ಲಾಲಿತ್ಯ ಇರುವುದಿಲ್ಲ. ಯಾಕೆಂದರೆ, ಲಾಲಿತ್ಯ ಭಾವನೆಗೆ ಸಂಬಂಧಿಸಿದ ಸಂಗತಿಯಾಗಿ, ಅದನ್ನು ಆ ಕ್ರಮದಲ್ಲೇ ಗ್ರಹಿಸಬೇಕಾಗುತ್ತದೆ.

ಭಾಷೆಯನ್ನು ಯಾಕೆ ಹಾಗೆ ಒಂದು ಸಾಪೇಕ್ಷ ಸಂದರ್ಭದಲ್ಲಿ ಪರಿಗಣಿಸಲಾಗುತ್ತದೆಯೆಂದರೆ, ಅದಕ್ಕಿರುವ ಸಂವಹನ ಗುಣ. ಆ ಗುಣ ಅಭಿವ್ಯಕ್ತಿಯನ್ನು ಸಾಧ್ಯತೆಗಳನ್ನು ಹೆಚ್ಚು ಮಾಡುತ್ತಾದರು, ಸಂಶೋಧನೆಯಲ್ಲಿ ಅದರ ವೈಶಾಲ್ಯತೆಯನ್ನು ಕಾಣಲು ಸಾಧ್ಯವಿಲ್ಲ. ಆದರೂ, ಇಪ್ಪತ್ತನೇ ಶತಮಾನದ ಆರಂಭದ ಸಂಶೋಧನಾ ಬರಹದ ಭಾಷೆಯೊಡನೆ ಈಚೀನ ಸಂಶೋಧನಾ ಬರಹದ ಭಾಷೆಯನ್ನು ಹೋಲಿಸಿದರೆ, ಅದರ ಪ್ರಾಯೋಗಿಕ ನೆಲೆಯಲ್ಲೇ ಸಾಕಷ್ಟು ಬದಲಾವಣೆ ಆಗಿರುವುದನ್ನು ಕಾಣುತ್ತೇವೆ. ಭಾಷೆಗೆ ಸಹಜವಾಗಿರುವ ಈ ಅವಸ್ಥಾಂತರ ಲಕ್ಷಣವನ್ನು ಎಲ್ಲ ಸಂದರ್ಭದಲ್ಲೂ ನಾವು ಗಮನಿಸಬಹುದು.

ಇನ್ನೊಂದು ಸಂಗತಿಯತ್ತ ನಾನು ಗಮನಸೆಳೆಯಬೇಕು. ಸೃಜನಶೀಲ ಪ್ರಕಾರಗಳಲ್ಲಿ ಭಾಷೆ ಬಳಕೆಯಾದ ಮಾತ್ರಕ್ಕೆ ಅದು ಸೃಜನಶೀಲ ಭಾಷೆಯಾಗುವುದಿಲ್ಲ. ಹಾಗೆಯೇ ಸೃಜನೇತರ ಪ್ರಕಾರಗಳಲ್ಲಿ ಬಳಸುವ ಭಾಷೆಯನ್ನು ಜಡ ಭಾಷೆ ಎಂದೂ ಹೇಳಲಾಗುವುದಿಲ್ಲ. ಭಾಷೆಯ ಬಳಕೆ ಸಂದರ್ಭದಲ್ಲಿ ಎದುರಾಗುವ ಈ ಬಗೆಯ ವಿಭಾಗಕ್ರಮ ಪೂರ್ಣವಾಗಿ ಅಧಿಕೃತ ಅಲ್ಲ. ಅದು ಭಾಷೆಯ ಸ್ತರವಿನ್ಯಾಸಗಳನ್ನು ಗೌಣವಾಗಿ ಕಂಡಂಥ ಬೆಳವಣಿಗೆಯಾಗುತ್ತದೆ. ಒಮ್ಮೊಮ್ಮೆ ಸೃಜನಶೀಲ ಪ್ರಕಾರಗಳಲ್ಲಿನ ಭಾಷಾ ಬಳಕೆಯು ಸಹಿಸಲಸಾಧ್ಯವಾದಂತಿರುತ್ತದೆ. ಅಂದರೆ, ಆ ಭಾಷಾ ಬಳಕೆ ಆಸಕ್ತಿಯಿಂದ ಓದಿಸಿಕೊಳ್ಳುವಂತಿರುವುದಿಲ್ಲ. ಕುತೂಹಲ ಇರುವುದಿಲ್ಲ. ಹಾಗಂತ ಸಂಶೋಧನೆಯಲ್ಲಿ ಬಳಕೆಯಾಗುವ ಭಾಷೆ ಅದಕ್ಕಿಂತಲೂ ಬಿಗಿಯಿಂದ ಕೂಡಿರುತ್ತದೆ ಎಂದಲ್ಲ. ನಿಜ. ಸಂಶೋಧನಾ ಭಾಷೆಗೆ ತನ್ನದೇ ಆದ ಗಾಂಭೀರ್ಯವನ್ನೊಳಗೊಂಡ ಬಿಗಿ ಇರುತ್ತದೆ. ಆದರೆ, ಅದು ಆ ಕಾರಣಕ್ಕಾಗಿಯೇ ನಿರಾಸಕ್ತಿ ರೀತಿಯ ಲಕ್ಷಣಗಳನ್ನು ಹೊಂದಿರಬೇಕಿಲ್ಲ. ನಮಗೆ ಆ ಸಂಶೋಧನಾ ಸಮಸ್ಯೆಯ ಬಗ್ಗೆ ಸಹಜ ಕುತೂಹಲವಿದ್ದರೆ ಆ ಬರವಣಿಗೆಯಲ್ಲಿನ ಭಾಷೆಯ ಬಗ್ಗೆಯೂ ಆಸಕ್ತಿ ಮೂಡುತ್ತದೆ.

ಆದರೆ ಒಮ್ಮೊಮ್ಮೆ ಸಂಶೋಧನಾ ಸಮಸ್ಯೆಯ ವಿಷಯ ಕುತೂಹಲ ಮೂಡಿಸಿ, ಅದನ್ನು ನಿರೂಪಿಸಬೇಕಾದ ಭಾಷೆ ಜಡವಾಗಿ ಬಿಡದೆ ಓದಬೇಕೆಂಬ ಅಭಿಪ್ರಾಯದಿಂದ ಹಿಂದೆ ಸರಿಯುವ ಸಾಧ್ಯತೆ ಇರುತ್ತದೆ. ಇದು ಸಂಶೋಧನೆಯ ದೃಷ್ಟಿಯಿಂದ ಅಪಾಯಕಾರಿ. ಸೃಜನಶೀಲ ಬರವಣಿಗೆಯನ್ನು ಓದುವ ವರ್ಗ ಇರುವಂತೆ, ಸೃಜನೇತರವಾದ ಸಂಶೋಧನೆಯನ್ನೂ ಓದುವ ಸೀಮಿತ ವರ್ಗವಾದರೂ ಇದ್ದೇ ಇರುತ್ತದೆ. ಈ ವರ್ಗವನ್ನು ಹೆಚ್ಚು ಮಾಡಿಕೊಳ್ಳಲು ಸಾಧ್ಯವಾಗದಿದ್ದ ಸಂದರ್ಭದಲ್ಲಿ, ಆ ಪ್ರಮಾಣ ಕಡಿಮೆಯಾಗದಂತೆ ನೋಡಿಕೊಳ್ಳಬೇಕಾದ ಜವಾಬ್ದಾರಿ ಇರುತ್ತದೆ. ಈ ಜವಾಬ್ದಾರಿಯನ್ನೂ ಸಂಶೋಧಕ ತನ್ನ ಸಂಶೋಧನೆಯ ಒಂದು ಭಾಗ ಎಂದು ತಿಳಿದು ನಿರ್ವಹಿಸಬೇಕಾಗುತ್ತದೆ.

ಸಂಶೋಧನೆ ಒಂದು ನಿಖರವಾದ, ಖಚಿತವಾದ, ನಿರ್ದಿಷ್ಟತೆಯುಳ್ಳ ಕಾಯಕ. ಅದನ್ನು ಗಂಭೀರವಾಗಿ ಮುನ್ನಡೆಸಬೇಕಾದಾಗ ಕೆಲವು ಕಟ್ಟುನಿಟ್ಟಿನ ನಿಯಮಗಳನ್ನು ಅನುಸರಿಸುವುದು ಕಡ್ಡಾಯ. ಆ ನಿಯಮಗಳು ಸಂಶೋಧನೆಯ ಸ್ವರೂಪದ ಮೇಲೆ ಇತ್ಯಾತ್ಮಕ ರೀತಿಯ ಪರಿಣಾಮಗಳನ್ನು ಬೀರುತ್ತವೆ. ಆ ಪರಿಣಾಮಗಳು ಸಂಶೋಧಕನ ಆಲೋಚನಾಕ್ರಮ ಮತ್ತು ಸಂಪ್ರಬಂಧದ ಮೇಲೆ ಒಟ್ಟು ಸ್ವರೂಪದ ಆಂತರಿಕ ಸ್ಥಿತಿಯನ್ನು ನಿರ್ಧರಿಸುತ್ತವೆ. ಆದ್ದರಿಂದ ಆ ನಿಯಮಗಳನ್ನು ಸಂಶೋಧಕ ಇತ್ಯಾತ್ಮಕವಾಗಿ ಸ್ವೀಕರಿಸುವುದೇ ಸೂಕ್ತ. ಆದರೆ, ಸಂಶೋಧನೆ ಆ ನಿಯಮಗಳನ್ನು ಸಾಕ್ಷೀಕರಿಸುವುದಕ್ಕಾಗಿ ಕೈಗೊಳ್ಳುವ ಕಾಯಕ ಅಲ್ಲ. ಅದು ಆ ಎಲ್ಲ ರೀತಿಯ ಕಟ್ಟುಕಟ್ಟಳೆಗಳಿಂದ ಮುಕ್ತವಾಗಿರುತ್ತದೆ ಮತ್ತು ನಿರ್ಬಂಧಗಳನ್ನು ಮೀರುವ ರೀತಿಯಲ್ಲಿರುತ್ತದೆ. ನಿರ್ಬಂಧಗಳು ಸ್ವತಂತ್ರವಾದ

ಆಲೋಚನೆಗಳನ್ನು ಹುಟ್ಟುಹಾಕಲಾರವು. ಹಾಗಾಗಿ, ಆ ಎಲ್ಲ ಕಟ್ಟುಕಟ್ಟಳೆಗಳು, ನಿಯಮಗಳು ಏನಿದ್ದರೂ ಒಳಾವರಣದಿಂದ ಆಚೆ ಮಾತ್ರವೇ ದೃಷ್ಟಿಗೋಚರವಾಗುವಂತಿರಬೇಕು. ಭಾಷಿಕ ವಿನ್ಯಾಸ ಪೂರ್ಣವಾಗಿ ಒಳಾವರಣವನ್ನು ಪ್ರತಿನಿಧಿಸುವುದರಿಂದ ಮತ್ತು ಇಡೀ ಸಮಸ್ಯೀಕರಣದ ಸ್ವರೂಪವನ್ನು ಆಲೋಚನೆಯ ಮೂಲಕ ಆ ಭಾಷೆಯೇ ನಿರ್ಧರಿಸುವುದರಿಂದ ಅದನ್ನು ಆ ಎಲ್ಲವುಗಳಿಂದ ಅಂದರೆ ಕಟ್ಟುಕಟ್ಟಳೆಗಳು ಮತ್ತು ನಿಯಮಗಳು ನಿರ್ಬಂಧಗಳನ್ನು ಮಾತ್ರ ಪ್ರತಿನಿಧಿಸುವಂತಿದ್ದರೆ ಮುಕ್ತಗೊಳಿಸುವುದು ಅಗತ್ಯವಿರುತ್ತದೆ. ಅಂತಿಮವಾಗಿ ಯಾವ ಸಮಸ್ಯೀಕರಣದ ಅಭಿವ್ಯಕ್ತಿಗೆ ಯಾವ ಸ್ವರೂಪದ ಭಾಷಾ ನೇಯ್ಗೆ ಬೇಕು ಎಂಬುದನ್ನು ಅಲ್ಲಿನ ಆಲೋಚನ ಕ್ರಮವೇ ಗೊತ್ತುಮಾಡಿಕೊಳ್ಳುತ್ತದೆ. ಇದನ್ನು ಸಾಮಾನ್ಯೀಕರಣ ಮಾಡುವುದರಿಂದ ಯಾವ ಪ್ರಯೋಜನವೂ ಆಗುವುದಿಲ್ಲ.

ಸಂಶೋಧನೆಗೆ ಸಮಸ್ಯೆ ನಿಖರವಾಗಿದ್ದರೆ ಮತ್ತು ಅದು ಇದೇ ಪಾತಳಿಯಲ್ಲಿ ಜರುಗಬೇಕು ಎಂಬ ಪೂರ್ವನಿರ್ಧರಿತ ಗ್ರಹಿಕೆ ಇದ್ದರೆ, ಭಾಷೆ ಕೂಡ ತನ್ನ ಸ್ವರೂಪವನ್ನು ನಿಖರಗೊಳಿಸಿಕೊಳ್ಳುತ್ತದೆ. ಯಾವ ಸಮಸ್ಯೆ ಚರ್ಚಿಸಲ್ಪಡುತ್ತಿದೆ ಎಂಬುದನ್ನು ಸಂಶೋಧನೆಯ ಸ್ವರೂಪ ನಿರ್ಧರಿಸುತ್ತದೆ, ನಿಜ. ಆದರೆ, ಆ ಬಗೆಯ ನಿರ್ಧಾರ ಸಂಶೋಧನೆಯ ಸಂದರ್ಭದಲ್ಲಿ ಪೂರ್ವನಿರ್ಧರಿತವಾಗಿದ್ದಾಗ, ಭಾಷೆಯ ಪ್ರಾಯೋಗಿಕ ಸ್ಥಿತಿಯೂ ನಿರ್ಧಾರವಾಗಿರುತ್ತದೆ. ಅಂದರೆ, ಸಂಶೋಧನೆ ಹೇಗೆ ಸಾಗಬೇಕು ಎಂಬುದು ಸಂಶೋಧಕನ ಆಂತರಿಕ ಸ್ಥಿತಿಯೊಳಗೆ ನಿರ್ಧಾರವಾಗುತ್ತಿದ್ದಂತೆ, ಆ ಸಂದರ್ಭದಲ್ಲೇ ಭಾಷಾಗತಿ ಕೂಡ ಸಿದ್ಧವಾಗಿರುತ್ತದೆ. ಹೀಗೆ ಆಲೋಚನೆ ಮತ್ತು ಭಾಷೆ ಎರಡೂ ಪರಸ್ಪರ ಆತುಕೊಂಡು ನಡೆಯುತ್ತವೆ. ಇದನ್ನು ಸಂಶೋಧಕ ಪರಿಣಾಮಕಾರಿಯಾಗಿ ಬಳಸಿಕೊಂಡರೆ, ಆ ಸಂಶೋಧನೆಯ ಫಲಿತವೂ ಪರಿಣಾಮಕಾರಿಯಾಗಿರುತ್ತದೆ. ಒಂದು ವೇಳೆ ಆಲೋಚನೆ ನಿಖರವಾಗಿದ್ದು, ಆ ನಿಖರ ಆಲೋಚನೆಗೆ ಅನುಗುಣವಾಗಿ ಅಂದರೆ ಆ ಆಲೋಚನೆಯನ್ನು ಖಚಿತವಾಗಿ ಅಭಿವ್ಯಕ್ತಪಡಿಸಬಲ್ಲ ಭಾಷೆಯ ಬಳಕೆಯಲ್ಲಿ ಸಂಶೋಧಕ ವಿಫಲನಾದರೆ, ಆ ಆಲೋಚನೆ ಅಷ್ಟು ಪರಿಣಾಮಕಾರಿಯಾಗಿ ಓದುಗರನ್ನು ತಲುಪುವುದು ಸಾಧ್ಯವಾಗದು. ಹಾಗೆಯೇ ಭಾಷಾ ಬಳಕೆಯಲ್ಲಿ ಸಂಶೋಧಕ ಖಚಿತವಾಗಿದ್ದರಷ್ಟೇ ಸಾಲದು. ಅದಕ್ಕೆ ಹೆಗಲೆಣೆಯಾಗಿ ನಿಲ್ಲುವ ಸಂಶೋಧಕನ ಆಲೋಚನೆಯೂ ನಿಖರವಾಗಿರಬೇಕು ಮತ್ತು ನಿರ್ದಿಷ್ಟತೆಯಿಂದ ಕೂಡಿರಬೇಕು. ಭಾಷೆ ಖಚಿತ ಮಾರ್ಗದಲ್ಲಿದ್ದು, ಆಲೋಚನೆ ದುರ್ಬಲವಾಗಿದ್ದರೆ ಆಗ ಎರಡೂ ಸೋತು ಹೋಗುತ್ತವೆ. ಅದರಂತೆ, ಆಲೋಚನೆ ನಿರ್ದಿಷ್ಟವಾಗಿದ್ದು ಪರಿಣಾಮಕಾರಿಯಾದ ಸಂವಹನಕ್ಕೆ ಕಾಯುತ್ತಿರುವಾಗ ಭಾಷಾ ಬಳಕೆಯಲ್ಲಿ ದುರ್ಬಲವಾದರೆ ಅದು ಕೂಡ ನಿರ್ದಿಷ್ಟಗುರಿ ತಲುಪಲು ಕಷ್ಟವಾಗುತ್ತದೆ. ಹೀಗೆ ಸಂಶೋಧನೆಯಲ್ಲಿ ಭಾಷೆ ಮತ್ತು ಆಲೋಚನೆ ಪರಸ್ಪರ ಪೂರಕವಾಗಿರುವುದರ ಜೊತೆಗೆ, ಒಂದು ಇನ್ನೊಂದಕ್ಕಿಂತ ಪ್ರಬಲವಾಗಿರುವಂತೆ ಸಂಶೋಧಕ ನೋಡಿಕೊಳ್ಳಬೇಕು. ಆಲೋಚನೆ ಎಷ್ಟು ಪ್ರಬಲವಾಗಿರುತ್ತದೊ ಮತ್ತು ಪರಿಣಾಮಕಾರಿಯಾಗಿರುತ್ತದೊ ಅಷ್ಟೇ ಮಟ್ಟದಲ್ಲಿ ಭಾಷೆಯೂ ತಾನೂ ಪ್ರಬಲ ಮತ್ತು ಪರಿಣಾಮಕಾರಿಯಾಗಿ ಆಲೋಚನೆಗೆ ಸವಾಲು ಹಾಕುವಂತಿರಬೇಕು. ಈ ಬಗೆಯ ಸವಾಲು ಮತ್ತು ಪ್ರತಿಸವಾಲು ಎಂಬ ಕ್ರೀಡಾಸ್ಫೂರ್ತಿಯ ನಡಿಗೆ ಸಂಶೋಧನೆಯನ್ನು ನಿಶ್ಚಿತ ಗುರಿಯೆಡೆಗೆ ತಂದು ನಿಲ್ಲಿಸಬಲ್ಲದು.

ಸಂಶೋಧನೆಗೆ ನಿಖರತೆ ಪ್ರಾಪ್ತವಾಗಲು ಆಲೋಚನೆಯ ಗುಣಮಟ್ಟ ಬಹಳ ಮುಖ್ಯ. ಸಂಶೋಧಕನ ಆಲೋಚನ ಶಕ್ತಿ ಒಂದು ಸಮಸ್ಯೆಯನ್ನು ಅರ್ಥಮಾಡಿಕೊಳ್ಳಲು ಎಷ್ಟು

ಆಳವಾಗಿರುತ್ತದೊ ಅಷ್ಟು ಉತ್ತಮಮಟ್ಟದಲ್ಲಿ ಸಂಪ್ರಬಂಧ ಅಥವಾ ಸಂಶೋಧನ ಬರಹದ ಕೇಂದ್ರ ರೂಪುಗೊಳ್ಳುತ್ತದೆ. ಸಂಶೋಧಕನಿಗೆ ಸಂಶೋಧನೆಯಲ್ಲಿ ತೊಡಗಿಸಿಕೊಳ್ಳುವ ಮುನ್ನ ಯಾವ ಕ್ಷೇತ್ರದಲ್ಲಿ ಆತನ ದೃಷ್ಟಿಕೋನ ಕೇಂದ್ರೀಕೃತವಾಗಿದೆಯೊ ಅದಕ್ಕೆ ಪೂರಕವಾಗಿ ನೆರವಾಗುವ ಇತರ ಕ್ಷೇತ್ರಗಳ ಬಗ್ಗೆಯೂ ತಿಳಿವು ಇರಬೇಕಾಗುತ್ತದೆ. ಈ ಅಂತರ್‌ಶಿಸ್ತೀಯ ಶ್ರಮ ಸಂಶೋಧಕನ ಆಲೋಚನೆಯನ್ನು ಹರಿತ ಮಾಡುವುದರ ಜತೆಗೆ, ಭಾಷೆಯ ಬಳಕೆಯ ಮೇಲೆ ಹಿಡಿತ ತಂದುಕೊಡುತ್ತದೆ. ಸಂಶೋಧಕ ಹಾಗೆ ಸಮರ್ಥನಾಗಿದ್ದನೆಂದರೆ, ಭಾಷೆ ಅವನ ಆಲೋಚನೆಗೆ ಅನುಗುಣವಾಗಿ ಒಗ್ಗಿಕೊಳ್ಳುತ್ತದೆ. ಭಾಷೆಯ ಪಾರದರ್ಶಕತೆಯ ಗುಣ ಇಂಥ ಕಡೆ ತನ್ನನ್ನು ಪರಿಣಾಮಕಾರಿಯಾಗಿ ಪ್ರಕಟಪಡಿಸಿಕೊಳ್ಳಲು ಅನುಕೂಲವಾಗಿ ಪರಿಣಮಿಸುತ್ತದೆ.

ತನ್ನ ಆಲೋಚನೆಯನ್ನು ಪರಿಣಾಮಕಾರಿಯಾಗಿ ಮಂಡಿಸಲು ಭಾಷೆಯನ್ನು ಹೇಗೆ ಉಪಯೋಗಿಸಿಕೊಳ್ಳಬೇಕು ಎಂಬುದನ್ನು ಸಂಶೋಧಕನೇ ನಿರ್ಧರಿಸಬೇಕು. ಅದನ್ನು ಹೊರಗಿನ ಯಾವ ಶಕ್ತಿಯೂ ನಿರ್ಧರಿಸಲಾರದು. ಯಾಕೆಂದರೆ ಭಾಷೆಯ ಸಂವಹನಶೀಲತೆ ಬಹಳ ಸೂಕ್ಷ್ಮವಾಗಿರುವುದರಿಂದ, ಅದನ್ನು ಬಲವಂತವಾಗಿ ಬಗ್ಗಿಸಿಕೊಳ್ಳುವ ಅಥವಾ ಆಗುಮಾಡಿಕೊಳ್ಳುವ ಪ್ರಕ್ರಿಯೆಗೆ ಜಯ ದೊರೆಯುವುದಿಲ್ಲ. ಆಲೋಚನೆಯ ನಿರಂತರ ಹರಿಯುವಿಕೆ ಮತ್ತು ಭಾಷೆಯ ಮಂಡನೆ ಎರಡೂ ಒಟ್ಟೊಟ್ಟಿಗೆ ಸಾಧ್ಯವಾದಾಗ ಬರಹ ಗಟ್ಟಿಯಾಗುತ್ತದೆ. ಅಂದುಕೊಂಡಿದ್ದನ್ನು ಪರಿಣಾಮಕಾರಿಯಾಗಿ ಹೇಳುವುದು ಸಾಧ್ಯವಾಗುತ್ತದೆ. ಬಹುಪಾಲು ಸಂಶೋಧನೆಯ ಬರಹಕ್ಕೆ ಈ ಎರಡನ್ನು ಒಟ್ಟಿಗೆ ಕೂಡಿಸುವುದು ಸಾಧ್ಯವಾಗದೆ ಅಂತಿಮ ಫಲಿತದಲ್ಲಿ ವಿಫಲವಾಗುವುದೇ ಹೆಚ್ಚು. ಇದಾಗದಿರಬೇಕಾದರೆ ಆಲೋಚನೆಯ ಮೂಲವನ್ನು ಗೌರವಿಸುವಂತೆ, ಗಂಭೀರವಾಗಿ ಸ್ವೀಕರಿಸುವಂತೆ ಭಾಷಿಕ ವಿನ್ಯಾಸವನ್ನೂ ಗೌರವಿಸಬೇಕಾಗುತ್ತದೆ.

ಈ ಎಲ್ಲ ಅಂಶಗಳನ್ನು ಪರಿಗಣಿಸಿ ಭಾಷಿಕವಾಗಿ ಸಂಶೋಧನ ಬರಹ ಯಶಸ್ವಿಯಾಗಿ ತನ್ನ ಕಾರ್ಯವನ್ನು ನಿರ್ವಹಿಸಬಲ್ಲದು.

ಪರಾಮರ್ಶನ

೧. K.R.Sharma, 'Research Methodology', National Publishing house, Jaipur and New Delhi, ೨೦೦೨.

೨. ಎಂ.ಚಿದಾನಂದಮೂರ್ತಿ, 'ಸಂಶೋಧನ', ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿ.ವಿ., ೧೯೬೭.

೩. ಎಂ.ಎಂ.ಕಲಬುರ್ಗಿ, 'ಕನ್ನಡ ಸಂಶೋಧನ ಶಾಸ್ತ್ರ', ಚೇತನ ಬುಕ್ ಹೌಸ್, ಮೈಸೂರು, ೧೯೯೨.

೪. ಬಿ.ವಿ.ಶಿರೂರ, 'ಸಂಶೋಧನ ಸ್ವರೂಪ', ಅನ್ನಪೂರ್ಣ ಪ್ರಕಾಶನ, ಹುಬ್ಬಳ್ಳಿ, ೧೯೯೨.

೫. ಅಮರೇಶ ನುಗಡೋಣಿ, 'ಕನ್ನಡ ಸಂಶೋಧನೆಯ ವೈಧಾನಿಕತೆಗಳು', ಪ್ರಸಾರಾಂಗ, ಕನ್ನಡ ವಿ.ವಿ., ಹಂಪಿ, ೨೦೦೮.

೬. ಪ್ರ.ವಿ.ಕುಲಕರ್ಣಿ, ಹರಿಕೃಷ್ಣಭರಣ್ಯ, ಬಿ.ಸದಾಶಿವ, 'ಸಂಶೋಧನ ವಿಧಾನ', ಪ್ರಭಸ ಬಿಡುಗಡೆ, ಮಧುರೈ, ೧೯೮೯.

೭. ಎಚ್.ಎಂ.ಮರುಳಸಿದ್ದಯ್ಯ, 'ಸಂಶೋಧನೆಯ ಎರಡು ಹೆಜ್ಜೆಗಳು', ಪ್ರಸಾರಾಂಗ, ಕನ್ನಡ ವಿ.ವಿ., ಹಂಪಿ, ೧೯೯೩.

೮. ಸಂಗಮೇಶ ಸವದತ್ತಿಮಠ, 'ಸಾಹಿತ್ಯ ಸಂಶೋಧನ ಮಾರ್ಗ', ರೂಪರಶ್ಮಿ ಪ್ರಕಾಶನ, ಕಲಬುರ್ಗಿ, ೧೯೯೫.

೯. ಮಹಾಬಲೇಶ್ವರರಾವ್, 'ಸಂಶೋಧನಮಾರ್ಗ', ನವಕರ್ನಾಟಕ ಪ್ರಕಾಶನ, ಬೆಂಗಳೂರು, ೧೯೯೬.

■

೭

ಸಮಾಜ ಶಾಸ್ತ್ರಗಳು ಮತ್ತು ಸಂಶೋಧನೆ

ಡಾ. ಎಂ. ಚಂದ್ರ ಪೂಜಾರಿ

ಸಮಾಜ ಶಾಸ್ತ್ರಗಳಲ್ಲಿ ಅಂತರ್ಗತವಾಗಿರುವ ವಿಜ್ಞಾನದ ಗುಣಗಳು, ಸಮಾಜ ಶಾಸ್ತ್ರಗಳ ಹುಟ್ಟಿನ ಪ್ರಶ್ನೆ, ಸಂಶೋಧನೆ ಮತ್ತು ಸಮಾಜ ಶಾಸ್ತ್ರಗಳ ಸಂಬಂಧ ಮುಂತಾದವುಗಳ ಬಗೆಗಿನ ಸ್ಥಾಪಿತ ನಿಲುವುಗಳನ್ನು ಸಮಸ್ಯೀಕರಿಸಲು ಈ ಲೇಖನದಲ್ಲಿ ಪ್ರಯತ್ನಿಸಿದ್ದೇನೆ. ಸಮಾಜ ಶಾಸ್ತ್ರಕ್ಕೆ ತನ್ನದೇ ಆದ ಅಧ್ಯಯನ ವಿಧಾನ ಇರಲಿಲ್ಲ. ಅದು ವಿಜ್ಞಾನದ ವಿಧಾನವನ್ನು ಅನುಸರಿಸುತ್ತಾ ಬೆಳೆದ ಶಾಸ್ತ್ರ ಎನ್ನುವುದು ಸಾಮಾನ್ಯವಾಗಿ ಪ್ರಚಾರದಲ್ಲಿರುವ ಸಂಗತಿ. ಸಮಾಜ ವಿಜ್ಞಾನದ ಬಹುತೇಕ ಥಿಯರಿಗಳು ಪಶ್ಚಿಮದ ಸಮಾಜಗಳ ಅನುಭವಗಳನ್ನು ಆಧರಿಸಿ ರೂಪುಗೊಂಡಿವೆ. ಅಷ್ಟು ಮಾತ್ರವಲ್ಲ, ಸಮಾಜವಿಜ್ಞಾನದಲ್ಲಿ ಬಳಕೆಯಾಗುವ ಹಲವಾರು ಪಾರಿಭಾಷಿಕ ಪದಗಳು ಪಶ್ಚಿಮದ ಸಾಮಾಜಿಕ ಬೆಳವಣಿಗೆಯನ್ನು ಆಧರಿಸಿವೆ. ನಮ್ಮ ಸಮಾಜವನ್ನು ಅರ್ಥಮಾಡಿಕೊಳ್ಳಲು ಪಶ್ಚಿಮದಲ್ಲಿ ಹುಟ್ಟಿ ಬೆಳೆದ ಥಿಯರಿಗಳು ಮತ್ತು ಪಾರಿಭಾಷಿಕ ಪದಗಳು ಶಕ್ತವಾಗಿಲ್ಲ. ಆದರೂ ಈ ಥಿಯರಿಗಳು ವಸಾಹತೋತ್ತರ ನಮ್ಮ ಬದುಕನ್ನು ಆವರಿಸಿಕೊಂಡಿವೆ. ಈ ಸ್ಥಿತಿಯಿಂದ ಬಿಡುಗಡೆ ಪಡೆಯಲು ಮತ್ತು ನಮ್ಮ ಸಮಾಜದ ವಾಸ್ತವತೆಯನ್ನು ಅರ್ಥ ಮಾಡಿಕೊಳ್ಳಲು ನಮ್ಮದೇ ಥಿಯರಿ ಹಾಗೂ ಪಾರಿಭಾಷಿಕ ಪದಗಳ ಅಗತ್ಯವಿದೆ ಎಂದು ಸಮಾಜವಿಜ್ಞಾನದ ಹುಟ್ಟಿಗೆ ಸಂಬಂಧಿಸಿದ ಚರ್ಚೆ ತಿಳಿಸುತ್ತದೆ. ಸಮಾಜ ಶಾಸ್ತ್ರಗಳ ಮೇಲಿನ ಸಮಸ್ಯೆಗಳನ್ನು ಬಹುತೇಕರು ಈಸ್ಟ್ ವರ್ಸಸ್ ವೆಸ್ಟ್ ಸಮಸ್ಯೆಯ ದೃಷ್ಟಿಯಿಂದ ನೋಡಲು ಇಷ್ಟಪಡುತ್ತಾರೆ. ಆದರೆ ಇದು ಸಮಾಜ ಶಾಸ್ತ್ರಗಳ ಹುಟ್ಟಿನ ಪ್ರಶ್ನೆ ಮಾತ್ರವಲ್ಲ ಅಧಿಕಾರದ ಅಸಮಾನ ಹೊಂದುವಿಕೆಯ ಪ್ರಶ್ನೆಯೂ ಆಗಿದೆ.

ಎಲ್ಲ ಸಮಾಜಗಳು ಪಿರಾಮಿಡ್ ರೂಪದಲ್ಲಿ ಜೋಡಿಸಲ್ಪಟ್ಟಿವೆ. ಪಿರಾಮಿಡ್ ಮೇಲಿರುವವರು ಹೆಚ್ಚಿನ ಅಧಿಕಾರ, ಸ್ಥಾನಮಾನ, ಸಂಪನ್ಮೂಲ ಹೊಂದಿ ಮಧ್ಯದಲ್ಲಿರುವವರು ಮೇಲಿನವರಿಗಿಂತ ಕಡಿಮೆ ಅಧಿಕಾರ, ಸ್ಥಾನಮಾನ,

ಸಂಪನ್ಮೂಲ ಹೊಂದಿದ್ದರೆ ಪಿರಾಮಿಡ್ ಬುಡದಲ್ಲಿರುವವರು ಎಲ್ಲವನ್ನು (ಅಧಿಕಾರ, ಸ್ಥಾನಮಾನ, ಸಂಪನ್ಮೂಲ) ಕನಿಷ್ಠ ಪ್ರಮಾಣದಲ್ಲಿ ಹೊಂದಿದ್ದಾರೆ. ಪಿರಾಮಿಡ್‌ನ ವಿವಿಧ ಸ್ತರಗಳಲ್ಲಿರುವವರಿಗೆ ಸಮಾಜ ಬೇರೆ ಬೇರೆ ರೀತಿ ಕಾಣುತ್ತದೆ. ಆದರೆ ಪಿರಾಮಿಡ್ ಮೇಲಿದ್ದವರು ತಮಗೆ ಕಾಣುವುದು ಮಾತ್ರ ಸತ್ಯ ಕೆಳಗಿದ್ದವರಿಗೆ ಕಾಣುವುದು ಅರೆ ಸತ್ಯ ಎಂದು ವಾದಿಸುತ್ತಾರೆ. ಅಷ್ಟು ಮಾತ್ರವಲ್ಲ ಮೇಲಿದ್ದವರು ತಮ್ಮ ಸತ್ಯವನ್ನು ಎಲ್ಲರ ಸತ್ಯ ಮಾಡುವಷ್ಟು ಅಧಿಕಾರ, ಸಂಪನ್ಮೂಲ ಕೂಡ ಹೊಂದಿದ್ದಾರೆ. ಇದರಿಂದಾಗಿ ಕೆಳಗಿದ್ದವರು ಕೂಡ ಮೇಲಿನವರ ದೃಷ್ಟಿಯಿಂದಲೇ ಸುತ್ತಲಿನ ಪ್ರಪಂಚವನ್ನು ನೋಡುತ್ತಾರೆ. ಇದರಿಂದ ದಿನನಿತ್ಯದ ಬದುಕಿನಲ್ಲಿ ಎದುರಾಗುವ ಲಿಂಗ ತಾರತಮ್ಯಗಳು, ಜಾತಿ, ಧರ್ಮ ಭೇದಗಳು, ಸಂಪನ್ಮೂಲಗಳ ಅಸಮಾನ ಒಡೆತನಗಳು ಕೆಳಗಿನವರಿಗೆ ಸಮಸ್ಯೆಯಾಗುವುದಿಲ್ಲ; ಸಹಜವಾಗುತ್ತವೆ. ಹೀಗೆ ಸಂಶೋಧನೆ ಹಾಗು ಸಮಾಜ ಶಾಸ್ತ್ರಗಳು ಯಥಾಸ್ಥಿತಿಯನ್ನು ಅಥವಾ ಅಸಮಾನತೆಗಳನ್ನು ಮುಂದುವರಿಸಲು ನೆರವಾಗುತ್ತವೆ. ಈ ಸ್ಥಿತಿಯಿಂದ ಬಿಡುಗಡೆ ಬೇಕಾದರೆ ಸಂಶೋಧನೆ ಹಾಗು ಸಮಾಜ ಶಾಸ್ತ್ರಗಳನ್ನು ವಿಭಿನ್ನವಾಗಿ ಕಟ್ಟಿಕೊಳ್ಳುವ ಅವಶ್ಯಕತೆಯಿದೆಯೆಂದು ವಾದಿಸಿದ್ದೇನೆ. ಲೇಖನದ ವಿವರಗಳನ್ನು ಎರಡು ಭಾಗಗಳಲ್ಲಿ ನೀಡಿದ್ದೇನೆ. ಸಮಾಜ ವಿಜ್ಞಾನಗಳಲ್ಲಿ ಅಂತರ್ಗತಗೊಂಡಿರುವ ವಿಜ್ಞಾನದ ಗುಣಗಳನ್ನು ಮತ್ತು ಸಮಾಜ ಶಾಸ್ತ್ರಗಳ ಹುಟ್ಟಿನ ಪ್ರಶ್ನೆಯನ್ನು ಲೇಖನದ ಮೊದಲ ಭಾಗದಲ್ಲಿ ವಿವರಿಸಿದ್ದೇನೆ. ಎರಡನೇ ಭಾಗದಲ್ಲಿ ಅಧಿಕಾರ ಮತ್ತು ಜ್ಞಾನದ ನಡುವಿನ ಸಂಬಂಧವನ್ನು ವಿವರಿಸಿದ್ದೇನೆ.

ಭಾಗ–೧

ಸಮಾಜ ಶಾಸ್ತ್ರಗಳ ಉಗಮ ಮತ್ತು ಪಶ್ಚಿಮ ಯುರೋಪಿನಲ್ಲಿ ನಡೆದ ಜ್ಞಾನೋದಯ ಚಳವಳಿ ನಡುವೆ ಪರೋಕ್ಷ ಸಂಬಂಧ ಇದೆ. ಚರ್ಚ್ ಮತ್ತು ಪ್ರಭುತ್ವದ ನಡುವಿನ ಸಂಘರ್ಷದ ರೂಪದಲ್ಲಿ ಜ್ಞಾನೋದಯ ಚಳವಳಿ ಪ್ರಚಲಿತವಾಗಿದೆ. ವಾಸ್ತವದಲ್ಲಿ ಇದು ಸತ್ಯದ ಹರಿಕಾರರ ಬಿಕ್ಕಟ್ಟು ಕೂಡ ಆಗಿತ್ತು. ಈ ಚಳವಳಿ ಮುನ್ನ ಸತ್ಯದ ಹುಟುಕಾಟ ಮತ್ತು ನೈತಿಕ ಪ್ರಶ್ನೆಗಳು ಬೆರೆತ್ತಿದ್ದವು. ಅಂದರೆ ಸತ್ಯದ ಹುಡುಕಾಟ ಮತ್ತು ನೈತಿಕ ಪ್ರಶ್ನೆಗಳನ್ನು ಧಾರ್ಮಿಕ ಸ್ಥಾನದಲ್ಲಿದ್ದವರು ನಿರ್ವಹಿಸುತ್ತಿದ್ದರು. ಧಾರ್ಮಿಕ ಗುರುಗಳು ದೇವರು, ಧರ್ಮ, ಒಳ್ಳೆದು ಕೆಟ್ಟದುಗಳ ಬಗ್ಗೆ ಅಧಿಕಾರಯುತವಾಗಿ ಮಾತಾಡುತ್ತಿದ್ದರು. ಅಷ್ಟು ಮಾತ್ರವಲ್ಲ ಅವರು ಪ್ರಪಂಚ, ಸಮಾಜ, ಕುಟುಂಬ, ಬದುಕು ಇತ್ಯಾದಿಗಳ ಬಗ್ಗೆ ವಿವರಣೆ ನೀಡುತ್ತಿದ್ದರು. ಜ್ಞಾನೋದಯ ಚಳವಳಿ ನಂತರ ಸತ್ಯವನ್ನು ಹುಡುಕುವ ಮತ್ತು ವಿವರಿಸುವ ಕೆಲಸದಿಂದ ಧಾರ್ಮಿಕ ಸ್ಥಾನದಲ್ಲಿದ್ದವರು ಹಿಂದಕ್ಕೆ ಸರಿಯಬೇಕಾಯಿತು. ಪ್ರತಿಯೊಬ್ಬರೂ ತಮ್ಮ ಸ್ವಂತ ಪ್ರಯತ್ನದಿಂದ ಸತ್ಯ ಏನು ಮತ್ತು ತಮಗೆ ಏನು ಒಳ್ಳೆಯದು ಎನ್ನುವುದರ ಬಗ್ಗೆ ತೀರ್ಮಾನ ತಳೆಯಲು ಶಕ್ತ ಎನ್ನುವ ಗೃಹೀತ ಬಲಗೊಂಡಿತು. ಧಾರ್ಮಿಕ ಸ್ಥಾನದಲ್ಲಿದ್ದವರು ತೆರವುಗೊಳಿಸಿದ ಜಾಗವನ್ನು ತುಂಬಲು ತತ್ವಜ್ಞಾನಿಗಳು ಸಿದ್ಧರಿದ್ದರು. ಸತ್ಯ ಅಥವಾ ಒಳ್ಳೆಯತನವನ್ನು ವ್ಯಾಖ್ಯಾನಿಸುವ ಜವಾಬ್ದಾರಿಯನ್ನು ತತ್ವಜ್ಞಾನಿಗಳಿಗೆ ಬಿಡಬೇಕು ಎಂದು ಇಮಾನ್ಯುಲ್ ಕಾಂಟ್ ವಾದಿಸಿದ. ಆದರೆ ಆ ಎರಡೂ ಕೆಲಸಗಳನ್ನು (ಸತ್ಯ ಮತ್ತು ಒಳ್ಳೆಯತನ) ತತ್ವಜ್ಞಾನಿ ಒಬ್ಬನೇ ಮಾಡುವುದು ಕಷ್ಟ. ಸತ್ಯವನ್ನು ಹುಡುಕಿದಷ್ಟು ಸುಲಭದಲ್ಲಿ ನೈತಿಕತೆಯನ್ನು ವ್ಯಾಖ್ಯಾನಿಸಲು ಸಾಧ್ಯವಿಲ್ಲ ಎಂದು ಕಾಂಟ್ ಅಭಿಪ್ರಾಯ ಪಟ್ಟ. ಆದುದರಿಂದ ಸತ್ಯವನ್ನು ಹುಡುಕುವ ಕೆಲಸಕ್ಕೆ ಮಾತ್ರ ತತ್ವಜ್ಞಾನಿಗಳು ತಮ್ಮ ಜವಾಬ್ದಾರಿಯನ್ನು ಸೀಮಿತಗೊಳಿಸಿದರೆ ಒಳಿತೆಂದು ಕಾಂಟ್ ಅಭಿಪ್ರಾಯ ಪಡುತ್ತಾನೆ.

ವಿಜ್ಞಾನದ ಯಜಮಾನಿಕೆ

ಆದರೆ ಕಾಂಟ್‌ನ ಅಭಿಪ್ರಾಯವನ್ನು ಒಪ್ಪಲು ವಿಜ್ಞಾನಿಗಳು ಸಿದ್ಧರಿರಲಿಲ್ಲ. ಅವರ ಪ್ರಕಾರ ಕೇವಲ ವಿಜ್ಞಾನಿಗಳು ಮಾತ್ರ ಸತ್ಯದ ಹರಿಕಾರರಾಗಲು ಸಾಧ್ಯ. ತತ್ವಜ್ಞಾನಿಗಳು ಏನಿದ್ದರೂ ಮೌಲ್ಯಗಳು, ಮನುಷ್ಯತ್ವ, ನೈತಿಕತೆ ಇತ್ಯಾದಿ ಮಾನವಿಕದ ವಿಚಾರಗಳಿಗೆ ತಮ್ಮ ಜ್ಞಾನವನ್ನು ಸೀಮಿತಗೊಳಿಸಬೇಕು. ಏಕೆಂದರೆ ವಿಜ್ಞಾನಿಗಳ ಪ್ರಕಾರ ತತ್ವಜ್ಞಾನಿಗಳಿಗೂ ಧಾರ್ಮಿಕ ಗುರುಗಳಿಗೂ ವಿಶೇಷ ವ್ಯತ್ಯಾಸವಿಲ್ಲ. ತತ್ವಜ್ಞಾನಿಗಳು ಮಾರುವೇಷದಲ್ಲಿರುವ ಧಾರ್ಮಿಕ ಗುರುಗಳೆಂದು ವಾದಿಸುವವರೂ ಇದ್ದರು. ಅಂದಿನ ಊಳಿಗಮಾನ್ಯ ವ್ಯವಸ್ಥೆಯ ತಳಸ್ತರದ ಜನರು ಈ ಬೆಳವಣಿಗೆಯನ್ನು ಇಷ್ಟಪಟ್ಟರು. ಉಳಿಗಮಾನ್ಯ ವ್ಯವಸ್ಥೆಯ ಶೋಷಣೆ, ಅಸಮಾನತೆ, ಮೇಲು, ಕೀಳುಗಳಿಂದ ಅವರು ಬೇಸತ್ತಿದ್ದರು. ಆ ವ್ಯವಸ್ಥೆಯ ಕಟ್ಟುಪಾಡುಗಳಿಂದ ಅವರಿಗೆ ಬಿಡುಗಡೆ ಬೇಕಿತ್ತು, ಬದಲಿ ವ್ಯವಸ್ಥೆಯ ಕನಸೊಂದು ಬೇಕಾಗಿತ್ತು. ಪ್ರಪಂಚ, ಭೂಮಿ, ನೀರು, ಗಾಳಿ ಇತ್ಯಾದಿಗಳ ಬಗ್ಗೆ ವಿಜ್ಞಾನಿಗಳು ನೀಡುವ ವಿವರಣೆಗಳು ಧಾರ್ಮಿಕ ಸ್ಥಾನಗಳು ನೀಡುವ ವಿವರಣೆಗಳಿಗಿಂತ ಭಿನ್ನವಾಗಿದ್ದವು. ಮಾತ್ರವಲ್ಲ, ಹೆಚ್ಚು ನಿಖರ ಮತ್ತು ವಾಸ್ತವಕ್ಕೆ ಹತ್ತಿರವಾಗಿದ್ದವು. ವಿಜ್ಞಾನ ಉತ್ಪಾದಿಸಿದ ಜ್ಞಾನವನ್ನು ಬಳಸಿಕೊಂಡು ಹಲವಾರು ತಂತ್ರಜ್ಞಾನಗಳ ಆವಿಷ್ಕಾರವಾಯಿತು. ತಂತ್ರಜ್ಞಾನಗಳು ಅಂದಿನ ಸಾಮಾಜಿಕ ವ್ಯವಸ್ಥೆಯ ಮೇಲೆ ಗಂಭೀರ ಪರಿಣಾಮ ಬೀರಿದವು. ಈ ಎಲ್ಲ ಬೆಳವಣಿಗೆಗಳು ಸತ್ಯದ ಹುಡುಕಾಟದಲ್ಲಿ ಧಾರ್ಮಿಕ ಗುರುಗಳ/ತತ್ವಜ್ಞಾನಿಗಳಿಗಿದ್ದ ಸ್ಥಾನವನ್ನು ಪಲ್ಲಟಗೊಳಿಸಿ ವಿಜ್ಞಾನಿಗಳ ಸ್ಥಾನವನ್ನು ಭದ್ರಗೊಳಿಸಿದವು. ಹೀಗೆ ಸತ್ಯದ ಹುಡುಕಾಟವನ್ನು ವಿಜ್ಞಾನಿಗಳು ಮಾತ್ರ ಮಾಡಲು ಸಾಧ್ಯ ಎನ್ನುವ ನಿಲುವನ್ನು ಅಂದಿನ ಸಮಾಜ ಕೂಡ ಒಪ್ಪಿಕೊಂಡಿತು.

ಹೆಚ್ಚು ಕಡಿಮೆ ಇದೇ ಸಂದರ್ಭದಲ್ಲಿ ಸಮಾಜವಿಜ್ಞಾನ ರೂಪು ಪಡೆಯುತ್ತಿತ್ತು. ಸತ್ಯದ ಹುಡುಕಾಟ ಮತ್ತು ನೈತಿಕತೆ/ಮೌಲ್ಯಗಳ ಪ್ರಶ್ನೆಗಳನ್ನು ಬೆಸೆದು ಹೊಸತೊಂದು ಬಗೆಯ ಜ್ಞಾನಶಾಖೆಯನ್ನು ತೆರೆಯುವ ಎಲ್ಲ ಸಾಧ್ಯತೆಗಳು ಸಮಾಜವಿಜ್ಞಾನಕ್ಕೆ ಇತ್ತು. ಆದರೆ ಸಮಾಜವಿಜ್ಞಾನ ಅಂತಹ ಕಷ್ಟದ ದಾರಿ ತುಳಿಯಲಿಲ್ಲ. ಅದರ ಬದಲು ಅದು ಆಗತಾನೇ ಪ್ರಸಿದ್ಧಿ ಪಡೆಯುತ್ತಿದ್ದ ವಿಜ್ಞಾನ ಹಾದಿ ತುಳಿಯಿತು. ಇದಕ್ಕೆ ಉತ್ತಮ ಉದಾಹರಣೆ ಎಂದರೆ ಚರಿತ್ರೆಯ ವ್ಯಾಖ್ಯಾನ. ಭೂತಕಾಲದ ಬಗ್ಗೆ ಸರಿಯಾದ ಮತ್ತು ತಪ್ಪು ಹೇಳಿಕೆಗಳಿವೆ. ಅವುಗಳನ್ನೆಲ್ಲ ಚರಿತ್ರೆ ಎನ್ನಲು ಸಾಧ್ಯವಿಲ್ಲ. ಹಿಂದೆ ಏನು ನಡೆದಿದೆಯೋ ಅದನ್ನು ಯಥಾ ರೀತಿಯಲ್ಲಿ ದಾಖಲಿಸಿದರೆ ಮಾತ್ರ ಚರಿತ್ರೆ ಲಭ್ಯವಾಗುವುದು ಮತ್ತು ಆ ಕೆಲಸವನ್ನು ಚರಿತ್ರಕಾರರು ಮಾಡಬೇಕು. ಚರಿತ್ರೆಕಾರರು ತಮ್ಮ ರಾಗದ್ವೇಷಗಳನ್ನು ಭೂತಕಾಲದ ಮಾಹಿತಿಯಲ್ಲಿ ಅಥವಾ ವಿಶ್ಲೇಷಣೆಯಲ್ಲಿ ತುಂಬಲು ಪ್ರಯತ್ನಿಸಬಾರದೆನ್ನುವ ನಿಲುವುಗಳು ಬಲಗೊಂಡವು. ಹೀಗೆ ವಿಜ್ಞಾನದ ವಿಧಾನ ಮುಂಚೂಣಿಗೆ ತಂದ ಆಬ್ಜೆಕ್ಟಿವಿಟಿ, ವ್ಯಾಲ್ಯೂ ನ್ಯೂಟ್ರಾಲಿಟಿ, ಸಬ್ಜೆಕ್ಟ್ ಆಬ್ಜೆಕ್ಟ್ ಡೈಕಾಟಮಿ ಇತ್ಯಾದಿಗಳ ಚೌಕಟ್ಟಿನೊಳಗೆ ಚರಿತ್ರಕಾರರು ತಮ್ಮೆಲ್ಲ ಸೃಜನಶೀಲತೆಯನ್ನು ಕಟ್ಟಿಡಬೇಕಾಯಿತು. ತಾವು ಸಂಗ್ರಹಿಸಿದ ಮಾಹಿತಿಯ ಆಧಾರದಲ್ಲಿ ಸಣ್ಣಪುಟ್ಟ ತಾತ್ವಿಕ ನಿಲುವುಗಳನ್ನು ತಾಳುವುದು ಕೂಡ ಚರಿತ್ರಕಾರರಿಗೆ ಸಾಧ್ಯವಾಗದಾಯಿತು.

ಅರ್ಥ, ಸಮಾಜ ಮತ್ತು ರಾಜಕೀಯ ಶಾಸ್ತ್ರಗಳು ಚರಿತ್ರೆಯ ನಂತರ ಬೆಳೆದ ಸಮಾಜ ವಿಜ್ಞಾನಗಳು. ಅವುಗಳು ರೂಪುಗೊಳ್ಳುವ ಸಂದರ್ಭದಲ್ಲಿ ಜ್ಞಾನದ ಉತ್ಪಾದನೆಯಲ್ಲಿ ವಿಜ್ಞಾನದ ಏಕಸ್ವಾಮ್ಯತೆ ಗಟ್ಟಿಯಾಗಿತ್ತು. ಜ್ಞಾನದ ಉತ್ಪಾದನೆಯ ಏಕಸ್ವಾಮ್ಯತೆ ಆ ಕ್ಷೇತ್ರಕ್ಕೆ

ಸಮಾಜ ಕೊಡುವ ಆರ್ಥಿಕ, ಸಾಮಾಜಿಕ ಹಾಗೂ ರಾಜಕೀಯ ಸ್ಥಾನಮಾನಗಳನ್ನು ಪ್ರಭಾವಿಸುತ್ತದೆ. ವಿಜ್ಞಾನ ಯಜಮಾನಿಕೆಗೆ ಬಂದಿದೆ ಎಂದರೆ ಅದು ಸಹಜವಾಗಿಯೇ ಮೇಲಿನ ಎಲ್ಲ ಸ್ತರಗಳಲ್ಲೂ ಮಾನ್ಯತೆಯನ್ನು ಪಡೆಯುತ್ತದೆ ಎಂದರ್ಥ. ವಿಜ್ಞಾನಕ್ಕೆ ಎಷ್ಟು ಹತ್ತಿರ ಅಥವಾ ದೂರ ಎನ್ನುವುದರ ಮೇಲೆ ಒಂದು ಅಧ್ಯಯನ ಶಿಸ್ತಿನ ಸ್ಥಾನಮಾನ ನಿರ್ಧಾರವಾಗುತ್ತಿತ್ತು. ಆ ಎಲ್ಲ ಕಾರಣಗಳಿಗಾಗಿಯೇ ವಿಜ್ಞಾನದ ವಿಧಾನವನ್ನು ಅನುಸರಿಸುವುದು ಸಮಾಜವಿಜ್ಞಾನಗಳಿಗೆ ಅನಿವಾರ್ಯವಾಯಿತು. ವಿಜ್ಞಾನದ ವಿಧಾನವನ್ನು ಅನುಸರಿಸುವುದರಿಂದ ಸಿಗುವ ಸ್ಥಾನಮಾನ ವಿಜ್ಞಾನದ ಯಜಮಾನಿಕೆಯನ್ನು ಸಹಿಸಲು ನೆರವಾಯಿತು. ಹೀಗೆ ವಿಜ್ಞಾನದ ಯಜಮಾನಿಕೆ ಪ್ರಶ್ನಾತೀತವಾಗಿದ್ದ ಸಂದರ್ಭದಲ್ಲಿ ಸಮಾಜ ಸಂಶೋಧನೆ ಸಂಪೂರ್ಣವಾಗಿ ವಿಜ್ಞಾನದ ವಿಧಾನವನ್ನು ಅನುಸರಿಸುತ್ತಿತ್ತು.

ಆ ಸಂದರ್ಭಗಳಲ್ಲಿ ಸಮಾಜವಿಜ್ಞಾನ ಬರಹಗಳು ಸೈಂಟಿಫಿಕ್ ಬರಹಗಳೆಂದು ಹೇಳಿ ಕೊಂಡರೆ ಮಾತ್ರ ಅವು ಸತ್ಯಕ್ಕೆ ಹತ್ತಿರ ಎನ್ನುವ ನಂಬಿಕೆ ಇತ್ತು. ಈ ಎಲ್ಲ ಸಂಗತಿಗಳು ಸಮಾಜವಿಜ್ಞಾನದ ಅಧ್ಯಯನ ಸಮಸ್ಯೆ, ವ್ಯಾಪ್ತಿ, ಫಲಿತ ಇತ್ಯಾದಿಗಳನ್ನು ಗಾಢವಾಗಿ ಪ್ರಭಾವಿಸಿವೆ. ವಿಜ್ಞಾನದ ಬಹುದೊಡ್ಡ ಸಾಧನೆ ಪ್ರಕೃತಿ ನಿಯಮಗಳನ್ನು ಅರ್ಥ ಮಾಡಿ ಕೊಳ್ಳುವುದು ಮತ್ತು ಅವುಗಳನ್ನು ಬಳಸಿಕೊಂಡು ತಂತ್ರಜ್ಞಾನಗಳನ್ನು ಸೃಷ್ಟಿಸುವುದು. ವಿಜ್ಞಾನದ ವಿಧಾನದಲ್ಲಿ ಕಂಡುಕೊಂಡ ಈ ಸತ್ಯ (ಪ್ರಕೃತಿಗೆ ಸಂಬಂಧಿಸಿದ ಸತ್ಯ) ಪ್ರಯೋಗಕ್ಕಾಗಿ ಆಯ್ಕೆ ಮಾಡಿಕೊಂಡ ಮಾದರಿಗಳಿಗೆ ಮಾತ್ರ ಅನ್ವಯವಾಗುವುದಷ್ಟೇ ಅಲ್ಲ; ಇಡೀ ವಿಶ್ವಕ್ಕೆ ಅನ್ವಯವಾಗುತ್ತದೆ. ಇಡೀ ವಿಶ್ವಕ್ಕೆ ಅನ್ವಯವಾಗುವ ಪ್ರಕೃತಿ ನಿಯಮವನ್ನು ಕಂಡುಕೊಳ್ಳುವುದು ವಿಜ್ಞಾನಿಗಳ ಕಾಯಕವಾದರೆ ವಿಶ್ವದ ಎಲ್ಲ ಸಮಾಜಗಳಿಗೂ ಅನ್ವಯವಾಗುವ ಅಥವಾ ಸಮಾಜಗಳನ್ನು ಅರ್ಥ ಮಾಡಿಕೊಳ್ಳಲು ಸಹಕರಿಸುವ ಯೂನಿವರ್ಸಲ್ ನಿಯಮಗಳನ್ನು ಕಂಡುಕೊಳ್ಳುವುದು ಸಮಾಜವಿಜ್ಞಾನಿಗಳ ಕಾಯಕವೆಂದು ತಿಳಿಯಲಾಯಿತು. ಸಮಾಜಶಾಸ್ತ್ರಗಳು ತಮ್ಮ ಮೇಲೆ ಹೇರಿಕೊಂಡ ಯೂನಿವರ್ಸಲ್ ನಿಯಮಗಳನ್ನು ಸಂಶೋಧಿಸುವ ಜವಾಬ್ದಾರಿ ಅವುಗಳ (ಸಮಾಜ ಶಾಸ್ತ್ರಗಳ) ಅಧ್ಯಯನ ವಸ್ತುಗಳನ್ನು ಹಾಗೂ ವಿಧಾನಗಳನ್ನು ಕೂಡ ಪ್ರಭಾವಿಸಿದವು.

ಅವು ವಿಸ್ತಾರವಾದ ಕ್ಷೇತ್ರಗಳನ್ನು ತಮ್ಮ ಅಧ್ಯಯನ ಕ್ಷೇತ್ರಗಳನ್ನಾಗಿ ಮಾಡಿಕೊಂಡವು. ಉದಾಹರಣೆಗೆ ಜಾಗತಿಕ ಚರಿತ್ರೆ ಅಥವಾ ಜಾಗತಿಕ ಅರ್ಥ ವ್ಯವಸ್ಥೆ ಅಥವಾ ಜಾಗತಿಕ ರಾಜಕೀಯ ವ್ಯವಸ್ಥೆ ಇತ್ಯಾದಿಗಳು ಅವುಗಳ ಅಧ್ಯಯನ ವಿಷಯಗಳಾದವು. ಇಡೀ ಪ್ರಪಂಚದ ಎಲ್ಲ ವ್ಯವಹಾರಗಳನ್ನು ವಿವರಿಸುವ ಕಾಯಕವನ್ನು ಸಮಾಜವಿಜ್ಞಾನಗಳು ಹಮ್ಮಿಕೊಂಡವು. ಈ ಕಾಯಕಕ್ಕೆ ವಿಜ್ಞಾನದ ವೈಧಾನಿಕ ಅಂಶಗಳನ್ನು–ಅಂಕಿ ಅಂಶಗಳು, ಹೈಪೋಥಿಸೀಸ್‌ಗಳು, ಪರೀಕ್ಷೆಗಳು ಇತ್ಯಾದಿಗಳನ್ನು–ಸಮಾಜ ವಿಜ್ಞಾನಗಳು ಅನುಸರಿಸ–ಲಾರಂಭಿಸಿದವು. ಹದಿನೆಂಟನೇ ಶತಮಾನದ ಕೊನೆಯವರೆಗೆ ಅಥವಾ ಹತ್ತೊಂಬತ್ತನೇ ಶತಮಾನದ ಆರಂಭದವರೆಗೆ ನಾಗರಿಕ ಸಮಾಜದ ಅರ್ಥ, ಚರಿತ್ರೆ, ಸಮಾಜ ಮತ್ತು ರಾಜಕೀಯವನ್ನು ನಾಗರಿಕ ಸಮಾಜಕ್ಕೆ ಸೇರಿದವರೇ ಕಟ್ಟಿಕೊಡುವ ಕೆಲಸವನ್ನು ಈ ನಾಲ್ಕು ಸಮಾಜವಿಜ್ಞಾನಗಳು (ಚರಿತ್ರೆ, ಅರ್ಥ, ಸಮಾಜ, ರಾಜಕೀಯ ಶಾಸ್ತ್ರಗಳು) ಮಾಡಿದವು.

ಮಾನವ ಶಾಸ್ತ್ರ

ಇದೇ ಸಂದರ್ಭದಲ್ಲಿ ಪಶ್ಚಿಮದ ಬಹುತೇಕ ರಾಷ್ಟ್ರಗಳು ಆಫ್ರಿಕಾ, ಏಷ್ಯಾ ಮುಂತಾದ ಖಂಡಗಳಲ್ಲಿ ವಸಾಹತುಗಳನ್ನು ಹೊಂದಿದ್ದವು. ವಸಾಹತುಗಳಲ್ಲಿನ ಅನಾಗರಿಕ ಜನರ

ಸಮಾಜವನ್ನು ಅಧ್ಯಯನ ಮಾಡಲು ಮಾನವಶಾಸ್ತ್ರ ಎನ್ನುವ ಪ್ರತ್ಯೇಕ ಶಾಸ್ತ್ರವನ್ನು ಹುಟ್ಟುಹಾಕಲಾಯಿತು. ಇದನ್ನೇ ಮತ್ತೊಂದು ರೀತಿಯಲ್ಲಿ ಹೇಳುವುದಾದರೆ ಮಾನವಶಾಸ್ತ್ರ ಪಶ್ಚಿಮದ ಸಾಮ್ರಾಜ್ಯಶಾಹಿಯ ಒಂದು ಕೂಸು. ಇದರ ಬೇರುಗಳು ಯುರೋಪಿನ ಎನ್‌ಲೈಟನ್‌ಮೆಂಟ್ ಚಳವಳಿಯ ಫಲವಾದ ಉದಾರ ಮಾನವತಾವಾದಿ ಚಿಂತನೆಗಳಲ್ಲಿವೆ. ಮಾನವಶಾಸ್ತ್ರವು ಒಂದು ಆಧುನಿಕ ಸಮಾಜ ವಿಜ್ಞಾನವಾಗಿ ಹಾಗೂ ವಿಶ್ವವಿದ್ಯಾಲಯಗಳ ಶೈಕ್ಷಣಿಕ ಶಿಸ್ತಾಗಿ ೧೯ನೇ ಶತಮಾನದ ಕೊನೆಯಲ್ಲಿ ಬೆಳೆಯಿತು. ಹಿಂದೆ ತಿಳಿಸಿದಂತೆ ಇದು ಪಶ್ಚಿಮದ ದೇಶಗಳು ಬಂಡವಾಳಪೂರ್ವ (ಸಾಂಪ್ರದಾಯಿಕ) ಸಮಾಜಗಳನ್ನು ತಮ್ಮ ಅಧೀನಕ್ಕೆ ತೆಗೆದುಕೊಳ್ಳುತ್ತಿದ್ದ ಕಾಲಘಟ್ಟವಾಗಿತ್ತು. ಹೀಗಾಗಿ ಮಾನವಶಾಸ್ತ್ರದ ಬಹುತೇಕ ಕ್ಷೇತ್ರಕಾರ್ಯಗಳು (ಸಾಮ್ರಾಜ್ಯಶಾಹಿ ದೇಶಗಳಿಗೆ ಸೇರಿದ ವಿದ್ವಾಂಸರಿಂದ) ವಸಾಹತುಗಳಲ್ಲಿಯೇ ನಡೆದವು. ವಸಾಹತುಗಳ ಚಿಂತಾಜನಕ ಸ್ಥಿತಿಗತಿಗಳು ಆ ವಿದ್ವಾಂಸರನ್ನು ಕಾಡಿವೆ. ಅಷ್ಟು ಮಾತ್ರವಲ್ಲ, ಬಹುತೇಕ ಮಾನವಶಾಸ್ತ್ರಜ್ಞರು ಅನಾಗರಿಕ ಸಮಾಜಗಳನ್ನು ನಾಗರಿಕಗೊಳಿಸುವ ಉದಾತ್ತ ಧ್ಯೇಯದೊಂದಿಗೆ ಕೆಲಸ ಮಾಡಿದರು. ಆದರೆ ಆ ವಿದ್ವಾಂಸರು ಸಾಮ್ರಾಜ್ಯಶಾಹಿ ದೇಶಗಳು ಕೊಡಮಾಡಿದ ಅಧ್ಯಯನ ಚೌಕಟ್ಟುಗಳನ್ನು ಪ್ರಶ್ನಿಸುವ ಗೋಜಿಗೆ ಹೋಗಲೇ ಇಲ್ಲ.

ಎರಡನೇ ಮಹಾಯುದ್ಧದ ನಂತರ ಒಂದು ಹೊಸ ಸ್ಥಿತಿ ನಿರ್ಮಾಣವಾಯಿತು. ವಸಾಹತುಗಳೆಲ್ಲ ಒಂದೊಂದಾಗಿ ಸ್ವತಂತ್ರಗೊಂಡವು. ನಂತರದ ದಿನಗಳಲ್ಲಿ ಮಾನವಶಾಸ್ತ್ರಜ್ಞರು ತಮ್ಮ ಹಿಂದಿನ ಬಿಳಿಯ ಉದ್ಧಾರಕರ ಪಾತ್ರವನ್ನು ಕಳಚಬೇಕಾಯಿತು. ಆದರೆ ಅವರಿಗೆ ಹೊಸತೊಂದು ಪಾತ್ರವು ಸಿದ್ಧವಾಗಿತ್ತು. ಹೊಸತಾಗಿ ಸ್ವತಂತ್ರಗೊಂಡ ದೇಶಗಳು ಅಭಿವೃದ್ಧಿಯ ಹೆಸರಿನಲ್ಲಿ ತಮ್ಮನ್ನಾಳಿದ ಶ್ರೀಮಂತ ರಾಷ್ಟ್ರಗಳ ಪಡಿಯಚ್ಚಾಗಲು ಪ್ರಯತ್ನಿಸುತ್ತಿದ್ದವು. ಪಶ್ಚಿಮದ ತಂತ್ರಜ್ಞಾನದ ಆಧುನಿಕತೆಯನ್ನು ತಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿ ಅಳವಡಿಸಿಕೊಳ್ಳುವ ಮೂಲಕ ಪರಿವರ್ತನೆಗೆ ಪ್ರಯತ್ನಿಸುತ್ತಿದ್ದವು. ಇವರ ಪ್ರಯತ್ನದ ಹಿಂದೆ ಸ್ಟ್ರಕ್ಚರಲ್ ಫಂಕ್ಷನಲಿಸಂನ ಪ್ರಭಾವ ಇತ್ತು. ಪಶ್ಚಿಮದ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವ ಮೂಲಕ ಸಾಮಾಜಿಕ ಪರಿವರ್ತನೆ ಸಾಧ್ಯ ಎನ್ನುವುದು ಸ್ಟ್ರಕ್ಚರಲ್ ಫಂಕ್ಷನಲಿಸಂನ ಒಂದು ಮುಖ್ಯ ಗ್ರಹಿಕೆಯೇ ಆಗಿತ್ತು. ಅಂದರೆ ಪಶ್ಚಿಮದ ವಿಜ್ಞಾನ ತಂತ್ರಜ್ಞಾನಗಳನ್ನು ತಮ್ಮ ಉತ್ಪಾದನಾ ವ್ಯವಸ್ಥೆಯಲ್ಲಿ ಅಳವಡಿಸಿಕೊಂಡರೆ ಸಮಾಜ, ರಾಜಕೀಯ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಲ್ಲೂ ಪರಿವರ್ತನೆ ಸಾಧ್ಯ ಎನ್ನುವ ನಿಲುವು ಈ ವಿಧಾನದ ಕೊಡುಗೆ. ಹೀಗೆ ಹಿಂದುಳಿದ ದೇಶಗಳು ತಮ್ಮ ಪರಿವರ್ತನೆಗಾಗಿ ಶ್ರೀಮಂತ ರಾಷ್ಟ್ರಗಳ ಮಾದರಿಗಳನ್ನು ಅನುಸರಿಸಲು ಆರಂಭಿಸಿದವು. ಪರಿಣಾಮವಾಗಿ ಈ ಪರಿವರ್ತನೆಯನ್ನು ಅಧ್ಯಯನ ಮಾಡುವ ಹೊಸತೊಂದು ಕಾಯಕ ಮಾನವಶಾಸ್ತ್ರಜ್ಞರಿಗೆ ದೊರಕಿತು. ಈ ಬದಲಾದ ಪರಿಸರದಲ್ಲಿ ಸಾಂಸ್ಕೃತಿಕ ಸಂಪರ್ಕ, ಸಾಮಾಜಿಕ ಪರಿವರ್ತನೆ, ಆಧುನೀಕರಣ, ನಗರೀಕರಣ, ಪಾಶ್ಚಿಮಾತ್ಯೀಕರಣ ಇತ್ಯಾದಿ ಪರಿಕಲ್ಪನೆಗಳು ಸಮಾಜಶಾಸ್ತ್ರದಲ್ಲಿ ರಾರಾಜಿಸತೊಡಗಿದವು.

ಇದೇ ಸಂದರ್ಭದಲ್ಲಿ ಚೈನಾ, ಭಾರತ, ಅರಬ್ ಇತ್ಯಾದಿ ನಾಗರಿಕತೆಗಳು ವಿದ್ವಾಂಸರಿಗೆ ದೊಡ್ಡ ಕಗ್ಗಂಟಾದ್ದವು. ಅವುಗಳಲ್ಲಿನ ಜನಜೀವನ ಅತ್ತ ಅನಾಗರಿಕವೂ ಆಗಿರಲಿಲ್ಲ ಇತ್ತ ಪಶ್ಚಿಮದ ನಾಗರಿಕತೆಗಳ ಜತೆಗೆ ಹೋಲಿಕೆಯೂ ಇರಲಿಲ್ಲ. ಇವುಗಳನ್ನು ಯಾವ ಚೌಕಟ್ಟಿನಲ್ಲಿಟ್ಟು ನೋಡಬೇಕೆನ್ನುವ ಗೊಂದಲ ವಿದ್ವಾಂಸರನ್ನು ಕಾಡಿದೆ. ಇವುಗಳನ್ನು ಪುರಾತನ ನಾಗರಿಕತೆಗಳೆಂದು ವರ್ಗೀಕರಿಸಲಾಯಿತು. ಇವುಗಳ ಅಧ್ಯಯನಕ್ಕೆ

ಓರಿಯಂಟಲ್ ಸ್ಟಡಿ ಎನ್ನುವ ಮತ್ತೊಂದು ಶಾಸ್ತ್ರ ಜನ್ಮ ತಾಳಿತು. ಈ ಶಾಸ್ತ್ರಗಳು ಪಶ್ಚಿಮದ ಸಮಾಜಕ್ಕಿಂತ ಭಿನ್ನವಾಗಿದ್ದ ಸಮಾಜಗಳನ್ನು ಅಧ್ಯಯನ ಮಾಡುವ ಜವಾಬ್ದಾರಿ ಹೊತ್ತು ಕೊಂಡಿದ್ದರಿಂದ ಇವುಗಳಿಗೂ (ಮಾನವಶಾಸ್ತ್ರದಂತೆ) ಯೂನಿವರ್ಸಲ್ ನಿಯಮಗಳನ್ನು ಹುಡುಕುವ ಅಥವಾ ಸಂಶೋಧಿಸುವ ಜವಾಬ್ದಾರಿ ಇರಲಿಲ್ಲ. ಇದನ್ನೇ ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಮಾನವಶಾಸ್ತ್ರ ಅಥವಾ ಓರಿಯಂಟಲ್ ಶಾಸ್ತ್ರಗಳ ಸಂಶೋಧನೆ ಗಳಿಂದ ಹೊರಹೊಮ್ಮುವ ಸತ್ಯಗಳು ಇಡೀ ಪ್ರಪಂಚಕ್ಕೆ ಅನ್ವಯವಾಗಬೇಕೆಂಬ ಅಗತ್ಯ ಇರಲಿಲ್ಲ. ಏಕೆಂದರೆ ಅವು ವಸಾಹತುಗಳ ಏನೂ ಉಪಯೋಗವಿಲ್ಲದ ಅಥವಾ ತುಂಬಾ ಹಿಂದುಳಿದ ನಾಗರಿಕತೆಗಳನ್ನು ಅಧ್ಯಯನ ಮಾಡುತ್ತಿದ್ದವು. ಅವುಗಳ ಅನುಭವವನ್ನು ಕಟ್ಟಿಕೊಂಡು ಯಾರಿಗೆ ಏನಾಗಬೇಕಾಗಿದೆ? ಹೆಚ್ಚೆಂದರೆ ಅಲ್ಲಿನ ಜನರನ್ನು ಹತೋಟಿ ಯಲ್ಲಿಡಲು ಅಥವಾ ಉದ್ಧಾರ ಮಾಡಲು ಆ ಜ್ಞಾನ ಬಳಸಬಹುದಾಗಿತ್ತು.

ಆ ಎರಡು (ಮಾನವ ಶಾಸ್ತ್ರ ಮತ್ತು ಓರಿಯಂಟಲ್ ಶಾಸ್ತ್ರ) ಸಮಾಜವಿಜ್ಞಾನಗಳ ಜೊತೆಗೆ ಇತರ ಸಮಾಜ ವಿಜ್ಞಾನಗಳು (ಚರಿತ್ರೆ, ಸಮಾಜ, ಅರ್ಥ, ರಾಜಕೀಯ ಶಾಸ್ತ್ರಗಳು) ಆಬ್ಜೆಕ್ಟಿವ್ ಆಗಿರುವ ಅಗತ್ಯವಿತ್ತು. ಆದರೆ ಅವುಗಳ ವಿಧಾನ ಮಾತ್ರ ವಿಭಿನ್ನವಾಗಿದ್ದವು. ಶಾಸ್ತ್ರೀಯ ಅಥವಾ ಯೂನಿವರ್ಸಲ್ ನಿಯಮಗಳನ್ನು ಶೋಧಿಸಲು ಹೊರಟ ಸಮಾಜ ವಿಜ್ಞಾನಗಳು (ಚರಿತ್ರೆ, ಸಮಾಜ, ಅರ್ಥ ಮತ್ತು ರಾಜಕೀಯ ಶಾಸ್ತ್ರಗಳು) ವಿಜ್ಞಾನದ ವಿಧಾನಗಳನ್ನು ಹೆಚ್ಚು ಹೆಚ್ಚು ಅವಲಂಬಿಸಿದರೆ ಮಾನವಶಾಸ್ತ್ರ ಹರ್ಮೆನೆಟಿಕ್ಸ್‌ನ್ನು ಹೆಚ್ಚು ಹೆಚ್ಚು ಅವಲಂಬಿಸಿತು. ಅದಕ್ಕೆ ಬಹುಮುಖ್ಯ ಕಾರಣ ಮಾನವಶಾಸ್ತ್ರದ ಅಧ್ಯಯನ ವಿಷಯಗಳು. ಸಂಶೋಧಕರ ಸಂಸ್ಕೃತಿಯಿಂದ ಎಲ್ಲ ರೀತಿಯಿಂದಲೂ ಭಿನ್ನವಾಗಿರುವ ಸಂಸ್ಕೃತಿಯನ್ನು (ಭಾಷೆ, ಉಡುಗೆತೊಡುಗೆ, ಆಚಾರ, ವಿಚಾರ, ಇತ್ಯಾದಿಗಳಲ್ಲಿ) ಅಧ್ಯಯನ ಮಾಡುವುದು ಮಾನವಶಾಸ್ತ್ರದ ಒಂದು ನಿಯಮ. ಸಂಶೋಧಕರು ತಮ್ಮದಲ್ಲದ ಸಂಸ್ಕೃತಿಯ ಭಾಷೆ ಮತ್ತು ಜೀವನ ಕ್ರಮಗಳ ನಿಕಟ ಪರಿಚಯ ಮಾಡಿಕೊಳ್ಳುವುದು ಅನಿವಾರ್ಯವಾಗಿತ್ತು. ಆದುದರಿಂದಲೇ ಅವಲೋಕನ ವಿಧಾನ (ಸಹಭಾಗಿತ್ವ ಅವಲೋಕನ ವಿಧಾನ) ಮಾನವಶಾಸ್ತ್ರದ ಬಹುಮುಖ್ಯ ವಿಧಾನವಾಯಿತು. ಅಧ್ಯಯನ ಮಾಡುವ ಸಂಸ್ಕೃತಿಯೊಂದಿಗೆ ಸಂಶೋಧಕರು ಬೆರೆತುಕೊಳ್ಳುವ ಅನಿವಾರ್ಯತೆ ಇತ್ತು.

ಮಾನವಶಾಸ್ತ್ರಕ್ಕೆ ಹೋಲಿಸಿದರೆ ಇತರ ಸಮಾಜವಿಜ್ಞಾನಗಳಿಗೆ (ಯೂನಿವರ್ಸಲ್ ನಿಯಮಗಳನ್ನು ಹುಡುಕುವ ಸಮಾಜಶಾಸ್ತ್ರಗಳಿಗೆ) ತಾವು ಅಧ್ಯಯನ ಮಾಡುವ ಸಾಮಾಜಿಕ ಸಂಗತಿಗಳಿಂದ ಅಂತರವನ್ನು ಕಾಪಾಡಿಕೊಳ್ಳುವ ಅನಿವಾರ್ಯತೆ ಇತ್ತು. ಚರಿತ್ರಕಾರರು ಈ ಅಂತರವನ್ನು ಕಾಲದ ಮೂಲಕ ಕಾಪಾಡಿಕೊಂಡರು. ಅಂದರೆ ವರ್ತಮಾನ ಚರಿತ್ರೆಯ ವಸ್ತುವಾಗಬಾರದೆಂಬ ನಿಯಮದಿಂದ ಈ ಅಂತರವನ್ನು ಬೆಳೆಸಿದರು. ವರ್ತಮಾನ ಸಮಸ್ಯೆಯನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡರೆ ಸಂಶೋಧಕರು ಅಧ್ಯಯನ ವಿಷಯದೊಂದಿಗೆ ಭಾವನಾತ್ಮಕ ಸಂಬಂಧ ಹೊಂದಿರುವ ಸಾಧ್ಯತೆ ಇದೆ. ಆ ಸಂಬಂಧ ಅಧ್ಯಯನ ವಸ್ತುವಿನ ಬಗ್ಗೆ ಸಂಶೋಧಕರಲ್ಲಿ ರಾಗದ್ವೇಷಗಳನ್ನು ಹುಟ್ಟು ಹಾಕಬಹುದು. ಆ ರಾಗದ್ವೇಷಗಳು ಸಂಶೋಧನೆಯ ವಸ್ತುನಿಷ್ಠತೆಯ ಮೇಲೆ ಪ್ರಭಾವ ಬೀರುವ ಸಾಧ್ಯತೆ ಇದೆ. ಅದಕ್ಕಾಗಿ ವರ್ತಮಾನದ ವಿಷಯಗಳನ್ನು ಬಿಟ್ಟು ಭೂತಕಾಲಕ್ಕೆ ಸೇರಿದ ಸಮಸ್ಯೆಗಳ ಮೇಲೆ ಮಾತ್ರ ಸಂಶೋಧನೆ ಮಾಡಬೇಕೆಂಬ ನಿಯಮವನ್ನು ಚರಿತ್ರಕಾರರು ತಮ್ಮ ಮೇಲೆ ತಾವೇ ಹೇರಿಕೊಂಡರು.

ಸಂಶೋಧಕರು ಮತ್ತು ಅಧ್ಯಯನಕ್ಕೆ ಒಳಗಾಗುವ ಸಂಗತಿಯ ನಡುವಿನ ಅಂತರದ ಸಮಸ್ಯೆಯನ್ನು ಓರಿಯಂಟಲ್ ಅಧ್ಯಯನಕಾರರು ಬೇರೆಯದೇ ರೀತಿಯಲ್ಲಿ ಪರಿಹರಿಸಿಕೊಂಡರು. ತಾವು ಅಧ್ಯಯನ ಮಾಡುವ ನಾಗರಿಕ ಸಮಾಜದೊಂದಿಗೆ ಯಾವುದೇ ಸಂಬಂಧ ಇಟ್ಟುಕೊಳ್ಳದೆ ಈ ಅಂತರವನ್ನು ಕಾಪಾಡಿಕೊಂಡರು. ಧಾರ್ಮಿಕ ಗ್ರಂಥಗಳು ಅಥವಾ ಇತರ ಪ್ರಾಚೀನ ಗ್ರಂಥಗಳು ಅವರ ಮುಖ್ಯ ಆಕರಗಳಾಗಿದ್ದವು. ಗ್ರಂಥಾಲಯದ ಯಾವುದೋ ಮೂಲೆಯಲ್ಲಿ ಕುಳಿತು (ಸಮಾಜ/ಸಂಸ್ಕೃತಿಯ ಸಂಪರ್ಕ ಇಲ್ಲದೆ) ಅಧ್ಯಯನ ಮಾಡುವುದು ಅವರ ಮತ್ತು ಸಂಶೋಧನಾ ವಸ್ತುವಿನ ನಡುವಿನ ಅಂತರವನ್ನು ಕಾಪಾಡಲು ಸಹಕಾರಿಯಾಯಿತು. ರಾಜಕೀಯ, ಸಮಾಜ ಮತ್ತು ಅರ್ಥಶಾಸ್ತ್ರಗಳು ಸಬ್ಜೆಕ್ಟ್ ಆಬ್ಜೆಕ್ಟ್ ಪ್ರಶ್ನೆಯನ್ನು ಬೇರೆಯದೇ ರೀತಿಯಲ್ಲಿ ಪರಿಹರಿಸಿಕೊಂಡಿವೆ. ಸಂಶೋಧನಾ ವಿಷಯದ ವಸ್ತುನಿಷ್ಠ ಚಿತ್ರಣ ಸಿಗಬೇಕಾದರೆ ಕಾಲ ಮತ್ತು ಪ್ರದೇಶಗಳ ದೃಷ್ಟಿಯಿಂದ ದೂರ ಇರುವ ಸಮಸ್ಯೆಗಳನ್ನು ಅಧ್ಯಯನ ಮಾಡುವುದಲ್ಲ; ವರ್ತಮಾನದ ಸಮಸ್ಯೆಗಳನ್ನು ಅಧ್ಯಯನ ಮಾಡಬೇಕೆನ್ನುವುದು ಈ ಶಾಸ್ತ್ರಗಳ ದೃಷ್ಟಿಕೋನವಾಯಿತು. ಗುಣಾತ್ಮಕ ಮಾಹಿತಿಗಿಂತ ಸಂಖ್ಯಾತ್ಮಕ ಮಾಹಿತಿಗಳು ಹೆಚ್ಚು ನಿಖರ ಮತ್ತು ಅವುಗಳಿಂದ ದೊರೆಯುವ ಫಲಿತಾಂಶಗಳು ಸಾಮಾಜಿಕ ಸಂಬಂಧಗಳನ್ನು ಅರ್ಥ ಮಾಡಿಕೊಳ್ಳಲು ಹೆಚ್ಚು ಸಹಕಾರಿಯೆಂದು ಗ್ರಹಿಸಲಾಯಿತು. ಭೂತಕಾಲಕ್ಕೆ ಸೇರಿದ ಅಥವಾ ತುಂಬಾ ದೂರದಲ್ಲಿರುವ ಅಂಕಿಅಂಶಗಳು ನಂಬಲರ್ಹವಲ್ಲ. ವರ್ತಮಾನಕ್ಕೆ ಸೇರಿದ ಸಂಗತಿಗಳು ನಂಬಲರ್ಹ ಅಂಕಿಅಂಶಗಳನ್ನು ನೀಡಲು ಸಾಧ್ಯ ಎಂದಾಯಿತು. ಹೀಗೆ ಸಮಾಜ ಸಂಶೋಧನೆಯಲ್ಲಿ ವಿಜ್ಞಾನದ ಯೂನಿವರ್ಸಾಲಿಟಿಯ ಗುಣ ಅಂತರ್ಗತವಾಯಿತು.

ಆಧುನೀಕರಣ ಥಿಯರಿ

ಕೆಲವೊಂದು ಉದಾಹರಣೆಗಳ ಮೂಲಕ ಸಮಾಜ ಥಿಯರಿಯಲ್ಲಿ ಅಂತರ್ಗತ ಗೊಂಡಿರುವ ಯೂನಿವರ್ಸಾಲಿಟಿಯ ಗುಣವನ್ನು ಪರೀಕ್ಷಿಸಬಹುದು. ತುಂಬಾ ಪ್ರಚಾರ ಪಡೆದ ಮತ್ತು ಬಹುತೇಕ ವಿದ್ವಾಂಸರಿಗೆ ಪರಿಚಯವಿರುವ ಒಂದು ಸಮಾಜ ಥಿಯರಿಯೆಂದರೆ ಆಧುನೀಕರಣ ಥಿಯರಿ. ಹದಿನೇಳು ಮತ್ತು ಹದಿನೆಂಟನೇ ಶತಮಾನದಲ್ಲಿ ಪಶ್ಚಿಮ ಯುರೋಪಿನಲ್ಲಿ ನಡೆದ ಸಾಮಾಜಿಕ ಪರಿವರ್ತನೆಗಳು ಈ ಥಿಯರಿಯ ಮೂಲ. ಅಲ್ಲಿನ ಊಳಿಗಮಾನ್ಯ (ಸಾಂಪ್ರದಾಯಿಕ) ವ್ಯವಸ್ಥೆ ಪುನರುತ್ಪತ್ತಿಯಾಗದೆ ಹೊಸತೊಂದು (ಆಧುನಿಕ) ಸಾಮಾಜಿಕ ವ್ಯವಸ್ಥೆ ರೂಪುಗೊಳ್ಳುವ ಕಥನ ಆಧುನೀಕರಣ ಥಿಯರಿಯ ಮುಖ್ಯ ವಸ್ತು. ಊಳಿಗಮಾನ್ಯ ವ್ಯವಸ್ಥೆ ಪುನರುತ್ಪತ್ತಿಯಾಗದಿರಲು ಕಾರಣಗಳು, ಆಧುನಿಕ ಸಮಾಜ ರೂಪುಗೊಳ್ಳಲು ಸಹಕಾರಿಯಾದ ಅಂಶಗಳು, ಈ ಅನುಭವಗಳು ಪ್ರಪಂಚದ ಇತರ ಸಾಮಾಜಿಕ ವ್ಯವಸ್ಥೆಗಳಲ್ಲಿ ಘಟಿಸುವ ಸಾಧ್ಯತೆಗಳು ಇತ್ಯಾದಿಗಳು ಈ ಕಥನದೊಳಗೆ ಬರುವ ಬಹುಮುಖ್ಯ ಅಂಶಗಳು. ಇದು ಇಂಗ್ಲಿಷ್ ಬರಹಗಳಲ್ಲಿ ಟ್ರಾನ್ಸಿಷನ್ ಡಿಬೇಟ್ (ಪರಿವರ್ತನಾ ಚರ್ಚೆ) ಎಂದೇ ಪ್ರಖ್ಯಾತವಾಗಿದೆ. ಎಲ್ಲ ಐಡಿಯಾಲಜಿಗೆ ಬದ್ಧರಾದವರು (ಮುಖ್ಯವಾಗಿ ಎಡ ಮತ್ತು ಬಲ ಐಡಿಯಾಲಜಿಗೆ ಸೇರಿದವರು) ಈ ಚರ್ಚೆಯಲ್ಲಿ ಪಾಲುಗೊಂಡಿದ್ದಾರೆ. ವಿವಿಧ ಐಡಿಯಾಲಜಿಗೆ ಸೇರಿದವರು ಈ ಕಥನದಲ್ಲಿ ಬರುವ ವಿವಿಧ ಬೆಳವಣಿಗೆಗಳನ್ನು ತಮ್ಮದೇ ಕ್ರಮದಲ್ಲಿ ವ್ಯಾಖ್ಯಾನಿಸಿಕೊಂಡಿದ್ದಾರೆ.

ಎಡಪಂಥೀಯರಲ್ಲಿ ಕೆಲವರು ಊಳಿಗಮಾನ್ಯ ವ್ಯವಸ್ಥೆಯ ಆಂತರಿಕ ಬಿಕ್ಕಟ್ಟು ಆ ವ್ಯವಸ್ಥೆ ಪುನರುತ್ಪತ್ತಿಯಾಗದಿರಲು ಕಾರಣ ಎಂದರೆ ಮತ್ತೆ ಕೆಲವರು ವಸಾಹತು ಮತ್ತು ಅಲ್ಲಿಂದ

ಸಂಗ್ರಹವಾದ ಸಂಪತ್ತು ಊಳಿಗಮಾನ್ಯ ವ್ಯವಸ್ಥೆ ಮಾರ್ಪಾಟುಗೊಂಡು ಆಧುನಿಕ ಸಮಾಜ ನಿರ್ಮಾಣವಾಗಲು ಸಹಕಾರಿಯಾದ ಅಂಶಗಳೆಂದು ವಾದಿಸಿದರು. ಕಟ್ಟಾ ಮಾರ್ಕ್ಸ್‌ವಾದಿಗಳೆಂದು ಗುರುತಿಸಬಹುದಾದ ಕಾರ್ಲ್ ಪೋಲಾಯಿನಿ, ಮೌರಿಸ್ ಡಾಬ್ ಮುಂತಾದವರು ಊಳಿಗಮಾನ್ಯ ವ್ಯವಸ್ಥೆಯ ಅವನತಿಯಲ್ಲಿ ವ್ಯಾಪಾರದ ಪಾತ್ರವನ್ನು ಅಲ್ಲಗಳೆಯವುದಿಲ್ಲ. ಆದರೆ ಅದೇ ಪ್ರಮುಖ ಪಾತ್ರ ವಹಿಸಿದೆ ಎಂಬ ವಾದವನ್ನು ಅವರು ವಿರೋಧಿಸುತ್ತಾರೆ. ಯಾಕೆಂದರೆ ಯುರೋಪಿನ ಹಲವಾರು ದೇಶಗಳಲ್ಲಿ ಪಶ್ಚಿಮ ಯುರೋಪಿನಲ್ಲಿ ಇದ್ದುದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ವ್ಯಾಪಾರ ವಹಿವಾಟುಗಳಿದ್ದವು. ಆದರೆ ಆ ದೇಶಗಳಲ್ಲಿ ಊಳಿಗ ಮಾನ್ಯ ವ್ಯವಸ್ಥೆ ಅವನತಿಯೂ ಆಗಲಿಲ್ಲ; ಆಧುನಿಕ ವ್ಯವಸ್ಥೆ ರೂಪುಗೊಳ್ಳಲೂ ಇಲ್ಲ. ಅವರ ಪ್ರಕಾರ ಯಾವುದೇ ವ್ಯವಸ್ಥೆಯ ಪರಿವರ್ತನೆಯಲ್ಲಿ ಆ ವ್ಯವಸ್ಥೆಯ ಒಳಗಿನ ವೈರುಧ್ಯಗಳೇ ಪ್ರಮುಖ ಪಾತ್ರ ವಹಿಸುತ್ತವೆ. ಹಾಗೆಂದು ಹೊರಗಿನ ಪ್ರಭಾವವನ್ನು ಅವರು ಸಂಪೂರ್ಣವಾಗಿ ನಿರಾಕರಿಸುವುದಿಲ್ಲ. ಊಳಿಗಮಾನ್ಯ ವ್ಯವಸ್ಥೆ ಪರಿವರ್ತನೆಗೊಂಡು ಆಧುನಿಕ ಸಮಾಜ ನಿರ್ಮಾಣವಾಗಲು ವಸಾಹತು ಮತ್ತು ಅಲ್ಲಿಂದ ಸಂಗ್ರಹವಾದ ಸಂಪತ್ತು ಮುಖ್ಯ ಪಾತ್ರ ವಹಿಸಿದೆಯೆಂದು ವಾದಿಸುವ ಎಡಪಂಥೀಯ ಚಿಂತಕರನ್ನು ಡಿಪೆಂಡೆನ್ಸ್ ಥಿಯರಿಸ್ಟರೆಂದು ಗುರುತಿಸಲಾಯಿತು.

ಎಡಪಂಥೀಯರು ಇಡೀ ಪರಿವರ್ತನೆಯನ್ನು ಆರ್ಥಿಕ ಕ್ಷೇತ್ರಕ್ಕೆ ಸೀಮಿತಗೊಳಿಸಿ ನೋಡುತ್ತಿದ್ದಾರೆ; ಇದು ಸರಿಯಲ್ಲ, ಆರ್ಥಿಕೇತರ ಅಂಶಗಳು ಕೂಡ ಈ ಪರಿವರ್ತನೆಯಲ್ಲಿ ಮಹತ್ತರವಾದ ಪಾತ್ರ ವಹಿಸಿವೆ ಎಂದು ಬಲಪಂಥೀಯರು ವಾದಿಸಿದರು. ಈ ರೀತಿಯ ವಾದವನ್ನು ಮುಂದಿಡುವುದರಲ್ಲಿ ಮ್ಯಾಕ್ಸ್‌ವೆಬರ್ ಅಗ್ರಗಣ್ಯ. ಈತನ ಪ್ರೊಟೆಸ್ಟಂಟ್ ಎಥಿಕ್ಸ್ ಆಂಡ್ ಸ್ಪಿರಿಟ್ ಆಫ್ ಕ್ಯಾಪಿಟಲಿಸಂ ಎನ್ನುವ ಪುಸ್ತಕ ಈ ಕ್ರಮದ ವಾದಕ್ಕೆ ಉತ್ತಮ ಉದಾಹರಣೆ. ಇತರ ಬರಹಗಳಲ್ಲಿ ಈತ ಧಾರ್ಮಿಕ ವಿಚಾರಗಳ ಜತೆಗೆ ಲೆಕ್ಕಶಾಸ್ತ್ರದ ಬೆಳವಣಿಗೆ, ಶ್ರಮಿಕ ವರ್ಗದ ರೂಪುಗೊಳ್ಳುವಿಕೆ, ಆಡಳಿತಶಾಹಿಯ ಉಪಯೋಗ ಇವೇ ಮುಂತಾದ ವಿಚಾರಗಳು ಕೂಡ ಹೊಸ ವ್ಯವಸ್ಥೆಯ ರೂಪುಗೊಳ್ಳುವಿಕೆಯಲ್ಲಿ ನಿರ್ಣಾಯಕ ಪಾತ್ರ ವಹಿಸಿವೆ ಎಂದು ಅಭಿಪ್ರಾಯಪಡುತ್ತಾನೆ. ಪರಿವರ್ತನೆಗೆ ಕಾರಣವಾದ ಅಂಶಗಳನ್ನು ಗುರುತಿಸುವ ದೃಷ್ಟಿಯಿಂದ ಈ ಎಲ್ಲ ವಿಚಾರಗಳನ್ನು ಚರ್ಚಿಸಿಲ್ಲ; ಸಮಾಜಶಾಸ್ತ್ರಜ್ಞರು ಹೇಗೆ ಯಾವುದೋ ಒಂದು ಸಮಾಜದ ಅನುಭವವನ್ನು ಬಳಸಿಕೊಂಡು ಯೂನಿವರ್ಸಲ್ ಥಿಯರಿಗಳನ್ನು ಕಟ್ಟಲು ಪ್ರಯತ್ನಿಸಿದ್ದಾರೆ ಎನ್ನುವ ಅಂಶದ ಮೇಲೆ ಬೆಳಕು ಚೆಲ್ಲುವುದು ಇಲ್ಲಿನ ಉದ್ದೇಶವಾಗಿದೆ. ಸಮಾಜಶಾಸ್ತ್ರಜ್ಞರು ಕೇವಲ ಪರಿವರ್ತನೆಯ ಕಾರಣಗಳನ್ನು ಮಾತ್ರ ಗುರುತಿಸಿದ್ದಲ್ಲ; ಈ ಅನುಭವಗಳು ಬೇರೆ ಸಮಾಜಗಳಲ್ಲಿ ಪುನರಾವರ್ತನೆ ಆಗಬಹುದೇ ಎನ್ನುವ ವಿಚಾರದ ಮೇಲೂ ಗಮನ ಹರಿಸಿದ್ದಾರೆ.

ಮ್ಯಾಕ್ಸ್ ವೆಬರ್ ಗುರುತಿಸಿದ ಆರ್ಥಿಕೇತರ ಅಂಶಗಳನ್ನು ಬಳಸಿಕೊಂಡು ಪರಿವರ್ತಿತ ಸಮಾಜದ ಗುಣಗಳನ್ನು ಅದರ ಹಿಂದಿನ ಸಮಾಜದ ಗುಣಗಳೊಂದಿಗೆ ಹೋಲಿಸಿ ಪರಿವರ್ತನೆಯ ಥಿಯರಿಯನ್ನು ಆರಂಭಿಸಿದವರಲ್ಲಿ ಟಾಲ್‌ಕಾಟ್ ಪಾರ್ಸನ್ ಪ್ರಮುಖ. ಈತನ ಪ್ರಕಾರ ಸಾಂಪ್ರದಾಯಿಕ ಸಮಾಜವೊಂದು ಸಂಬಂಧ ಆಧಾರಿತ ವ್ಯವಹಾರದ ಬದಲು ಒಪ್ಪಂದ ಆಧಾರಿತ ವ್ಯವಹಾರ, ವ್ಯವಹಾರದಲ್ಲಿ ಹಣದ ಬಳಕೆ, ಅವಿಭಕ್ತ ಕುಟುಂಬಗಳು ಸಡಿಲಗೊಂಡು ವಿಭಕ್ತ ಕುಟುಂಬಗಳು ರೂಪುಗೊಳ್ಳುವುದು, ಸಹಬಾಳ್ವೆಗಿಂತ ಸ್ಪರ್ಧಾತ್ಮಕ ಬದುಕಿನತ್ತ ಚಲಿಸುವುದು, ಸಮುದಾಯಕ್ಕಿಂತ ವ್ಯಕ್ತಿಪ್ರಧಾನ ವ್ಯವಸ್ಥೆಗೆ ಪ್ರಾಧ್ಯಾನತೆ ಇವೇ ಮುಂತಾದ ಪರಿವರ್ತನೆಗಳೊಂದಿಗೆ ಆಧುನಿಕಗೊಳ್ಳುತ್ತದೆ. ಉತ್ಪಾದನಾ ಕ್ಷೇತ್ರಗಳಲ್ಲಿ

(ಸರಕು ಮತ್ತು ಸೇವೆಗಳ) ವಿಜ್ಞಾನ ಮತ್ತು ತಂತ್ರಜ್ಞಾನದ ಬಳಕೆಯೇ ಪರಿವರ್ತನೆಗೆ ಮುಖ್ಯ ಕಾರಣವೆಂದು ಬಣ್ಣಿಸಲಾಯಿತು. ಯಾವುದೇ ಸಮಾಜದಲ್ಲೂ ಪಶ್ಚಿಮದ ಈ ವಿಜ್ಞಾನ ತಂತ್ರಜ್ಞಾನಗಳನ್ನು ಅಳವಡಿಸುವ ಮೂಲಕ ಆ ಸಮಾಜವನ್ನು ಆಧುನೀಕರಣಗೊಳಿಸ-ಬಹುದೆನ್ನುವ ಆಧುನೀಕರಣ ಥಿಯರಿ ರೂಪುಗೊಂಡಿತು. ಪರಿವರ್ತಿತ ಸಮಾಜವನ್ನು 'ಆಧುನಿಕ', 'ಮುಂದುವರಿದ', 'ಪ್ರಗತಿಪರ' ಇತ್ಯಾದಿ ವಿಶೇಷಣಗಳಿಂದ ಗುರುತಿಸಿದರೆ ಇತರ ಸಮಾಜವನ್ನು 'ಸಾಂಪ್ರದಾಯಿಕ', 'ಹಿಂದುಳಿದ', ಸಮಾಜಗಳೆಂದು ವರ್ಗೀಕರಿಸಲಾಯಿತು.

ಪಶ್ಚಿಮದ ವಿಜ್ಞಾನ ತಂತ್ರಜ್ಞಾನಗಳನ್ನು ತಮ್ಮ ವ್ಯವಸ್ಥೆಯಲ್ಲಿ ಅಳವಡಿಸಿಕೊಂಡು ಇತರರು ಕೂಡ ತಮ್ಮ ಸಮಾಜವನ್ನು ಪಶ್ಚಿಮದಂತೆ ಪರಿವರ್ತಿಸಿಕೊಳ್ಳಬಹುದೆನ್ನುವ ಪರೋಕ್ಷ ಸೂಚನೆಯನ್ನು ಈ ಗುಣಾತ್ಮಕ ವಿಂಗಡನೆ ಒಳಗೊಂಡಿದೆ. ಸಮಾಜಶಾಸ್ತ್ರಜ್ಞರು ಸಮಾಜ ಪರಿವರ್ತನೆಯ ಮಾದರಿಯನ್ನು ಮುಂದಿಟ್ಟ ಕೂಡಲೇ ಪ್ರಪಂಚದ ರಾಷ್ಟ್ರಗಳು ಆ ಮಾದರಿಯನ್ನು ಅನುಸರಿಸಲು ಮುಂದಾಗಲಿಲ್ಲ. ಏಕೆ ಮುಂದಾಗಲಿಲ್ಲ ಎನ್ನುವ ವಿಚಾರವನ್ನು ಮುಂದೆ ವಿವರಿಸಿದ್ದೇನೆ. ಆ ಮಾದರಿಗಳು ಹೇಗೆ ಪರಕೀಯವಾಗಿವೆ ಎನ್ನುವುದರ ಮೇಲೆ ಬೆಳಕು ಚೆಲ್ಲುವುದರೊಂದಿಗೆ ಯಾವುದೋ ಒಂದು ಸಮಾಜದ ಅನುಭವ ಆಧರಿಸಿ ರೂಪುಗೊಂಡ ಮಾದರಿ ಎಲ್ಲರ ಮಾದರಿ ಏಕಾಗುತ್ತದೆ ಎನ್ನುವ ವಿಚಾರದ ಮೇಲೂ ಗಮನ ಹರಿಸುತ್ತದೆ. ಸಮಾಜ ಥಿಯರಿಯೊಂದು ಯೂನಿವರ್ಸಾಲಿಟಿ ಗುಣವನ್ನು ವೈಜ್ಞಾನಿಕವಾಗಿ ಸಾಧಿಸಿದ ಕೂಡಲೇ ಅದು ಯೂನಿವರ್ಸಲ್ ಥಿಯರಿ ಆಗುತ್ತದೆ ಎನ್ನುವುದು ಸರಿಯಲ್ಲ. ಅದರ ಬದಲು ಆ ಥಿಯರಿ ಎಲ್ಲಿ ರೂಪುಗೊಳ್ಳುತ್ತದೆ ಮತ್ತು ಆ ಸಮಾಜದ ಬಲ (ಆರ್ಥಿಕ ಮತ್ತು ರಾಜಕೀಯ ಬಲ) ಏನು ಎನ್ನುವುದು ಕೂಡ ಥಿಯರಿಯೊಂದರ ಯೂನಿವರ್ಸಾಲಿಟಿಯನ್ನು ನಿರ್ಧರಿಸುತ್ತದೆ ಎನ್ನುವ ಅಂಶಗಳ ಮೇಲೆ ಲೇಖನದ ಮುಂದಿನ ಭಾಗದಲ್ಲಿ ಗಮನ ಹರಿಸಲಾಗಿದೆ.

ಈಡಿಪಸ್ ಕಾಂಪ್ಲೆಕ್ಸ್

ಬಲಾಢ್ಯರ ಸತ್ಯಗಳು ಎಲ್ಲರ ಸತ್ಯಗಳು ಹೇಗಾಗುತ್ತವೆ ಎನ್ನುವುದನ್ನು ಕೆಲವೊಂದು ಉದಾಹರಣೆಗಳ ಮೂಲಕ ಅರ್ಥಮಾಡಿಕೊಳ್ಳಬಹುದು. ಪಶ್ಚಿಮ ಸಮಾಜದ ಅನುಭವಗಳ ನೆಲೆಯಲ್ಲಿ ಹೇಗೆ ಆಧುನೀಕರಣ ಥಿಯರಿ ಸೃಷ್ಟಿಯಾಗಿದೆಯೆಂದು ಮೇಲೆ ನೋಡಿದ್ದೇವೆ. ಈ ಭಾಗದಲ್ಲಿ ಸಮಾಜ ಥಿಯರಿಗಳನ್ನು ಪ್ರಭಾವಿಸಿದ ಪಶ್ಚಿಮದ ಇತರ ಕಥನಗಳನ್ನು ಪರಿಶೀಲಿಸುವ. ಹಲವು ಸಮಾಜ ಥಿಯರಿಗಳನ್ನು ಕಟ್ಟಿಕೊಳ್ಳಲು ಪೂರಕವಾದ ಮಾಹಿತಿಯನ್ನು ಈಡಿಪಸ್ ಕಾಂಪ್ಲೆಕ್ಸ್ ಕಥನದಿಂದ ಪಡೆಯಲಾಗಿದೆ. ಈಡಿಪಸ್ ಕಾಂಪ್ಲೆಸ್ ಒಂದು ಗ್ರೀಕ್ ಮಿಥ್. ಈ ಮಿಥ್ ಸಿಗ್‌ಮಂಡ್ ಫ್ರಾಯ್ಡ್‌ನ ಮನಶ್ಶಾಸ್ತ್ರದ ಥಿಯರಿಗೆ ಸಾಮಗ್ರಿ ಒದಗಿಸಿದೆ. ನಂತರ ರಚನಾವಾದದ ಪರೀಕ್ಷೆಗೂ ಇದೇ ಸಾಮಗ್ರಿ ಬಳಕೆಯಾಗಿದೆ. ಇತ್ತೀಚೆಗೆ ಚಾಲ್ತಿಗೆ ಬಂದ ಆಧುನಿಕೋತ್ತರ ಚಿಂತನೆಯ ಅಡಿಪಾಯ ಇರುವ ಡಿಸ್ಕೋರ್ಸ್ ವಿಶ್ಲೇಷಣೆಗೂ ಇದೇ ಗ್ರೀಕ್ ಮಿಥಾಲಜಿ ಮಾಹಿತಿ ಒದಗಿಸಿದೆ. ಹೀಗೆ ಪ್ರಪಂಚವನ್ನು ಆಳುವ ಹಲವಾರು ಥಿಯರಿಗಳಿಗೆ ಗ್ರೀಕ್ ಮಿಥಾಲಜಿಯ ಈ ಒಂದು ಘಟನೆ ಮಾಹಿತಿ ಒದಗಿಸಿದೆ. ಗ್ರೀಕರಿಗೆ ಮಾತ್ರ ಮಿಥಾಲಜಿ ಇರುವುದೇ? ಪ್ರಪಂಚದ ಇತರ ಸಂಸ್ಕೃತಿಗಳಿಗೆ ಮಿಥಾಲಜಿ ಇಲ್ಲವೇ? ಅವುಗಳಲ್ಲಿ ಬರುವ ಕಥನಗಳು ಏಕೆ ಥಿಯರಿಯಗಳ ಪರೀಕ್ಷೆಗೆ ಸಾಮಗ್ರಿ ಒದಗಿಸುವುದಿಲ್ಲ.

ಇಷ್ಟಾಗಿಯೂ ಈ ಈಡಿಪಸ್ ಕಾಂಪ್ಲೆಕ್ಸ್ ಏನು ಹೇಳುತ್ತದೆ. ಮಗನಿಗೆ ತಾಯಿಯ ಅಥವಾ ತಾಯಿಗೆ ಮಗನ ಸೆಳೆತ ಇರುತ್ತದೆ ಎನ್ನುವ ವಿಚಾರದ ಸುತ್ತ ಇಡೀ ಕಥನ ಸೃಷ್ಟಿಯಾಗಿದೆ. ಪಶ್ಚಿಮದ ಕೆಲವು ಸಂಸ್ಕೃತಿಗಳಲ್ಲಿ, ಅದರಲ್ಲೂ ಆಗ ತಾನೇ ಕೈಗಾರಿಕೀಕರಣಕ್ಕೆ ದಾಪುಗಾಲಿಕ್ಕುವ ಪಶ್ಚಿಮ ಯುರೋಪಿನ ಕೆಲವು ಸಮಾಜಗಳಲ್ಲಿ, ಆಧುನೀಕರಣ ಅಥವಾ ಬಂಡವಾಳದ ವಿಸ್ತರಣೆಯಿಂದಾಗಿ ಕುಟುಂಬ ಬದುಕಿನಲ್ಲಿ ಸಾಕಷ್ಟು ಪಲ್ಲಟಗಳಾಗುತ್ತಿದವು. ಕುಟುಂಬದಲ್ಲಿ ತಂದೆ ಮತ್ತು ತಾಯಿಯ ಪಾತ್ರಗಳು ಗಟ್ಟಿಗೊಳ್ಳುವ ಸಂದರ್ಭ. ತಂದೆ ಹೊರಗಿನ ಜಗತ್ತಲ್ಲಿ ದುಡಿದು ಸಂಸಾರದ ಖರ್ಚನ್ನು ಭರಿಸುವ ಜವಾಬ್ದಾರಿ ಹೊತ್ತರೆ ತಾಯಿ ಮನೆಯೊಳಗಿನ ಕೆಲಸ ಕಾರ್ಯಗಳಿಗೆ ತನ್ನ ಬದುಕನ್ನು ಮೀಸಲಿಡಬೇಕಿತ್ತು. ಮಕ್ಕಳನ್ನು ಹೆರುವುದು, ಆರೈಕೆ ಮಾಡುವುದು, ಮನೆಯೊಳಗಿನ ವ್ಯವಹಾರಗಳನ್ನು ಅಚ್ಚುಕಟ್ಟುಗೊಳಿಸುವುದು ತಾಯಿಯ ಜವಾಬ್ದಾರಿ. ಹೀಗೆ ಮಕ್ಕಳಿಗೆ ತಾಯಿಯೇ ತುಂಬಾ ಹತ್ತಿರದ ಸಂಬಂಧಿ ಮತ್ತು ತಮ್ಮೆಲ್ಲ ಸುಖ ದುಃಖಗಳನ್ನು ಹಂಚಿಕೊಳ್ಳಲು ಸಾಧ್ಯವಿರುವ ಸಂಗಾತಿ. ತಾಯಿಗೆ ಹೋಲಿಸಿದರೆ ತಂದೆ ಹೊರಗಿನ ಪ್ರಪಂಚದ ಶಿಸ್ತನ್ನು ಮಕ್ಕಳಿಗೆ ಮನೆಯಲ್ಲಿ ರೂಢಿಸಿಕೊಡಲು ಪ್ರಯತ್ನಿಸಬೇಕಿತ್ತು. ಮನೆಯಲ್ಲಿ ಮಕ್ಕಳನ್ನು ತಿದ್ದದಿದ್ದರೆ ಹೊರಗಿನ ಪ್ರಪಂಚದಲ್ಲಿ ಮಕ್ಕಳು ವ್ಯವಹರಿಸಲು ಕಷ್ಟಪಡಬೇಕಿತ್ತು. ಅದಕ್ಕಾಗಿ ತಂದೆ ಹೊರಗಿನ ಪ್ರಪಂಚದ ನಿಷ್ಠುರತೆಯನ್ನು ಮನೆಯಲ್ಲಿಯೇ ಮಕ್ಕಳಿಗೆ ಉಣಬಡಿಸಬೇಕಿತ್ತು.

ಹೀಗೆ ಕಠಿಣ ಹೃದಯಿ, ನಿಷ್ಠುರ ನಡವಳಿಕೆಯ ತಂದೆ ಒಂದು ಕಡೆಯಾದರೆ ಮೃದು ಹೃದಯ ಮತ್ತು ಮಕ್ಕಳ ಎಲ್ಲ ತಪ್ಪುಗಳನ್ನು ಸಹಿಸುವ ತಾಯಿ ಮತ್ತೊಂದು ಕಡೆ. ಇದು ಸಹಜವಾಗಿಯೇ ಮಕ್ಕಳನ್ನು ತಾಯಿಯ ಕಡೆಗೆ ಹೆಚ್ಚು ಆಕರ್ಷಿಸಿತ್ತು. ಇದನ್ನೇ ಈಡಿಪಸ್ ಕಾಂಪ್ಲೆಕ್ಸ್ ಎಂದು ಥಿಯರೈಸ್ ಮಾಡಲಾಯಿತು. ಫ್ರಾಯ್ಡ್‌ನ ಈಡಿಪಸ್ ಕಾಂಪ್ಲೆಕ್ಸ್ ಪ್ರಪಂಚದ ಎಲ್ಲ ಸಮುದಾಯಗಳಲ್ಲಿನ ತಾಯಿ ಮತ್ತು ಮಕ್ಕಳ ಸಂಬಂಧವನ್ನು ಪರೀಕ್ಷಿಸಿ ರೂಪುಗೊಂಡದ್ದಲ್ಲ. ಮೆಲಿನೋವಿಸ್ಕಿ ಕೆಲವೊಂದು ಬುಡಕಟ್ಟು ಸಮುದಾಯಗಳನ್ನು ಅಧ್ಯಯನ ಮಾಡಿ ಫ್ರಾಯ್ಡ್‌ನ ಥಿಯರಿ ಎಷ್ಟೊಂದು ದೋಷಪೂರಿತ ಎಂದು ಹೇಳಲು ಬಹು ಹಿಂದೆಯೇ ಪ್ರಯತ್ನಿಸಿದ್ದ. ಆತನ ಪ್ರಕಾರ ಬುಡಕಟ್ಟು ಸಮುದಾಯಗಳಲ್ಲಿ ಮಕ್ಕಳು ತಾಯಿ ಮತ್ತು ತಂದೆಯನ್ನು ಹೆಚ್ಚು ಕಡಿಮೆ ಒಂದೇ ಪ್ರಮಾಣದಲ್ಲಿ ಪ್ರೀತಿಸುತ್ತಾರೆ. ಇನ್ನು ಕೆಲವು ಸಮುದಾಯಗಳಲ್ಲಿ ಗಂಡು ಮಕ್ಕಳಿಗೆ ತಾಯಿಗಿಂತ ತಂದೆ ಮೇಲೆ ಹೆಚ್ಚು ಪ್ರೀತಿ. ಮಾತೃಪ್ರಧಾನ ಸಮುದಾಯಗಳಲ್ಲಿ ತಾಯಿ ಆಸ್ತಿಯ ವಾರಸುದಾರಳು. ತಂದೆ ಬಂದು ಹೋಗುವ ಅತಿಥಿ. ದಿನಾ ಹದ್ದುಬಸ್ತಿನಲ್ಲಿಡುವ ತಾಯಿಗಿಂತ ಅಪರೂಪಕ್ಕೆ ಬಂದು ಅಕ್ಕರೆ ತೋರುವ ತಂದೆಯೇ ಹೆಚ್ಚು ಆಪ್ತನಾಗುತ್ತಾನೆ. ಹೀಗೆ ಫ್ರಾಯ್ಡ್‌ನ ಸಿದ್ಧಾಂತ ಎಷ್ಟು ಸೀಮಿತ ಆನ್ವಯಿಕೆಯುಳ್ಳದ್ದೆಂದು ಸಾಬೀತಾಗುತ್ತದೆ. ಹಾಗೆಂದು ಅದು ತನ್ನ ಶಕ್ತಿ ಕಳೆದುಕೊಂಡಿಲ್ಲ. ಇಂದು ಕೂಡ ಅದನ್ನು ಹೇಳಿ ಮುಂದುವರಿಯುವುದು ವಿದ್ವಾಂಸರ ತಿಳುವಳಿಕೆಯ ಮಟ್ಟವನ್ನು ಅಳೆಯುವಲ್ಲಿ ಬಹುದೊಡ್ಡ ಪಾತ್ರ ವಹಿಸುತ್ತದೆ.

ಸುಧಾರಿತ ಸಮಾಜ ಥಿಯರಿಗಳು

ಸಮಾಜ, ಅರ್ಥ, ರಾಜಕೀಯಶಾಸ್ತ್ರ ಥಿಯರಿಗಳಲ್ಲಿ ಯೂನಿವರ್ಸಾಲಿಟಿಯ ಗುಣ ಹೇಗೆ ಅಂತರ್ಗತಗೊಂಡಿತು ಮತ್ತು ಪಶ್ಚಿಮದ ಅನುಭವಗಳು ಹೇಗೆ ಸಮಾಜ ಥಿಯರಿಗಳಿಗೆ ಸಾಮಗ್ರಿ ಒದಗಿಸಿವೆ ಎನ್ನುವ ವಿವರಣೆಯನ್ನು ಮೇಲಿನ ಪುಟಗಳಲ್ಲಿ ನೋಡಿದ್ದೇವೆ. ಸಮಾಜ ಥಿಯರಿಗಳ ಮೇಲಿರುವ ಈ ಗಂಭೀರ ಆರೋಪಗಳನ್ನು ಅಲ್ಲಗಳೆಯುವ ದೃಷ್ಟಿಯಿಂದ ಸುಧಾರಿತ ಸಮಾಜವಿಜ್ಞಾನ ಥಿಯರಿಗಳ ವಾದವನ್ನು ಮುಂದಿಡಲಾಗಿದೆ. ಈ ವಾದದ

ಸಾರಾಂಶ ಇಂತಿದೆ. ಸಮಾಜವಿಜ್ಞಾನ ಥಿಯರಿಗಳು ಪಶ್ಚಿಮದ ಅನುಭವಗಳನ್ನು ಆಧರಿಸಿವೆ ಎನ್ನುವುದು ತುಂಬಾ ಹಳೆಯ ವಾದ. ಇದನ್ನು ಯುರೋಸೆಂಟ್ರಿಸಂ ಎಂದು ಬಹು ಹಿಂದೆಯೇ ತಿರಸ್ಕರಿಸಲಾಗಿದೆ. ಈ ಥಿಯರಿಗಳ ಚೌಕಟ್ಟಲ್ಲಿ ತೃತೀಯ ಜಗತ್ತಿನ ಸಮಾಜಗಳನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಿಲ್ಲವೆಂದು ಸಮಾಜ ಸಂಶೋಧಕರು ಬಹುಹಿಂದೆಯೇ ಕಂಡು ಕೊಂಡಿದ್ದಾರೆ. ಪ್ರಪಂಚದ ಬಹುತೇಕ ಸಮಾಜಗಳ (ಮುಖ್ಯವಾಗಿ ತೃತೀಯ ಜಗತ್ತಿನ ಸಮಾಜಗಳನ್ನು) ಅನುಭವಗಳನ್ನೊಳಗೊಂಡ ಸಮಾಜ ಥಿಯರಿಗಳನ್ನು ರೂಪಿಸಲು ಹಿಂದಿನಿಂದಲೇ ಪ್ರಯತ್ನಗಳು ನಡೆದಿವೆ. ಆದುದರಿಂದ ಇಂದು ಚಾಲ್ತಿಯಲ್ಲಿರುವ ಥಿಯರಿ ಗಳನ್ನು ಪಶ್ಚಿಮದ ಅನುಭವದ ನೆಲೆಯಲ್ಲಿ ರೂಪುಗೊಂಡವೆಂದು ವರ್ಗೀಕರಿಸುವುದು ಸರಿಯಲ್ಲವೆನ್ನುವ ವಾದ. ಇದಕ್ಕೆ ಉತ್ತಮ ಉದಾಹರಣೆಯೆಂದರೆ ಜಾನಪದ ಮತ್ತು ಮಹಿಳಾ ಅಧ್ಯಯನಗಳು.

ಆರಂಭದಲ್ಲಿ ಜಾನಪದ ಅಧ್ಯಯನ ವಿಧಾನ ಮತ್ತು ಥಿಯರಿ ಪಶ್ಚಿಮದ ಅನುಭವಗಳಿಂದ ತುಂಬಾ ಪ್ರಭಾವಿತವಾಗಿತ್ತು. ಪಶ್ಚಿಮದಲ್ಲಿ ಜಾನಪದ ಅಧ್ಯಯನದ ಆರಂಭದ ದಿನಗಳಲ್ಲಿ ಜನಪದ ಹಾಡುಗಳು, ಜನಪದ ಗಾದೆಗಳು, ಜನಪದ ಸಾಮಗ್ರಿಗಳ ಸಂಗ್ರಹ ಇತ್ಯಾದಿಗಳು ಅಧ್ಯಯನ ಸಂಗತಿಗಳಾಗಿದ್ದವು. ಜನಪದರ ಅಥವಾ ಜನಪದ ಹಾಡುಗಳನ್ನು ಹಾಡುವವರು ಅಥವಾ ಸಾಮಗ್ರಿಗಳನ್ನು ಉಪಯೋಗಿಸುವವರು ಅಧ್ಯಯನಕಾರರ ಗಮನದಲ್ಲಿರಲಿಲ್ಲ. ಅದಕ್ಕೆ ಮುಖ್ಯ ಕಾರಣ ಜಾನಪದ ಅಧ್ಯಯನವನ್ನು ಮುಂಚೂಣಿಗೆ ತಂದ ಕೆಲವು ದೇಶಗಳಲ್ಲಿ ನಾವು ಅಂದುಕೊಂಡ ರೀತಿಯ ಜನಪದರು ಇರಲಿಲ್ಲ. ಉದಾಹರಣೆಗೆ ಅಮೇರಿಕದಲ್ಲಿ ಅತಿಯಾದ ಕೈಗಾರೀಕರಣದಿಂದಾಗಿ ಸಾಂಪ್ರದಾಯಿಕ ಕೃಷಿಯಲ್ಲಿ ತೊಡಗಿಸಿಕೊಂಡ ಕೃಷಿಕರು ಮತ್ತು ಗ್ರಾಮೀಣ ಬದುಕು ತೀವ್ರವಾಗಿ ಕಣ್ಮರೆಯಾಗುತ್ತಿತ್ತು. ಆ ಸಂದರ್ಭದಲ್ಲಿ ಜನಪದರನ್ನು ಅಧ್ಯಯನ ಮಾಡುವುದಕ್ಕಿಂತ ಕಣ್ಣೆದುರೇ ಕಣ್ಮರೆಯಾಗುತ್ತಿರುವ ಕೃಷಿಕರ ಬದುಕನ್ನು ಮ್ಯೂಸಿಯಂಗಳಲ್ಲಿ ರಕ್ಷಿಸಿಡುವ ಅಗತ್ಯ ಅಮೆರಿಕದ ಜನಪದರಿಗೆ ಇತ್ತು. ಹೀಗೆ ಜನಪದ ಅಧ್ಯಯನದ ಆರಂಭದ ದಿನಗಳಲ್ಲಿ ಜನಪದರ ಸಾಹಿತ್ಯಗಳು, ಸಾಮಗ್ರಿಗಳು ಜಾನಪದ ಅಧ್ಯಯನದ ಮುಖ್ಯ ಸಂಶೋಧನಾ ವಸ್ತುಗಳಾದವು. ಜನಪದರು ಅಧ್ಯಯನದ ಕೇಂದ್ರಬಿಂದುಗಳಾಗಲಿಲ್ಲ.

ಅಮೆರಿಕದ ಈ ಪ್ರವೃತ್ತಿಯನ್ನು ಆಸ್ಟ್ರಿಯದ ಲಾರಿ ಹ್ಯಾಂಕೋ ಪ್ರಶ್ನಿಸಿದರು. ಅವರ ಪ್ರಕಾರ ಅಮೆರಿಕದ ಅನುಭವ ಪ್ರಪಂಚದ ಎಲ್ಲ ದೇಶಗಳ ಅನುಭವ ಅಲ್ಲ. ಬಹುತೇಕ ದೇಶಗಳು ಇಂದು ಕೂಡ ಕೃಷಿ ಪ್ರಧಾನ ಅರ್ಥ ವ್ಯವಸ್ಥೆಯನ್ನು ಹೊಂದಿವೆ. ಅವರಲ್ಲಿ ಜನಪದರು ಜೀವಂತ ಇದ್ದಾರೆ. ಆದುದರಿಂದ ಜನಪದರ ಗೀತೆಗಳನ್ನು ಅಥವಾ ಸಾಮಗ್ರಿಗಳನ್ನು ಸಂಗ್ರಹಿಸುವ ಮೂಲಕ ನಾವು ಜನಪದರನ್ನು ಅಧ್ಯಯನ ಮಾಡಬೇಕಾಗಿಲ್ಲ; ಜನಪದರನ್ನೇ ನೇರ ಅಧ್ಯಯನ ಮಾಡುವ ಮೂಲಕ ನಾವು ಜನಪದ ಲೋಕವನ್ನು ಅರ್ಥ ಮಾಡಿಕೊಳ್ಳಬಹುದು ಎನ್ನುವ ಅಭಿಪ್ರಾಯ ನೀಡಿದರು. ಹೀಗೆ ಕ್ರಮೇಣ ಲೋರ್ ಬದಲು ಫೋಕ್ ಅಧ್ಯಯನದ ಕೇಂದ್ರ ಬಿಂದುವಾಯಿತು. ಮಹಿಳಾ ಅಧ್ಯಯನದಲ್ಲೂ ಆರಂಭದಲ್ಲಿ ಬಿಳಿಮಹಿಳೆಯರು ತಮ್ಮ ಸಮಾಜದ ಬಿಳಿಪುರುಷರಿಗೆ ಹೋಲಿಸಿಕೊಂಡು ಮಹಿಳಾ ಪ್ರಶ್ನೆಗಳನ್ನು ರೂಪಿಸಿಕೊಂಡರು. ಮಹಿಳಾ ಅಧ್ಯಯನ ಆರಂಭವಾದ ದಿನಗಳಲ್ಲಿ ಅದರ ಬಹುಮುಖ್ಯ ಪ್ರಶ್ನೆ ಮಹಿಳಾ ಅನುಭವಗಳನ್ನು ದಾಖಲಿಸುವುದು. ಹಾಗೆಂದು ಎಲ್ಲ ಮಹಿಳೆಯರು ಮಹಿಳಾ ಅಧ್ಯಯನದ ವಸ್ತುವಾಗಲಿಲ್ಲ. ಸಂಶೋಧನೆಯಲ್ಲಿ ಯಜಮಾನಿಕೆ

ನಡೆಸುತ್ತಿದ್ದ ಬಿಳಿಯ ಪುರುಷರನ್ನು ಪ್ರಶ್ನಿಸುತ್ತಾ ಮಹಿಳಾ ಪ್ರಶ್ನೆಗಳು ಮುಂಚೂಣಿಗೆ ಬಂದಿವೆ. ಆದುದರಿಂದ ಸಹಜವಾಗಿಯೇ ಮಹಿಳಾ ಅಧ್ಯಯನದ ಆರಂಭದ ದಿನಗಳಲ್ಲಿ ಬಿಳಿಯ ಮಹಿಳೆಯರ ಪ್ರಶ್ನೆಗಳೇ ಮಹಿಳಾ ಸಂಶೋಧನೆಯ ಪ್ರಶ್ನೆಗಳಾಗಿದ್ದವು (ಫೆಮಿನಿಸ್ಟ್ ಎಂಪಿರಿಸಿಸಂ).

ಆದರೆ ಇದು ಹೆಚ್ಚು ದಿನ ನಡೆಯಲಿಲ್ಲ. ಮಹಿಳೆಯರೆಂದರೆ ಕೇವಲ ಬಿಳಿಯ ಮಹಿಳೆಯರಲ್ಲ, ಅಲ್ಲಿ ಕಪ್ಪು, ಬ್ರೌನ್ ಮುಂತಾದ ಮಹಿಳೆಯರು ಕೂಡ ಇದ್ದಾರೆ. ಅವರ ಪ್ರಶ್ನೆಗಳು ಕೂಡ ಮಹಿಳಾ ಸಂಶೋಧನೆಯ ಪ್ರಶ್ನೆಗಳಾಗಬೇಕೆಂದಾಯಿತು (ವುಮೆನ್ಸ್ ಸ್ಟ್ಯಾಂಡ್ ಪಾಯಿಂಟ್). ನಂತರದ ದಿನಗಳಲ್ಲಿ ಶ್ರೀಮಂತ ದೇಶಗಳ ಮಹಿಳಾ ಪ್ರಶ್ನೆಗಳು ಬಡದೇಶಗಳ ಮಹಿಳಾ ಪ್ರಶ್ನೆಗಳಿಗಿಂತ ಸಂಪೂರ್ಣ ಭಿನ್ನ. ಶ್ರೀಮಂತ ದೇಶಗಳ ಮಹಿಳಾ ಸಮಸ್ಯೆಗಳನ್ನು ಆಧರಿಸಿ ಬೆಳೆದ ಮಹಿಳಾ ಸಂಶೋಧನೆಗಳು ಬಡದೇಶಗಳ ಮಹಿಳೆಯರ ಅನುಭವಗಳನ್ನು ಪ್ರತಿನಿಧೀಕರಿಸುವುದಿಲ್ಲ ಎಂದಾಯಿತು. ಬಡದೇಶಗಳ ಮಹಿಳಾ ಪ್ರಶ್ನೆಗಳನ್ನು ಒಳಗೊಂಡ ಅಧ್ಯಯನಗಳು ಬರಲು ಆರಂಭವಾಯಿತು. ನಮ್ಮಲ್ಲಿ ಮಹಿಳಾ ಅಧ್ಯಯನಕ್ಕೆ ತೊಡಗಿಸಿಕೊಂಡವರು ಮಧ್ಯಮ ವರ್ಗದ ಮೇಲ್‌ಜಾತಿ ಮಹಿಳೆಯರು. ಸಹಜವಾಗಿಯೇ ಅವರು ತಮ್ಮ ಆಸಕ್ತಿಗಳನ್ನೇ ಮಹಿಳಾ ಆಸಕ್ತಿಗಳೆಂದು ಪ್ರತಿಬಿಂಬಿಸುವ ಕೆಲಸವನ್ನು ಮಾಡಿದರು. ಅಲ್ಲಿ ಸಮಾಜದ ಕೆಳಸ್ತರದ ಮಹಿಳೆಯರ ಸ್ಥಿತಿಗತಿಗಳ ಮಾಹಿತಿ ಇಲ್ಲ. ನಂತರದ ದಿನಗಳಲ್ಲಿ ಅದು ಕೂಡ ಪ್ರಶ್ನೆಗೊಂಡಿತು. ಬಡದೇಶಗಳ ಎಲ್ಲ ಮಹಿಳೆಯರ ಸ್ಥಿತಿ ಒಂದೇ ಅಲ್ಲ. ಬಡದೇಶದ ಶ್ರೀಮಂತ ಮತ್ತು ಮಧ್ಯಮ ವರ್ಗದ ಮಹಿಳಾ ಸಮಸ್ಯೆಗಳೇ ಬೇರೆ, ಬಡ ಮಹಿಳೆಯರ ಸಮಸ್ಯೆಗಳೇ ಬೇರೆ. ಬಡದೇಶದ ಬಡಮಹಿಳೆ ಕೇವಲ ಮಹಿಳೆ ಎನ್ನುವ ಕಾರಣಕ್ಕಾಗಿ ಶೋಷಣೆಗೆ ಒಳಪಡುವುದಲ್ಲ. ಜಾತಿ, ಧರ್ಮ, ವರ್ಗ, ಪ್ರದೇಶ, ಭಾಷೆ, ಇತ್ಯಾದಿಗಳೆಲ್ಲ ಅವಳ ಶೋಷಣೆಯನ್ನು ಇನ್ನೂ ಸಂಕೀರ್ಣಗೊಳಿಸಿವೆ. ಆದುದರಿಂದ ಮಹಿಳಾ ಅಧ್ಯಯನಗಳು ಅವಳ ಅನುಭವಗಳನ್ನು ಒಳಗೊಳ್ಳುವುದು ಅತೀ ಅಗತ್ಯ ಎಂದಾಯಿತು (ಆಧುನಿಕೋತ್ತರ ಚಿಂತನೆಗಳು).

ಇಂದಿನ ಸಮಾಜ ಥಿಯರಿಗಳು ಐವತ್ತರ ದಶಕದ ಸಮಾಜ ಥಿಯರಿಗಳಂತೆ ಪಶ್ಚಿಮದ ಅನುಭವ ಆಧಾರಿತ ಅಲ್ಲ. ಪಶ್ಚಿಮೇತರ ಸಮಾಜಗಳ ಅನುಭವ ಇಂದಿನ ಸಮಾಜ ಥಿಯರಿಗಳ ಅಡಿಪಾಯ ಎನ್ನುವ ತಾತ್ಪರ್ಯ ಮೇಲಿನ ವಾದಗಳಲ್ಲಿದೆ. ಆದರೆ ಈ ವಾದವನ್ನು ಒಪ್ಪಲು ಎರಡು ಸಮಸ್ಯೆಗಳಿವೆ. ಒಂದು, ಸುಧಾರಿತ ಸಮಾಜ ಥಿಯರಿಗಳು ರೂಪುಗೊಳ್ಳುವ ವಿಧಾನ. ಎರಡು, ಅಧಿಕಾರ ಮತ್ತು ಥಿಯರಿ ನಡುವಿನ ಸಂಬಂಧ. ಮೊದಲಿಗೆ ಸುಧಾರಿತ ಸಮಾಜ ಥಿಯರಿಗಳು ರೂಪುಗೊಳ್ಳುವ ಬಗೆಯನ್ನು ಅರ್ಥ ಮಾಡಿಕೊಳ್ಳಬಹುದು. ಸ್ಥೂಲವಾಗಿ ಮೂರು ವಿಧಾನಗಳಲ್ಲಿ ಯೂನಿವರ್ಸಲ್ ರೂಪಿತಗೊಳ್ಳಬಹುದು. ಒಂದು, ಯಾವುದೋ ಒಂದು ಅಥವಾ ಕೆಲವು ಸಮಾಜದ ಅಥವಾ ಸಂಸ್ಕೃತಿಯ ಅನುಭವಗಳು ಯೂನಿವರ್ಸಾಲಿಟಿಯನ್ನು ಪ್ರತಿಪಾದಿಸುವ ಥಿಯರಿಗೆ ಸಾಮಗ್ರಿ ಒದಗಿಸುವುದು. ಎರಡು, ಯೂನಿವರ್ಸಲ್‌ನ ವ್ಯಾಪ್ತಿಯಲ್ಲಿ ಬರುವ ಎಲ್ಲ ಬಿಡಿ ಭಾಗಗಳು ತಮ್ಮ ನಿರ್ದಿಷ್ಟತೆಯನ್ನು ಸಂಗ್ರಹಿಸಿ ಯೂನಿವರ್ಸಲನ್ನು ರೂಪಿಸಿಕೊಳ್ಳುವುದು. ಮೂರು, ಮೇಲಿನ ಎರಡರ ಮಿಶ್ರಣ; ಅಂದರೆ ಕೆಲವು ಸಮಾಜಗಳ ಕೊಡುಗೆಗಳ ಜತೆಗೆ ಇತರ

ಸಮಾಜಗಳು ಕೂಡ ತಮ್ಮ ಅಂಶವನ್ನು ಸೇರಿಸಿ ಯೂನಿವರ್ಸಲನ್ನು ರೂಪಿಸಿಕೊಳ್ಳುವುದು. ಹೀಗೆ ಹಲವಾರು ವಿಧಗಳಿಂದ ಯೂನಿವರ್ಸಲ್ ರೂಪಿತಗೊಳ್ಳಬಹುದು.

ಯೂನಿವರ್ಸಾಲಿಟಿ

ಯೂನಿವರ್ಸಲ್ ಪರ್ಟಿಕ್ಯುಲರ್ ಅಂಶಗಳಿಂದ ರೂಪಿತವಾಗಿದ್ದರೆ ಯೂನಿವರ್ಸಲ್ ಕಡೆಗೆ ಹೋಗುವುದು ಸಮಸ್ಯೆ ಅಲ್ಲ. ಆದರೆ ಸುಧಾರಿತ ಸಮಾಜ ಥಿಯರಿಗಳು ಕೂಡ ಪ್ರಪಂಚದ ಎಲ್ಲ ಸಮಾಜಗಳ ಅನುಭವಗಳನ್ನು ಆಧರಿಸಿ ರೂಪುಗೊಂಡಿವೆ ಎನ್ನಲಾಗುವುದಿಲ್ಲ. ಈ ಸಂದೇಹಕ್ಕೆ ಕೆಲವೊಂದು ಕಾರಣಗಳನ್ನು ನೀಡಬಹುದು. ಇಂದು ಕೂಡ ಬಡ ಸಾಮಾಜಿಕ ವ್ಯವಸ್ಥೆಗಳ ಬಹುತೇಕ ಸಮಾಜ ಸಂಶೋಧಕರ ಕೆಲಸ ಶ್ರೀಮಂತ ದೇಶಗಳ ಸಮಾಜವಿಜ್ಞಾನಿಗಳು ನೇಯುವ ಸಮಾಜ ಥಿಯರಿಗಳಿಗೆ ಅಂಕಿಅಂಶಗಳನ್ನು ಪೂರೈಕೆ ಮಾಡುವುದು. ಜತೆಗೆ ತೃತೀಯ ಜಗತ್ತಿನ ಸಾಮಾಜಿಕ ಸಂಗತಿಗಳು ಯಜಮಾನಿಕೆಯಲ್ಲಿರುವ ಸಮಾಜ ಥಿಯರಿಗಳನ್ನು ಪರೀಕ್ಷಿಸುವುದಕ್ಕೆ ಸೀಮಿತವಾಗಿವೆ. ಇಂದು ಕೂಡ ಸಮಾಜ ಸಂಶೋಧನೆಯಲ್ಲಿ ಡಿಡಕ್ಟೀವ್ ಮತ್ತು ಇಂಡಕ್ಟೀವ್ ವಿಧಾನಗಳು ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿವೆ. ಡಿಡಕ್ಟೀವ್ ವಿಧಾನದಿಂದ ಹೈಪಾಥೀಸಿಸ್‌ಗಳನ್ನು ರೂಪಿಸಿ ಅವುಗಳನ್ನು ತೃತೀಯ ಜಗತ್ತಿನ ಸಾಮಾಜಿಕ ಸಂಗತಿಗಳೊಂದಿಗೆ ಹೋಲಿಸಿ ಇಲ್ಲಿನ ವಾಸ್ತವತೆ ಥಿಯರಿ ಕಟ್ಟಿಕೊಡುವ ವಾಸ್ತವತೆಗಿಂತ ಎಷ್ಟು ದೂರ ಅಥವಾ ಎಷ್ಟು ಹತ್ತಿರ ಇದೆ ಎನ್ನುವ ತೀರ್ಮಾನಕ್ಕೆ ಬರಲಾಗುತ್ತದೆ. ಒಂದು ವೇಳೆ ಇಂಡಕ್ಟೀವ್ ವಿಧಾನದಿಂದ ಎಂಪಿರಿಕಲ್ ಎವಿಡೆನ್ಸ್ ಸಂಗ್ರಹಿಸಿ ಜನರಲೈಸ್ ಮಾಡಲು ಪ್ರಯತ್ನಿಸಿದರೆ ಅದನ್ನು ಈಗಾಗಲೇ ಯಜಮಾನಿಕೆಯಲ್ಲಿರುವ ಥಿಯರಿಗಳೊಂದಿಗೆ ಇಟ್ಟು ಪರೀಕ್ಷಿಸಬೇಕಾಗುತ್ತದೆ. ಅಂದರೆ ಇಂಡಕ್ಟೀವ್ ವಿಧಾನದಿಂದ ಕಂಡುಕೊಂಡ ವಾಸ್ತವತೆ ಈಗಾಗಲೇ ಯಜಮಾನಿಕೆಯಲ್ಲಿರುವ ಥಿಯರಿ ಹೇಳುವ ವಾಸ್ತವತೆಗಳಿಗೆ ಹತ್ತಿರ ಇದೆಯೇ ಅಥವಾ ದೂರ ಇದೆಯೇ ಎಂದು ತೋರಿಸಬೇಕಾಗುತ್ತದೆ.

ಎರಡೂ ವಿಧಾನದಲ್ಲೂ ಯಜಮಾನಿಕೆಯಲ್ಲಿರುವ ಥಿಯರಿ ಕಡೆಗೆ ಹೋಗುವ ಪ್ರಯತ್ನ. ಇದು ಹೇಗೆಂದರೆ ಥಿಯರಿ ಹೇಳಿದ ರೀತಿಯಲ್ಲಿ ಬಡಸಮಾಜಗಳು ಇಲ್ಲದಿದ್ದರೆ ಥಿಯರಿ ಬದಲಾಗುವುದಿಲ್ಲ. ಅದರ ಬದಲು ಸಮಾಜ ಬದಲಾಗಬೇಕೆನ್ನುವ ತೀರ್ಮಾನಗಳೇ ಹೆಚ್ಚಿವೆ. ಆದುದರಿಂದ ಸುಧಾರಿತ ಸಮಾಜ ಥಿಯರಿಗಳು ನಿಜವಾದ ಅರ್ಥದಲ್ಲಿ ಅಂಚಿನಲ್ಲಿರುವ ಸಮಾಜಗಳ ಅನುಭವ ಆಧರಿತ ಅಲ್ಲ. ಬಲಾಢ್ಯ ಸಮಾಜಗಳು ತಮ್ಮ ಯಜಮಾನಿಕೆಯನ್ನು ಮುಂದುವರಿಸಲು ಅಂಚಿನಲ್ಲಿರುವ ಸಾಮಾಜಿಕ ವಾಸ್ತವತೆಗಳನ್ನು ತಮ್ಮ ಆಸಕ್ತಿಗಳಿಗೆ ಧಕ್ಕೆಯಾಗದ ರೀತಿಯಲ್ಲಿ ಒಳಗೊಳಿಸುವ ಪ್ರಯತ್ನ ಇದು. ಈ ಸುಧಾರಿತ ರೂಪ ಹಿಂದಿನ ಕೆಟ್ಟ ಯುರೋ ಸೆಂಟ್ರಿಸಂಗಿಂತಲೂ ಅಪಾಯಕಾರಿಯಾಗಬಹುದು. ಇಂದು ಕೂಡ ಪಶ್ಚಿಮ ಸಮಾಜ ಜ್ಞಾನ ಯಜಮಾನಿಕೆ ನಡೆಸುತ್ತಿದೆ ಎನ್ನುವ ಅಂಶವನ್ನು ಸಮರ್ಥಿಸುವ ಸಾಕಷ್ಟು ಪುರಾವೆಗಳಿವೆ. ಪ್ರಪಂಚದಲ್ಲಿ ಇಂದು ಪ್ರಕಟವಾಗುವ ಸಮಾಜ ವಿಜ್ಞಾನ ಪುಸ್ತಕ ಮತ್ತು ಪತ್ರಿಕೆಗಳಲ್ಲಿ ಶೇಕಡಾ ೩೫ರಷ್ಟು ಅಮೇರಿಕಾದಲ್ಲಿ ಮತ್ತು ಶೇಕಡಾ ೬೧ರಷ್ಟು ಪಶ್ಚಿಮ ಯುರೋಪಿನ ದೇಶಗಳಲ್ಲಿ ಪ್ರಕಟವಾಗುತ್ತಿವೆ. ಅತೀ ಹೆಚ್ಚಿನ ಜನಸಂಖ್ಯೆ ಮತ್ತು ತುಂಬಾ ಸಂಕೀರ್ಣ ಸಾಮಾಜಿಕ ಸಂಬಂಧಗಳು, ಸಂಸ್ಥೆಗಳು ಮತ್ತು ಮೌಲ್ಯಗಳನ್ನು ಹೊಂದಿರುವ ಆಫ್ರಿಕಾ ಮತ್ತು ದಕ್ಷಿಣ ಏಶಿಯಾದಲ್ಲಿ ಅತ್ಯಲ್ಪ (ಶೇಕಡಾ ೫) ಸಮಾಜ ವಿಜ್ಞಾನ ಪುಸ್ತಕ ಮತ್ತು ಪತ್ರಿಕೆಗಳು ಪ್ರಕಟವಾಗುತ್ತಿವೆ. ಪ್ರಕಟವಾಗುವ ಪುಸ್ತಕ ಮತ್ತು ಪತ್ರಿಕೆಗಳಲ್ಲಿ

ಶೇಕಡಾ ತೊಂಬತ್ತರಷ್ಟು ಇಂಗ್ಲೀಷ್ (೭೬%), ಫ್ರೆಂಚ್ (೭%) ಮತ್ತು ಜರ್ಮನ್ (೭%) ಭಾಷೆಗಳಲ್ಲಿವೆ.

ಈ ಮೂರು ಭಾಷೆಗಳನ್ನು ಹೊರತುಪಡಿಸಿದ ರಾಷ್ಟ್ರೀಯ ಭಾಷೆಗಳನ್ನು ಹೊಂದಿರುವ ದೇಶಗಳು ಹೆಚ್ಚುಕಡಿಮೆ ಶೇಕಡಾ ತೊಂಬತ್ತರಷ್ಟಿವೆ. ಆದಾಗ್ಯೂ ಅವುಗಳು ಶೇಕಡಾ ಹತ್ತರಷ್ಟು ಸಮಾಜ ಜ್ಞಾನ ಉತ್ಪಾದಿಸುತ್ತಿಲ್ಲ. ಅತ್ಯಂತ ಪ್ರಾಚೀನ ಸಂಸ್ಕೃತಿಯನ್ನು ಹೊಂದಿದ ದೇಶಗಳು (ಭಾರತ, ಚೀನಾ, ಆಫ್ರಿಕಾ ಮುಂತಾದವು) ಕನಿಷ್ಠ ಪ್ರಮಾಣದ ಸಮಾಜ ಜ್ಞಾನವನ್ನೂ ಉತ್ಪಾದಿಸುತ್ತಿಲ್ಲ. ಅಷ್ಟುಮಾತ್ರವಲ್ಲ ಇವರು ಉತ್ಪಾದಿಸುವ ಕನಿಷ್ಠ ಪ್ರಮಾಣದ ಜ್ಞಾನವನ್ನು ಕೂಡ ಅಮೇರಿಕಾ ಮತ್ತು ಪಶ್ಚಿಮ ಯುರೋಪಿನ ವಿದ್ವಾಂಸರುಗಳು ಗಂಭೀರವಾಗಿ ಪರಿಗಣಿಸುವುದಿಲ್ಲ. ಆದರೆ ನಮ್ಮವರು ಮಾತ್ರ ಅಮೇರಿಕಾ ಮತ್ತು ಪಶ್ಚಿಮ ಯುರೋಪಿನ ವಿದ್ವಾಂಸರು ಸೃಷ್ಟಿಸುವ ಜ್ಞಾನವನ್ನು ಉಲ್ಲೇಖಿಸದೆ ಮುಂದುವರಿಯುವುದಿಲ್ಲ. ಇದನ್ನೇ ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಅಮೇರಿಕಾ ಮತ್ತು ಪಶ್ಚಿಮ ಯುರೋಪಿನ ವಿದ್ವಾಂಸರು ಸೃಷ್ಟಿಸಿದ ಸಿದ್ಧಾಂತಗಳನ್ನು ತಿಳಿದುಕೊಳ್ಳದವರನ್ನು ನಮ್ಮ ಉನ್ನತ ಶಿಕ್ಷಣ ವಲಯದಲ್ಲಿ ವಿದ್ವಾಂಸರೆಂದು ಪರಿಗಣಿಸುವುದೇ ಇಲ್ಲ. ಸಮಾಜ ಜ್ಞಾನದ ಉತ್ಪಾದನೆ ಕೆಲವೇ ಕೆಲವು ಇಂಗ್ಲೀಷ್ ಭಾಷೆಯ ಸಮಾಜಗಳಿಗೆ ಸೀಮಿತವಾಗಿದೆ. ಇದು ಸಮಾಜ ಜ್ಞಾನದ ಭಾಷೆಯನ್ನು ಪ್ರಭಾವಿಸಿದೆ. ಸಮಾಜ ಜ್ಞಾನ ಇಂಗ್ಲೀಷ್ ಭಾಷೆಯಲ್ಲಿರುವುದು ಅನಿವಾರ್ಯ ಎನ್ನುವ ಸ್ಥಿತಿ ನಿರ್ಮಾಣವಾಗಿದೆ.

ಈಸ್ಟ್ ವರ್ಸಸ್ ವೆಸ್ಟ್

ಬಹುತೇಕರು ಸಮಾಜ ವಿಜ್ಞಾನದ ಈ ಸಮಸ್ಯೆಗಳನ್ನು ಈಸ್ಟ್ ವರ್ಸಸ್ ವೆಸ್ಟ್ ಪ್ರಶ್ನೆಯಾಗಿಸಿರುವುದನ್ನು ಮೇಲಿನ ವಿವರಣೆಗಳಿಂದ ಅರ್ಥಮಾಡಿಕೊಳ್ಳಬಹುದು. ಇದು ಕೇವಲ ಈಸ್ಟ್ ವರ್ಸಸ್ ವೆಸ್ಟ್ ಪ್ರಶ್ನೆ ಅಲ್ಲ. ಬಹುಮುಖ್ಯವಾಗಿ ಇದೊಂದು ಅಧಿಕಾರದ (ರಾಜಕೀಯ, ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಅಧಿಕಾರಗಳ) ಡಿಸ್ಟ್ರಿಬ್ಯುಶನ್ ಪ್ರಶ್ನೆ. ಈ ಎಲ್ಲ ಕ್ಷೇತ್ರಗಳಲ್ಲೂ ಅಧಿಕಾರ ಕೆಲವೇ ಕೆಲವರ ಸ್ವಾಧೀನದಲ್ಲಿ ಮಡುಗಟ್ಟಿರುವುದರ ಲಕ್ಷಣ ಇದು. ಥಿಯರಿಯೊಂದು ಅದರ ಸ್ವಂತ ಬಲದಿಂದ ಅಥವಾ ಜಗತ್ತಿನ ಎಲ್ಲ ಸಮಾಜಗಳನ್ನು ವಿವರಿಸುವ ಅದರ ಸಾಮರ್ಥ್ಯದಿಂದ ಯೂನಿವರ್ಸಲ್ ಆನ್ವಯಿಕೆಯುಳ್ಳ ಥಿಯರಿಯಾಗುತ್ತದೆ ಅಥವಾ ಪ್ರಪಂಚದ ಎಲ್ಲ ಸಮಾಜಗಳನ್ನು ವಿವರಿಸುವ ಶಕ್ತಿಯನ್ನು ಪಡೆಯುತ್ತದೆ ಎನ್ನುವ ಒಂದು ಮುಗ್ಧ ತಿಳುವಳಿಕೆ ನಮ್ಮ ಪ್ರಜ್ಞೆಯ ಭಾಗವಾಗಿದೆ. ಆದರೆ ಈ ತಿಳುವಳಿಕೆ ಎಷ್ಟು ಸರಿ? ಥಿಯರಿಯಲ್ಲಿ ಅಂತರ್ಗತವಾಗಿರುವ ಸಾಮರ್ಥ್ಯದಿಂದಲೇ ಥಿಯರಿಯೊಂದು ಯೂನಿವರ್ಸಲ್ ಆನ್ವಯಿಕೆಯ ಸ್ಥಾನಕ್ಕೆ ಏರುತ್ತದೆಯೇ? ಥಿಯರಿಯನ್ನು ಕಟ್ಟಿಕೊಡುವ ಸಮಾಜದ ಅಧಿಕಾರ ಸ್ಥಾನಮಾನ ಥಿಯರಿಯ ಸ್ಥಾನಮಾನವನ್ನು ಪ್ರಭಾವಿಸುವುದಿಲ್ಲವೇ? ಇತ್ಯಾದಿ ಪ್ರಶ್ನೆಗಳಿಗೆ ಉತ್ತರ ಕಂಡುಕೊಂಡರೆ ಥಿಯರಿ ಮತ್ತು ಅಧಿಕಾರ ಸಂಬಂಧಗಳು ಸ್ಪಷ್ಟವಾಗಬಹುದು.

ಯಾವುದು ಚರಿತ್ರೆ ಆಗುತ್ತದೆ ಯಾವುದು ಚರಿತ್ರೆ ಆಗುವುದಿಲ್ಲ ಎನ್ನುವ ವಿಶ್ಲೇಷಣೆ ಥಿಯರಿ ಮತ್ತು ಅಧಿಕಾರದ ನಡುವಿನ ಸಂಬಂಧವನ್ನು ಅರ್ಥ ಮಾಡಿಕೊಳ್ಳಲು ಸಹಕಾರಿಯಾಗಬಹುದು. ಚರಿತ್ರೆ ಅಂದರೆ ಭೂತಕಾಲದಲ್ಲಿ ನಡೆದಿದೆ ಎನ್ನುವುದರ ಒಂದು ವಿವರಣೆ. ಹಾಗೆಂದು ಭೂತಕಾಲದಲ್ಲಿ ನಡೆದುದೆಲ್ಲ ಚರಿತ್ರೆ ಆಗುತ್ತದೆಯೇ? ಭೂತಕಾಲದ ಎಲ್ಲ ಸಂಗತಿಗಳು ಚರಿತ್ರೆ ಆಗುವುದಿಲ್ಲ. ಕೆಲವು ಸಂಗತಿಗಳು ದಾಖಲಾಗುತ್ತವೆ; ಇನ್ನು ಕೆಲವು ದಾಖಲಾಗುವುದಿಲ್ಲ. ಏಕೆ ಹೀಗಾಗುತ್ತದೆ? ಇದಕ್ಕೆ ಬಹುಮುಖ್ಯ ಕಾರಣ ಆಯಾಯ

ಸಂದರ್ಭದ ಅಧಿಕಾರ ಸಂಬಂಧಗಳು. ಯಾವುದು ದಾಖಲಾಗಬೇಕು ಎನ್ನುವುದನ್ನು ಅಧಿಕಾರ ನಿರ್ಧರಿಸುತ್ತದೆ. ನಾವು ಚರಿತ್ರೆ ಎಂದು ಓದಿಕೊಂಡು ಬಂದಿರುವುದರಲ್ಲಿ ರಾಜಮಹಾರಾಜರ ಕಥನ ಬಿಟ್ಟರೆ ಬೇರೆ ಯಾರೂ ಕಾಣುವುದೇ ಇಲ್ಲ. ಇದಕ್ಕೆ ಕಾರಣ ಆ ಚರಿತ್ರೆಯನ್ನು ಬರೆಸಿದವರು ರಾಜ ಮಹಾರಾಜರೇ. ಪ್ರಜಾಪ್ರಭುತ್ವ ಬರುವುದರೊಂದಿಗೆ ಅಧಿಕಾರ ಸಂಬಂಧಗಳು ಬದಲಾವಣೆ ಆಗಿವೆ. ಪ್ರತಿಯೊಬ್ಬ ವ್ಯಕ್ತಿ ಕೂಡ (ತಾತ್ವಿಕವಾಗಿ) ಪ್ರಜಾಪ್ರಭುತ್ವದಲ್ಲಿ ಅಧಿಕಾರವನ್ನು ಯಾವುದೋ ಒಂದು ಬಗೆಯಲ್ಲಿ ಪ್ರಭಾವಿಸಲು ಶಕ್ತ ಎನ್ನುವ ಗೃಹೀತವಿದೆ. ಆ ಕಾರಣಕ್ಕಾಗಿ ಇಂದು ಹಲವು ಚರಿತ್ರೆಗಳು ರೂಪುಗೊಳ್ಳಲು ಆರಂಭವಾಗಿವೆ – ದಲಿತ ಚರಿತ್ರೆ, ಮಹಿಳಾ ಚರಿತ್ರೆ ಇತ್ಯಾದಿಗಳು. ಹೀಗೆ ಅಧಿಕಾರ ಸಂಬಂಧಗಳು ಯಾವುದು ಮಹತ್ವ ಯಾವುದು ಮಹತ್ವ ಅಲ್ಲ ಎನ್ನುವುದನ್ನು ತೀರ್ಮಾನಿಸುತ್ತವೆ. ಅಂತಾರಾಷ್ಟ್ರೀಯ ಅಧಿಕಾರ ಸಂಬಂಧಗಳು ಅಂತಾರಾಷ್ಟ್ರೀಯ ಮಟ್ಟದಲ್ಲಿ ಯಾವುದು ಮಹತ್ವ ಅಲ್ಲ ಯಾವುದು ಮಹತ್ವ ಎನ್ನುವುದನ್ನು ತೀರ್ಮಾನಿಸುತ್ತವೆ.

ಅಂತಾರಾಷ್ಟ್ರೀಯ ವ್ಯವಸ್ಥೆಯ ಸಂಕ್ಷಿಪ್ತ ಪರಿಚಯ ಅಂತಾರಾಷ್ಟ್ರೀಯ ಅಧಿಕಾರ ಸಂಬಂಧಗಳನ್ನು ಅರ್ಥ ಮಾಡಿಕೊಳ್ಳಲು ಅಗತ್ಯ. ಹಲವಾರು ದೇಶಗಳ ಸಮುದಾಯವೇ ಅಂತಾರಾಷ್ಟ್ರೀಯ ವ್ಯವಸ್ಥೆ. ಅಂತಾರಾಷ್ಟ್ರೀಯ ಸಂಬಂಧಗಳನ್ನು ಮತ್ತು ವ್ಯವಹಾರಗಳನ್ನು ನಿರ್ವಹಿಸಲು ಹಲವಾರು ಸಂಸ್ಥೆಗಳಿವೆ. ಇವುಗಳಲ್ಲಿ ತಾಂತ್ರಿಕವಾಗಿ ಎಲ್ಲ ದೇಶಗಳ ಪ್ರತಿನಿಧಿತ್ವ ಇದೆ. ಆದರೆ ಕಾರ್ಯರೂಪದಲ್ಲಿ ಶ್ರೀಮಂತ ದೇಶಗಳು ಮಾತ್ರ ಈ ಸಂಸ್ಥೆಗಳನ್ನು ಸಂಪೂರ್ಣವಾಗಿ ಆವರಿಸಿಕೊಂಡಿವೆ. ಆದುದರಿಂದ ಇಲ್ಲಿನ ನಿರ್ಣಯಗಳು ಶ್ರೀಮಂತ ದೇಶಗಳ ಆಸಕ್ತಿಗಳಿಗೆ ಪೂರಕವಾಗಿಯೇ ಇರಬೇಕಾದ ಅನಿವಾರ್ಯತೆ ಹಿಂದಿನಿಂದಲೂ ಇದೆ. ಶ್ರೀಮಂತ ದೇಶಗಳು ತಮ್ಮ ಆಸಕ್ತಿಗಳನ್ನು ಕಾಪಾಡಲು ವಿವಿಧ ಮಾರ್ಗಗಳನ್ನು ಅನುಸರಿಸುತ್ತಿವೆ. ತಮ್ಮ ಆಸಕ್ತಿಗಳನ್ನು ಕಾಪಾಡಲು ಐವತ್ತರ ದಶಕದಲ್ಲಿ ಅನುಸರಿಸಿದ ಮಾರ್ಗವನ್ನು ನೋಡೋಣ. ಐವತ್ತರ ದಶಕದಲ್ಲಿ ಅಮೆರಿಕ ಮತ್ತು ರಷ್ಯಾ ಎರಡೂ ಪರಸ್ಪರ ವಿರುದ್ಧ ಧೋರಣೆಗಳನ್ನು ಅನುಸರಿಸುತ್ತಿದ್ದ ಬಲಿಷ್ಠ ರಾಷ್ಟ್ರಗಳಾಗಿದ್ದವು. ಒಂದು ಲಿಬರಲಿಸಂ ಮತ್ತು ಮುಕ್ತ ಮಾರುಕಟ್ಟೆ ಆಧರಿತ ಅಭಿವೃದ್ಧಿ ಮಾದರಿಯನ್ನು ಪ್ರಚಾರ ಪಡಿಸಿದರೆ ಮತ್ತೊಂದು ಕಮ್ಯುನಿಸಂ ಮತ್ತು ಯೋಜಿತ ಅಥವಾ ಪ್ರಭುತ್ವ ನೇತೃತ್ವದ ಅಭಿವೃದ್ಧಿ ಮಾದರಿಯನ್ನು ಪ್ರತಿಪಾದಿಸುತ್ತಿತ್ತು. ಅಂತರಾಷ್ಟ್ರೀಯ ವ್ಯವಸ್ಥೆಯಲ್ಲಿ ತಮ್ಮ ಪ್ರಭಾವವನ್ನು ಹೆಚ್ಚಿಸಿಕೊಳ್ಳಬೇಕಾದರೆ ತಮ್ಮ ಮಾದರಿಗಳನ್ನು ಅನುಸರಿಸುವ ದೇಶಗಳ ಸಂಖ್ಯೆಯನ್ನು ಹೆಚ್ಚಿಸಿಕೊಳ್ಳುವ ಅಗತ್ಯ ಇತ್ತು. ಬಲ ಪ್ರಯೋಗದಿಂದ ತಮ್ಮ ತಮ್ಮ ಮಾದರಿಗಳನ್ನು ಇತರ ದೇಶಗಳ ಮೇಲೆ ಹೇರುವ ಸ್ಥಿತಿಯಲ್ಲಿ ಎರಡೂ ದೇಶಗಳು ಇರಲಿಲ್ಲ. ತಮ್ಮ ತಮ್ಮ ಮಾದರಿಗಳನ್ನು ವಿಶ್ವಮಾದರಿಗಳನ್ನಾಗಿಸಲು ಇತರ ಮಾರ್ಗಗಳನ್ನು ಅನುಸರಿಸುವುದು ಅನಿವಾರ್ಯವಾಯಿತು. ಅವುಗಳಲ್ಲಿ ಸಮಾಜ ಸಂಶೋಧನೆ ಅಥವಾ ಯೂನಿವರ್ಸಲ್ ಥಿಯರಿ ಕೂಡ ಒಂದು.

ಎರಿಕ್ ಹಾಬ್ಸ್‌ವಾಮ್‌ನಂತಹ ಚರಿತ್ರಕಾರರು ರಷ್ಯಾದ ಮಾದರಿ ಕುರಿತಂತೆ 'ಹಲವಾರು ಇತಿಮಿತಿಗಳ ನಡುವೆಯೂ (ಸಾಮೂಹಿಕ ಕೃಷಿಯಲ್ಲಿನ ಬಲಾತ್ಕಾರ, ಬೃಹತ್ ಯೋಜನೆಗಳು ಬಯಸುವ ನರಬಲಿ ಇತ್ಯಾದಿಗಳ ನಡುವೆಯೂ) ಅತಿ ಕಡಿಮೆ ಅವಧಿಯಲ್ಲಿ ಯೋಜಿತ ಅಭಿವೃದ್ಧಿಯಿಂದ ಗಣನೀಯ ಪ್ರಮಾಣದ ಸಾಮಾಜಿಕ ಹಾಗೂ ಆರ್ಥಿಕ ಪರಿವರ್ತನೆ ಸಾಧ್ಯವಾಯಿತೆಂದು ಅಭಿಪ್ರಾಯಪಡುತ್ತಾನೆ. ಹೊಸ ಸಮಾಜ ಸೃಷ್ಟಿಸ ಹೊರಟ ನವರಾಷ್ಟ್ರಗಳಿಗೆ ಈ ಮಾದರಿ ತುಂಬಾ ಆಕರ್ಷಣೀಯವಾಗಿತ್ತು. ಇದಕ್ಕಾಗಿಯೇ ಡಬ್ಲ್ಯು.

ಡಬ್ಲ್ಯು. ರಸ್ತೋ ರಷ್ಯಾದ ಯೋಜಿತ ಅಭಿವೃದ್ಧಿಯ ಮಾದರಿಯನ್ನು "ಪರಿವರ್ತನೆಯ ರೋಗ" ಎಂದು ಕರೆದಿದ್ದ ಮತ್ತು ಆರ್ಥಿಕ ಅಭಿವೃದ್ಧಿ ಮೇಲಿನ ತನ್ನ ಪುಸ್ತಕವನ್ನು "ಎ ನಾನ್ ಕಮ್ಯುನಿಸ್ಟ್ ಮೆನಿಫೆಸ್ಟೋ" ಎಂದು ಹೆಸರಿಸಿದ್ದ. ರಸ್ತೋನ ಪುಸ್ತಕ ಬಿಡುಗಡೆಯಾದ ಎಂಟು ವರ್ಷಗಳ ನಂತರ ಸ್ಯಾಮ್‌ವೆಲ್ ಹಟ್ಟಿಂಗ್‌ಟನ್, 'ಅಭಿವೃದ್ಧಿಯ ಬದಲೀ ಮಾದರಿಯೊಂದನ್ನು ಕೊಡದಿದ್ದರೆ ಪಶ್ಚಿಮದ ರಾಷ್ಟ್ರಗಳು ತೃತೀಯ ಜಗತ್ತಿನಲ್ಲಿ ಲೆನಿನಿಸಂನೊಂದಿಗೆ ಸ್ಪರ್ಧಿಸುವುದು ಕಷ್ಟವಾಗಬಹುದು' ಎಂದು ಎಚ್ಚರಿಸಿದ್ದಾನೆ. ಹೀಗೆ ಪ್ರಪಂಚದ ಎರಡು ಬಲಿಷ್ಠ ರಾಷ್ಟ್ರಗಳು (ಅಮೆರಿಕ ಮತ್ತು ರಷ್ಯಾ) ತಮ್ಮ ಅಭಿವೃದ್ಧಿ ಮಾದರಿಗಳನ್ನು ಪ್ರಪಂಚದ ಇತರ ರಾಷ್ಟ್ರಗಳ ಮುಂದಿಟ್ಟವು.

ಆಗ ತಾನೇ ಸ್ವತಂತ್ರಗೊಂಡ ರಾಷ್ಟ್ರಗಳಿಗೆ ಹಲವಾರು ಇತಿಮಿತಿಗಳಿದ್ದವು. ಅವು ಎಲ್ಲ ಕ್ಷೇತ್ರಗಳಲ್ಲೂ ಬಲಹೀನವಾಗಿದ್ದವು. ಅಂತಾರಾಷ್ಟ್ರೀಯ ಪ್ರಭಾವದಿಂದ ಬಿಡಿಸಿಕೊಂಡು ತಮ್ಮದೇ ಮಾದರಿಯನ್ನು ರೂಪಿಸಿಕೊಂಡು ಪ್ರತ್ಯೇಕವಾಗಿ ಇರುವ ಸಾಧ್ಯತೆ ಇರಲಿಲ್ಲ. ಯಾವುದೋ ಒಂದು ಬಲದೊಂದಿಗೆ ಗುರುತಿಸಿಕೊಳ್ಳುವುದು ಎಲ್ಲರಿಗೂ ಅನಿವಾರ್ಯವಾಗಿತ್ತು. ಒಂದೋ ಅಮೇರಿಕದ ಮುಕ್ತ ಮಾರುಕಟ್ಟೆ ಮಾದರಿಯನ್ನು ಅನುಸರಿಸುವುದು ಅಥವಾ ರಷ್ಯಾದ ಯೋಜಿತ ಅಭಿವೃದ್ಧಿ ಮಾದರಿಯನ್ನು ಅನುಸರಿಸುವುದು ಅಥವಾ ಈ ಎರಡರ ಮಿಶ್ರಣವನ್ನು ಪ್ರಯೋಗಿಸುವುದು ಅವುಗಳ ಮುಂದಿದ್ದ ದಾರಿ. ನಾವು (ಭಾರತ) ಎರಡರ ಮಿಶ್ರಣವನ್ನು ಒಪ್ಪಿಕೊಂಡೆವು. ಈ ಚಾರಿತ್ರಿಕ ಕಾರಣಗಳಿಂದ ಪಶ್ಚಿಮದ ಥಿಯರಿಗಳು ಪ್ರಪಂಚದ ಬಹುತೇಕ ರಾಷ್ಟ್ರಗಳಲ್ಲಿ ನೆಲೆಯೂರಲು ಸಾಧ್ಯವಾಯಿತು. ಹೀಗೆ ಸಮಾಜ ಥಿಯರಿಗಳಲ್ಲಿ ಯೂನಿವರ್ಸಾಲಿಟಿ ನೆಲೆ ಕಂಡುಕೊಳ್ಳುವಲ್ಲಿ ವಿಜ್ಞಾನದ ವಿಧಾನದ ಪ್ರಭಾವದ ಜತೆಗೆ ಶ್ರೀಮಂತ ರಾಷ್ಟ್ರಗಳ ಬಲದ (ಆರ್ಥಿಕ, ರಾಜಕೀಯ, ಮಿಲಿಟರಿ ಬಲಗಳು) ಪಾತ್ರವೂ ಇದೆ. ಈಗಲೂ ಅಂತಾರಾಷ್ಟ್ರೀಯ ಅಧಿಕಾರ ಸಂಬಂಧಗಳು ಕೆಲವೇ ಕೆಲವು ಶ್ರೀಮಂತ ದೇಶಗಳ ಆಸಕ್ತಿಗಳಿಗನುಗುಣವಾಗಿ ತೀರ್ಮಾನಗೊಳ್ಳುತ್ತಿವೆ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಅಂತಾರಾಷ್ಟ್ರೀಯ ಅಧಿಕಾರ ಸಂಬಂಧಗಳಲ್ಲಿ ಇಂದು ಕೂಡ ಪ್ರಜಾಪ್ರಭುತ್ವದ ಗಂಧ ಗಾಳಿಯೂ ಇಲ್ಲ.

ಅಂತಾರಾಷ್ಟ್ರೀಯ ಸಂಬಂಧಗಳನ್ನು ನಿರ್ಧರಿಸುವ ಹಲವಾರು ಸಂಸ್ಥೆಗಳು (ವರ್ಲ್ಡ್ ಬ್ಯಾಂಕ್, ಅಂತಾರಾಷ್ಟ್ರೀಯ ಹಣಕಾಸು ಸಂಸ್ಥೆ, ಯುಎನ್‌ಓ ಇತ್ಯಾದಿಗಳು) ಶ್ರೀಮಂತ ರಾಷ್ಟ್ರಗಳ ಆಸಕ್ತಿಗಳಿಗೆ ಪೂರಕವಾಗಿ ಕೆಲಸ ಮಾಡುತ್ತಿವೆ. ಅಲ್ಲಿ ಬಡ ದೇಶಗಳಿಗೆ ಪ್ರತಿನಿಧೀಕರಣ ಇದೆ. ಆದರೆ ಅದೊಂದು ರೀತಿಯ ಆಟಕ್ಕುಂಟು ಲೆಕ್ಕಕ್ಕಿಲ್ಲ ಎನ್ನುವ ಪ್ರತಿನಿಧಿತ್ವ. ಆದುದರಿಂದ ಇಂದು ಕೂಡ ಪಶ್ಚಿಮದ ಶ್ರೀಮಂತ ದೇಶಗಳು ಸಮಾಜವಿಜ್ಞಾನಗಳ ದಿಕ್ಕು ದಿಶೆಗಳನ್ನು ನಿರ್ಧರಿಸುವಲ್ಲಿ ಮಹತ್ತರವಾದ ಪಾತ್ರ ವಹಿಸುತ್ತಿವೆ. ಇದಕ್ಕೆ ಉತ್ತಮ ಉದಾಹರಣೆಗಳೆಂದರೆ ಇತ್ತೀಚಿನ ದಿನಗಳಲ್ಲಿ ಪ್ರಪಂಚದ ಎಲ್ಲ ಕಡೆಗಳಲ್ಲೂ ಆಚರಣೆಯಲ್ಲಿರುವ ಉದಾರೀಕರಣದ ನೀತಿ. ಉದಾರೀಕರಣ ಪರ ವಾದಗಳು ಈ ಕೆಳಗಿನ ಗೃಹೀತಗಳ ಮೇಲೆ ನಿಂತಿವೆ. ಒಂದು, ಎಲ್ಲ ಕ್ಷೇತ್ರಗಳಲ್ಲಿ ಅದರಲ್ಲೂ ಆರ್ಥಿಕ ಕ್ಷೇತ್ರದಲ್ಲಿ ಪ್ರಭುತ್ವದ ಅತಿಯಾದ ಮೂಗು ತೂರಿಸುವಿಕೆ ಸಲ್ಲದು. ಎರಡು, ಸಮಾಜವೊಂದರ ಅಭಿವೃದ್ಧಿಯ ದೃಷ್ಟಿಯಿಂದ ಉತ್ಪಾದನಾ ಪರಿಕರ ಮತ್ತು ಉತ್ಪಾದಿತ ಸರಕುಸೇವೆಗಳ ವಿತರಣೆಯನ್ನು ಮಾರುಕಟ್ಟೆ ನಿರ್ಧರಿಸುವುದು ಅನಿವಾರ್ಯ. ಮೂರು, ಮಾರುಕಟ್ಟೆಗೆ ಪ್ರಾಧಾನ್ಯತೆ ನೀಡುವುದು ಮಾತ್ರ ಸಮಾಜವೊಂದು ಎದುರಿಸುವ ಎಲ್ಲ ಸಮಸ್ಯೆಗಳಿಂದ ಹೊರಬರಲಿರುವ ಏಕಮಾತ್ರ ದಾರಿ.

ಬಂಡವಾಳಶಾಹಿ ವ್ಯವಸ್ಥೆಯ ಅಂಶಗಳಿಗೆ ಮಹತ್ವ ಕೊಡುತ್ತಿದೆ. ಸಾಂಪ್ರದಾಯಿಕ ಸಮಾಜವನ್ನು ಆಧುನಿಕಗೊಳಿಸುವುದು ಅಥವಾ ಬಂಡವಾಳಶಾಹಿಗೊಳಿಸುವುದೇ ಇವರ ಮುಖ್ಯ ಗುರಿ. ಅದಕ್ಕಾಗಿ ಆಧುನಿಕವಲ್ಲದ ಪ್ರತಿಯೊಂದು ನಿರುಪಯೋಗಿ ಮತ್ತು ಆದಷ್ಟು ಬೇಗ ನಾಶ ಹೊಂದಬೇಕಾಗಿರುವುದು ಎನ್ನುವ ನಂಬಿಕೆ ಇವರಿಗಿದೆ. ಇಂತಹ ಆಧುನೀಕರಣಕ್ಕೆ ನಿಜವಾಗಿಯೂ ಮಾನವ ನಿರ್ಮಿತ ಬಂಧನಗಳಿಂದ ಬಿಡಿಸುವ ಶಕ್ತಿಯಿಲ್ಲ. ಏಕೆಂದರೆ ಇದು ಅಂತರ್‌ಗತವಾಗಿಯೇ ಮೇಲು; ಕೀಳು, ಹಿಂದುಳಿದ; ಮುಂದುವರಿದ ಇತ್ಯಾದಿ ವಿಂಗಡನೆಗಳನ್ನು ಒಳಗೊಂಡಿದೆ. ನಾನು ಮತ್ತು ಇತರರು, ವ್ಯಕ್ತಿ ಮತ್ತು ವಸ್ತು, ಬರಹ ಮತ್ತು ಮಾತು, ಆಧುನಿಕ ಮತ್ತು ಸಂಪ್ರದಾಯ, ಸತ್ಯ ಮತ್ತು ಭ್ರಮೆ ಇತ್ಯಾದಿ ವಿರೋಧಾಭಾಸಗಳು ಎನ್‌ಲೈಟನ್‌ಮೆಂಟ್ ಕೂಸಾದ ಆಧುನೀಕರಣದ ಭಾಗಗಳೇ. ಇದರಲ್ಲಿ ಪ್ರಥಮ ಭಾಗ ಸರಿ, ಪ್ರಗತಿಪರ, ವಿಶೇಷ ಎನ್ನುವ ಅರ್ಥವನ್ನು ಕೊಡುತ್ತವೆ. ಆದುದರಿಂದ ಅವು ಉಳಿಯಬೇಕು ಮತ್ತು ಬೆಳೆಯಬೇಕು. ಇದಕ್ಕೆ ವಿರುದ್ಧವಾದ ಅರ್ಥವನ್ನು ಎರಡನೇ ಭಾಗ ಕೊಡುತ್ತದೆ. ಆದುದರಿಂದ ಅದಕ್ಕೆ ಉಳಿಯುವ ಮತ್ತು ಬೆಳೆಯುವ ಹಕ್ಕಿಲ್ಲ. ಹೀಗೆ ಕೆಳವರ್ಗವನ್ನು ಮತ್ತು ಪ್ರಕೃತಿಯನ್ನು ಶೋಷಿಸುವ ಗುಣ ಆಧುನೀಕರಣದಲ್ಲಿ ಅಂತರ್ಗತವಾಗಿಯೇ ಇದೆಯೆಂದು ವಾದಿಸುವವರಿದ್ದಾರೆ.

ಇವರ ಪ್ರಕಾರ ಆಧುನಿಕ ವಿಜ್ಞಾನ ತಂತ್ರಜ್ಞಾನ ಮತ್ತು ಸಾಂಘಿಕ ರಚನೆಗಳನ್ನು ನಮ್ಮಲ್ಲಿ ಅಳವಡಿಸುವ ಮೂಲಕ ಸಾಮಾಜಿಕ ಪರಿವರ್ತನೆ ಸಾಧ್ಯ ಎಂದು ನಂಬುವುದು ತುಂಬಾ ಸೀಮಿತ ದೃಷ್ಟಿಕೋನ. ಏಕೆಂದರೆ ಈ ದೃಷ್ಟಿಕೋನ ನಮ್ಮ ಸಂಸ್ಕೃತಿಯಲ್ಲಿ ಚಾರಿತ್ರಿಕವಾಗಿ ರೂಪುಗೊಂಡ ಸಂಸ್ಥೆ, ಸಂಬಂಧ, ಮೌಲ್ಯಗಳನ್ನು ಗಣನೆಗೆ ತೆಗೆದುಕೊಂಡಿಲ್ಲ. ಜತೆಗೆ ವಸಾಹತು ಪೂರ್ವದಲ್ಲಿ ನೆಲ, ಜಲ, ಅರಣ್ಯ ಇತ್ಯಾದಿಗಳ ನಿರ್ವಹಣೆ ಕುರಿತು ಸ್ಥಳೀಯ ವ್ಯವಸ್ಥೆಗಳಿದ್ದವು. ಸಾಂಪ್ರದಾಯಿಕ ಸಮಾಜದಲ್ಲಿನ ನಿಕಟ ಮತ್ತು ಪರಸ್ಪರ ಅರಿತಿರುವ ಸಂದರ್ಭದಲ್ಲಿ ಸಮುದಾಯದ ಸಂಪನ್ಮೂಲ ಬಳಕೆ ಮತ್ತು ನಿರ್ವಹಣೆ ಕುರಿತಂತೆ ಸ್ವಯಂ ಪ್ರೇರಿತ ನಿಬಂಧನೆಗಳಿದ್ದವು. ಸ್ಥಳೀಯ ಸಂಪನ್ಮೂಲಗಳನ್ನು ಆಧರಿಸಿ ಬದುಕುತ್ತಿದ್ದ ಸಮುದಾಯಗಳಿಗೆ ಆ ಸಂಪನ್ಮೂಲಗಳ ಬಳಕೆ ಮತ್ತು ಸಂರಕ್ಷಣೆ ಕುರಿತು ತಿಳುವಳಿಕೆಯಿತ್ತು, ಜವಾಬ್ದಾರಿಯಿತ್ತು. ಆದರೆ ಆಧುನಿಕತೆ ಮುಚ್ಚಿಕೊಂಡಿದ್ದ ಸಮುದಾಯ ಬದುಕನ್ನು ತೆರೆದು ಇತರ ಸಮುದಾಯಗಳೊಂದಿಗೆ ಸಂಪರ್ಕ ಮತ್ತು ವಿನಿಮಯವನ್ನು ಕಲ್ಪಿಸಿತು. ಈ ಸಂಪರ್ಕ ಮತ್ತು ವಿನಿಮಯ ಇಂದು ಸ್ಥಳೀಯ ಸಂಪನ್ಮೂಲಗಳ ಬಳಕೆಯನ್ನು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಾರುಕಟ್ಟೆಯೊಂದಿಗೆ ಜೋಡಿಸಿದೆ. ಹಾಗಾಗಿ ಸಂಪನ್ಮೂಲಗಳ ಬಳಕೆ ಕುರಿತಂತೆ ನಿರ್ಧಾರಗಳು ಇಂದು ಸ್ಥಳೀಯ ಅವಶ್ಯಕತೆಗಳಿಗೆ ಅನುಗುಣವಾಗಿ ರೂಪಿತವಾಗುವುದಿಲ್ಲ. ಬದಲಿಗೆ ಮಾರುಕಟ್ಟೆಗೆ ಅಗತ್ಯಗಳಿಗೆ ಅನುಗುಣವಾಗಿ ಅಮೂರ್ತ ರೂಪದಲ್ಲಿ ನಡೆಯುತ್ತಿವೆ.

ಇದು ಎರಡು ರೀತಿಯ ದುಷ್ಪರಿಣಾಮಗಳಿಗೆ ಕಾರಣವಾಗಿದೆ. ಒಂದು, ಸಂಪನ್ಮೂಲಗಳ ಎಗ್ಗಿಲ್ಲದ ನಾಶ ಮತ್ತು ಎರಡು, ಸ್ಥಳೀಯ ಸಮುದಾಯಗಳು ಕೂಡ ಅವುಗಳ ಸಂರಕ್ಷಣೆ ಬಗ್ಗೆ ದಿವ್ಯ ನಿರ್ಲಕ್ಷ್ಯ ತೋರುವುದು. ನಮ್ಮ ಸಮಾಜದಲ್ಲಿ ಚಾರಿತ್ರಿಕವಾಗಿ ರೂಪುಗೊಂಡ ಸಂಸ್ಥೆಗಳು ಮತ್ತು ಮೌಲ್ಯಗಳ ಮೂಲಕ ಅಭಿವೃದ್ಧಿಯನ್ನು ನಿರ್ವಚಿಸಿಕೊಳ್ಳುವುದು ಮತ್ತು ಆಚರಣೆಗೆ ತರುವುದು ಈ ಎಲ್ಲ ಸಮಸ್ಯೆಗಳಿಗೆ ಪರಿಹಾರವೆಂದು ದೇಶಿ ಥಿಯರಿಸ್ಟರು ಅಭಿಪ್ರಾಯ ಪಡುತ್ತಾರೆ. ಹೀಗೆ ನಮ್ಮಲ್ಲೂ ದೇಶಿ ಸಮಾಜ ಥಿಯರಿಗಳನ್ನು ರೂಪಿಸುವ ಪ್ರಯತ್ನ ಹಿಂದಿನಿಂದಲೂ ನಡೆದಿದೆ. ನಮ್ಮದೇ ಥಿಯರಿಗಳನ್ನು ರೂಪಿಸಿದ ಕೂಡಲೇ ಸಮಸ್ಯೆ

ಈ ಎಲ್ಲ ತೀರ್ಮಾನಗಳು ಪ್ರಪಂಚದ ಎಲ್ಲ ದೇಶಗಳಲ್ಲಿನ ಅರ್ಥ ವ್ಯವಸ್ಥೆಗಳನ್ನು ಅಧ್ಯಯನ ಮಾಡಿ ರೂಪುಗೊಂಡಿರುವುದಲ್ಲ. ಬಹುತೇಕ ಸಂದರ್ಭದಲ್ಲಿ ಶ್ರೀಮಂತ ದೇಶಗಳ ಅನುಭವಗಳೇ ಈ ತೀರ್ಮಾನಗಳಿಗೆ ಪುರಾವೆಗಳನ್ನು ಒದಗಿಸಿದರೆ ಇನ್ನು ಕೆಲವು ಸಂದರ್ಭಗಳಲ್ಲಿ ಪೂರ್ವದ ಸಣ್ಣಪುಟ್ಟ ದೇಶಗಳಲ್ಲಿ ನಡೆದ ಕಲ್ಪಿತ (ಕಲ್ಪಿತ ಏಕೆಂದರೆ ಆ ದೇಶಗಳಲ್ಲಿ ಇಂದು ಚರ್ಚಿಸುತ್ತಿರುವ ಉದಾರೀಕರಣ ನಡೆದೇ ಇಲ್ಲ) ಉದಾರೀಕರಣದ ಪ್ರಯೋಗಗಳನ್ನು ಬಳಸಿಕೊಳ್ಳಲಾಗಿದೆ. ಈ ಬಗೆಯ ಆರ್ಥಿಕ ನೀತಿ ಹಿಂದಿರುವ ಗೃಹೀತಗಳು ಮತ್ತು ಸಂಶೋಧನೆಗಳು ಎಷ್ಟು ಪಕ್ಷಪಾತಿಯೆಂದು ತಿಳಿಸುವ ಸಾಕಷ್ಟು ಸಂಶೋಧನೆಗಳಿವೆ. ಹಲವಾರು ದೇಶಗಳಲ್ಲಿ ಈ ನೀತಿ ವಿಫಲವಾದ ನಂತರ ಹೊಸ ಬಗೆಯ ಆಲೋಚನೆಗಳು ಮುಂಚೂಣಿಗೆ ಬಂದವು. ಸಿವಿಲ್ ಸೊಸೈಟಿ ಮತ್ತು ಸೋಶಿಯಲ್ ಕ್ಯಾಪಿಟಲ್‌ನ ಅವುಗಳಲ್ಲಿ ಪ್ರಮುಖವಾದ ಪರಿಕಲ್ಪನೆಗಳು. ಪುನಃ ಇವು ಕೂಡ ಪ್ರಪಂಚದ ಎಲ್ಲ ದೇಶಗಳ ಅನುಭವ ಅಲ್ಲ. ಬದಲಿಗೆ ಕೆಲವೇ ಕೆಲವು ದೇಶಗಳಲ್ಲಿ ನಡೆದ ಸಂಶೋಧನೆಯ ಫಲ. ಆದಾಗ್ಯೂ ಈ ಎಲ್ಲ ಅಂಶಗಳು ಅಭಿವೃದ್ಧಿಯ ಹೊಸ ಮಾದರಿಗಳ ರೂಪದಲ್ಲಿ ವಿಶ್ವವ್ಯಾಪಿಯಾಗಿವೆ.

ದೇಶಿ ಕಥನಗಳು

ಪಶ್ಚಿಮದ ಅನುಭವ ಆಧರಿತ ಸಮಾಜ ಥಿಯರಿಗಳ ಯಜಮಾನಿಕೆಯನ್ನು ಪ್ರಶ್ನಿಸುವ ಕೆಲಸ ಹಿಂದಿನಿಂದಲೇ ನಡೆದಿದೆ. ಅವುಗಳನ್ನು ಸ್ಥೂಲವಾಗಿ ದೇಶಿ ಥಿಯರಿಗಳನ್ನು ಕಟ್ಟುವ ಪ್ರಯತ್ನವೆಂದು ಪರಿಗಣಿಸಬಹುದು. ಈ ಪ್ರಕ್ರಿಯೆ ಭಾರತಕ್ಕೆ ಮಾತ್ರ ಅನ್ವಯವಾಗಿದೆ ಎನ್ನಲು ಸಾಧ್ಯವಿಲ್ಲ. ಪ್ರಪಂಚದ ಎಲ್ಲ ಕಡೆ ಈ ಪ್ರಯತ್ನಗಳು ನಡೆದಿವೆ. ಪಶ್ಚಿಮದಲ್ಲಿ ಲಿಬರಲಿಸಂನ ವ್ಯಕ್ತಿವಾದವನ್ನು ಅಲ್ಲಗಳೆಯಲು ಈ ಪ್ರಯತ್ನ ನಡೆದರೆ ತೃತೀಯ ಜಗತ್ತಿನಲ್ಲಿ ಪಶ್ಚಿಮದ ಅನುಭವದ ನೆಲೆಯಲ್ಲಿ ಪಶ್ಚಿಮೇತರ ಸಮಾಜಗಳನ್ನು ರೂಪಿಸುವ ಪ್ರಯತ್ನದ ವಿರುದ್ಧ ಈ ಪ್ರಕ್ರಿಯೆ ನಡೆದಿದೆ. ಇದನ್ನು ಸ್ಥಳೀಯವಾದ, ದೇಶಿವಾದ, ಸಮುದಾಯವಾದ ಇತ್ಯಾದಿ ಹೆಸರುಗಳಿಂದ ಗುರುತಿಸಬಹುದು. ಇವುಗಳ ನಡುವೆ ಸಾಕಷ್ಟು ಅಂತರವಿದೆ. ಆದರೆ ಅವೆಲ್ಲವೂ ಆಧುನೀಕರಣದ ವಿರುದ್ಧ ಹೆಚ್ಚು ಕಡಿಮೆ ಒಂದೇ ಬಗೆಯ ಟೀಕೆಯನ್ನು ಮಾಡುತ್ತವೆ. ಆ ಟೀಕೆಯ ಸಾರಾಂಶವಿಷ್ಟು, ವಿಜ್ಞಾನ ಮತ್ತು ತಂತ್ರಜ್ಞಾನದ ಬೆಳವಣಿಗೆಯೊಂದಿಗೆ ಪಶ್ಚಿಮದ ದೇಶಗಳು ಆಧುನೀಕರಣಗೊಂಡವು ಅಥವಾ ಅಭಿವೃದ್ಧಿ ಹೊಂದಿದವು. ಆ ಕಾರಣದಿಂದಲೇ ಆಧುನಿಕ ತಂತ್ರಜ್ಞಾನಗಳನ್ನು ಯಾವುದೇ ಸಾಮಾಜಿಕ ಪರಿಸರದಲ್ಲಿ ಅಳವಡಿಸುವ ಮೂಲಕ ಆ ಸಮಾಜಗಳನ್ನು ಮೂಲಭೂತವಾಗಿ ಪರಿವರ್ತಿಸಬಹುದು ಅಥವಾ ಈಗಾಗಲೇ ಆ ದಾರಿಯನ್ನು ತುಳಿದು ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ಪಡಿಯಚ್ಚು ಆಗಬಹುದು ಎನ್ನುವ ಗ್ರಹಿಕೆ ಆಧುನೀಕರಣ ಚಿಂತನೆಯಲ್ಲಿ ಕೆಲಸ ಮಾಡಿದೆ. ಆ ಕಾರಣದಿಂದಲೇ ಪ್ರಪಂಚದ ಬಹುತೇಕ ರಾಷ್ಟ್ರಗಳು ಈ ಬಗೆಯ ಆಧುನೀಕರಣ ಪ್ರಕ್ರಿಯೆಯಲ್ಲಿ ಪಾಲುಗೊಂಡವು.

ಈ ಬಗೆಯ ಆಧುನೀಕರಣದ ಹಿಂದಿರುವ ಒಂದು ಮೂಲಭೂತ ಗುಣದ ಬಗ್ಗೆ ಯಾರೂ ವಿಶೇಷ ತಲೆ ಕೆಡಿಸಿಕೊಳ್ಳಲಿಲ್ಲ. ಅದೇನೆಂದರೆ ಏನನ್ನು ನಾವು ಆಧುನೀಕರಣವೆಂದು ಮತ್ತು ನಮ್ಮನ್ನು ಉದ್ಧಾರ ಮಾಡುವ ಮಾರ್ಗವೆಂದು ತುಂಬಾ ನಂಬಿಕೆಯಿಂದ ಅಪ್ಪಿಕೊಂಡೆವೋ ಅದು ಅಂತರ್ಗತದಲ್ಲಿ ಬಂಡವಾಳಶಾಹಿ ವ್ಯವಸ್ಥೆಯೇ ಆಗಿತ್ತು. ಆದುದರಿಂದ ಆಧುನೀಕರಣ ಅಥವಾ ಅಭಿವೃದ್ಧಿ ಎಂದರೆ ನಿಸ್ಸಂದೇಹವಾಗಿ ಬಂಡವಾಳದ ವಿಸ್ತರಣೆ. ಈ ಕ್ರಮದ ಅಭಿವೃದ್ಧಿ ಮಾರುಕಟ್ಟೆ, ಲಾಭ, ಇತ್ಯಾದಿ

ಪರಿಹಾರವಾಗುವುದಿಲ್ಲ. ಏಕೆಂದರೆ ಕೆಲವರ ಸ್ವಾಧೀನದಲ್ಲಿ ಅಧಿಕಾರ ಮಡುಗಟ್ಟಿರುವುದು ಕೇವಲ ಗ್ಲೋಬಲ್ ಮಟ್ಟದಲ್ಲಿ ಮಾತ್ರವಲ್ಲ ಲೋಕಲ್ ಮಟ್ಟದಲ್ಲೂ ಇದೇ ಸಮಸ್ಯೆ ಇದೆ.

ಭಾಗ – ೨

ಎಲ್ಲ ಸಮಾಜಗಳಲ್ಲೂ ಏಣಿಶ್ರೇಣಿಗಳಿವೆ. ಏಣಿಶ್ರೇಣಿಗಳಿಲ್ಲದ ಸಮಾಜವನ್ನು ಊಹಿಸುವುದೇ ಕಷ್ಟ. ವ್ಯತ್ಯಾಸವಿದ್ದರೆ ಅದು ಏಣಿಶ್ರೇಣಿಗಳನ್ನು ಗುರುತಿಸಲು ಬಳಸುವ ಹೆಸರುಗಳಲ್ಲಿ (ಲೇಬಲ್‌ಗಳಲ್ಲಿ) ಮತ್ತು ಏಣಿಶ್ರೇಣಿಗಳನ್ನು ಸಮರ್ಥಿಸಿಕೊಳ್ಳಲು ಬಳಸುವ ವಿವರಣೆಗಳಲ್ಲಿ ಮಾತ್ರ. ಈ ಏಣಿಶ್ರೇಣಿಯಲ್ಲಿ ಕೆಲವರು ಮೇಲೆ, ಕೆಲವರು ಮಧ್ಯದಲ್ಲಿ ಮತ್ತು ಕೆಲವರು ಕೆಳಗಿರುತ್ತಾರೆ. ಏಣಿಶ್ರೇಣಿಯ ಬೇರೆ ಬೇರೆ ಹಂತದಲ್ಲಿರುವವರಿಗೆ ತಮ್ಮ ಸುತ್ತಲಿನ ಪ್ರಪಂಚ (ಸಮಾಜ/ಅರ್ಥ ಇತ್ಯಾದಿಗಳು) ಬೇರೆ ಬೇರೆಯಾಗಿ ಕಾಣುತ್ತದೆ. ಆದರೆ ಏಣಿಯ ಮೇಲಿದ್ದವರು ನಮಗೆ ಕಾಣುವ ಪ್ರಪಂಚ ಮಾತ್ರ ನಿಜವಾದ ಪ್ರಪಂಚ ಉಳಿದವರಿಗೆ ಕಾಣುವ ಪ್ರಪಂಚ ನಿಜವಾದ ಪ್ರಪಂಚವಲ್ಲ ಎಂದು ಪ್ರತಿಪಾದಿಸುತ್ತಾರೆ. ಇಂತಹ ನಿಲುವನ್ನು ನಾವು ಪರಿಪೂರ್ಣ ಆಬ್ಜೆಕ್ಟಿವಿಟಿ ಎನ್ನಬಹುದು ಮತ್ತು ಎಲ್ಲರಿಗೂ ಅನ್ವಯವಾಗುತ್ತದೆ ಎನ್ನುವ ಅವರ ನಿಲುವನ್ನು ಯೂನಿವರ್ಸಾಲಿಟಿಯೆಂದು ಗುರುತಿಸಬಹುದು. ಹೀಗೆ ಥಿಯರಿ ಮತ್ತು ಅಧಿಕಾರ ನಡುವಿನ ಸಂಬಂಧ ಇಲ್ಲೂ ಕೆಲಸ ಮಾಡುತ್ತಿದೆ. ಪರದೇಶಿ ಇರುವವರೆಗೆ ದೇಶಿ ಇರುತ್ತದೆ. ಯಾವಾಗ ಪರದೇಶಿ ವಿಶ್ಲೇಷಣೆಯ ವ್ಯಾಪ್ತಿಯಿಂದ ಮಾಯವಾಗುತ್ತದೋ ಆಗ ದೇಶಿಯೊಳಗಿನ ಭಿನ್ನತೆಗಳು ಗರಿಗೆದರಿ ಕುಣಿಯಲು ಆರಂಭಿಸುತ್ತವೆ. ಪ್ರಾದೇಶಿಕ ನೆಲೆಯಲ್ಲಿ, ಭಾಷಾ ನೆಲೆಯಲ್ಲಿ, ಧಾರ್ಮಿಕ ನೆಲೆಯಲ್ಲಿ, ಜಾತಿ ನೆಲೆಯಲ್ಲಿ ಹೀಗೆ ಹತ್ತು ಹಲವು ನೆಲೆಗಳಲ್ಲಿ ನಮ್ಮತನ ಮುಂಚೂಣಿಗೆ ಬರುತ್ತವೆ.

ಮೇಲ್ವರ್ಗದ ದೃಷ್ಟಿಕೋನ

ಪಶ್ಚಿಮದ ಬಲಾಢ್ಯರು ಪ್ರತಿಪಾದಿಸುವ ಇಂತಹ ಯೂನಿವರ್ಸಾಲಿಟಿಯನ್ನು ಸ್ಥಳೀಯ ಬಲಾಢ್ಯರು ಪ್ರಶ್ನಿಸುತ್ತಾರೆ. ಇವರು ಪರದೇಶಿ ಯೂನಿವರ್ಸಾಲಿಟಿಯನ್ನು ಪ್ರಶ್ನಿಸಲು ಅತಿಯಾದ ಸ್ವಾಯತ್ತತೆಯನ್ನು ಪ್ರತಿಪಾದಿಸುವ ಮತ್ತು ಎಲ್ಲವೂ ತನ್ನೊಳಗೆ ಇದೆ ಎಂದು ವಾದಿಸುವ ಸಮಾಜ, ಸಂಸ್ಕೃತಿ ಕಲ್ಪನೆಗಳನ್ನು ಮುಂಚೂಣಿಗೆ ತರುತ್ತಾರೆ. ಅವರ ಪ್ರಕಾರ ಪರಿವರ್ತನೆಯನ್ನು ಕೂಡ ಈ ಸ್ವಾಯತ್ತ ಸಮಾಜ/ಸಂಸ್ಕೃತಿ ಅಂತರ್ಗತವಾಗಿ ಹುಟ್ಟುಹಾಕುತ್ತದೆ ಮತ್ತು ನಿರ್ವಹಿಸುತ್ತದೆ. ಒಂದು ವೇಳೆ ಹೊರಗಿನ ಸಮಾಜದ ಸಂಪರ್ಕ ಅನಿವಾರ್ಯವಾದರೆ ತನ್ನ ಹಿತಕ್ಕೆ ಏನೆಲ್ಲ ಬೇಕೋ ಅವುಗಳನ್ನು ಮಾತ್ರ ಸ್ವೀಕರಿಸಿ ಉಳಿದವುಗಳನ್ನು ತಿರಸ್ಕರಿಸುವ ಶಕ್ತಿ ಸ್ವಾಯತ್ತ ಸಮಾಜಕ್ಕಿದೆ ಎಂದು ವಾದಿಸುತ್ತಾರೆ. ಕೆಲವೊಂದು ಕ್ಷೇತ್ರಗಳಲ್ಲಿ (ಅರ್ಥ, ವಿಜ್ಞಾನ, ತಂತ್ರಜ್ಞಾನ, ರಾಜಕೀಯ ಇತ್ಯಾದಿಗಳಲ್ಲಿ) ಪರಕೀಯ ಸಂಸ್ಥೆ ಹಾಗು ಜ್ಞಾನ ಪರಂಪರೆಗಳನ್ನು ಬಳಸಿಕೊಳ್ಳುವುದು ಅನಿವಾರ್ಯವಾದರೆ ಅವುಗಳನ್ನು ದೇಶೀಕರಿಸಲಾಗುವುದು. ಉದಾಹರಣೆಗೆ ಆಧುನಿಕ ಸಂಸ್ಥೆಯೊಳಗಿನ (ರಾಜಕೀಯ ಪಕ್ಷ ಇರಬಹುದು ಅಥವಾ ಇತರ ಸಂಸ್ಥೆಗಳಿರಬಹುದು) ಸಂಬಂಧಗಳನ್ನು ಕುಟುಂಬದೊಳಗಿನ ಸಂಬಂಧಗಳಿಗೆ ಸಮೀಕರಿಸಲಾಗುವುದು, ರಾಷ್ಟ್ರೀಯತೆಯನ್ನು ಹಿಂದೂ ರಾಷ್ಟ್ರೀಯತೆಯೆಂದು ನಿರ್ವಚಿಸುವುದು, ಭಾಷೆಯನ್ನು ತಾತ್ವಿಕತೆಯ ಸ್ಥಾನಕ್ಕೇರಿಸುವುದು, ಕುಟುಂಬ, ಸಮುದಾಯ ಬದ್ಧತೆಯನ್ನು ಸಾಮಾಜಿಕ ಬದ್ಧತೆಗೆ ಸಮೀಕರಿಸುವುದು ಇತ್ಯಾದಿ ಸಂಕಥನಗಳ ಮೂಲಕ ಪರಕೀಯ ಸಂಸ್ಥೆ ಮತ್ತು ಜ್ಞಾನ ಪರಂಪರೆಗಳನ್ನು ದೇಶೀಕರಿಸಲಾಗುವುದು.

ಈ ಬಗೆಯ ಸ್ವಾಯತ್ತ ಸಮಾಜ, ಸಂಸ್ಕೃತಿ ಸಂಕಥನಗಳು ತಮ್ಮ ತಮ್ಮ ಸಮಾಜದಲ್ಲಿ ಚಾರಿತ್ರಿಕವಾಗಿ ರೂಪಿತ ಏಣಿಶ್ರೇಣಿಗಳನ್ನು ಯಥಾಸ್ಥಿತಿಯಲ್ಲಿಟ್ಟುಕೊಂಡು ಪಶ್ಚಿಮದ ಸಮಾಜಗಳು ಮುಂಚೂಣಿಗೆ ತರುವ ವಿಜ್ಞಾನ, ತಂತ್ರಜ್ಞಾನಗಳ ಲಾಭಗಳನ್ನು ಪಡೆಯಲು ನೆರವಾಗುತ್ತಿವೆ. ಪಶ್ಚಿಮದ ಬಲಾಢ್ಯರು ತಮ್ಮ ಲೋಕದೃಷ್ಟಿಯನ್ನು ಆಧುನೀಕರಣ, ಜಾಗತೀಕರಣದ ಹೆಸರಲ್ಲಿ ಇತರರ ಮೇಲೆ ಹೇರಲು ಪ್ರಯತ್ನಿಸಿದರೆ ಸ್ಥಳೀಯ ಬಲಾಢ್ಯರು ಸ್ವಾಯತ್ತ ಸಮಾಜ, ಸಂಸ್ಕೃತಿ ಹೆಸರಲ್ಲಿ ತಮ್ಮ ಲೋಕದೃಷ್ಟಿಯನ್ನು ತಳಸ್ತರದ ಜನರ ಮೇಲೆ ಹೇರುತ್ತಾರೆ. ಹೀಗೆ ಸ್ಥಳೀಯ ಯಜಮಾನಿಕೆಗೆ ಚ್ಯುತಿ ಬಾರದಂತೆ ಆಧುನೀಕರಣ, ಜಾಗತೀಕರಣಗಳ ಲಾಭ ಪಡೆಯುವ ತಂತ್ರಗಾರಿಕೆ ಈಸ್ಟ್ ವರ್ಸಸ್ ವೆಸ್ಟ್ ಚರ್ಚೆಯಲ್ಲಿ ಅಡಗಿದೆ. ಆದುದರಿಂದ ಪಶ್ಚಿಮದ ಶ್ರೀಮಂತ ರಾಷ್ಟ್ರಗಳು ಹೆಚ್ಚಿನ ಪ್ರಮಾಣದಲ್ಲಿ ಉತ್ಪಾದಿಸುವ ಸಮಾಜ ಜ್ಞಾನವನ್ನು ಈಸ್ಟ್ ವರ್ಸಸ್ ವೆಸ್ಟ್ ಸಮಸ್ಯೆಯನ್ನಾಗಿ ನೋಡುವುದು ಸರಿಯಲ್ಲ. ಇದೊಂದು ಅಧಿಕಾರದ ಡಿಸ್ಟ್ರಿಬ್ಯುಶನ್ ಸಮಸ್ಯೆ ಎಂದು ಮನಗಾಣುವುದು ಅವಶ್ಯ. ಈ ಸಮಸ್ಯೆಯನ್ನು ಏಣಿಯ ಬೇರೆ ಹಂತದಲ್ಲಿರುವವರಿಗೆ (ಮಧ್ಯದಲ್ಲಿರುವವರಿಗೆ, ಕೆಳಗಿರುವವರಿಗೆ) ಸಮಾಜ ಕಾಣುವ ದೃಷ್ಟಿಯಿಂದಲೂ ಅರ್ಥಮಾಡಿಕೊಳ್ಳಬಹುದು. ಭೂಮಿಯಲ್ಲಿ ಇರುವವರಿಗೆ ಚಂದ್ರ ಉರುಟಾಗಿ ಕಾಣುತ್ತದೆ. ಆದರೆ ಚಂದ್ರಲೋಕಕ್ಕೆ ಹೋದವರಿಗೆ ಅಲ್ಲೂ ಬೆಟ್ಟಗುಡ್ಡಗಳು ಕಲ್ಲುಮಣ್ಣುಗಳು ಕಾಣುತ್ತವೆ ಮತ್ತು ಅದಕ್ಕಿಂತಲೂ ಮುಖ್ಯವಾಗಿ ಚಂದ್ರ ಲೋಕದಲ್ಲಿ ನಿಂತು ಭೂಮಿಯನ್ನು ನೋಡಿದಾಗ ಭೂಮಿ ಚಂದ್ರನಂತೆ ಊರುಟಾಗಿ ಕಾಣುತ್ತದೆ. ಈ ಎರಡು ಚಿತ್ರಣಗಳು ಸತ್ಯವೇ. ಇದನ್ನು ನಾವು ಸಾಪೇಕ್ಷ (ರಿಲೇಟಿವ್) ಆಬ್ಜೆಕ್ಟಿವಿಟಿ ಎನ್ನಬಹುದು.

ಎಲ್ಲ ಸಮಾಜಗಳಲ್ಲೂ ಏಣಿಶ್ರೇಣಿಗಳಿವೆ. ಏಣಿಶ್ರೇಣಿಯ ಬೇರೆ ಬೇರೆ ಸ್ತರಗಳಲ್ಲಿರುವವರಿಗೆ ಸಮಾಜ ಬೇರೆ ಬೇರೆ ರೀತಿ ಕಾಣುತ್ತದೆ. ಇದಿರಿಂದಾಗಿ ಏಣಿಯ ಮೇಲಿದ್ದವರಿಗೆ ಏಣಿಯ ಕೆಳಗಿದ್ದವರು ಸ್ವಲ್ಪ ಮೇಲೆ ಬಂದ ಕೂಡಲೇ ಸಮಾಜದಲ್ಲಿ ದೊಡ್ಡ ಬದಲಾವಣೆಯಾದಂತೆ ಕಾಣಬಹುದು. ಆದರೆ ಏಣಿಯ ಕೆಳಗಿದ್ದವರಿಗೆ ಮೇಲಿದ್ದವರ ಸಮಸಮ ಬರುವವರೆಗೂ ಬದಲಾವಣೆಯೇ ಅಗಿಲ್ಲ ಎಂದು ತೋರಬಹುದು. ಈ ಎರಡೂ ನಿಲುವುಗಳು ಕೂಡ ಸರಿ. ಆದರೆ ತಮ್ಮ ಸತ್ಯಗಳನ್ನು ಉತ್ಪಾದಿಸಲು ಮತ್ತು ಉತ್ಪಾದಿತ ಸತ್ಯಗಳನ್ನು ಕೆಳಗಿದ್ದವರ ಪ್ರಜ್ಞೆಯ ಭಾಗವನ್ನಾಗಿಸುವ ಶಕ್ತಿ ಏಣಿಯ ಕೆಳಗಿದ್ದವರಿಗಿಂತ ಹೆಚ್ಚು ಮೇಲಿದ್ದವರಿಗೆ ಇದೆ. ಇದರಿಂದಾಗಿ ಕೆಳಗಿದ್ದವರು ತಮ್ಮ ಅರಿವಿಗೆ ಬಾರದೇ ಮೇಲ್ವರ್ಗ, ಪುರುಷ ಪ್ರಧಾನ ಸಂಬಂಧ, ಸಂಸ್ಥೆ, ಮೌಲ್ಯಗಳೇ ಸತ್ಯ ಮತ್ತು ಇದಕ್ಕಿಂತ ಭಿನ್ನವಾದ ಲೋಕವಿಲ್ಲವೆಂದು ನಂಬಿ ಬದುಕುವ ಸ್ಥಿತಿ ನಿರ್ಮಾಣವಾಗುತ್ತದೆ. ಏಣಿಯ ಕೆಳಗಿದ್ದವರ ಸ್ಥಾನದಲ್ಲಿ ನಿಂತು ಅವರ ಕಲ್ಪನೆಯ ಸಂಬಂಧಗಳು, ಸಂಸ್ಥೆಗಳು, ಮೌಲ್ಯಗಳು ಮೇಲಿದ್ದವರು ಕಟ್ಟಿಕೊಡುವ ಲೋಕದಷ್ಟೇ ಸತ್ಯ ಎಂದು ಪ್ರತಿಪಾದಿಸುವುದು ನಡೆಯುತ್ತಿಲ್ಲ. ಅದರ ಬದಲು ಒಂದು ಬಗೆಯ ನಿರ್ಲಿಪ್ತ ಮನಸ್ಸಿನಿಂದ ಜ್ಞಾನಗಳಿಸುವ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳಬೇಕೆಂದು ಸಮಾಜ ವಿಜ್ಞಾನದ ವಿಧಾನ ತಾಕೀತು ಮಾಡುತ್ತಿದೆ. ಇಂತಹ ನಿರ್ಲಿಪ್ತ ಮನಸ್ಸಿನಿಂದ ಸಮಾಜವನ್ನು ನೋಡುವವರಿಗೆ ಸಮಾಜದಲ್ಲಿನ ಭೇದಗಳು, ಶೋಷಣೆಗಳು, ಅಸಮಾನತೆಗಳು, ಅನ್ಯಾಯಗಳು, ಅಸ್ವಾತಂತ್ರ್ಯಗಳು ಅಸಹಜವಾಗುವುದಿಲ್ಲ. ಕೋಮುವಾದ ಬಲವಾಗಿ ಬೇರೂರಿರುವ ಪರಿಸರದಲ್ಲಿ ಬೇರೆ ಬೇರೆ ಧರ್ಮಗಳಿಗೆ ಸೇರಿದ ಜನರ ನಡುವೆ ದಿನನಿತ್ಯ ಕ್ಷುಲ್ಲಕ ಕಾರಣಗಳಿಗೆ ಘರ್ಷಣೆಗಳಾಗುವುದು, ಸಾವುನೋವುಗಳಾಗುವುದು ಅಸಹಜವಾಗುವುದಿಲ್ಲ.

ಜಾತಿ ಪದ್ಧತಿಯನ್ನು ಒಪ್ಪಿಕೊಂಡವರಿಗೆ ಮತ್ತೊಬ್ಬರನ್ನು ಜಾತಿ ಕಾರಣಕ್ಕಾಗಿ ಹೊರಗಿಡುವುದು, ಹೀನಾಯವಾಗಿ ಕಾಣುವುದು ಅಸಹಜವಾಗುವುದಿಲ್ಲ. ಲಿಂಗಭೇದವನ್ನು ಒಪ್ಪಿಕೊಂಡವರಿಗೆ ಮಹಿಳೆಯರನ್ನು ಎರಡನೇ ದರ್ಜೆ ಪ್ರಜೆಗಳ ರೀತಿಯಲ್ಲಿ ನಡೆಸಿಕೊಳ್ಳುವುದು ಅಸಹಜವಾಗುವುದಿಲ್ಲ. ವರ್ಗಭೇದ ಸಹಜವಾಗಿರುವ ಪರಿಸರದಲ್ಲಿ ದೊಡ್ಡ ದೊಡ್ಡ ಬಂಗ್ಲೆಗಳಲ್ಲಿ ಕೆಲವೇ ಕೆಲವು ಜನ ವಾಸಿಸುವ ಸಂದರ್ಭದಲ್ಲೇ ಲಕ್ಷಾಂತರ ಜನ ವಸತಿ ಇಲ್ಲದೆ ಬೀದಿ ಬದಿಯಲ್ಲಿ ವಾಸಿಸುವುದು ಸಾಮಾನ್ಯ ಸಂಗತಿಯಾಗುತ್ತದೆ. ಊಟಕ್ಕಿಲ್ಲದ, ಉತ್ತಮ ಶಿಕ್ಷಣ ಆರೋಗ್ಯಗಳಿಲ್ಲದ ಕೋಟ್ಯಂತರ ಜನರಿರುವ ಪರಿಸರದಲ್ಲಿ ಕೆಲವೇ ಕೆಲವರಿಗೆ ಉತ್ತಮ ಆರೋಗ್ಯ, ಶಿಕ್ಷಣ ದೊರಕುವುದು ಅಸಹಜವಾಗುವುದಿಲ್ಲ. ಮೇಲಿನ ಎಲ್ಲದರಲ್ಲಿ ಸಹಜತೆಯನ್ನು ಕಾಣುವವರಿಗೆ ಇವುಗಳ ಕುರಿತು ಇದ್ಯಾಕೆ ಹೀಗೆ? ಅದ್ಯಾಕೆ ಹಾಗೆ? ಅವರ್‍ಯಾಕೆ ಅಷ್ಟು ಮೇಲಿದ್ದಾರೆ? ಇವರ್‍ಯಾಕೆ ಇಷ್ಟು ಕೆಳಗಿದ್ದಾರೆ? ಎನ್ನುವ ಪ್ರಶ್ನೆಗಳು ಮೂಡುವುದೇ ಇಲ್ಲ. ಇದರಿಂದಾಗಿ ಅಧ್ಯಯನಕ್ಕಾಗಿ ಸಮಸ್ಯೆಯನ್ನು ಹುಡುಕುವ ಸಂಶೋಧಕರ ಸಂಖ್ಯೆ ಈ ಎಲ್ಲ ಸಮಸ್ಯೆಗಳಿಗೆ ಪರಿಹಾರ ಹುಡುಕುವ ಸಂಶೋಧಕರಿಗಿಂತ ಹೆಚ್ಚಾಗಿದೆ. ಹೀಗೆ ಇಂದಿನ ಸಮಾಜ ಜ್ಞಾನ ತಳಸ್ತರದ ಜನರ ಆರ್ಥಿಕ, ರಾಜಕೀಯ, ಸಮಾಜಿಕ, ಸಾಂಸ್ಕೃತಿಕ ಅಸಮಾನತೆಗಳನ್ನು ಸಹಜಗೊಳಿಸಿವೆ. ಈ ಸ್ಥಿತಿ ಬದಲಾಗಬೇಕಾದರೆ ಸಂಶೋಧನೆಯನ್ನು ನೋಡುವ ದೃಷ್ಟಿಕೋನ ಬದಲಾಗಬೇಕಾಗಿದೆ. ತಳಸ್ತರದ ಜನರ ಆಸಕ್ತಿಗಳನ್ನು ಪ್ರತಿನಿಧಿಸುವ ಸಮಾಜ ಜ್ಞಾನ ಉತ್ಪಾದಿಸಲು ಪೂರಕವಾಗುವ ಸಂಶೋಧನ ದೃಷ್ಟಿಕೋನವನ್ನು ರೂಢಿಸಿಕೊಳ್ಳುವ ಅಗತ್ಯವಿದೆ.

ಸಂಶೋಧನ ದೃಷ್ಟಿಕೋನ

ಸಂಶೋಧನ ದೃಷ್ಟಿಕೋನವನ್ನು ಹಲವಾರು ಸಂಗತಿಗಳು ಪ್ರಭಾವಿಸುತ್ತವೆ. ಅವುಗಳನ್ನು ಪರಿಚಯಿಸಿ ಮುಂದುವರಿಯುತ್ತೇನೆ. ಒಂದು, ವ್ಯಕ್ತಿ ಮತು ಪರಿಸರ ಪರಸ್ಪರ ಸಂಬಂಧಿಸಿವೆ. ಒಂದು ಮತ್ತೊಂದರ ಬದಲಾವಣೆಯಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ಆದುದರಿಂದ ಅತಿಯಾದ ಸಬ್ಜೆಕ್ಟಿವಿಟಿ ಮತ್ತು ಅತಿಯಾದ ಆಬ್ಜೆಕ್ಟಿವಿಟಿ ಎರಡನ್ನೂ ಪ್ರತಿಪಾದಿಸುವುದು ಸರಿಯಾದ ಕ್ರಮವಲ್ಲ. ಯಾಕೆಂದರೆ ಅತಿಯಾದ ಸಬ್ಜೆಕ್ಟಿವಿಟಿಯಲ್ಲಿ ಮನಸ್ಸಿನ ಆಲೋಚನೆಗಳಿಂದ ಅಥವಾ ಕಲ್ಪನೆಗಳಿಂದ ಭಿನ್ನವಾದ ಪ್ರಪಂಚ ಇರುವುದಿಲ್ಲ. ಈ ದೃಷ್ಟಿಕೋನದ ಪ್ರಕಾರ ಮುಂದುವರಿದರೆ ಮನಸ್ಸು ಮತ್ತು ಅದರ ಕಲ್ಪನೆಗಳನ್ನು, ಆಲೋಚನೆಗಳನ್ನು ಅರ್ಥಮಾಡಿಕೊಳ್ಳುವುದು ಮಾತ್ರ ಸಂಶೋಧನೆಯ ಕಾಯಕವಾಗುತ್ತದೆ. ಏಕೆಂದರೆ ಮನಸ್ಸಿನ ಕಲ್ಪನೆಗಳಿಂದ ಭಿನ್ನವಾದ ಲೋಕವೇ ಇರುವುದಿಲ್ಲ. ಇದೇ ರೀತಿಯಲ್ಲಿ ಅತಿಯಾದ ಆಬ್ಜೆಕ್ಟಿವಿಟಿಯಲ್ಲಿ ಪರಿಸರವೇ ಪ್ರಧಾನವಾಗಿದ್ದು ವ್ಯಕ್ತಿ ನಗಣ್ಯವಾಗುತ್ತಾಳೆ/ನೆ. ವ್ಯಕ್ತಿ ತಾನು ಬದುಕಿ ಉಳಿಯುವುದಕ್ಕಾಗಿ ಮತ್ತು ತನ್ನ ಪುನರುತ್ಪತ್ತಿಗಾಗಿ ಪರಿಸರದೊಂದಿಗೆ ಸಂವಾದ ನಡೆಸುವುದು ಅನಿವಾರ್ಯ. ಈ ಸಂವಾದಗಳು ಕೇವಲ ಮನಸ್ಸಲ್ಲಿ ಅಥವಾ ಕಲ್ಪನೆಯಲ್ಲಿ ನಡೆಯುವ ಕೆಲಸವಲ್ಲ. ಕೈಯಿಂದ, ನೇಗಿಲಿಂದ, ಯಂತ್ರದಿಂದ ಭೌತಿಕ ಪರಿಸರವನ್ನು ಮತ್ತು ಸಂಕೇತಗಳಿಂದ, ಸಂಸ್ಥೆಗಳಿಂದ, ಸಿದ್ಧಾಂತಗಳಿಂದ, ಪರಿಭಾಷೆಗಳಿಂದ ಸಾಮಾಜಿಕ, ಸಾಂಸ್ಕೃತಿಕ ಲೋಕವನ್ನು ಬದಲಾಯಿಸುವ ಪ್ರಕ್ರಿಯೆಗಳು ಸತತ ನಡೆಯುತ್ತಲೇ ಇರುತ್ತವೆ. ಈ ಪ್ರಕ್ರಿಯೆಗಳಿಂದ ಪರಿಸರದಲ್ಲೂ ಮತ್ತು ವ್ಯಕ್ತಿಯಲ್ಲೂ ಸಾಕಷ್ಟು ಪರಿವರ್ತನೆಗಳಾಗುತ್ತವೆ.

ಜ್ಞಾನ ಉತ್ಪಾದನ ಪ್ರಕ್ರಿಯೆ ಕೂಡ ವ್ಯಕ್ತಿ ಮತ್ತು ಪರಿಸರದಲ್ಲಿ ಬದಲಾವಣೆ ತರುವ ಮಹತ್ವದ ಕಾಯಕ. ಇದನ್ನೇ ಇನ್ನೊಂದು ವಿಧದಲ್ಲಿ ಹೇಳುವುದಾದರೆ ಸಂಶೋಧನೆ ಕೇವಲ

ಸಮಾಜ ವಿಮರ್ಶೆಯಲ್ಲ; ಆತ್ಮ ವಿಮರ್ಶೆ ಕೂಡ ಆಗಿದೆ. ಅಧ್ಯಯನ ಮಾಡುವವರನ್ನು ಸಮಾಜದಲ್ಲಿನ ಬಡತನ, ಅಸಮಾನತೆ, ಶೋಷಣೆಗಳು ಕಾಡದಿದ್ದರೆ ಸಂಶೋಧಕರಲ್ಲಿ ಮತ್ತು ಸಮಾಜದಲ್ಲಿ ದೊಡ್ಡ ಪ್ರಮಾಣದ ಬದಲಾವಣೆ ನಿರೀಕ್ಷಿಸಲು ಸಾಧ್ಯವಿಲ್ಲ. ಈ ನಿಲುವನ್ನು ಗಂಭೀರವಾಗಿ ಪರಿಗಣಿಸದಿದ್ದರೆ ಸಮಾಜ ವಿಜ್ಞಾನ ಸೃಷ್ಟಿಸುವ ಜ್ಞಾನಕ್ಕೆ ಸಾಮಾಜಿಕ ಪರಿವರ್ತನೆಯ ಪಾತ್ರವನ್ನು ನಿರಾಕರಿಸಬೇಕಾಗುತ್ತದೆ. ಎರಡು, ಎಲ್ಲ ಸಮಾಜಗಳಲ್ಲೂ ಏಣಿಶ್ರೇಣಿಗಳಿವೆ. ಏಣಿಶ್ರೇಣಿಯ ಬೇರೆ ಬೇರೆ ಹಂತದಲ್ಲಿರುವವರಿಗೆ ತಮ್ಮ ಸುತ್ತಲಿನ ಪ್ರಪಂಚ (ಸಮಾಜ, ಅರ್ಥ, ರಾಜಕೀಯ ಇತ್ಯಾದಿಗಳು) ಬೇರೆ ಬೇರೆಯಾಗಿ ಕಾಣುತ್ತದೆ. ಆದರೆ ಏಣಿಯ ಮೇಲಿದ್ದವರು ನಮಗೆ ಕಾಣುವ ಪ್ರಪಂಚ ಮಾತ್ರ ನಿಜವಾದ ಪ್ರಪಂಚ ಉಳಿದವರಿಗೆ ಕಾಣುವ ಪ್ರಪಂಚ ನಿಜವಾದ ಪ್ರಪಂಚವಲ್ಲ ಎಂದು ಪ್ರತಿಪಾದಿಸುತ್ತಾರೆ. ಏಣಿಯ ಬೇರೆ ಹಂತದಲ್ಲಿರುವವರಿಗೆ ಪ್ರ ಪಂಚ ಬೇರೆ ರೂಪದಲ್ಲಿ ಕಾಣಬಹುದು. ಆದರೆ ತಮ್ಮ ಸತ್ಯಗಳನ್ನು ಉತ್ಪಾದಿಸಲು ಮತ್ತು ಉತ್ಪಾದಿತ ಸತ್ಯಗಳನ್ನು ಕೆಳಗಿದ್ದವರ ಪ್ರಜ್ಞೆಯ ಭಾಗವನ್ನಾಗಿಸುವ ಶಕ್ತಿ ಏಣಿಯ ಕೆಳಗಿದ್ದವರಿಗಿಂತ ಹೆಚ್ಚು ಮೇಲಿದ್ದವರಿಗೆ ಇದೆ. ಇದರಿಂದಾಗಿ ಕೆಳಗಿದ್ದವರು ತಮ್ಮ ಅರಿವಿಗೆ ಬಾರದೇ ಮೇಲ್ವರ್ಗ, ಪುರುಷ ಪ್ರಧಾನ ಸಂಬಂಧ, ಸಂಸ್ಥೆ, ಮೌಲ್ಯಗಳೇ ಸತ್ಯ ಮತ್ತು ಇದಕ್ಕಿಂತ ಭಿನ್ನವಾದ ಲೋಕವಿಲ್ಲವೆಂದು ನಂಬಿ ಬದುಕುವ ಸ್ಥಿತಿ ನಿರ್ಮಾಣವಾಗುತ್ತದೆ.

ಮೂರು, ವಿಚಾರ–ಆಚಾರ–ಅಧಿಕಾರ ನಡುವೆ ಸಂಬಂಧ ಇದೆ. ಪ್ರತಿಯೊಬ್ಬರು ತಮ್ಮ ತಮ್ಮ ಆಸಕ್ತಿಗನುಸಾರ ತಮ್ಮ ಸುತ್ತಲಿನ ಪ್ರಪಂಚವನ್ನು ಮೇಲ್ವರ್ಗ ಸೃಷ್ಟಿಸಿದ ಪರಿಕರಗಳ ಮೂಲಕ ಕಟ್ಟಿಕೊಳ್ಳುತ್ತಾರೆ. ತಮ್ಮ ಜತೆಗಿರುವವರು ತಮ್ಮ ದೃಷ್ಟಿಯಿಂದ ಲೋಕವನ್ನು ನೋಡಬೇಕೆಂದು ಬಯಸುತ್ತಾರೆ. ಅದಕ್ಕಾಗಿ ತಮ್ಮ ಲೋಕದೃಷ್ಟಿಯನ್ನು ಮತ್ತೊಬ್ಬರ ಪ್ರಜ್ಞೆಯ ಭಾಗ ಮಾಡಲು ಪ್ರಚಲಿತದಲ್ಲಿರುವ ಸಾಧನಗಳ ಮೂಲಕ ಪ್ರಯತ್ನಿಸುತ್ತಿರುತ್ತಾರೆ. ಆದರೆ ಏಣಿಯ ಮೇಲಿದ್ದವರಿಗೆ ತಮ್ಮ ಸತ್ಯಗಳನ್ನು ಉತ್ಪಾದಿಸಲು ಮತ್ತು ಅದನ್ನು ಕೆಳಗಿದ್ದವರ ಪ್ರಜ್ಞೆಯ ಭಾಗವನ್ನಾಗಿಸಲು ಇರುವ ಶಕ್ತಿ ಏಣಿಯ ಬುಡದಲ್ಲಿದ್ದವರಿಗೆ ಇರುವುದಿಲ್ಲ ಎಂದು ಮೇಲಿನ ಪ್ಯಾರಾಗಳಲ್ಲಿ ಹೇಳಿದ್ದೇನೆ. ಆದುದರಿಂದ ಮೇಲ್ವರ್ಗದ, ಪುರುಷಪ್ರಧಾನ ವಿಚಾರಗಳು ಹೆಚ್ಚಿನ ಸಂದರ್ಭಗಳಲ್ಲಿ ನಮಗೆ ಎದುರಾಗುತ್ತವೆ. ಸತತವಾಗಿ ಇಂತಹ ವಿಚಾರಗಳು ನಮ್ಮ ಗಮನಕ್ಕೆ ಬರುವುದರಿಂದ ಮತ್ತು ಇವು ನಮ್ಮ ಪ್ರಜ್ಞೆಯ ಭಾಗವಾಗುವುದರಿಂದ ನಮ್ಮ ನಡೆನುಡಿಗಳು ಈ ವಿಚಾರಗಳಿಂದ ಪ್ರಭಾವಿಸಲ್ಪಡುತ್ತವೆ. ಯಾರನ್ನು ನಮಗೆ ಸಮಾನರೆಂದು ಮತ್ತು ಯಾರನ್ನು ನಮ್ಮಿಂದ ಕೆಳಗಿನವರೆಂದು ಮತ್ತು ಯಾರನ್ನು ನಮ್ಮಿಂದ ಮೇಲಿನವರೆಂದು ಪರಿಗಣಿಸಬೇಕೆಂದು ಇಂತಹ ವೈಚಾರಿಕತೆಗಳು ನಮಗೆ ಹೇಳುತ್ತವೆ. ಬಹುತೇಕ ಸಂದರ್ಭಗಳಲ್ಲಿ ನಾವು ಈ ಸಲಹೆಗಳನುಸಾರ ನಡೆದುಕೊಳ್ಳುತ್ತೇವೆ. ಮತ್ತೊಬ್ಬರ ಮೇಲೆ ಅಧಿಕಾರ ಚಲಾಯಿಸಲು ಅಥವಾ ಮತ್ತೊಬ್ಬರಿಗೆ ನಮ್ಮ ಮೇಲೆ ಅಧಿಕಾರ ಚಲಾಯಿಸಲು ನಮ್ಮ ನಡೆನುಡಿಗಳು ಅವಕಾಶ ಮಾಡಿಕೊಡುತ್ತವೆ.

ಅಧಿಕಾರ ಚಲಾವಣೆ ವಿವಿಧ ರೂಪದಲ್ಲಿ ನಡೆಯುತ್ತದೆ. ಆಮಿಷ ಒಡ್ಡುವ ಮೂಲಕ, ಬಲಪ್ರಯೋಗದ ಮೂಲಕ ಮತ್ತು ಮನವರಿಕೆ ಮಾಡುವ ಮೂಲಕ. ಬಲಪ್ರಯೋಗದ ಅಧಿಕಾರ ಚಲಾವಣೆ ಹೆಚ್ಚಿನ ಪ್ರಚಾರ ಪಡೆದಿದ್ದು ಇತರ ವಿಧಾನಗಳ ಮೂಲಕ ನಡೆಯುವ ಅಧಿಕಾರ ಚಲಾವಣೆ ವಿಶೇಷ ಗಮನ ಸೆಳೆದಿಲ್ಲ. ಅದರಲ್ಲೂ ವಿಚಾರಗಳು, ಸಿದ್ಧಾಂತಗಳು ಅಥವಾ ಮತ್ತೊಬ್ಬರನ್ನು ತರ್ಕಬದ್ಧವಾದ ವಾದಗಳನ್ನು ಮಂಡಿಸಿ ಅವರ ಮನ ಪರಿವರ್ತನೆ

ಮಾಡಿ ನಡೆಯುವ ಅಧಿಕಾರ ಚಲಾವಣೆ ಬಗ್ಗೆ ವಿಶೇಷ ಗಮನ ಹರಿದಿಲ್ಲ. ಆದರೆ ಪ್ರಪಂಚದಲ್ಲಿ ನಡೆಯುವ ಅಧಿಕಾರ ಚಲಾವಣೆಯಲ್ಲಿ ಹೆಚ್ಚಿನ ಪ್ರಮಾಣದ ಅಧಿಕಾರ ಚಲಾವಣೆ ವಿಚಾರಗಳ ಮೂಲಕ ನಡೆಯುತ್ತದೆ. ಸಂಶೋಧಕರು ಹೊಸ ವಿಚಾರಗಳನ್ನು ಸೃಷ್ಟಿಸುವ ಮೂಲಕ ಹೊಸ ಅಧಿಕಾರ ಸಂಬಂಧವನ್ನು ಸೃಷ್ಟಿಸುತ್ತಾರೆ. ನಾಲ್ಕು, ಸಂಶೋಧಕರು ಹೊಸ ವಿಚಾರಗಳನ್ನು ಸೃಷ್ಟಿಸುವಲ್ಲಿಗೆ ತಮ್ಮ ಜವಾಬ್ದಾರಿಯನ್ನು ಸೀಮಿತಗೊಳಿಸುತ್ತಾರೆ. ಸೃಷ್ಟಿಸಿದ ಜ್ಞಾನ ಯಾವುದೋ ಒಂದು ರೂಪದಲ್ಲಿ ಜನಸಾಮಾನ್ಯರ ಪ್ರಜ್ಞೆಯ ಭಾಗವಾಗದಿದ್ದರೆ ಅದು ಕೇವಲ ಸಂಶೋಧನ ಸಮುದಾಯದ ವರ್ತುಲದಲ್ಲಿ ಗಿರಕಿ ಹೊಡೆಯತ್ತಿರುತ್ತದೆ. ಇದರಿಂದ ಸಾಮಾಜಿಕ ಪರಿವರ್ತನೆ ಸಾಧ್ಯವಿಲ್ಲ. ನಮ್ಮಂತಹ ಬಡ ಸಮಾಜದಲ್ಲಿ ಸಂಶೋಧನೆಯ ಮೇಲೆ ವ್ಯಯವಾಗುವ ದೊಡ್ಡ ಮೊತ್ತದ ಲಾಭ ಸಮಾಜಕ್ಕೆ ದಾಟದಿದ್ದರೆ ಸಂಶೋಧನೆ ಮೌಲ್ಯ ಉಳಿಸಿಕೊಳ್ಳುವುದು ಕಷ್ಟ. ಆದುದರಿಂದ ಹೊಸ ಸಂಬಂಧ, ಸಂಸ್ಥೆ ಮತ್ತು ಮೌಲ್ಯಗಳನ್ನು ಕಟ್ಟಿಕೊಡುವುದಕ್ಕೆ ಸಂಶೋಧನ ಜವಾಬ್ದಾರಿ ಸೀಮಿತವಾಗಿಲ್ಲ. ಸಂಶೋಧಕರು ಸೃಷ್ಟಿಸುವ ಹೊಸ ವಿಚಾರಗಳನ್ನು ಜನಸಾಮಾನ್ಯರ ಪ್ರಜ್ಞೆಯ ಭಾಗವಾಗಿಸುವುದು ಕೂಡ ಸಂಶೋಧಕರ ಜವಾಬ್ದಾರಿಯಾಗುತ್ತದೆ.

ಅಧಿಕಾರ ಸಂಬಂಧ

ವಿಚಾರ–ಆಚಾರ–ಅಧಿಕಾರ ಇವುಗಳ ನಡುವೆ ನೇರ ಸಂಬಂಧ ಇದೆ ಎಂದು ಮೇಲೆ ನೋಡಿದ್ದೇವೆ. ಸಂಬಂಧಗಳು, ಸಂಸ್ಥೆಗಳು, ಮೌಲ್ಯಗಳು ಎಲ್ಲ ಸಮಾಜಗಳ ಮೂಲ ಸಾಮಗ್ರಿಗಳು. ವ್ಯಕ್ತಿಯ ವ್ಯವಹಾರಗಳನ್ನು ನಿರ್ಬಂಧಿಸುವ ಮೂಲಕ ಇವು ಎಲ್ಲರಿಗೂ ಬದುಕಲು ಅವಕಾಶ ಮಾಡಿಕೊಡುತ್ತವೆ ಎಂದು ನಂಬಲಾಗಿದೆ. ಆದರೆ ಪ್ರತಿಯೊಬ್ಬರೂ ಅವರವರ ಶಕ್ತಿಯನುಸಾರ ಸಮಷ್ಟಿ ಹೇರುವ ನಿರ್ಬಂಧವನ್ನು ಮೀರಲು ಪ್ರಯತ್ನಿಸುತ್ತಾರೆ. ನಿರ್ಬಂಧವನ್ನು ಕೆಲವರು ಸಮಾಜ ಒಪ್ಪಿತ ರೂಪದಲ್ಲಿ ಮೀರಿದರೆ ಮತ್ತೆ ಕೆಲವರು ತಮ್ಮದೇ ರೂಪದಲ್ಲಿ ಮೀರುತ್ತಾರೆ. ಎರಡೂ ಸಂದರ್ಭದಲ್ಲೂ ವ್ಯಕ್ತಿ ಮತ್ತು ಸಮಷ್ಟಿಯಲ್ಲಿ ಬದಲಾವಣೆಗಳಾಗುತ್ತವೆ. ಸಂಬಂಧಗಳನ್ನು, ಸಂಸ್ಥೆಗಳನ್ನು, ಮೌಲ್ಯಗಳನ್ನು ಸೃಷ್ಟಿಸುವ ಮತ್ತು ಮೀರುವ ಶಕ್ತಿ ಬಲಾಢ್ಯರಿಗಿರುವಷ್ಟು ಬಲಹೀನರಿಗೆ ಇರುವುದಿಲ್ಲ. ಆದುದರಿಂದ ಒಂದು ನಿರ್ದಿಷ್ಟ ಚಾರಿತ್ರಿಕ ಸಂದರ್ಭದ ಸಂಬಂಧಗಳು, ಸಂಸ್ಥೆಗಳು, ಮೌಲ್ಯಗಳು ಬಲಾಢ್ಯರ ಆಸಕ್ತಿಗೆ ಹೆಚ್ಚು ಪೂರಕವಾಗಿದ್ದಷ್ಟು ಅದೇ ಸಮಾಜದ ಬಲಹೀನರ ಆಸಕ್ತಿಗೆ ಪೂರಕವಾಗಿರುವುದಿಲ್ಲ.

ಆದರೆ ಎಷ್ಟೋ ಬಾರಿ ಈ ಸತ್ಯ ಅದೇ ಸಮಾಜದ ಬಲಹೀನರ ಪ್ರಜ್ಞೆಯ ಭಾಗವಾಗಿರುವುದಿಲ್ಲ. ಏಕೆಂದರೆ ಬಲಾಢ್ಯರು ತಮ್ಮ ಆಸಕ್ತಿಗೆ ಪೂರಕವಾದ ಸಂಬಂಧಗಳನ್ನು ಸಂಸ್ಥೆಗಳನ್ನು ಬಲಾತ್ಕಾರದಿಂದ ಬಲಹೀನರ ಮೇಲೆ ಹೇರುವುದಿಲ್ಲ. ಬದಲಿಗೆ ವೈಚಾರಿಕತೆಗಳ ಮೂಲಕ ಬಲಹೀನರ ಒಪ್ಪಿಗೆ ಪಡೆದೇ ಈ ಅಸಮಾನ ಸಂಬಂಧಗಳು ಚಲಾವಣೆಯಲ್ಲಿರುತ್ತವೆ. ಬಲಾಢ್ಯರು ಏಕೆ ಹೆಚ್ಚಿನ ಸ್ಥಾನಮಾನ, ಅಧಿಕಾರ, ಸಂಪನ್ಮೂಲ ಹೊಂದಿದ್ದಾರೆ ಮತ್ತು ಬಲಹೀನರು ಏಕೆ ಹೊಂದಿಲ್ಲ ಎನ್ನುವುದನ್ನು ವಿವರಿಸುವ ವೈಚಾರಿಕತೆಗಳಿವೆ, ಸಿದ್ಧಾಂತಗಳಿವೆ. ಅಂದರೆ ಬಲವಾದ ವೈಚಾರಿಕತೆಗಳು ವ್ಯಕ್ತಿ, ಕುಟುಂಬ, ಸಮುದಾಯಗಳ ನಡುವಿನ ಅಸಮಾನ ಸಂಬಂಧಗಳನ್ನು ಗಟ್ಟಿಗೊಳಿಸುತ್ತವೆ. ವ್ಯಕ್ತಿ, ಕುಟುಂಬ, ಸಮುದಾಯಗಳ ನಡುವಿನ ಸಂಬಂಧಗಳನ್ನು ಸಮಾನತೆಯ ನೆಲೆಯಲ್ಲಿ ಕಟ್ಟಿಕೊಳ್ಳಬೇಕಾದರೆ ಮೊದಲಿಗೆ ಅಸಮಾನತೆಯನ್ನು ಸಹಜಗೊಳಿಸುವ, ವೈಭವೀಕರಿಸುವ ವೈಚಾರಿಕತೆಯನ್ನು ಮೊದಲಿಗೆ ಪ್ರಶ್ನಿಸಬೇಕಾಗುತ್ತದೆ. ನಂತರ ಸಂಬಂಧಗಳನ್ನು

ಸಮಾನತೆಯು ನೆಲೆಯಲ್ಲಿ ಕಟ್ಟಿಕೊಳ್ಳಲು ಪೂರಕವಾಗುವ ವೈಚಾರಿಕತೆಗಳನ್ನು ಸೃಷ್ಟಿಸಬೇಕಾಗುತ್ತದೆ ಮತ್ತು ಮುಂಚೂಣಿಗೆ ತರಬೇಕಾಗಿದೆ.

ನಮ್ಮದೇ ಸಮಾಜದ ಲಿಂಗ, ಜಾತಿ, ಧರ್ಮ ಬೇಧಗಳ ಉದಾಹರಣೆಯ ಮೂಲಕ ಈ ಅಂಶವನ್ನು ಸುಲಭದಲ್ಲಿ ಅರ್ಥಮಾಡಿಕೊಳ್ಳಬಹುದು. ಲಿಂಗ, ಜಾತಿ, ಧರ್ಮ ಬೇಧಗಳು ಶತಮಾನಗಳಿಂದ ನಮ್ಮಲ್ಲಿ ಆಚರಣೆಯಲ್ಲಿವೆ. ಹೀಗೆ ಆಚರಣೆಯಲ್ಲಿರುವುದರಿಂದ ಇವು ಒಂದು ಬಗೆಯ ಪ್ರಾಕೃತಿಕ ಸತ್ಯದ ಸ್ವರೂಪವನ್ನು ಪಡೆದುಕೊಂಡಿವೆ. ಅಷ್ಟು ಮಾತ್ರವಲ್ಲ ಲಿಂಗ ಸಂಬಂಧದ ಕಾರಣದಿಂದ ಅಥವಾ ಜಾತಿ ಸಂಬಂಧದ ಕಾರಣದಿಂದ ಅಥವಾ ಧರ್ಮ ಸಂಬಂಧದ ಕಾರಣದಿಂದ ಅಥವಾ ವರ್ಗ ಸಂಬಂಧದ ಕಾರಣದಿಂದ ಮೇಲಿರುವವರು ತಮ್ಮ ಸತ್ಯವನ್ನೇ ಪ್ರಪಂಚದ ಸತ್ಯವೆಂದು ಪ್ರಚಾರ ಪಡಿಸುತ್ತಾರೆ. ಇವರೆಲ್ಲ ಏಣಿಯ ಮೇಲಿರುವುದರಿಂದ ಸತ್ಯವನ್ನು ಉತ್ಪಾದಿಸುವ ಮತ್ತು ಪ್ರಚಾರ ಪಡಿಸುವ ಶಕ್ತಿ ಕೂಡ ಇವರಲ್ಲಿ ಹೆಚ್ಚಿರುತ್ತದೆ. ಇವರುಗಳು ತಮ್ಮ ಅಧಿಕಾರವನ್ನು ಉಳಿಸಿಕೊಳ್ಳಲು ಮತ್ತು ಬೆಳೆಸಿಕೊಳ್ಳಲು ಪೂರಕವಾದ ಸತ್ಯವನ್ನು (ಜ್ಞಾನವನ್ನು) ಹೆಚ್ಚು ಹೆಚ್ಚು ಉತ್ಪಾದಿಸುತ್ತಾರೆ ಮತ್ತು ಪ್ರಚಾರ ಪಡಿಸುತ್ತಾರೆ. ಇವರು ಸೃಷ್ಟಿಸುವ ಸತ್ಯಗಳು ಇವರ ಅಧಿಕಾರವನ್ನು ಗಟ್ಟಿಗೊಳಿಸುತ್ತವೆ. ಇವರಲ್ಲಿ ಮಡುಗಟ್ಟಿದ ಅಧಿಕಾರದಲ್ಲಿ ಬದಲಾವಣೆ ತರಬೇಕಾದರೆ ಮೊದಲಿಗೆ ಇವರ ಅಧಿಕಾರವನ್ನು ಗಟ್ಟಿಗೊಳಿಸುವ ಸತ್ಯಗಳನ್ನು (ವಿಚಾರಗಳನ್ನು) ಪ್ರಶ್ನಿಸಬೇಕಾಗಿದೆ ಮತ್ತು ಹೊಸ ಸತ್ಯಗಳನ್ನು (ವಿಚಾರಗಳನ್ನು) ಸೃಷ್ಟಿಸಬೇಕಾಗಿದೆ. ಹೊಸ ಸತ್ಯಗಳು ಈಗಾಗಲೇ ಸ್ಥಾಪಿತ ಅಧಿಕಾರ ಸಂಬಂಧ, ಸಂಸ್ಥೆ, ಮೌಲ್ಯಗಳನ್ನು ಪರಿವರ್ತಿಸಿ ಹೊಸ ಸಂಬಂಧ, ಸಂಸ್ಥೆ ಮತ್ತು ಮೌಲ್ಯಗಳು ಸೃಷ್ಟಿಸುತ್ತವೆ.

ಲಿಂಗ ತಾರತಮ್ಯ

ಕೆಲವೊಂದು ಉದಾಹರಣೆಗಳ ಮೂಲಕ ವಿಚಾರ-ಆಚಾರ-ಅಧಿಕಾರ ಸಂಬಂಧವನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸೋಣ. ಪತಿಯೇ ಪರದೈವ ಎನ್ನುವ ವೈಚಾರಿಕತೆ ಜನಸಾಮಾನ್ಯರ ಪ್ರಜ್ಞೆಯ ಭಾಗವಾಗಿದ್ದ ಸಂದರ್ಭದ ಮಹಿಳೆ ಮತ್ತು ಪುರುಷರ ನಡುವಿನ ಸಂಬಂಧವನ್ನು ನೋಡೋಣ. ಅರುವತ್ತು ಎಪ್ಪತ್ತರ ದಶಕದ ಕನ್ನಡ ಚಲನಚಿತ್ರಗಳಲ್ಲಿ ಕಡ್ಡಾಯವಾಗಿ ಇರುತ್ತಿದ್ದ ಒಂದು ದೃಶ್ಯವನ್ನು ನೋಡಿದರೆ ಈ ಸಂಬಂಧ ಸುಲಭದಲ್ಲಿ ಅರ್ಥವಾಗಬಹುದು. ಪತ್ನಿ ಮುಂಜಾನೆ ಎದ್ದು ಪತಿಯ ಕಾಲು ಮುಟ್ಟಿ ನಮಸ್ಕರಿಸಿ, ಸ್ನಾನ ಮಾಡಿ, ಮಡಿ ಬಟ್ಟೆ ಉಟ್ಟು ಕೈಯಲ್ಲಿ ಚಾ/ಕಾಫಿ ಕಪ್ ಹಿಡಿದುಕೊಂಡು, ರೀ ಹೊತ್ತಾಯಿತು ಏಳ್ರೀ, ಕಾಫಿ ಕುಡಿಯಿರಿ ಎನ್ನುತ್ತಾಳೆ. ಪತಿ ಕಷ್ಟಪಟ್ಟು ಏಳುತ್ತಾನೆ. ಚಹಾ/ಕಾಫಿ ಕಪ್ ಖಾಲಿ ಮಾಡಿ, ಪಕ್ಕದಲ್ಲಿರುವ ಈಸಿಚೆಯರಲ್ಲಿ ಕುಕ್ಕರಿಸಿ ಅಂದಿನ ದಿನಪತ್ರಿಕೆಯನ್ನು ಕೈಗೆತ್ತಿಕೊಳ್ಳುತ್ತಾನೆ. ಅಡುಗೆ ಮನೆಯಲ್ಲಿ ಪತಿ ಪ್ರವೇಶವಾಗುವ, ಪತ್ನಿಯ ಕೆಲಸದಲ್ಲಿ ಕೈಜೋಡಿಸುವ, ಮಕ್ಕಳ ಆಟಪಾಠಗಳಲ್ಲಿ ಸಹಕರಿಸುವ ದೃಶ್ಯಗಳು ಇರುವುದೇ ಇಲ್ಲ. ಮಹಿಳೆಯ ಲೋಕ ಮನೆಗೆ ಅದರಲ್ಲೂ ಅಡುಗೆ ಮನೆಗೆ ಸೀಮಿತ ಮತ್ತು ಹೊರಗಿನ ಎಲ್ಲ ವ್ಯವಹಾರಗಳು ಪುರುಷನದ್ದು.

ಮೇಲಿನ ದೃಶ್ಯಗಳನ್ನು ಇಂದಿನ ಚಲನಚಿತ್ರಗಳಲ್ಲಿ ಕಂಡು ಬರುವ ದೃಶ್ಯಗಳಿಗೆ ಹೋಲಿಸೋಣ. ಹೆಂಡತಿಯ ಕೆಲಸಗಳಲ್ಲಿ ಗಂಡ ಕೈಜೋಡಿಸದಿದ್ದರೆ ಸಂಸಾರ ತಕರಾರಿಲ್ಲದೆ ಸಾಗಲು ಸಾಧ್ಯವಿಲ್ಲ ಎನ್ನುವ ಸಂದೇಶವನ್ನು ಬಹುತೇಕ ದೃಶ್ಯಗಳು ಕೊಡುತ್ತಿವೆ. ಪತ್ನಿಯ ಲೋಕ ಮನೆಗೆ ಸೀಮಿತವಾಗಿಲ್ಲ. ಅವಳೂ ಪತಿಯಂತೆ ಹೊರಗೆ ದುಡಿಯುತ್ತಾಳೆ. ಸಂಸಾರ

ಏರುಪೇರಿಲ್ಲದೆ ನಿಭಾಯಿಸಬೇಕಾದರೆ ಪತಿ ಮನೆಯ ಒಳಗಿನ ಮತ್ತು ಹೊರಗಿನ ಕೆಲಸಕಾರ್ಯಗಳಲ್ಲಿ ಪತ್ನಿಯೊಂದಿಗೆ ಕೈಜೋಡಿಸುವುದು ಅನಿವಾರ್ಯ. ಮಹಿಳೆ ಮತ್ತು ಪುರುಷರ ಸ್ಥಾನಮಾನಗಳಲ್ಲಿ ಮಹತ್ತರವಾದ ವ್ಯತ್ಯಾಸಗಳನ್ನು ಈ ಎರಡು ಸಂದರ್ಭಗಳಲ್ಲಿ ಕಾಣಬಹುದು. ಪತಿಯೇ ಪರದೈವ ಎನ್ನುವ ವೈಚಾರಿಕತೆ ಯಜಮಾನಿಕೆ ನಡೆಸುತ್ತಿದ್ದ ಸಂದರ್ಭದಲ್ಲಿ ಮಹಿಳೆಯ ಲೋಕ ಮನೆಗೆ ಸೀಮಿತವಾಗಿತ್ತು. ಪತ್ನಿ ಪತಿಗೆ ಸಮಾನ ಅಲ್ಲ ಎನ್ನುವ ನಂಬಿಕೆ ಜನಸಾಮಾನ್ಯರ ಪ್ರಜ್ಞೆಯ ಭಾಗವಾಗಿತ್ತು. ಇಂತಹ ವೈಚಾರಿಕತೆಯನ್ನು ಎಂಬತ್ತರ ದಶಕದಿಂದಲೇ ಮಹಿಳಾವಾದಿಗಳು, ಸಮಾಜ ವಿಜ್ಞಾನಿಗಳು ಪ್ರಶ್ನಿಸಲಾರಂಭಿಸಿದರು. ಮಹಿಳೆ ಮತ್ತು ಪುರುಷ ಸಮಾನರು. ಪುರುಷ ಮತ್ತು ಮಹಿಳೆಯರ ನಡುವಿನ ಪ್ರಕೃತಿದತ್ತವಾದ ಭಿನ್ನತೆಗಳ ಬುನಾದಿ ಮೇಲೆ ಹಲವಾರು ಸಾಮಾಜಿಕ ಕಟ್ಟುಪಾಡುಗಳನ್ನು ಸೃಷ್ಟಿಸಲಾಗಿದೆ. ಈ ಎಲ್ಲ ಕಟ್ಟುಪಾಡುಗಳು ಪುರುಷ ಮತ್ತು ಮಹಿಳೆಯರ ಸಂಬಂಧವನ್ನು ಅಸಮಾನವಾಗಿ ಕಟ್ಟಿಕೊಳ್ಳಲು ನೆರವಾಗಿವೆ.

ಅಸಮಾನವಾಗಿ ಕಟ್ಟಿಕೊಂಡ ಈ ಸಂಬಂಧಗಳು ಮಹಿಳೆಯರನ್ನು ಹಲವಾರು ಭೌತಿಕ ಹಾಗು ಸಾಂಸ್ಕೃತಿಕ ಸಂಪನ್ಮೂಲಗಳಿಂದ ಹೊರಗಿಡುತ್ತಿವೆ. ಪುರುಷ ಮತ್ತು ಮಹಿಳೆಯರ ಸಂಬಂಧವನ್ನು ಅಸಮಾನ ನೆಲೆಯಲ್ಲಿ ಕಟ್ಟಿಕೊಳ್ಳಲು ಸಹಕಾರಿಯಾಗುವ ವೈಚಾರಿಕತೆಗಳನ್ನು ಪ್ರಶ್ನಿಸಲಾಯಿತು. ಪುರುಷ ಮತ್ತು ಮಹಿಳೆಯರ ಸಂಬಂಧವನ್ನು ಸಮಾನತೆಯ ನೆಲೆಯಲ್ಲಿ ಕಟ್ಟಿಕೊಳ್ಳಲು ಸಾಧ್ಯ ಎನ್ನುವ ವೈಚಾರಿಕತೆಗಳು ಹೆಚ್ಚು ಹೆಚ್ಚು ಮುಂಚೂಣಿಗೆ ಬಂದವು. ಇಂತಹ ವೈಚಾರಿಕತೆಗಳು ವಿವಿಧ ಮಾಧ್ಯಮಗಳ ಮೂಲಕ (ಟಿವಿ. ಸಿನಿಮಾ, ಕತೆ, ಕಾದಂಬರಿ, ಸಿದ್ಧಾಂತ ಇತ್ಯಾದಿ ರೂಪಗಳಲ್ಲಿ) ಜನಸಾಮಾನ್ಯರ ಪ್ರಜ್ಞೆಯ ಭಾಗವಾದವು. ಸರಕಾರ ಕೂಡ ಲಿಂಗ ಸಂಬಂಧವನ್ನು ಹೊಸಬಗೆಯಲ್ಲಿ ಕಟ್ಟಿಕೊಳ್ಳಲು ಪೂರಕವಾದ ಪಾಲಿಸಿಗಳನ್ನು, ಕಾರ್ಯಕ್ರಮಗಳನ್ನು, ಕಾನೂನುಗಳನ್ನು ಜಾರಿಗೆ ತರಲು ಆರಂಭಿಸಿತು. ಈ ಎಲ್ಲ ಅಂಶಗಳು ಲಿಂಗ ಸಂಬಂಧವನ್ನು ಅಸಮಾನತೆಯ ನೆಲೆಯಿಂದ ಸಮಾನತೆಯ ನೆಲೆಗೆ ಒಯ್ಯುವಲ್ಲಿ ಪ್ರಮುಖ ಪಾತ್ರ ವಹಿಸಿದವು. ಹೊಸ ಲಿಂಗ ಸಂಬಂಧದಲ್ಲಿ ಮಹಿಳೆ ಮತ್ತು ಪುರುಷರು ಸಮಾನ ಅಧಿಕಾರ ಹೊಂದುವುದು ಆದರ್ಶವಾಗಿದೆ.

ಜಾತಿ ತಾರತಮ್ಯ

ದಿನನಿತ್ಯದ ಬದುಕಲ್ಲಿ ಆಸ್ತಿ ಅಂತಸ್ತುಗಳನ್ನು, ಮೇಲುಕೀಳುಗಳನ್ನು ನಿರ್ವಹಿಸುವ ಮತ್ತೊಂದು ಸಂಬಂಧ ಜಾತಿ ಸಂಬಂಧ. ಇದು ಕೂಡ ಲಿಂಗ ಸಂಬಂಧದಂತೆ ಅಸಮಾನತೆಯ ನೆಲೆಯಲ್ಲಿ ಕಾರ್ಯ ನಿರ್ವಹಿಸುತ್ತದೆ. ಬ್ರಹ್ಮ ಸೃಷ್ಟಿ, ಕರ್ಮ ಸಿದ್ಧಾಂತ ಇತ್ಯಾದಿ ವೈಚಾರಿಕತೆಗಳು ಜಾತಿಗಳ ನಡುವಿನ ಅಸಮಾನತೆಯನ್ನು ಗಟ್ಟಿಗೊಳಿಸುವಲ್ಲಿ ಪ್ರಮುಖ ಪಾತ್ರ ವಹಿಸಿವೆ. ಬ್ರಹ್ಮನ ತಲೆಯಿಂದ ಬ್ರಾಹ್ಮಣ, ಭುಜಗಳಿಂದ ಕ್ಷತ್ರಿಯ, ತೊಡೆಯಿಂದ ವೈಶ್ಯ ಮತ್ತು ಕಾಲಿಂದ ಶೂದ್ರರು ಜನ್ಮ ತಾಳಿದ್ದಾರೆ. ಆದುದರಿಂದ ಬ್ರಾಹ್ಮಣ ಮೇಲೆ, ಕ್ಷತ್ರಿಯ ಸ್ವಲ್ಪ ಕೆಳಗೆ, ವೈಶ್ಯ ಕ್ಷತ್ರಿಯನಿಗಿಂತ ಕೆಳಗೆ ಮತ್ತು ಶೂದ್ರ ಸಮಾಜದ ಬುಡದಲ್ಲಿ ಇರುವುದು ಸಹಜ ಎನ್ನುವ ವಿವರಣೆಯನ್ನು ಬ್ರಹ್ಮ ಸೃಷ್ಟಿಯ ವೈಚಾರಿಕತೆ ಹೇಳುತ್ತದೆ. ಸಮಾಜದ ವಿವಿಧ ಸ್ತರಗಳಲ್ಲಿ ಹುಟ್ಟುವುದು ವ್ಯಕ್ತಿಯ ಹಿಂದಿನ ಜನ್ಮದ ಕರ್ಮದ ಫಲ ಎನ್ನುವ ವಿವರಣೆಯನ್ನು ಕರ್ಮ ಸಿದ್ಧಾಂತ ನೀಡುತ್ತಿದೆ. ಹಿಂದಿನ ಜನ್ಮದ ಕರ್ಮದ ಫಲವಾಗಿ ವ್ಯಕ್ತಿಯೊಬ್ಬ ಶೂದ್ರನಾಗಿ ಜನಿಸುತ್ತಾನೆ. ಶೂದ್ರನಾಗಿ ಜನಿಸಿದ್ದೇನೆಂದು ಜರೆಯುತ್ತಾ ಕುಳಿತುಕೊಳ್ಳುವುದಲ್ಲ. ಶೂದ್ರನಾಗಿ ನಿರ್ವಹಿಸಬೇಕಾದ ಜವಾಬ್ದಾರಿಗಳನ್ನು ಚಾಚೂ ತಪ್ಪದೆ ನಿರ್ವಹಿಸಿದರೆ ಮುಂದಿನ ಜನ್ಮದಲ್ಲಿ ಉತ್ತಮ ಹುಟ್ಟು ಸಾಧ್ಯ. ಅದು ಬಿಟ್ಟು ಶೂದ್ರತನವನ್ನು

ನಿರಾಕರಿಸುವ ಕೆಲಸ ಮಾಡಿದರೆ ಮುಂದಿನ ಜನ್ಮದಲ್ಲಿ ಇದಕ್ಕಿಂತಲೂ ಕೆಟ್ಟ (ನಾಯಿಯಾಗಿ, ಹಂದಿಯಾಗಿ) ಜನ್ಮತಾಳುವ ಸಾಧ್ಯತೆ ಇದೆಯೆಂದು ಕರ್ಮ ಸಿದ್ಧಾಂತ ಹೇಳುತ್ತದೆ. ಹೀಗೆ ಕರ್ಮ ಸಿದ್ಧಾಂತ ಹುಟ್ಟಿನಿಂದ ಬರುವ ಲೋಪದೋಷಗಳನ್ನು ಪ್ರಶ್ನಿಸುವ ಎಲ್ಲ ಅವಕಾಶಗಳನ್ನು ನಿರಾಕರಿಸುತ್ತದೆ.

ಆಧುನಿಕ ಸಮಾಜದಲ್ಲಿ ಈ ಬಗೆಯ ವೈಚಾರಿಕತೆಗಳು ಮನುಷ್ಯ ಮನುಷ್ಯರ ನಡುವೆ ಗೋಡೆಗಳನ್ನು ನಿರ್ಮಿಸುವ ಸಾಧ್ಯತೆಗಳನ್ನು ಅಲ್ಲಗಳೆಯುವ ಮತ್ತು ಒಪ್ಪುವ ಸಾಕಷ್ಟು ನಿಲುವುಗಳಿವೆ. ಈ ಅಧ್ಯಯನಗಳನ್ನು ಪರಾಮರ್ಶಿಸುವ ಬದಲು ಕರ್ನಾಟಕದ ಗ್ರಾಮೀಣ ಪ್ರದೇಶಗಳಲ್ಲಿ ಆಚರಣೆಯಲ್ಲಿರುವ ಕೆಲವೊಂದು ಸಂಗತಿಗಳನ್ನು ಗಮನಿಸೋಣ. ಗ್ರಾಮೀಣ ಪ್ರದೇಶದ ಹೋಟೆಲುಗಳಲ್ಲಿ ಇಂದು ಕೂಡ ದಲಿತರಿಗೆ ಪ್ರತ್ಯೇಕ ಗ್ಲಾಸು, ಬೆಂಚ್ ಇದೆ. ಚಹಾ ಕುಡಿದ ಗ್ಲಾಸನ್ನು ದಲಿತರು ತೊಳೆದಿಟ್ಟು ಹೋಗಬೇಕು. ದೇವಸ್ಥಾನಗಳಲ್ಲಿ ಪ್ರವೇಶಿಸಬೇಡಿಯೆಂದು ನೇರವಾಗಿ ಎಲ್ಲೂ ಹೇಳುವುದಿಲ್ಲ. ಆದರೂ ಬಹುತೇಕ ಕಡೆಗಳಲ್ಲಿ (ಹಿರಿಯ) ದಲಿತರು ದೇವಸ್ಥಾನ ಪ್ರವೇಶಿಸುವುದಿಲ್ಲ. ಏಕೆಂದು ಅವರನ್ನು ಕೇಳಿದರೆ ನಮ್ಮ ಆತ್ಮಸಾಕ್ಷಿ ಒಪ್ಪುವುದಿಲ್ಲ ಎನ್ನುತ್ತಾರೆ. ಈ ಆತ್ಮಸಾಕ್ಷಿ ಎಲ್ಲಿಂದ ಬರುತ್ತದೆ? ಜಾತಿಗಳ ಏಣಿಶ್ರೇಣಿಗಳ ಬಗ್ಗೆ ದಿನನಿತ್ಯದ ಬದುಕಿನಲ್ಲಿ ನಡೆಯುವ (ಬ್ರಹ್ಮಸೃಷ್ಟಿ, ಕರ್ಮಸಿದ್ಧಾಂತ ಇತ್ಯಾದಿಗಳ ಸ್ಥಳೀಯ ರೂಪದ) ಸಂಕಥನಗಳು ಮತ್ತು ಸಂಪನ್ಮೂಲಗಳ ಒಡೆತನದಿಂದ ಪ್ರಾಪ್ತವಾಗುವ ಅಧಿಕಾರ ಈ ಆತ್ಮಸಾಕ್ಷಿಯನ್ನು ರೂಪಿಸುತ್ತಿವೆ.

ಇದೇ ಹಳ್ಳಿಗಳ ಕಿರಿಯ ದಲಿತರು ತಮ್ಮದೇ ಹಿರಿಯರು ತುಳಿದ ದಾರಿಯನ್ನು ತುಳಿಯಲು ಇಷ್ಟಪಡುವುದಿಲ್ಲ. ಹೋಟೆಲುಗಳ ಪ್ರತ್ಯೇಕ ಗ್ಲಾಸುಗಳು, ದೇವಸ್ಥಾನಗಳ ಹೊರಗಿಡುವ ಕ್ರಮ ಇತ್ಯಾದಿಗಳನ್ನು ಕಿರಿಯರು ನಿರಾಕರಿಸುತ್ತಾರೆ ಮತ್ತು ಪ್ರತಿಭಟಿಸುತ್ತಾರೆ. ಇದು ಹೇಗೆ ಸಾಧ್ಯವಾಯಿತು? ಕಿರಿಯರು ಹೊಸ ವೈಚಾರಿಕತೆಗಳಿಗೆ ತೆರೆದುಕೊಂಡಿದ್ದಾರೆ. ಅಂಬೇಡ್ಕರ್, ಭಾರತದ ಸಂವಿಧಾನ, ದಲಿತ ಚಳವಳಿ ಮುಂತಾದವು ಹೊಸ ತಲೆಮಾರಿನ ದಲಿತರಿಗೆ ಹೊಸಲೋಕವನ್ನು ಪರಿಚಯಿಸಿವೆ. ದಲಿತ ಕಿರಿಯರಿಗೆ ತೆರೆದುಕೊಂಡ ಹೊಸಲೋಕದಲ್ಲಿ ಜಾತಿ, ಲಿಂಗ, ಧರ್ಮಗಳು ದೇವರ ಸೃಷ್ಟಿಯಲ್ಲ; ಮನುಷ್ಯ ಸೃಷ್ಟಿ. ಭೌತಿಕ ಮತ್ತು ಸಾಂಸ್ಕೃತಿಕ ಸಂಪನ್ಮೂಲದ ಮೇಲಿನ ತನ್ನ ಹಿಡಿತವನ್ನು ಮುಂದುವರಿಸಲು ಸಮಾಜದ ಮೇಲ್ವರ್ಗ ಈ ಜಾತಿ, ಲಿಂಗ, ಧರ್ಮ ಭೇದಗಳನ್ನು ಸೃಷ್ಟಿಸಿದೆ. ವಾಸ್ತವದಲ್ಲಿ ಮನುಷ್ಯರೆಲ್ಲ ಸಮಾನರೆನ್ನುವ ಹೊಸ ವೈಚಾರಿಕತೆ ಕಿರಿಯ ದಲಿತರ ಪ್ರಜ್ಞೆಯ ಭಾಗವಾಗಿದೆ. ಸಂಬಂಧಗಳನ್ನು ಅಸಮಾನತೆಯ ನೆಲೆಯಲ್ಲಿ ಕಟ್ಟಿಕೊಳ್ಳುವ ಹಿಂದಿನ ವೈಚಾರಿಕತೆಯನ್ನು ಹೊಸ ತಲೆಮಾರಿನ ದಲಿತರು ನಿರಾಕರಿಸುತ್ತಾರೆ. ಈ ಎಲ್ಲ ಬೆಳವಣಿಗೆಗಳು ಹೊಸ ತಲೆಮಾರಿನ ದಲಿತರ ನಡವಳಿಕೆಗಳನ್ನು ಬದಲಾಯಿಸಿವೆ. ಜಾತಿ ಕಾರಣಕ್ಕಾಗಿ ತಗ್ಗಿಬಗ್ಗಿ ನಡೆಯುವ ಜಾಗದಲ್ಲಿ ಸಮಾನತೆಯ ನೆಲೆಯಲ್ಲಿ ವ್ಯವಹರಿಸುವ ಅಭ್ಯಾಸ ಆರಂಭವಾಗಿದೆ.

ಆಧುನಿಕತೆ

ದಲಿತರನ್ನು ಹೊರಗಿಡುವುದು, ಲಿಂಗ ಭೇದ ಆಚರಿಸುವುದು, ಜಾತಿ ಭೇದ ಆಚರಿಸುವುದು ಇತ್ಯಾದಿ ಸಾಂಪ್ರದಾಯಿಕ ಸಮಾಜದ ಗುಣಲಕ್ಷಣಗಳು. ಇಡೀ ಜಗತ್ತೇ ಒಂದು ಹಳ್ಳಿಯೆಂದು ಅಬ್ಬರದ ಪ್ರಚಾರ ನಡೆಯುವ ಇಂದಿನ ಸಂದರ್ಭದಲ್ಲಿ ಇವೆಲ್ಲ ಎಷ್ಟು ಪ್ರಸ್ತುತ. ಇಂತಹ ಆಚರಣೆಗಳಿದ್ದರೂ ಇವುಗಳು ಕುಗ್ರಾಮಗಳಿಗೆ ಸೀಮಿತ ಇತ್ಯಾದಿ ವಾದಗಳು ಹೆಚ್ಚಿನ ಚಲಾವಣೆಯನ್ನು ಪಡೆದಿವೆ. ಆಧುನಿಕ ಲೋಕಕ್ಕೆ ತೆರೆದುಕೊಂಡವರಲ್ಲಿ ಇಂತಹ

ಸಣ್ಣತನ ಇರಲು ಸಾಧ್ಯವಿಲ್ಲ ಎನ್ನುವ ಒಂದು ಮುಗ್ಧ ತಿಳುವಳಿಕೆ ಬಹುತೇಕ ಅಧ್ಯಯನಕಾರರಲ್ಲಿ ಮತ್ತು ಜನಸಾಮಾನ್ಯರಲ್ಲಿ ಕೆಲಸ ಮಾಡುತ್ತಿದೆ. ಇಂತಹ ನಿಲುವುಗಳು ಎಷ್ಟು ಸರಿ? ಆಧುನೀಕರಣವನ್ನು ತಾಂತ್ರಿಕವಾಗಿ ವ್ಯಾಖ್ಯಾನಿಸಿಕೊಂಡಾಗ ಮಾತ್ರ ಇಂತಹ ನಿಲುವುಗಳನ್ನು ತಳೆಯಲು ಸಾಧ್ಯ. ಪೇಟೆ ಪಟ್ಟಣಗಳಲ್ಲಿ ವಾಸಿಸುವವರನ್ನು, ಆಧುನಿಕ ಸರಕು (ಡ್ರೆಸ್, ಟಿವಿ, ಫ್ರಿಡ್ಜ್, ಕಾರು ಇತ್ಯಾದಿ) ಸೇವೆಗಳನ್ನು ಬಳಸುವವರನ್ನು, ಇಂಗ್ಲಿಷ್ ಬಲ್ಲವರನ್ನು ಆಧುನಿಕರೆಂದು ತಿಳಿಯುವ ಒಂದು ಸಾಮಾನ್ಯ ಅಭ್ಯಾಸ ಎಲ್ಲ ಸಮಾಜಗಳಲ್ಲೂ ಇದೆ. ಇಲ್ಲೆಲ್ಲ ಆಧುನಿಕ ಸರಕು/ಸೇವೆಗಳನ್ನು ಬಳಸುವುದನ್ನು ಆಧುನಿಕ ಮೌಲ್ಯಗಳನ್ನು (ಸಮಾನತೆ, ಸ್ವಾತಂತ್ರ್ಯ, ಸ್ವಾಯತ್ತತೆ ಇತ್ಯಾದಿ) ರೂಢಿಸಿಕೊಳ್ಳುವುದಕ್ಕೆ ಸಮೀಕರಿಸಲಾಗುತ್ತಿದೆ.

ಇದು ಸರಿಯಾದ ಕ್ರಮವಲ್ಲ. ಎಷ್ಟೋ ಬಾರಿ ಈ ಎರಡರ (ಆಧುನಿಕ ಸರಕು/ಸೇವೆಗಳನ್ನು ಬಳಸುವುದು ಮತ್ತು ಆಧುನಿಕ ಮೌಲ್ಯಗಳನ್ನು ರೂಢಿಸಿಕೊಳ್ಳುವುದರ) ನಡುವೆ ಏನೇನೂ ಸಂಬಂಧ ಇರುವುದಿಲ್ಲ. ಆಧುನಿಕ ಸರಕು/ಸೇವೆಗಳ ಬಳಕೆಯ ದೃಷ್ಟಿಯಿಂದ ಪಕ್ಕಾ ಆಧುನಿಕರಂತೆ ಕಾಣುವವರು ದೃಷ್ಟಿಕೋನ ಮತ್ತು ನಡವಳಿಕೆಯಲ್ಲಿ ಪಕ್ಕಾ ಪಾಳೆಯಗಾರರಂತೆ ವರ್ತಿಸುತ್ತಿರುತ್ತಾರೆ. ಕೆಲವರು ಸಾರ್ವಜನಿಕ ನಡವಳಿಕೆಯಲ್ಲಿ ಆಧುನಿಕ ಗುಣಲಕ್ಷಣಗಳನ್ನು ಪ್ರದರ್ಶಿಸುತ್ತಾ ಖಾಸಗಿ ಬದುಕಿನಲ್ಲಿ ಎಲ್ಲ ಭೇದಗಳನ್ನು ಚಾಚೂ ತಪ್ಪದೆ ಆಚರಿಸುತ್ತಿರುತ್ತಾರೆ. ಆಧುನಿಕರಣ ಮತ್ತೊಂದು ಸಮಸ್ಯೆಯನ್ನು ನಮ್ಮ ಮುಂದಿಟ್ಟಿದೆ. ಎಲ್ಲ ಜಾತಿ, ಧರ್ಮಗಳಿಂದಲೂ ಸಾಕಷ್ಟು ಮಂದಿ ಆಧುನೀಕರಣದ ಲಾಭ ಪಡೆದವರಿದ್ದಾರೆ. ಮೇಲ್ಜಾತಿಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ಮತ್ತು ತಳಸಮುದಾಯಗಳಿಂದ ಕಡಿಮೆ ಪ್ರಮಾಣದಲ್ಲಿ ಆಧುನೀಕರಣದಿಂದ ಲಾಭ ಪಡೆದವರನ್ನು ನೋಡಬಹುದು. ಭೂಮಿ ಅಥವಾ ಬಂಡವಾಳದ ಮರುಹಂಚಿಕೆಯಿಂದ ಈ ಎಲ್ಲ ಬದಲಾವಣೆಗಳು ಪ್ರಾಪ್ತವಾಗಿಲ್ಲ. ಮೀಸಲಾತಿ ಮತ್ತು ಇತರ ಸರಕಾರಿ ಯೋಜನೆಗಳ ಮೂಲಕ ತಳಸ್ತರದ ಜನರ ಆಧುನಿಕ ಸ್ಕಿಲ್ ಪಡೆಯಲು ಸಾಧ್ಯವಾಯಿತು. ಆಧುನಿಕ ಸ್ಕಿಲ್ ಹೊಂದಿದ ತಳಸ್ತರದ ಜನರು ಆಧುನಿಕ ಸಂಸ್ಥೆಗಳಲ್ಲಿ ಉದ್ಯೋಗ ಪಡೆಯಲು ಸಾಧ್ಯವಾಯಿತು.

ಆದರೆ ಆಧುನಿಕ ಸಂಸ್ಥೆಗಳಲ್ಲೂ ಸಾಂಪ್ರದಾಯಿಕ ಗುರುತಿನ ನೆಲೆಯಲ್ಲಿ ಗುರುತಿಸಿ-ಕೊಳ್ಳುವುದು ಬದಲಾಗಲಿಲ್ಲ. ಸಾಂಪ್ರದಾಯಿಕ ಗುರುತಿನ ನೆಲೆಯಲ್ಲಿ ಸಂಘಟನೆಗಳನ್ನು ಕಟ್ಟಿಕೊಳ್ಳುವುದು, ತಮ್ಮ ಹಕ್ಕಿಗಾಗಿ ಹೋರಾಡುವುದು, ತಮಗಾಗುವ ಅನ್ಯಾಯಗಳ ವಿರುದ್ಧ ಪ್ರತಿಭಟಿಸುವುದು ನಡೆಯುತ್ತಿದೆ. ಸಂಸ್ಥೆಯೊಳಗೆ ನಡೆಯುವ ಇಂತಹ ರಾಜಕೀಯ ಪ್ರಕ್ರಿಯೆಗಳಿಗೂ ಸಂಖ್ಯೆ ಮುಖ್ಯವಾಗುತ್ತದೆ. ನಿರ್ದಿಷ್ಟ ಗುರುತಿಗೆ ಸೇರಿದ ಜನರ ಸಂಖ್ಯೆ ಹೆಚ್ಚಾದಂತೆ ಸಂಸ್ಥೆಯೊಳಗಿನ ಅಧಿಕಾರ ಸಂಬಂಧಗಳನ್ನು ಅವರು ತಮ್ಮ ಆಸಕ್ತಿಗೆ ಪೂರಕವಾಗಿ ಬಳಸಿಕೊಳ್ಳುವ ಸಾಧ್ಯತೆಗಳು ಹೆಚ್ಚಿವೆ. ಆದುದರಿಂದ ಕೆಲವೊಂದು ಪರಿಭಾಷೆಗಳನ್ನು ಅವುಗಳ ಮೂಲ ಅರ್ಥದ ರೂಪದಲ್ಲಿ ಬಳಸುವ ಅನಿವಾರ್ಯತೆ ಇದೆ. ದಲಿತ, ಅಲ್ಪಸಂಖ್ಯಾತ, ಮಹಿಳೆ ಇತ್ಯಾದಿ ಪರಿಭಾಷೆಗಳು ಮೂಲತಃ ಹೊರಗಿಟ್ಟ, ಬಹಿಷ್ಕೃತ, ಅಂಚಿನ ಇತ್ಯಾದಿ ಅರ್ಥಗಳನ್ನು ಹೊಂದಿದೆ. ಇವುಗಳನ್ನು ಜಾತಿ, ಧರ್ಮ, ಲಿಂಗ ಸಂಬಂಧಿಯಾಗಿ ಬಳಸುವ ಬದಲು ಅವುಗಳ ಮೂಲ ಅರ್ಥದ (ಹೊರಗಿಟ್ಟ, ಬಹಿಷ್ಕೃತ) ರೂಪದಲ್ಲಿ ಬಳಸುವುದು ಹೆಚ್ಚು ಸೂಕ್ತ. ತಳಸ್ತರದ ಸಮುದಾಯಗಳೇ ಅಧಿಕಾರ ಸ್ಥಾನದಲ್ಲಿರುವ ಸಂದರ್ಭದಲ್ಲಿ ಮೇಲ್ ಸಮುದಾಯಕ್ಕೆ ಸೇರಿದವರು ಆದರೆ ನಿರ್ದಿಷ್ಟ ಸಂದರ್ಭದಲ್ಲಿ ಹೊರಗಿಟ್ಟ ಅನುಭವ ಹೊಂದುವ ಸಾಧ್ಯತೆಗಳಿವೆ.

ಈ ಬಗೆಯ ಇಬ್ಬಂದಿತನ ಕೇವಲ ವ್ಯಕ್ತಿಗಳಿಗೆ ಸೀಮಿತವಾಗಿಲ್ಲ. ಸಂಸ್ಥೆಗಳಲ್ಲೂ ಇದೇ ಬಗೆಯ ಇಬ್ಬಂದಿತನವನ್ನು ಗುರುತಿಸಬಹುದು. ಎಲ್ಲ ಆಧುನಿಕ ಸಂಸ್ಥೆಗಳಲ್ಲೂ (ಕೋರ್ಟ್, ಕಚೇರಿ, ಪೊಲೀಸ್ ಠಾಣೆ, ಆಸ್ಪತ್ರೆ, ಶಾಲೆ ಕಾಲೇಜು, ವಿಶ್ವವಿದ್ಯಾಲಯ) ಇದೇ ಬಗೆಯ ಇಬ್ಬಂದಿತನವನ್ನು ಗುರುತಿಸಬಹುದು. ಸ್ಥಳೀಯ ಮೇಲ್ಜಾತಿ, ಮೇಲ್ವರ್ಗಗಳ ಆಸಕ್ತಿಗಳನ್ನು ಪ್ರತಿನಿಧಿಸುವ ಗುಣಲಕ್ಷಣಗಳನ್ನು ಎಲ್ಲ ಆಧುನಿಕ ಸಂಸ್ಥೆಗಳ ವ್ಯವಹಾರಗಳಲ್ಲಿ (ನೇಮಕಾತಿ, ದಿನನಿತ್ಯದ ವ್ಯವಹಾರ ಇತ್ಯಾದಿಗಳಲ್ಲಿ) ನೋಡಬಹುದು. ಇದೇ ಸಂಸ್ಥೆಗಳಲ್ಲಿ ದುಡಿಯುವ ತಳಸ್ತರದ ಜನರು ಆಧುನಿಕ ಮೌಲ್ಯಗಳನ್ನು ಮುಂಚೂಣಿಗೆ ತರುವ ಬದಲು ಮೇಲ್ಜಾತಿಗಳ ಮಾದರಿಯನ್ನೇ ಅನುಸರಿಸುತ್ತಿದ್ದಾರೆ. ಇದರಿಂದ ಎಷ್ಟೋ ಬಾರಿ ಸಾರ್ವಜನಿಕ ಸಂಸ್ಥೆಗಳು ಪ್ರಜಾಪ್ರಭುತ್ವ ಮೌಲ್ಯಗಳನ್ನು ಆಚರಿಸುವ ತಾಣಗಳಂತೆ ಕಾಣುವ ಬದಲು ಯಾವುದೋ ಪಾಳೇಗಾರರ ಸಂಸ್ಥಾನದಂತೆ ತೋರುತ್ತಿವೆ. ಸಾರ್ವಜನಿಕ ಸಂಸ್ಥೆಗಳ ಇಂತಹ ವೈಫಲ್ಯವನ್ನು ಪರಿಹರಿಸುವ ನಿಟ್ಟಿನಲ್ಲಿ ತೊಂಬತ್ತರ ನಂತರ ನಮ್ಮಲ್ಲಿ ಖಾಸಗಿ ಕ್ಷೇತ್ರದ ಸಂಸ್ಥೆಗಳಿಗೆ ಹೆಚ್ಚಿನ ಮಹತ್ವ ನೀಡಲಾಗಿದೆ. ಖಾಸಗಿ ಸಂಸ್ಥೆಗಳು ಆಧುನಿಕ ಮೌಲ್ಯಗಳನ್ನು ಆಚರಿಸುವ ಉತ್ತಮ ಕೇಂದ್ರಗಳೆಂದು ಬಗೆಯಲಾಗಿದೆ. ಏಕೆಂದರೆ ಇವು ಮಾರುಕಟ್ಟೆ ನಿಯಮಾನುಸಾರ ಕೆಲಸ ನಿರ್ವಹಿಸಬೇಕಾಗಿದೆ. ಮಾರುಕಟ್ಟೆಯಲ್ಲಿ ಬೇಡಿಕೆ ಪೂರೈಕೆಗಳು ಮಾತ್ರ ಲಾಭನಷ್ಟಗಳನ್ನು ತೀರ್ಮಾನಿಸುತ್ತವೆಯೆಂದು ತಿಳಿಯಲಾಗಿದೆ.

ಈ ಎಲ್ಲ ಕಾರಣಗಳಿಂದ ಇಲ್ಲಿ ಸಾಂಪ್ರದಾಯಿಕ ಸಮಾಜದ ಗುಣಲಕ್ಷಣಗಳು ಕೆಲಸ ಮಾಡಲು ಸಾಧ್ಯವಿಲ್ಲ ಎನ್ನುವ ಗ್ರಹಿತ ಇದೆ. ಆದರೆ ಇತ್ತೀಚೆಗೆ ನಡೆದ ಕೆಲವೊಂದು ಅಧ್ಯಯನಗಳ ಪ್ರಕಾರ ಖಾಸಗಿ ಕ್ಷೇತ್ರದ ಸಂಸ್ಥೆಗಳು ಕೂಡ ಸಾಂಪ್ರದಾಯಿಕ ಸಮಾಜದ ಜಾತಿ, ಲಿಂಗ ಭೇದಗಳಿಂದ ಮುಕ್ತವಾಗಿಲ್ಲ ಎನ್ನುವ ಸಂಗತಿ ಬೆಳಕಿಗೆ ಬಂದಿದೆ. ಖಾಸಗಿ ಕ್ಷೇತ್ರದ ಸಂಸ್ಥೆಗಳಲ್ಲಿ ನಡೆಯುವ ಜಾತಿ ಭೇದದ ಆಚರಣೆಯನ್ನು ಅರ್ಥಮಾಡಿಕೊಳ್ಳಲು ಅಧ್ಯಯನಕಾರರೊಂದು ಪ್ರಯೋಗಾತ್ಮಕ ಅಧ್ಯಯನ ನಡೆಸಿದ್ದಾರೆ. ಖಾಸಗಿ ಕ್ಷೇತ್ರದ ದೊಡ್ಡ ಕಂಪೆನಿಗಳು ತಮ್ಮ ಕಂಪೆನಿಯ ಉದ್ಯೋಗ ಆಕಾಂಕ್ಷಿಗಳ ಹುಡುಕಾಟಕ್ಕಾಗಿ ಇಂಗ್ಲಿಷ್ ದೈನಿಕದಲ್ಲಿ (ಇಂಡಿಯನ್ ಎಕ್ಸ್‌ಪ್ರೆಸ್, ಹಿಂದುಸ್ಥಾನ್ ಟೈಮ್ಸ್, ದಿ ಹಿಂದೂ ಇತ್ಯಾದಿ ಪತ್ರಿಕೆಗಳಲ್ಲಿ) ಜಾಹೀರಾತು ನೀಡುತ್ತಾರೆ. ಇಂತಹ ಜಾಹೀರಾತುಗಳಿಗೆ ಹೆಚ್ಚು ಕಡಿಮೆ ಸಮಾನ ವಿದ್ಯಾರ್ಹತೆ ಮತ್ತು ಅನುಭವ ಹೊಂದಿರುವ ಆದರೆ ಬೇರೆ ಬೇರೆ ಸಾಮಾಜಿಕ ಹಿನ್ನೆಲೆಯ (ಮೇಲ್ಜಾತಿ, ಕೆಳಜಾತಿ ಮತ್ತು ಅಲ್ಪಸಂಖ್ಯಾತ ಹಿನ್ನೆಲೆಯ) ಸುಮಾರು ಐನೂರರಷ್ಟು ಡಮ್ಮಿ ಅರ್ಜಿಗಳನ್ನು ಅಧ್ಯಯನಕಾರರು ಸಲ್ಲಿಸುತ್ತಾರೆ. ಮೇಲ್ಜಾತಿ ಹಿನ್ನೆಲೆಯ ವಿವರಗಳನ್ನು ನೀಡಿದ ಅರ್ಜಿಗಳಿಗೆ ಅತಿ ಹೆಚ್ಚಿನ ಸಂದರ್ಶನ ಆಹ್ವಾನ ಬಂದರೆ ಕೆಳಜಾತಿ ವಿವರಗಳನ್ನು ಹೊಂದಿದ ಅರ್ಜಿಗಳಿಗೆ ಶೇಕಡಾ ಐವತ್ತಕ್ಕಿಂತ ಕಡಿಮೆ ಸಂದರ್ಶನ ಆಹ್ವಾನ ಬಂದಿದೆ. ಅಲ್ಪ ಸಂಖ್ಯಾತರ ಸ್ಥಿತಿ ಇನ್ನೂ ಚಿಂತಾಜನಕ; ಶೇಕಡಾ ಮೂವತ್ತಕ್ಕಿಂತಲೂ ಕಡಿಮೆ ಸಂದರ್ಶನ ಆಹ್ವಾನಗಳು ಬಂದಿವೆ. ಹೀಗೆ ಖಾಸಗಿ ಕ್ಷೇತ್ರದ ಸಂಸ್ಥೆಗಳು ಕೂಡ ದೊಡ್ಡಮಟ್ಟಿನ ಜಾತಿ ಭೇದವನ್ನು ಆಚರಿಸುತ್ತಿವೆ ಎನ್ನುವ ತೀರ್ಮಾನಕ್ಕೆ ಈ ಅಧ್ಯಯನ ಬಂದಿದೆ.

ಬಿಡಿಬಿಡಿಯಾಗಿ ನೋಡುವುದು

ಲಿಂಗ, ಜಾತಿ, ಧರ್ಮಗಳು ಇಂದೂ ಕೂಡ ವ್ಯಕ್ತಿ, ಕುಟುಂಬವೊಂದರ ಬದುಕಿನ ಗುಣಮಟ್ಟವನ್ನು ಪ್ರಭಾವಿಸುತ್ತಿವೆ ಎನ್ನುವುದು ಮೇಲಿನ ಉದಾಹರಣೆಗಳಿಂದ ದೃಢಪಡುತ್ತಿದೆ. ಇದು ಮಾತ್ರ ಸಮಾಜ ಜ್ಞಾನದ ಸಮಸ್ಯೆಯಲ್ಲ. ಇದರೊಂದಿಗೆ

ಸಮಾಜವನ್ನು ಬಿಡಿಬಡಿಯಾಗಿ ನೋಡುವ ಸಮಾಜ ವಿಜ್ಞಾನದ ಕ್ರಮ ಕೂಡ ಸಮಾಜ ಜ್ಞಾನವನ್ನು ಸಮಾಜದಿಂದ ದೂರ ಮಾಡಿದೆ. ಸಮಾಜ ವಿಜ್ಞಾನದ ಅಧ್ಯಯನ ವಿಧಾನ ಸಮಾಜವನ್ನು ತುಂಡು ತುಂಡಾಗಿ ನೋಡಲು ತರಬೇತು ನೀಡುತ್ತಿದೆ. ಚರಿತ್ರೆ, ಸಮಾಜ ಶಾಸ್ತ್ರ, ಅರ್ಥಶಾಸ್ತ್ರ, ರಾಜಕೀಯ ಶಾಸ್ತ್ರ, ವಾಣಿಜ್ಯ ಶಾಸ್ತ್ರ ಈ ಎಲ್ಲವೂ ಸಾಮಾಜಿಕ ವ್ಯವಹಾರಗಳನ್ನು ಪ್ರತ್ಯಪ್ರತ್ಯೇಕವಾಗಿ ನೋಡಲು ವಿದ್ಯಾರ್ಥಿಗಳಿಗೆ ತರಬೇತು ನೀಡುತ್ತಿವೆ. ಆದರೆ ವ್ಯಕ್ತಿ, ಕುಟುಂಬವೊಂದರ ಬದುಕು ಇದಿಷ್ಟು ಅರ್ಥ, ಇದಿಷ್ಟು ರಾಜಕೀಯ, ಇದಿಷ್ಟು ಸಾಮಾಜಿಕ ಎನ್ನುವ ನೆಲೆಯಲ್ಲಿ ವಿಂಗಡಿಸಲ್ಪಟ್ಟಿಲ್ಲ. ಇವೆಲ್ಲವೂ ಪರಸ್ಪರ ಸಂಬಂಧಿಸಿವೆ. ಅಷ್ಟು ಮಾತ್ರವಲ್ಲ ಒಂದು ಮತ್ತೊಂದರ ಮೇಲೆ ಗಾಢವಾದ ಪ್ರಭಾವ ಬೀರುತ್ತದೆ. ಈ ಸಂಬಂಧವನ್ನು ಅರ್ಥಮಾಡಿಕೊಳ್ಳಲು ದೊಡ್ಡ ಅಧ್ಯಯನಗಳನ್ನು ಉಲ್ಲೇಖಿಸುವ ಅಥವಾ ಮಹತ್ತರವಾದ ಸಂಶೋಧನೆ ನಡೆಸುವ ಅಗತ್ಯವಿಲ್ಲ.

ನಮ್ಮ ಸುತ್ತಮುತ್ತಲಿನ ಸಮಾಜವನ್ನು ಮುಕ್ತ ಮನಸ್ಸಿನಿಂದ ನೋಡಿದರೆ ಸಾಕು. ಈ ಎಲ್ಲದರ ನಡುವಿನ ಸಂಬಂಧ ಸುಲಭದಲ್ಲಿ ಅರ್ಥವಾಗುತ್ತದೆ. ಸಾಮಾಜಿಕವಾಗಿ ಕೆಳಗಿರುವವರು ಆರ್ಥಿಕವಾಗಿ, ರಾಜಕೀಯವಾಗಿ ಮತ್ತು ಸಾಂಸ್ಕೃತಿಕವಾಗಿಯೂ ಕೆಳಗೇ ಇದ್ದಾರೆ. ಅತ್ಯಂತ ಕಡಿಮೆ ಶಿಕ್ಷಣ ಹೊಂದಿದವರು, ಕಡಿಮೆ ಆದಾಯವುಳ್ಳವರು, ಕಡಿಮೆ ಭೂಮಿ ಉಳ್ಳವರು, ಕಡಿಮೆ ಆರೋಗ್ಯ ಹೊಂದಿರುವವರು, ಕಡಿಮೆ ಸಂಪನ್ಮೂಲಗಳ ಒಡೆತನ ಹೊಂದಿದವರು ಯಾರೆಂದು ಪರಿಶೀಲಿಸಿದರೆ ಎಲ್ಲ ಕಡೆ (ಹಳ್ಳಿ ಇರಲಿ, ಪೇಟೆ ಇರಲಿ, ಜಿಲ್ಲೆ ಇರಲಿ, ರಾಜ್ಯ ಇರಲಿ, ದೇಶ ಇರಲಿ) ಏಣಿಯ ಬುಡದಲ್ಲಿರುವವರೇ (ಮಹಿಳೆಯರು, ದಲಿತರು, ಬುಡಕಟ್ಟು ಜನರು, ಹಿಂದುಳಿದ ವರ್ಗದ ಜನರು) ಈ ಗುಂಪಲ್ಲಿ ಎದ್ದು ಕಾಣುತ್ತಾರೆ. ಸ್ವಾತಂತ್ರ್ಯ ಸಿಕ್ಕಿ ಆರು ದಶಕಗಳ ನಂತರವೂ ಈ ಸ್ಥಿತಿ ಏಕಿದೆ? ಎನ್ನುವುದು ಅರ್ಥವಾಗಬೇಕಾದರೆ ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಬದುಕಿನ ನಡುವಿನ ಸಂಬಂಧವನ್ನು ಅರ್ಥಮಾಡಿಕೊಳ್ಳಬೇಕು. ಒಂದು ಸಣ್ಣ ಉದಾಹರಣೆಯ ಮೂಲಕ ಇವುಗಳ ನಡುವಿನ ಸಂಬಂಧವನ್ನು ಅರ್ಥ ಮಾಡಿಕೊಳ್ಳಬಹುದು.

ಕರ್ನಾಟಕ ಸರಕಾರ ಬಿಸಿಯೂಟ ಕಾರ್ಯಕ್ರಮವನ್ನು ಜಾರಿಗೊಳಿಸಿರುವುದು ಎಲ್ಲರಿಗೂ ತಿಳಿದಿರುವ ವಿಚಾರ. ಈ ಬಿಸಿಯೂಟ ಕಾರ್ಯಕ್ರಮದಲ್ಲಿ ಅಡುಗೆ ಕೆಲಸಕ್ಕೆ ಸ್ಥಳೀಯ ದಲಿತ, ಬುಡಕಟ್ಟು ಮಹಿಳೆಯರನ್ನು ನೇಮಕ ಮಾಡಿಕೊಳ್ಳಬೇಕೆಂದು ಸರಕಾರ ಸುತ್ತೋಲೆ ಹೊರಡಿಸಿತು. ಸರಕಾರದ ನಿಯಮವನ್ನು ಪಾಲಿಸುವ ನಿಟ್ಟಿನಲ್ಲಿ ಮುಖ್ಯ ಗುರುಗಳು ಸ್ಥಳೀಯ ದಲಿತ, ಬುಡಕಟ್ಟು ಮಹಿಳೆಯರನ್ನು ನೇಮಕ ಮಾಡಿದರು. ಈ ನೇಮಕಾತಿಯಿಂದ ಹೊಸತೊಂದು ಸಮಸ್ಯೆಯನ್ನು ಮುಖ್ಯ ಗುರುಗಳು ಎದುರಿಸಬೇಕಾಯಿತು. ಅದೇನೆಂದರೆ ಹಲವಾರು ಶಾಲೆಗಳಲ್ಲಿ ಮೇಲ್ಜಾತಿಗೆ ಸೇರಿದ ಮಕ್ಕಳು ದಲಿತ ಮಹಿಳೆ ಬೇಯಿಸಿದ ಬಿಸಿಯೂಟವನ್ನು ತಿನ್ನುವುದಿಲ್ಲವೆಂದು ಪ್ರತಿಭಟಿಸಿದರು. ಮುಖ್ಯಗುರುಗಳು ಸ್ಥಳೀಯ ಮೇಲ್ಜಾತಿಗಳನ್ನು ಎದುರು ಹಾಕಿಕೊಳ್ಳುವ ಬದಲು ದಲಿತ ಮಹಿಳೆಯರನ್ನು ಬಿಸಿಯೂಟ ತಯಾರಿಸುವ ಕೆಲಸದಿಂದ ಬಿಡುಗಡೆಗೊಳಿಸಿ ಬೇರೆಯವರನ್ನು ನೇಮಕ ಮಾಡಿದರು. ಈ ಬದಲಾವಣೆಯಿಂದ ಹುಡುಗರು ಊಟ ಮಾಡಿದರೋ ಬಿಟ್ಟರೋ ಎನ್ನುವ ಪ್ರಶ್ನೆಗಿಂತ ಜಾತಿ ಕಾರಣಕ್ಕಾಗಿ ಕೆಲಸ ಕಳೆದುಕೊಂಡ ದಲಿತ ಮಹಿಳೆಯ ಸ್ಥಿತಿ ಏನಾಯಿತೆಂದು ನೋಡೋಣ.

ಬಿಸಿಯೂಟ ತಯಾರಿಸುವ ಕೆಲಸದಲ್ಲಿ ದಲಿತ ಮಹಿಳೆ ಮುಂದುವರಿಯುತ್ತಿದ್ದರೆ ಅವರಿಗೆ ಪ್ರತಿ ತಿಂಗಳು ಐನೂರರಿಂದ ಏಳುನೂರು ರೂಪಾಯಿ ಸಂಬಳ ಬರುತ್ತಿತ್ತು. ಈ ಹಣದಿಂದ ಆಕೆ ತನ್ನ ಮನೆಯವರ ಆರೋಗ್ಯ, ಮಕ್ಕಳ ಶಿಕ್ಷಣ, ಉತ್ತಮ ಆಹಾರ, ಬಟ್ಟೆಬರೆ ಇತ್ಯಾದಿಗಳ ಖರ್ಚುಗಳನ್ನು ಭರಿಸಬಹುದಿತ್ತು. ಬಿಸಿಯೂಟದ ಉದ್ಯೋಗ ಕಳೆದುಕೊಂಡ ಕಾರಣ ಈ ಎಲ್ಲ ಸವಲತ್ತುಗಳಿಂದ ಆಕೆ ವಂಚಿತಳಾದಳು. ಇದರಿಂದ ಅವರ ಮತ್ತು ಅವರ ಮನೆಯವರ ಆರೋಗ್ಯ, ಶಿಕ್ಷಣ, ವಸತಿ ಮುಂತಾದವುಗಳು ಸುಧಾರಿಸಲಿಲ್ಲ. ಅಷ್ಟು ಮಾತ್ರವಲ್ಲ ಈ ಎಲ್ಲವೂ ಸುಧಾರಿಸಿದರೆ ಮಾತ್ರ ಆಕೆಯ ಆತ್ಮವಿಶ್ವಾಸ ಸುಧಾರಿಸುವುದು. ಆತ್ಮವಿಶ್ವಾಸದ ಕೊರತೆ ಆಕೆಯ ಸಮಸ್ಯೆಯನ್ನು ಸಾರ್ವಜನಿಕವಾಗಿ ಮಂಡಿಸಲು ಬಹುದೊಡ್ಡ ತೊಡಕಾಗುತ್ತದೆ. ಅವರು ತಮ್ಮ ಸಮಸ್ಯೆ ಪರಿಹಾರಕ್ಕಾಗಿ ಅಥವಾ ತನ್ನ ಪ್ರತಿನಿಧೀಕರಣಕ್ಕೆ ಸತತವಾಗಿ ಮತ್ತೊಬ್ಬರ ಆಸರೆ ಪಡೆಯುವ ಅನಿವಾರ್ಯತೆ ಸೃಷ್ಟಿಯಾಯಿತು. ಅಂದರೆ ರಾಜಕೀಯವಾಗಿ ಕೂಡ ಅವರು ನಿಷ್ಕ್ರಿಯರಾಗುವ ಸ್ಥಿತಿ ನಿರ್ಮಾಣವಾಯಿತು.

ಈ ಎಲ್ಲವೂ ಎಲ್ಲಿಂದ ಆರಂಭವಾಯಿತು? ಅವರ ಸಾಮಾಜಿಕ ಸ್ಥಾನಮಾನದಿಂದ (ದಲಿತ ಮಹಿಳೆ ಎನ್ನುವ ಕಾರಣದಿಂದ) ಅವರ ಆರ್ಥಿಕ (ಬಿಸಿಯೂಟ ತಯಾರಿಸುವ ಕೆಲಸ) ಅವಕಾಶ ತಪ್ಪಿಹೋಯಿತು. ಆರ್ಥಿಕ ಅವಕಾಶದಿಂದ ವಂಚಿತಳಾದ ಕಾರಣ ರಾಜಕೀಯವಾಗಿಯೂ ಆಕೆ ನಿಷ್ಕ್ರಿಯಳಾದಳು. ಹೀಗೆ ನಿಜ ಜೀವನದಲ್ಲಿ ಈ ಎಲ್ಲವೂ (ಸಾಮಾಜಿಕ, ಆರ್ಥಿಕ, ರಾಜಕೀಯ ಇತ್ಯಾದಿಗಳು) ಪರಸ್ಪರ ಸಂಬಂಧಿಸಿವೆ ಮತ್ತು ಒಂದು ಮತ್ತೊಂದನ್ನು ಗಾಢವಾಗಿ ಪ್ರಭಾವಿಸುತ್ತಿರುತ್ತವೆ. ಆದುದರಿಂದ ಸಂಬಂಧಗಳನ್ನು (ಲಿಂಗ ಸಂಬಂಧ ಇರಬಹುದು, ಜಾತಿ ಸಂಬಂಧ ಇರಬಹುದು, ಧರ್ಮ ಸಂಬಂಧ ಇರಬಹುದು) ಯಾವ ನೆಲೆಯಲ್ಲಿ (ಸಮಾನತೆಯ ನೆಲೆಯಲ್ಲಿಯೇ ಅಥವಾ ಅಸಮಾನತೆಯ ನೆಲೆಯಲ್ಲಿಯೇ) ಕಟ್ಟಿಕೊಳ್ಳಲಾಗಿದೆ? ಸಂಬಂಧಗಳನ್ನು ಕಟ್ಟಿಕೊಳ್ಳಲು ಬಳಸಿದ ವೈಚಾರಿಕತೆಗಳೇನು? ಇವುಗಳು ಸಮಾಜದ ಯಾವ ಗುಂಪಿನ ಆಸಕ್ತಿಗಳನ್ನು ಪ್ರತಿನಿಧಿಸುತ್ತವೆ? ಸಂಬಂಧಗಳು ಮತ್ತು ಸಂಪನ್ಮೂಲಗಳ (ಭೌತಿಕ, ಸಾಂಸ್ಕೃತಿಕ ಸಂಪನ್ಮೂಲಗಳ) ಒಡೆತನದ ನಡುವಿನ ಸಂಬಂಧಗಳೇನು? ಅಸಮಾನ ಸಂಬಂಧಗಳನ್ನು ತುಷ್ಟೀಕರಿಸುವ ವೈಚಾರಿಕತೆಗಳನ್ನು ಹೇಗೆ ಜನ ಸಾಮಾನ್ಯರ ಪ್ರಜ್ಞೆಯ ಭಾಗ ಮಾಡಲಾಗುತ್ತಿದೆ? ಇತ್ಯಾದಿ ಪ್ರಶ್ನೆಗಳಿಗೆ ಉತ್ತರಗಳನ್ನು ಕಂಡುಕೊಳ್ಳುವ ಅನಿವಾರ್ಯತೆ ಸಂಶೋಧನೆಯ ಹಿಂದೆ ಕೆಲಸ ಮಾಡುತ್ತಿರುತ್ತವೆ. ಇಂತಹ ದೃಷ್ಟಿಕೋನದಿಂದ ಸಂಶೋಧನೆ ನಡೆಸಿದರೆ ಅದು ತಳವರ್ಗದ ಆಸಕ್ತಿಗಳನ್ನು ಹೆಚ್ಚು ಹೆಚ್ಚು ಪ್ರತಿನಿಧಿಸಲು ಸಾಧ್ಯ.

ಸಮಾಜ ವಿಜ್ಞಾನ ಥಿಯರಿಗಳ ಹುಟ್ಟು ಮತ್ತು ಅವುಗಳ ಯೂನಿವರ್ಸಲ್ ಅನ್ವಯಿಕೆಗೆ ಸಂಬಂಧಿಸಿದ ಚರ್ಚೆಯನ್ನು ಮೇಲಿನ ಪುಟಗಳಲ್ಲಿ ನೋಡಿದ್ದೇವೆ. ಸಮಾಜವಿಜ್ಞಾನ ವಿಜ್ಞಾನದ ವಿಧಾನದಿಂದ ಪ್ರಭಾವಿತಗೊಂಡು ಪ್ರಪಂಚದ ಎಲ್ಲ ಸಮಾಜಗಳಿಗೆ ಅನ್ವಯವಾಗುವ ಥಿಯರಿಯ ಹುಡುಕಾಟದಲ್ಲಿ ತೊಡಗಿತು. ಥಿಯರಿ ಕಟ್ಟಿಕೊಡುವ ಸಮಾಜಕ್ಕಿಂತ ಭಿನ್ನವಾಗಿರುವ ಸಮಾಜಗಳ ಬಗ್ಗೆ ಪುರಾವೆಗಳು ಹೆಚ್ಚಿದ ಹಾಗೆ ಥಿಯರಿಯನ್ನು ಸುಧಾರಿಸಿಕೊಳ್ಳುವುದು ಸಮಾಜ ಸಂಶೋಧನೆಯ ನಿಯಮ. ಆದರೆ ಸಮಾಜವಿಜ್ಞಾನದಲ್ಲಿ ಆ ರೀತಿ ಆಗಲಿಲ್ಲ. ಅದಕ್ಕೆ ಬಹುಮುಖ್ಯ ಕಾರಣ ಆಧುನಿಕ ಸಮಾಜದ ವ್ಯಾಖ್ಯಾನ ಮತ್ತು ಅದರ ನಿರ್ಮಾಣದ ಕನಸು. ಥಿಯರಿ ಕಟ್ಟಿಕೊಡುವ ಸಮಾಜವನ್ನು ಸ್ಥಳೀಯ ಸಮಾಜದೊಂದಿಗೆ ಹೋಲಿಸಿ ಅಂತರವನ್ನು ಗುರುತಿಸುವುದು ಬಹುತೇಕ ಸಮಾಜ ಸಂಶೋಧನೆಯ ಉದ್ದೇಶವಾಗಿತ್ತು. ಅಷ್ಟು ಮಾತ್ರವಲ್ಲ ಆ ಅಂತರವನ್ನು ತುಂಬುವುದನ್ನು

ಆಧುನೀಕರಣದ ಮುಖ್ಯ ಉದ್ದೇಶವೆಂದು ತಿಳಿಯಲಾಗಿತ್ತು. ಆದುದರಿಂದ ಥಿಯರಿ ಮತ್ತು ವಾಸ್ತವದ ನಡುವಿನ ಅಂತರ ಥಿಯರಿಯ ಸುಧಾರಣೆಯಲ್ಲಿ ಪರ್ಯಾಪ್ತಗೊಳ್ಳುವ ಬದಲು ಸ್ಥಳೀಯ ಸಮಾಜಗಳ ಪರಿವರ್ತನೆಯಲ್ಲಿ ಕೊನೆಗೊಂಡಿತು. ಆದರೆ ಬರಬರುತ್ತಾ ಈ ಕ್ರಮವನ್ನು ಪ್ರಶ್ನಿಸಲಾಯಿತು. ಪಶ್ಚಿಮದ ತಾತ್ವಿಕ ಚೌಕಟ್ಟಿನಿಂದ ನೋಡುವುದರಿಂದ ಏನೇನೂ ಪ್ರಯೋಜನವಿಲ್ಲವೆಂದಾಯಿತು. ತೃತೀಯ ಜಗತ್ತಿನ ಸಾಮಾಜಿಕ ಸಂಗತಿಗಳನ್ನು ಸಮಾಜ ಥಿಯರಿಗಳಲ್ಲಿ ಸೇರಿಸಿಕೊಳ್ಳಬೇಕೆಂದಾಯಿತು.

ಹೀಗೆ ಇಂದಿನ ಸಮಾಜ ಥಿಯರಿಗಳನ್ನು ಪಶ್ಚಿಮದ ಥಿಯರಿಗಳೆಂದು ಹೇಳಲು ಸಾಧ್ಯ ಇಲ್ಲ. ಏಕೆಂದರೆ ಅದರಲ್ಲಿ ಪಶ್ಚಿಮೇತರ ಸಮಾಜಗಳ ಅಂಶವೂ ಸೇರಿದೆ. ಯಜಮಾನಿಕೆಯಲ್ಲಿ ಇರುವ ಥಿಯರಿಯಲ್ಲಿ ತೃತೀಯ ಜಗತ್ತಿನ ಸಾಮಾಜಿಕ ಅಂಶಗಳು ಸೇರಿದ ಕೂಡಲೇ ಯೂನಿವರ್ಸಲ್ ಮತ್ತು ಲೋಕಲ್ ನಡುವಿನ ಘರ್ಷಣೆ ಇಲ್ಲವಾಗುವುದಿಲ್ಲ. ಇದಕ್ಕೆ ಬಹುಮುಖ್ಯವಾದ ಎರಡು ಕಾರಣಗಳಿವೆ. ಒಂದು, ಯೂನಿವರ್ಸಲ್ ರೂಪುಗೊಳ್ಳುವ ಕ್ರಮ ಮತ್ತೊಂದು ಥಿಯರಿ ಮತ್ತು ಅಧಿಕಾರದ ಸಂಬಂಧ. ಹಲವಾರು ಕ್ರಮಗಳಲ್ಲಿ ಯೂನಿವರ್ಸಲ್ ರೂಪುಗೊಳ್ಳಬಹುದು. ಒಂದು, ಯಾವುದೋ ಒಂದು ಅಥವಾ ಕೆಲವು ಸಮಾಜದ ಅಥವಾ ಸಂಸ್ಕೃತಿಯ ಅನುಭವಗಳು ಯೂನಿವರ್ಸಲನ್ನು ರೂಪಿಸುವಲ್ಲಿ ಮಹತ್ತರವಾದ ಪಾತ್ರ ವಹಿಸುವುದು. ಎರಡು, ಯೂನಿವರ್ಸಲ್‌ನ ವ್ಯಾಪ್ತಿ ಯಲ್ಲಿ ಬರುವ ಎಲ್ಲ ಬಿಡಿಭಾಗಗಳು ತಮ್ಮ ನಿರ್ದಿಷ್ಟತೆಯನ್ನು ಸೇರಿಸಿ ಯೂನಿವರ್ಸಲ್‌ನ್ನು ರೂಪಿಸಿಕೊಳ್ಳುವುದು. ಮೂರು, ಮೇಲಿನ ಎರಡರ ಮಿಶ್ರಣ; ಅಂದರೆ ಬಲಾಢ್ಯ ಸಮಾಜಗಳ ಕೊಡುಗೆಗಳ ಜತೆಗೆ ಬಲಹೀನ ಸಮಾಜಗಳ ಅಂಶವನ್ನು ಸೇರಿಸಿ ಯೂನಿವರ್ಸಲ್ ರೂಪಿತಗೊಳ್ಳುವುದು. ಹೀಗೆ ಹಲವಾರು ವಿಧಗಳಿಂದ ಯೂನಿವರ್ಸಲ್ ರೂಪಿತಗೊಳ್ಳಬಹುದು.

ಯೂನಿವರ್ಸಲ್ ಪರ್ಟಿಕ್ಯುಲರ್ ಅಂಶಗಳಿಂದ ರೂಪಿತವಾಗಿದ್ದರೆ ಅಂತಹ ಯೂನಿವರ್ಸಲ್ ನಮ್ಮ ಯೂನಿವರ್ಸಲ್ ಅಲ್ಲವೆಂದು ಅಲ್ಲಗಳೆಯುವ ಅಗತ್ಯವಿಲ್ಲ. ಆದರೆ ಸಮಸ್ಯೆ ಆಗುವುದು ಯಾರದೋ ಅನುಭವ ಅಥವಾ ಚರಿತ್ರೆ ಯೂನಿವರ್ಸಲ್ ಎಂದು ಮುಂಚೂಣಿಗೆ ಬಂದಾಗ. ಆಧುನೀಕರಣ, ಫಂಕ್ಷನಲಿಸಂ, ಲಿಬರಲಿಸಂ ಇತ್ಯಾದಿ ಥಿಯರಿಗಳು ಮತ್ತು ಸಂಶೋಧನಾ ಚೌಕಟ್ಟುಗಳು ಭಾರತದ ಅನುಭವಗಳನ್ನು ಬಳಸಿಕೊಂಡು ಬೆಳೆದವಲ್ಲ. ಈ ಸಮಸ್ಯೆಯನ್ನು ಈಸ್ಟ್ ವರ್ಸಸ್ ವೆಸ್ಟ್ ಸಮಸ್ಯೆಯೆಂದು ಬಿಂಬಸಲಾಗುತ್ತಿದೆ. ಆದರೆ ಇದು ಈಸ್ಟ್ ವರ್ಸಸ್ ವೆಸ್ಟ್ ಸಮಸ್ಯೆ ಮಾತ್ರವಲ್ಲ; ಅಧಿಕಾರದ ಹಂಚಿಕೆಯ ಪ್ರಶ್ನೆ ಕೂಡ ಆಗಿದೆ. ಅಧಿಕಾರದ ಹಂಚಿಕೆ ಪ್ರಶ್ನೆ ಜಾಗತಿಕ ಮಟ್ಟದಲ್ಲಿ ಮಾತ್ರ ಇರುವುದಲ್ಲ ಸ್ಥಳೀಯವಾಗಿಯೂ ಇದೆ. ಎಲ್ಲ ಸಮಾಜಗಳಲ್ಲೂ ಆಯಾಯ ಸಮಾಜದ ಮೇಲ್ವರ್ಗಗಳ ಆಸಕ್ತಿಗಳು, ಸಂಸ್ಕೃತಿಗಳು, ಚರಿತ್ರೆಗಳು ಇಡೀ ಸಮಾಜದ ಆಸಕ್ತಿಗಳಾಗಿ, ಸಂಸ್ಕೃತಿಗಳಾಗಿ, ಚರಿತ್ರೆಗಳಾಗಿ ಮಂಡಿತವಾಗುವುದು ಸಾಮಾನ್ಯ. ಆದುದರಿಂದ ಸಮಾಜ ಥಿಯರಿಗಳನ್ನು ವಿಶ್ಲೇಷಿಸುವಾಗ ಪೂರ್ವ ಪಶ್ಚಿಮವೆನ್ನುವ ವಿರೋಧಿ ನೆಲೆಗಳ ಜತೆಗೆ ಅಧಿಕಾರದ ಸಂಬಂಧದ ದೃಷ್ಟಿಯಿಂದಲೂ ವಿಶ್ಲೇಷಿಸುವ ಅಗತ್ಯವಿದೆ. ಏಣಿಯ ಮೇಲಿರುವವರು ತಮ್ಮ ಸತ್ಯವನ್ನು ಎಲ್ಲರ ಸತ್ಯ ಮಾಡಲು ಶಕ್ತರು ಮತ್ತು ಮಾಡುತ್ತಿದ್ದಾರೆ. ಇದು ತಳಸ್ತರದ ಜನರಲ್ಲಿ ಅವರ ಆಸಕ್ತಿಗೆ ವಿರುದ್ಧವಾದ ದೃಷ್ಟಿಕೋನಗಳನ್ನು ಬೆಳೆಸುತ್ತಿದೆ. ಇಂತಹ ಸ್ಥಿತಿಯಿಂದ ಹೊರಬರಬೇಕಾದರೆ ನಮ್ಮದೇ ಸಮಾಜ ಶಾಸ್ತ್ರಗಳನ್ನು ಸೃಷ್ಟಿಸಿದರೆ ಸಾಲದು ಈ ಸಮಾಜ ಶಾಸ್ತ್ರಗಳಲ್ಲಿ ತಳಸ್ತರದ ಜನರ ಬದುಕು ಆಸಕ್ತಿಗಳು ಹೆಚ್ಚಿನ ಜಾಗ ಪಡೆಯಬೇಕಾಗಿದೆ.

ಕೊನೆ ಟಿಪ್ಪಣಿಗಳು

೧. ಸಮಾಜವಿಜ್ಞಾನದ ಸಂಶೋಧನೆಯಲ್ಲಿ ಪ್ರಭಾವ ಬೀರುವ ವಿಜ್ಞಾನ ವಿಧಾನದ ಬಹುಮುಖ ತಾತ್ವಿಕ ಅಂಶಗಳು ಇಂತಿವೆ – ಒಂದು, ಆಬ್ಜೆಕ್ಟಿವಿಟಿ ಅಥವಾ ಅಲ್ಟಿಮೇಟ್ ಸತ್ಯದ ಕಲ್ಪನೆ, ಎರಡು, ವ್ಯಾಲ್ಯೂ ನ್ಯೂಟ್ರಾಲಿಟಿಯ ಪ್ರಶ್ನೆ, ಮೂರು, ಸಬ್ಜೆಕ್ಟ್ ಆಬ್ಜೆಕ್ಟ್ ಮಧ್ಯೆ ಅಂತರ ಇರಬೇಕು ಎನ್ನುವ ಅಂಶ.

೨. ಥಿಯರಿಗಳ ಹುಟ್ಟಿಗೆ ಸಂಬಂಧಿಸಿದ ಚರ್ಚೆಯ ವಿವರಗಳನ್ನು ನಾನು ಈ ಕೆಳಗಿನ ಪುಸ್ತಕಗಳಿಂದ ಪಡೆದಿದ್ದೇನೆ – ೧, ಯೋಗೇಶ್ ಅಟಲ್, ಸೋಶಿಯಲ್ ಸೈನ್ಸಸ್ ಇನ್ ಏಶಿಯಾ, ನ್ಯೂಡೆಲ್ಲಿ: ಅಭಿನವ ಪಬ್ಲಿಕೇಶನ್ಸ್, ೧೯೭೪, ೨. ಎನ್. ಪಾರ್ಥ ಮುಖರ್ಜಿ, ಇಂಡಿಯನ್ ಸೋಶಿಯಾಲಜಿ – ರಿಫ್ಲೆಕ್ಷನ್ಸ್ ಆ್ಯಂಡ್ ಇನ್‌ಟ್ರಾಸ್ಪೆಕ್ಷನ್ಸ್, ಬಾಂಬೆ: ಪಾಪ್ಯುಲರ್ ಪ್ರಕಾಶನ್, ೧೯೮೬, ೩. ಪಾರ್ಥನಾಥ ಮುಖರ್ಜಿ ಆಂಡ್ ಚಂದ್ರ ಸೇನ್‌ಗುಪ್ತ (ಸಂ), ಇಂಡಿಜೀನಿಟಿ ಆಂಡ್ ಯೂನಿವರ್ಸಾಲಿಟಿ ಇನ್ ಸೋಶಿಯಲ್ ಸೈನ್ಸ್, ನ್ಯೂಡೆಲ್ಲಿ: ಸೇಜ್ ಪಬ್ಲಿಕೇಶನ್ಸ್, ೨೦೦೪ ಮತ್ತು ೪. ಇಮ್ಯಾನ್ಯುಲ್ ವೆಲ್‌ಸ್ಟೇಯಿನ್, ಓಪನ್ ಸೋಶಿಯಲ್ ಸೈನ್ಸಸ್, ನ್ಯೂಡೆಲ್ಲಿ: ವಿಸ್ತಾರ್ ಪಬ್ಲಿಕೇಶನ್ಸ್, ೧೯೯೬.

೩. ಲೆಸ್ಲಿ ಸ್ಟೀವನ್‌ಸನ್ ಆಂಡ್ ಡೆವಿಡ್ ಸಿ. ಹಾಬ್‌ಮೇನ್, ಟೆನ್ ಥಿಯರಿಸ್ ಆಫ್ ಹ್ಯೂಮನ್ ನೇಚರ್, ನ್ಯೂಯಾರ್ಕ್: ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, ೧೯೯೮.

೪. ಇಮ್ಯಾನ್ಯುವಲ್ ಕಾಂಟ್, ದಿ ಗ್ರೌಂಡ್‌ವರ್ಕ್ ಆಫ್ ದಿ ಮೆಟಾಫಿಸಿಕ್ಸ್ ಆಫ್ ಮಾರಲ್ಸ್, ಇದನ್ನು ಹೆಚ್.ಜೆ. ಪಟನ್ ಅವರು ದಿ ಮಾರಲ್ (ಲಂಡನ್: ಹಚಿಸನ್, ೧೯೫೩) ಎನ್ನುವ ಹೆಸರಲ್ಲಿ ಭಾಷಾಂತರ ಮಾಡಿದ್ದಾರೆ. ಈ ವಿವರಗಳನ್ನು ಮಾರ್ಟಿನ್ ಹೊಲಿಸ್ ಅವರ, ದಿ ಫಿಲಾಸಫಿ ಆಫ್ ಸೋಶಿಯಲ್ ಸೈನ್ಸ್ (ಕೇಂಬ್ರಿಡ್ಜ್: ಕೇಂಬ್ರಿಡ್ಜ್ ಯೂನಿವರ್ಸಿಟಿ ಪ್ರೆಸ್, ೨೦೦೦) ಪುಸ್ತಕದಲ್ಲಿ ನೋಡಬಹುದು.

೫. ಇಮ್ಯಾನ್ಯುಲ್ ವೆಲ್‌ಸ್ಟೇಯಿನ್, 'ಸೋಶಿಯಲ್ ಸೈನ್ಸ್ ಆಂಡ್ ದಿ ಕ್ವೆಸ್ಟ್ ಫಾರ್ ಎ ಜಸ್ಟ್ ಸೊಸೈಟಿ', ಇನ್ ಪಾರ್ಥನಾಥ ಮುಖರ್ಜಿ ಆಂಡ್ ಚಂದ್ರಸೇನ್ ಗುಪ್ತ (ಸಂ), ಇಂಡಿಜೀನಿಟಿ ಆಂಡ್ ಯೂನಿವರ್ಸಾಲಿಟಿ, ೨೦೦೪, ಪು. ೬೬–೮೨.

೬. ಆರ್.ಜಿ. ಕಾಲಿಂಗ್‌ವುಡ್, ದಿ ಐಡಿಯಾ ಆಫ್ ಹಿಸ್ಟರಿ, ನ್ಯೂಯಾರ್ಕ್ : ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, ೧೯೯೪.

೭. ಥಿಯಾಲಜಿ ಮತ್ತು ಮೆಟಾಫಿಸಿಕ್ಸ್‌ಗಳ ಪ್ರಭಾವ ಕುಗ್ಗಿ ವಿಜ್ಞಾನದ ಪ್ರಭಾವ ವಿಸ್ತರಿಸಿದ ಕುರಿತು ಅಗಸ್ಟ್ ಕಾಮ್ಟೆಯ ವಿವರಣೆಗಳನ್ನು ಆರ್. ಫ್ಲೆಚರ್ ಅವರ, ದಿ ಕ್ರೈಸೀಸ್ ಆಫ್ ಇಂಡಸ್ಟ್ರಿಯಲ್ ಸಿವಿಲೈಜೇಶನ್, (ಹೆನ್‌ಮೆನ್ ಎಜುಕೇಶನಲ್ ಬುಕ್ಸ್, ೧೯೭೪), ಪುಸ್ತಕದಲ್ಲಿ ನೋಡಬಹುದು. ಹರ್ಬರ್ಟ್ ಸ್ಪೆನ್ಸರ್ ಸಮಾಜವನ್ನು ಬಯಲಾಜಿಕಲ್ ಆರ್ಗನಿಸಂಗೆ ಹೋಲಿಸಿ ಸಂಶೋಧನೆ ಮಾಡಬಹುದೆನ್ನುವ ವಿವರಗಳನ್ನು ಅವರ ದಿ ಇವೊಲ್ಯುಶನ್ ಆಫ್ ಸೊಸೈಟಿ, (ಚಿಕಾಗೋ: ಚಿಕಾಗೋ ಯೂನಿವರ್ಸಿಟಿ ಪ್ರೆಸ್, ೧೯೭೬) ಪುಸ್ತಕದಲ್ಲಿ ನೋಡಬಹುದು. ಈ ಎಲ್ಲ ವಿಚಾರಗಳನ್ನು ಸಾರಾಂಶ ರೂಪದಲ್ಲಿ ಎಂ. ಚಂದ್ರ ಪೂಜಾರಿಯವರ, 'ಸಮಾಜ ವಿಜ್ಞಾನದಲ್ಲಿನ ವಿಜ್ಞಾನ ಕುರಿತು ಕೆಲವು ಟಿಪ್ಪಣಿಗಳು', (ಬುಡಕಟ್ಟು ಅಧ್ಯಯನ, ಸಂಪುಟ ೧, ಸಂಚಿಕೆ ೧, ೨೦೦೩, ಪು. ೯೨–೧೦೪) ಎನ್ನುವ ಲೇಖನದಲ್ಲೂ ಕಾಣಬಹುದು.

೮. ವಿಜ್ಞಾನದ ವಿಧಾನವನ್ನು ಸಮಾಜ ಸಂಶೋಧನೆಗೆ ಅನ್ವಯಿಸುವ ಅಗತ್ಯದ ನಿಲುವುಗಳನ್ನು ಅಗಸ್ಟ್ ಕಾಮ್ಟೆ (ಎ ಬ್ರೀಫ್ ಎಪ್ರೈಸೈಲ್ ಆಫ್ ಮಾಡರ್ನ್ ಹಿಸ್ಟರಿ), ಡರ್ಕ್‌ಹೇಮ್, (ದಿ ರೂಲ್ಸ್ ಆಫ್ ಸೋಶಿಯಲಾಜಿಕಲ್ ಮೆಥಡ್ಸ್, ನ್ಯೂಯಾರ್ಕ್: ದಿ ಫ್ರಿಪ್ರೆಸ್, ೧೯೩೩), ಹರ್ಬರ್ಟ್ ಸ್ಪೆನ್ಸರ್ (ದಿ ಇವೊಲ್ಯುಶನ್ ಆಫ್ ಸೊಸೈಟಿ) ಬರಹಗಳಲ್ಲಿ ವ್ಯಕ್ತಪಡಿಸಿದ್ದಾರೆ. ನಾನು ಡರ್ಕ್‌ಹೇಮ್‌ನ ನಿಲುವಿನ ವಿವರಗಳನ್ನು ಟೋನಿ ಬಾರ್‌ನೆಟ್ ಅವರ, ಸೋಶಿಯಾಲಜಿ

ಆಂಡ್ ಡೆವಲಪ್‌ಮೆಂಟ್ (ಲಂಡನ್: ರೌಟ್‌ಲೆಡ್ಜ್, ೧೯೮೮) ಪುಸ್ತಕದಿಂದ ಮತ್ತು ಕಾಮ್ವೆಯ ಅಭಿಪ್ರಾಯಗಳನ್ನು ಆರ್. ಪ್ಲೆಚರ್ ಅವರ, ದಿ ಕ್ರೈಸೀಸ್ ಆಫ್ ಇಂಡಸ್ಟ್ರಿಯಲ್ ಸಿವಿಲೈಜೇಶನ್ ಪುಸ್ತಕದಿಂದ ಪಡೆದಿದ್ದೇನೆ. ಹಿಂದಿನ ಸಮಾಜಶಾಸ್ತ್ರಜ್ಞರ ವಿಜ್ಞಾನ ವಿಧಾನದ ಪರ ಧೋರಣೆಯನ್ನು ಇಮ್ಯಾನ್ಯುಲ್ ವೆಲ್‌ಸ್ಟೇಯಿನ್, 'ಸೋಶಿಯಲ್ ಸೈನ್ಸ್ ಆಂಡ್ ದಿ ಕ್ವೆಸ್ಟ್ ಫಾರ್ ಎ ಜಸ್ಟ್ ಸೊಸೈಟಿ', ಇನ್ ಪಾರ್ಥನಾಥ ಮುಖರ್ಜಿ ಆ್ಯಂಡ್ ಚಂದ್ರಸೇನ್ ಗುಪ್ತ (ಸಂ) ಇಂ ಡಿಜೀನಿಟಿ ಆ್ಯಂಡ್ ಯುನಿವರ್ಸಿಟಿ, ಪುಟ ೬೬–೯೨ ಲೇಖನದಲ್ಲಿ ವಿವರಿಸಿದ್ದಾರೆ.

೯. ಕಥ್ಲಿನ್ ಗಪ್, 'ಆಂಥ್ರೋಪಾಲಜಿ ಆಂಡ್ ಇಂಪಿರಿಯಲಿಸಂ', 'ಇನ್ ಬಾಬ್ಬಿ ಎಸ್ ಆರ್ಟಿಜ್ ಆಂಡ್ ತಿಲಕ್ ಡಿ. ಗುಪ್ತಾ (ಸಂ), ಹಿಸ್ಟರಿ ಆ್ಯಸ್ ಇಟ್ ಹ್ಯಾಪನ್ಡ್ – ಸೆಲೆಕ್ಟೆಡ್ ಆರ್ಟಿಕಲ್ಸ್ ಫ್ರಮ್ ಮಂಥ್ಲಿ ರಿವೀವ್, ೧೯೪೯–೧೯೯೮, ಕಲ್ಕತ್ತಾ : ಕಾರ್ನರ್ ಸ್ಟೋನ್ ಪಬ್ಲಿಕೇಶನ್ಸ್, ೧೯೯೮, ಪು. ೮೮–೮೯.

೧೦. ಕಥ್ಲಿನ್ ಗಪ್, 'ಆಂಥ್ರೋಪಾಲಜಿ ಆಂಡ್ ಇಂಪಿರಿಯಲಿಸಂ', ಪು. ೮೮–೯೮.

೧೧. ವಸಾಹತೋತ್ತರ ಸಂದರ್ಭದಲ್ಲಿ ಮಾನವಶಾಸ್ತ್ರ ಸಂಶೋಧನೆ ಮೇಲೆ ಬ್ರಿಟಿಷ್, ಡಚ್, ಫ್ರೆಂಚ್ ಚಿಂತನೆಗಳ ಪ್ರಭಾವ ಕಡಿಮೆ ಆಯಿತು. ಆದರೆ ಅಮೆರಿಕದ ಪ್ರಭಾವ ಹೆಚ್ಚಾಯಿತು. ಸೋಲ್ ಟೇಕ್ಸ್ ಮತ್ತು ಇತರರು ಸಂಪಾದಿಸಿದ ಫಿಫ್ತ್ ಇಂಟರ್‌ನೇಶನಲ್ ಡೈರೆಕ್ಟರಿ ಆಫ್ ಆಂಥ್ರೋಪಾಲಜಿಸ್ಟ್ಸ್ (ಚಿಕಾಗೋ; ಚಿಕಾಗೋ ಯೂನಿವರ್ಸಿಟಿ ಪ್ರೆಸ್, ೧೯೭೫) – (ಈ ವಿವರಗಳನ್ನು ಎಲ್.ಪಿ. ವಿದ್ಯಾರ್ಥಿಯವರ, ಟ್ರೆಂಡ್ಸ್ ಇನ್ ವರ್ಲ್ಡ್ ಆಂಥ್ರೋಪಾಲಜಿ, ಡೆಲ್ಲಿ : ಕಾನ್‌ಸೆಪ್ಟ್ ಪಬ್ಲಿಕೇಷನ್ ಕಂಪೆನಿ ೧೯೭೯ ಪುಸ್ತಕದಿಂದ ಪಡೆಯಲಾಗಿದೆ)ಯಲ್ಲಿ ನೋಂದಾಯಿಸಿದ ಒಟ್ಟು ೪೭೬೫ ಮಾನವಶಾಸ್ತ್ರಜ್ಞರಲ್ಲಿ ಸುಮಾರು ಅರ್ಧದಷ್ಟು ಮಾನವ ಶಾಸ್ತ್ರಜ್ಞರು ಅಮೆರಿಕ ಮತ್ತು ಕೆನಡಾದವರಾದರೆ ಕಾಲು ಭಾಗ ಯುರೋಪಿಯನ್‌ರಾಗಿದ್ದರು. ಬಹುತೇಕ ಮಾನವಶಾಸ್ತ್ರ ಸಂಶೋಧನೆಗಳಿಗೆ ಮಾಹಿತಿ ಒದಗಿಸುವ ಅಥವಾ ಕ್ಷೇತ್ರವಾಗಿ ಕೆಲಸ ಮಾಡಿದ ಏಷ್ಯಾ, ಆಫ್ರಿಕಾ ಮತ್ತು ಲ್ಯಾಟಿನ್ ಅಮೆರಿಕಗಳಿಂದ ಕೆಲವೇ ಕೆಲವು ಮಾನವಶಾಸ್ತ್ರಜ್ಞರಿದ್ದರು (ಶೇ. ೨೫ರಷ್ಟು). ಅಮೆರಿಕ ಆಧುನೀಕರಣ ಥಿಯರಿ ಬಹುದೊಡ್ಡ ಪ್ರತಿಪಾದಿಯಾಗಿತ್ತು. ಆದುದರಿಂದ ಮಾನವಶಾಸ್ತ್ರ ಕೂಡ ಆಧುನೀಕರಣ ಥಿಯರಿ ಅಂಶಗಳನ್ನೇ ಹೆಚ್ಚು ಹೆಚ್ಚಾಗಿ ಬಿಂಬಿಸುತ್ತಿತ್ತು.

೧೨. ಇಮ್ಯಾನ್ಯುಲ್ ವೆಲ್‌ಸ್ಟೇಯಿನ್, "ಸೋಶಿಯಲ್ ಸೈನ್ಸ್ ಆಂಡ್ ದಿ ಕ್ವೆಸ್ಟ್ ಫಾರ್ ಎ ಜಸ್ಟ್ ಸೊಸೈಟಿ", ಪು. ೬೭–೮೨.

೧೩. ವಿವರಗಳಿಗೆ ಈ ಕೆಳಗಿನ ಪುಸ್ತಕಗಳನ್ನು ನೋಡಬಹುದು. ೧. ಇ. ಇ. ಇವಾನ್ಸ್ ಪಿಚರ್ಡ್, ಸೋಶಿಯಲ್ ಆಂಥ್ರೋಪಾಲಜಿ, ನ್ಯೂಡೆಲ್ಲಿ: ಯೂನಿವರ್ಸಲ್ ಬುಕ್‌ಸ್ಟಾಲ್, ೧೯೯೧, ೨. ಮಾರ್ಗರೇಟ್ ಮೀಡ್, ಆಂಥ್ರೋಪಾಲಜಿ – ಎ ಹ್ಯೂಮನ್ ಸೈನ್ಸ್, ಸೆಲೆಕ್ಟೆಡ್ ಪೇಪರ್ಸ್ ೧೯೩೯–೧೯೬೦, ಟೊರೆಂಟೋ: ವೇನ್ ನಸ್ಟ್ರೆಂಡ್ ಕಂಪೆನಿ, ೧೯೬೪.

೧೪. ಮಾರ್ಟಿನ್ ಹೊಲಿಸ್, ದಿ ಫಿಲಾಸಫಿ ಆಫ್ ಸೋಶಿಯಲ್ ಸೈನ್ಸ್ – ಆ್ಯನ್ ಇಂಟ್ರೊಡಕ್ಷನ್, ಕೇಂಬ್ರಿಡ್ಜ್ : ಕೇಂಬ್ರಿಡ್ಜ್ ಯೂನಿವರ್ಸಟಿ ಪ್ರೆಸ್, ೨೦೦೦.

೧೫. ವಿವರಗಳಿಗೆ ಇಮ್ಯಾನ್ಯುಲ್ ವೆಲ್‌ಸ್ಟೇಯಿನ್ ಮತ್ತು ಇತರರು, ಓಪನ್ ದಿ ಸೋಶಿಯಲ್ ಸೈನ್ಸ್ – ರಿಪೋರ್ಟ್ ಆಫ್ ದಿ ಗುಲ್‌ಬೆಕಿಯನ್ ಕಮಿಶನ್ ಆನ್ ದಿ ರೀಸ್ಟ್ರಕ್ಚರಿಂಗ್ ಆಫ್ ದಿ ಸೋಶಿಯಲ್ ಸೈನ್ಸಸ್, ನ್ಯೂಡೆಲ್ಲಿ: ವಿಸ್ತಾರ್ ಪಬ್ಲಿಕೇಶನ್ಸ್, ೧೯೯೮.

೧೬. ಇಮ್ಯಾನ್ಯುಲ್ ವೆಲ್‌ಸ್ಟೇಯಿನ್, 'ಸೋಶಿಯಲ್ ಸೈನ್ಸ್ ಆಂಡ್ ದಿ ಕ್ವೆಸ್ಟ್ ಫಾರ್ ಎ ಜಸ್ಟ್ ಸೊಸೈಟಿ', ಪು. ೬೬–೮೨.

೧೭. ಈ ಕುರಿತು ಸಾಕಷ್ಟು ಬರಹಗಳಿವೆ. ಅವುಗಳಲ್ಲಿ ಮುಖ್ಯವಾದ ಕೆಲವು ಇಂತಿವೆ. ೧. ರಾಡ್ನಿ ಹಿಲ್ಟನ್ (ಸಂ), ದಿ ಟ್ರಾಂಶಿನ್ ಫ್ರಮ್ ಫ್ಯೂಡಲಿಸಂ ಟು ಕ್ಯಾಪಿಟಲಿಸಂ, ಲಂಡನ್ : ಆನ್‌ವಿನ್ ಬ್ರದರ್ಸ್, ೧೯೭೮, ೨. ಮೌರಿಸ್ ಡಾಬ್, ಸ್ಟಡೀಸ್ ಇನ್ ದಿ ಡೆವಲಪ್‌ಮೆಂಟ್ ಆಫ್ ಕ್ಯಾಪಿಟಲಿಸಂ, ಲಂಡನ್ : ರೌಟ್‌ಲೆಡ್ಜ್ ಆಂಡ್ ಕೆಗನ್ ಪೌಲ್, ೧೯೬೩, ಎಲೆನ್ ಮೆಸಿನ್ಸ್‌ವುಡ್, ದಿ ಆರಿಜಿನ್ ಆಫ್ ಕ್ಯಾಪಿಟಲಿಸಂ, ನ್ಯೂಯಾರ್ಕ್: ಮಂಥ್ಲಿ ರಿವೀವ್ ಪ್ರೆಸ್, ೧೯೯೯, ಲಿಯೋ ಹ್ಯೂಬರ್‌ಮೇನ್, ಮೇನ್ಸ್ ವರ್ಲ್ಡ್‌ಲಿ ಗೂಡ್ಸ್, ನ್ಯೂಡೆಲ್ಲಿ: ಪೀಪಲ್ಸ್ ಪಬ್ಲಿಶಿಂಗ್ ಹೌಸ್, ೧೯೮೯, ಕಾರ್ಲ್ ಪೋಲಾನಿಯ, ದಿ ಗ್ರೇಟ್ ಟ್ರಾನ್ಸ್‌ಫಾರ್ಮೇಷನ್, ಬೋಸ್ಟನ್: ಬೆಕನ್ ಪ್ರೆಸ್, ೧೯೫೭ ಮತ್ತು ಪೌಲ್ ಸ್ವೀಜಿ, ದಿ ಥಿಯರಿ ಆಫ್ ಕ್ಯಾಪಿಟಲಿಸ್ಟ್ ಡೆವಲಪ್‌ಮೆಂಟ್, ಕಲ್ಕತ್ತಾ: ಕೆ.ಪಿ. ಬಾಗ್ಚಿ ಆಂಡ್ ಕಂಪೆನಿ, ೧೯೯೧.

೧೮. ಮ್ಯಾಕ್ಸ್‌ವೆಬರ್, ದಿ ಪ್ರೊಟೆಸ್ಟೆಂಟ್ ಎಥಿಕ್, ಆ್ಯಂಡ್ ಸ್ಪಿರಿಟ್ ಆಫ್ ಕ್ಯಾಪಿಟಲಿಸಂ, ನ್ಯೂಯಾರ್ಕ್ : ಸ್ಕ್ರೈಬ್ನರ್ಸ್, ೧೯೫೮.

೧೯. ಮ್ಯಾಕ್ಸ್‌ವೆಬರ್‌ನ ಈ ಅಭಿಪ್ರಾಯಗಳನ್ನು ಆರ್.ಹೆಚ್. ಟೋನಿಯ, ಹಿಸ್ಟರಿ ಆ್ಯಂಡ್ ಸೊಸೈಟಿ (ಲಂಡನ್: ರೊಟ್‌ಲೆಡ್ಜ್ ಆ್ಯಂಡ್ ಕೆಗನ್ ಪೌಲ್, ೧೯೭೮) ಪುಸ್ತಕದಿಂದ ಪಡೆದಿದ್ದೆನೆ.

೨೦. ಮ್ಯಾಕ್ಸ್‌ವೆಬರ್ ಪಶ್ಚಿಮ ಯುರೋಪಿನ ಈ ಅನುಭವ ಪ್ರಪಂಚ ಇತರ ಸಮಾಜಗಳಲ್ಲಿ ಪುನರಾವರ್ತನೆ ಆಗುವುದರ ಬಗ್ಗೆ ಸಂದೇಹ ವ್ಯಕ್ತಪಡಿಸಿದ್ದಾನೆ. ಈ ಕುರಿತ ವಿವರಗಳನ್ನು ಆಂಡ್ರೆ ಗುಂಥರ್ ಫ್ರಾಂಕ್ ಅವರ ಡಿಪೆಂಡೆಂಟ್ ಎಕ್ಯುಮ್ಯುಲೇಶನ್ ಆ್ಯಂಡ್ ಅಂಡರ್ ಡೆವಲಪ್‌ಮೆಂಟ್ (ಲಂಡನ್: ಮ್ಯಾಕ್‌ಮಿಲನ್ ಪ್ರೆಸ್ ಲಿಮಿಟೆಡ್, ೧೯೮೨) ಪುಸ್ತಕದಲ್ಲಿ ನೋಡಬಹುದು. ಆದರೆ ಆತನ ಶಿಷ್ಯಂದಿರು; ಮುಖ್ಯವಾಗಿ ಟಾಲ್ಕಾಟ್ ಪಾರ್ಸನ್, ಬರ್ಟ್ ಹೊಸಲಿಡ್ಜ್ ಮುಂತಾದವರು, ಇದರ ಪುನರಾವರ್ತನೆ ಖಚಿತ ಎನ್ನುವ ಧೋರಣೆ ತಾಳಿದರು. ವಿವರಗಳಿಗೆ ಟಾಲ್ಕಾಟ್ ಪಾರ್ಸನ್ ಅವರ, ಟುವರ್ಡ್ಸ್ ಎ ಜನರಲ್ ಥಿಯರಿ ಆಫ್ ಆಕ್ಷನ್, (ನ್ಯೂಯಾರ್ಕ್: ಹಾರ್ಪರ್ ಆಂಡ್ ರೋ, ೧೯೫೧) ಮತ್ತು ಬರ್ಟ್ ಎಫ್ ಹೊಸ್‌ಲಿಡ್ಜ್ ಅವರ, ಸೋಶಿಯಲಾಜಿಕಲ್ ಆಸ್ಪೆಕ್ಟ್ಸ್ ಆಫ್ ಎಕನಾಮಿಕ್ ಗ್ರೋಥ್, (ನ್ಯೂಯಾರ್ಕ್: ದಿ ಫ್ರಿ ಪ್ರೆಸ್, ೧೯೬೬) ಪುಸ್ತಕಗಳನ್ನು ನೋಡಬಹುದು.

೨೧. ಟಾಲ್ಕಾಫ್ ಪಾರ್ಸನ್, ಟುವರ್ಡ್ಸ್ ಎ ಜನರಲ್ ಥಿಯರಿ ಆಫ್ ಆಕ್ಷನ್, ನ್ಯೂಯಾರ್ಕ್: ಹಾರ್ಪರ್ ಆ್ಯಂಡ್ ರೋ, ೧೯೫೧.

೨೨. ಗಾರ್ಡ್‌ನರ್ ಮರ್ಫಿ ಆ್ಯಂಡ್ ಜೋಸೆಫ್ ಕವಾಶ್, ಹಿಸ್ಟಾರಿಕಲ್ ಇನ್‌ಟ್ರೊಡಕ್ಷನ್ ಟು ಮಾಡರ್ನ್ ಸೈಕಾಲಜಿ, ಲಂಡನ್ : ರೌಟ್‌ಲೆಡ್ಜ್ ಆಂಡ್ ಕೆಗನ್ ಪೌಲ್, ೧೯೯೪.

೨೩. ಮಿಥ್‌ಗಳ ವಿಶ್ಲೇಷಣೆಗೆ ರಚನಾವಾದವನ್ನು ಬಳಸಿರುವುದರಲ್ಲಿ ಲೆವಿಸ್ಟ್ರಾಸ್ ಪ್ರಮುಖ. ಹಾಗೆಂದು ಆತ ತನ್ನ ವಿಶ್ಲೇಷಣೆಗೆ ಇದೊಂದೆ ಮಿಥ್ ಅನ್ನು ಬಳಸಿದ್ದಾನೆಂದಲ್ಲ. ಹಲವಾರು ಬುಡಕಟ್ಟು ಸಮುದಾಯಗಳ ಮಿಥ್‌ಗಳನ್ನು ಆತ ರಚನಾವಾದದ ಮೂಲಕ ವಿಶ್ಲೇಷಿಸಿದ್ದಾನೆ. ಇವುಗಳ ಸಂಕ್ಷಿಪ್ತ ಪರಿಚಯಕ್ಕೆ ಲೆವಿಸ್ಟ್ರಾಸ್‌ನ, ಮಿಥ್ ಆಂಡ್ ಮೀನಿಂಗ್, (ಲಂಡನ್: ರೌಟ್‌ಲೆಡ್ಜ್, ೨೦೦೧) ಪುಸ್ತಕವನ್ನು ನೋಡಬಹುದು.

೨೪. ಈಡಿಪಸ್ ರಾಜನ ನ್ಯಾಯ ತೀರ್ಮಾನ ಕ್ರಮವನ್ನು ಫುಕೋ ತನ್ನ ಡಿಸ್ಕೋರ್ಸ್ ವಿಶ್ಲೇಷಣೆಯ ಪರೀಕ್ಷೆಗೆ ಬಳಸಿಕೊಂಡಿದ್ದಾನೆ. ವಿವರಗಳಿಗೆ ಜೇಮ್ಸ್ ಡಿ. ಫೇಬಿಯನ್ (ಸಂ), ಮೈಕೆಲ್ ಫುಕೋ – ಎಸೆನ್ಷಿಯಲ್ ವರ್ಕ್ಸ್ ಆಫ್ ಫುಕೋ ೧೯೫೪–೧೯೮೪ (ಲಂಡನ್: ಪೆಂಗ್ವಿನ್ ಬುಕ್ಸ್, ೧೯೯೪).

೨೫. ಈ ವಿವರಗಳನ್ನು ನಾನು ಹುಸೇನ್ ಖಾನ್ ಅವರ, 'ಮಾನವಶಾಸ್ತ್ರದ ಸಂಶೋಧನಾ ವಿಧಾನಗಳು – ಥಿಯರಿ ಮತ್ತು ಆಚರಣೆ' ಎನ್ನುವ ಉಪನ್ಯಾಸದಿಂದ ಪಡೆದಿದ್ದೇನೆ. ಅವರು ಈ ಉಪನ್ಯಾಸವನ್ನು ಕನ್ನಡ ವಿಶ್ವವಿದ್ಯಾಲಯದ ಅಭಿವೃದ್ಧಿ ಅಧ್ಯಯನ ವಿಭಾಗ ಸಂಘಟಿಸಿದ

ಸಮಾಜವಿಜ್ಞಾನ ಸಂಶೋಧನಾ ವಿಧಾನಗಳು – ಉಪನ್ಯಾಸ ಮಾಲೆ, ೨೦೦೫ರಲ್ಲಿ ನೀಡಿದ್ದರು.

೨೬. ಈ ವಿವರಗಳನ್ನು ನಾನು ವಿವೇಕ ರೈ ಅವರ, 'ಜನಪದಶಾಸ್ತ್ರದ ಸಂಶೋಧನಾ ವಿಧಾನಗಳು–ಥಿಯರಿ ಮತ್ತು ಆಚರಣೆ' ಎನ್ನುವ ಉಪನ್ಯಾಸದಿಂದ ಪಡೆದಿದ್ದೇನೆ. ಅವರು ಈ ಉಪನ್ಯಾಸವನ್ನು ಕನ್ನಡ ವಿಶ್ವವಿದ್ಯಾಲಯದ ಅಭಿವೃದ್ಧಿ ಅಧ್ಯಯನ ವಿಭಾಗ ಸಂಘಟಿಸಿದ ಸಮಾಜ ವಿಜ್ಞಾನ ಸಂಶೋಧನಾ ವಿಧಾನಗಳು – ಉಪನ್ಯಾಸ ಮಾಲೆ, ೨೦೦೫ರಲ್ಲಿ ನೀಡಿದ್ದರು.

೨೭. ವಿವೇಕ ರೈ, ಜನಪದಶಾಸ್ತ್ರದ ಸಂಶೋಧನಾ ವಿಧಾನಗಳು – ಥಿಯರಿ ಮತ್ತು ಆಚರಣೆ, ೨೦೦೫.

೨೮. ವಿವೇಕ ರೈ, ಜನಪದಶಾಸ್ತ್ರದ ಸಂಶೋಧನಾ ವಿಧಾನಗಳು – ಥಿಯರಿ ಮತ್ತು ಆಚರಣೆ', ೨೦೦೫.

೨೯. ಈ ವಿವರಗಳನ್ನು ಲಿಜ್ ಸ್ಟೇನ್ಲ್ ಅವರ ನೋಯಿಂಗ್ ಫೆಮಿನಿಸಂ – ಆನ್ ಅಕಾಡೆಮಿಕ್ ಬಾರ್ಡರ್ಸ್, ಟೆರಿಟರೀಸ್ ಆಂಡ್ ಟ್ರೈಬ್ಸ್, ನ್ಯೂಡೆಲ್ಲಿ : ಸೇಜ್ ಪಬ್ಲಿಕೇಶನ್ಸ್, ೧೯೯೭ ಮತ್ತು ವನಜ ಧ್ರುವರಾಜನ್ ಅವರ, 'ಮಹಿಳಾ ವಿಚಾರಗಳ ಸಂಶೋಧನಾ ವಿಧಾನಗಳು– ಥಿಯರಿ ಮತ್ತು ಆಚರಣೆ' ಎನ್ನುವ ಉಪನ್ಯಾಸದಿಂದ ಪಡೆದಿದ್ದೇನೆ. ಅವರು ಈ ಉಪನ್ಯಾಸವನ್ನು ಕನ್ನಡ ವಿಶ್ವವಿದ್ಯಾಲಯದ ಅಭಿವೃದ್ಧಿ ಅಧ್ಯಯನ ವಿಭಾಗ ಸಂಘಟಿಸಿದ ಸಮಾಜವಿಜ್ಞಾನ ಸಂಶೋಧನಾ ವಿಧಾನಗಳು – ಉಪನ್ಯಾಸ ಮಾಲೆ, ೨೦೦೫ರಲ್ಲಿ ನೀಡಿದ್ದರು.

೩೦. ವನಜ ಧ್ರುವರಾಜನ್, ಮಹಿಳಾ ವಿಚಾರಗಳ ಸಂಶೋಧನಾ ವಿಧಾನಗಳು – ಥಿಯರಿ ಮತ್ತು ಆಚರಣೆ, ೨೦೦೫.

೩೧. ವನಜ ಧ್ರುವರಾಜನ್, ಮಹಿಳಾ ವಿಚಾರಗಳ ಸಂಶೋಧನಾ ವಿಧಾನಗಳು – ಥಿಯರಿ ಮತ್ತು ಆಚರಣೆ, ೨೦೦೫.

೩೨. ಗ್ರೌಂಡೆಡ್ ಥಿಯರಿ, ಫೆಮಿನಿಸ್ಟ್ ಥಿಯರಿ ಇತ್ಯಾದಿಗಳು ಕ್ಷೇತ್ರದಲ್ಲಿನ ಸಂಗತಿಗಳನ್ನು ಸ್ಥಾಪಿತ ತಾತ್ವಿಕ ಚೌಕಟ್ಟಿನೊಂದಿಗೆ ಹೋಲಿಸಿ ನೋಡುವುದನ್ನು ವಿರೋಧಿಸುತ್ತವೆ. ಅಷ್ಟು ಮಾತ್ರವಲ್ಲ; ಕ್ಷೇತ್ರದಲ್ಲಿನ ಸಂಗತಿಗಳ ಆಧಾರದಲ್ಲೇ ಥಿಯರಿಗಳನ್ನು ರೂಪಿಸಬೇಕೆನ್ನುವ ನಿಲುವನ್ನು ಪ್ರತಿಪಾದಿಸುತ್ತವೆ.

೩೩. ದಿ ವರ್ಲ್ಡ್ ಸೋಶಿಯಲ್ ಸಯನ್ಸ್ ಫಾರಂ, ದಿ ವರ್ಲ್ಡ್ ಸೋಶಿಯಲ್ ಸಯನ್ಸ್ ರಿಪೋರ್ಟ್, ೨೦೧೦, ಈ ವರದಿಯನ್ನು ಯುನೆಸ್ಕೋದ ವೆಬ್‌ಸೈಟ್‌ನಿಂದ ಪಡೆದಿದ್ದೇನೆ.

೩೪. ಈ ವಿವರಗಳನ್ನು ಕೀತ್ ಜೆಂಕಿನ್ಸ್ ಅವರ ರಿ ಥಿಂಕಿಂಗ್ ಹಿಸ್ಟರಿ (ಲಂಡನ್: ರೌಟ್‌ಲೆಡ್ಜ್, ೨೦೦೩) ಪುಸ್ತಕದಿಂದ ಮತ್ತು ಸುರೇಂದ್ರರಾವ್ ಅವರ, 'ಚರಿತ್ರೆಯ ಸಂಶೋಧನಾ ವಿಧಾನ–ತತ್ತ್ವ ಮತ್ತು ಆಚರಣೆ' ಎನ್ನುವ ಉಪನ್ಯಾಸದಿಂದ ಪಡೆಯಲಾಗಿದೆ. ಅವರು ಈ ಉಪನ್ಯಾಸವನ್ನು ಕನ್ನಡ ವಿಶ್ವವಿದ್ಯಾಲಯದ ಅಭಿವೃದ್ಧಿ ಅಧ್ಯಯನ ವಿಭಾಗ ಸಂಘಟಿಸಿದ ಸಮಾಜವಿಜ್ಞಾನ ಸಂಶೋಧನಾ ವಿಧಾನಗಳು – ಉಪನ್ಯಾಸ ಮಾಲೆ, ೨೦೦೫ರಲ್ಲಿ ನೀಡಿದ್ದರು.

೩೫. ಎರಡನೇ ವಿಶ್ವಯುದ್ಧ, ಜರ್ಜರಿತವಾದ ಅರ್ಥ ವ್ಯವಸ್ಥೆ ಇತ್ಯಾದಿ ಕಾರಣಗಳಿಂದ ಬಲಾಢ್ಯ ರಾಷ್ಟ್ರಗಳು ತಮ್ಮ ಮಾದರಿಯನ್ನು ಇತರರ ಮೇಲೆ ಬಲ ಪ್ರಯೋಗದಿಂದ ಹೇರುವ ಸ್ಥಿತಿಯಲ್ಲಿರಲಿಲ್ಲ. ಈ ಕುರಿತ ವಿವರಗಳಿಗೆ ಎರಿಕ್ ಹಾಬ್ಸ್‌ಹಾಮ್, ದಿ ಏಜ್ ಆಫ್ ಕ್ಯಾಪಿಟಲ್, ಗ್ರೇಟ್ ಬ್ರಿಟನ್: ಸ್ಪಿಯರ್ ಬುಕ್ಸ್, ೧೯೭೫.

೩೬. ಎರಿಕ್ ಹಾಬ್ಸ್‌ವಾಮ್, ದಿ ಏಜ್ ಆಫ್ ಕ್ಯಾಪಿಟಲಿಸಂ, ೧೯೭೫.

೩೭. ಡಬ್ಲ್ಯು ಡಬ್ಲ್ಯು ರಸ್ಟೋನ, ಸ್ಟೇಜಸ್ ಆಫ್ ಎಕನಾಮಿಕ್ ಗ್ರೋಥ್, (ಕೇಂಬ್ರಿಡ್ಜ್: ಕೇಂಬ್ರಿಡ್ಜ್ ಯೂನಿವರ್ಸಿಟಿ ಪ್ರೆಸ್, ೧೯೬೦) ಪುಸ್ತಕದ ಐಡಿಯಲಾಜಿಕಲ್ ಉದ್ದೇಶವನ್ನು ಟಿ.ಬಿ.

ಬಾಟಮ್‌ಮೋರ್ ತನ್ನ ಪುಸ್ತಕ, ಸೋಶಿಯಾಲಜಿ ಆ್ಯಸ್ ಸೋಶಿಯಲ್ ಕ್ರಿಟಿಸಿಸಂ ನಲ್ಲಿ (ನ್ಯೂಡೆಲ್ಲಿ: ಚಾಂದ್ ಆ್ಯಂಡ್ ಕಂಪನಿ, ೧೯೭೯) ವಿವರಿಸಿದ್ದಾನೆ.

೩೮. ಹಟ್ಟಿಂಗ್ಟನ್ ಎಸ್.ಪಿ., ಪೊಲಿಟಿಕಲ್ ಆರ್ಡರ್ ಇನ್ ಚೇಂಜಿಂಗ್ ಸೊಸೈಟೀಸ್, ಲಂಡನ್: ಯೇಲ್ ಯೂನಿವರ್ಸಿಟಿ ಪ್ರೆಸ್, ೧೯೬೮.

೩೯. ಅಂತಾರಾಷ್ಟ್ರೀಯ ವ್ಯವಸ್ಥೆಯಲ್ಲಿ ವಿವಿಧ ದೇಶಗಳ ಸ್ಥಾನಮಾನದ ಕುರಿತ ಥಿಯರಿಟಿಕಲ್ ಚರ್ಚೆಯ ಪರಿಚಯಕ್ಕೆ ಡಿಪೆಂಡೆನ್ಸ್ ಥಿಯರಿಸ್ಟರ ಬರಹಗಳು ಉಪಯುಕ್ತ – ಇಮ್ಯಾನ್ಯುಲ್ ವೆಲ್‌ಸ್ಟೇಯಿನ್, ದಿ ಕ್ಯಾಪಿಟಲಿಸ್ಟ್ ವರ್ಲ್ಡ್ ಎಕಾನಮಿ, ಕೇಂಬ್ರಿಡ್ಜ್ : ಕೇಂಬ್ರಿಡ್ಜ್ ಯೂನಿವರ್ಸಿಟಿ ಪ್ರೆಸ್, ೧೯೭೯, ಎ.ಜಿ. ಪ್ರಾಂಕ್, ಡಿಪೆಂಡೆಂಟ್ ಎಕ್ಯುಮ್ಯುಲೇಶನ್ ಆಂಡ್ ಅಂಡರ್ ಡೆವಲಪ್‌ಮೆಂಟ್, ಲಂಡನ್: ದಿ ಮ್ಯಾಕ್‌ಮಿಲನ್ ಪ್ರೆಸ್, ೧೯೭೮ ಮುಂತಾದವು. ಅಂತಾರಾಷ್ಟ್ರೀಯ ಹಣಕಾಸು ಸಂಸ್ಥೆಗಳಾದ ವರ್ಲ್ಡ್ ಬ್ಯಾಂಕ್ ಮತ್ತು ಇಂಟರ್‌ನೇಶನಲ್ ಮಾನಿಟರಿ ಫಂಡ್‌ಗಳನ್ನು ತಮ್ಮ ಹತೋಟಿಯಲ್ಲಿಕೊಳ್ಳುವಷ್ಟು ಪ್ರಮಾಣದ ಶೇರುಗಳನ್ನು ಬ್ರಿಟನ್ ಮತ್ತು ಅಮೆರಿಕ ದೇಶಗಳು ಹೊಂದಿವೆ. ಆದುದರಿಂದ ಈ ಸಂಸ್ಥೆಗಳ ಪಾಲಿಸಿಯನ್ನು ಈ ಎರಡು ದೇಶಗಳು ಗಣನೀಯವಾಗಿ ಪ್ರಭಾವಿಸುತ್ತಿವೆ. ವಿವರಗಳಿಗೆ ಸಪರಿನ್, ದಿ ಪಾಲಿಸಿ ರೂಟ್ಸ್ ಆಫ್ ಎಕಾನಮಿಕ್ ಕ್ರೈಸಿಸ್, ಪಾವರ್ಟಿ ಆಂಡ್ ಇನಿಕ್ವಾಲಿಟಿ, ಲಂಡನ್: ಜೆಡ್ ಬುಕ್ಸ್, ೨೦೦೪ ಮತ್ತು ಚಾಂಗ್ ಆಂಡ್ ಗ್ರಾಬೆಲ್, ರಿಕ್ಲೈಮಿಂಗ್ ಡೆವಲಪ್‌ಮೆಂಟ್ – ಎನ್ ಆಲ್ಟರ್‌ನೇಟಿವ್ ಎಕಾನಮಿಕ್ ಪಾಲಿಸಿ ಮೇನ್ವಲ್ ಬೆಂಗಳೂರು: ಬುಕ್ಸ್ ಫಾರ್ ಚೇಂಜ್, ೨೦೦೪.

೪೦. ಎಸ್. ಜಾರ್ಜ್, ಎ ಫೇಟ್ ವರ್ಸ್ ದೇನ್ ಡೆಟ್ – ದಿ ವರ್ಲ್ಡ್ ಫೈನಾನ್ಶಿಯಲ್ ಕ್ರೈಸೀಸ್ ಆಂಡ್ ದಿ ಪೂವರ್, ಲಂಡನ್: ಪ್ಲುಟೋ ಪ್ರೆಸ್, ೧೯೯೦, ಎಸ್, ಗುಹನ್, 'ವರ್ಲ್ಡ್ ಬ್ಯಾಂಕ್ ಆನ್ ಗವರ್‌ನೆನ್ಸ್ – ಎ ಕ್ರಿಟಿಕ್', ಎಕನಾಮಿಕ್ ಆಂಡ್ ಪೊಲಿಟಿಕಲ್ ವೀಕ್ಲಿ, ವಾಲ್ಯೂಮ್ ೩೩, ನಂ. ೪, ಜನವರಿ ೧೯೯೮, ಪು. ೧೮೫–೧೮೯, ಎಲೆನ್ ಮೆಸಿನ್ಸ್ ವುಡ್, 'ಅನ್‌ಹ್ಯಾಪಿ ಫ್ಯಾಮಿಲೀಸ್ – ಗ್ಲೋಬಲ್ ಕ್ಯಾಪಿಟಲಿಸಂ ಇನ್ ಎ ವರ್ಲ್ಡ್ ಆಫ್ ನೇಶನ್ ಸ್ಟೇಟ್ಸ್', ಮಂಥ್ಲೀ ರಿವೀವ್, ವಾಲ್ಯೂಮ್ ೫೧, ನಂ.೩, ಜುಲೈ/ಆಗಸ್ಟ್ ೧೯೯೯, ಪು. ೧–೧೩, ಮಿಗಲ್ ಎ ಆತೇರಿ, 'ಇಕಲೋಜಿಕಲ್ ಇಂಪ್ಯಾಕ್ಟ್ ಆಫ್ ಇಂಡಸ್ಟ್ರೀಯಲ್ ಅಗ್ರಿಕಲ್ಚರ್ ಆಂಡ್ ದಿ ಪಾಸಿಬಿಲಿಟಿಸ್ ಫಾರ್ ಟ್ರೂಲಿ ಸಸ್ಟೈನೆಬಲ್ ಫಾರ್‌ಮಿಂಗ್', ಮಂಥ್ಲೀ ರಿವೀವ್, ವಾಲ್ಯೂಮ್ ೫೦, ನಂ. ೩, ಜುಲೈ–ಆಗಸ್ಟ್ ೧೯೯೮, ಪು. ೬೦–೭೧, ಜಾನೆಟ್ ಪೊಪ್ಪೆಂಡಿಕ್, 'ವಾಂಟ್ ಆಂಡ್ ಪ್ಲೆಂಟಿ – ಫ್ರಮ್ ಹಂಗರ್ ಟು ಇನಿಕ್ವಾಲಿಟಿ', ಮಂಥ್ಲೀ ರಿವೀವ್, ವಾಲ್ಯೂಮ್ ೫೦, ನಂ. ೩. ಜುಲೈ–ಆಗಸ್ಟ್ ೧೯೯೮, ಪು. ೬೦–೭೧, ಪು. ೧೨೫–೧೩೬, ಎಲೆನ್ ಮೆಸಿನ್ಸ್ ವುಡ್, ಲೇಬರ್, 'ದಿ ಸ್ಟೇಟ್ ಆಂಡ್ ದಿ ಕ್ಲಾಸ್ ಸ್ಟ್ರಗಲ್', ಮಂಥ್ಲೀ ರಿವೀವ್, ವಾಲ್ಯೂಮ್ ೪೯, ನಂ. ೩, ಜುಲೈ–ಆಗಸ್ಟ್ ೧೯೯೭, ಪು. ೧–೧೭.

೪೧. ಅಮೇರಿಕದ ರಾಜಕೀಯಶಾಸ್ತ್ರಜ್ಞ ರಾಬರ್ಟ್ ಪುನಮ್ ತನ್ನ ಮೇಕಿಂಗ್ ಡೆಮಾಕ್ರಸಿ ವರ್ಕ್– ಸಿವಿಕ್ ಟ್ರೆಡಿಶನ್ಸ್ ಇನ್ ಮಾಡರ್ನ್ ಇಟಲಿ (ಪ್ರಿನ್ಸ್‌ಟನ್: ಪ್ರಿನ್ಸ್‌ಟನ್ ಯೂನಿವರ್ಸಿಟಿ ಪ್ರೆಸ್, ೧೯೯೩) ಎನ್ನುವ ಪುಸ್ತಕದಲ್ಲಿ ಇಟಲಿಯ ಅನುಭವದ ನೆಲೆಯಲ್ಲಿ ಸಂಘಟಿತ ಬದುಕು ಅಥವಾ ಸಿವಿಲ್ ಸೊಸೈಟಿ ಮತ್ತು ಪ್ರಜಾಪ್ರಭುತ್ವದ ನಡುವೆ ಸಂಬಂಧ ಹೆಣೆಯುವ ಪ್ರಯತ್ನ ಮಾಡಿದ್ದಾನೆ. ಸಿವಿಲ್ ಸೊಸೈಟಿ ಮತ್ತು ಪ್ರಜಾಪ್ರಭುತ್ವ ನಡುವೆ ಸಂಬಂಧ ಹೆಣೆಯುವ ಪ್ರಯತ್ನಗಳು ಹಿಂದೆಯೂ ಇದ್ದವು. ಅವು ಕೂಡ ಪಶ್ಚಿಮದ ದೇಶಗಳ ಅನುಭವಗಳ ಹಿನ್ನೆಲೆಯಲ್ಲೇ ತಾತ್ವಿಕ ನಿಲುವುಗಳನ್ನು ತಾಳಿದ್ದವು. ಈ ಸಾಲಿನಲ್ಲಿ ಅಲೆಕ್ಸಿಡಿ ತೊವಿಲ್ಲೆಯ ಡೆಮಾಕ್ರಸಿ ಇನ್ ಅಮೆರಿಕ, (ನ್ಯೂಯಾರ್ಕ್: ಹ್ಯಾಂಕರ್ ಬುಕ್ಸ್, ೧೯೬೬), ಜೇಮ್ಸ್ ಎಸ್ ಕೊಲ್‌ಮೆನ್‌ಯ, ಫೌಂಡೇಶನ್ಸ್ ಆಫ್ ಸೋಶಿಯಲ್ ಥಿಯರಿ, (ಕೇಂಬ್ರಿಡ್ಜ್: ಹಾರ್‌ವರ್ಡ್ ಯೂನಿವರ್ಸಿಟಿ ಪ್ರೆಸ್, ೧೯೯೦) ಬರಹಗಳನ್ನು ಗುರುತಿಸಬಹುದು. ಅವರು ಅಮೆರಿಕದ

ಪ್ರಜಾಪ್ರಭುತ್ವದಲ್ಲಿ ಸಿವಿಲ್ ಸೊಸೈಟಿಯ ಪಾತ್ರ ಕುರಿತು ಚರ್ಚಿಸಿದ್ದಾರೆ. ಇವರ ಥಿಯರಿಗಳು ಸಿವಿಲ್ ಸೊಸೈಟಿ ಮತ್ತು ಒಳ್ಳೆಯ ಆಡಳಿತದ ಸಂಬಂಧವನ್ನು ವಿವರಿಸುತ್ತವೆ. ನಾಗರಿಕ ಸಂಘಟನೆ ಅಥವಾ ಸಿವಿಲ್ ಸೊಸೈಟಿ ಪ್ರಜಾಪ್ರಭುತ್ವ ಮಾದರಿಯಲ್ಲಿ ಸಮಸ್ಯೆ ಪರಿಹಾರದ ಮೂಲಭೂತ ಪಾಠವನ್ನು ಹೇಳಿಕೊಡುತ್ತವೆ ಎಂದು ಇವರು ಅಭಿಪ್ರಾಯ ಪಡುತ್ತಾರೆ.

೪೨. ರಜನಿ ಕೊಠಾರಿ, ಸ್ಟೇಟ್ ಎಗೇಯಿನ್ಸ್ಟ್ ಡೆಮಾಕ್ರಸಿ: ಇನ್ ಸರ್ಚ್ ಆಫ್ ಹ್ಯೂಮನ್ ಗವರ್ನೆನ್ಸ್, ಡೆಲ್ಲಿ: ಅಜಂತಾ ಪಬ್ಲಿಷರ್ಸ್, ೧೯೮೮, ಆಶಿಸ್ ನಂದಿ, "ಕಲ್ಚರ್, ಸ್ಟೇಟ್ ಆಂಡ್ ರೀಡಿಸ್ಕವರಿ ಆಫ್ ಇಂಡಿಯನ್ ಪಾಲಿಟಿಕ್ಸ್", ಎಕಾನಮಿಕ್ ಆಂಡ್ ಪೊಲಿಟಿಕಲ್ ವೀಕ್ಲಿ, ವಾ. ೧೯, ೧೯೮೪, ಪು. ೨೦೭೮–೮೩, ಡಿ.ಎಲ್. ಸೇತ್ ಆಂಡ್ ಆಶಿಸ್ ನಂದಿ (ಸಂ), ಮಲ್ಟಿವರ್ಸ್ ಆಫ್ ಡೆಮಾಕ್ರಸಿ, ನ್ಯೂಡೆಲ್ಲಿ: ಸೇಜ್ ಪಬ್ಲಿಕೇಶನ್ಸ್, ೧೯೯೬ ಮುಂತಾದವರ ಬರಹಗಳಲ್ಲಿ ಈ ಬಗೆಯ ಚಿಂತನೆಗಳನ್ನು ಕಾಣಬಹುದು.

೪೩. ಉಪೇಂದ್ರ ಭಕ್ಷಿ ಆಂಡ್ ಭಿಕು ಪರೇಕ್ (ಸಂ), ಕ್ರೈಸೀಸ್ ಆ್ಯಂಡ್ ಚೇಂಜ್, ನ್ಯೂಡೆಲ್ಲಿ: ಸೇಜ್ ಪಬ್ಲಿಕೇಶನ್ಸ್, ೧೯೯೫.

೪೪. ಆಶಿಸ್ ನಂದಿ, ಕಲ್ಚರ್, "ಸ್ಟೇಟ್ ಆ್ಯಂಡ್ ರೀಡಿಸ್ಕವರಿ ಆಫ್ ಇಂಡಿಯನ್ ಪಾಲಿಟಿಕ್ಸ್", ಎಕನಾಮಿಕ್ ಆಂಡ್ ಪೊಲಿಟಿಕಲ್ ವೀಕ್ಲಿ, ಪು. ೨೦೭೮–೮೩.

೪೫. ಮಾಧವ ಗಾಡ್ಗೀಲ್ ಆಂಡ್ ರಾಮಚಂದ್ರ ಗುಹ, ಇಕಾಲಜಿ ಆಂಡ್ ಈಕ್ವಿಟಿ: ದಿ ಯೂಸ್ ಆಂಡ್ ಅಬ್ಯೂಸ್ ಆಫ್ ನೇಚರ್ ಇನ್ ಕಾಂಟೆಂಪರರಿ ಇಂಡಿಯಾ, ನ್ಯೂಡೆಲ್ಲಿ: ಪೆಂಗ್ವಿನ್ ಬುಕ್ಸ್, ೧೯೯೫.

೪೬. 'ಅತಿಯಾದ ಸಬ್ಜೆಕ್ಟಿವಿಟಿಯನ್ನು ಹರ್ಮನೆಟ್ಟಿಕ್ಸ್ ಸ್ಕೂಲ್‌ಗೆ ಸೇರಿದ ಚಿಂತಕರಲ್ಲಿ ನೋಡಬಹುದು. ಆದರೆ ಇವರಲ್ಲೂ ಆಬ್ಜೆಕ್ಟಿವಿಟಿಯನ್ನು ಪ್ರತಿಪಾದಿಸುವ ಚಿಂತಕರಿದ್ದಾರೆ. ಇಂತವರನ್ನು ಹೊರತುಪಡಿಸಿ ಉಳಿದವರನ್ನು ಅತಿಯಾದ ಸಬ್ಜೆಕ್ಟಿವಿಟಿಯನ್ನು ಪ್ರತಿಪಾದಿಸುವವರೆಂದು ತೀರ್ಮಾನಿಸಹುದು. ಈ ಕುರಿತ ಸಂಕ್ಷಿಪ್ತ ವಿವರಗಳಿಗೆ ಪಾರ್ಥನಾಥ ಮುಖರ್ಜಿಯವರ, ಮೆಥಡಾಲಜಿ ಇನ್ ಸೋಶಿಯಲ್ ರಿಸರ್ಚ್ (ನ್ಯೂಡೆಲ್ಲಿ: ಸೇಜ್ ಪಬ್ಲಿಕೇಶನ್ಸ್, ೨೦೦೦) ಪುಸ್ತಕ ನೋಡಬಹುದು.

೪೭. ನೇಚುರಲ್ ಫೇಕ್ಟ್ ಇದ್ದ ಹಾಗೆ ಸೋಶಿಯಲ್ ಫೇಕ್ಟ್ ಇದೆ ಮತ್ತು ಇದನ್ನು ವಿಜ್ಞಾನದ ವಿಧಾನದಿಂದ ತಿಳಿದುಕೊಳ್ಳಬಹುದೆಂದು ವಾದಿಸುವವರನ್ನು ಅತಿಯಾದ ಆಬ್ಜೆಕ್ಟಿವಿಟಿಯನ್ನು ಪ್ರತಿಪಾದಿಸುವವರೆಂದು ಹೇಳಬಹುದು. ವಿಜ್ಞಾನದ ವಿಧಾನವನ್ನು ಸಮಾಜ ಸಂಶೋಧನೆಗೆ ಅನ್ವಯಿಸುವ ಅಗತ್ಯದ ನಿಲುವುಗಳನ್ನು ಆಗಸ್ಟ್ ಕಾಮ್ಟೆ (ಎ ಬ್ರೀಫ್ ಎಪ್ರೈಸಲ್ ಆಫ್ ಮೊಡರ್ನ್ ಹಿಸ್ಟರಿ), ಡರ್ಕ್‌ಹೇಮ್ (ದಿ ರೂಲ್ಸ್ ಆಫ್ ಸೋಶಿಯಲಾಜಿಕಲ್ ಮೆಥಡ್ಸ್, ನ್ಯೂಯಾರ್ಕ್: ದಿ ಫ್ರಿ ಪ್ರೆಸ್, ೧೯೩೩), ಹರ್ಬರ್ಟ್ ಸ್ಪನ್ಸರ್ (ದಿ ಇವೋಲ್ಯೂಶನ್ ಆಫ್ ಸೊಸೈಟಿ) ಬರಹಗಳಲ್ಲಿ ವ್ಯಕ್ತಪಡಿಸಿದ್ದಾರೆ. ನಾನು ಡರ್ಕ್‌ಹೇಮ್‌ನ ನಿಲುವಿನ ವಿವರಗಳನ್ನು ಟೋನಿ ಬಾರ್‌ನೆಟ್ ಅವರ, ಸೋಶಿಯಲಾಜಿ ಆಂಡ್ ಡೆವಲಪ್‌ಮೆಂಟ್ (ಲಂಡನ್: ರೌಟ್‌ಲೆಡ್ಜ್, ೧೯೮೮) ಪುಸ್ತಕದಿಂದ ಮತ್ತು ಕಾಮ್ಟೆಯ ಅಭಿಪ್ರಾಯಗಳನ್ನು ಆರ್.ಫ್ಲೆಚರ್ ಅವರ, ದಿ ಕ್ರೈಸೀಸ್ ಆಫ್ ಇಂಡಸ್ಟ್ರಿಯಲ್ ಸಿವಿಲೈಸೇಶನ್ ಪುಸ್ತಕದಿಂದ ಪಡೆದಿದ್ದೇನೆ.

೪೮. ವಿವಿಧ ರೂಪದ ಅಧಿಕಾರ ಮತ್ತು ಒಂದು ಬಗೆಯ ಅಧಿಕಾರ ಮತ್ತೊಂದು ಬಗೆಯ ಅಧಿಕಾರವಾಗಿ ಪರಿವರ್ತನೆಗೊಳ್ಳುವ ಸಾಧ್ಯತೆ ಸಂಬಂಧಿಸಿದ ಚರ್ಚೆಯನ್ನು ನಾನು ಮೈಕಲ್ ಘುಕೋನ ದಿ ಸಬ್ಜೆಕ್ಟ್ ಆಂಡ್ ಪವರ್ ಲೇಖನದಿಂದ ಪಡೆದಿದ್ದೇನೆ. ಈ ಲೇಖನ ಕಾಟೆ ನಾಶ್ (ಸಂ), ರೀಡಿಂಗ್ಸ್ ಇನ್ ಕಾಂಟೆಂಪರರಿ ಸೋಶಿಯಲಾಜಿ (ಆಕ್ಸ್‌ಫರ್ಡ್, ೨೦೦೦) ಪುಸ್ತಕದಲ್ಲಿ ಪ್ರಕಟವಾಗಿದೆ.

೪೯. ವ್ಯಕ್ತಿ ಅಥವಾ ಗುಂಪೊಂದು ಮತ್ತೊಬ್ಬ ವ್ಯಕ್ತಿ ಅಥವಾ ಗುಂಪನ್ನು ತನ್ನ ಆಸಕ್ತಿಗೆ ಅನುಸಾರ ವರ್ತಿಸುವಂತೆ ಅಥವಾ ವರ್ತಿಸದಂತೆ ಮಾಡುವುದನ್ನು ಅಧಿಕಾರವೆಂದು ಇಲ್ಲಿ ವ್ಯಾಖ್ಯಾನಿಸಿಕೊಳ್ಳಲಾಗಿದೆ. ಅಧಿಕಾರವನ್ನು ಇಲ್ಲಿ ವಿಶಾಲ ಅರ್ಥದಲ್ಲಿ ಬಳಸಲಾಗಿದೆ. ಅಂದರೆ ಎಲ್ಲ ಕ್ಷೇತ್ರಗಳಲ್ಲಿರುವ (ಸಾಮಾಜಿಕ, ಆರ್ಥಿಕ, ರಾಜಕೀಯ, ಸಾಂಸ್ಕೃತಿಕ) ಅಧಿಕಾರವನ್ನು ಗಮನದಲ್ಲಿಟ್ಟುಕೊಂಡು ಬಳಸಲಾಗಿದೆ. ಜತೆಗೆ ಒಂದು ಕ್ಷೇತ್ರದ ಅಧಿಕಾರವನ್ನು ಮತ್ತೊಂದು ಕ್ಷೇತ್ರದ ಅಧಿಕಾರವಾಗಿ ಪರಿಗಣಿಸುವ ಸಾಧ್ಯತೆಯನ್ನೂ ಇಲ್ಲಿ ಪರಿಗಣಿಸಲಾಗಿದೆ.

೫೦. ಎರಡು ಬಗೆಯ ಇನ್‌ಸ್ಟಿಟ್ಯುಶನಲ್ ಥಿಯರಿಗಳಿವೆ. ಒಂದು ಓಲ್ಡ್ ಇನ್‌ಸ್ಟಿಟ್ಯುಶನಲ್ ಥಿಯರಿಗಳು ಮತ್ತೊಂದು ನ್ಯೂ ಇನ್‌ಸ್ಟಿಟ್ಯುಶನಲಿಸಂ ಥಿಯರಿಗಳು. ನ್ಯೂ ಇನ್‌ಸ್ಟಿಟ್ಯುಶನಲ್ ಥಿಯರಿಗಳು ಸಂಸ್ಥೆಗಳ ಸೃಷ್ಟಿ ಮತ್ತು ಬಳಕೆಯಲ್ಲಿ ಅಧಿಕಾರದ ಪಾತ್ರ ಪರಿಗಣಿಸುತ್ತಿದೆ. ಅಂದರೆ ಬಲಾಢ್ಯರು ಸಂಸ್ಥೆಗಳನ್ನು ಸೃಷ್ಟಿಸುವುದು ಮಾತ್ರವಲ್ಲ ಸಂಸ್ಥೆಗಳನ್ನು ತಮ್ಮ ಆಸಕ್ತಿಗಳಿಗೆ ಅನುಸಾರ ಬಳಸಿಕೊಳ್ಳುತ್ತಾರೆ. ಹೆಚ್ಚಿನ ಮಾಹಿತಿಗೆ ಈ ಕೆಳಗಿನ ಪುಸ್ತಕಗಳನ್ನು ನೋಡಬಹುದು ನಾರ್ಥ್ ಡಿ. ಇನ್‌ಸ್ಟಿಟ್ಯುಶನಲ್ ಚೇಂಜ್ ಆಂಡ್ ಎಕಾನಮಿಕ್ ಪರ್ಫೋರ್ಮೆನ್ಸ್, ನ್ಯೂಯಾರ್ಕ್: ಕೇಂಬ್ರಿಡ್ಜ್ ಯುನಿವರ್ಸಿಟಿ ಪ್ರೆಸ್, ೧೯೯೦, ಜೇಮ್ಸ್ ಜಿ ಮಾರ್ಕ್ ಆಂಡ್ ಜೋಹನ್ ಪಿ ಒಸನ್, ದಿ ನ್ಯೂ ಇನ್‌ಸ್ಟಿಟ್ಯುಶನಲಿಸಂ – ಆರ್ಗನೈಸೇಶನ್ ಫೇಕ್ಟರ್ಸ್ ಇನ್ ಪೊಲಿಟಿಕಲ್ ಲೈಫ್, ದಿ ಆಮೇರಿಕನ್ ಪೊಲಿಟಿಕಲ್ ಸಯನ್ಸ್ ರಿವೀವ್, ೭೮ (೩), ಸೆಪ್ಟಂಬರ್ ೧೯೮೪, ಪು. ೭೩೪–೪೯.

೫೧. ಈ ಬದಲಾವಣೆಗಳು ಎಲ್ಲ ಪ್ರದೇಶಗಳಲ್ಲಿ ಮತ್ತು ಎಲ್ಲ ಸಮುದಾಯಗಳಲ್ಲಿ ಏಕರೂಪದಲ್ಲಿ ನೋಡಲು ಸಾಧ್ಯವಿಲ್ಲ. ನಗರ ಪ್ರದೇಶದ ಅದರಲ್ಲೂ ಎಲ್ಲ ಬಗೆಯ ಆಧುನೀಕರಣಕ್ಕೆ ತೆರೆದುಕೊಂಡ ಕೆಲವೊಂದು ಕುಟುಂಬಗಳಲ್ಲಿ ಮಾತ್ರ ಈ ಬದಲಾವಣೆಗಳನ್ನು ಗುರುತಿಸಬಹುದು. ಗ್ರಾಮೀಣ ಪ್ರದೇಶದ ಮಹಿಳೆಯರು, ಹಿಂದುಳಿದ ಸಮುದಾಯಗಳ ಮಹಿಳೆಯರು, ಎಲ್ಲ ಸಮುದಾಯಗಳ ಬಡ ಮಹಿಳೆಯರು ಇನ್ನೂ ಕೂಡ ಸಾಂಪ್ರದಾಯಿಕ ಸಮಾಜದ ಕಟ್ಟುಪಾಡುಗಳಿಂದ ಬಂಧಿತರಾಗಿದ್ದಾರೆ.

೫೨. ಜಾತಿ ಇರುವಿಕೆಯನ್ನು ಮತ್ತು ವ್ಯಕ್ತಿ ಮತ್ತು ಕುಟುಂಬದ ಬದುಕಿನ ಗುಣಮಟ್ಟವನ್ನು ಜಾತಿ ನಿರ್ಧರಿಸುವ ಸಾಧ್ಯತೆಯನ್ನು ಅಲ್ಲಗೆಳೆಯುವ ಸಾಕಷ್ಟು ಅಧ್ಯಯನಗಳಿವೆ. ಈ ಅಧ್ಯಯನಗಳು ಜಾತಿಯನ್ನು ಕೆಲವೊಂದು ಗುಣಲಕ್ಷಣಗಳ ಮೂಲಕ ಗುರುತಿಸುತ್ತವೆ. ಕಸುಬು, ಭಾಷೆ, ಉಡುಗೆತೊಡುಗೆ, ಊಟ ಉಪಚಾರ, ಮದುವೆ ಇತ್ಯಾದಿ ಗುಣಲಕ್ಷಣಗಳ ಮೂಲಕ ಜಾತಿಯನ್ನು ಗುರುತಿಸಲಾಗುವುದು. ಈ ಗುಣಲಕ್ಷಣಗಳು ಇಂದು ಜಾತಿ ಕೇಂದ್ರೀತವಾಗಿ ಆಚರಣೆಯಲ್ಲಿ ಇಲ್ಲದಿರುವುದರಿಂದ ಜಾತಿ ಇಲ್ಲವೆಂದು ಇವರು ವಾದಿಸುತ್ತಾರೆ. ಆದರೆ ಇದು ವಾಸ್ತವಕ್ಕೆ ದೂರದ ಮಾತು. ಇಂದು ಕೂಡ ಕೆಲವೊಂದು ಜಾತಿಗಳು ಎಲ್ಲ ಕ್ಷೇತ್ರಗಳಲ್ಲೂ ಹಿಂದೆ ಇದ್ದು ಮತ್ತೆ ಕೆಲವು ಜಾತಿಗಳು ಮುಂದಿವೆ. ಇದು ಹೇಗೆ ಸಾಧ್ಯವಾಯಿತು. ಅಂದರೆ ಎಲ್ಲೋ ಒಂದು ಕಡೆ ಅವರ ಏಳಿಗೆಯಲ್ಲಿ ಜಾತಿ/ಸಮುದಾಯಗಳ ಪಾತ್ರ ಕೆಲಸ ಮಾಡಿದೆ. ಕೆಲವೊಂದು ಮೂಲಭೂತ ಸವಲತ್ತುಗಳನ್ನು (ಶಿಕ್ಷಣ, ಆರೋಗ್ಯ, ವಸತಿ) ಹೊಂದಿರುವುದರಲ್ಲೂ ಜಾತಿಗಳ ನಡುವೆ ಸಾಕಷ್ಟು ಅಂತರವಿದೆ.

೫೩. ಚಂದ್ರ ಪೂಜಾರಿ, ದೇಶಿಯತೆಯ ನೆರಳಲ್ಲಿ ವಿಕೇಂದ್ರೀಕರಣ, ವಿದ್ಯಾರಣ್ಯ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ೨೦೦೧

೫೪. ಸಾಮಾಜಿಕ ಪರಿವರ್ತನೆ ನಮ್ಮಲ್ಲಿ ವಿವಿಧ ರೂಪದಲ್ಲಿ ಗ್ರಹಿಸಲ್ಪಡುತ್ತಿದೆ. ಸಾಮಾಜಿಕ ನ್ಯಾಯ ಒದಗಿಸುವ ಕೆಲವೊಂದು ಪಾಲಿಸಿಗಳು (ಉದಾ: ರಿಸರ್ವೇಶನ್) ವ್ಯಕ್ತಿಗಳು ಬದಲಾಗುವುದನ್ನು ಸಾಮಾಜಿಕ ಪರಿವರ್ತನೆಗೆ ಸಮೀಕರಿಸುತ್ತಿವೆ. ಸಂಬಂಧಗಳು, ಸಂಸ್ಥೆಗಳು ಮತ್ತು ಮೌಲ್ಯಗಳು ಪರಿವರ್ತನೆಗೊಳ್ಳದೆ ಕೇವಲ ಕೆಲವೊಂದು ತಳಸ್ತರದ ವ್ಯಕ್ತಿಗಳು ಉನ್ನತ ಅಧಿಕಾರ ಸ್ಥಾನಕ್ಕೆ

ಬಂದ ಕೂಡಲೇ ಸಾಮಾಜಿಕ ಪರಿವರ್ತನೆ ಸಾಧ್ಯವಿಲ್ಲ. ಹಾಗೆಂದು ಈ ಚಲನೆಯನ್ನು ನಿಲ್ಲಿಸಬೇಕೆಂದು ನಾನು ವಾದಿಸುತ್ತಿಲ್ಲ. ವ್ಯಕ್ತಿಗಳ ಚಲನೆ ಜೊತೆಗೆ ಸಾಂಸ್ಥಿಕ ಪರಿವರ್ತನೆಗೂ ಹೆಚ್ಚಿನ ಮಹತ್ವ ನೀಡಬೇಕೆನ್ನುವ ಇಂಗಿತ ಇಲ್ಲಿದೆ.

೫೫. ಸುಖದೇವ್ ಥೋರಟ್ ಮತ್ತು ಪೌಲ್ ಅಟೆನ್ವೆಲ್, ದಿ ಲೆಗಸಿ ಆಫ್ ಸೋಶಿಯಲ್ ಎಕ್ಲುಶನ್: ಎ ಕರೆಸ್ಪೊಂಡೆನ್ಸಿ ಸ್ಟಡಿ ಆಫ್ ಜಾಬ್ ಡಿಸ್ಕ್ರಿಮಿನೇಶನ್ ಇನ್ ಇಂಡಿಯಾಸ್ ಅರ್ಬನ್ ಪ್ರವೈಟ್ ಸೆಕ್ಟರ್, ಇನ್ ಸುಖದೇವ್ ಥೋರಟ್ ಆಂಡ್ ಕಥ್ರೀನ್ ಎಸ್ ನ್ಯೂಮೆನ್ (ಸಂ), ಬ್ಲೋಕ್ಡ್ ಬೈ ಕಾಸ್ಟ್–ಎಕಾನಮಿಕ್ ಡಿಸ್ಕ್ರಿಮಿನೇಶನ್ ಇನ್ ಮೋಡರ್ನ್ ಇಂಡಿಯಾ, ನ್ಯೂಡೆಲ್ಲಿ: ಆಕ್ಸ್‌ಫರ್ಡ್ ಯುನಿವರ್ಸಿಟಿ ಪ್ರೆಸ್, ೨೦೧೦, ಪು.೩೫–೫೧

೫೬. ವಿವರಗಳಿಗೆ ಈ ಕೆಳಗಿನ ಲೇಖನಗಳನ್ನು ನೋಡಬಹುದು. ಅಮಿತ್ ಥೋರಟ್, ಎಥ್ನಿಸಿಟಿ, ಕಾಸ್ಟ್ ಅಂಡ್ ರಿಲೀಜಿಯಸ್: ಇಂಪ್ಲಿಕೇಶನ್ ಫಾರ್ ಪವರ್ಟಿ ಔಟ್‌ಕಮ್ಸ್, ಎಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ, ೪೫ (೫೧), ಡಿಸೆಂಬರ್ ೨೦೧೦, ಪು.೪೭–೬೧, ಸುರೀಂದರ್ ಜೋದ್ಕಾ, ಗನಶ್ಯಾಮ್ ಶಾ, ಕಂಪೆರೀಟಿವ್ ಕಾಂಟೆಕ್ಸ್ಟ್ಸ ಆಫ್, ಡಿಸ್ಕ್ರಿಮಿನೇಶನ್: ಕಾಸ್ಟ್ ಅನ್‌ಟಚೆಬಿಲಿಟಿ ಇನ್ ಸೌತ್ ಏಶೀಯಾ, ಎಕಾನಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ, ೪೫ (೪೮), ನವೆಂಬರ್ ೨೦೧೦, ಪು.೯–೧೦೬

೫೭. ಎಂ. ಚಂದ್ರ ಪೂಜಾರಿ, ಸಮಾಜ ಸಂಶೋಧನೆ, ವಿದ್ಯಾರಣ್ಯ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ೨೦೦೫

■

ಸಂಶೋಧನೆ

೮

ಕನ್ನಡ ಸಂಶೋಧನೆಗಾಗಿ ರೂಪಿತವಾದ ಸಂಸ್ಥೆಗಳು ಮತ್ತು ಪತ್ರಿಕೆಗಳು*

ಡಾ. ಸಂಗಮೇಶ ಸವದತ್ತಿಮಠ

ಪೀಠಿಕೆ

ಕನ್ನಡನುಡಿಗೆ ಸುಮಾರು ೨೩೦೦ ವರ್ಷಗಳ ಇತಿಹಾಸವಿದೆ. ಕನ್ನಡಸಾಹಿತ್ಯಕ್ಕೆ ಸು.೧೨೦೦ ವರ್ಷಗಳ ಇತಿಹಾಸವಿದೆ.

ಕನ್ನಡ ಸಾಹಿತ್ಯಸಂಶೋಧನೆಗೆ ಸು. ೨೦೦ ವರ್ಷಗಳ ಇತಿಹಾಸವಿದೆ. ಕನ್ನಡದ ಮೊದಲ ಸಂಶೋಧಕ ನನಗೆ ತಿಳಿದ ಮಟ್ಟಿಗೆ ಶ್ರೀವಿಜಯ. ಕನ್ನಡ ನಾಡು ನುಡಿಗಳ ಬಗೆಗೆ ಅವನು ಹೇಳಿದ ಮಾತುಗಳು ಇಂದಿಗೂ ನಮ್ಮೆಲ್ಲರ ಮನದಲ್ಲಿ ರಿಂಗಣಗುಣಿಸುತ್ತಿವೆ. ನಂತರ ತಮಿಳು ನಾಡಿನ ಶಿವಶರಣರ ಚರಿತ್ರೆಗಳನ್ನು ಶೋಧಿಸಿ ಹೊಸ ಸಾಹಿತ್ಯ ಪ್ರಕಾರದ ರಗಳೆಗಳನ್ನು ರಚಿಸಿದ ಸಂಶೋಧಕ ಮಹಾಕವಿ ಹರಿಹರ. ತಮ್ಮ ಜ್ಞಾನದ ವಿಷಯ ಸಂಗ್ರಹದ ಪರಿಮಿತಿಯೊಳಗೆ, ಹುಡುಕಿಕೊಂಡು ಬಂದ ಹೊಸತನಗಳೆಲ್ಲವೂ ಅಂದರೆ, ವಸ್ತು, ಪಾತ್ರ, ಶೈಲಿ, ವ್ಯಾಖ್ಯಾನ, ವಿಶ್ಲೇಷಣೆ, ವಿವೇಚನೆ ಮಾಡುವ ಎಲ್ಲಾ ಬಗೆಯ ಶೋಧನಾ ಕ್ರಮಗಳನ್ನು ಸಂಶೋಧನ ವ್ಯಾಪ್ತಿಯಲ್ಲಿ ತಂದರೆ – ಶ್ರೀವಿಜಯ, ಪಂಪ, ಹರಿಹರ, ಕುಮಾರವ್ಯಾಸ, ರಾಘವಾಂಕ, ರತ್ನಾಕರವರ್ಣಿ, ಕುವೆಂಪು, ಬೇಂದ್ರೆಯವರಂತೆ ಎಲ್ಲ ಶ್ರೇಷ್ಠ ಕವಿವರ್ಯರೂ, ಶಬ್ದಮಣಿದರ್ಪಣದ ಕೇಶಿರಾಜ, ಸಮಾಜೋಧಾರ್ಮಿಕ ಚಳುವಳಿಗೆ ವಚನಗಳನ್ನು ಸೃಷ್ಟಿಸಿದ ವಚನಕಾರರು, ಹೀಗೆಯೆ, ಲಕ್ಷಣಕಾರರು, ಹಸ್ತಪ್ರತಿ ಶೋಧಕರು, ಸಂಸ್ಕೃತಿ, ಧರ್ಮ, ಸಮಾಜಚಿಂತಕರು, ಎಲ್ಲರೂ ಒಂದೊಂದು ಬಗೆಯಲ್ಲಿ, ಒಂದೊಂದು ಘಟ್ಟದಲ್ಲಿ ಸಂಶೋಧಕರೇ ಎನಿಸುತ್ತಾರೆ. ಆದರೆ ಇಲ್ಲಿ ನಾವು ಸಂಶೋಧನೆಯ ಶಿಸ್ತು ಎನ್ನುವ, ಮುಖ್ಯವಾಗಿ ಶಾಸ್ತ್ರೀಯ ಚೌಕಟ್ಟಿನ ಪರಿಧಿಯೊಳಗೆ ಪರಿಶೀಲಿಸಿದಾಗ ಸಂಶೋಧನೆಗೆ "ನಿರ್ದಿಷ್ಟತೆ", "ವಸ್ತುನಿಷ್ಠತೆ"ಗಳು ಮಾನದಂಡವಾಗಿ ನಿಲ್ಲುತ್ತವೆ. ಆದ್ದರಿಂದ ವೈಧಾನಿಕ ಶಿಸ್ತನ್ನು ಅಳವಡಿಸಿಕೊಂಡ ಸಂಶೋಧನೆ ಎಂಬುದು ಆಕರ ಸಾಮಗ್ರಿಗಳ ಮೂಲಕ

ಪುನಾರಚಿಸಿ ಅಥವಾ ಪುನಾಪರಿಶೀಲಿಸಿ ಇತಿವೃತ್ತಗಳೊಂದಿಗೆ ಅದರ ಅಂದಂದಿನ ಪ್ರಸ್ತುತತೆಯನ್ನು ನಿರ್ದಿಷ್ಟವಾಗಿ ವಸ್ತುನಿಷ್ಠವಾಗಿ ಸ್ಪಷ್ಟಪಡಿಸುವುದೇ ಆಗಿದೆ. ಈಗ ಇದಿಷ್ಟೇ ಸಂಶೋಧನೆಯ ವ್ಯಾಪ್ತಿಯಲ್ಲಿ ಒಳಗೊಳ್ಳದೆ ಮನುಷ್ಯನ ಅರಿವಿನ ಪರಿಧಿಯಲ್ಲಿ ಬರುವ ಎಲ್ಲ ಬೌದ್ಧಿಕ ಚಟುವಟಿಕೆಗಳೂ ಅಂದರೆ ಅಂತರ್‌ಶಿಸ್ತೀಯ ಎಲ್ಲ ತಿಳಿವಳಿಕೆಗಳೂ ಒಳಗೊಳ್ಳುತ್ತವೆ. ಅದಕ್ಕೆ ಕಾಲ, ಸ್ಥಳ, ಕ್ರಿಯೆ, ಭಾಷೆ, ಜನಾಂಗ ಎಂಬ ಯಾವ ಭೇದವೂ ಇಲ್ಲ. ಸಂಶೋಧನೆಯ ಮೂಲಕ ಕಂಡುಕೊಂಡದ್ದು ಅಂದಂದಿನ ಸತ್ಯ ಎಂದು ಸ್ಥೂಲವಾಗಿ ಹೇಳಬಹುದು. ಸಂಶೋಧನೆ ಬಹು ವಿಶಾಲವಾದ ಕ್ಷೇತ್ರ. ಅದು ಇಡೀ ಮಾನವಕುಲ, ವಿಶ್ವವ್ಯಾಪ್ತಿ ಉಳ್ಳದ್ದು. ಅಂತೆಯೆ ಅದರ ವಿಧಾನಗಳೂ ವೈವಿಧ್ಯಮಯ, ಕೆಲವು ಸಾಮಾನ್ಯ ಅಂಶಗಳನ್ನು ಬಿಟ್ಟರೆ, ಒಂದೊಂದು ಕ್ಷೇತ್ರಕ್ಕೂ ಅದರದೇ ವಿಧಾನಗಳಿವೆ.

ಈ ಹಿನ್ನೆಲೆಯಲ್ಲಿ ಕನ್ನಡ ಸಾಹಿತ್ಯ, ಸಂಸ್ಕೃತಿ ಕ್ಷೇತ್ರಗಳ ಇತಿಹಾಸ ಭೂಗೋಲ, ಇತಿವೃತ್ತ, ವಿಶ್ಲೇಷಣೆ, ಮನುಷ್ಯನ ಬದುಕಿನ ವಿವಿಧ ಆಯಾಮಗಳಿಗೆ ಸಂಬಂಧಿಸಿದಂತೆ ನಡೆದ ನಡೆಯುತ್ತಿರುವ ಸಂಶೋಧನ ಚಟುವಟಿಕೆಗಳಿಗೆ ಮಹತ್ವದ ಸಂಸ್ಥೆ ಮತ್ತು ಪತ್ರಿಕೆಗಳ ಬಗೆಗೆ ಈ ಲೇಖನದಲ್ಲಿ ಒಂದು ಸಿಂಹಾವಲೋಕನವನ್ನು ಮಾತ್ರ ಮಾಡಲು ಪ್ರಯತ್ನಿಸಿದೆ. ಲೇಖನದ ವ್ಯಾಪ್ತಿ ಸೀಮಿತವಾಗಿದ್ದು ಎಲ್ಲಾ ಸಂಶೋಧನ ಸಂಸ್ಥೆಗಳ ಮತ್ತು ಪತ್ರಿಕೆಗಳ ಪ್ರತಿಯೊಂದೂ ಸಾಧನೆಯ ಮಜಲುಗಳನ್ನು, ವಿವರಗಳನ್ನು ನೀಡಲು ಇಲ್ಲಿ ಸಾಧ್ಯವಾಗಿರುವುದಿಲ್ಲ. ಆಧುನಿಕೋತ್ತರ ಕಾಲದ ಕನ್ನಡದ ಸಂಶೋಧನ ಕ್ಷೇತ್ರದ ಆರಂಭದ ಹೆಜ್ಜೆಗುರುತುಗಳು ೧೮ನೇ ಶತಮಾನದ ಉತ್ತರಾರ್ಧದಲ್ಲಿ ದೊರೆಯುತ್ತವೆ. ಆ ಕಾಲದಲ್ಲಿ ಕರ್ನಲ್ ಮೆಕೆಂಜಿ ಮೈಸೂರು ಭಾಗದ ಪ್ರದೇಶವನ್ನು ಪರಿವೀಕ್ಷಿಸುವ ಕಾರ್ಯವನ್ನು ಕೈಕೊಂಡ. ಅವನು ಆ ಪ್ರದೇಶದಲ್ಲಿ ಇರುವ ಹಸ್ತಪ್ರತಿ, ಕೈಫಿಯತ್ತು, ಶಾಸನ, ನಾಣ್ಯ ಮುಂತಾದವನ್ನು ಸಂಗ್ರಹಿಸುವುದರ ಮೂಲಕ ಸಂಶೋಧನೆಗೆ ಆವಶ್ಯಕವೆನಿಸುವ ಆಕರ ಸಾಮಗ್ರಿಯನ್ನು ಸಂಗ್ರಹಿಸಿದ. ಇದು ಮಹತ್ವದ ಕಾರ್ಯವಾಯಿತು. ಹಾಗೆಯೆ, ಇತರ ಬ್ರಿಟಿಶ್ ಅಧಿಕಾರಿಗಳಾಗಿದ್ದ ಬುಕಾನನ್, ವಾಲ್ಟರ್, ಹೆನ್ರಿ, ಕಿಟೆಲ್, ರೈಸ್, ಮುಂತಾದವರೂ ಈ ಕಾರ್ಯ ಮಾಡಿದರು. ಕೆಲವರು ವ್ಯವಸ್ಥಿತವಾಗಿ ಮಾಡಿ ಗ್ರಂಥ ಸಂಪಾದನೆ, ನಿಘಂಟು ರಚನೆ, ಸಾಹಿತ್ಯ ಕೃತಿ ಪ್ರಕಟನೆ, ವ್ಯಾಕರಣ ರಚನೆ ಮುಂತಾದವುಗಳನ್ನೂ ಕೈಕೊಂಡರು.

ಆದರೆ ಎಲ್ಲವನ್ನೂ ವಿದೇಶಿ ಅಧಿಕಾರಿಗಳೇ ಮಾಡಿದರು ಅವರೇ ಕನ್ನಡ ಸಂಶೋಧನೆ ಕ್ಷೇತ್ರದ ಮೊದಲಿಗರು ಎಂದು ಹೇಳಲಾಗದು. ವಿದೇಶಿ ಅಧಿಕಾರಿಗಳು ಸ್ಥಳೀಯ ವಿದ್ವಾಂಸರ ಸಹಾಯದಿಂದ ತಮ್ಮ ಆಸಕ್ತಿ ಮತ್ತು ಕುತೂಹಲ ಕಾರಣವಾಗಿ ಸಂಶೋಧನೆಯನ್ನು ಹವ್ಯಾಸವನ್ನಾಗಿಸಿಕೊಂಡಿದ್ದರು. ಅಂಥವರ ಕಾರ್ಯ ಸ್ಮರಣೀಯವಾದರೂ ಅವರಿಗೆ ದೊರೆತ ಮೂಲ ಮಾಹಿತಿ ಮತ್ತು ಸಹಕಾರಕ್ಕಾಗಿ ಸ್ಥಳೀಯರು ತೆರೆಯ ಮರೆಯಲ್ಲಿದ್ದರೂ ಅವರಿಗಿಂತ ಹೆಚ್ಚು ಸ್ಮರಣೀಯರು. ಕನ್ನಡ ಭಾಷೆ, ಕನ್ನಡ ಸಂಸ್ಕೃತಿ, ಕನ್ನಡ ಸಾಹಿತ್ಯದ ಗಂಧವೇ ಇಲ್ಲದ ಪರದೇಶೀಯ ಅಧಿಕಾರಿಗಳು ಸ್ಥಳೀಯರಿಂದಲೇ ಎಲ್ಲವನ್ನೂ ಕಲಿತು ಬಾಚಿಕೊಂಡು ಅವರನ್ನು ಕೆಲವು ಸಲ ಸ್ಮರಿಸದೆ ತಮ್ಮ ಕೃತಿಗಳನ್ನು ಪ್ರಕಟಪಡಿಸಿದರು. ಆದರೆ ಕಿಟ್ಟೆಲ್ ಅವರು ಒಂದಿಬ್ಬರು ಸ್ಥಳೀಯರ ಹೆಸರುಗಳನ್ನು ನಮೂದಿಸಿದ್ದಾರೆ. ಹುಬ್ಬಳ್ಳಿಯ ವಸ್ತ್ರದ ಶಿವಲಿಂಗಯ್ಯ ಮತ್ತು ಮೈಸೂರಿನ ಎಂ.ಸಿ.ಶ್ರೀನಿವಾಸ ಆಚಾರಿ ಅವರ ಸ್ಮರಣೀಯ ಕಾರ್ಯವನ್ನು ಕಿಟ್ಟೆಲ್ ನೆನೆಸಿದ್ದಾರೆ. ಸುಮಾರು ೨೦೦೦ ಪುಟಗಳಷ್ಟು ಮಾಹಿತಿ ಇವರಿಂದ ಲಭಿಸಿದ್ದಾಗಿ ಹೇಳಿಕೊಂಡಿದ್ದಾರೆ. ಆದ್ದರಿಂದ ಕನ್ನಡ ಸಂಶೋಧನೆಯ ಕಾರ್ಯವನ್ನು ಒಂದರ್ಥದಲ್ಲಿ ಬ್ರಿಟಿಶ್ ಅಧಿಕಾರಿಗಳ ಹೆಸರಿನಲ್ಲಿ ಕನ್ನಡ ಪಂಡಿತರೇ ನಡೆಸಿರಬಹುದಲ್ಲವೆ?

ಹಾಗಾದರೆ ಬ್ರಿಟಿಶ್ ಅಧಿಕಾರಿಗಳು ಏನು ಮಾಡಿದರು? ಗೋದಿಯನ್ನು ಬೆಳೆಯುವವನಿಗೆ ಬ್ರೆಡ್ ಮಾಡುವುದು ಗೊತ್ತಿರಬೇಕಲ್ಲ? ನಮ್ಮ ಸ್ಥಳೀಯರು ವಿದೇಶಿಯರಿಗೆ ಗೋದಿಯನ್ನು ತೆಗೆದು ಕೊಟ್ಟರು ಅವರು ಅದನ್ನು ಬ್ರೆಡ್ ಮಾಡಿ ತೋರಿಸಿದರು. ಬ್ರೆಡ್ ಮಾಡಿದವ ಬೆಳಕಿಗೆ ಬಂದ ಗೋದಿ ಬೆಳೆದವ ನೇಪಥ್ಯಕ್ಕೆ ಸೇರಿದ.

೧೮ನೇ ಶತಮಾನದ ಉತ್ತರಾರ್ಧದಲ್ಲಿ ಕರ್ನಲ್ ಮೆಕೆಂಜಿಯೇ ಆಧುನಿಕ ಕನ್ನಡ ಮೊದಲ ಸಂಶೋಧಕ ಎಂದು ಹೇಳಲಾಗುತ್ತಿದೆ. ಆದರೆ ನಮ್ಮ ಸ್ಥಳೀಯ ಪಂಡಿತರಿಂದ ಅದೆಷ್ಟೋ ಸಂಶೋಧನ ಕೆಲಸ ನಡೆದಿದ್ದರೂ ಬೆಳಕಿಗೆ ಬಂದಿಲ್ಲ. ಇಲ್ಲಿ ನಮ್ಮ ಊರು ಮುರಗೋಡದ್ದೇ ಒಂದು ಉದಾಹರಣೆಯನ್ನು ನೀಡಬಯಸುತ್ತೇನೆ. ಕ್ರಿ.ಶ.೧೮೪೫ರ ಸುಮಾರಿನಲ್ಲಿ ನಮ್ಮೂರಲ್ಲಿ ವಾಮನರಾವ್ ನಾರಾಯಣರಾವ್ ಯರ್ಜರವಿ ಎಂಬ ಪಂಡಿತರಿದ್ದರು. ಅವರು ಒಂದು ಗ್ರಾಮೀಣ ವಿಶ್ವಕೋಶವನ್ನು (ಅಪ್ರಕಟಿತ) ಬರೆದಿದ್ದರು. ಊರಿನ ಪ್ರತಿಯೊಂದು ವಿಷಯವನ್ನೂ ಅವರು ನಕ್ಷೆ ಸಹಿತ ದಾಖಲಿಸಿದ್ದರು. ಊರಿನ ಜನಸಂಖ್ಯೆ ಗಂಡು ಹೆಣ್ಣು, ಮಕ್ಕಳುಮರಿ, ದನಕರು, ಮನೆಗಳ ಗಣತಿ, ಚೆಕಬಂದಿ, ಪ್ರತಿಯೊಂದು ಮನೆಯ ಅಳತೆ, ವಿಸ್ತಾರ, ದನ, ಧಾನ್ಯ, ವ್ಯವಹಾರ ಮಾಹಿತಿಗಳು, ದಾವೆ, ಖಟ್ಲೆ, ಜಜ್ಜಮೆಂಟುಗಳು, ವಂಶಾವಳಿ ಜನರ ಸುಖ ದುಃಖ, ಜನನ ಮರಣ ದಾಖಲಾತಿಗಳು, ಜಾತ್ರೆ, ಉತ್ಸವ, ಹಬ್ಬಹುಣ್ಣಿವೆ, ಬೈಠಕ, ಕಥೆ, ಕೀರ್ತನ, ಆಟಗಳು ಹೀಗೆಯೇ ಬಹುಶಃ ಅದರಲ್ಲಿ ಇಲ್ಲದ ವಿಷಯಗಳೇ ಕ್ವಚಿತ್. ವಾಮನರಾವ್ ಅವರಿಗೆ ಬಾಪೂ ಆನಂದರಾವ್ ಮನಗೂಳಿ ಎಂಬ ಸ್ನೇಹಿತರು ಈ ಕೆಲಸದಲ್ಲಿ ಸಹಾಯಕರಾಗಿದ್ದರೆಂದು ಅವರು ತಮ್ಮ ವಿಶ್ವಕೋಶದಲ್ಲಿ ದಾಖಲಿಸಿದ್ದಾರೆ. ೧೭-೩-೧೯೦೧ ರಂದು ಮುರಗೋಡದ ಜನಸಂಖ್ಯೆ ಗಂಡು ೨೭೯೪, ಹೆಣ್ಣು ೨೮೬೧ ಒಟ್ಟು ೫೬೫೫, ಅದೇ ದಿನ ಹಿಂದೂಸ್ಥಾನದ ಜನಸಂಖ್ಯೆ ೨೯ ಕೋಟಿ, ೪೨ ಲಕ್ಷ ೩೬ ಸಾವಿರ ಎಂದು ದಾಖಲಿಸಿದ್ದಾರೆ. ಆಗಿನ ಹಿಂದೂಸ್ಥಾನ ಎಂದರೆ ಈಗಿನ ಬ್ರಹ್ಮದೇಶ, ನೇಪಾಳ, ಪಾಕಿಸ್ತಾನ, ಬಂಗ್ಲಾದೇಶ ಎಲ್ಲವೂ ಒಳಗೊಂಡ ಬೃಹತ್ ಹಿಂದೂಸ್ಥಾನ. ಅಂದರೆ ನಮ್ಮ ದೇಶದ ಹಳ್ಳಿಗಳಲ್ಲೂ ಸಂಶೋಧಕರು ನೆಲೆಸಿದ್ದರು, ಇಂತಹ ಮಾಹಿತಿಗಳನ್ನು ಎಷ್ಟೋ ಸಲ ಕೋರ್ಟ್ ಕೂಡ ಮನ್ನಿಸಿ ತೀರ್ಪು ಕೊಡುತ್ತಿತ್ತಂತೆ. ಅಷ್ಟು ನಿಖರ ಮಾಹಿತಿ ಸಂಗ್ರಹ ವರ್ಗೀಕರಣ ಇರುತ್ತಿತ್ತು. ನಮ್ಮದೇಶದಲ್ಲಿ ಗ್ರಾಮೀಣ ಪ್ರತಿಭೆಗಳನ್ನು ಇಂದಿಗೂ ಸರಿಯಾಗಿ ಗುರುತಿಸುವ ವ್ಯವಸ್ಥೆ ಇಲ್ಲ. ವಿದೇಶೀಯರ ಆಗಮನವಾದ ಮೇಲೆ ಸ್ಥಳೀಯ ಸಂಶೋಧಕರಿಗೆ ಮಹತ್ವ ಕಡಿಮೆಯಾಗಿದ್ದಲ್ಲದೆ, ಜಾಣ ವಿದೇಶಿ ಅಧಿಕಾರಿಗಳು ತಮ್ಮ ಅಧಿಕಾರ ಮತ್ತು ಹಣದ ಬಲದಿಂದ ಅವರ ಮಾಹಿತಿಗಳನ್ನು ತಮ್ಮ ವಶಮಾಡಿಕೊಂಡಿದ್ದರಲ್ಲಿ ಸಂಶಯವಿಲ್ಲ ಎನಿಸುತ್ತದೆ. ಸೂಟು ಬೂಟು ಹ್ಯಾಟಿನ ಸಾಹೇಬರಿಗೆ ನಮ್ಮ ಜನ ಹಲ್ಲುಕಿರಿದರು. ಏನೆಲ್ಲವನ್ನೂ ಧಾರೆ ಎರೆದರು. ಅವರು ನೀಡಿದ ಸಾಮಗ್ರಿಯನ್ನು ಸಾಹೇಬರು ಕುತೂಹಲದಿಂದ ಅಧ್ಯಯನ ಮಾಡಿದರು, ಪ್ರಕಟಿಸಿದರು. ಅವರ ಹೆಸರು ಉಳಿಯಿತು. ಮೂಲ ಸಂಶೋಧನೆ ಮಾಡಿದವರ ಹೆಸರು ಅಳಿಯಿತು.

ಕನ್ನಡ ಸಂಶೋಧನ ಸಂಸ್ಥೆಗಳು

Oriental Research Institute, ಮೈಸೂರು

ಬ್ರಿಟಿಶರ ಆಗಮನದ ನಂತರ ದಕ್ಷಿಣಭಾರತದಲ್ಲಿ Oriental Studies ಎಂಬ ಸಂಸ್ಥೆ ಹುಟ್ಟಿಕೊಂಡ ಕಾಲವದು. ೧೯೦೭ರಲ್ಲಿ ಲಂಡನ್‌ನಲ್ಲಿ Oriental Studies ಆರಂಭಗೊಂಡಿತ್ತು. ೧೯೧೧ರಲ್ಲಿ ಸಿಮ್ಲಾದಲ್ಲಿ ಒಂದು ಸಂಶೋಧಕರ ಸಮ್ಮೇಳನ

ನಡೆಯಿತು. ಅದರಲ್ಲಿ ಒಂದು ಗೊತ್ತುವಳಿಯನ್ನು ಪಾಸುಮಾಡಿ ಹಿಂದೂಸ್ಥಾನದಲ್ಲೂ ಓರಿಎಂಟಲ್ ಅಧ್ಯಯನ ಸಾಂಸ್ಥಿಕ ಮಟ್ಟದಲ್ಲಿ ನಡೆಯಬೇಕೆಂದು ಒತ್ತಾಯಿಸಿತ್ತು. ಅದನ್ನು ಪರಿಗಣಿಸಿ ಬ್ರಿಟಿಶ್ ಸರಕಾರ ಒಂದು ಸಮಿತಿಯನ್ನು ನೇಮಿಸಿ ಸಂಶೋಧನೆ ಹೇಗೆ ಎಂತು ನಡೆಯಬೇಕು ಎಂದುದರ ಬಗ್ಗೆ ಮಾರ್ಗದರ್ಶಿ ಸೂತ್ರಗಳನ್ನು ಶಿಫಾರಸು ಮಾಡಲು ಸೂಚಿಸಿತು. ಅದು ನೀಡಿದ ವರದಿಯನ್ನು ಆಧರಿಸಿ ೧೯೧೩ರ ಫೆಬ್ರುವರಿ ತಿಂಗಳ ೨೨ರಂದು ಗೆಜೆಟ್ ನೋಟಿಫಿಕೇಶನ್ ಹೊರಡಿಸಿ ೧೯೧೩ ಎಪ್ರಿಲ್ ೧ರಿಂದ ಅಧಿಕೃತವಾಗಿ ಜಾರಿಗೊಳಿಸಿತು. ಇದರಿಂದಾಗಿ ಮೈಸೂರಿನಲ್ಲಿ ೧೮೯೧ ರಲ್ಲಿಯೇ ಅಸ್ತಿತ್ವದಲ್ಲಿದ್ದ ಚಾಮರಾಜ ಒಡೆಯರ ಕಾಲದಲ್ಲಿದ್ದ ಓರಿಎಂಟಲ್ ಲೈಬ್ರರಿ ಹೊಸ ಕಾನೂನು ಜಾರಿಗೆ ಬಂದ ಮೇಲೆ Oriental Research Institute (ಇನ್ನು ಮೇಲೆ O R I) ಎಂದು ಪರಿವರ್ತನೆಗೊಂಡು ನಂತರ ಮೈಸೂರು ವಿಶ್ವವಿದ್ಯಾಲಯಕ್ಕೆ ಸೇರಿತು. ಆಗ ೩೩,೦೦೦ ಹಸ್ತಪ್ರತಿಗಳನ್ನು ಅದು ಹೊಂದಿರುವ ಬೃಹತ್ ಸಂಸ್ಥೆ. ಹೀಗೆ ಮೈಸೂರಿನಲ್ಲಿ ಕನ್ನಡ ಸಂಶೋಧನೆಗೆ ಓರಿಎಂಟಲ್ ಅಧ್ಯಯನ ಪ್ರೇರಣೆ ನೀಡಿತು. ಇದರಿಂದಾಗಿ ಮೈಸೂರಿನಲ್ಲಿನ ಅದರಲ್ಲೂ ಮೈಸೂರು ವಿಶ್ವವಿದ್ಯಾಲಯ, ಓರಿಎಂಟಲ್ ಇನ್‌ಸ್ಟಿಟೂಟ್‌ಗಳ ನಿಕಟ ಸಂಪರ್ಕದಿಂದಾಗಿ ಬ್ರಿಟಿಶ್ ಅಧಿಕಾರಿಗಳೂ ಮೈಸೂರಿನ ಕಡೆಗೆ ಒಲವು ಹೊಂದಿದವರಾಗಿದ್ದರಿಂದ ಕನ್ನಡದ ಆರಂಭಿಕ ಸಂಶೋಧನ ಚಟುವಟಿಕೆಗಳು ಮೈಸೂರು ಕೇಂದ್ರಿತವಾಗಿ ನಡೆದವು. ಓರಿಎಂಟಲ್ ಸಂಸ್ಥೆ ಕರ್ನಾಟಕದಲ್ಲಿ ಸಂಶೋಧನೆಗೆಂದೇ ರೂಪಿತವಾದ ಮೊದಲ ಸಂಸ್ಥೆಯಾಯಿತು. ಆದರೆ ಇಲ್ಲಿ ಮೊದಲನೆಯ ಪ್ರಾಶಸ್ತ್ಯ ಸಂಸ್ಕೃತಕ್ಕೆ.

ಕನ್ನಡ ಸಂಶೋಧನೆಯ ಆರಂಭ ಘಟ್ಟದ ಹೆಚ್ಚಿನ ಸಂಶೋಧನ ಚಟುವಟಿಕೆಗಳು ಮೈಸೂರುಭಾಗದಲ್ಲಿ ಕರ್ನಲ್ ಮೆಕೆಂಜಿ, ಬಿ.ಎಲ್.ರೈಸ್, ರೆವೆರೆಂಡ ಕಿಟ್ಟೆಲ್, ವೆಗ್ಲೆ, ಆರ್.ನರಸಿಂಹಾಚಾರ್, ಟಿ.ಎಸ್‌ವೆಂಕಣ್ಣಯ್ಯ, ಕೆ.ವೆಂಕಟರಾಮಪ್ಪ, ಎಂ.ವ್ಹಿ.ಸೀತಾರಾಮಯ್ಯ, ಡಿ.ಎಲ್.ನರಸಿಂಹಾಚಾರ್, ಎ.ಆರ್.ಕೃಷ್ಣಶಾಸ್ತ್ರಿ, ತೀ.ನಂ.ಶ್ರೀ. ಮುಂತಾದ ವಿದ್ವಾಂಸರಿಂದ ನಡೆದುದು ಗಮನಾರ್ಹವಾಗಿದೆ. ಈ ಸಂಸ್ಥೆ ಬಹಳಷ್ಟು ಈ ಭಾಗದ ಸಂಶೋಧಕರ ಹಸಿವನ್ನು ತಣಿಸಿದ್ದರಲ್ಲಿ ಸಾಕಷ್ಟು ಅನುಕೂಲ ಮಾಡಿಕೊಟ್ಟದ್ದರಲ್ಲಿ ಸಂದೇಹವಿಲ್ಲ. ಸಂಶೋಧನೆಗೆ ಮುಖ್ಯವಾಗಿ ಬೇಕಾದದ್ದು ಸುಸಜ್ಜಿತ ಗ್ರಂಥಾಲಯ, ಅದರಲ್ಲಿ ಹಸ್ತಪ್ರತಿಗಳ, ಗ್ರಂಥಗಳ ವಿಪುಲ ಲಭ್ಯತೆ, ಮತ್ತು ಸಂಶೋಧಕರಿಗೆ ಮೂಲಸೌಕರ್ಯಗಳ ಅನುಕೂಲತೆ. ಇವೆಲ್ಲವೂ ಓರಿಎಂಟಲ್ ಸಂಶೋಧನ ಸಂಸ್ಥೆಯಲ್ಲಿ ದೊರೆಯಲಾರಂಭಿಸಿದ್ದರಿಂದ ಕನ್ನಡ ಸಂಶೋಧನೆ ಇಲ್ಲಿ ಕೇಂದ್ರೀಕೃತವಾಯಿತು. ವಿದೇಶಿ ಮತ್ತು ಸ್ವದೇಶಿ ವಿದ್ವಾಂಸರ ತಂಡವೇ ಈ ಕೇಂದ್ರವನ್ನು ಬಳಸಿಕೊಂಡು ಸಂಶೋಧನೆಯ ವೇಗ ತೀವ್ರವಾಗುವಂತೆ ಮಾಡಿತು. ರಾಜಕೀಯ ಗೊಂದಲಗಳ ಮಧ್ಯೆಯೇ ಅಪ್ಪಟ ಶೈಕ್ಷಣಿಕ (Academic) ವಲಯವೊಂದು ಚೆನ್ನಾಗಿ ಮೂಡಿಬಂದದ್ದು ಈ ಸಂಸ್ಥೆಯ ಹೆಗ್ಗಳಿಕೆ ಎನ್ನಬೇಕು. ಇದಕ್ಕೆ ಮುಖ್ಯಕಾರಣ ಈ ಕೇಂದ್ರವನ್ನು ಬಳಸಿಕೊಂಡು ಸಂಶೋಧನ ಕಾರ್ಯ ಕೈಕೊಂಡವರು ಪ್ರಕಾಂಡ ಸಂಶೋಧಕರಾಗಿದ್ದರು ಅಲ್ಲದೆ ಅವರಿಗೆ ಈ ಕ್ಷೇತ್ರದಲ್ಲಿ ಕೆಲಸಮಾಡುವ ತೀವ್ರ ತುಡಿತವಿದ್ದಿತು.

ಮೈಸೂರಿನ O R I ಪ್ರಾಯಃ ಕರ್ನಾಟಕದಲ್ಲಿ ಮೊದಲ ಅಧಿಕೃತ ಸಂಶೋಧನ ಸಂಸ್ಥೆ. ಇಲ್ಲಿ ಒಂದು ಸ್ವಾರಸ್ಯಕರ ಅಂಶವೆಂದರೆ ಪ್ರಾಚೀನ ಮತ್ತು ಮಧ್ಯಕಾಲೀನ ಕನ್ನಡ ಸಾಹಿತ್ಯವೆಲ್ಲ ಸೃಷ್ಟಿ ಆದದ್ದು ತುಂಗಭದ್ರೆಯ ಉತ್ತರಭಾಗದಲ್ಲಿ, ಅಂದರೆ ಉತ್ತರಕರ್ನಾಟಕದಲ್ಲಿ. ಅವುಗಳ ಬಗೆಗೆ ಸಂಶೋಧನೆ ನಡೆದದ್ದು ಮೈಸೂರುಭಾಗದಲ್ಲಿ. ಸದರ್ನಮರಾಠಾಕರ್ನಾಟಕ,

ನಿಜಾಮಕರ್ನಾಟಕ ಎಂದು ಹೆಸರಿನಲ್ಲಿಯೇ ಉತ್ತರಕರ್ನಾಟಕವನ್ನು ಮೂಲ ಕರ್ನಾಟಕದಿಂದ ಬೇರ್ಪಡಿಸಿದ ಕ್ಷಣದಿಂದಲೇ ಉಳಿದ ಕ್ಷೇತ್ರಗಳಂತೆ ಸಂಶೋಧನೆಯ ಕ್ಷೇತ್ರಕ್ಕೂ ಅನ್ಯಾಯದ ಅಂಟು ತಗಲಿಕೊಂಡುಬಿಟ್ಟಿತು. ಸಂಶೋಧನೆ ಸಾಂಸ್ಥಿಕವಾದಾಗ ಸಹಜವಾಗಿ ಆ ಸಂಸ್ಥೆಯ ಸಮೀಪವಿದ್ದವರಿಗೆ ಹೆಚ್ಚು ಅನುಕೂಲ. ಅದಕ್ಕೆ ಕಾರಣಗಳು ಹಲವು. ಮೈಸೂರು ಅರಸರ ರಾಜಧಾನಿಯಾಗಿ, ಸಾಂಸ್ಕೃತಿಕವಾಗಿ, ಶೈಕ್ಷಣಿಕವಾಗಿ ಸಮೃದ್ಧಿಯನ್ನು ಹೊಂದಿದ ಸ್ಥಳ. ಇದರಿಂದಾಗಿ ಸಹಜವಾಗಿ ಅಲ್ಲಿನ ವಾತಾವರಣ ಸಂಶೋಧನೆಗೆ ಹೇಳಿಮಾಡಿಸಿದಂತೆ ಇತ್ತು. ಈ ಕಾರಣವಾಗಿ ಮುಂದಿನ ದಿನಮಾನಗಳಲ್ಲಿಯೂ ಅದು ಸಂಶೋಧನ ಚಟುವಟಿಕೆಗಳಿಗೆ ಕೇಂದ್ರಬಿಂದುವಾಯಿತು.

ಮೈಸೂರಿನಂತೆ ಅನುಕೂಲತೆಗಳಿಲ್ಲದಿದ್ದರೂ ಗಂಡುಮೆಟ್ಟಿನ ಉತ್ತರಕರ್ನಾಟಕದಲ್ಲಿ ಕೆ.ಬಿ.ಪಾಠಕ, ಕೆ.ಜಿ.ಕುಂದಣಗಾರ, ಕಪಟರಾಳ ಕೃಷ್ಣರಾಯ, ಶಂ.ಬಾ.ಜೋಶಿ, ನಾ.ಶ್ರೀ.ರಾಜಪುರೋಹಿತ, ರಂ.ಶ್ರೀ.ಮುಗಳಿ, ಫ.ಗು.ಹಳಕಟ್ಟಿ, ಶಿ.ಶಿ.ಬಸವನಾಳ, ಉತ್ತಂಗಿ ಚೆನ್ನಪ್ಪ, ಶಿ.ಚೆ.ನಂದಿಮಠ ಮುಂತಾದವರು ತಮ್ಮ ಸ್ವಂತ ಪರಿಶ್ರಮ ವಿದ್ವತ್ತಿನಿಂದಾಗಿ ಕನ್ನಡ ಸಂಶೋಧನ ಕ್ಷೇತ್ರಕ್ಕೆ ಅಮೌಲ್ಯವಾದ ಕೊಡುಗೆಯನ್ನು ನೀಡಿದರು. ಹಾಗೆಯೆ ದಕ್ಷಿಣ ಕನ್ನಡ ಪ್ರದೇಶದಲ್ಲೂ ಸಂಶೋಧನೆಗೆ ಹೆಚ್ಚಿನ ಅನುಕೂಲತೆಗಳು ಇರಲಿಲ್ಲ. ಅಲ್ಲಿ ಮುಳಿಯ ತಿಮ್ಮಪ್ಪಯ್ಯ, ಎ.ಶಾಂತಿರಾಜ ಶಾಸ್ತ್ರಿ, ಮಂಜೇಶ್ವರ ಗೋವಿಂದ ಪೈ, ಸೇಡಿಯಾಪು ಕೃಷ್ಣಭಟ್, ಮರಿಯಪ್ಪ ಭಟ್ ಮುಂತಾದ ವಿದ್ವಾಂಸರು ಈ ಕ್ಷೇತ್ರದಲ್ಲಿ ಗಣನೀಯ ಕಾಣಿಕೆಯನ್ನು ಸಲ್ಲಿಸಿದ್ದಾರೆ.

ಆರಂಭ ಕಾಲದಲ್ಲಿ ಸಂಶೋಧನೆಯಲ್ಲಿ ಗಟ್ಟಿತನ ಮತ್ತು ಪ್ರಾಮಾಣಿಕತೆಗಳು ಇದ್ದವಾದರೂ ವೈಧಾನಿಕ ಶಿಸ್ತು ಇರಲಿಲ್ಲ. ಸಂಶೋಧಕರು ಕುತೂಹಲಕ್ಕಾಗಿ ಮಾಡಿದ ಬಿಡಿ ಸಂಶೋಧನೆಗಳೇ ಹೆಚ್ಚು. ಸಾಂಸ್ಥಿಕ ಸಂಶೋಧನೆ ಸಮೂಹ ಸಂಶೋಧನೆಗಳ ಕಲ್ಪನೆ ವಿದೇಶಗಳಲ್ಲಿ ಅಚ್ಚುಕಟ್ಟಾಗಿದೆ. ಆದರೆ ಭಾರತದಲ್ಲಿ ಈಗಲೂ ಕೂಡ ಈ ನಿಟ್ಟಿನಲ್ಲಿ ಹೆಚ್ಚು ವ್ಯವಸ್ಥಿತ ಸಾಂಸ್ಥಿಕ ಸಂಶೋಧನೆ ಬಹಳಮಟ್ಟಿಗೆ ಕ್ವಚಿತ್. O.R.I. ಕನ್ನಡ ಸಂಶೋಧನೆಗೆ ಮಾತ್ರ ಮೀಸಲಾದ ಸಂಸ್ಥೆ ಅಲ್ಲ. ಸಂಸ್ಕೃತ, ಪ್ರಾಕೃತ ಮುಂತಾದ ಭಾಷೆಗಳ ಪ್ರಾಚೀನ ಕೃತಿಗಳ ಸಂಶೋಧನೆಗಳೂ ಅಲ್ಲಿ ನಡೆಯುತ್ತ ಬಂದಿವೆ. ಶಾಸನಗಳ ಮತ್ತು ಪ್ರಾಚೀನ ಹಸ್ತಪ್ರತಿಗಳ ಬಹುದೊಡ್ಡ ಸಂಗ್ರಹ ಇಲ್ಲಿ ಇರುವುದರಿಂದ ಭಾರತೀಯ ಸಾಂಸ್ಕೃತಿಕ ಸಾಹಿತ್ಯಿಕ ಅಧ್ಯಯನ ಮತ್ತು ಸಂಶೋಧನೆಗಳಿಗೆ ಬಹು ದೊಡ್ಡ ಅನುಕೂಲತೆಯಾಗಿದೆ. ವ್ಯಾಕರಣ, ಛಂದಸ್ಸು, ಅಲಂಕಾರಶಾಸ್ತ್ರ, ಶಾಸನಶಾಸ್ತ್ರ, ಕವಿಕಾವ್ಯ ಚರಿತ್ರೆ, ಹೊಸಹೊಸ ಕೃತಿಶೋಧನೆ ಹೀಗೆ ಕನ್ನಡದ ಹಲವು ನಿಟ್ಟಿನ ಸಂಶೋಧನೆಗಳಗೆ ಪೂರಕವಾಗಬಹುದಾದ ಸಾಮಗ್ರಿ ಇಲ್ಲಿ ದೊರೆಯಲಾರಂಭಿಸಿದ್ದರಿಂದ ಕನ್ನಡ ಸಂಶೋಧನೆಗೆ ಅನುಕೂಲವಾಗಲೆಂದು ೧೯೬೭ರಲ್ಲಿ ಇಲ್ಲಿದ್ದ ಎಲ್ಲಾ ಕನ್ನಡ ಹಸ್ತಪ್ರತಿಗಳನ್ನು ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಗೆ ಒಪ್ಪಿಸಲಾಗಿದೆ. ಇದರಿಂದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯು ಹಸ್ತಪ್ರತಿ ವಿಭಾಗವನ್ನು ಆರಂಭಿಸಿ ಕನ್ನಡ ಸಂಬಂಧಿಸಿದ ಚಟುವಟಿಕೆಗಳು ಇಲ್ಲಿ ಹೆಚ್ಚು ಕಂಡುಬರುತ್ತವೆ. ಆರ್. ನರಸಿಂಹಾಚಾರ್ಯರು ಮೂರು ಬೃಹತ್ ಸಂಪುಟಗಳಲ್ಲಿ ಕವಿಚರಿತೆಯನ್ನು ಸುಮಾರು ಮೂರುದಶಕಗಳ ಕಾಲ ಇಲ್ಲಿಂದಲೇ ಅಧ್ಯಯನ ಮಾಡಿ ಪ್ರಕಟಿಸಿದ್ದನ್ನು ಇಲ್ಲಿ ಸ್ಮರಿಸಬಹುದು.

ಕನ್ನಡ ಸಾಹಿತ್ಯ ಸಂಶೋಧನೆಯ ಆರಂಭ ಕಾಲದಲ್ಲಿ ಅಂದರೆ ಮೊದಲ ಘಟ್ಟದಲ್ಲಿ ಹೆಚ್ಚಾಗಿ ಸಾಹಿತ್ಯ ಚರಿತ್ರೆಯನ್ನು ಕಟ್ಟಿಕೊಡಲು ಬೇಕಾಗುವ ಸಾಮಗ್ರಿಯನ್ನು ಪತ್ತೆಹಚ್ಚುವುದೇ

ಕನ್ನಡ ಭಾಷೆಗೆ ಶಾಸ್ತ್ರೀಯಭಾಷಾ ಮನ್ನಣೆ ದೊರೆತು ಕನ್ನಡ ಭಾಷಾಧ್ಯಯನಕ್ಕೆ ಹೆಚ್ಚಿನ ಪ್ರಾಶಸ್ತ್ಯ ದೊರೆಯಿತು. ಕರ್ನಾಟಕ ಸರ್ಕಾರ ರಾಜ್ಯದ ಎಲ್ಲ ವಿಶ್ವವಿದ್ಯಾಲಯಗಳಿಗೂ ಉದಾರ ಧನಸಹಾಯ ನೀಡಿ ಕನ್ನಡ ಭಾಷೆಗೆ ಸಂಬಂಧಿಸಿದ ಸಂಶೋಧನ ಯೋಜನೆಗಳನ್ನು ಹಾಕಿಕೊಂಡು ಪೂರ್ಣಗೊಳಿಸಲು ಸೂಚಿಸಿತು. ಶೋಚನೀಯ ಸಂಗತಿಯೆಂದರೆ ಕನ್ನಡ ವಿಶ್ವವಿದ್ಯಾಲಯವನ್ನು ಹೊರತುಪಡಿಸಿ ಬಹುತೇಕ ವಿಶ್ವವಿದ್ಯಾಲಯಗಳು ಗಮನಾರ್ಹವೆನಿಸುವ ಯಾವುದೇ ಯೋಜನೆಗಳನ್ನು ಭಾಷೆಗೆ ಸಂಬಂಧಿಸಿ ರೂಪಿಸಿಕೊಳ್ಳಲಿಲ್ಲ. ರೂಪಿಸಿಕೊಂಡ ಕೆಲವು ಯೋಜನೆಗಳು ನೇರವಾಗಿ ಭಾಷೆಗೆ ಸಂಬಂಧಿಸದೆ ಸಾಂಪ್ರದಾಯಿಕ ಸಾಹಿತ್ಯ, ಸಂಸ್ಕೃತಿಗಳಿಗೆ ಸೀಮಿತವಾಗಿದ್ದವು. ಉದಾಹರಣೆಗೆ ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ವಿಭಾಗವು ಸಂಸ್ಕೃತಿಗೆ ಸಂಬಂಧಿಸಿದ ಮಠಮಾನ್ಯ, ಗುಡಿಗುಂಡಾರ, ಸ್ವರವಚನಹಾಡುಗಾರರ ಮನೆಮಾರು ಮುಂತಾದವುಗಳ ಪ್ರಾಥಮಿಕ ಮಾಹಿತಿ ಸಂಗ್ರಹ ಮಾಡಿ ಪುಸ್ತಕ ಪ್ರಕಟಿಸಿ ಕೋಟಿಗಟ್ಟಲೆ ಹಣ ವೆಚ್ಚಮಾಡಿತು. ಕನ್ನಡ ಭಾಷೆಗೆ ಏನೇನೂ ಸಂಬಂಧವಿಲ್ಲದ ಕೇವಲ ಸಾಂಸ್ಕೃತಿಕ ದಾಖಲೀಕರಣಕ್ಕಾಗಿ ಶಾಸ್ತ್ರೀಯ ಭಾಷೆಯ ಅನುದಾನದಲ್ಲಿ ಇಷ್ಟೊಂದು ವೆಚ್ಚ ಮಾಡಿದ್ದು ನಿಜಕ್ಕೂ ಕನ್ನಡಭಾಷೆ ಮತ್ತು ಸಾಹಿತ್ಯಕ್ಕೆ ಮಾಡಿದ ಘೋರ ಅನ್ಯಾಯವೇ ಸರಿ. ಉಳಿದ ವಿಶ್ವವಿದ್ಯಾಲಯಗಳಲ್ಲಿಯೂ ಇದೇ ಹಾಡು. ಅಲ್ಲಿಯೂ ಎದ್ದುಕಾಣುವ ಯಾವ ಯೋಜನೆಗಳೂ ಭಾಷೆಗೆ ಸಂಬಂಧಿಸಿದಂತೆ ಜರುಗಲಿಲ್ಲ. ಮುಕ್ತ ವಿಶ್ವವಿದ್ಯಾಲಯವಂತೂ ಸಾಮಾನ್ಯ ಪುಸ್ತಕ ಪ್ರಕಟನೆಗೇ ಕೋಟಿಗಟ್ಟಲೆ ಹಣವನ್ನು ಹಾಳುಮಾಡಿದೆ. ಸಾಂಸ್ಥಿಕ ಸಂಶೋಧನೆಗಾಗಿ ಸರ್ಕಾರ ಧಾರಾಳವಾಗಿ ಧನಸಹಾಯ ನೀಡಿದ್ದರೂ ಅದನ್ನು ಪ್ರಾಧ್ಯಾಪಕರು ಹಂಚಿಕೊಂಡು ವೈಯಕ್ತಿಕ ಸಂಶೋಧನ ಯೋಜನೆಯಾಗಿ ಮಾಡಿಕೊಂಡು ಶಾಸ್ತ್ರೀಯ ಭಾಷಾ ಅನುದಾನದ ಮೂಲ ಉದ್ದೇಶವನ್ನೇ ಹಾಳುಗೆಡಹಿದರು. ವಿಶ್ವವಿದ್ಯಾಲಯಗಳಲ್ಲಿ ಕನ್ನಡ ವಿಶ್ವವಿದ್ಯಾಲಯ ಮಾತ್ರ ಕನ್ನಡಕ್ಕೆ ನ್ಯಾಯ ಒದಗಿಸಿದೆ. ಕನ್ನಡ ವಿಶ್ವವಿದ್ಯಾಲಯದ ಕನ್ನಡಭಾಷಾಧ್ಯಯನ ವಿಭಾಗ ಕನ್ನಡ ಪ್ರಾದೇಶಿಕ ಪ್ರಭೇದಭಾಷೆಗಳ ಸಮಗ್ರ ಪರಿವೀಕ್ಷಣೆ, ದಾಖಲೀಕರಣ ಮತ್ತು ಕನ್ನಡ ಪ್ರಾದೇಶಿಕ ಪ್ರಭೇದಗಳ ಕೋಶವನ್ನು ಸಿದ್ಧಪಡಿಸುವ ಯೋಜನೆಯನ್ನು ಕೈಕೊಂಡು ಪೂರ್ಣಗೊಳಿಸಿದೆ. ಕನ್ನಡ ಭಾಷಾಪ್ರಭೇದಗಳ ಬಗ್ಗೆ ದೊಡ್ಡಪ್ರಮಾಣದಲ್ಲಿ ಅಂತಹ ಯಾವ ಅಧ್ಯಯನವೂ ಈವರೆಗೆ ನಡೆಯದಿರುವ ಸಂದರ್ಭದಲ್ಲಿ ಕನ್ನಡ ವಿಶ್ವವಿದ್ಯಾಲಯವು ಈ ಕಾರ್ಯವನ್ನು ಯಶಸ್ವಿಗೊಳಿಸಿದ್ದು ಗಮನಾರ್ಹವಾಗಿದೆ. ಸಮಗ್ರ ಕರ್ನಾಟಕದ ವ್ಯಾಪ್ತಿಯನ್ನಿಟ್ಟುಕೊಂಡು ಇಂತಹ ಸಂಶೋಧನ ಯೋಜನೆಯನ್ನು ಪೂರ್ಣಗೊಳಿಸಿದ್ದು ಕನ್ನಡ ವಿಶ್ವವಿದ್ಯಾಲಯ ಮಾತ್ರ.

ಕರ್ನಾಟಕದ ವಿಶ್ವವಿದ್ಯಾಲಯಗಳ ಕನ್ನಡ ಅಧ್ಯಯನ ಸಂಸ್ಥೆಗಳು ಯೋಜನಾಬದ್ಧವಾದ ಅಂತರ್‌ಶಿಸ್ತೀಯ ಸಂಶೋಧನೆಯ ಕಡೆಗೆ ಹೆಚ್ಚು ಗಮನವನ್ನು ಹರಿಸಿಲ್ಲ. ಕನ್ನಡ ವಿಶ್ವವಿದ್ಯಾಲಯದ ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗವು 'ದ್ರಾವಿಡ ಸಾಹಿತ್ಯ ಚರಿತ್ರೆ'ಯ ಮಾಲಿಕೆಯನ್ನು ಆರಂಭಿಸಿದೆ. ಕನ್ನಡ ವಿಶ್ವವಿದ್ಯಾಲಯ ಎಂ.ಬಿ.ಎಮಿನೊ ಮತ್ತು ಟಿ.ಬರೊ ನಿರ್ಮಿಸಿದ ಜಾಗತಿಕ ಮಹತ್ವದ ದ್ರಾವಿಡಿಯನ್ ಎಟಿಮಾಲೊಜಿಕಲ್ ಡಿಕ್ಷನರಿಯನ್ನು ಕನ್ನಡಕ್ಕೆ ಅನುವಾದಿಸಿಕೊಟ್ಟದ್ದು ಮಹತ್ವದ ಕಾಣಿಕೆಯೇ ಸರಿ. ಹಾಗೆಯೆ ಚರಿತ್ರೆ ಅಧ್ಯಯನ ವಿಭಾಗವು ಹೊರತಂದಿರುವ ಕರ್ನಾಟಕ ಸಂಸ್ಕೃತಿ ಚರಿತ್ರೆ ಸಂಪುಟಗಳು, ಚರಿತ್ರೆ ವಿಶ್ವಕೋಶ, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗದ ಕರ್ನಾಟಕ ದೇವಾಲಯ ಕೋಶ, ಜಿಲ್ಲಾವಾರು ದೇವಾಲಯ ಕೋಶಗಳು, ಶಾಸನಶಾಸ್ತ್ರ ವಿಭಾಗದ ಜಿಲ್ಲಾವಾರು,

ಗತವೈಭವ' ಕುರಿತು ಉಪನ್ಯಾಸ ನೀಡಿದ್ದು ಅಲ್ಲಿನ ಕನ್ನಡ ವಿದ್ಯಾರ್ಥಿಗಳ ಮೇಲೆ ತೀವ್ರ ಪ್ರಭಾವ ಬೀರಿತು. ಕರ್ನಾಟಕದ ಸಾಹಿತ್ಯ, ಸಂಸ್ಕೃತಿ ಕುರಿತ ಸರಿಯಾದ ಇತಿಹಾಸ ಸಂಶೋಧನೆಗೆ ಧಾರವಾಡದಲ್ಲಿ ಒಂದು ಸಂಸ್ಥೆಯನ್ನು ಸ್ಥಾಪಿಸಲು ಅವರು ಮಾಡಿದ ಆಗ್ರಹಪೂರ್ವಕ ಬೇಡಿಕೆಗೆ ಅನುಗುಣವಾಗಿ ನಾ.ಶ್ರೀ.ರಾಜಪುರೋಹಿತ, ಮುದವೀಡು ಕೃಷ್ಣರಾವ್ ಮುಂತಾದವರನ್ನು ಒಳಗೊಂಡ ೧೪ ಜನ ಸಂಶೋಧಕರು, ಕನ್ನಡಾಭಿಮಾನಿಗಳು ಕರ್ನಾಟಕ ಇತಿಹಾಸ ಸಂಶೋಧನ ಎಂಬ ಸಂಸ್ಥೆಯನ್ನು ಧಾರವಾಡದಲ್ಲಿ ಸ್ಥಾಪಿಸಿದರು.

ಕನ್ನಡ ನಾಡು–ನುಡಿ, ಸಂಸ್ಕೃತಿ, ಸಾಹಿತ್ಯ ಕಲೆಗಳ ಬಗೆಗೆ ಸಂಶೋಧನೆ ಮಾಡುವುದು, ಸಂಶೋಧನ ಗ್ರಂಥಗಳನ್ನು ಪ್ರಕಟಿಸುವುದು, ಪ್ರಾಚೀನ ಹಸ್ತಪ್ರತಿಗಳನ್ನು ಸಂಗ್ರಹಿಸುವುದು, ಉಪನ್ಯಾಸ, ಶಿಬಿರ, ಕಮ್ಮಟ, ವಿಚಾರಸಂಕಿರಣಗಳನ್ನು ಏರ್ಪಡಿಸುವುದು ಇವೇ ಮುಂತಾದ ಉದ್ದೇಶಗಳನ್ನು ಇಟ್ಟುಕೊಂಡು ಈ ಸಂಶೋಧನ ಸಂಸ್ಥೆಯನ್ನು ಸ್ಥಾಪಿಸಲಾಗಿದೆ.

ಕರ್ನಾಟಕ ಇತಿಹಾಸ ಸಮ್ಮೇಳನವನ್ನು ಕ್ರಿ.ಶ.೧೯೧೬ ರಲ್ಲಿ ಮೊಟ್ಟಮೊದಲ ಬಾರಿಗೆ ಈ ಸಂಸ್ಥೆ ಏರ್ಪಡಿಸಿತ್ತು. ಮೊದಲ ಸಮ್ಮೇಳನಾಧ್ಯಕ್ಷರಾಗಿ ಆಲೂರು ವೆಂಕಟರಾಯರು, ಮೂರನೆಯ ಸಮ್ಮೇಳನಕ್ಕೆ ಆರ್.ನರಸಿಂಹಾಚಾರ್ ಅವರು ಅಧ್ಯಕ್ಷರಾಗಿದ್ದರು.

ಕರ್ನಾಟಕ ರಾಜ್ಯ ಸರಕಾರ ಈಗ ಹಂಪಿ ಉತ್ಸವ ಆಚರಿಸುತ್ತಿದೆ. ಆದರೆ ಕ್ರಿ.ಶ.೧೯೩೬ ರಷ್ಟು ಹಿಂದೆಯೇ ಈ ಸಂಸ್ಥೆ ಹಂಪಿ ಉತ್ಸವವನ್ನು ಪ್ರಾರಂಭಿಸಿದ ಹೆಗ್ಗಳಿಕೆಯನ್ನು ಹೊಂದಿದೆ. ಸಂಸ್ಥೆಯ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ ಪ್ರಖ್ಯಾತ ಇತಿಹಾಸ ಸಂಶೋಧಕರು ಸಂಸ್ಕೃತಿ ಚಿಂತಕರೂ ಆಗಿದ್ದ ರಾ.ಸ್ವಾ.ಪಂಚಮುಖಿ ಅವರು ಮಂಡಲಕ್ಕಾಗಿ ಒಂದು ಸ್ವಂತ ಭವ್ಯ ಕಟ್ಟಡವನ್ನು ಕಟ್ಟಿಸಿಕೊಡುವಲ್ಲಿ ಮುಖ್ಯಪಾತ್ರವನ್ನು ವಹಿಸಿದ್ದರು. ಅವರ ಹೆಸರಿನಲ್ಲಿ 'ವಿದ್ಯಾರತ್ನ ರಾ.ಸ್ವಾ.ಪಂಚಮುಖಿ ಪ್ರಾಚ್ಯವಿದ್ಯಾ ಸಂಶೋಧನಾ ಕೇಂದ್ರ' ಎಂಬ ವಿಭಾಗವನ್ನು ಮಂಡಲದಲ್ಲಿ ಆರಂಭಮಾಡಲಾಗಿದೆ. ಈ ಕೇಂದ್ರದಿಂದ ಪದಾರ್ಥವಿಜ್ಞಾನ (ಭೌತಶಾಸ್ತ್ರ), ರಸಾಯನಶಾಸ್ತ್ರ, ಆರೋಗ್ಯಶಾಸ್ತ್ರ, ಕೃಷಿವಿಜ್ಞಾನ ಮತ್ತು ಸಸ್ಯವಿಜ್ಞಾನ ಇವುಗಳ ಕನ್ನಡ ಪಾರಿಭಾಷಿಕ ಕೋಶಗಳನ್ನು ಪ್ರಕಟಿಸಲಾಗಿದೆ.

ಇತಿಹಾಸವೆಂದರೆ ಕೇವಲ ರಾಜಾ–ರಾಣಿ, ರಾಜ ಕುಟುಂಬದವರ ಚರಿತ್ರೆ, ಹೋರಾಟ, ವೈಭವ, ಅಂತೆ ಕಂತೆಗಳ ಕಥೆಯಲ್ಲ, ಇತಿಹಾಸದ ನಿಜವಾದ ಅಧ್ಯಯನವೆಂದರೆ ಕಾಲಗರ್ಭದ ಜನರ ಜೀವನ, ಸಾಹಿತ್ಯ, ಕಲೆ, ಸಂಸ್ಕೃತಿ, ಸಾಮಾಜಿಕತೆಗಳ ಅಧ್ಯಯನವಾಗಿದೆ. ಅಷ್ಟೇ ಅಲ್ಲ ಇಂತಹ ಅಧ್ಯಯನಗಳಿಂದ ಈಗಿನ ಸಮಾಜಕ್ಕೆ ಉಪಯುಕ್ತವಾದ ವಿಷಯಗಳನ್ನು ಇಂದಿನ ಜನತೆಗೆ ಎತ್ತಿತೋರುವುದಾಗಿದೆ ಎಂಬುದು ಈ ಸಂಸ್ಥೆಯ ಧ್ಯೇಯವಾಗಿದೆ. ಇತಿಹಾಸವನ್ನು ಸಾಮಾಜಿಕ ಹಿನ್ನೆಲೆಯಲ್ಲಿ ಸಂಶೋಧನೆಗೆ ಈಡುಮಾಡಲೋಸುಗ "ಸಾಮಾಜಿಕ ಆರ್ಥಿಕ ಸಂಶೋಧನಾ ಕೇಂದ್ರ" (Socio Economic Research Center) ಸ್ಥಾಪನೆ ಮಾಡಲಾಗಿದೆ. ಪ್ರೊ. ಲಾಕಡವಾಲಾ, ಡಾ. ನಂಜುಂಡಪ್ಪ, ಡಾ.ಪಂಚಮುಖಿ ಅವರಂಥ ಶ್ರೇಷ್ಠ ವಿದ್ವನ್ಮಣಿಗಳು ಇದನ್ನು ನಡೆಸುತ್ತಿದ್ದರು. ಕನ್ನಡ ಲಿಪಿಶಾಸ್ತ್ರ, ಬೆಳವಣಿಗೆಯನ್ನು ಕಲಿಸುವ ಉದ್ದೇಶದಿಂದ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಲಿಪಿಶಾಸ್ತ್ರ ಬೋಧನಾ ವರ್ಗಗಳನ್ನು ನಡೆಸಲಾಯಿತು.

ಕರ್ನಾಟಕ ಇತಿಹಾಸ ಸಂಶೋಧನ ಮಂಡಲವು ಇದುವರೆಗೆ ಕನ್ನಡ, ಇಂಗ್ಲಿಷ್, ಸಂಸ್ಕೃತ ಭಾಷೆಗಳಲ್ಲಿ ಅನೇಕ ಗ್ರಂಥಗಳನ್ನು ಪ್ರಕಟಿಸಿದೆ. ಅವುಗಳಲ್ಲಿ ಆಲೂರ ವೆಂಕಟರಾಯರ

ಮುಖ್ಯವಾಗಿತ್ತು. ಆದ್ದರಿಂದ ಶಾಸನ, ಹಸ್ತಪ್ರತಿ ಮುಂತಾದವುಗಳನ್ನು ಸಂಗ್ರಹಿಸುವ ಮತ್ತು ಅವುಗಳಲ್ಲಿನ ವಿಷಯ ಸಾಮಗ್ರಿಗಳನ್ನು ಪರಿಚಯಿಸುವ ಕಾರ್ಯವು ತೀವ್ರವಾಗಿ ನಡೆಯಿತು. ಪ್ರಾಯಃ ಈ ಪ್ರಕ್ರಿಯೆ ನಿರಂತರವಾದುದು. ಶಾಸನ, ಕೈಪಿಡಿ, ಚಿತ್ರ, ಶಿಲ್ಪ, ನಾಣ್ಯ, ಪುರಾಣ, ಐತಿಹ್ಯ, ಜನಪದ ಸಾಹಿತ್ಯ ಎಲ್ಲೆಂದರಲ್ಲಿ ಸಾಮಗ್ರಿಗಳನ್ನು ಹೆಕ್ಕಿ ತೆಗೆಯಬೇಕಾಗುತ್ತಿತ್ತು. ಆದ್ದರಿಂದ ಸಂಶೋಧಕರಿಗೆ O R I ತುಂಬ ಅನುಕೂಲ ಒದಗಿಸಿದ್ದರಲ್ಲಿ ಸಂದೇಹವಿಲ್ಲ. ಈಹೊತ್ತಿಗೂ ಸಂಶೋಧಕರಿಗೆ ಇದು ಉಪಯುಕ್ತ ಸಂಸ್ಥೆಯೇ ಆಗಿದೆ. ಇದರ ಪ್ರಯೋಜನವನ್ನು ಪಡೆದ ದೇಶೀ ಮತ್ತು ವಿದೇಶೀ ಸಂಶೋಧಕರಿಂದ ಕನ್ನಡ ಸಾಹಿತ್ಯ ಚರಿತ್ರೆಯ ದಿಕ್ಕು ದೆಸೆಗಳೇ ಬದಲಾಗುವಂತಾಯಿತು. ಪ್ರಾಚೀನ ಕೃತಿಗಳಲ್ಲಿ ಮೊಟ್ಟಮೊದಲು ಮುದ್ರಣಗೊಂಡು ಪ್ರಕಟವಾದ ಕೃತಿ ಕ್ರಿ.ಶ. ೧೮೪೮ರಲ್ಲಿ ಮೋಗ್ಲಿಂಗ ಪ್ರಕಟಿಸಿದ ಲಕ್ಷ್ಮೀಶನ ಜೈಮಿನಿಭಾರತ. ಆಮೇಲೆ ಭಾಷಾಭೂಷಣ, ಕಾವ್ಯಾವಲೋಕನ, ಶಬ್ದಮಣಿದರ್ಪಣ ಮುಂತಾದ ಕೃತಿಗಳೂ ಹೊರಬಂದವು ಜೊತೆಗೆ 'ಎಪಿಗ್ರಾಫಿಯಾ ಕರ್ನಾಟಿಕಾ' ಮೂಲಕ ಸಹಸ್ರಾರು ಕನ್ನಡ ಶಾಸನಗಳು ಬೆಳಕುಕಂಡು ಮುಂದಿನ ಸಂಶೋಧನೆಗೆ ಪ್ರೇರಣೆ ನೀಡಿದವು. ನವದೆಹಲಿಯ ಇಂದಿರಾ ಗಾಂಧಿ ರಾಷ್ಟ್ರೀಯ ಕಲೆಗಳ ಸಂಸ್ಥೆಗೆ (IGNCA) ಓರಿಯೆಂಟ್ ಸಂಶೋಧನ ಸಂಸ್ಥೆ ಸಂಲಗ್ನತೆಯನ್ನು ಹೊಂದಿದೆ.

ಕರ್ನಾಟಕ ಇತಿಹಾಸ ಸಂಶೋಧನ ಮಂಡಲ ಧಾರವಾಡ

ಸರಿಯಾಗಿ ಒಂದು ಶತಮಾನದ ಹಿಂದೆ (ಕ್ರಿ.ಶ.೧೯೧೪ ರ ಸಪ್ಟಂಬರ ೨೮) ಸ್ಥಾಪನೆಗೊಂಡ ಧಾರವಾಡದ ಕರ್ನಾಟಕ ಇತಿಹಾಸ ಸಂಶೋಧನ ಮಂಡಲವು ಸದ್ಯ ಶತಮಾನೋತ್ಸವ ಸಂಭ್ರಮದಲ್ಲಿದೆ. ಈ ಸಂಶೋಧನ ಸಂಸ್ಥೆಯ ಸ್ಥಾಪನೆಯ ಹಿಂದೆ ಒಂದು ಸ್ವಾರಸ್ಯಕರ ಇತಿಹಾಸವೇ ಇದೆ. ಧಾರವಾಡ – ಬೆಳಗಾವಿ ಮುಂತಾದ ಉತ್ತರ ಕರ್ನಾಟಕದ ಪ್ರದೇಶಗಳು ಬಹು ಪ್ರಾಚೀನಕಾಲದಿಂದಲೂ ಅಚ್ಚಗನ್ನಡ ಪ್ರದೇಶಗಳು. ಶ್ರೀವಿಜಯನು ತನ್ನ ಕವಿರಾಜಮಾರ್ಗದಲ್ಲಿ ಕಾವೇರಿಯಿಂದಮಾ ಗೋದಾವರಿವರವಿರ್ದನಾಡದಾ ಕನ್ನಡದೊಳ್ ಎಂದು ಹೇಳಿರುವಲ್ಲಿ 'ಪುಲಿಗೆರೆ' ಮತ್ತು 'ಒಕ್ಕುಂದ' ಎಂಬ ಸ್ಥಳಗಳು ಈ ನಾಡಿನವು. ಆದರೆ ಬ್ರಿಟಿಶರು ತಮ್ಮ ಆಡಳಿತದಲ್ಲಿ ಈ ಭಾಗಗಳನ್ನು ದಕ್ಷಿಣಮುಂಬೈ ಎಂಬ ವಿಭಾಗಮಾಡಿ ಮಹಾರಾಷ್ಟ್ರದಲ್ಲಿ ಸೇರಿಸಿದ್ದರಿಂದ ಅಚ್ಚಗನ್ನಡದ ಈ ಪ್ರದೇಶವೆಲ್ಲಾ ತಮ್ಮದೇ ಎಂದು ಮರಾಠಿಗರೆಲ್ಲ ಹೇಳತೊಡಗಿದರು. ಆರ್.ಜಿ.ಭಂಡಾರಕರರಂಥ ಇತಿಹಾಸತಜ್ಞರು 'ದಕ್ಷಿಣಾಪಥದ ಪ್ರಾಚೀನ ಇತಿಹಾಸ' ಎಂದು ಒಂದು ಗ್ರಂಥವನ್ನು ಬರೆದು ರಾಷ್ಟ್ರಕೂಟರು, ಚಾಲುಕ್ಯರು ಮುಂತಾದ ಅರಸು ಮನೆತನಗಳು ಮಹಾರಾಷ್ಟ್ರಕ್ಕೆ ಸೇರಿದಂಥವು ಎಂದು ಪ್ರತಿಪಾದಿಸಿದರು. ಇದು ಕರ್ನಾಟಕದ ಕನ್ನಡಿಗರ ಇತಿಹಾಸವನ್ನು ತಿರುಚುವ ಅಜ್ಞ ಇತಿಹಾಸಕಾರರ ಕಿತಾಪತಿ ಆಗಿತ್ತು. ಇದನ್ನರಿತ ಧಾರವಾಡದ ಪ್ರಜ್ಞಾವಂತ ಕನ್ನಡಿಗರು ಇಂತಹ ಕುಕೃತ್ಯವನ್ನು ವ್ಯವಸ್ಥಿತವಾಗಿ ಹತ್ತಿಕ್ಕಲೋಸುಗ ಕರ್ನಾಟಕದ, ಕನ್ನಡಿಗರ ನೈಜ ಇತಿಹಾಸಗಳನ್ನು ಹೊರಗೆಡಹಲು ನಿರ್ಧಾರ ಮಾಡಿದರು. ಅಂಥವರಲ್ಲಿ ಧಾರವಾಡದ ವಿದ್ವಾಂಸರು ಮುಂಚೂಣಿಯಲ್ಲಿ ನಿಂತರು. ವ್ಹಿ.ಬಿ.ಹಾಲಭಾವಿ, ಆಲೂರು ವೆಂಕಟರಾಯರು, ನಾ.ಶ್ರೀ. ರಾಜಪುರೋಹಿತರು ಮುಂತಾದವರು ಕನ್ನಡ, ಕರ್ನಾಟಕದ ಇತಿಹಾಸ ಸಂಸ್ಕೃತಿ, ಪ್ರಾಚೀನತೆ, ಪ್ರಾದೇಶಿಕ ವ್ಯಾಪ್ತಿ ಕುರಿತಾದ ಲೇಖನ, ಗ್ರಂಥ, ಪ್ರಕಟಿಸುತ್ತ, ಉಪನ್ಯಾಸ ನೀಡುತ್ತ ಮರಾಠಿಗರ ಪ್ರತಿಪಾದನೆಗಳನ್ನು ಸಾಧಾರಪೂರ್ವಕ ತಳ್ಳಿಹಾಕತೊಡಗಿದರು. ಕ್ರಿ.ಶ.೧೯೧೪ರ ಅಗಸ್ಟ ೩ ರಂದು ಆಲೂರು ವೆಂಕಟರಾಯರು ಪುಣೆ ಡೆಕ್ಕನ್ ಕಾಲೇಜಿನಲ್ಲಿ 'ಕರ್ನಾಟಕದ

ಸ್ಪಷ್ಟವಾಗುವುದಿಲ್ಲ. ಉತ್ತರ ಕರ್ನಾಟಕವು ಕರ್ನಾಟಕದ ಒಟ್ಟಾರೆ ಕನ್ನಡ ಸಾಹಿತ್ಯ, ಸಂಸ್ಕೃತಿಗೆ ಬಹು ಮಹತ್ವದ ಕಾಣಿಕೆಯನ್ನು ನೀಡಿದೆ. ಕನ್ನಡದ ಶ್ರೇಷ್ಠ ಪ್ರಾಚೀನ ಸಾಹಿತ್ಯ ಎಲ್ಲವೂ ಸೃಷ್ಟಿಯಾದದ್ದು ಉತ್ತರ ಕರ್ನಾಟಕದಲ್ಲಿ. ಕರ್ನಾಟಕವನ್ನು ಆಳಿದ ಕದಂಬರು, ರಾಷ್ಟ್ರಕೂಟರು, ಚಾಲುಕ್ಯರು, ವಿಜಯನಗರದ ಸಾಮ್ರಾಟರು, ಬಹಮನಿ ಮತ್ತು ಆದಿಲಶಾಹಿಅರಸರು ಉತ್ತರ ಕರ್ನಾಟಕದವರು. ಹೀಗಾಗಿ ಈ ಭಾಗದಲ್ಲಿ ಕರ್ನಾಟಕ ಸಂಸ್ಕೃತಿಯ ಬೇರುಗಳು ಸಾಕಷ್ಟು ಗಟ್ಟಿಯಾಗಿವೆ. ಆದರೆ ಕರ್ನಾಟಕದ ಸಮೃದ್ಧವಾದ ಸಾಂಸ್ಕೃತಿಕ ಇತಿಹಾಸವನ್ನು ಸಂಶೋಧಿಸುವ, ಜಿಜ್ಞಾಸುಗಳಿಗೆ ಜನಸಾಮಾನ್ಯರಿಗೆ ಅದರ ಮಹತ್ವವನ್ನು ತಿಳಿಸುವ ಕಾರ್ಯ ಆಗದೇ ಇದ್ದುದರಿಂದ ಇತಿಹಾಸ, ಸಂಸ್ಕೃತಿಗಳನ್ನು ಸಂಶೋಧಿಸುವುದು, ದಾಖಲಿಸುವುದು, ಪ್ರಕಟಿಸುವುದು ತೀರ ಅವಶ್ಯವಾಗಿತ್ತು. ಇದನ್ನರಿತು ಬ್ರಿಟಿಶ್ ಸರ್ಕಾರವು ತನ್ನ ದೂರದೃಷ್ಟಿಯ ಫಲವಾಗಿ ಧಾರವಾಡದಲ್ಲಿ ಕನ್ನಡ ಸಂಶೋಧನ ಸಂಸ್ಥೆಯನ್ನು ಸ್ಥಾಪಿಸಿದಂತೆ ತೋರುತ್ತದೆ.

ಧಾರವಾಡ ಸಾರಸ್ವತಪುರದ ಸಣ್ಣ ಕಟ್ಟಡವೊಂದರಲ್ಲಿ 'Kannada Research Office' ೧೯೩೯ ರ ಅಕ್ಟೋಬರನಲ್ಲಿ ಆರಂಭಗೊಂಡಿತು. ಅಲ್ಲಿಂದ ೧೯೫೩ ರವರೆಗೆ ೧೪ ವರ್ಷಗಳ ಸುದೀರ್ಘಕಾಲ ಸತತವಾಗಿ ಪ್ರಖ್ಯಾತ ಸಂಶೋಧಕರೂ ವಿದ್ವಾಂಸರೂ ಆಗಿದ್ದ ಶ್ರೀ ರಾ.ಸ್ವಾ. ಪಂಚಮುಖಿ ಅವರು ಕನ್ನಡ ಸಂಶೋಧನ ಸಂಸ್ಥೆಯ ಅಧ್ಯಕ್ಷರಾಗಿ ಸೇವೆ ಸಲ್ಲಿಸಿ ಅದಕ್ಕೊಂದು ಒಳ್ಳೆಯ ಬುನಾದಿಯನ್ನು ಹಾಕಿಕೊಟ್ಟರು. ನಂತರ ಡಾ.ಬಿ.ಎ.ಸಾಲೆತೊರೆ, ಡಾ.ಪಿ.ಬಿ.ದೇಸಾಯಿ, ಡಾ.ಶ್ರೀನಿವಾಸ ರಿತ್ತಿ ಮುಂತಾದ ಶ್ರೇಷ್ಠ ಸಂಶೋಧಕರು ಅದರ ನಿರ್ದೇಶಕರಾಗಿ ಸೇವೆಯನ್ನು ಸಲ್ಲಿಸಿದ್ದಾರೆ. ಈ ಸಂಸ್ಥೆಯ ಮೂಲ ಉದ್ದೇಶವೇ ಸಂಶೋಧನೆ ಆಗಿದ್ದರಿಂದ ಆಕರಗಳ ಶೋಧ ಸಂಗ್ರಹ, ವಿಶ್ಲೇಷಣೆ, ಸಂಶೋಧನ ಗ್ರಂಥ ಪ್ರಕಟನೆ ಇದರ ಮುಖ್ಯ ಕಾರ್ಯ. ಈ ಕಾರ್ಯಕ್ಕೆ ಪೂರಕವಾಗಿ ವಿದ್ವಾಂಸರ ವಿಶೇಷ ಉಪನ್ಯಾಸ, ವಿಚಾರ ಸಂಕಿರಣ, ಕಮ್ಮಟ, ವಿದ್ವತ್ ಗೋಷ್ಠಿಗಳನ್ನು ನಡೆಸಿ ಅಲ್ಲಿ ನಡೆದ ಚರ್ಚೆ, ಮಂಡಿಸಲ್ಪಟ್ಟ ಪ್ರಬಂಧಗಳ ಪ್ರಕಟನೆಗಳ ಮೂಲಕ ಪ್ರಸಾರ ಮಾಡುವುದು ಈ ಸಂಸ್ಥೆಯ ಧ್ಯೇಯ. ಇದರ ಜೊತೆಗೆ ಶಾಸನಶಾಸ್ತ್ರದಲ್ಲಿ ಸ್ನಾತಕೋತ್ತರ ಡಿಪ್ಲೋಮಾ ತರಗತಿಗಳನ್ನು ನಡೆಸಿ ಭಾವಿ ಶಾಸನತಜ್ಞರನ್ನು ತರಬೇತುಗೊಳಿಸುವ ಕಾರ್ಯವೂ ಇಲ್ಲಿ ನಡೆಯುತ್ತಿದೆ.

ಕನ್ನಡ ಸಂಶೋಧನ ಸಂಸ್ಥೆಯು ಆರಂಭದಲ್ಲಿ ಒಂದು ಸ್ವತಂತ್ರ ಸಂಸ್ಥೆಯಾಗಿ ಧಾರವಾಡ ನಗರದಲ್ಲಿ ಕಚೇರಿಯನ್ನು ಹೊಂದಿ ಕಾರ್ಯ ನಿರ್ವಹಿಸುತ್ತ ತನ್ನ ವಸ್ತು ಸಂಗ್ರಹಾಲಯವನ್ನು ಕರ್ನಾಟಕ ಕಾಲೇಜಿನಲ್ಲಿ ಸ್ಥಾಪಿಸಿತ್ತು. ಕರ್ನಾಟಕ ರಾಜ್ಯ ಉದಯವಾದ ದಿನ ಅಂದರೆ ೧೯೫೬ ರ ನವಂಬರ ೧ ರಂದು ಕರ್ನಾಟಕ ಸರ್ಕಾರವು ಕನ್ನಡ ಸಂಶೋಧನ ಸಂಸ್ಥೆಯನ್ನು ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಒಪ್ಪಿಸಿತು. ಕರ್ನಾಟಕ ಸಾಂಸ್ಕೃತಿಕ ಇತಿಹಾಸ ಸಂಶೋಧನೆಗೆ ಮೀಸಲಾದ ಈ ಸಂಸ್ಥೆ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ವರ್ಗಾವಣೆಗೊಂಡ ಮೇಲೆ ಅದಕ್ಕೊಂದು ಸುಸಜ್ಜಿತ ಕಟ್ಟಡ ಮತ್ತು ಅದರಲ್ಲಿ ಉತ್ತಮ ವಸ್ತುಸಂಗ್ರಹಾಲಯ, ಗ್ರಂಥಾಲಯ, ಬೋಧನಾನುಕೂಲತೆ ಇತ್ಯಾದಿ ಲಭ್ಯವಾದವು. ಅಷ್ಟೇ ಅಲ್ಲ ಸಂಶೋಧಕರಿಗೆ ಬೇಕಾದ ವಿಶ್ವವಿದ್ಯಾಲಯದ ಅತ್ಯುತ್ತಮವಾದ ಉನ್ನತ ಶೈಕ್ಷಣಿಕ ಪರಿಸರ ಅದಕ್ಕೆ ದೊರೆಯಿತು. ಮೈಸೂರಿನಲ್ಲಿ ಓರಿಯಂಟಲ್ ಸಂಶೋಧನ ಸಂಸ್ಥೆ ಮೈಸೂರು ವಿಶ್ವ ವಿದ್ಯಾಲಯದಲ್ಲಿ ಆರಂಭವಾಗಿ ನಂತರ ಅದು ಸ್ವತಂತ್ರವಾಗಿ ಪ್ರತ್ಯೇಕ ಸಂಸ್ಥೆಯಾಗಿ ರೂಪುಗೊಂಡರೆ ಧಾರವಾಡ ಕನ್ನಡ ಸಂಶೋಧನ ಸಂಸ್ಥೆಯು ಸರ್ಕಾರದ ಸ್ವತಂತ್ರ

'ವಿದ್ಯಾರಣ್ಯ ಚರಿತ್ರೆ', 'ಕರ್ನಾಟಕದ ಗತವೈಭವ', ಪಿ.ಬಿ.ದೇಸಾಯಿ ಅವರ 'ವಿಜಯನಗರ ಸಾಮ್ರಾಜ್ಯ', ಐ.ಪಿ.ಕರಮರಕರ ಅವರ 'ಹರಿದಾಸ ಸಾಹಿತ್ಯ', 'ಕರ್ನಾಟಕದ ಇತಿಹಾಸ', 'ಸಂಸ್ಕೃತಿ ಸಂಗ್ರಾಮ', ವರದರಾಜ ಉಮರ್ಜಿ ಅವರ 'ಕನ್ನಡ ಭಾಷೆಯ ಉಗಮ ಮತ್ತು ಬೆಳವಣಿಗೆ', ಎಸ್.ಆರ್.ಶರ್ಮಾ ಅವರ 'ಜೈನಿಜಂ ಆ್ಯಂಡ ಕರ್ನಾಟಕ ಕಲ್ಚರ್', ನಾರಾಯಣ ಶರ್ಮಾ ಅವರ 'ಕನ್ನಡ ನಾಡಿನ ಕಥೆಗಳು', ಎಚ್.ಎಸ್.ಗೋಪಾಲರಾವ್ ಅವರ 'ವಕೀಲ ರಾಮಪ್ಪನ ಕೈಫಿಯತ್ತು', ಕೆ.ಆರ್.ಗಣೇಶ ಅವರ 'ಶಾಸನ ಸರಸ್ವತಿ', ದೇವರ ಕೊಂಡಾರೆಡ್ಡಿ ಅವರ 'ಕರ್ನಾಟಕ ಶಾಸನಗಳಲ್ಲಿ ಶಾಪಾಶಯ', ಸುಧಾ ಕೌಜಗೇರಿ ಅವರ 'ಕಿಟೆಲ್ ಕೋಶ ಮತ್ತು ಕುಮಾರವ್ಯಾಸ ಭಾರತ ನಿಘಂಟು', ಎಸ್.ಆರ್.ದೇಶಪಾಂಡೆ ಅವರ 'ಕರ್ನಾಟಕದ ಸ್ಥಳನಾಮಗಳು', ಜ್ಯೋತ್ಸ್ನಾ ಕಾಮತ ಅವರ 'ಕರುನಾಡಿನ ಜನಜೀವನ' ಮುಂತಾದ ೫೦ಕ್ಕೂ ಹೆಚ್ಚು ಸಂಖ್ಯೆಯ ಶ್ರೇಷ್ಠ ಸಂಶೋಧನ ಗ್ರಂಥಗಳನ್ನು ಮಂಡಲವು ಪ್ರಕಟಿಸಿದೆ. ಕರ್ನಾಟಕದ ಇತಿಹಾಸ, ಸಂಸ್ಕೃತಿ, ಕಲೆ, ಸಾಹಿತ್ಯ ಇವೇ ಮೊದಲಾದ ವಿಷಯಗಳಲ್ಲಿ ಆಳವಾದ ಅಧ್ಯಯನವನ್ನು ಮಾಡಿದ ವಿದ್ವನ್ಮಣಿಗಳು ಮಂಡಲದ ಉದ್ದೇಶವನ್ನು ಸಾರ್ಥಕ ರೀತಿಯಲ್ಲಿ ಈಡೇರಿಸಿದ್ದಾರೆ. ಮಂಡಲವು ಈ ವಿಷಯಗಳಲ್ಲಿ ಅಪೂರ್ವ ಬೆಳಕನ್ನು ಬೀರಿದೆ. ಕರ್ನಾಟಕದ ಸಾಂಸ್ಕೃತಿಕ, ಐತಿಹಾಸಿಕ, ಸಾಹಿತ್ಯಿಕ ಮಹತ್ವವನ್ನು ಜಿಜ್ಞಾಸುಗಳಿಗೆ ತಿಳಿಸುವ ಉತ್ತಮ ಕಾರ್ಯವನ್ನು ಮಾಡಿದೆ. ಇದರಿಂದ ಕನ್ನಡಿಗರಲ್ಲಿ ತಮ್ಮ ನಾಡಿನಬಗ್ಗೆ ಸ್ವಾಭಿಮಾನ, ಹೆಮ್ಮೆ, ಗೌರವಗಳು ಉಂಟಾಗುವಂತೆ ಆಗಿದೆಯಲ್ಲದೆ ಮುಂದಿನ ಪೀಳಿಗೆಯವರಿಗೆ ಕರ್ನಾಟಕದ ಸ್ಪಷ್ಟ ಕಲ್ಪನೆ ಬರುವಂತಾಗಿದೆ.

ಕರ್ನಾಟಕದ ಹಿರಿಯ ತಲೆಮಾರಿನ ಅತ್ಯಂತ ಶ್ರೇಷ್ಠ ಸಂಶೋಧಕರ ಬಳಗವನ್ನು ಕಟ್ಟಿಕೊಂಡು ೨೦ನೆಯ ಶತಮಾನದಲ್ಲಿ ಕನ್ನಡ ಸಂಶೋಧನ ಕ್ಷೇತ್ರಕ್ಕೆ ಅಪರೂಪದ ಕಾಣಿಕೆಯನ್ನು ಈ ಸಂಸ್ಥೆ ಸಲ್ಲಿಸಿದೆ. ಮಂಡಲವು ವಿದ್ವಾಂಸರ ಸಂಶೋಧನಾತ್ಮಕ ಲೇಖನಗಳಿಂದ ಕೂಡಿದ "Karnataka Historical Review" ಎಂಬ ಪತ್ರಿಕೆಯನ್ನು ಆಂಗ್ಲ ಭಾಷೆಯಲ್ಲಿ ಪ್ರಕಟಿಸುತ್ತಲಿದೆ. ವಾರ್ಷಿಕ ಪತ್ರಿಕೆಯಾಗಿ ಪ್ರಕಟಗೊಳ್ಳುತ್ತಿರುವ ಇದರ ಸಂಪಾದಕರಲ್ಲಿ ಆಲೂರು ವೆಂಕಟರಾವ್, ಎಸ್.ಸಿ.ನಂದಿಮಠ, ಬಿ.ಎ.ಸಾಲೆತೊರೆ ಅವರಂಥ ಪ್ರಖ್ಯಾತ ಶ್ರೇಷ್ಠ ಸಂಶೋಧಕರಿದ್ದರು.

ಕನ್ನಡ ಸಂಶೋಧನ ಸಂಸ್ಥೆ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಭಾರತ ಸರ್ಕಾರವು ಓರಿಯಂಟಲ್ ಸಂಶೋಧನ ಸಂಸ್ಥೆಯನ್ನು ಮೈಸೂರಿನಲ್ಲಿ ಆರಂಭಮಾಡಿದ ಮೇಲೆ ಆ ಬಗೆಯ ಸಂಶೋಧನ ಚಟುವಟಿಕೆಗಳು ಉತ್ತರ ಕರ್ನಾಟಕದಲ್ಲಿಯೂ ನಡೆಯಬೇಕೆಂಬ ಉದ್ದೇಶದಿಂದ ಕ್ರಿ.ಶ.೧೯೩೯ ರ ಅಕ್ಟೋಬರ್‌ದಲ್ಲಿ ಧಾರವಾಡದಲ್ಲಿ ಒಂದು ಸಂಶೋಧನ ಸಂಸ್ಥೆಯನ್ನು ಮುಂಬೈ ಸರ್ಕಾರವೇ ಆರಂಭಿಸಿತು. ಧಾರವಾಡ ಮತ್ತು ಸುತ್ತಲಿನ ಪ್ರದೇಶ ಕನ್ನಡಕ್ಕೆ ಸಂಬಂಧಿಸಿದ್ದರಿಂದ ಪ್ರಾಯಃ ಈ ಸಂಸ್ಥೆಗೆ Kannada Research Institute (Kannada Research Office) ಎಂದು ಸರ್ಕಾರವು ಅದಕ್ಕೆ ಹೆಸರಿಸಿ ಈ ಭಾಗದ ಸಾಹಿತ್ಯ, ಸಂಸ್ಕೃತಿ, ಪ್ರಾಕ್ ಇತಿಹಾಸಗಳ ಸಂಶೋಧನೆ ನಡೆಯಲು ಅನುಕೂಲ ಮಾಡಿಕೊಟ್ಟಿತು. ಆದರೆ ಅದಾಗಲೆ 'ಕರ್ನಾಟಕ ಇತಿಹಾಸ ಸಂಶೋಧನ ಮಂಡಲ' ಎಂಬ ಖಾಸಗಿ ಸಂಶೋಧನ ಸಂಸ್ಥೆ ಧಾರವಾಡದಲ್ಲಿಯೇ (೧೯೧೪) ಸ್ಥಾಪಿತಗೊಂಡು ಕಾರ್ಯ ಮಾಡುತ್ತಿತ್ತು. ಇಷ್ಟಾಗಿಯೂ ಮುಂಬೈ ಸರ್ಕಾರವು ಅದೇ ಬಗೆಯ ಸಂಶೋಧನ ಸಂಸ್ಥೆಯನ್ನು ಇಲ್ಲಿ ಆರಂಭಮಾಡಿದ ಕಾರಣವು

ಕನ್ನಡ ಸಂಶೋಧನ ಸಂಸ್ಥೆಯು ಕೆಲವು ಅಪರೂಪದ ಶಿಲ್ಪ, ಶಿಲಾಶಾಸನ, ತಾಮ್ರ ಶಾಸನ, ಹಸ್ತಪ್ರತಿಗಳನ್ನು ಸಂಗ್ರಹಿಸಿ ವಸ್ತುಸಂಗ್ರಹಾಲಯದಲ್ಲಿ ಪ್ರದರ್ಶನಕ್ಕೆ ಇಟ್ಟಿರುವುದು ವಿಶೇಷವೂ ಗಮನಸೆಳೆಯುವಂತಹದೂ ಆಗಿದೆ. ಉದಾಹರಣೆಗೆ ನಮ್ಮ ದೇಶದ ಅತ್ಯಂತ ಪ್ರಾಚೀನ ಸಂಸ್ಕೃತಿಯ ನೆಲೆಗಳೆನಿಸಿದ ಹರಪ್ಪ, ಮೊಹೆಂಜೊದಾರೋ ಉತ್ಖನನಗಲ್ಲಿ ದೊರೆತ ಅಪರೂಪದ ವಸ್ತುಗಳು ಇಲ್ಲಿ ಪ್ರದರ್ಶಿಸಲ್ಪಟ್ಟಿವೆ. ಕ್ರಿ.ಶ. ೨ನೇ ಶತಮಾನದ ಶಿವಲಿಂಗ, ೧–೨ ನೇ ಶತಮಾನದ ಶಾಸನ ಅವಶೇಷಗಳು, ಅತಿ ಪ್ರಾಚೀನವೆನಿಸಿದ(ಕ್ರಿ. ಪೂ. ೧ನೆಯ ಶತಮಾನ) ವಡಗಾಂವ–ಮಾಧವಪುರದಲ್ಲಿ ದೊರೆತ ಪ್ರಾಕೃತಭಾಷೆಯ ಬ್ರಾಹ್ಮೀಲಿಪಿಯ ಷಟ್ಕೋಣಾಕಾರದ ಸ್ತಂಭಶಿಲಾಲಿಪಿ. ಬಾದಾಮಿಯಲ್ಲಿ ಬಂಡೆಗಲ್ಲಿನ ಮೇಲೆ ಕೊರೆಯಲಾದ ಶಕವರ್ಷ ೪೫೬ರ (ಕ್ರಿ. ಸ. ೫೪೩) ಮೊದಲನೆಯ ಪುಲಿಕೇಶಿಯ ಶಾಸನ, ಚಾಳುಕ್ಯ ಮಂಗಳೇಶನ ಮತ್ತು ಗಂಗವಂಶದ ಮಾರಸಿಂಗನ ತಾಮ್ರಪಟಗಳು ಜೈನ ವಿಗ್ರಹಗಳು, ಇಂತಹ ಇನ್ನೂ ಬಹು ಬೆಲೆಯುಳ್ಳ ಅವಶೇಷಗಳನ್ನು ಈ ವಸ್ತು ಸಂಗ್ರಹಾಲಯ ಒಳಗೊಂಡಿದೆ. ಇದೆಲ್ಲವೂ ಈ ಸಂಸ್ಥೆಯ ಶ್ರೇಷ್ಠ ವಿದ್ವಾಂಸ, ಸಂಶೋಧಕರ ಪ್ರಯತ್ನದ ಫಲವೆಂದರೆ ತಪ್ಪಾಗಲಾರದು. ಕನ್ನಡ ಸಾಹಿತ್ಯಕ್ಕಿಂತ ಕರ್ನಾಟಕ ಸಂಸ್ಕೃತಿ ಮತ್ತು ಇತಿಹಾಸ, ಪ್ರಾಗ್ಯೈತಿಹಾಸಿಕ ಸಂಶೋಧನೆಗೆ ಇಲ್ಲಿ ಮಹತ್ವ ದೊರೆತಿದೆ. ಇಡೀ ಉತ್ತರ ಕರ್ನಾಟಕದಲ್ಲಿ ಇಂತಹ ಒಂದು ಅಪೂರ್ವ ವಸ್ತು ಸಂಗ್ರಹಾಲಯ ವೈಶಿಷ್ಟ್ಯಪೂರ್ಣವೆನಿಸಿದೆ. ಉತ್ತರ ಕರ್ನಾಟಕದಲ್ಲಿ ದೊರೆತ ೧೫೦೦ಕ್ಕೂ ಹೆಚ್ಚು ಶಾಸನಗಳ ಪ್ರತಿಗಳು ಇಲ್ಲಿವೆ. ಇವನ್ನು ಕರ್ನಾಟಿಕ ಇನ್‌ಸ್ಕ್ರಿಪ್ಷನ್ಸ್ ಹೆಸರಿನಲ್ಲಿ ಪಂಚಮುಖಿ, ಅಣ್ಣಿಗೇರಿ, ಬಾ.ರಾ. ಗೋಪಾಲರ ಸಂಪಾದಕತ್ವದಲ್ಲಿ ಐದು ಸಂಪುಟಗಳಲ್ಲಿ ಪ್ರಕಟಿಸಲಾಗಿದೆ. ಐತಿಹಾಸಿಕ ದೃಷ್ಟಿಯಲ್ಲಿ ಬಹಳ ಮುಖ್ಯವಾದುವು.

ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ, ಉಡುಪಿ

ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರವು, ಮಹಾತ್ಮಾ ಗಾಂಧಿ ಮೆಮೋರಿಯಲ್ ಕಾಲೇಜು ಟ್ರಸ್ಟಿನ ಅಂಗಸಂಸ್ಥೆಯಾಗಿ ಅರ್ಧ ಶತಮಾನದ ಹಿಂದೆಯೇ ಅಂದರೆ ಕ್ರಿ.ಶ. ೧೯೬೫ ರಲ್ಲಿ ಪ್ರೊ.ಕುಂಜಿಬೆಟ್ಟು ಶಿವ ಹರಿದಾಸ ಭಟ್ಟರ ಕನಸಿನ ಕೂಸಾಗಿ ಸ್ಥಾಪಿತವಾಯಿತು. ಇಂದು ಕರ್ನಾಟಕದ ಪ್ರತಿಷ್ಠಿತ ಸಂಶೋಧನ ಸಂಸ್ಥೆಯಾಗಿ ಬೆಳೆದಿದೆ. ಸದ್ಯ ಪ್ರೊ. ಹೆರಂಜೆ ಕೃಷ್ಣಭಟ್ಟರ ಸಮರ್ಥ ನಿರ್ದೇಶಕತ್ವದಲ್ಲಿ ಈ ಸಂಶೋಧನ ಸಂಸ್ಥೆ ಮುನ್ನಡೆದಿದೆ. ಜಾಗತಿಕ ಮಟ್ಟದಲ್ಲಿ ತುಳು ಮತ್ತು ಕನ್ನಡ ಸಂಸ್ಕೃತಿ ಸಂಶೋಧನ ಸಂಸ್ಥೆಯಾಗಿ ನಿರಂತರವಾಗಿ ಕಾರ್ಯಚಟುವಟಿಕೆಗಳನ್ನು ಹಮ್ಮಿಕೊಂಡು ಬಂದಿದೆ. ಈ ಸಂಸ್ಥೆಯು ಒಂದು ಮಿನಿ ವಿಶ್ವವಿದ್ಯಾಲಯದಂತೆಯೆ ಕಾರ್ಯ ನಿರ್ವಹಿಸುತ್ತಿದೆ. ಡಾಕ್ಟರೇಟ ಪದವಿಗಾಗಿ ಸಂಶೋಧಕರು ಇಲ್ಲಿ ಭಾಷೆ, ಸಾಹಿತ್ಯ, ಸಂಸ್ಕೃತಿ ಕ್ಷೇತ್ರಗಳಲ್ಲಿ ಅಧ್ಯಯನ ಮಾಡಿದ್ದಾರೆ ಮತ್ತು ಮಾಡುತ್ತಿದ್ದಾರೆ. ಅವರಿಗೆ ಈ ಸಂಸ್ಥೆ ಸಮರ್ಥ ಮಾರ್ಗದರ್ಶಕ ಸಂಶೋಧಕರನ್ನು ಒದಗಿಸಿದೆ.

ಕನ್ನಡದ ಸೋದರ ಭಾಷೆಯಾದ ತುಳು ಭಾಷೆಯ ಒಂದು ವಿಶ್ವಕೋಶವನ್ನೇ ಸಿದ್ಧಗೊಳಿಸಿ ಕೊಟ್ಟ ಕೀರ್ತಿ ಈ ಸಂಸ್ಥೆಗೆ ಸಲ್ಲುತ್ತದೆ. ಡಾ.ಯು.ಪಿ.ಉಪಾಧ್ಯಾಯರ ಹಿರಿತನದಲ್ಲಿ ಸಂಪನ್ನಗೊಂಡ ೬ ಬೃಹತ್ ಸಂಪುಟಗಳ ತುಳು ನಿಘಂಟು ಒಂದು ವಿಶ್ವಕೋಶವೇ ಆಗಿದೆ. ೧೮ ವರ್ಷಗಳ ಸುದೀರ್ಘ ಅವಧಿಯಲ್ಲಿ ಕರಾವಳಿ ಪ್ರದೇಶದ ಸಮಗ್ರ ಕ್ಷೇತ್ರಕಾರ್ಯ ಮಾಡಿ, ಪ್ರಾಚೀನ ಕೃತಿಗಳು, ಜನಪದ ಸಾಹಿತ್ಯ, ಆಡುನುಡಿ ಮುಂತಾದ ಎಲ್ಲ

ಸಂಸ್ಥೆಯಾಗಿ ಆರಂಭಗೊಂಡು ಕರ್ನಾಟಕ ವಿಶ್ವವಿದ್ಯಾಲಯದ ಅಂಗವಾಗಿ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸೇರ್ಪಡೆಯಾಯಿತು. ಪ್ರಾಯಃ ಒಂದು ಸ್ವತಂತ್ರ ಬೃಹತ್ ಸಂಸ್ಥೆಯಾಗಿ ಬೆಳೆಯಬೇಕಾಗಿದ್ದ ಕನ್ನಡ ಸಂಶೋಧನ ಸಂಸ್ಥೆ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದ ಒಂದು ಉಪವಿಭಾಗದಂತೆ ಕಾರ್ಯ ಮಾಡುವಂತಾದದ್ದು ವಿಪರ್ಯಾಸ. ಮುಂದಿನ ದಿನಮಾನಗಳಲ್ಲಿ ಮೈಸೂರಿನ ಓರಿಎಂಟಲ್ ಸಂಸ್ಥೆ ವಿಶ್ವವಿದ್ಯಾಲಯದಿಂದ ಪ್ರತ್ಯೇಕಗೊಂಡದ್ದು ವರವಾದರೆ, ಧಾರವಾಡದ ಕನ್ನಡ ಸಂಶೋಧನ ಸಂಸ್ಥೆ ವಿಶ್ವವಿದ್ಯಾಲಯಕ್ಕೆ ಸೇರ್ಪಡೆಯಾದದ್ದು ಶಾಪವಾದಂತಾಯಿತು.

ಆರಂಭದಲ್ಲಿ ರಾ.ಸ್ವಾ.ಪಂಚಮುಖಿ, ಬಿ.ಎ.ಸಾಲೆತೊರೆ, ಪಿ.ಬಿ.ದೇಸಾಯಿ, ಶ್ರೀನಿವಾಸ ರಿತ್ತಿ ಅವರಂತಹ ಶ್ರೇಷ್ಠ ಇತಿಹಾಸ ಸಂಶೋಧಕರ ಮಾರ್ಗದರ್ಶನದಲ್ಲಿ ಸರಿಯಾದ ದಾರಿಯಲ್ಲಿ ಸಂಶೋಧನೆ ಸಾಗತೊಡಗಿದ್ದರೂ ಕನ್ನಡ ಅಧ್ಯಯನ ಪೀಠದ ತೆಕ್ಕೆಗೆ ಬಂದೊಡನೆ ಕನ್ನಡ ಸಂಶೋಧನ ಸಂಸ್ಥೆಯ ಕಾರ್ಯ ಕುಂಠಿತವಾಗತೊಡಗಿತು. ಇದಕ್ಕೆ ಕಾರಣಗಳು ಹಲವು. ಒಂದೆಡೆ ಕರ್ನಾಟಕ ಸರ್ಕಾರವು ಸಂಸ್ಥೆಯನ್ನು ವಿಶ್ವವಿದ್ಯಾಲಯಕ್ಕೆ ವರ್ಗಾಯಿಸಿ ಕೈತೊಳೆದುಕೊಂಡಂತೆ ನಿರ್ಲಿಪ್ತವಾಯಿತು. ಅದು ಸರ್ಕಾರದ ಸಂಸ್ಥೆಯಾಗಿ ಬಂದದ್ದರಿಂದ ವಿಶ್ವವಿದ್ಯಾಲಯಕ್ಕೆ ಆಡಳಿತದ ತಾಂತ್ರಿಕ ತೊಂದರೆಗಳುಂಟಾಗಿ ಸಂಸ್ಥೆಯನ್ನು ಬೆಳೆಸುವ ನಿಟ್ಟಿನಲ್ಲಿ ಮೂಲ ಸೌಕರ್ಯ ಮತ್ತು ಸಿಬ್ಬಂದಿಗಳ ಕೊರತೆಯುಂಟಾಗಿ ಬೆಳವಣಿಗೆ ನಿಧಾನವಾಯಿತು. ಇದನ್ನರಿತ ವಿಶ್ವವಿದ್ಯಾಲಯದ ಆಡಳಿತ ಮಂಡಳಿಯು ಕೆಲವು ಕಾಲಾನಂತರ ಕನ್ನಡ ಅಧ್ಯಯನ ಪೀಠದಿಂದ ಅದನ್ನು ಪ್ರತ್ಯೇಕಗೊಳಿಸಿತು. ಆಗ ಕನ್ನಡ ಸಂಶೋಧನ ಸಂಸ್ಥೆಗೆ ವಿಶ್ವವಿದ್ಯಾಲಯದ ಇತರ ವಿಭಾಗಗಳಂತೆ ಸ್ವತಂತ್ರ ಸ್ಥಾನ ಸಿಗುವಂತಾಯಿತು. ಈ ಸಂಸ್ಥೆ ಆರಂಭವಾಗಿ ೭೫ ವರ್ಷಗಳಾಗಿವೆ. ಇಷ್ಟೊಂದು ಸುದೀರ್ಘವಾದ ಅವಧಿಯಲ್ಲಿ ಈಚಿನ ಸುಮಾರು ೨೫ ವರ್ಷಗಳಲ್ಲಿ ಕೇವಲ ಪ್ರಭಾರಿ ನಿರ್ದೇಶಕರೇ ಕಾರ್ಯ ನಿರ್ವಹಿಸಿದ್ದಾರೆ. ಇಂತಹ ಪ್ರತಿಕೂಲ ಪರಿಸ್ಥಿತಿಯಲ್ಲಿಯೂ ಸಂಸ್ಥೆ ಮಾಡಿದ ಸಾಧನೆ ಗಮನಾರ್ಹವಾಗಿದೆ.

ಕರ್ನಾಟಕದ ಇತಿಹಾಸ, ಪುರಾತತ್ವ ಶೋಧ, ಸಂಸ್ಕೃತಿ, ಪರಂಪರೆ ಮುಂತಾದ ಕ್ಷೇತ್ರಗಳಲ್ಲಿ ಆಕರ ಸಾಮಗ್ರಿ ಸಂಗ್ರಹಿಸಿದ್ದು, ಕೃಷ್ಣಾ, ತುಂಗಭದ್ರಾ, ಮಾಂಜ್ರಾ, ಮಲಪ್ರಭಾ ನದಿಕೊಳ್ಳಗಳ ಪ್ರದೇಶದ ಆಯ್ದ ಹಳ್ಳಿಗಳಲ್ಲಿ ಅದರಲ್ಲೂ ಹಲಸಿ, ಹಳ್ಳೂರು, ವಡಗಾಂವ ಮುಂತಾದ ಪ್ರದೇಶಗಳಲ್ಲಿ ಉತ್ಖನನ ನಡೆಸಿದ್ದು, ಧಾರವಾಡ, ಬೆಳಗಾವಿ ಜಿಲ್ಲೆಗಳಲ್ಲಿ ಶಾಸನ ಪರಿವೀಕ್ಷಣೆ ನಡೆಸಿದ್ದು ಮತ್ತು ಶಾಸನ ಸಂಪುಟಗಳನ್ನು, ಹಸ್ತಪ್ರತಿ ಸೂಚಿಗಳನ್ನು ಪ್ರಕಟಿಸಿದ್ದು ಮಹತ್ವದ ಶೋಧನೆಗಳಾಗಿವೆ.

ಕನ್ನಡ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಬ್ರಹ್ಮಶಿವನ 'ಸಮಯ ಪರೀಕ್ಷೆ', ಚಾವುಂಡ ರಾಯನ 'ಶಲಾಕಾಪುರುಷ ಚರಿತ್ರೆ' 'ಕವಿಜಿಹ್ವಾಬಂಧನ', 'ಮದನತಿಲಕ', 'ಐರಾವತ', 'ವಿರೂಪಾಕ್ಷ ವಸಂತೋತ್ಸವ' ಮುಂತಾದ ಗ್ರಂಥಗಳು ಅಲ್ಲದೆ ಕಲೆ, ಸಂಸ್ಕೃತಿಗಳಿಗೆ ಸಂಬಂಧಿಸಿದ ಸಂಶೋಧನಾತ್ಮಕವಾದ ೧೧ ಪ್ರಬಂಧಗಳನ್ನೂ ಪ್ರಕಟಿಸಲಾಗಿದೆ. ವಿದ್ವಾಂಸರು ನಡೆಸಿಕೊಟ್ಟ ವಿಶೇಷ ಉಪನ್ಯಾಸಗಳ ಸಂಗ್ರಹ, ಅಲ್ಲದೆ ಸಂಶೋಧಕರು ವಿವಿಧ ಸಂಶೋಧನ ಯೋಜನೆಗಳನ್ನು ಹಾಕಿಕೊಂಡು ಪೂರ್ಣಗೊಳಿಸಿದ ಸಂಶೋಧನ ವರದಿಗಳು ಹೀಗೆ ಸುಮಾರು ೮೦ಕ್ಕೂ ಹೆಚ್ಚು ಸಂಖ್ಯೆಯ ಕೃತಿಗಳನ್ನು ಸಂಸ್ಥೆಯಿಂದ ಪ್ರಕಟಿಸಲಾಗಿದೆ.

ಕುರಿತ ಪ್ರೌಢ ಸಂಶೋಧನ ಲೇಖನಗಳು ಪ್ರಕಟಗೊಳ್ಳುತ್ತಲಿವೆ. ಜೊತೆಗೆ ಸ್ಥಳೀಯ ಜಾನಪದ ಪ್ರದರ್ಶನ ಕಲೆಗಳ ಸಂಪನ್ಮೂಲ ಕೇಂದ್ರ ಮತ್ತು ಎಂ.ಜಿ.ಎಂ, ಕಾಲೇಜು ಇವುಗಳ ಸಹಯೋಗದಲ್ಲಿ ನಡೆದ ವಿವಿಧ ಚಟುವಟಿಕೆಗಳ ಸಚಿತ್ರ ವರದಿಗಳೂ ಇದರಲ್ಲಿ ದಾಖಲಾಗಿರುತ್ತವೆ. ಹೀಗೆ ಕರಾವಳಿ ಕರ್ನಾಟಕದ ಒಂದು ಅಪರೂಪದ ಸಂಶೋಧನ ಸಂಸ್ಥೆಯಾಗಿ ಗೋವಿಂದ ಪೈ ಸಂಶೋಧನ ಸಂಸ್ಥೆ ಕಂಗೊಳಿಸಿದೆ.

ಕನ್ನಡ ವಿಶ್ವವಿದ್ಯಾಲಯ ಹಂಪಿ

ವಿಶ್ವವಿದ್ಯಾಲಯಗಳು ಮನುಷ್ಯನ ಬೌದ್ಧಿಕತೆಯನ್ನು, ವಿಚಾರಶಕ್ತಿಯನ್ನು ಹೆಚ್ಚಿಸುವ ಉನ್ನತ ಶಿಕ್ಷಣಕೇಂದ್ರಗಳು. ಸಂಶೋಧನೆಯೂ ಒಂದರ್ಥದಲ್ಲಿ ಬೌದ್ಧಿಕತೆ ಮತ್ತು ವಿಚಾರಶೀಲತೆಗಳಿಗೆ ಸಂಬಂಧಿಸಿದ ಉನ್ನತ ಚಟುವಟಿಕೆ. ಸಂಶೋಧನೆಗಳು ಮನುಷ್ಯನ ಅರಿವಿನ ವಿಸ್ತರಣೆಗೆ ಹೇಗೆ ಕಾರಣವಾಗುವಂಥವುಗಳೋ ಹಾಗೆ ವಿಶ್ವವಿದ್ಯಾಲಯಗಳಲ್ಲಿನ ಸಂಶೋಧನೆಗಳೂ ವಿದ್ಯೆಯ ಸೃಷ್ಟಿಗೆ, ಅರಿವಿನ ವಿಸ್ತರಣೆಗೆ ಸಂಬಂಧಿಸಿದವುಗಳು. ವಿಶ್ವವಿದ್ಯಾಲಯಗಳಲ್ಲಿನ ಒಂದೊಂದು ಅಧ್ಯಯನ ಸಂಶೋಧನ ವಿಭಾಗವೂ ಈ ಕಾರ್ಯವನ್ನು ಮಾಡಲು ಕಟಿಬದ್ಧವಾಗಿರುತ್ತದೆ. ಜೊತೆಗೆ ಜ್ಞಾನಾಸಕ್ತ ವಿದ್ಯಾರ್ಥಿಗಳಿಗೆ ಪರಿಣತ ಅಧ್ಯಾಪಕರಿಂದ ಬೋಧನೆ ಮತ್ತು ಈ ಚಟುವಟಿಕೆಗಳ ಮೂಲಕ ಅವರ ಅರಿವಿನ ಪರಿಧಿಯನ್ನು ಹೆಚ್ಚಿಸುವ ಕಾರ್ಯವನ್ನು ಅವು ಮಾಡುತ್ತವೆ. ವಿಶ್ವವಿದ್ಯಾಲಯಗಳಿಗೆ ವಿಷಯದ ಸೀಮೆಯೇ ಇಲ್ಲ. ಅವು ಉನ್ನತ ಜ್ಞಾನ ಕೇಂದ್ರಗಳಾಗಿದ್ದುದರಿಂದ ವಿಶ್ವ ವಿದ್ಯಾಲಯಗಳಲ್ಲಿ ನಡೆಯುವ ಶೈಕ್ಷಣಿಕ ಚಟುವಟಿಕೆಗಳು ಸಂಶೋಧನ ಕೇಂದ್ರಿತವಾಗಿಯೇ ನಡೆಯುತ್ತವೆ. ವಿಶ್ವವಿದ್ಯಾಲಯಗಳಲ್ಲಿ ಯಾವುದೇ ವಿಷಯಕ್ಕೆ ಸಂಬಂಧಿಸಿದ ಶೈಕ್ಷಣಿಕ ಚಟುವಟಿಕೆ ಜ್ಞಾನ ಕ್ಷೇತ್ರದ ವಿಸ್ತಾರಕ್ಕೆ ಸಂಬಂಧಿಸಿದ್ದು. ಈ ದೃಷ್ಟಿಯಿಂದ ಯಾವ ಯಾವ ವಿಶ್ವವಿದ್ಯಾಲಯಗಳಲ್ಲಿ ಕನ್ನಡವಿಷಯವು ಇದೆಯೋ ಅಲ್ಲಿ ಸಂಶೋಧನೆಯ ಮಟ್ಟ ಬೇರೆ ಬೇರೆಯಾಗಿರಬಹುದಾದರೂ ಒಂದಿಲ್ಲೊಂದು ರೀತಿಯಲ್ಲಿ ಕನ್ನಡ ಸಂಶೋಧನೆ ನಡೆದೇ ಇರುತ್ತದೆ. ಹೀಗಾಗಿ ಕರ್ನಾಟಕದಲ್ಲಿ ಮೈಸೂರು, ಧಾರವಾಡ, ಬೆಂಗಳೂರು, ಕಲಬುರ್ಗಿ, ಮಂಗಳೂರು, ಶಿವಮೊಗ್ಗ, ತುಮಕೂರು, ದಾವಣಗೆರೆ, ಬೆಳಗಾವಿ, ವಿಜಯಪುರ, ಬಳ್ಳಾರಿಗಳಲ್ಲಿರುವ ಮತ್ತು ಕರ್ನಾಟಕದ ಹೊರಗೆ ಇರುವ ಮುಂಬೈ, ಬನಾರಸ, ಚೆನ್ನೈ, ಮಧುರೈ ಮುಂತಾದ ವಿಶ್ವವಿದ್ಯಾಲಯಗಳಲ್ಲಿ ಕನ್ನಡ ವಿಭಾಗಗಳು ಒಟ್ಟಾರೆ ಕನ್ನಡ ಸಾಹಿತ್ಯ ಸಂಶೋಧನೆಯ ಕ್ಷೇತ್ರದಲ್ಲಿ ಸಾಕಷ್ಟು ಕಾರ್ಯಗಳನ್ನು ಮಾಡುತ್ತಲೇ ಬಂದಿವೆ. ಕನ್ನಡ ಸಂಶೋಧನ ಸಾಹಿತ್ಯ ಚರಿತ್ರೆಯಲ್ಲಿ ವಿಶ್ವವಿದ್ಯಾಲಯದ ಪ್ರಾಧ್ಯಾಪಕರ ಕಾಣಿಕೆ ಸಾಕಷ್ಟು ದೊಡ್ಡದೇ ಇದೆ. ಈ ಲೇಖನದ ವ್ಯಾಪ್ತಿ ಮತ್ತು ಶಿರ್ಷಿಕೆಗೆ ಅವು ಒಳಪಡುವುದಿಲ್ಲವಾದ್ದರಿಂದ ಅವುಗಳನ್ನು ಇಲ್ಲಿ ಪರಿಗಣಿಸಿರುವುದಿಲ್ಲ. ಕನ್ನಡ ಸಂಶೋಧನೆಗಾಗಿ ರೂಪಿತವಾದ ಏಕೈಕ ವಿಶ್ವವಿದ್ಯಾಲಯವೆಂದರೆ ಹಂಪಿ ಕನ್ನಡ ವಿಶ್ವವಿದ್ಯಾಲಯ. ಆದ್ದರಿಂದ ಅದರ ಸಾಧನೆಯನ್ನು ಮಾತ್ರ ಇಲ್ಲಿ ಸಂಕ್ಷೇಪದಲ್ಲಿ ವಿವರಿಸಲಾಗಿದೆ.

ಇರುವ ವಿಶ್ವವಿದ್ಯಾಲಯಗಳ ಕನ್ನಡ ವಿಭಾಗಗಳಿಗಿಂತ ಭಿನ್ನವಾಗಿ ಕನ್ನಡಕ್ಕಾಗಿಯೇ ಒಂದು ಪ್ರತ್ಯೇಕ ವಿಶ್ವವಿದ್ಯಾಲಯ ಏನು ಮಾಡಬಲ್ಲುದು? ಆದ್ದರಿಂದ ಅದರ ಅವಶ್ಯಕತೆಯೇ ಇಲ್ಲವೆಂದು ಕನ್ನಡದ ಕಟ್ಟಾಳು ಡಾ.ಹಾಮಾನಾ ಅವರಂಥ ಹಿರಿಯ ಸಾಹಿತಿಗಳು ಪ್ರತಿಪಾದಿಸಿದ್ದರು. ಆದರೆ ಕನ್ನಡ ವಿಶ್ವವಿದ್ಯಾಲಯ ಸ್ಥಾಪನೆಯಾಗಿ ಈಗ ಎರಡು ದಶಕಗಳು ಕಳೆದಿವೆ. ಹಾಮಾನಾ ಅವರ ಮಾತು ಹುಸಿಯಾಗಿದೆ. ಇತರ ವಿಶ್ವವಿದ್ಯಾಲಯಗಳಿಗಿಂತ

ಸಾಮಗ್ರಿಯನ್ನು ಕಲೆಹಾಕಿ ಕನ್ನಡದ ಲಿಪಿಯಲ್ಲಿ ಮುಖ್ಯ ಶಬ್ದಗಳನ್ನು ನಮೂದಿಸಿ, ಉಚ್ಚಾರವನ್ನು ಅಂತಾರಾಷ್ಟ್ರೀಯ ಲಿಪಿಯಲ್ಲಿ ಕಾಣಿಸಿ, ಕನ್ನಡ ಇಂಗಿಷ್ ಭಾಷೆಗಳಲ್ಲಿ ಅರ್ಥವನ್ನು ವಿವರಿಸಿ ಶಬ್ದಗಳ ಸಾಂಸ್ಕೃತಿಕ ಹಿನ್ನೆಲೆ, ಶಬ್ದಗಳ ಬಳಕೆಯ ವಿವರ, ಗಾದೆಗಳು, ಉದಾಹರಣಗಳ ಮೂಲಕ ಪದಗಳ ಇತಿಹಾಸವನ್ನು ಇಲ್ಲಿ ಎಳೆ ಎಳೆಯಾಗಿ ಬಿಚ್ಚಿಡಲಾಗಿದೆ. ಅದರ ಶಾಸ್ತ್ರೀಯತೆ, ಅಚ್ಚುಕಟ್ಟುತನ, ವಿಷಯ ಸಾಮಗ್ರಿಯ ಅಗಾಧತೆ ಎಲ್ಲವೂ ಮಾದರಿಯಾಗಿ ನಿಲ್ಲುವಂತಿವೆ. ಅನೇಕ ಸಂಶೋಧನ ಯೋಜನೆಗಳನ್ನು ಈ ತುಳು ನಿಘಂಟು ಪ್ರಚೋದಿಸುವಂತಹ ಸಾಮರ್ಥ್ಯ ಹೊಂದಿದೆ.

ಒಂದು ಸಂಶೋಧನ ಸಂಸ್ಥೆ ಹಮ್ಮಿಕೊಳ್ಳಬಹುದಾದ ಕಮ್ಮಟಗಳು, ವಿಚಾರಗೋಷ್ಠಿಗಳು, ಗ್ರಂಥ ಪ್ರಕಟಣೆ, ಪ್ರಾಚ್ಯವಸ್ತುಸಂಗ್ರಹಾಲಯ ಸ್ಥಾಪನೆ ಮತ್ತು ನಿರ್ವಹಣೆ, ಹಸ್ತಪ್ರತಿಗಳ ಸಂಗ್ರಹ, ಸಂಶೋಧನ ಯೋಜನೆಗಳ ಅನುಷ್ಠಾನ ಮುಂತಾದ ಎಲ್ಲ ಸಂಶೋಧನ ಚಟುವಟಿಕೆಗಳೂ ಗೋವಿಂದ ಪೈ ಸಂಶೋಧನ ಕೇಂದ್ರದಲ್ಲಿ ನಡೆಯುತ್ತಲಿವೆ.

ರಾಷ್ಟ್ರಕವಿ ಗೋವಿಂದ ಪೈ ಅವರು ಮೂಲತಃ ಕವಿಗಳು, ವಿಮರ್ಶಕರು, ಜೊತೆಗೆ ಸಂಶೋಧಕರೂ ಕೂಡ. ಅವರ ಬರವಣಿಗೆ ವಿಶಿಷ್ಟ ಮತ್ತು ಅಪೂರ್ವ. ಅವರ ಪ್ರಭಾವ ಕರಾವಳಿ ವಿದ್ವಾಂಸರ ಮೇಲೆ, ಕವಿಗಳ ಮೇಲೆ ಅಚ್ಚಳಿಯದಾಗಿದೆ. ಒಂದು ವಿಶಿಷ್ಟ ವಿದ್ವತ್ ಪರಂಪರೆಯನ್ನು ಕರಾವಳಿ ಕರ್ನಾಟಕದಲ್ಲಿ ರೂಪಿಸಲು ಗೋವಿಂದ ಪೈಗಳ ಹೆಸರಿನಲ್ಲಿರುವ ಈ ಸಂಶೋಧನ ಸಂಸ್ಥೆ ಯಶಸ್ವಿಯಾಗಿದೆ. ಗೋವಿಂದ ಪೈ ಅವರ ಸಮಗ್ರ ಕೃತಿಗಳನ್ನು ಆಂಗ್ಲ ಮತ್ತು ಕನ್ನಡ ಭಾಷೆಯಲ್ಲಿ ಸಂಸ್ಥೆ ಪ್ರಕಟಿಸಿದೆ. ಡಾ.ಪಾದೇಕಲ್ಲು ವಿಷ್ಣು ಭಟ್ಟ ಅವರ ಕನ್ನಡ ತುಳು ಪದಪ್ರಯೋಗಕೋಶ, ಸೇಡಿಯಾಪು ಛಂದಸ್ಸಂಪುಟ, ಭಾನುಮತಿಯನೆತ್ತ, ಸಾಹಿತ್ಯಸಂಪುಟ ಮುಂತಾದ ಅನೇಕ ಮೌಲಿಕ ಕೃತಿಗಳು ಅಲ್ಲದೆ ಆರ್. ಗಣೇಶ ಅವರ ದ್ರಾವಿಡ ಛಂದಸ್ಸು, ಎ.ವಿ.ನಾವಡ ಅವರ ಕನಕಕಾವ್ಯಸಂಪುಟ ಎಲ್ಲಕ್ಕೂ ಹೆಚ್ಚಾಗಿ ಎಚ್.ಕೃಷ್ಣಭಟ್ಟ ಮತ್ತು ಮುರಳೀಧರ ಉಪಾಧ್ಯ ಅವರ ಸಂಪಾದಕತ್ವದಲ್ಲಿ ಪ್ರಕಟವಾದ ಗೋವಿಂದ ಪೈ ಸಂಶೋಧನ ಸಂಪುಟ ಇಂತಹ ನೂರಾರು ಶ್ರೇಷ್ಠ ಕೃತಿಗಳನ್ನು ಈ ಸಂಸ್ಥೆ ಪ್ರಕಟಿಸಿದೆ. ಮಂಜೇಶ್ವರ ಗೋವಿಂದ ಪೈ ಅವರ ಹೆಸರಿನಲ್ಲಿ ಸಂಶೋಧನ ಕ್ಷೇತ್ರದ ದಿಗ್ಗಜರಿಗೆ ನೀಡುವ ಪ್ರಶಸ್ತಿಯನ್ನು ಸ್ಥಾಪಿಸಿದೆ. ಸೇಡಿಯಾಪು ಕೃಷ್ಣಭಟ್ಟ ಸಂಶೋಧನ ಪ್ರಶಸ್ತಿ, ಕಡೆಂಗೋಡ್ಲು ಕಾವ್ಯ ಪ್ರಶಸ್ತಿಗಳಲ್ಲದೆ ಹತ್ತಾರು ದತ್ತಿ ಪ್ರಶಸ್ತಿಗಳನ್ನೂ ಸ್ಥಾಪಿಸಿ ಸಾಹಿತ್ಯ ಸಂಸ್ಕೃತಿ ಕ್ಷೇತ್ರದ ಸಾಧಕರನ್ನು ಗೌರವಿಸುವ ಸತ್ಸಂಪ್ರದಾಯವನ್ನು ಈ ಸಂಸ್ಥೆ ಹಾಕಿಕೊಂಡು ಚಾಚೂ ತಪ್ಪದೆ ನಿಯತವಾಗಿ ನಡೆಸಿಕೊಂಡುಬಂದಿದೆ. ಕರ್ನಾಟಕದ ಯಾವ ಸಂಶೋಧನ ಸಂಸ್ಥೆಯೂ ಇಷ್ಟೊಂದು ಪ್ರಮಾಣದ ಪ್ರಶಸ್ತಿಗಳನ್ನು ಸ್ಥಾಪಿಸಿಲ್ಲ. ಕನ್ನಡ, ಇಂಗ್ಲಿಷ್, ತುಳು ಹೀಗೆ ಬಹುಭಾಷಿಕ ವಿದ್ವಾಂಸರ ಪಡೆಯೇ ಈ ಸಂಸ್ಥೆಯ ಆಸ್ತಿಯಾಗಿದ್ದು ಕರ್ನಾಟಕದ ವಿದ್ವತ್ ಪರಂಪರೆಗೆ ಬಹುದೊಡ್ಡ ಕಾಣಿಕೆಯನ್ನು ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಸಂಸ್ಥೆ ನೀಡುತ್ತಬಂದಿದೆ. ಗುಣಗೌರವಕ್ಕೆ, ಸುಸಂಸ್ಕೃತಿಗೆ ಹೆಸರಾದ ಕರಾವಳಿ ಕರ್ನಾಟಕದ ವಿದ್ವಾಂಸರು ಪ್ರಾದೇಶಿಕತೆಯೊಡನೆ ಭಾರತೀಯ ವಿಶಾಲ ಸಾಂಸ್ಕೃತಿಕ ಅರಿವು ಹೆಚ್ಚಿಸುವ ಕಾರ್ಯವನ್ನು ಈ ಸಂಸ್ಥೆಯ ಮೂಲಕ ನೆರವೇರಿಸುತ್ತಿದ್ದಾರೆ.

ಕ್ರಿ.ಶ.೨೦೧೦ ರಿಂದ ತುಳುವ ಎಂಬ ತ್ರೈಮಾಸಿಕ ಮತ್ತು ಇಂಗ್ಲಿಷ್ ಭಾಷೆಯಲ್ಲಿ Prasaranga ಎಂಬ ವಾರ್ಷಿಕ ಪತ್ರಿಕೆಯನ್ನು ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ ಅಚ್ಚುಕಟ್ಟಾಗಿ ಪ್ರಕಟಿಸುತ್ತಬಂದಿದೆ. 'ಪ್ರಸಾರಾಂಗ'ದ ೪೧ ವಾರ್ಷಿಕ ಸಂಪುಟಗಳು ಪ್ರಕಟವಾಗಿವೆ. ಇದರಲ್ಲಿ ಸಾಹಿತ್ಯ ಸಂಸ್ಕೃತಿ, ಜಾನಪದ, ಭಾಷೆ ಮುಂತಾದ ಕ್ಷೇತ್ರಗಳನ್ನು

ಇಷ್ಟೊಂದು ಕಡಿಮೆ ಅವಧಿಯಲ್ಲಿ ಸೋಪಜ್ಞವಾದ ಸಂಶೋಧನಾ ಪರಿಭಾಷೆಗಳನ್ನು ಕನ್ನಡ ಅರಿವಿನ ಧಾರೆಯಲ್ಲಿ ಇಷ್ಟೊಂದು ಪ್ರಮಾಣದಲ್ಲಿ ಸೃಷ್ಟಿಸಲು ಸಾಧ್ಯವಾಗಿಲ್ಲ. ಅ ಮಟ್ಟಿಗೆ ಹೇಳುವುದಾದರೆ; ಸ್ವತಃ ಇದು ಕನ್ನಡ ವಿಶ್ವವಿದ್ಯಾಲಯದ ಸಂಶೋಧನಾ ಅಧ್ಯಯನ ವಿಧಾನ. ...ಜಡವಾದ ಹಳೆಯ ಮಾದರಿಗಳನ್ನು ಭಗ್ನಪಡಿಸಿ ವರ್ತಮಾನದ ಸಮಗ್ರ ದಾರಿಯ ಆಲೋಚನೆಗಳನ್ನು ನಿರ್ಮಿಸುವಲ್ಲಿ ಕನ್ನಡ ವಿಶ್ವವಿದ್ಯಾಲಯವು ಮುಂದಿದೆ..." (ಅದೇ–ಪುಟ೧೧–೧೨, ಕನ್ನಡ ವಿಶ್ವವಿದ್ಯಾಲಯದ ಪಯಣ: ಡಾ.ಮೊಗಳ್ಳಿ ಗಣೇಶ್. ವಿಶೇಷ ಸಂಚಿಕೆ ೧೧೧–೧೧೪ ಸಂಪಾದಕರು: ಡಾ.ಎ.ಎಸ್.ಪ್ರಭಾಕರ, ಡಿಸೆಂಬರ್ ೨೦೧೨).

ಕನ್ನಡ ವಿಶ್ವವಿದ್ಯಾಲಯವು ಸಾಗಿಬಂದಿರುವ ಸಂಶೋಧನಪಥದ ಬಗೆಗೆ ಹೇಳಿದ ಮೇಲಿನ ಮಾತುಗಳು ಕನ್ನಡ ಸಂಶೋಧನೆಯ ಹೊಸ ದಿಗಂತಗಳನ್ನು ತೋರಿಸುವಲ್ಲಿ ಮಾಡಿದ ಪ್ರಯತ್ನಗಳ ದಿಕ್ಸೂಚಿಯಾಗಿವೆ. ಕನ್ನಡ ವಿಶ್ವವಿದ್ಯಾಲಯವು ಈ ನಿಟ್ಟಿನಲ್ಲಿ ಹಮ್ಮಿಕೊಂಡ ಸಂಶೋಧನ ಕಾರ್ಯಗಳು ನಿಜಕ್ಕೂ ಶ್ಲಾಘನೀಯ. ಇವೆಲ್ಲವೂ ಯಥಾವತ್ ಅನುಕರಣೀಯವೆಂದು ಹೇಳಲಾಗುವುದಿಲ್ಲವಾದರೂ ಮಾಡಿದ ನವೀನತಮ ಪ್ರಯೋಗಗಳು ಸ್ವಾಗತಾರ್ಹವಾಗಿವೆ. ಕನ್ನಡ ವಿಶ್ವವಿದ್ಯಾಲಯವು ಇತರ ವಿಶ್ವ ವಿದ್ಯಾಲಯಗಳಲ್ಲಿರುವಂತೆ ಸಾಂಪ್ರದಾಯಿಕ ಅಧ್ಯಯನ ವಿಭಾಗಗಳನ್ನು ಹೊಂದದೆ ಮೇಲೆ ಹೇಳಿದಂತೆ ಹೊಸಬಗೆಯ ಸಂಶೋಧನಮಾರ್ಗದಲ್ಲಿ ತೊಡಗಿಕೊಳ್ಳಲು ಅನುಕೂಲ-ವಾಗುವಂತಹ ಅಧ್ಯಯನ ವಿಭಾಗಗಳನ್ನು ಹೊಂದಿರುವುದು ವಿಶೇಷ. ಹಸ್ತಪ್ರತಿಶಾಸ್ತ್ರ, ಶಾಸನಶಾಸ್ತ್ರ, ಅಭಿವೃದ್ಧಿ ಅಧ್ಯಯನ, ದ್ರಾವಿಡ ಸಂಸ್ಕೃತಿ ಅಧ್ಯಯನ, ಭಾಷಾಭಿವೃದ್ಧಿ ಅಧ್ಯಯನ, ಬುಡಕಟ್ಟು ಅಧ್ಯಯನ ಹೀಗೆ ಹೊಸ ಅಧ್ಯಯನ ವಿಭಾಗಗಳನ್ನು ಕನ್ನಡ ವಿಶ್ವವಿದ್ಯಾಲಯವು ಹೊಂದಿದೆ. ಇದರಿಂದ ಆಯಾ ಅಧ್ಯಯನ ವಿಭಾಗಗಳು ವಿಶಿಷ್ಟ ಸಂಶೋಧನ ಯೋಜನೆಗಳನ್ನು ರೂಪಿಸಿಕೊಂಡು ಕಾರ್ಯಮಾಡಲು ಸಾಧ್ಯವಾಗಿದೆ. ಉದಾಹರಣೆಗೆ ಬುಡಕಟ್ಟು ಅಧ್ಯಯನ ವಿಭಾಗವು 'ಅರಣ್ಯ ಮತ್ತು ಕರ್ನಾಟಕದ ಬುಡಕಟ್ಟು ಸಮುದಾಯಗಳ ಜಾನಪದ' ಎಂಬ ವಿಷಯದ ಮೇಲೆ ಅಧ್ಯಯನ ಯೋಜನೆಯೊಂದನ್ನು ಕೈಕೊಂಡಿದೆ. ಅರಣ್ಯಗಳನ್ನೇ ತಮ್ಮ ಬದುಕಿಗೆ ಆಶ್ರಯವಾಗಿಸಿಕೊಂಡು ಬಂದ ಬುಡಕಟ್ಟು ಜನಾಂಗಗಳು ರಾಷ್ಟ್ರದ ಅರಣ್ಯ ಸಂರಕ್ಷಣ ಕಾನೂನಿನ ದವಡೆಯಲ್ಲಿ ಸಿಕ್ಕು ನಿರ್ಗತಿಕರಾಗಿ ದುರ್ಭರಸ್ಥಿತಿಗಿಳಿದರು. ಇಂಥವರ ಬದುಕು ಹಸನಾಗುವಂತೆ ಏನು ಮಾಡಬಹುದೆಂಬುದನ್ನು ಅಂದರೆ ಅರಣ್ಯವಾಸಿ ಬುಡಕಟ್ಟು ಜನರ ಜೀವನ ವಿಧಾನ ಸುಧಾರಣೆಯನ್ನು ಅವರ ಜಾನಪದ ರೀತಿಯಲ್ಲೇ ತಿಳಿವಳಿಕೆ ನೀಡುವ ಮೂಲಕ ಮಾಡುವುದು, ಅವರ ಜೀವನರೀತಿ ನೀತಿಗಳನ್ನು ಆಧುನಿಕತೆಗೆ ಹೊಂದಿಸಲು ಯತ್ನಿಸುವುದು, ಅವರ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಸ್ಥಿತಿಗತಿಗಳನ್ನು ವಿವೇಚಿಸುವುದು ಇವೇ ಮುಂತಾದ ಅಂಶಗಳನ್ನು ವ್ಯವಸ್ಥಿತವಾಗಿ ಅಧ್ಯಯನಕ್ಕೆ ಅಳವಡಿಸುವುದು ಈ ಯೋಜನೆಯ ಉದ್ದೇಶ. ಜಾಗತೀಕರಣ, ಯಾಂತ್ರೀಕರಣಗಳಿಂದಾಗಿ ಸಂಪರ್ಕಕ್ರಾಂತಿಯಾಗುತ್ತಿರುವ ಈ ಕಾಲದಲ್ಲಿ ಬುಡಕಟ್ಟು ಜನಾಂಗದವರ ಸಾಂಸ್ಕೃತಿಕ ಅಸ್ಮಿತೆಗಳು ನಾಶವಾಗುತ್ತಿವೆ. ಅವುಗಳನ್ನು ಉಳಿಸಿಕೊಳ್ಳುವ ಮತ್ತು ಅವರ ಸಂಸ್ಕೃತಿ ಸಂಗತಿಗಳನ್ನು ದಾಖಲಿಸುವಲ್ಲಿ ಈ ಯೋಜನೆ ಅತ್ಯಂತ ಮಹತ್ವದ್ದು ಎನಿಸಿದೆ.

ಕನ್ನಡ ವಿಶ್ವವಿದ್ಯಾಲಯ ಹೇಗೆ ಭಿನ್ನವಾಗಿ ಕೆಲಸವನ್ನು ಮಾಡಬಲ್ಲುದೆಂಬುದನ್ನು ಸಾಬೀತುಮಾಡಿ ತೋರಿಸಿದೆ. ಕನ್ನಡ ವಿಶ್ವವಿದ್ಯಾಲಯವನ್ನು ಹೊರತುಪಡಿಸಿದರೆ ಉಳಿದ ವಿಶ್ವವಿದ್ಯಾಲಯಗಳು ಕನ್ನಡ ಸಂಶೋಧನೆಯನ್ನು ಬರೀ ಒಂದು ಶಿಕ್ಷಣ ವ್ಯವಸ್ಥೆಯ ಚೌಕಟ್ಟಿನಲ್ಲಿ ಸಿದ್ಧಾಂತಗಳಿಗೆ ಕಟ್ಟುಬಿದ್ದು ನಡೆಸಿದವು. ಕನ್ನಡ ವಿಶ್ವವಿದ್ಯಾಲಯವು ಮೊದ ಮೊದಲು ಸಂಶೋಧನೆಯ ಇಂಥದೇ ಗುರಿಯನ್ನು ಹೊಂದಿತ್ತು ಎನಿಸಿದರೂ ಬರಬರುತ್ತ ಅದರ ವ್ಯುತ್ಪತ್ತಿ ಸಮಾಜಮುಖಿಯಾಗಿಯೂ ಮುಂದುವರಿಯಿತು. ಸಂಶೋಧನೆ ಬರೀ ಶಿಷ್ಟ ವಿದ್ವಾಂಸರ ಸೃಷ್ಟಿಯಾಗದೆ ಸಮಾಜದ ಅತಿಕೆಳಸ್ತರದ ಜನರ ಬದುಕಿನ ಬೇರುಗಳನ್ನೂ ಸತ್ಯಗಳನ್ನೂ ಬಹು ಜನಕ್ಕೆ ಶ್ರುತಪಡಿಸುವಂತಿರಬೇಕು ಎಂಬುದನ್ನು ತೋರಿಸಿಕೊಟ್ಟಿತು. ಜ್ಞಾನ ಕೇವಲ ಕೆಲವೇ ಉಚ್ಚವರ್ಗದವರ ಖಾಸಗಿ ಆಸ್ತಿಯಲ್ಲ ಸಮಾಜದ ಹತ್ತುಹಲವು ವರ್ಗಗಳಿಗೂ ಅದರ ವಿಸ್ತರಣೆಯಾಗಬೇಕೆಂಬುದನ್ನು ಕನ್ನಡ ವಿಶ್ವವಿದ್ಯಾಲಯ ಮಾಡಿ ತೋರಿಸಿದೆ.

ಕನ್ನಡ ವಿಶ್ವವಿದ್ಯಾಲಯದ ಮುಖಪತ್ರಿಕೆ 'ಚೆಲುವಕನ್ನಡ' ಕನ್ನಡವಿಶ್ವವಿದ್ಯಾಲಯದ ಸಮಗ್ರಸಾಧನೆಯ ನೋಟವನ್ನು ಸ್ಪಷ್ಟವಾಗಿ ನಮೂದಿಸಿದೆ – "... ಮಂಟೆಸ್ವಾಮಿ, ಮಲೆ ಮಾದೇಶ್ವರರಂತಹ ಸ್ಥಳೀಯ ತತ್ತ್ವಜ್ಞಾನಿಗಳ ತಿಳಿವಳಿಕೆಯನ್ನು ಬೆಲೆಗಟ್ಟುವ ಪ್ರಯತ್ನಗಳೂ ಇಲ್ಲಿ ನಡೆದಿವೆ. ಪ್ರಾಚೀನಕಾವ್ಯಗಳ ಮರು ಓದು, ಭಾಷೆಯ ಕುರಿತ ಅಧ್ಯಯನ, ಶಾಸನಗಳ ಅಧ್ಯಯನ, ಹೊಸಭಾಷಾಂತರದ ಸಾಧ್ಯತೆಗಳು, ಮಹಿಳಾ ಅಧ್ಯಯನದ ಹೊಸ ಸಾಧ್ಯತೆಗಳು, ಮೋಡಿಲಿಪಿಯ ಅಧ್ಯಯನಗಳು ಕನ್ನಡದಲ್ಲಿ ಹೊಸ ಅಧ್ಯಯನದ ಸಾಧ್ಯತೆಗಳನ್ನು ಪ್ರಾರಂಭಿಸಿವೆ. ಬುಡಕಟ್ಟುಗಳ, ಅಲೆಮಾರಿಗಳ ಅಧ್ಯಯನಗಳು, ಚರಿತ್ರೆಯನ್ನು ಹೊಸ ಬಗೆಯಲ್ಲಿ ಗ್ರಹಿಸುವ ವಿಧಾನ, ಅಭಿವೃದ್ಧಿಯನ್ನು ಜನಸಾಮಾನ್ಯರ ನೆಲೆಯಲ್ಲಿ ನಿಂತು ಪರಿಭಾವಿಸುವ ಹೊಸ ಕ್ರಮ, ಜನಪದರ ತಿಳಿವಳಿಕೆಯನ್ನು ಆಧುನಿಕ ಅರಿವಿನ ಜೊತೆಗೆ ಸಂವಾದಿಸುವಂತೆ ಮಾಡುವ ಹೊಸ ಸವಾಲುಗಳಿಗೆ ವಿಶ್ವವಿದ್ಯಾಲಯ ಒಡ್ಡಿಕೊಂಡಿದೆ. ಈ ಕಾರಣದಿಂದಲೇ ಕನ್ನಡವಿಶ್ವವಿದ್ಯಾಲಯದ ಅಧ್ಯಯನ ವಿಧಾನಕ್ಕೆ ಒಂದು ವಿಶಾಲ ಜನಪರ ರಾಜಕೀಯ ದೃಷ್ಟಿಕೋನ ಲಭ್ಯವಾಗಿದೆ. ಹೀಗೆಂದು ಕನ್ನಡ ವಿಶ್ವವಿದ್ಯಾಲಯದ ಶೈಕ್ಷಣಿಕ ವಿಧಾನವು ಏಕಾಕೃತಿಯಲ್ಲ. ಲೋಹಿಯಾವಾದ, ಅಂಬೇಡ್ಕರ್‌ವಾದ, ನವಮಾನವತಾವಾದ ಮತ್ತು ಮಾರ್ಕ್ಸವಾದಗಳಿಂದ ಪ್ರಭಾವಿತವಾದ ಹಲವು ವಿದ್ವಾಂಸರು ಇಲ್ಲಿದ್ದಾರೆ. ಈ ಭಿನ್ನ ಸೈದ್ಧಾಂತಿಕ ನೆಲೆಗಳು ವಿಶ್ವವಿದ್ಯಾಲಯದ ವಿಶಾಲ ಜನಪರ ರಾಜಕೀಯ ದೃಷ್ಟಿಕೋನವನ್ನು ಬಲಪಡಿಸುತ್ತಾ ಬಂದಿವೆ. (–ಪುಟ ೯, ಚೆಲುವಕನ್ನಡ ವಿಶೇಷ ಸಂಚಿಕೆ ೧೧೧–೧೧೪ ಸಂಪಾದಕರು: ಡಾ.ಎ.ಎಸ್.ಪ್ರಭಾಕರ, ಡಿಸೆಂಬರ್ ೨೦೧೨) "ಸಾಹಿತ್ಯದ ಅಧ್ಯಯನವನ್ನು ಸಾಮಾಜಿಕ ವಿಜ್ಞಾನಗಳ ಅರಿವಿನ ಭಾಗವಾಗಿ ವಿಸ್ತರಿಸಿದ ಗೌರವವು ಇಡಿಯಾಗಿ ಕನ್ನಡವಿಶ್ವವಿದ್ಯಾಲಯದ ಎಲ್ಲ ವಿಭಾಗಗಳಿಗೂ ಸಲ್ಲಬೇಕು... ಬ್ರಿಟಿಶ್ ಮಾದರಿಯ ಬುಡಕಟ್ಟು ಅಧ್ಯಯನ ವಿಧಾನಗಳನ್ನು ಸಮನಾಗಿ ಜಾನಪದ ಅಧ್ಯಯನ ವಿಭಾಗವು ಹಾಗೂ ಬುಡಕಟ್ಟು ಅಧ್ಯಯನ ವಿಭಾಗವು ನಿರಾಕರಿಸಿ ಮಾನವತಾ ನೆಲೆಯಲ್ಲಿ ಸಮುದಾಯಗಳನ್ನು ಹೇಗೆ ತಮ್ಮ ಕಾಲದ ಬದಲಾವಣೆಗಳಲ್ಲಿ ಅರ್ಥೈಸಬೇಕು ಎಂಬ ವಿಚಾರಗಳನ್ನು ಇಡೀ ಕನ್ನಡ ವಿಶ್ವವಿದ್ಯಾಲಯವು ರೂಪಿಸಿದೆ. .... ತಳಸಮುದಾಯಗಳ ಪರವಾದ, ಮಹಿಳಾ ಪರವಾದ ದಲಿತಪರವಾದ ಹಾಗೂ ಎಲ್ಲ ನೆಲೆಯ ಅಲಕ್ಷಿತ ಜ್ಞಾನಪರಂಪರೆಗಳ ಪರಿಶೋಧದ ನೆಲೆಯಲ್ಲಿ ಕನ್ನಡ ವಿಶ್ವವಿದ್ಯಾಲಯವು ರೂಪಿಸಿರುವ ಸಂಶೋಧನೆಯ ಪರಿಭಾಷೆಗಳೇ ಒಂದು ಬೃಹತ್ ಸಂಪುಟವಾಗಬಲ್ಲವು. ಕನ್ನಡ ನಾಡಿನ ಯಾವೊಂದು ವಿಶ್ವವಿದ್ಯಾಲಯವೂ

ಪ್ರದೇಶವಾರು ೧೦ ಶಾಸನ ಸಂಪುಟಗಳು ಮುಂತಾದವು ಮಹತ್ವದ ಕೃತಿಗಳಾಗಿವೆ. ಕನ್ನಡ ವಿಶ್ವವಿದ್ಯಾಲಯವು ಬಹು ಅಮೂಲ್ಯವಾದ ಗ್ರಂಥಗಳನ್ನು ಪ್ರಕಟಿಸಿದ ಕೀರ್ತಿಗೆ ಭಾಜನವಾಗಿದೆ. ಕೆಲವನ್ನು ಇಲ್ಲಿ ಹೆಸರಿಸುವುದಾದರೆ–ಕನ್ನಡ ಸಂಶೋಧನೆಯ ವೈಧಾನಿಕತೆಗಳು (ಸಂ:ಡಾ.ಅಮರೇಶ ನುಗಡೋಣಿ), ಮಹಾಯಾತ್ರೆ (ಡಾ.ಆರ್.ಸಿ.ಹಿರೇಮಠ), ದಕ್ಷಿಣಭಾರತೀಯ ಜಾನಪದ ಕೋಶ, (ಡಾ.ಸ.ಚಿ.ರಮೇಶ), ಸಮುದಾಯಗಳ ಕನ್ನಡ ಪರಂಪರೆ(ಡಾ.ಮೋಹನ್ ಕುಂಟಾರ್), ನುಡಿಸಂಕರಸಾಹಿತ್ಯ (ಡಾ.ರಹಮತ್ ತರೀಕೆರೆ)ಕನ್ನಡ ತಮಿಳು ತೆಲುಗುಭಾಷೆಗಳ ಆದಿಕಾವ್ಯಗಳ ಭಾಷಿಕ ನೆಲೆಗಳು(ಡಾ.ಮಲ್ಲಿಕಾರ್ಜುನ ವಣೇನೂರ), ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿ ಸೂಚಿ(ಡಾ.ವೀರೇಶ ಬಡಿಗೇರ) ಇಂತಹ ಸಾಕಷ್ಟು ಕೃತಿಗಳಲ್ಲದೆ ಶಾಸನಸಂಪುಟಗಳು, ಕೋಶಗಳು, ವಿವಿಧ ವಿಭಾಗಗಳ ಸಂಶೋಧನ ಯೋಜನೆಗಳ ಪ್ರಕಟನೆಗಳು, ಇನ್ನೂ ನೂರಾರು ಸಂಖ್ಯೆಯ ಅತ್ಯುತ್ತಮ ಗ್ರಂಥಗಳು ಕನ್ನಡ ವಿಶ್ವವಿದ್ಯಾಲಯದ ಜ್ಞಾನವಿಸ್ತರಣೆಯ ಸಾರ್ಥಕ ಕಾರ್ಯದ ಪತಾಕೆಗಳಾಗಿ ನಿಂತಿವೆ. ಕರ್ನಾಟಕದ ಯಾವ ವಿಶ್ವವಿದ್ಯಾಲಯವೂ ಇಷ್ಟೊಂದು ಸಂಖ್ಯೆಯಲ್ಲಿ ವೈವಿಧ್ಯಮಯ ಮತ್ತು ಉನ್ನತಮಟ್ಟದ ಸಂಶೋಧನ ಕೃತಿಗಳನ್ನು ಪ್ರಕಟಿಸಿರುವುದಿಲ್ಲ.

ಕನ್ನಡ ವಿಶ್ವವಿದ್ಯಾಲಯ ಸ್ಥಾಪಿತವಾದದ್ದೇ ಕನ್ನಡ ನಾಡು ನಾಡವರು ಮತ್ತು ನುಡಿಗೆ ಸಂಬಂಧಿಸಿದ ಎಲ್ಲ ವಿಷಯಗಳನ್ನು ಸಂಶೋಧನೆಗೆ ಅಧ್ಯಯನಕ್ಕೆ ಅಳಪಡಿಸುವುದು, ಅವುಗಳ ಜ್ಞಾನ ವಿಸ್ತರಣೆಗೆ ಗ್ರಂಥಗಳನ್ನು ಪ್ರಕಟಿಸುವುದು ಇತ್ಯಾದಿ. ಅದು ಸ್ಥಾಪಿತವಾಗಿ ಎರಡು ದಶಕಗಳ ಅವಧಿಯಲ್ಲಿ ಕನ್ನಡ ಸಂಶೋಧನ ಕ್ಷೇತ್ರಕ್ಕೆ ಅತ್ಯುತ್ತಮ ಕಾಣಿಕೆಯನ್ನು ಸಲ್ಲಿಸಿದೆ. ಒಂದು ಸಾವಿರಕ್ಕೂ ಹೆಚ್ಚು ಸಂಖ್ಯೆಯ ಗ್ರಂಥಗಳನ್ನು ಪ್ರಕಟಿಸಿದೆ. ಇದು ಜ್ಞಾನದ ಅಗಾಧವಾದ ಪ್ರಸಾರವೇ ಸರಿ. ನೂರಾರು ವಿಚಾರಸಂಕಿರಣಗಳನ್ನು ಹತ್ತಾರು ಸಂಶೋಧನ ಯೋಜನೆಗಳನ್ನು ಹಮ್ಮಿಕೊಂಡಿದೆ. ಅದರ ಒಂದೇ ಒಂದು ಕೊರತೆ ಎಂದರೆ ಕರ್ನಾಟಕದ ಹೊರಗೆ ಜಾಗತಿಕ ಮಟ್ಟದಲ್ಲಿ ಈ ಜ್ಞಾನ ಪ್ರಸಾರವಾಗುವಂತಹ ಕಾರ್ಯ ಅಷ್ಟಾಗಿ ನಡೆದಿಲ್ಲ. ಆರಂಭದಲ್ಲಿ ಕೇವಲ ಕನ್ನಡ ಸಂಶೋಧನೆಗಾಗಿ ಎಂದೇ ಹುಟ್ಟಿಕೊಂಡ ಕನ್ನಡ ವಿಶ್ವವಿದ್ಯಾಲಯವು, ಪದವಿಗಾಗಿ ವಿದ್ಯಾರ್ಥಿಗಳನ್ನು ತಯಾರುಮಾಡುವ ಕಾರ್ಖಾನೆಯಂತೆ ಕೆಲಸಮಾಡುವ ಇತರ ವಿಶ್ವವಿದ್ಯಾಲಯಗಳಂತೆ ಬದಲಾಗಿ ತನ್ನ ಆದ್ಯತೆಗಳನ್ನು ಬದಿಗೆ ಸರಿಸುವ ಅನಿವಾರ್ಯತೆಗೆ ಒಳಗಾಯಿತು. ವಿದ್ಯಾರ್ಥಿಗಳ ಆಯ್ಕೆಪ್ರಕ್ರಿಯೆ, ಬೋಧನೆ ಮತ್ತು ಪರೀಕ್ಷೆಗಳನ್ನು ನಡೆಸುವ ಕ್ರಿಯೆ ಪ್ರಾಧ್ಯಾಪಕರ ಬಹಳಷ್ಟು ಸಮಯವನ್ನು ನುಂಗಿಬಿಡುತ್ತದೆ. (ಯುಜಿಸಿ ನಿಯಮಗಳ ಮೇರೆಗೆ ವಾರಕ್ಕೆ ಇಂತಿಷ್ಟು ಸಮಯವನ್ನು ಬೋಧನೆಗೆ ಮೀಸಲಾಗಿಡಲೇಬೇಕು ಎಂಬ ನಿಯಮವಿದೆ) ಕನ್ನಡಿಗರ ಅಪಾರ ಆಶೋತ್ತರಗಳನ್ನು ಹೊತ್ತ ಕನ್ನಡ ವಿಶ್ವವಿದ್ಯಾಲಯ ಇತರ ವಿಶ್ವವಿದ್ಯಾಲಯಗಳ ಸಾಲಿಗೆ ಸೇರಿದಾಕ್ಷಣ ಜನಮಾನಸದಲ್ಲಿ ಹತ್ತರೊಳಗೆ ಇದೂ ಮತ್ತೊಂದು ಎಂಬ ಭಾವನೆ ಮೂಡಿತು. ಹಮ್ಮಿಕೊಳ್ಳುವ ಬೃಹತ್ ಯೋಜನೆಗಳಿಗೆ ತಕ್ಕಂತೆ ಶಿಕ್ಷಕರ ಸಂಖ್ಯೆಯಾಗಲಿ, ಸಹಾಯಕ ಸಿಬ್ಬಂದಿಗಳ ಸಂಖ್ಯೆಯಾಗಲಿ ಬೆಳೆಯಲಿಲ್ಲ. ಅವರಿಗೆ ಉಳಿದ ವಿಶ್ವವಿದ್ಯಾಲಯಗಳಿಗಿಂತ ಹೆಚ್ಚಿನ ಸೌಲಭ್ಯ ಸಿಗಬೇಕಾಗಿದ್ದನ್ನು ಯಾರೂ ಲಕ್ಷಿಸಲೇ ಇಲ್ಲ. ರಾಜ್ಯಸರ್ಕಾರ ಮತ್ತು ಯುಜಿಸಿಯ ನಿಯಮಾವಳಿಗಳ ಚೌಕಟ್ಟಿನಲ್ಲಿ ಅದು ಕೆಲಸಮಾಡಬೇಕಾಯಿತು. ಇಷ್ಟಾಗಿಯೂ ಅದು ನ್ಯಾಕ್ ಸಮಿತಿಯಿಂದ ಪ್ರಥಮದರ್ಜೆಯ ಪ್ರಮಾಣಪತ್ರ ಪಡೆದದ್ದು ಪ್ರಂಶಸನೀಯ. ವಿದೇಶಗಳಲ್ಲಿರುವ ಖಾಸಗಿ ವಿಶ್ವವಿದ್ಯಾಲಯಗಳಂತೆ ಸರ್ವತಂತ್ರ ಸ್ವತಂತ್ರವಾಗಿ ಅದು ಕಾರ್ಯವನ್ನು

ಕನ್ನಡ ಭಾಷೆಗೆ ಶಾಸ್ತ್ರೀಯಭಾಷಾ ಮನ್ನಣೆ ದೊರೆತು ಕನ್ನಡ ಭಾಷಾಧ್ಯಯನಕ್ಕೆ ಹೆಚ್ಚಿನ ಪ್ರಾಶಸ್ತ್ಯ ದೊರೆಯಿತು. ಕರ್ನಾಟಕ ಸರ್ಕಾರ ರಾಜ್ಯದ ಎಲ್ಲ ವಿಶ್ವವಿದ್ಯಾಲಯಗಳಿಗೂ ಉದಾರ ಧನಸಹಾಯ ನೀಡಿ ಕನ್ನಡ ಭಾಷೆಗೆ ಸಂಬಂಧಿಸಿದ ಸಂಶೋಧನ ಯೋಜನೆಗಳನ್ನು ಹಾಕಿಕೊಂಡು ಪೂರ್ಣಗೊಳಿಸಲು ಸೂಚಿಸಿತು. ಶೋಚನೀಯ ಸಂಗತಿಯೆಂದರೆ ಕನ್ನಡ ವಿಶ್ವವಿದ್ಯಾಲಯವನ್ನು ಹೊರತುಪಡಿಸಿ ಬಹುತೇಕ ವಿಶ್ವವಿದ್ಯಾಲಯಗಳು ಗಮನಾರ್ಹವೆನಿಸುವ ಯಾವುದೇ ಯೋಜನೆಗಳನ್ನು ಭಾಷೆಗೆ ಸಂಬಂಧಿಸಿ ರೂಪಿಸಿಕೊಳ್ಳಲಿಲ್ಲ. ರೂಪಿಸಿಕೊಂಡ ಕೆಲವು ಯೋಜನೆಗಳು ನೇರವಾಗಿ ಭಾಷೆಗೆ ಸಂಬಂಧಿಸದೆ ಸಾಂಪ್ರದಾಯಿಕ ಸಾಹಿತ್ಯ, ಸಂಸ್ಕೃತಿಗಳಿಗೆ ಸೀಮಿತವಾಗಿದ್ದವು. ಉದಾಹರಣೆಗೆ ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ವಿಭಾಗವು ಸಂಸ್ಕೃತಿಗೆ ಸಂಬಂಧಿಸಿದ ಮಠಮಾನ್ಯ, ಗುಡಿಗುಂಡಾರ, ಸ್ವರವಚನಹಾಡುಗಾರರ ಮನೆಮಾರು ಮುಂತಾದವುಗಳ ಪ್ರಾಥಮಿಕ ಮಾಹಿತಿ ಸಂಗ್ರಹ ಮಾಡಿ ಪುಸ್ತಕ ಪ್ರಕಟಿಸಿ ಕೋಟಿಗಟ್ಟಲೆ ಹಣ ವೆಚ್ಚಮಾಡಿತು. ಕನ್ನಡ ಭಾಷೆಗೆ ಏನೇನೂ ಸಂಬಂಧವಿಲ್ಲದ ಕೇವಲ ಸಾಂಸ್ಕೃತಿಕ ದಾಖಲೀಕರಣಕ್ಕಾಗಿ ಶಾಸ್ತ್ರೀಯ ಭಾಷೆಯ ಅನುದಾನದಲ್ಲಿ ಇಷ್ಟೊಂದು ವೆಚ್ಚ ಮಾಡಿದ್ದು ನಿಜಕ್ಕೂ ಕನ್ನಡಭಾಷೆ ಮತ್ತು ಸಾಹಿತ್ಯಕ್ಕೆ ಮಾಡಿದ ಘೋರ ಅನ್ಯಾಯವೇ ಸರಿ. ಉಳಿದ ವಿಶ್ವವಿದ್ಯಾಲಯಗಳಲ್ಲಿಯೂ ಇದೇ ಹಾಡು. ಅಲ್ಲಿಯೂ ಎದ್ದುಕಾಣುವ ಯಾವ ಯೋಜನೆಗಳೂ ಭಾಷೆಗೆ ಸಂಬಂಧಿಸಿದಂತೆ ಜರುಗಲಿಲ್ಲ. ಮುಕ್ತ ವಿಶ್ವವಿದ್ಯಾಲಯವಂತೂ ಸಾಮಾನ್ಯ ಪುಸ್ತಕ ಪ್ರಕಟನೆಗೇ ಕೋಟಿಗಟ್ಟಲೆ ಹಣವನ್ನು ಹಾಳುಮಾಡಿದೆ. ಸಾಂಸ್ಥಿಕ ಸಂಶೋಧನೆಗಾಗಿ ಸರ್ಕಾರ ಧಾರಾಳವಾಗಿ ಧನಸಹಾಯ ನೀಡಿದ್ದರೂ ಅದನ್ನು ಪ್ರಾಧ್ಯಾಪಕರು ಹಂಚಿಕೊಂಡು ವೈಯಕ್ತಿಕ ಸಂಶೋಧನ ಯೋಜನೆಯಾಗಿ ಮಾಡಿಕೊಂಡು ಶಾಸ್ತ್ರೀಯ ಭಾಷಾ ಅನುದಾನದ ಮೂಲ ಉದ್ದೇಶವನ್ನೇ ಹಾಳುಗೆಡಹಿದರು. ವಿಶ್ವವಿದ್ಯಾಲಯಗಳಲ್ಲಿ ಕನ್ನಡ ವಿಶ್ವವಿದ್ಯಾಲಯ ಮಾತ್ರ ಕನ್ನಡಕ್ಕೆ ನ್ಯಾಯ ಒದಗಿಸಿದೆ. ಕನ್ನಡ ವಿಶ್ವವಿದ್ಯಾಲಯದ ಕನ್ನಡಭಾಷಾಧ್ಯಯನ ವಿಭಾಗ ಕನ್ನಡ ಪ್ರಾದೇಶಿಕ ಪ್ರಭೇದಭಾಷೆಗಳ ಸಮಗ್ರ ಪರಿವೀಕ್ಷಣೆ, ದಾಖಲೀಕರಣ ಮತ್ತು ಕನ್ನಡ ಪ್ರಾದೇಶಿಕ ಪ್ರಭೇದಗಳ ಕೋಶವನ್ನು ಸಿದ್ಧಪಡಿಸುವ ಯೋಜನೆಯನ್ನು ಕೈಕೊಂಡು ಪೂರ್ಣಗೊಳಿಸಿದೆ. ಕನ್ನಡ ಭಾಷಾಪ್ರಭೇದಗಳ ಬಗ್ಗೆ ದೊಡ್ಡಪ್ರಮಾಣದಲ್ಲಿ ಅಂತಹ ಯಾವ ಅಧ್ಯಯನವೂ ಈವರೆಗೆ ನಡೆಯದಿರುವ ಸಂದರ್ಭದಲ್ಲಿ ಕನ್ನಡ ವಿಶ್ವವಿದ್ಯಾಲಯವು ಈ ಕಾರ್ಯವನ್ನು ಯಶಸ್ವಿಗೊಳಿಸಿದ್ದು ಗಮನಾರ್ಹವಾಗಿದೆ. ಸಮಗ್ರ ಕರ್ನಾಟಕದ ವ್ಯಾಪ್ತಿಯನ್ನಿಟ್ಟುಕೊಂಡು ಇಂತಹ ಸಂಶೋಧನ ಯೋಜನೆಯನ್ನು ಪೂರ್ಣಗೊಳಿಸಿದ್ದು ಕನ್ನಡ ವಿಶ್ವವಿದ್ಯಾಲಯ ಮಾತ್ರ.

ಕರ್ನಾಟಕದ ವಿಶ್ವವಿದ್ಯಾಲಯಗಳ ಕನ್ನಡ ಅಧ್ಯಯನ ಸಂಸ್ಥೆಗಳು ಯೋಜನಾಬದ್ಧವಾದ ಅಂತರ್‌ಶಿಸ್ತೀಯ ಸಂಶೋಧನೆಯ ಕಡೆಗೆ ಹೆಚ್ಚು ಗಮನವನ್ನು ಹರಿಸಿಲ್ಲ. ಕನ್ನಡ ವಿಶ್ವವಿದ್ಯಾಲಯದ ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗವು 'ದ್ರಾವಿಡ ಸಾಹಿತ್ಯ ಚರಿತ್ರೆ'ಯ ಮಾಲಿಕೆಯನ್ನು ಆರಂಭಿಸಿದೆ. ಕನ್ನಡ ವಿಶ್ವವಿದ್ಯಾಲಯ ಎಂ.ಬಿ.ಎಮಿನೊ ಮತ್ತು ಟಿ.ಬರೊ ನಿರ್ಮಿಸಿದ ಜಾಗತಿಕ ಮಹತ್ವದ ದ್ರಾವಿಡಿಯನ್ ಎಟಿಮಾಲೊಜಿಕಲ್ ಡಿಕ್ಷನರಿಯನ್ನು ಕನ್ನಡಕ್ಕೆ ಅನುವಾದಿಸಿಕೊಟ್ಟದ್ದು ಮಹತ್ವದ ಕಾಣಿಕೆಯೇ ಸರಿ. ಹಾಗೆಯೆ ಚರಿತ್ರೆ ಅಧ್ಯಯನ ವಿಭಾಗವು ಹೊರತಂದಿರುವ ಕರ್ನಾಟಕ ಸಂಸ್ಕೃತಿ ಚರಿತ್ರೆ ಸಂಪುಟಗಳು, ಚರಿತ್ರೆ ವಿಶ್ವಕೋಶ, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗದ ಕರ್ನಾಟಕ ದೇವಾಲಯ ಕೋಶ, ಜಿಲ್ಲಾವಾರು ದೇವಾಲಯ ಕೋಶಗಳು, ಶಾಸನಶಾಸ್ತ್ರ ವಿಭಾಗದ ಜಿಲ್ಲಾವಾರು,

ಅಂತರ್ಗತವಾಗಿರುತ್ತದೆ. ಆದಕಾರಣ ಜಾನಪದ ವಿಶ್ವವಿದ್ಯಾಲಯವು ಹಮ್ಮಿಕೊಳ್ಳುವ ಜ್ಞಾನವಿಸ್ತಾರದ ಪ್ರತಿಯೊಂದು ಹೆಜ್ಜೆಯೂ ಸಂಶೋಧನೆಯ ಮೆಟ್ಟಿಲಾಗುತ್ತದೆ. ಈ ದೃಷ್ಟಿಯಿಂದ ಜಾನಪದ ವಿಶ್ವವಿದ್ಯಾಲಯವು ಕನ್ನಡದ ಒಟ್ಟು ಮಾನವಸಂಸ್ಕೃತಿಯ ಬಹು ಮಹತ್ವದ ಬೃಹತ್ ಸಂಶೋಧನ ಸಂಸ್ಥೆಯಾಗಬಹುದಾಗಿದೆ. ಆಧುನಿಕ ಜಾಗತೀಕರಣ, ಯಾಂತ್ರೀಕರಣಗಳ ಭರಾಟೆಯಲ್ಲಿ ಕರ್ನಾಟಕದ ಮೂಲ ದೇಸಿಜನರ ಕಲೆ, ಸಾಹಿತ್ಯ, ಭಾಷೆ ಇವುಗಳ ಅಸ್ಮಿತೆಗಳು ನಶಿಸಿಹೋಗುವ ಮುನ್ನ ಅವುಗಳ ತಲಸ್ಪರ್ಶಿ ಸಂಶೋಧನೆ ವ್ಯಾಪಕವಾಗಿ ವ್ಯವಸ್ಥಿತವಾಗಿ ನಡೆಯಬೇಕಾದ ಸಂದರ್ಭವೊದಗಿದೆ. ಆ ಕಾರ್ಯವನ್ನು ಜಾನಪದ ವಿಶ್ವವಿದ್ಯಾಲಯ ನಿರ್ವಹಿಸಬಲ್ಲುದು. ವಿಶ್ವವಿದ್ಯಾಲಯ ಇದೀಗ ಆರಂಭಗೊಂಡಿದ್ದು ಅನೇಕ ಹೊಸ ಯೋಜನೆಗಳನ್ನು ಹಾಕಿಕೊಂಡಿದೆ. 'ಹಣತೆ' ಎಂಬ ವಾರ್ತಾ ಪತ್ರಿಕೆಯನ್ನು 'ಜಗಲಿ' ಎಂಬ ಷಾಣ್ಮಾಸಿಕ ನಿಯತಕಾಲಿಕೆಯನ್ನು ಪ್ರಕಟಿಸುತ್ತಲಿದೆ.

ಮಿಥಿಕ್ ಸೊಸೈಟಿ, ಬೆಂಗಳೂರು

ರಾಯಲ್ ಏಷ್ಯಟಿಕ್ ಸೊಸೈಟಿಯಷ್ಟೇ ಸ್ಥಾನಮಾನ ಪಡೆದ ಒಂದು ಸಂಶೋಧನ ಸಂಸ್ಥೆ ಬೆಂಗಳೂರಿನ ಮಿಥಿಕ್ ಸೊಸೈಟಿಯಾಗಿದೆ. ಕ್ರಿ.ಶ. ೧೯೦೯ ರಲ್ಲಿ ಅದರ ಸ್ಥಾಪನೆಗೆ ಆಂಗ್ಲ ಅಧಿಕಾರಿ ಎಫ್.ಎಚ್.ರಿಚರ್ಡ್ಸ್ ಮುಖ್ಯ ಪ್ರೇರಣೆ. "ದಕ್ಷಿಣ ಭಾರತದ ಇತಿಹಾಸ, ಜನಾಂಗ ಶಾಸ್ತ್ರ ಮತ್ತು ಧರ್ಮಗಳು ಹಾಗೂ ಸಂಬಂಧಿತ ವಿಷಯಗಳ ಅಧ್ಯಯನಕ್ಕೆ ಮತ್ತು ಸಂಶೋಧನೆಗೆ ಪ್ರೋತ್ಸಾಹ ನೀಡುವುದು" ಸಂಸ್ಥೆಯ ಗುರಿ. ಇಲ್ಲಿ 'ಮಿಥ್' ಎಂಬ ಶಬ್ದ (ಐತಿಹ್ಯ ಎಂದರ್ಥ) ಪರಂಪರೆ, ನಂಬಿಕೆಗಳು, ವಿಧಿವಿಧಾನಗಳು, ರೂಢಿಗಳು ಮತ್ತು ರೀತಿನೀತಿಗಳು ಮುಂತಾದ ವ್ಯಾಪ್ತಿಯನ್ನು ಹೊಂದಿದೆ. ಇದರ ಮೊದಲ ಅಧ್ಯಕ್ಷರು ಅದೇ ವರ್ಷ ಸ್ಥಾಪನೆಯಾದ ಇಂಡಿಯನ್ ಇನ್ಸಿಟ್ಯೂಟ್ ಆಫ್ ಸಾಯನ್ಸ್‌ನ ಪ್ರಥಮ ನಿರ್ದೇಶಕರಾದ ಡಾ॥ ಮೊರಿಸ್ ಟ್ರ್ಯಾವರ್ಸ್ ಅವರು. ಮೈಸೂರು ರಾಜಮನೆತನದ ಹಾಗೂ ದಿವಾನರ ಔದಾರ್ಯದ ಲಾಭ ಸೊಸೈಟಿಗೆ ಸಾಕಷ್ಟು ದೊರೆತಿತ್ತು. ಈ 'ಕೂಟ'ವು ತಿಂಗಳಿಗೊಮ್ಮೆಯಾದರೂ ಸಭೆಸೇರಿ, ಯಾರಾದರೊಬ್ಬರು ಒಂದು ಹೊಸ ವಿಷಯದ ಬಗ್ಗೆ ಉಪನ್ಯಾಸ ನೀಡಿ, ಆ ಬಗ್ಗೆ ನಂತರ ಚರ್ಚೆ ಆಗುತಿತ್ತು. ಮಿಥಿಕ್ ಸೊಸೈಟಿ ಒಂದು ಸಂಶೋಧನ ಗ್ರಂಥಾಲಯವನ್ನು ಹೊಂದಿದೆ. ಅದರಲ್ಲಿ ೪೦,೦೦೦ ಪುಸ್ತಕಗಳಿವೆ. 'ಕ್ವಾರ್ಟರ್ಲಿ ಜರ್ನಲ್ ಆಫ್ ಮಿಥಿಕ್ ಸೊಸೈಟಿ' ಎಂಬ ತ್ರೈಮಾಸಿಕವನ್ನು ಪ್ರಕಟಿಸುತ್ತಿದೆ. ಅದರಲ್ಲಿ ಪ್ರಕಟವಾಗುವ ಸಂಶೋಧನಾ ಲೇಖನಗಳಿಂದ ಅದು ಜಾಗತಿಕ ಪ್ರಸಾರಹೊಂದಿದೆ. ಉಪನ್ಯಾಸ, ವಿಚಾರಸಂಕಿರಣಗಳನ್ನೂ ಸೊಸೈಟಿ ನಡೆಸುತ್ತಿದೆ. 'ಸೈಂಟಿಫಿಕ್ ಹೆರಿಟೇಜ್ ಆಫ್ ಇಂಡಿಯಾ', 'ಡೇಟ್ ಆಫ್ ಮಹಾಭಾರತ ವಾರ್ ಬೇಸ್ಡ್ ಆನ್ ಎಸ್ಟ್ರೊನಾಮಿಕ್ ಡೆಟಾ', 'ಲೈಫ್ ಆಂಡ್ ವರ್ಕ್ಸ್ ಆಫ್ ದಿವಾನ್ ಮಿರ್ಜಾ ಇಸ್ಮಾಯಿಲ್', ಹಾಗೂ ಕರ್ನಾಟಕದ ರಾಜಮನೆತನಗಳಾದ ಬಾದಾಮಿಯ ಮತ್ತು ಕಲ್ಯಾಣದ ಚಾಳುಕ್ಯರು, ರಾಷ್ಟ್ರಕೂಟರು, ಬೆಂಗಳೂರಿನ ಇತಿಹಾಸ, ಫ್ರಾನ್ಸಿಸ್ ಬುಕಾನನ್ ಯಾತ್ರೆ ಮುಂತಾದ ಹಾಗೂ ಇನ್ನೂ ಅನೇಕ ವಿಷಯಗಳ ಬಗ್ಗೆ ವಿಚಾರ ಸಂಕಿರಣಗಳನ್ನು ನಡೆಸಿದೆ. ಆರ್.ನರಸಿಂಹಾಚಾರ್, ಲೂಯಿಸ್ ರೈಸ್, ಆರ್.ಶ್ಯಾಮಾಶಾಸ್ತ್ರೀ, ತಿರುಮಲೈ ತಾತಾಚಾರ್ಯ ಶರ್ಮಾ, ಎಚ್.ಕಷ್ಣಶಾಸ್ತ್ರಿ, ಪ್ರೊ.ಕೆ.ಎನ್.ವಿ.ಶಾಸ್ತ್ರೀ, ಪಂ.ಶಿವಮೂರ್ತಿಶಾಸ್ತ್ರೀ, ಎಸ್.ಶ್ರೀಕಂಠಯ್ಯ, ಪ್ರೊ.ಎಂ.ಪಿ.ಎಲ್. ಶಾಸ್ತ್ರೀ, ಪ್ರೊ.ಕೆ.ಟಿ.ಪಾಂಡುರಂಗಿ, ಮುಂತಾದ ವಿದ್ವಾಂಸರು ಸಂಸ್ಥೆಯ ಸಂಶೋಧನ ಚಟುವಟಿಕೆಗಳಲ್ಲಿ ಸಕ್ರಿಯ ಪಾತ್ರವನ್ನು ವಹಿಸಿದ್ದಾರೆ. ಕರ್ನಾಟಕದ ಇತಿಹಾಸ ಸಂಸ್ಕೃತಿಗಳ ಬಗೆಗೆ ಈ ಸಂಶೋಧನಸಂಸ್ಥೆ ಉತ್ತಮ ಕಾರ್ಯಮಾಡಿದೆ.

ಮಾಡುವಂತಾಗಿದ್ದರೆ ಈಗ ಮಾಡಿರುವ ಕಾರ್ಯದ ಹತ್ತುಪಟ್ಟು ಕಾರ್ಯವನ್ನು ಮಾಡಬಹುದಾಗಿತ್ತು ಎನಿಸುತ್ತದೆ. ಇದೀಗ ಜಾಗತಿಕ ಮಟ್ಟದಲ್ಲಿ ಕನ್ನಡ ಸಂಶೋಧನೆ ಬೆಳೆಯಬೇಕಾಗಿದ್ದು ಆ ನಿಟ್ಟಿನಲ್ಲಿ ಕನ್ನಡ ವಿಶ್ವವಿದ್ಯಾಲಯ ಅಣಿಯಾಗಬೇಕಾಗಿದೆ. ಆ ಉದ್ದೇಶವನ್ನು ಅದು ಇಟ್ಟುಕೊಂಡಿದೆ.

ಕನ್ನಡ ವಿಶ್ವವಿದ್ಯಾಲಯವು ಸ್ಥಾಪನೆಗೊಂಡು ಎರಡೇ ಎರಡು ದಶಕಗಳಾಗಿವೆ. ಇಷ್ಟು ಅವಧಿಯಲ್ಲಿ ಸುಮಾರು ೧೦೦೦ ಕ್ಕೂ ಹೆಚ್ಚು ಗ್ರಂಥಗಳನ್ನು ಪ್ರಕಟಿಸಿದೆ. ಕೇವಲ ಗ್ರಂಥಗಳ ಸಂಖ್ಯೆ ಮಹತ್ವದಲ್ಲ ಆದರೆ ಎಷ್ಟು ಮೌಲಿಕ ಗ್ರಂಥಗಳು ಪ್ರಕಟವಾಗಿವೆ ಎಂಬುದೂ ಬಹು ಮುಖ್ಯ. ಆ ನಿಟ್ಟಿನಲ್ಲಿ ಕನ್ನಡ ವಿಶ್ವವಿದ್ಯಾಲಯದ ಬಹಳಷ್ಟು ಪುಸ್ತಕಗಳು ಅತ್ಯಂತ ಮೌಲಿಕವಾಗಿರುವುದು ಯಾರಾದರೂ ಮೆಚ್ಚಲೇಬೇಕಾದ ಸಂಗತಿಯಾಗಿದೆ. ಉನ್ನತವರ್ಗದ ವಿದ್ವತ್ ಗ್ರಂಥಗಳು ಒಂದೆಡೆ ನಿರ್ಲಕ್ಷಿಸಿಲ್ಪಟ್ಟ ಕ್ಷೇತ್ರಗಳನ್ನು ಮುಖ್ಯ ನೆಲೆಗೆ ತರುವ ಪ್ರಯತ್ನವಾಗಿ, ಅನೇಕ ದೇಸಿ ಕೃತಿಗಳನ್ನು ಪ್ರಕಟಿಸುವ, ಆ ನಿಟ್ಟಿನ ಚಿಂತನ ಮಂಥನ ಕಾರ್ಯ ಚಟುವಟಿಕೆಗಳನ್ನು ಕನ್ನಡ ವಿಶ್ವವಿದ್ಯಾಲಯ ಹಮ್ಮಿಕೊಂಡಿರುವುದು ಶ್ಲಾಘನೀಯವಾಗಿದೆ. ಭಾಷೆ, ಸಾಹಿತ್ಯ, ಸಂಸ್ಕೃತಿಗಳಷ್ಟೇ ಅಲ್ಲದೆ ಸಮಾಜವಿಜ್ಞಾನ, ಭಾಷಾವಿಜ್ಞಾನ, ಮಾನವಶಾಸ್ತ್ರ ಮುಂತಾದ ವಿಜ್ಞಾನ ಕ್ಷೇತ್ರಗಳು ಕನ್ನಡದ ಮೂಲಕ ಜನತೆಗೆ ತಲಪುವಂತಾಗಬೇಕೆಂದು ಆ ನಿಟ್ಟಿನಲ್ಲಿಯೂ ವಿಶ್ವವಿದ್ಯಾಲಯ ಕಾರ್ಯಮಾಡುತ್ತಿದೆ.

ಕೂಡಲಸಂಗಮದಲ್ಲಿ ವಚನ ಸಾಹಿತ್ಯ ಕುರಿತ ಸಂಶೋಧನ ಕೇಂದ್ರವೊಂದನ್ನು ಕನ್ನಡ ವಿಶ್ವವಿದ್ಯಾಲಯ ಆರಂಭಿಸಿದೆ. ಆ ಮೂಲಕ ವಚನಸಾಹಿತ್ಯದ ಸಂಶೋಧನ ಯೋಜನೆಗಳನ್ನು ಹಮ್ಮಿಕೊಳ್ಳುವುದಕ್ಕೆ ಅನುವುಮಾಡಿಕೊಟ್ಟಿದೆ.

ಒಟ್ಟಿನಲ್ಲಿ ಹೊಸ ಬಗೆಯ ಅಧ್ಯಯನ, ಚಿಂತನೆ, ಓದು ಇವುಗಳ ಸಾಧ್ಯತೆಗಳನ್ನು ಪ್ರಯೋಗಗಳನ್ನು ಮಾಡುವುದರ ಮೂಲಕ ಕನ್ನಡ ವಿಶ್ವವಿದ್ಯಾಲಯ ಇತರ ವಿಶ್ವ ವಿದ್ಯಾಲಯಗಳಂತೆ ಅಲ್ಲ ಎಂಬುದನ್ನು ತೋರಿಸಿಕೊಟ್ಟಿದೆ.

ಕರ್ನಾಟಕ ಜಾನಪದ ವಿಶ್ವವಿದ್ಯಾಲಯ, ಗೋಟಗೋಡಿ

ವಿಶ್ವದ ಪ್ರಪ್ರಥಮ ಜಾನಪದ ವಿಶ್ವವಿದ್ಯಾಲಯ ಎನಿಸಿರುವ ಕರ್ನಾಟಕ ಜಾನಪದ ವಿಶ್ವವಿದ್ಯಾಲಯ ಹಾವೇರಿ ಜಿಲ್ಲೆಯ ಗೋಟಗೋಡಿಯಲ್ಲಿ ೨೦೧೨ರಲ್ಲಿ ಸ್ಥಾಪನೆಗೊಂಡಿದೆ. ಈ ವಿಶ್ವವಿದ್ಯಾಲಯವು ಕರ್ನಾಟಕ ಜಾನಪದ ಕ್ಷೇತ್ರದ ಸಮಗ್ರ ಸಂಶೋಧನೆ, ಅಧ್ಯಯನ, ಅಧ್ಯಾಪನಗಳಿಗೆ ಮೀಸಲಾಗಿದೆ. ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿಯ ಮೂಲ ಬೇರುಗಳು ಜನಪದರಲ್ಲಿ ಹಾಸುಹೊಕ್ಕಾಗಿರುತ್ತವೆ. ಕನ್ನಡ ಜಾನಪದ ಸಂಶೋಧನೆ ಎಂದರೆ ಕನ್ನಡ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಗಳ ಸಂಶೋಧನೆಯೇ ಸರಿ. ಅದಕ್ಕಾಗಿ ಪ್ರತ್ಯೇಕ ವಿಶ್ವವಿದ್ಯಾಲಯ ಸ್ಥಾಪನೆಯಾದದ್ದು ಕನ್ನಡ ಸಂಶೋಧನ ಕ್ಷೇತ್ರದ ದೃಷ್ಟಿಯಿಂದ ಅತ್ಯಂತ ಸೂಕ್ತವಾದದ್ದು. ಸಾಮಾನ್ಯ ವಿಶ್ವವಿದ್ಯಾಲಯದ ಒಂದು ಕೇಂದ್ರವೋ, ವಿಭಾಗವೋ ಕೈಕೊಳ್ಳುವ ಸಂಶೋಧನೆಗೂ ಜಾನಪದದಂತಹ ಒಂದು ವಿಶಿಷ್ಟ ಜ್ಞಾನಕ್ಷೇತ್ರಕ್ಕೆ ಮೀಸಲಾದ ಒಂದು ವಿಶ್ವವಿದ್ಯಾಲಯವು ಕೈಕೊಳ್ಳುವ ಸಂಶೋಧನೆಗೂ ಬಹಳ ವ್ಯತ್ಯಾಸವಿರುತ್ತದೆ. ಆದ್ದರಿಂದ ಜಾನಪದ ವಿಶ್ವವಿದ್ಯಾಲಯವು ಇತರ ವಿಶ್ವವಿದ್ಯಾಲಯಗಳಿಗಿಂತ ಭಿನ್ನವಾದದ್ದು. ಇದಕ್ಕೆ ಸಾಕ್ಷಿಯಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯ ನಮ್ಮ ಕಣ್ಣಮುಂದಿದೆ.

ಜಾನಪದ ಅಧ್ಯಯನವು ಸಾಮಾನ್ಯ ಅಧ್ಯಯನವಾಗುವುದಿಲ್ಲ. ಯಾಕೆಂದರೆ ಅದನ್ನು ಅಧ್ಯಯನಕ್ಕೆ ಅಳವಡಿಸುವ ಪ್ರಕ್ರಿಯೆಯಲ್ಲಿ ಸಂಶೋಧನೆ ಸೂಕ್ಷ್ಮವಾಗಿ

ಪ್ರಕಟವಾದವು. ಧಾರಾವಾಹಿಯಾಗಿ ಪ್ರಕಟಗೊಂಡ ಲೇಖನಗಳು ನಂತರ ಗ್ರಂಥ ರೂಪದಲ್ಲಿ ಪ್ರಕಟವಾದವು. ಝಿಗ್ಲರ್, ಕಿಟೆಲ್, ಬಿ.ಎಲ್.ರೈಸ್, ಜಾನ್ ಫ್ಲೀಟ್, ಬಿ.ಎಂ.ಶ್ರೀ, ಮ.ಪ್ರ.ಪೂಜಾರ, ಆಲೂರು ವೆಂಕಟರಾವ್, ಎ.ಆರ್.ಕೃಷ್ಣಶಾಸ್ತ್ರೀ ಮುಂತಾದ ಹಿರಿಯ ದಿಗ್ಗಜರ ಸಾರಥ್ಯ ಮತ್ತು ಮಾರ್ಗದರ್ಶನದಲ್ಲಿ ಈ ಸಂಸ್ಥೆ ಮುನ್ನಡೆಯಿತು. ೧೯೩೬ ರಿಂದ ಎ.ಟಿ.ಸಾಸನೂರ ಅವರ ಹೆಸರಿನಲ್ಲಿ ವ್ಯಾಖ್ಯಾನೋಪನ್ಯಾಸ ಮಾಲೆಯನ್ನು ಆರಂಭಿಸಲಾಯಿತು. ಈಗ ವರ್ಷವಿಡೀ (ಪ್ರತಿದಿನ) ದತ್ತಿ ಉಪನ್ಯಾಸಗಳು ನಡೆಯುತ್ತಿದ್ದು ಅದರಲ್ಲಿ ಅನೇಕ ದತ್ತಿಗಳು ಸಂಶೋಧಕರಿಗೆ ಸಂಬಂಧಿಸಿವೆ.

ಕರ್ನಾಟಕ ವಿದ್ಯಾವರ್ಧಕ ಸಂಘವು ಈವರೆಗೆ ನೂರಕ್ಕೂ ಹೆಚ್ಚು ಮೌಲಿಕ ಕೃತಿಗಳನ್ನು ಪ್ರಕಟಿಸಿದ್ದು ಅದರಲ್ಲಿ ಅನೇಕ ಸಂಶೋಧನ ಕೃತಿಗಳೂ ಇವೆ. ೧೮೯೨ರಲ್ಲಿ ಭವಭೂತಿಯ ಸಂಸ್ಕತ ನಾಟಕದ ಕನ್ನಡಾನುವಾದ 'ಉತ್ತರ ರಾಮಚರಿತೆ' ಸಂಘದ ಚೊಚ್ಚಲ ಕೃತಿ. ನಂತರ ಅನೇಕ ಹಳಗನ್ನಡ ಕೃತಿಗಳನ್ನು ಅಲ್ಲದೆ ಸಂಶೋಧನೆ, ಶಿಕ್ಷಣ, ಸಾಹಿತ್ಯ, ಸಂಸ್ಕೃತಿ, ಇತಿಹಾಸ ಕ್ಷೇತ್ರಗಳ ಹಲವು ಗ್ರಂಥಗಳನ್ನು ಪ್ರಕಟಿಸಿದೆ. ಕಾನೂನು ಪದವಿವರಣ ಕೋಶ, ಈಚಿನ ಗಮನಾರ್ಹ ಕೃತಿ.

ಆರಂಭದಿಂದಲೇ ಸುಸಜ್ಜಿತ ಗ್ರಂಥಾಲಯದ ಆವಶ್ಯಕತೆಯನ್ನು ಪೂರೈಸಿ ಅದನ್ನು ಬೆಳೆಸುತ್ತ ೧೯೪೦ ರಲ್ಲಿ ಶಾಂತೇಶ ವಾಚನಾಲಯವೆಂದು ಹೆಸರಿಸಿ ಇನ್ನಷ್ಟು ವಿಸ್ತರಣೆಗೊಳಿಸಿ ಇದೀಗ ಅತ್ಯುತ್ತಮ ಗ್ರಂಥಾಲಯವನ್ನು ಸಂಘವು ಹೊಂದಿದೆ. ಆಧುನಿಕ ಕಾಲದಲ್ಲಿ ೪೫ ವರ್ಷಗಳಿಂದ ಕರ್ನಾಟಕ ವಿದ್ಯಾವರ್ಧಕ ಸಂಘದ ಅಧ್ಯಕ್ಷರಾಗಿ ನಿರಂತರವಾಗಿ ಸೇವೆಸಲ್ಲಿಸುತ್ತ ಅದನ್ನು ರಾಷ್ಟ್ರೀಯ ಮಟ್ಟಕ್ಕೇರುವಂತೆ ಮಾಡಿದ ಕೀರ್ತಿ ನಾಡಿನ ಹಿರಿಯ ಸಾಹಿತಿ ನಾಡೋಜ ಡಾ.ಪಾಟೀಲ ಪುಟ್ಟಪ್ಪ ಅವರಿಗೆ ಸಲ್ಲುತ್ತದೆ.

ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

ಮೂಲತಃ ಕನ್ನಡ ಸಾಹಿತ್ಯಾಭಿವೃದ್ಧಿ, ಕನ್ನಡಭಾಷಾ ಏಕೀಕರಣಗಳನ್ನು ದೃಷ್ಟಿಯನ್ನಿಟ್ಟು-ಕೊಂಡು ನೂರು ವರ್ಷಗಳ ಹಿಂದೆ (೫-೫-೧೯೧೫) ಸ್ಥಾಪಿತವಾದ ಅಖಿಲಭಾರತ ಕನ್ನಡ ಸಾಹಿತ್ಯ ಪರಿಷತ್ತು ಕೇವಲ ವಿದ್ವತ್‌ವಲಯಕ್ಕೆ ಸೀಮಿತವಾದ ಸಂಶೋಧನ ಸಂಸ್ಥೆಯಲ್ಲ. ಆದ್ದರಿಂದ ಇಲ್ಲಿ ಸಾಹಿತ್ಯಕ್ಕೇ ಪ್ರಾಶಸ್ತ್ಯವಿರುವುದು ಸಹಜವಾದದ್ದು. ಆದರೂ ಕನ್ನಡಭಾಷೆ, ಸಾಹಿತ್ಯ ಮತ್ತು ಕರ್ನಾಟಕದ ಸಂಸ್ಕೃತಿಯ ಮಹತ್ವವನ್ನು ನಿರಂತರವಾಗಿ ಎತ್ತಿಹಿಡಿಯುವುದಕ್ಕೆ ಯಾವ ಪೂರಕ ಚಟುವಟಿಕೆಗಳು ಆವಶ್ಯಕವೋ ಅವನ್ನು ವಿದ್ವತ್‌ವಲಯದ ಗಣ್ಯಾತಿಗಣ್ಯರು ಕನ್ನಡಸಾಹಿತ್ಯ ಪರಿಷತ್ತಿನ ಮೂಲಕ ಆಗುಮಾಡುತ್ತ ಬಂದಿದ್ದಾರೆ. ಪ್ರಾಚೀನ ಕೃತಿಗಳ ಶೋಧ, ಸಂಪಾದನೆ ಪ್ರಕಟನೆ, ಕನ್ನಡ ಕನ್ನಡ ಬೃಹತ್ ನಿಘಂಟು ರಚನೆ, ಇಂತಹ ಸಂಶೋಧನ ಯೋಜನೆಗಳು ಇಲ್ಲಿ ನಿರಂತರ ನಡೆಯುತ್ತ ಬಂದಿವೆ. ಈಚೆಗೆ ಕನ್ನಡ ವಿಶ್ವವಿದ್ಯಾಲಯದ ಮಾನ್ಯತೆಯನ್ನು ಪಡೆದು ಎಂ.ಫಿಲ್, ಪಿಎಚ್.ಡಿ ಪದವಿಗಳಿಗೆ ಸಂಶೋಧನ ವಿದ್ಯಾರ್ಥಿಗಳನ್ನು ತರಬೇತುಗೊಳಿಸುವ ಕೇಂದ್ರವನ್ನು ಆರಂಭಿಸಲಾಗಿದೆ. ಹಾಗೆಯೆ ಹಸ್ತಪ್ರತಿ ಕುರಿತ ಶಿಬಿರಗಳನ್ನು ಮೊದಲಿನಿಂದಲೂ ನಡೆಸುತ್ತಿದೆ.

ಬೆಳ್ಳಾವೆ ವೆಂಕಟನಾರಾಯಣಪ್ಪ ಅವರು ಆರಂಭದಲ್ಲಿ ಪಂಪಭಾರತ, ಪಂಪ ರಾಮಾಯಣ, ಚಾವುಂಡರಾಯ ಪುರಾಣ, ಸೋಮೇಶ್ವರ ಶತಕ, ಕುಸುಮಾವಳಿ ಮುಂತಾದ ಕಾವ್ಯಗಳನ್ನು ಸಂಪಾದಿಸಿದರು. ಜ್ಯೋತಿರ್ವಿನೋದಿನಿ, ಜೇಮ್ಸ್ ಎಬ್ರಹಮ್ ಗಾರ್‌ಫೀಲ್ಡನ ಚರಿತ್ರೆ ಇವನ್ನು ಪ್ರಕಟಿಸಿ, ಕಾವ್ಯೇತರ ಗದ್ಯಸಾಹಿತ್ಯ ಪ್ರಕಟಣೆಗೆ ಮೇಲಪಂಕ್ತಿ ಹಾಕಿದವರೂ

ಐತಿಹ್ಯಗಳಿಗೆ, ಶಿಲ್ಪ, ಚಿತ್ರ, ಸಂಗೀತ, ನಾಟ್ಯ ಜನಪದ ಕಲೆ, ಸಾಹಿತ್ಯ ಇತ್ಯಾದಿಗಳಲ್ಲಿನ ವಿಷಯಗಳಿಗೆ, ಹಾಗೂ ಪುರಾಣದಲ್ಲಿನ ಎಷ್ಟೋ ವಿಷಯಗಳಿಗೆ ನಾವು ಈ ವರೆಗೆ ಮಹತ್ವವನ್ನೇ ನೀಡಿಲ್ಲ. ಇಂಥ ನಿರ್ಲಕ್ಷಿತ ಕ್ಷೇತ್ರಗಳನ್ನು ಸಂಶೋಧನೆಗೆ ವ್ಯಾಪಕವಾಗಿ ಬಳಸಿಕೊಳ್ಳುವ ವಿಧಾನಗಳನ್ನು ರೂಪಿಸಿಕೊಳ್ಳಬೇಕು. ಇಂಗ್ಲಿಷ್‌ನಲ್ಲಿ ಕ್ಲ್ಯಾಂಡೆ ಲೆವಿ ಸ್ಟ್ರಾಸ್ (Clande Levi Strauss) ಎಂಬ ಸಂಶೋಧಕನು ಮಿಥಿಮ್ಸ (Mythemes) ಎಂಬ ಹೊಸ ಶೀರ್ಷಿಕೆಯಲ್ಲಿ ಮಿಥ್‌ಗಳನ್ನು (ಐತಿಹ್ಯಗಳನ್ನು) ಸಣ್ಣ ಸಣ್ಣ ಮಿಥ್‌ಗಳನ್ನಾಗಿ ವಿಂಗಡಿಸಿ ಐತಿಹಾಸಿಕವಾಗಿ ಸಂಶೋಧನೆಗೆ ಒಳಪಡಿಸುತ್ತಾನೆ. ಐತಿಹ್ಯಗಳ ಬಗೆಗೆ ಸ್ಟ್ರಾಸ್‌ನು ಯಾವುದೇ ಕಾಲದ ಯಾವುದೇ ಸಂದರ್ಭದಲ್ಲಿನ ಯಾವುದೇ ಸಾಂಸ್ಕೃತಿಕ ಘಟಕವು ತಿರಸ್ಕಾರ ಅಥವಾ ಪುರಸ್ಕಾರಕ್ಕೆ ಈಡಾಗಿದ್ದಾಗ ಅದು ಆ ಕಾಲದ ಸಂದರ್ಭದ ಸಮುದಾಯದ ಅಭಿವ್ಯಕ್ತಿಯಾಗಿರುತ್ತದೆ, ಆಚರಣೆಗೆ ಮೂಲವಾಗಿರುತ್ತದೆ. ಆದ್ದರಿಂದ ಮಾನವ ಸಮುದಾಯಗಳು ರೂಢಿಸಿಕೊಂಡು ಬಂದ ಸಾಂಸ್ಕೃತಿಕ ಘಟಕಗಳಿಗೆ ಆಯಾ ಸಂದರ್ಭದಲ್ಲಿನ ಸಮುದಾಯಗಳು ಒಪ್ಪಿಕೊಂಡು ಬಂದ ಘಟಕಗಳಾಗಿರುತ್ತವೆ. ಸಮುದಾಯಗಳು ಅವುಗಳನ್ನು ರಚಿಸಿಕೊಳ್ಳುವುದರಿಂದ ಅವು ಸಾಂಸ್ಕೃತಿಕ ರಚಕಗಳೆನಿಸುತ್ತವೆ. ಆದ್ದರಿಂದ ಐತಿಹ್ಯ(ಮಿಥ್)ಗಳನ್ನು ಸಾಹಿತ್ಯ ಕೃತಿಗಳ ಅದರಲ್ಲೂ ಪುರಾಣ ಕೃತಿಗಳ ಹಿನ್ನೆಲೆಯಲ್ಲಿ ಸಂಶೋಧನೆಗೆ ಒಳಪಡಿಸುವ ಅಗತ್ಯವಿದೆ. ಮಿಥಿಕ್ ಸೊಸೈಟಿ ಈ ನಿಟ್ಟಿನಲ್ಲಿ ಸಂಶೋಧನ ಯೋಜನೆಗಳನ್ನು ಹಾಕಿಕೊಳ್ಳುವ ವಿಪುಲ ಅವಕಾಶಗಳಿವೆ. ಕರ್ನಾಟಕದಲ್ಲಿ ಇರುವುದು ಇದೊಂದೇ ಮಿಥಿಕ್ ಸೊಸೈಟಿ.

ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ

ಕನ್ನಡ ನಾಡಿನ ವಿಸ್ತಾರ ೧೦ನೇ ಶತಮಾನಕ್ಕೂ ಮುಂಚೆ ಸರಿಸುಮಾರು ಇಡೀ ದಕ್ಷಿಣ ಭಾರತದ ಬಹುಭಾಗವಾಗಿದ್ದರೂ ೨೦ನೇ ಶತಮಾನದ ವೇಳೆಗೆ ರಾಜಕೀಯ ಸ್ಥಿತ್ಯಂತರ ಕಾರಣವಾಗಿ ಮುಂಬೈ, ಮದರಾಸು, ಹೈದ್ರಾಬಾದ ಮತ್ತು ಮೈಸೂರು ಪ್ರಾಂತಗಳಲ್ಲಿ ಹರಿದು ಹಂಚಿಹೋಗಿ ಅದರ ಅಸ್ತಿತ್ವಕ್ಕೇ ಕುತ್ತು ಬಂದ ಸಂದರ್ಭವನ್ನು ಮನದಂದು ಸಾಂಘಿಕವಾಗಿ ಸಾಂಸ್ಥಿಕವಾಗಿ ಕನ್ನಡವನ್ನು ಬೆಳಸದೇ ಇದ್ದರೆ ಉಳಿಗಾಲವಿಲ್ಲವೆಂದು ಕರ್ನಾಟಕದ ಏಕೀಕರಣ ಮತ್ತು ಬೆಳವಣಿಗೆಗೆ ಹೋರಾಡಲು ಆಗಿನ ಕಾಲದಲ್ಲಿಯೇ ಎಂ.ಎ.ಕನ್ನಡ ಪದವೀಧರರಾಗಿದ್ದ ಕನ್ನಡಾಭಿಮಾನಿ ಧಾರವಾಡದ ರಾ.ಹ.ದೇಶಪಾಂಡೆ ಅವರು ಸಮಾನಮನಸ್ಕರನ್ನು ಸೇರಿಸಿಕೊಂಡು ಕರ್ನಾಟಕ ವಿದ್ಯಾವರ್ಧಕ ಸಂಘವನ್ನು ೨೦–೭–೧೮೯೦ ರಂದು ಸ್ಥಾಪನೆ ಮಾಡಿದರು. ಹೀಗೆ ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘವು ಹುಟ್ಟುವುದರ ಮೂಲಕ ಹತ್ತಿದ ಕನ್ನಡದ ಕಿಡಿ ಮುಂದೆ ರಾಜ್ಯದಾದ್ಯಂತ ಹಬ್ಬಿ ಅಖಂಡ ಕರ್ನಾಟಕ ನಿರ್ಮಾಣಕ್ಕೆ ನಾಂದಿಯಾದದ್ದು ಮತ್ತು ಅಖಿಲಭಾರತ ಕನ್ನಡಸಾಹಿತ್ಯ ಪರಿಷತ್ತು ಆರಂಭವಾಗಲು ಕಾರಣವಾದದ್ದು ಚಿರಸ್ಮರಣೀಯ ಇತಿಹಾಸವಾಗಿದೆ. ಕನ್ನಡ ಕರ್ನಾಟಕಗಳ ಇತಿಹಾಸ ಹಿರಿಮೆ ಗರಿಮೆಗಳನ್ನು ಕುರಿತು, ಹಳೆಯ ಪುಸ್ತಕಗಳನ್ನು ಮತ್ತು ಹೊಸ ಪುಸ್ತಕಗಳನ್ನು ಕನ್ನಡದಲ್ಲಿ ಪ್ರಕಟಿಸಲು ಈ ಸಂಸ್ಥೆ ಮಾಡಿದ ಕಾರ್ಯ ಶ್ಲಾಘನೀಯ. ವಾಗ್ಭೂಷಣ ಎಂಬ ನಿಯತಕಾಲಿಕೆಯನ್ನು ಕರ್ನಾಟಕ ವಿದ್ಯಾವರ್ಧಕ ಸಂಘ ಆರಂಭಿಸುವುದರ ಮೂಲಕ ಕನ್ನಡ ನಾಡು ನುಡಿಗಳ ಕುರಿತು ವೈಚಾರಿಕ, ಸಂಶೋಧನಾತ್ಮಕ ವಿಚಾರಧಾರೆ ಮತ್ತು ಚಿಂತನ ಮಂಥನಗಳಿಗೆ ದಾರಿಯನ್ನು ಹಾಕಿಕೊಟ್ಟಿತು. ಶಂ.ಬಾ, ಹಳಕಟ್ಟಿ, ಬಸವನಾಳ, ಅವರಂಥ ಸಂಶೋಧಕರ ಆರಂಭದ ಲೇಖನಗಳು ಈ ಪತ್ರಿಕೆಯಲ್ಲಿ

ಚಟುವಟಿಕೆಗಳಲ್ಲಿ ಪ್ರಾಚೀನ ಹಸ್ತಪ್ರತಿಗಳ ಸಂಗ್ರಹ ಮತ್ತು ಸಂರಕ್ಷಣೆ, ದಾಖಲೀಕರಣಗೊಳಿಸುವುದು ಆಗಿದೆ. ಸ್ವಂತ ಭವ್ಯ ಕಟ್ಟಡದಲ್ಲಿ ಹಸ್ತಪ್ರತಿ ಭಂಡಾರ, ಗ್ರಂಥಾಲಯ, ವಾಚನಾಲಯ, ಕಲಾಭವನ, ಸ್ನಾತಕೋತ್ತರ ಅಧ್ಯಯನ ಕೇಂದ್ರಗಳನ್ನು ಹೊಂದಿದೆ. ಬಿ.ಎಂ.ಶ್ರೀ. ಅವರ ಜನ್ಮ ಗ್ರಾಮವಾದ ಬೆಳ್ಳೂರಿನಲ್ಲಿ ಪ್ರತಿಷ್ಠಾನದ ಶಾಖೆಯನ್ನು ಸ್ಥಾಪಿಸಲಾಗಿದೆ. ಪ್ರತಿಷ್ಠಾನ ಪ್ರಕಟಿಸಿದ ೭೦ಕ್ಕೂ ಹೆಚ್ಚು ಸಂಖ್ಯೆಯ ಗ್ರಂಥಗಳಲ್ಲಿ ಶ್ರೀ ಕೃಷ್ಣದೇವರಾಯ ದಿನಚರಿ, ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿಗಳು, ಡಿ.ಎಲ್.ಎನ್. ಬರೆಹಗಳು, ಹರಿದಾಸರ ಕೀರ್ತನೆಗಳು, ಶ್ರೀನಿಧಿ (ಸ್ಮರಣ ಸಂಪುಟ), ಶ್ರೀಗಂಧ (ಸ್ಮರಣ ಸಂಪುಟ), ಎಂ.ವಿ.ಸೀ.ಸ್ಮರಣ ಸಂಪುಟ, ಕದಂಬ (ಸಂಶೋಧನ ಲೇಖನಗಳ ಸಂಕಲನ), ಕವಿರಾಜಮಾರ್ಗ ವಿವಕ್ಷೆ, ಅಂತರ್‌ಶಿಸ್ತೀಯ ಸಂಶೋಧನ ವಿಧಿವಿಧಾನ, ಕನ್ನಡದ ತಿರುಕ್ಕುರುಳ್ ಮುಂತಾದವು ಗಮನಾರ್ಹವಾಗಿವೆ. ಸದ್ಯ ಡಾ.ಪಿ.ವಿ.ನಾರಾಯಣ ಅವರು ಬಿ.ಎಂ.ಶ್ರೀ ಪ್ರತಿಷ್ಠಾನದ ಅಧ್ಯಕ್ಷರಾಗಿದ್ದಾರೆ. ಬಿ.ಎಂ.ಶ್ರೀ. ಅವರ ಮೊಮ್ಮಗಳು ಶ್ರೀಮತಿ ಕಮಲಿನಿ ಶಾ.ಬಾಲೂರಾವ್ ಅವರು ನೀಡಿದ ದತ್ತಿಯ ವತಿಯಿಂದ ೨೦೧೪ ರಿಂದ ಕನ್ನಡ ಸಾಹಿತ್ಯಕ್ಕೆ ಗಣನೀಯ ಕೊಡುಗೆ ಸಲ್ಲಿಸಿದ ಸಾಹಿತಿಯೊಬ್ಬರಿಗೆ ಒಂದು ಲಕ್ಷ ರೂಪಾಯಿಗಳ 'ಶ್ರೀ ಸಾಹಿತ್ಯ ಪ್ರಶಸ್ತಿ'ಯನ್ನು ಸ್ಥಾಪಿಸಲಾಗಿದೆ. 'ಹಸ್ತಪ್ರತಿಶಾಸ್ತ್ರ' ಅಧ್ಯಯನದ ಶಿಸ್ತನ್ನು ಆರಂಭಿಸಿದ ಹೆಗ್ಗಳಿಕೆ ಈ ಸಂಸ್ಥೆಗೆ ಸಲ್ಲುತ್ತದೆ. ಹಸ್ತಪ್ರತಿಗಳನ್ನು ಕುರಿತ ಅಧ್ಯಯನ ಮತ್ತು ಸಂಶೋಧನೆಗೆ ಅನುಕೂಲವಾಗುವ ತರಬೇತಿ, ಕಮ್ಮಟಗಳನ್ನು ನಿರಂತರ ಏರ್ಪಡಿಸುತ್ತ ಬಂದಿರುವುದೂ ಈ ಸಂಸ್ಥೆಯ ಗಮನಾರ್ಹ ಅಂಶವಾಗಿದೆ.

ಕೇಂದ್ರೀಯ ಭಾಷಾಸಂಸ್ಥಾನ (ಶಾಸ್ತ್ರೀಯಕನ್ನಡದ ಅತ್ಯುನ್ನತ ಅಧ್ಯಯನಕೇಂದ್ರ), ಮೈಸೂರು

ಭಾರತ ಸರ್ಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯದ ಉನ್ನತ ಶಿಕ್ಷಣ ಇಲಾಖೆಯು ಮೈಸೂರಿನಲ್ಲಿ ಸ್ಥಾಪಿಸಿರುವ ಭಾರತೀಯ ಭಾಷೆಗಳ ಕೇಂದ್ರ ಸಂಸ್ಥೆಯು (CIIL) ದಕ್ಷಿಣ ಭಾರತೀಯ ಭಾಷೆಗಳ ಅಧ್ಯಯನ, ಅಧ್ಯಾಪನ, ಸಂಶೋಧನ ಚಟುವಟಿಕೆಗಳಿಗಾಗಿ ಕೇಂದ್ರ ಸರ್ಕಾರದಿಂದ ನಡೆಸಲ್ಪಡುವ ಸಂಸ್ಥೆಯಾಗಿದೆ. ಅಲ್ಲಿ ಕನ್ನಡ ಭಾಷೆಗೆ ಸಂಬಂಧಿಸಿದ ಸಂಶೋಧನ ಚಟುವಟಿಕೆಗಳು ನಡೆಯುತ್ತಿವೆ. ಇದು ಒಂದು ರೀತಿ ವಿಶ್ವವಿದ್ಯಾಲಯದಂತೆ ಉನ್ನತಮಟ್ಟದ ಸಂಸ್ಥೆಯಾಗಿದೆ. ಕಮ್ಮಟ, ವಿಚಾರಸಂಕಿರಣ, ಗ್ರಂಥ ಪ್ರಕಟನೆ, ಚಿಂತನಮಂಥನ, ಸಂಶೋಧನ ಯೋಜನೆಗಳಿಗೆ ಪ್ರೋತ್ಸಾಹ ಮುಂತಾದ ಚಟುವಟಿಕೆಗಳು ಇಲ್ಲಿ ನಡೆಯುತ್ತವೆ. ಬೇರೆಡೆಗೆ ನಡೆಯುವ ಇಂತಹ ಚಟುವಟಿಕೆಗಳಿಗೆ ಧನಸಹಾಯ ಒದಗಿಸಿ ಪ್ರೋತ್ಸಾಹಿಸುತ್ತದೆ. ಶಾಸ್ತ್ರೀಯಕನ್ನಡದ ಅತ್ಯುನ್ನತ ಅಧ್ಯಯನಕೇಂದ್ರವನ್ನು CIIL ನಡೆಸುತ್ತದೆ. ಈ ಸಂಶೋಧನಾ ಕೇಂದ್ರವು ಭಾಷೆಯ ಸಂಶೋಧನೆ, ದಾಖಲೀಕರಣ, ಪ್ರಚಾರ ಮತ್ತು ಭೋಧನೆಗಳಿಗೆ ಸಂಬಂಧಪಟ್ಟಂತೆ ಮೈಸೂರಿನ ಭಾರತೀಯ ಭಾಷೆಗಳ ಕೇಂದ್ರ ಸಂಸ್ಥೆಯು ಗುರುತಿಸುವ ಯೋಜನೆಗಳು ಮತ್ತು ಚಟುವಟಿಕೆಗಳನ್ನು ಕಾರ್ಯಗತಗೊಳಿಸುತ್ತದೆ. ಜೊತೆಗೆ ಈ ಕೇಂದ್ರವು ಇತರ ವ್ಯಕ್ತಿಗಳು, ಸಂಸ್ಥೆಗಳು, ಭಾರತದ ಇತರ ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳು ಮತ್ತು ವಿದೇಶಗಳಲ್ಲಿ ನಡೆಯುವ ಅನ್ಯ ಶಾಸ್ತ್ರೀಯಭಾಷೆಗಳ ಅಧ್ಯಯನಕ್ಕೆ ಸಂಪರ್ಕವನ್ನು ಕಲ್ಪಿಸುತ್ತದೆ. ಈ ಸಂಶೋಧನಾ ಕೇಂದ್ರದ ಕಾರ್ಯಚಟುವಟಿಕೆಗಳ ಕನ್ನಡ ಭಾಷೆಯ ಸಂಶೋಧನೆಯನ್ನು ಹಮ್ಮಿಕೊಳ್ಳುತ್ತದೆ. ಅದರ ಕಾರ್ಯಚಟುವಟಿಕೆಗಳಲ್ಲಿ–೧. ಸಂಶೋಧನೆಗಳ ಮೂಲಕ ಶಾಸ್ತ್ರೀಯಭಾಷೆಯ ಆಕರಗಳನ್ನು ಗುರುತಿಸುವುದು. ೨. ಭಾರತದಲ್ಲಿ ಮತ್ತು ವಿದೇಶಗಳಲ್ಲಿ

ವೆಂಕಟನಾರಾಯಣಪ್ಪನವರೇ. ಇವರು ಬಹು ಶ್ರಮವಹಿಸಿ ಸಿದ್ಧಪಡಿಸಿದ ಷಟ್ಪದಿ ಕಾವ್ಯಗಳ ನಿಘಂಟು–ಒಂದು ವಿಧದಲ್ಲಿ ಪರಿಷತ್ತಿನ ನಿಘಂಟು ಕಾರ್ಯರಚನೆಗೆ ನಾಂದಿಯಾಯಿತೆನ್ನಬಹುದು. ಹಳೆಯ ಕಾಲದಲ್ಲಿ ಪರಿಷತ್ತಿನೊಂದಿಗೆ ಸಂಪರ್ಕವಿಟ್ಟುಕೊಂಡ ಜನ ಬಹುಮಟ್ಟಿಗೆ ಭಾಷಾಪಂಡಿತರು, ವಿದ್ವಾಂಸರು, ಸರ್ಕಾರದ ಉನ್ನತಾಧಿಕಾರಿಗಳು. ಅಂದಿಗೆ ಇದು ತೀರ ಸಹಜವೆನ್ನಿಸಿತ್ತು.

'ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ' ಎಂಬ ವಿದ್ವತ್‌ಪೂರ್ಣ ತ್ರೈಮಾಸಿಕ ಪತ್ರಿಕೆ ವಿದ್ವಜ್ಜನರ ಸಂಶೋಧನ ಕ್ಷೇತ್ರದ ಪ್ರಸಕ್ತಿಯನ್ನು ತೋರ್ಪಡಿಸುವಂತಿದೆ. ಬೃಹತ್ ನಿಘಂಟು ಅಲ್ಲದೆ ಸಂಕ್ಷಿಪ್ತ ನಿಘಂಟು, ರತ್ನಕೋಶ ಮೊದಲಾದವು ಬಹು ಜನರ ಮೆಚ್ಚುಗೆಗೆ ಪಾತ್ರವಾಗಿವೆ.

ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನದ ಎಂ.ವಿ.ಸೀ.ಸಂಶೋಧನ ಕೇಂದ್ರ, ಬೆಂಗಳೂರು

ಪ್ರೊ.ಎಂ.ವ್ವಿ.ಸೀತಾರಾಮಯ್ಯ ಅವರು ಆಚಾರ್ಯ ಬಿ.ಎಂ.ಶ್ರೀಕಂಠಯ್ಯ ಅವರ ಹೆಸರಿನಲ್ಲಿ ೧೯೭೯ರಲ್ಲಿ ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನವನ್ನು ಸ್ಥಾಪಿಸಿದರು. ಈ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷರಲ್ಲಿ ಮೊದಲಿಗರಾದ ನಿಟ್ಟೂರು ಶ್ರೀನಿವಾಸರಾಯರು ನಂತರ ಅದರ ಗೌರವಾಧ್ಯಕ್ಷರಾಗಿ ಸೇವೆಸಲ್ಲಿಸಿದ್ದರು. ರಾಷ್ಟ್ರಕವಿ ಕುವೆಂಪು ಅವರಿಂದ ಉದ್ಘಾಟನೆಯಾದ ಈ ಪ್ರತಿಷ್ಠಾನವು ಪ್ರಾಚೀನ ಹಸ್ತಪ್ರತಿಗಳ ಸಂಗ್ರಹ, ಸಂರಕ್ಷಣೆ, ಸಂಪಾದನೆ, ಪ್ರಕಟನಾ ಕಾರ್ಯಗಳನ್ನಲ್ಲದೆ ಹಸ್ತಪ್ರತಿಶಾಸ್ತ್ರ ತರಬೇತಿ, ಹಳಗನ್ನಡ ಕಾವ್ಯ ಅಧ್ಯಯನ ಶಿಬಿರಗಳನ್ನು ಏರ್ಪಡಿಸಿ ಕನ್ನಡ ಸಾಹಿತ್ಯ ಸಂಶೋಧನೆಯ ಪೂರಕಕಾರ್ಯಗಳನ್ನು ಹಮ್ಮಿಕೊಳ್ಳುತ್ತಿದೆ. ಸಿರಿಕಂಠ ವೇದಿಕೆಯ ಮೂಲಕ ಉಪನ್ಯಾಸಗಳನ್ನು ಏರ್ಪಡಿಸುತ್ತಿದೆ. 'ಕರ್ನಾಟಕ ಲೋಚನ' ಎಂಬ ಸಾಹಿತ್ಯ ಸಂಶೋಧನ ಕ್ಷೇತ್ರದ ತ್ರೈಮಾಸಿಕ ವಿದ್ವತ್‌ಪತ್ರಿಕೆಯನ್ನು ಕಳೆದ ಮೂವತ್ತೊಂದುವರ್ಷಗಳಿಂದ ಪ್ರಕಟಿಸುತ್ತ ಬಂದಿದೆ. ಸದ್ಯ ಅದರ ಸಂಪಾದಕರು ಪ್ರೊ.ಜಿ.ಅಬ್ದುಲ್ ಬಷೀರ್ ಅವರು. ಅದಕ್ಕೂ ಮೊದಲು ಪತ್ರಿಕೆ ಆರಂಭವಾದಾಗಿನಿಂದ (೧೯೮೩) ೨೦೧೨ರವರೆಗೂ ಪ್ರೊ.ನಾ.ಗೀತಾಚಾರ್ಯ ಅವರು 'ಕರ್ನಾಟಕ ಲೋಚನ' ಪತ್ರಿಕೆಯ ಸಂಪಾದಕರಾಗಿದ್ದರು. ಹಂಪಿ ಕನ್ನಡ ವಿಶ್ವವಿದ್ಯಾಲಯದ ಮಾನ್ಯತೆ ಪಡೆದ ಸಂಸ್ಥೆಯಾಗಿ ಪಿಎಚ್.ಡಿ ಪದವಿಗಾಗಿ ಸಂಶೋಧನ ವಿದ್ಯಾರ್ಥಿಗಳನ್ನು ತರಬೇತುಗೊಳಿಸುತ್ತಿದೆ.

ಪ್ರಾಚೀನ ಹಸ್ತಪ್ರತಿಗಳಿಗೆ ಸಂಬಂಧಿಸಿ 'ಸಿರಿಕಂಠ' ಹೆಸರಿನ ವೇದಿಕೆಯೊಂದನ್ನು ಈ ಸಂಸ್ಥೆ ಹುಟ್ಟುಹಾಕಿ ಅದರ ಮೂಲಕ "ಮನೆ ಬಾಗಿಲಿಗೆ ಹಸ್ತಪ್ರತಿ ದರ್ಶನ" ಎಂಬ ವಿನೂತನ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು ವಿಶೇಷ. ಜನಸಾಮಾನ್ಯರಿಗೆ ಪ್ರಾಚೀನ ಹಸ್ತಪ್ರತಿಗಳ ಮತ್ತು ಗ್ರಂಥಗಳ ಪರಿಚಯವನ್ನು ಮಾಡಿಕೊಡುವುದು ಈ ಕಾರ್ಯಕ್ರಮದ ಉದ್ದೇಶ. ಪತ್ರಿಕೆಯಲ್ಲಿ ಸಂಶೋಧನ ಲೇಖನಗಳು ಮುಖ್ಯವಾಗಿ ಪ್ರಕಟಗೊಳ್ಳುತ್ತವೆ. ಸಂಗೀತ, ಗಮಕ ಇತ್ಯಾದಿ ಕಲೆಗಳಿಗೆ ಸಂಬಂಧಿಸಿದ ಚಟುವಟಿಕೆಗಳೂ ಇಲ್ಲಿ ನಡೆಯುತ್ತವೆ. ಬಿ.ಎಂ.ಶ್ರೀ ಪ್ರತಿಷ್ಠಾನವು ಗ್ರಂಥಸಂಪಾದನ ಪರಿಭಾಷಾಕೋಶ, ಕನ್ನಡ ತಿರುಕ್ಕುರುಳ್, ಹರಿದಾಸರ ಕೀರ್ತನೆಗಳು ಮುಂತಾದ ೧೮೫ಕ್ಕೂ ಹೆಚ್ಚು ಸಂಖ್ಯೆಯ ಗ್ರಂಥಗಳನ್ನು ಪ್ರಕಟಿಸಿದೆ. ಕಾಲಕಾಲಕ್ಕೆ ಕಮ್ಮಟ, ವಿಚಾರಸಂಕಿರಣ, ಚಿಂತನಮಂಥನ, ದತ್ತಿ ಉಪನ್ಯಾಸ, ಮುಂತಾದ ಕಾರ್ಯಕ್ರಮಗಳನ್ನೂ ಹಮ್ಮಿಕೊಳ್ಳುತ್ತದೆ. ಸಂಸ್ಥೆಯ ರಜತಮಹೋತ್ಸವದ ಸಂದರ್ಭದಲ್ಲಿ ಭವ್ಯವಾದ ಮೂರುಮಹಡಿಗಳ ಕಲಾಭವನವನ್ನೂ ನಿರ್ಮಿಸಲಾಗಿದೆ. ಅಲ್ಲಿ ಒಂದು ಸುಸಜ್ಜಿತ ಗ್ರಂಥಾಲಯವೂ, ಪ್ರಾಚೀನ ಹಸ್ತಪ್ರತಿ ಭಂಡಾರವೂ ಇದೆ. ಪ್ರತಿಷ್ಠಾನದ ಬಹು ಮುಖ್ಯ

ಸೃಷ್ಟಿಯಾಗಿವೆ. ಕೆಳದಿ ಸಂಶೋಧನ ಸಂಸ್ಥೆ ಏಕವ್ಯಕ್ತಿ ಕೇಂದ್ರಿತವಾಗಿ ಬೆಳೆದಿದೆಯಾದರೂ ಸಾಕಷ್ಟು ಸಂಶೋಧನೆಗೆ ಅವಕಾಶವಿದ್ದರೂ ಸಾಂಸ್ಥಿಕವಾಗಿ ಹೆಚ್ಚು ಕೆಲಸ ಮಾಡಲು ಸಾಧ್ಯವಾಗದೆ ಸೊರಗಿದೆ. ಗಮನಿಸಬೇಕಾದ ಅಂಶವೆಂದರೆ ವಿದೇಶದಲ್ಲೂ ಇದರ ಖ್ಯಾತಿ ಪಸರಿಸಿದೆ. ಉದಾಹರಣೆಗೆ ಜಪಾನಸರ್ಕಾರದ ಪತ್ರಾಗಾರ ಇಲಾಖೆಯ ವಾರ್ಷಿಕ ವರದಿಯಲ್ಲಿ ಕೆಳದಿಯ ಐತಿಹಾಸಿಕ ದಾಖಲೆಗಳ ಸೂಚಿಯ ವೈಶಿಷ್ಟ್ಯವನ್ನು ನಮೂದಿಸಿದೆ (Kitanomaru- Journal of the National Archieves of Japan No.31 March ೧೯೯೧). ವ್ಯಕ್ತಿಯೊಬ್ಬರು ಸಂಶೋಧನ ಸಂಸ್ಥೆಯನ್ನು ಕಟ್ಟಿ ಅಂತಾರಾಷ್ಟ್ರೀಯ ಮಟ್ಟಕ್ಕೆ ಏರಿಸಬಲ್ಲರು ಎಂಬುದಕ್ಕೆ ಇದು ತಕ್ಕುದಾದ ಉದಾಹರಣೆಯೇ ಸರಿ.

ಏಶಿಯನ್ ಅಧ್ಯಯನ ಸಂಸ್ಥೆ, ಚೆನ್ನೈ (Institute of Asian Studies)

ಚೆನ್ನೈನ ಚೆಮ್ಮನಚೆರ್ರಿಯಲ್ಲಿ ಇರುವ ಏಶಿಯನ್ ಅಧ್ಯಯನ ಸಂಸ್ಥೆಯಲ್ಲಿ ಕನ್ನಡ ವಿಭಾಗವೊಂದಿದ್ದು ಅದು ಕನ್ನಡೇತರರಿಗೆ ಕನ್ನಡ ಭಾಷೆ, ಸಾಹಿತ್ಯ ಸಂಸ್ಕೃತಿಗಳಿಗೆ ಸಂಬಂಧಿಸಿದಂತೆ ಆಕರಗ್ರಂಥಗಳನ್ನು ಇಂಗ್ಲಿಷ್‌ನಲ್ಲಿ ಸಿದ್ಧಪಡಿಸಲು ಅನೇಕ ಯೋಜನೆಗಳನ್ನು ಹಾಕಿಕೊಂಡು ಕೆಲಸಮಾಡಿದೆ. ಕನ್ನಡ ಪದಗಳಿಗೆ ಇಂಗ್ಲಿಷ್ ತಮಿಳು ಮತ್ತು ಜಪಾನಿ ಭಾಷೆಯಲ್ಲಿ ಅರ್ಥಗಳನ್ನು ನೀಡುವ ಬೃಹತ್‌ಕೋಶದ ಸಂಪುಟಗಳು, ಕರ್ನಾಟಕ ಜಾನಪದ ಸಂಸ್ಕೃತಿ ವಿಶ್ವಕೋಶ, ಪ್ರಕಟವಾಗಿವೆ. ಅಪೂರ್ವ ಪ್ರಾಚೀನ ಹಸ್ತಪ್ರತಿಗಳನ್ನು ಸಂಶೋಧನ ಟಿಪ್ಪಣಿಗಳೊಂದಿಗೆ ಪ್ರಕಟಿಸಲಾಗಿದೆ. ಮದರಾಸು ವಿಶ್ವ ವಿದ್ಯಾಲಯ ಮತ್ತು ಪಾಂಡಿಚೇರಿ ವಿಶ್ವವಿದ್ಯಾಲಯಗಳ ಮಾನ್ಯತೆಯನ್ನು ಪಡೆದಿದೆ. ಇದರಿಂದ ಕನ್ನಡಸಾಹಿತ್ಯ ಭಾಷೆ ಕುರಿತ ವಿಷಯಗಳ ಬಗೆಗೆ ಪಿಎಚ್.ಡಿ. ಮತ್ತು ಎಂ.ಫಿಲ್ ಮಾಡಲು ಅವಕಾಶ ಕಲ್ಪಿಸಿದೆ. Contribution of Karnataka to Sanskrit (೧೯೯೭) ಎಂಬ ಮೌಲಿಕ ಸಂಶೋಧನ ಕೃತಿಯನ್ನು ಪ್ರಕಟಿಸಿದೆ.

'ಕರ್ನಾಟಕ ಸಂಶೋಧಕರ ಒಕ್ಕೂಟ', ಬೆಂಗಳೂರು

ವಿಶ್ವವಿದ್ಯಾಲಯಗಳಲ್ಲಿನ ಸಂಶೋಧನ ಚಟುವಟಿಕೆಗಳು ಬರೀ ಚರ್ವಿತಚರ್ವಣ–ದಂತಾಗಿ, ಕನ್ನಡ ಭಾಷೆ, ಕನ್ನಡ ಸಾಹಿತ್ಯ, ಕನ್ನಡ ಸಂಸ್ಕೃತಿಗಳನ್ನು ಕುರಿತಾದ ಸಂಶೋಧನೆಗಳು ಹೊಸ ದಿಗಂತಗಳನ್ನು ಕಾಣಿಸದೇ ಪದವಿಗಳ ಉತ್ಪನ್ನ ಸರಕುಗಳಾಗಿ ನಿಂತಿರುವ ಇಂದಿನ ಕಾಲದಲ್ಲಿ ಕನ್ನಡ ಸಂಶೋಧನ ಲೋಕ ವೈವಿಧ್ಯಮಯ ಹೊಸ ದಾರಿಗಳನ್ನು ಹುಡುಕಿಕೊಳ್ಳಲು ಕರ್ನಾಟಕ ಸಂಶೋಧಕರ ಒಕ್ಕೂಟವೊಂದನ್ನು ಸ್ಥಾಪಿಸುವ ಹಂಬಲವು ಈಡೇರಿದ್ದು ಕನ್ನಡಕ್ಕೆ ಶಾಸ್ತ್ರೀಯಭಾಷೆಯ ಸ್ಥಾನ ಲಭಿಸಿದ ಅಮೃತಗಳಿಗೆಯಲ್ಲಿ. ವಿಶ್ವವಿದ್ಯಾಲಯಗಳಲ್ಲಿನ ಸಂಶೋಧಕರು ಪದವಿ ಬಡತಿಗಳಿಗಾಗಿ ನಕಲಿನಂತೆ ನಡೆಸುತ್ತಿರುವ ಕಳಪೆ ಸಂಶೋಧನೆಗಳು ಮತ್ತು ಒಟ್ಟಾರೆ ಜಡವಾಗುತ್ತಿರುವ ಕನ್ನಡ ಸಂಶೋಧನ ಕ್ಷೇತ್ರವನ್ನು ಗತಿಶೀಲವಾಗಿಸಲು ಕನ್ನಡವನ್ನು ಬಹುಶಿಸ್ತೀಯ ವಲಯಗಳಲ್ಲಿ ಶೋಧಿಸುವ ಕಾರ್ಯವನ್ನು ಹಾಗೂ ಕ್ರಿಯಾಶೀಲಗೊಳಿಸುವ ಉದ್ದೇಶವನ್ನಿಟ್ಟುಕೊಂಡು ಬೆಂಗಳೂರಿನಲ್ಲಿ 'ಕರ್ನಾಟಕ ಸಂಶೋಧಕರ ಒಕ್ಕೂಟ'ವನ್ನು ಸದ್ಯ ಗೌರವ ಕಾರ್ಯಾಧ್ಯಕ್ಷರಾದ ಕಾ.ತ.ಚಿಕ್ಕಣ್ಣ ಅವರ ನೇತೃತ್ವದಲ್ಲಿ ಬಿ.ಸುರೇಶ, ಕೆ.ವಿ.ನಾಗರಾಜಮೂರ್ತಿ, ರೇವಯ್ಯ ಒಡೆಯರ್, ಪ್ರೊ. ಸುಬ್ರಹ್ಮಣ್ಯ ಸ್ವಾಮಿ, ಎಸ್.ಜಿ. ನಾರಾಯಣಸ್ವಾಮಿ ಅವರು ಮುಂದಾಗಿ ನಿಂತು ೨೦೦೯ರಲ್ಲಿ ಸ್ಥಾಪಿಸಿದರು. ಈ ಸಂಘಟನೆಯ ಗೌರವಾಧ್ಯಕ್ಷರು ನಾಡಿನ ಹಿರಿಯ ಸಂಶೋಧಕರು ವಿದ್ವಾಂಸರೂ ಆಗಿರುವ ಡಾ.ಟಿ.ವಿ.ವೆಂಕಟಾಚಲಶಾಸ್ತ್ರೀ ಅವರು. "ಕನ್ನಡ ಭಾಷೆ, ಸಾಹಿತ್ಯ,

ಸಂಶೋಧನೆ ಮತ್ತು ದಾಖಲೀಕರಣವನ್ನು ಕೈಗೊಳ್ಳುವುದು ಮತ್ತು ಪ್ರೋತ್ಸಾಹಿಸುವುದು. ೩. ಹಸ್ತಪ್ರತಿಗಳನ್ನು ಸಂಗ್ರಹಿಸುವುದು ಮತ್ತು ಗಣಕೀಕರಿಸುವುದು. ೪. ಶಾಸ್ತ್ರೀಯ ಕನ್ನಡಕ್ಕೆ ಸಂಬಂಧಿಸಿದ ಪುಸ್ತಕಗಳನ್ನು ಪ್ರಕಟಿಸುವುದು ೫. ನಾಣ್ಯಶಾಸ್ತ್ರ, ಶಾಸನಶಾಸ್ತ್ರ, ಪುರಾತತ್ವಶಾಸ್ತ್ರ ಮತ್ತು ಪ್ರಾಚೀನ ಇತಿಹಾಸ ಮುಂತಾದವುಗಳ ಅಂತರ ಶಿಸ್ತೀಯ ಸಂಶೋಧನೆಗೆ ಮಾರ್ಗಗಳನ್ನು ರೂಪಿಸುವುದು. ೬. ಶಾಸ್ತ್ರೀಯಭಾಷೆ, ಶಾಸ್ತ್ರೀಯಸಂಗೀತ ಮತ್ತು ಶಾಸ್ತ್ರೀಯನೃತ್ಯಗಳ ನಡುವಣ ಸಂಪರ್ಕಗಳನ್ನು ಪರಿಶೋಧಿಸುವುದು. ೭. ಶಾಸ್ತ್ರೀಯಭಾಷೆ ಮತ್ತು ಆಧುನಿಕ ತಂತ್ರಜ್ಞಾನಗಳನ್ನು ಸಂಪರ್ಕಿಸುವುದು. ೮. ಶಾಸ್ತ್ರೀಯಪಠ್ಯಗಳನ್ನು ಇತರ ಭಾರತೀಯ ಭಾಷೆಗಳಿಗೆ ಮತ್ತು ಇಂಗ್ಲಿಷ್ ಹಾಗೂ ಆಯ್ದ ಯೂರೋಪಿಯನ್ ಭಾಷೆಗಳಿಗೆ ಭಾಷಾಂತರಿಸುವುದು. ೯. ಜಗತ್ತಿನ ಪುರಾತನ ನಾಗರಿಕತೆಗಳನ್ನು ಶಾಸ್ತ್ರೀಯ ಭಾಷೆಯ ಸಾಂಸ್ಕೃತಿಕತೆ ಕಣಜಕ್ಕೆ ಅರಿವ ಅಧ್ಯಯನ ಅನುಸಂಧಾನವನ್ನು ಉತ್ತೇಜಿಸುವುದು. ೧೦. ಪುರಾತನ ದ್ರಾವಿಡ ಕಾಲದ ಭಾರತದ ಬಗ್ಗೆ ಕೇಳಲಾಗುವ ಪ್ರಶ್ನೆಗಳಿಗೆ ಉತ್ತರ ಕೊಡಲು ಬೇಕಾಗುವ ಜ್ಞಾನಭಂಡಾರವನ್ನು ಸ್ಥಾಪಿಸುವುದು. ಈ ೧೦ ಅಂಶಗಳು ಪ್ರಮುಖವಾಗಿದ್ದು ಕನ್ನಡದ ಸಮಗ್ರ ಅತ್ಯುತ್ತಮ ಅಂತಾರಾಷ್ಟ್ರೀಯ ಮಟ್ಟದ ಸಂಶೋಧನೆಗೆ ಈ ಕೇಂದ್ರ ಮಾದರಿಯಾಗಬಹುದಾಗಿದೆ.

ಕೆಳದಿ ಸಂಶೋಧನಾಲಯ, ಕೆಳದಿ

೧೫ನೇ ಶತಮಾನದಿಂದ ೧೮ನೇ ಶತಮಾನದ ವರೆಗೆ ಮೂರು ಶತಮಾನಗಳ ಕಾಲ ಆಳಿದ ಕೆಳದಿ ಅರಸುಮನೆತನ ಕರ್ನಾಟಕದ ಮಧ್ಯಕಾಲೀನ ಇತಿಹಾಸದಲ್ಲಿ ಉನ್ನತ ಸ್ಥಾನದಲ್ಲಿತ್ತೆಂದು ಐತಿಹಾಸಿಕ ದಾಖಲೆಗಳು ಹೇಳುತ್ತಿವೆ. ಕೆಳದಿ ಅರಸರ ಕಾಲದಲ್ಲಿ ಜನಸಾಮಾನ್ಯರು ನೆಮ್ಮದಿಯ ಜೀವನವನ್ನು ನಡೆಸುತ್ತಿದ್ದರೆಂದೂ ಅದಕ್ಕಾಗೆ ಸಾಹಿತ್ಯ, ಧರ್ಮ ಮತ್ತು ಸಾಂಸ್ಕೃತಿಕ ಚಟುವಟಿಕೆಗಳು ಮುಗಿಲುಮುಟ್ಟುವಂತೆ ಕೆಳದಿ ಅರಸರ ಕಾಲದಲ್ಲಿ ನಡೆದಿದ್ದವೆಂದೂ ಇತಿಹಾಸಕಾರರ ಅಭಿಪ್ರಾಯ. ಇಂತಹ ಮಹತ್ವದ ಐತಿಹಾಸಿಕ ತಾಣದಲ್ಲಿ ಕೆಳದಿಯ ಸಾಹಿತ್ಯ ಸಂಸ್ಕೃತಿಗಳ ಸಮಗ್ರ ಸಂಶೋಧನೆಗೆ ಮೀಸಲಾದ ಕೆಳದಿ ಸಂಶೋಧನಾಲಯವನ್ನು ಕೆಳದಿಯ ಪ್ರಸಿದ್ಧ ಇತಿಹಾಸ ತಜ್ಞ ವಿದ್ವಾಂಸರಾದ ಡಾ. ಗುಂಡಾ ಜೋಯಿಸರು ಸುಮಾರು ೨೫ವರ್ಷಗಳ ಹಿಂದೆಯೇ ಸ್ಥಾಪಿಸಿ (ಸದ್ಯ ಅವರ ಪುತ್ರ ಡಾ.ಕೆಳದಿ ವೆಂಕಟೇಶ್) ಮುನ್ನಡೆಸಿದ್ದಾರೆ. ಕುವೆಂಪು ವಿಶ್ವವಿದ್ಯಾನಿಲಯದ ಮನ್ನಣೆಯನ್ನು ಪಡೆದ ಈ ಸಂಶೋಧನಾಲಯದಲ್ಲಿ ಎಂ.ಫಿಲ್, ಪಿಎಚ್.ಡಿ ಮಾಡಲು ಅವಕಾಶ ನೀಡಲಾಗಿದೆ. ಕೆಳದಿ ಅರಸರು ಸಾಹಿತ್ಯಪ್ರಿಯರಾಗಿದ್ದಲ್ಲದೆ ತಾವೂ ಕೂಡ ಅನೇಕ ಕೃತಿಗಳನ್ನು ರಚಿಸಿದ್ದಾರೆ. ಅವರ ಕಾಲದಲ್ಲಿ ವಿಪುಲ ಕನ್ನಡ ಮತ್ತು ಸಂಸ್ಕೃತ ಕೃತಿಗಳು ಸೃಷ್ಟಿಯಾಗಿವೆ. ಈ ಕೃತಿಗಳ ಸೂಚಿಯನ್ನು ಸಂಶೋಧನಾಲಯ ಸಿದ್ಧಪಡಿಸಿದೆ. ತಿಗಳಾರಿ ತಾಡೋಲೆಗ್ರಂಥಗಳ ಸೂಚಿಗಳನ್ನು ಮೂರು ಭಾಗಗಳಲ್ಲಿ ಸಿದ್ಧಪಡಿಸಲಾಗಿದೆ. ಗೀತಗೌರವ ಎಂಬ ಅಪೂರ್ವ ಕೃತಿಯನ್ನು ಒಳಗೊಂಡು ಕೆಲವು ಮಹತ್ವದ ಕೃತಿಗಳನ್ನು ಪ್ರಕಟಿಸಿದೆ. ದೇಶ ವಿದೇಶಗಳಲ್ಲಿ ಕನ್ನಡ, ಇಂಗ್ಲಿಷ್, ಮರಾಠಿ, ಫ್ರೆಂಚ್, ಪೋರ್ತುಗೀಜ್, ಪರ್ಶಿಯಾ, ಡಚ್ ಭಾಷೆಗಳಲ್ಲಿ ವಿಪುಲವಾಗಿ ಚದುರಿಹೋಗಿರುವ ಆಕರಗಳನ್ನು ಪತ್ತೆಹಚ್ಚಿ ಸೂಚಿಯನ್ನು ಸಿದ್ಧಪಡಿಸುವ ಯೋಜನೆಯನ್ನು ಹಾಕಿಕೊಂಡಿದೆ. ಲಿಪಿಶಾಸ್ತ್ರ, ಹಸ್ತಪ್ರತಿಶಾಸ್ತ್ರ, ಪುರಾತತ್ವ, ವಸ್ತು ಸಂಗ್ರಹಾಲಯ ಶಾಸ್ತ್ರ ಮುಂತಾದ ಜ್ಞಾನ ಶಾಖೆಗಳಿಗೆ ಸಂಬಂಧಿಸಿ ತರಬೇತಿ ಶಿಬಿರಗಳನ್ನು ಈ ಸಂಶೋಧನಾಲಯ ಸಂಘಟಿಸಿದೆ. ಕರ್ನಾಟಕದ ಸಾಂಸ್ಕೃತಿಕ ಚರಿತ್ರೆಗೆ ಕೆಳದಿ ಅರಸರ ಕಾಲ ಮಹತ್ವದ ತಿರುವುಕೊಟ್ಟ ಕಾಲ. ಮಹತ್ವದ ಸಾಹಿತ್ಯ ಕೃತಿಗಳು ಇವರ ಕಾಲದಲ್ಲಿ

ಶತಮಾನದ ಕಲ್ಯಾಣದ ಶರಣರ ಅಧ್ಯಾತ್ಮದ ಬೆಳಕನ್ನು ಕರಾವಳಿಯಲ್ಲಿ ಬೀರಲು ನಡೆಸಿರುವ ಪ್ರಯತ್ನ ಶ್ಲಾಘನೀಯ.

ದಿ ನ್ಯೂಇಂಡಿಯಾ ಫೌಂಡೇಶನ್, ಬೆಂಗಳೂರು

ಅಂತಾರಾಷ್ಟ್ರೀಯ ಪ್ರಖ್ಯಾತಿಯ ಉದ್ಯಮಿಗಳಾದ ಶ್ರೀ ರಾಮಚಂದ್ರ ಗುಹಾ ಮತ್ತು ಶ್ರೀ ನಂದನ ನೀಲಕೇಣಿ ಅವರು ದಿ ನ್ಯೂ ಇಂಡಿಯಾ ಫೌಂಡೇಶನ್ ಎಂಬ ಅಂತಾರಾಷ್ಟ್ರೀಯ ಸಂಶೋಧನ ಸಂಸ್ಥೆಯನ್ನು ಬೆಂಗಳೂರಿನಲ್ಲಿ ಸ್ಥಾಪಿಸಿದ್ದಾರೆ. ಸ್ವಾತಂತ್ರ್ಯೋತ್ತರ ಭಾರತೀಯ ಸಂಸ್ಕೃತಿ, ಇತಿಹಾಸ, ಜೀವನಚರಿತ್ರೆ ಮುಂತಾದ ಕ್ಷೇತ್ರಗಳಲ್ಲಿ ಮೂಲ ಸಂಶೋಧನಾತ್ಮಕ ಗ್ರಂಥಗಳನ್ನು ರಚಿಸಲು ಮತ್ತು ಸಂಶೋಧನೆ ಕೈಕೊಳ್ಳಲು ಶಿಷ್ಯವೇತನಗಳನ್ನು ಈ ಸಂಸ್ಥೆಯು ನೀಡುತ್ತದೆ. (ramguha@gmail.com)

'ಭಾರತೀಯ ಉನ್ನತ ಸಂಶೋಧನಾಧ್ಯಯನಕೇಂದ್ರ'

ಸ್ಟೋನಿಬ್ರೂಕ್ ಭಿಷಂಬರನಾಥ ಮಟ್ಟೂ ಮತ್ತು ಶೀಲಾ ಮಟ್ಟೂ ಅವರು ನೀಡಿದ ಮುನ್ನೂರು ಕೋಟಿ ರೂಪಾಯಿ ದತ್ತಿಯಿಂದ ಅವರ ಹೆಸರಿನಲ್ಲಿ ಭಾರತೀಯ ಉನ್ನತ ಸಂಶೋಧನಾಧ್ಯಯನಕೇಂದ್ರವು ಅಮೇರಿಕೆಯ ಸ್ಟೋನಿಬ್ರೂಕ್ ವಿಶ್ವವಿದ್ಯಾಲಯದಲ್ಲಿ ಸ್ಥಾಪನೆಯಾಗಿದೆ (೨೦೧೩). (www.stonybrook.edu/india) ಇಡೀ ಅಮೇರಿಕಾ ದೇಶದಲ್ಲಿ ಭಾರತೀಯ ಸಂಶೋಧನಾಧ್ಯಯನಕ್ಕಾಗಿ ಸಾರ್ವಜನಿಕ ವಿಶ್ವವಿದ್ಯಾಲಯಕ್ಕೆ ನೀಡಿದ ಅತಿ ದೊಡ್ಡ ಕಾಣಿಕೆ ಇದಾಗಿದೆ. ಈ ಕೇಂದ್ರದಲ್ಲಿ ಬಹು ಮಹತ್ವದ ಪೀಠವೊಂದು ಇದೆ. ಅದು ನಿರ್ಮಲ್ ಅಗಸ್ತಿನಾ ಮಟ್ಟೂ ಅವರ ಹೆಸರಿನಲ್ಲಿರುವ ಸಂಸ್ಥೆ. 'Classical Indic Humanities'. ಭಾರತೀಯಕಲೆ, ಭಾಷಾವಿಜ್ಞಾನ, ನೀತಿಶಾಸ್ತ್ರ, ಸಾಹಿತ್ಯ, ತತ್ತ್ವಶಾಸ್ತ್ರ, ಧರ್ಮ, ಆಧ್ಯಾತ್ಮ, ಮನಶ್ಯಾಸ್ತ್ರ, ಸಮಾಜೋರಾಜ್ಯಸಿದ್ಧಾಂತ ಹಾಗೂ ಇವುಗಳಿಗೆ ಸಂಬಂಧಿಸಿದ ಇತರ ಅಧ್ಯಯನ ವಿಷಯಗಳ ಸಂಶೋಧನೆಗಳು ಇಲ್ಲಿ ನಡೆಯುತ್ತವೆ. ಸ್ಟೋನಿಬ್ರೂಕ್ ವಿಶ್ವವಿದ್ಯಾಲಯದಲ್ಲಿ ೧೯೭೩ರಲ್ಲಿ ಭಾರತೀಯ ಅಧ್ಯಯನದ ಕೇವಲ ಎರಡು ವಿಷಯಗಳ ಕೋರ್ಸುಗಳಿದ್ದವು. ಇದೀಗ ಕನ್ನಡಭಾಷೆ, ಭಾಷಾವಿಜ್ಞಾನ, ಸಾಹಿತ್ಯ, ಅಮೇರಿಕೆಯಲ್ಲಿ ಕನ್ನಡದ ನಿರ್ವಹಣೆ, ಇವು ಈ ಕೇಂದ್ರದ ಬಹುಮುಖ್ಯ ಕಾರ್ಯವಿಭಾಗಗಳಾಗಿವೆ. ಸುಪ್ರಸಿದ್ಧ ಲೇಖಕರ, ಕಲಾವಿದರ ಗ್ರಂಥಗಳನ್ನು ಒಳಗೊಂಡ ಒಂದು ಉತ್ತಮ ಗ್ರಂಥಾಲಯವೂ ಇಲ್ಲಿದೆ. ಅಮೇರಿಕೆಯ ಈ ಭಾರತೀಯ ಸಂಶೋಧನಾಧ್ಯಯನ ಕೇಂದ್ರದ ನಿರ್ದೇಶಕರು ಕರ್ನಾಟಕದ ಅಂತಾರಾಷ್ಟ್ರೀಯ ಖ್ಯಾತಿಯ ಪ್ರೊ.ಎಸ್.ಎನ್. ಶ್ರೀಧರ ಮತ್ತು ಮೀನಾ. ಶ್ರೀಮತಿ ಕಮಲಾ ಕೆ. ಶ್ರೀಧರ ಅವರು ಅಲ್ಲಿಯ ಪ್ರಾಧ್ಯಾಪಕರು. ಸಂಸ್ಥೆ ಈ ಮುಂಚೆ ಭಾರತದ ಸಮಗ್ರ ಚಿತ್ರಣವನ್ನು ನೀಡುವ 'ಅನನ್ಯ' (೧೯೯೭) ಎಂಬ ಉದ್‌ಗ್ರಂಥವನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ಪ್ರಕಟಗೊಳಿಸಿದೆ. ಅದರ ಸಂಪಾದಕರೂ ಎಸ್.ಎನ್.ಶ್ರೀಧರ ಅವರು.

ಮಂಜುನಾಥೇಶ್ವರ ಸಂಸ್ಕೃತಿ ಸಂಶೋಧನ ಪ್ರತಿಷ್ಠಾನ, ಧರ್ಮಸ್ಥಳ

ಮಾನವೀಯ ಮೌಲ್ಯ ಪ್ರತಿಪಾದಕತ್ವದ ಧರ್ಮಸ್ಥಳದ ಧರ್ಮಾಧಿಕಾರಿಗಳಾದ ಡಾ. ವೀರೇಂದ್ರ ಹೆಗ್ಗಡೆ ಅವರ ದೂರದೃಷ್ಟಿಯಿಂದ ಧರ್ಮಸ್ಥಳ ಬರೀ ಪುಣ್ಯಕ್ಷೇತ್ರವೆನಿಸದೆ ಅದೊಂದು ಕಲೆ, ಸಾಹಿತ್ಯ, ಸಂಸ್ಕೃತಿ, ಶಿಕ್ಷಣ, ಅಧ್ಯಾತ್ಮಗಳ ಜಂಗಮ ಕ್ಷೇತ್ರವೆನಿಸಿದೆ. ಸಂಸ್ಕೃತಿ ಸಂಶೋಧನೆ ಇಲ್ಲಿ ನಿರಂತರ ನಡೆಯುವಂತೆ ಶ್ರೀ ಮಂಜುನಾಥೇಶ್ವರ ಸಂಸ್ಕೃತಿ ಸಂಶೋಧನ

ಜನಪದ, ಪುರಾತತ್ತ್ವ, ಶಾಸನ, ಚರಿತ್ರೆ ಮುಂತಾದವುಗಳ ಅಧ್ಯಯನ, ಸಂಶೋಧನೆ, ತೌಲನಿಕ ವಿಶ್ಲೇಷಣೆಗಳು ನಡೆಯಬೇಕು. ಸಂಶೋಧನೆಯ ನೋಟನಿಲುವುಗಳ ಬಗ್ಗೆ, ಅವಕಾಶ ಅನುಕೂಲಗಳ ಬಗ್ಗೆ ವಿದ್ವಾಂಸ ಮನಸ್ಸುಗಳನ್ನು ಸಜ್ಜುಗೊಳಿಸಬೇಕು, ಯುವ ಸಮುದಾಯವೇ ನಮ್ಮ ಮುಂದಿನ ಸಂಪತ್ತು. ಸಂಶೋಧನಾ ಕಾಯಕನಿರತರಿಗೆ ಖಜಾನೆ ತುಂಬುವಷ್ಟಲ್ಲದಿದ್ದರೂ ಅನುಕೂಲಕರವಾಗುವಂತಹ ಜೀವನಾವಕಾಶಗಳು ಲಭ್ಯವಾಗಬೇಕು ಇದು ಕರ್ನಾಟಕ ಸಂಶೋಧಕರ ಒಕ್ಕೂಟದ ಪ್ರಧಾನ ಆಸೆ-ನಿರೀಕ್ಷೆಯಾಗಿದೆ" ಎಂದು ಕಾ.ತ.ಚಿಕ್ಕಣ್ಣ ಹೇಳುತ್ತಾರೆ. "ಕನ್ನಡೇತರ ಬಹುಶಿಸ್ತೀಯ ನೆಲೆಗಳ ಜೊತೆಗೆ ಸಾವಯವ ಸಂಬಂಧವನ್ನು ಹುಡುಕುತ್ತ, ಅದರ ಬೌದ್ಧಿಕ ನೆಲೆಯನ್ನು ವಿಸ್ತರಿಸಿಕೊಳ್ಳುತ್ತ ಜನಪರವಾಗಿಸುವ ದಿಕ್ಕಿನಲ್ಲಿ ತೊಡಗಬೇಕೆಂಬುದು ನಮ್ಮ ಅಪೇಕ್ಷೆ. ಕನ್ನಡಭಾಷೆ ಸಾಹಿತ್ಯ, ಲಲಿತಕಲೆ, ಜಾನಪದ, ಜ್ಞಾನ, ವಿಜ್ಞಾನಗಳ ಕ್ರಿಯಾಶೀಲ ಚಿಂತನೆಗೆ ಒಕ್ಕೂಟವೊಂದು ವೇದಿಕೆ" ಎಂದು ಕಾರ್ಯದರ್ಶಿ ರೇವಯ್ಯ ಒಡೆಯರ್ ಹೇಳುತ್ತಾರೆ.

ಕರ್ನಾಟಕ ಸಂಶೋಧಕರ ಒಕ್ಕೂಟವು ಹುಟ್ಟಿ ಐದು ವರ್ಷಗಳಲ್ಲೆ ತನ್ನ ಉದ್ದೇಶಕ್ಕೆ ಅನುಗುಣವಾಗಿ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿತು. ಸಂಶೋಧನ ವಿದ್ಯಾರ್ಥಿ-ಗಳಿಗಾಗಿ ನಾಡಿನ ವಿವಿಧೆಡೆಗಳಲ್ಲಿ ಸಂಶೋಧನ ಕಮ್ಮಟಗಳನ್ನು ಏರ್ಪಡಿಸಿದೆ. ಸಾವಿರಾರು ವಿದ್ಯಾರ್ಥಿಗಳು ಕಮ್ಮಟಗಳ ಪ್ರಯೋಜನವನ್ನು ಪಡೆದಿದ್ದಾರೆ. ಕಮ್ಮಟಗಳಲ್ಲಿ ವಿದ್ವಾಂಸರು ಮಂಡಿಸಿದ ಸಂಶೋಧನ ಪ್ರಬಂಧಗಳನ್ನು 'ಶೋಧ ಪರಿಶೋಧ' ಹೆಸರಿನ ಪುಸ್ತಕ ರೂಪದಲ್ಲಿ (ಸಂಪಾದಕರು: ಡಾ.ರೇವಯ್ಯ ಒಡೆಯರ್, ಮತ್ತು ಡಾ.ಹಾ.ಮ.ನಾಗಾರ್ಜುನ ೨೦೧೧) ಪ್ರಕಟಿಸಿ ದಾಖಲಿಸಿದ್ದಾರೆ. ಅದೇ ಹೆಸರಿನಲ್ಲಿ ನಾಲ್ದಿಂಗಳ ಸಂಶೋಧನ ನಿಯತಕಾಲಿಕೆಯೊಂದನ್ನು ಪ್ರಕಟಿಸುತ್ತಲಿದ್ದಾರೆ.

ಅಲ್ಲಮಪ್ರಭು ಪೀಠ, ಕಾಂತಾವರ

ಉಡುಪಿ ಜಿಲ್ಲೆಯ ಕಾರ್ಕಳ ತಾಲೂಕಿನ ಕಾಂತಾವರದಲ್ಲಿ ಕನ್ನಡದ ಉದ್ದಾಮ ಸಾಹಿತಿ ಎಸ್.ವಿ.ಪರಮೇಶ್ವರ ಭಟ್ಟರು ಆರಂಭಿಸಿದ 'ಕನ್ನಡ ಸಂಘ' (೧೯೭೬ ಮೇ ೨೬) ಮೂಲತಃ ಕನ್ನಡ ಸಾಹಿತ್ಯ ಚಟುವಟಿಕೆಗಳಿಗೆ ತೆರೆದುಕೊಂಡಿರುವ ಗ್ರಾಮೀಣ ಸಂಸ್ಥೆ. ಈಚೆಗೆ (೨೦೧೧ ಮೇ ೬) ಈ ಸಂಘವು ೧೨ ನೆಯ ಶತಮಾನದ ಅಧ್ಯಾತ್ಮಯೋಗಿ ಅಲ್ಲಮಪ್ರಭುವಿನ ಹೆಸರಿನಲ್ಲಿ ಸಂಶೋಧನ ಪೀಠವೊಂದನ್ನು ಸ್ಥಾಪಿಸಿ ಭಾರತೀಯ ಸಂಸ್ಕೃತಿಯ ಮೂಲ ಸ್ವರೂಪಕ್ಕೆ ಹೊಸ ಬೆಳಕನ್ನು ನೀಡಿದ ಶರಣ ಸಂಸ್ಕೃತಿಯ ಜೊತೆಗೆ ಬೌದ್ಧ, ಜೈನ, ಶೈವ, ಶಾಕ್ತ, ಶಾಂಕರ, ಮಾಧ್ವಮತವೇ ಮೊದಲಾದ ಷಡ್ದರ್ಶನಗಳ ತೌಲನಿಕ ಅಧ್ಯಯನಕ್ಕೆ ಅವಕಾಶ ಕಲ್ಪಿಸುವ ಅಧ್ಯಯನ, ಸಂಶೋಧನ ಕೇಂದ್ರವಾಗಿ ರೂಪಿಸಲು ಯೋಜನೆಗಳನ್ನು ಹಾಕಿಕೊಂಡಿದೆ. ಸಾಹಿತ್ಯ ಸಂಸ್ಕೃತಿಗೆ ಸಂಬಂಧಿಸಿದ ಯಾವುದೇ ಭಾರತೀಯ ಭಾಷೆಯ ಹಸ್ತಪ್ರತಿ ಸಂಗ್ರಹ ಮತ್ತು ಸಾಂಸ್ಕೃತಿಕ ಸಾಹಿತ್ಯಿಕ ಪುಸ್ತಕಗಳ ಪ್ರಕಟನೆ, ವಸ್ತುಸಂಗ್ರಹಾಲಯ, ವಾಚನಾಲಯ, ಅಂತಾರಾಷ್ಟ್ರೀಯಮಟ್ಟದ ಗ್ರಂಥಾಲಯಸ್ಥಾಪನೆ, ರಂಗ ಚಟುವಟಿಕೆಗಳ ಸಂಶೋಧನೆ, ಪ್ರಯೋಗ ಮುಂತಾದ ಯೋಜನೆಗಳು ಇದರಲ್ಲಿವೆ. ಕಾಂತಾವರ ಕನ್ನಡ ಸಂಘದ ಅಧ್ಯಕ್ಷ ಡಾ.ನಾ.ಮೊಗಸಾಲೆ ಅವರು ಪೀಠದ ರೂವಾರಿ, ಅವರೇ ಪ್ರಧಾನ ನಿರ್ದೇಶಕರಾಗಿದ್ದಾರೆ. ಪ್ರತಿ ತಿಂಗಳು ನಡೆಸಿದ ಆಹ್ವಾನಿತ ವಿದ್ವಾಂಸರ ಉಪನ್ಯಾಸಗಳನ್ನು ಗ್ರಂಥ ರೂಪದಲ್ಲಿ ಪ್ರಕಟಿಸುತ್ತ ಬಂದಿದ್ದಾರೆ. ಶರಣರ ಮಹಾಮನೆ ಅನುಭವಮಂಟಪಗಳನ್ನು ಇಲ್ಲಿ ಸಾಕಾರಗೊಳಿಸುವ ಯೋಜನೆಗಳನ್ನು ಅನುಷ್ಠಾನಕ್ಕೆ ತರುವ ಮೂಲಕ ೧೨ನೇ

ಗ್ರಾಮಾಂತರ ಜಿಲ್ಲೆಯ ದೊಡ್ಡ ಹೆಜ್ಜಾಜೆಯಲ್ಲಿ ಸಂಸ್ಥಾಪನ ಮಾಡಿದರು. ಈ ವರೆಗೆ ೧೫ಕ್ಕೂ ಹೆಚ್ಚು ಸಂಖ್ಯೆಯ ಹರಿದಾಸರನ್ನು ಶೋಧಿಸಿ ೨೦೦೦ ಕ್ಕೂ ಹೆಚ್ಚು ಸಂಖ್ಯೆಯ ಕೀರ್ತನೆಗಳನ್ನು ಪ್ರಕಟಿಸುವುದರ ಮೂಲಕ ಕನ್ನಡದಲ್ಲಿ ವಿಶಿಷ್ಟಾದ್ವೈತ ಸಾಹಿತ್ಯವೇ ಮೂಡಿಬರಲಿಲ್ಲ ಎಂಬ ಚರಿತ್ರೆಕಾರರ ಹೇಳಿಕೆಯನ್ನು ಹುಸಿಗೊಳಿಸಿದ ಸಂಸ್ಥೆ ಇದು. ಸದ್ಯ ಪ್ರೊ.ನಾ.ಗೀತಾಚಾರ್ಯರು ಕೇಂದ್ರವನ್ನು ನಡೆಸುತ್ತಿದ್ದು ದೊಡ್ಡ ಹೆಜ್ಜಾಜಿಯಲ್ಲಿ ಒಂದು ಗ್ರಾಮೀಣ ಸಂಶೋಧನ ಗ್ರಂಥಾಲಯವನ್ನು ಸ್ಥಾಪಿಸಿದ್ದಾರೆ. 'ಶಾಸ್ತ್ರೀಯ ಕನ್ನಡ ವೇದಿಕೆ'ಯ ಮೂಲಕ ಕನ್ನಡ ಭಾಷೆ, ಸಮಾಜ, ಸಂಸ್ಕೃತಿ ಇತ್ಯಾದಿ ಕ್ಷೇತ್ರಗಳ ಸಂಶೋಧನ ಚಟುವಟಿಕೆಗಳನ್ನು ನಿರಂತರ ನಡೆಸಿಕೊಂಡು ಬರಲಾಗಿದೆ. ೧೭ ಜನ ಹರಿದಾಸರ ಕೀರ್ತನೆಗಳನ್ನಲ್ಲದೆ, ಕನ್ನಡತಿರುಪ್ಪಾವೈ, ಕನ್ನಡಶಾತ್ತುಮೊರೆ, ಕನ್ನಡಶಾಸನಗಳ ಭಾಷೆ, ಮುಂತಾದ ಕೃತಿಗಳನ್ನು ಪ್ರಕಟಿಸಿದೆ. "ವಾಸುದೇವಾಚಾರ್ಯ ಅಧ್ಯಯನ ಕೇಂದ್ರ"ವೊಂದನ್ನು ೨೦೦೯ರಿಂದ ಡಾ॥ ನಳಿನಿರಾವ್ ಅವರು ಇಲ್ಲಿ ಆರಂಭಿಸಿದ್ದು ತಿಮ್ಮಪ್ಪದಾಸರ ಗುರು ವಾಸುದೇವಾಚಾರ್ಯರು ಮತ್ತು ಅವರ ಪರಂಪರೆಯ ಅದ್ವೈತದಾಸರ ಶೋಧನೆ, ಸಂಶೋಧನೆ, ಪ್ರಕಟನೆಗಳ ಕಾರ್ಯವನ್ನು ಹಮ್ಮಿಕೊಳ್ಳಲಾಗಿದೆ.

ಇತರ ಸಂಸ್ಥೆಗಳು

ಕರ್ನಾಟಕವು ವಿವಿಧ ಧರ್ಮಗಳ ನೆಲೆವೀಡು. ಕನ್ನಡ ಸಾಹಿತ್ಯವೂ ಕೂಡ ಆರಂಭದಲ್ಲಿ ವಿವಿಧ ಧರ್ಮಗಳನ್ನಾಶ್ರಯಿಸಿದ ರಾಜಾಶ್ರಯದ ಪೋಷಣೆಯಲ್ಲಿ ಬೆಳೆಯಿತು. ಅದರಿಂದ ಕನ್ನಡ ಸಾಹಿತ್ಯ ಮತ್ತು ಧರ್ಮ ಇವುಗಳ ಅವಿನಾಭಾವ ಸಂಬಂಧ ಸಾಕಷ್ಟು ಗಟ್ಟಿಯಾಗಿಯೆ ಬೆಳೆದು ಬಂದಿತು. ಮಠಮಾನ್ಯಗಳು ತಮ್ಮ ತಮ್ಮ ಮತ ಮತ್ತು ಸಾಹಿತ್ಯಗಳನ್ನು ಸಾಂಸ್ಕೃತಿಕ ನೆಲೆಯಲ್ಲಿ ಸಂರಕ್ಷಿಸಿ ಪ್ರಚುರ ಪಡಿಸುವ ವಿವೇಚಿಸುವ, ಸಂಶೋಧಿಸುವ, ಪ್ರಕಟಿಸುವ ಮುಂತಾದ ಕಾರ್ಯಗಳನ್ನು ಕ್ರಿ.ಶ. ೧೫ ನೇ ಶತಮಾನದಿಂದೀಚೆಗೆ ಹೆಚ್ಚು ಹೆಚ್ಚು ಹಮ್ಮಿಕೊಂಡವು. ಧರ್ಮ ಮತ್ತು ಸಾಹಿತ್ಯಗಳಿಗೆ ರಾಜಾಶ್ರಯ ಮೊದಲಿನಿಂದಲೂ ಅನೂಚಾನವಾಗಿ ನಡೆದುಕೊಂಡು ಬಂದಿದೆ. ದೇವಸ್ಥಾನಗಳಂತೂ ಮೊದಲಿನಿಂದಲೂ ವಿದ್ಯಾದಾನ, ಅಧ್ಯಯನ ಅಧ್ಯಾಪನಗಳಿಗೆ ಹೆಸರಾದಂಥವು. ಈಗಲೂ ಕೆಲವು ದೇವಸ್ಥಾನಗಳು ಟ್ರಸ್ಟಗಳನ್ನು ಹುಟ್ಟುಹಾಕಿ ಆ ಮೂಲಕ ಸಾಹಿತ್ಯ, ಸಂಶೋಧನೆ, ಧರ್ಮ ಪ್ರಸಾರ ಕಾರ್ಯಕ್ಕೆ ಹಲವಾರು ಯೋಜನೆಗಳನ್ನು ಯಶಸ್ವಿಯಾಗಿ ನಡೆಸಿಕೊಂಡುಬರುತ್ತಿವೆ. ಪ್ರಾಚೀನ ಹಸ್ತಪ್ರತಿಗಳ ಸಂಗ್ರಹ, ಸಂರಕ್ಷಣೆ, ಸಂಪಾದನೆ, ಪ್ರಕಟನೆ, ಸಾಹಿತ್ಯ ಮತ್ತು ಸಂಸ್ಕೃತಿ ಕುರಿತ ವಿಚಾರಸಂಕಿರಣ, ಕಮ್ಮಟ, ಸಮ್ಮೇಳನ ಇತ್ಯಾದಿ ನಡೆಸುತ್ತ ಸಂಶೋಧನ ಚಟುವಟಿಕೆಗಳನ್ನು ಪ್ರೋತ್ಸಾಹಿಸುತ್ತಿವೆ. ಈ ಸಂಸ್ಥೆಗಳು ಸಾಮಾನ್ಯವಾಗಿ ಒಂದೇ ರೀತಿಯ ಚಟುವಟಿಕೆಗಳನ್ನು ನಡೆಸುತ್ತ ಬಂದಿವೆಯಲ್ಲದೆ ಇಂತಹ ಸಂಸ್ಥೆಗಳು ಕರ್ನಾಟಕದಲ್ಲಿ ಬಹಳಷ್ಟು ಸಂಖ್ಯೆಯಲ್ಲಿವೆ.

ಬ್ರಿಟಿಶರ ಆಗಮನದ ನಂತರ ಮಠಮಾನ್ಯಗಳಿಗೆ ದೇವಸ್ಥಾನಗಳಿಗೆ ಆಶ್ರಯ, ಕಾರ್ಯಗಳಿಗೆ ಸಹಾಯ ನಿಂತುಹೋದರೂ ದೊಡ್ಡ ದೊಡ್ಡ ಮಠಗಳು, ಶೈಕ್ಷಣಿಕ ಸಾಂಸ್ಕೃತಿಕ ಸಂಸ್ಥೆಗಳು, ಸಾಹಿತ್ಯ-ಸಂಸ್ಕೃತಿ-ಸಂಶೋಧನ ಚಟುವಟಿಕೆಗಳನ್ನು ಸ್ವಂತ ಬಲದಿಂದ ನಡೆಸುತ್ತಲೇ ಬಂದವು. ಕರ್ನಾಟಕ, ಕನ್ನಡಸಾಹಿತ್ಯ ಚಟುವಟಿಕೆಗಳಿಗಾಗಿಯೇ ಸ್ಥಾಪಿತವಾದ ಅನೇಕ ಸಂಸ್ಥೆಗಳು ಭಾರತ, ಕರ್ನಾಟಕ ರಾಜ್ಯದಲ್ಲಿ ಅಷ್ಟೇ ಅಲ್ಲ ವಿದೇಶಗಳಲ್ಲಿಯೂ ಸಾಕಷ್ಟಿವೆ. ಅವುಗಳಲ್ಲಿ ಕೆಲವು ಆನುಷಂಗಿಕವಾಗಿ ಒಮ್ಮೊಮ್ಮೆ ಸಂಶೋಧನ ಗ್ರಂಥ ಪ್ರಕಟನೆ,

ಪ್ರತಿಷ್ಠಾನವನ್ನು ಆರಂಭಿಸಲಾಗಿದೆ. ೧೯-೮-೧೯೮೮ ರಂದು ರಾಷ್ಟ್ರಕವಿ ಕುವೆಂಪು ಅವರು ಅದನ್ನು ಉದ್ಘಾಟಿಸಿದರು. ಮೊದಲು ಸಂಶೋಧನೆಗೆ ಅವಶ್ಯವಾಗಿ ಬೇಕಾಗುವ ವಿವಿಧ ಭಾಷೆಗಳ ಸಹಸ್ರಾರು ಅಪೂರ್ವ ೬೦೦೦ಕ್ಕೂ ಹೆಚ್ಚು ವಿವಿಧ ಭಾಷೆಗಳ ಧರ್ಮಗಳ ಹಸ್ತಪ್ರತಿಗಳನ್ನು ಸಂಗ್ರಹಿಸಿ ಹಸ್ತಪ್ರತಿ ಭಂಡಾರವನ್ನು ಬೆಳೆಸಲಾಯಿತು. ತಾಳೆಗರಿಯಲ್ಲಿ, ಕೋರಿಕಾಗದದಲ್ಲಿ ಬರೆದ ಹಸ್ತಪ್ರತಿಗಳಲ್ಲದೆ ಕಲ್ಲಚ್ಚಿನ ಗ್ರಂಥಗಳು ಮುದ್ರಿತ ಅಪರೂಪದ ಹಳೆಯ ಗ್ರಂಥಗಳೂ ಇಲ್ಲಿವೆ. ಸರ್ವಧರ್ಮಗಳಿಗೆ ಸಂಬಂಧಿಸಿದ ಹಸ್ತಪ್ರತಿಗಳು ಇಲ್ಲಿವೆ. ಮಂಜುನಾಥೇಶ್ವರ ಸಂಸ್ಕೃತಿ ಸಂಶೋಧನ ಕೇಂದ್ರದ ನಿರ್ದೇಶಕರಾಗಿದ್ದ ಪ್ರೊ.ಗೌ.ಮ. ಉಮಾಪತಿ ಶಾಸ್ತ್ರಿಗಳು ಹಸ್ತಪ್ರತಿಗಳ ವರ್ಗೀಕೃತ ಸೂಚಿಗಳನ್ನು ಪ್ರಕಟಿಸಿದ್ದಾರೆ. ಸಂಶೋಧನ ಗ್ರಂಥ ಪ್ರಕಟನೆಯನ್ನೂ ಇಲ್ಲಿ ಕೈಗೊಳ್ಳಲಾಗುತ್ತಿದೆ. ತಾಳ್ತಜೆ ಕೃಷ್ಣಭಟ್ಟರ 'ಯಕ್ಷಗಾನ ಪ್ರಭಾ', ಡಾ.ಎಸ್.ಡಿ. ಶೆಟ್ಟಿ ಅವರ 'ದಕ್ಷಿಣ ಕನ್ನಡ ಜಿಲ್ಲೆಯ ಜೈನಧರ್ಮ ಪರಂಪರೆ ಮತ್ತು ವಿಶಿಷ್ಟ ಸಂಪ್ರದಾಯಗಳು', ಸಂತೋಷಕುಮಾರ ಗುಲ್ವಾಡಿಯವರ 'ತ್ರಿವಿಕ್ರಮ', ತೆಕ್ಕುಂಜೆ ಗೋಪಾಲ ಕೃಷ್ಣಭಟ್ಟರ 'ಕನ್ನಡ ನವರತ್ನಗಳು', ಗೌ.ಮ.ಉಮಾಪತಿ ಶಾಸ್ತ್ರಿಗಳ 'ತುಳು ಹಸ್ತಪ್ರತಿಗಳ ಸೂಚಿ' ಹಾಗೂ 'ಧರ್ಮಸ್ಥಳದ ಯಕ್ಷಗಾನ ಹಸ್ತಪ್ರತಿಗಳ ವಿವರಣಾತ್ಮಕ ಸೂಚಿ' ಇವೇ ಮುಂತಾದ ಕೃತಿಗಳನ್ನು ಪ್ರಕಟಿಸಲಾಗಿದೆ. ಸಮ್ಮೇಳನ, ವಿಚಾರ ಸಂಕಿರಣ, ಕಮ್ಮಟ ಮುಂತಾದವುಗಳನ್ನು ಈ ಪ್ರತಿಷ್ಠಾನವು ನಡೆಸುತ್ತ ಬಂದಿದೆ.

ಅಪೂರ್ವ ಪ್ರಾಚೀನ ಹಸ್ತಪ್ರತಿಗಳ ಸಂಗ್ರಹಾಲಯವನ್ನು ಸ್ಥಾಪಿಸಿ ಸುಮಾರು ೬೦೦೦ಕ್ಕೂ ಹೆಚ್ಚು ವಿವಿಧ ಭಾಷೆಗಳ ಹಸ್ತಪ್ರತಿಗಳನ್ನು ಸಂಗ್ರಹಿಸಿದೆ. ಜೊತೆಗೆ ಹಸ್ತಪ್ರತಿಗಳ ಅಧ್ಯಯನ, ಸಂಪಾದನೆ, ಪ್ರಕಟನಾ ಕಾರ್ಯಗಳನ್ನು ಕೈಕೊಂಡಿದೆ. ಕರಾವಳಿ ಕರ್ನಾಟಕದ ಅಪರೂಪದ ಯಕ್ಷಗಾನ ಪ್ರಸಂಗಗಳ ಸುಮಾರು ೫೦೦ ಹಸ್ತಪ್ರತಿಗಳ ಸಂಗ್ರಹವಿಲ್ಲಿದ್ದು ಅವುಗಳ ವಿವರಣಾತ್ಮಕ ಸೂಚಿ ಪ್ರಕಟವಾಗಿದೆ. ಕಲ್ಲಚ್ಚಿನಲ್ಲಿ ಮುದ್ರಿತ ಪುಸ್ತಕಗಳೂ ಇಲ್ಲಿ ಇರುವುದು ಗಮನಾರ್ಹವಾಗಿದೆ. ಬಸವಪುರಾಣ, ದೀಪದ ಕಲಿಯರ ಸಾಂಗತ್ಯ, ಬತ್ತೀಸಪುತ್ಥಳಿಕಥೆ, ೧೬ ನೇ ಶತಮಾನದ ವೈದ್ಯಾಮೃತ ಎಂಬ ಸಂಸ್ಕೃತ ಕೃತಿಯ ಅನುವಾದ, ಬೈಬಲ್‌ನ ಅನುವಾದ ಕೃತಿ 'ನವನಿರ್ಧಾರ ದ್ವಿಪಂಚಾರತಿ', ಬಾಂಬೆ ಗವರ್ನಮೆಂಟ ಕನ್ನಡ ಗೆಜ್ಜೆಟ್ಟುಗಳು, ಇಂಗ್ಲಿಷ್‌ರು ಬರೆದ ಕನ್ನಡ ಪಂಚಾಂಗಗಳು ಹೀಗೆ ಬಹು ಅಪರೂಪದ ಸಂಗ್ರಹ ಮಂಜುನಾಥೇಶ್ವರ ಸಂಸ್ಕೃತಿ ಸಂಶೋಧನ ಪ್ರತಿಷ್ಠಾನದ ಹಸ್ತಪ್ರತಿ ಭಂಡಾರದಲ್ಲಿ ದೊರೆಯುತ್ತವೆ. ಇದಲ್ಲದೆ ಸುಮಾರು ೨೫ ಸಾವಿರದಷ್ಟು ಗ್ರಂಥಗಳು ಗ್ರಂಥಾಲಯದಲ್ಲಿವೆ. ಪ್ರಾಕೃತಿಕ ಸುಂದರ ತಾಣದಲ್ಲಿರುವ ಈ ಸಂಶೋಧನ ಪ್ರತಿಷ್ಠಾನಕ್ಕೆ ಧರ್ಮಾಧಿಕಾರಿಗಳಾದ ಡಾ.ಡಿ.ವೀರೇಂದ್ರ ಹೆಗ್ಗಡೆ ಅವರು ಎಲ್ಲಂದದ ಪ್ರೋತ್ಸಾಹ ಮಾರ್ಗದರ್ಶನ ನೀಡುತ್ತಿದ್ದಾರೆ.

ನಾರಾಯಣ ಶರ್ಮ ಸಂಸ್ಕೃತಿ ಕೇಂದ್ರ, ದೊಡ್ಡಹೆಜ್ಜಾಜಿ

ಕನ್ನಡ ಸಾಹಿತ್ಯಕ್ಕೆ ಹರಿದಾಸರ ಕೊಡುಗೆ ಅನನ್ಯವಾದುದು. ವಚನಸಾಹಿತ್ಯದ ನಂತರ ಹರಿದಾಸ ಸಾಹಿತ್ಯವೂ ಜಗತ್ತಿನ ವಿಶಿಷ್ಟ ಸಾಹಿತ್ಯ ಎನಿಸಿದೆ. ವಚನಸಾಹಿತ್ಯವನ್ನು ರಚಿಸಿದ ಶಿವಶರಣರು ವೀರಶೈವವನ್ನು ಪುನರುಜ್ಜೀವಿಸಿದ್ದರೆ ಹರಿದಾಸರು ವಿಶಿಷ್ಟಾದ್ವೈತವನ್ನು ಪುನರುಜ್ಜೀವಿಸಿದರು. ವಿಶಿಷ್ಟಾದ್ವೈತ ಹರಿದಾಸ ಸಾಹಿತ್ಯದ ಸಂಶೋಧನೆಗೆ ಮೀಸಲಾದ ಸಂಸ್ಥೆಯನ್ನು ಹರಿದಾಸ ನಾರಾಯಾಣ ಶರ್ಮ ಅವರ ಸ್ಮರಣೆಯಲ್ಲಿ ೧೯೯೩ರಲ್ಲಿ ಶ್ರೀಮತಿ ಶ್ರೀದೇವಿ ನಾರಾಯಣ ಶರ್ಮ ಮತ್ತು ಪ್ರೊ. ನಾ. ಗೀತಾಚಾರ್ಯ ಅವರು ಬೆಂಗಳೂರಿನ

ದಾರ್ಶನಿಕ ಸಂಶೋಧನ ಲೇಖನ ವಿಚಾರಗಳನ್ನೂ ಪ್ರಕಟಿಸಿವೆ. ಉದಾಹರಣೆಗೆ ಸುತ್ತೂರು ಶ್ರೀ ಜಗದ್ಗುರು ಶಿವರಾತ್ರೀಶ್ವರ ಮಠದ 'ಪ್ರಸಾದ', ಅದೇ ಮಠದ ಅಖಿಲಭಾರತ ಶರಣಸಾಹಿತ್ಯ ಪರಿಷತ್ತು ಪ್ರಕಟಿಸುವ 'ಮಹಾಮನೆ' ಮುಂತಾದವು (ಇವುಗಳ ಸಂಖ್ಯೆ ಹೆಚ್ಚಿರುವುದರಿಂದ ಎಲ್ಲವನ್ನೂ ಹೆಸರಿಸಲು ಇಲ್ಲಿ ಸಾಧ್ಯವಾಗಿಲ್ಲ) ಕಾಲೇಜುಗಳು, ವಿಶ್ವವಿದ್ಯಾಲಯಗಳಲ್ಲಿ ಸ್ಥಾಪಿತವಾದ ಪೀಠಗಳು, ಥಿಯೊಸೊಫಿಕಲ್ ಸೊಸೈಟಿಗಳಂತಹ ಸಂಘಗಳು ತಮ್ಮ ವಿವಿಧ ಚಟುವಟಿಕೆಗಳ ಜೊತೆಗೆ ಕನ್ನಡ ಸಂಶೋಧನ ಚಟುವಟಿಕೆಗಳನ್ನೂ ಕೆಲವೊಮ್ಮೆ ನಡೆಸುತ್ತಿವೆ.

ಧಾರವಾಡದಲ್ಲಿ ೧೮೮೩ರಲ್ಲಿ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆಯೊಂದು ಸ್ಥಾಪಿತಗೊಂಡು ಅದರ ಅಡಿಯಲ್ಲಿ 'ಸಾಹಿತ್ಯಸಮಿತಿ' ಎಂಬ ಉಪಶಾಖೆಯನ್ನು ೧೯೩೦ರಲ್ಲಿ ಸ್ಥಾಪಿಸಲಾಗಿತ್ತು. ವೀರಶೈವ ಸಾಹಿತ್ಯ ಸಮಾಜ, ಸಂಸ್ಕೃತಿಗಳನ್ನು ಕುರಿತು ಸಂಶೋಧನ ಗ್ರಂಥ ಪ್ರಕಟನೆ, ಹಸ್ತಪ್ರತಿ ಸಂಗ್ರಹಣೆ, ವಿಚಾರಸಂಕಿರಣ ಮುಂತಾದವುಗಳನ್ನು ಏರ್ಪಡಿಸುವುದು, ಗ್ರಂಥಾಲಯ ನಡೆಸುವುದು ಇವೇ ಮುಂತಾದ ಸಂಶೋಧನ ಕಾರ್ಯಗಳನ್ನು ಈ ಸಂಸ್ಥೆ ನಡೆಸುತ್ತ ಬಂದಿತು. ಅಷ್ಟೇ ಅಲ್ಲದೆ 'ಸಾಹಿತ್ಯಸಮಿತಿ ಪತ್ರಿಕೆ' ಎಂಬ ಪತ್ರಿಕೆಯನ್ನೂ ಇದು ಹೊರಡಿಸುತ್ತಿತ್ತು. ಶಿ.ಶಿ.ಬಸವನಾಳ ಅವರು ಸಾಹಿತ್ಯಸಮಿತಿಯ ಕಾರ್ಯಾಧ್ಯಕ್ಷರಾಗಿ ಸಂಸ್ಥೆಯನ್ನೂ ಪತ್ರಿಕೆಯನ್ನೂ ಯಶಸ್ವಿಯಾಗಿ ತಮ್ಮ ಕೊನೆಯ ಉಸಿರಿನವರೆಗೂ (೧೯೫೧) ನಡೆಸಿಕೊಂಡುಬಂದರು. ಸಂಸ್ಥೆಯಿಂದ ಕರ್ನಾಟಕಶಬ್ದಾನುಶಾಸನ ಪ್ರಕಾಶಿಕೆ, ರೇವಣಸಿದ್ಧೇಶ್ವರ ರಗಳೆ, ಬಸವಣ್ಣನವರ ಷಟ್‌ಸ್ಥಲದ ವಚನಗಳು, ಪ್ರಭುಲಿಂಗಲೀಲೆ, ಚೆನ್ನಬಸವಪುರಾಣ, ಶಬರಶಂಕರ ವಿಳಾಸ, ಮುಂತಾದ ಕೃತಿಗಳನ್ನು ಪ್ರಕಟಿಸಲಾಗಿದೆ.

ಬೆಂಗಳೂರಿನಲ್ಲಿ ಭಾರತದ ಮಾಜಿ ಉಪರಾಷ್ಟ್ರಪತಿ ಬಿ.ಡಿ.ಜತ್ತಿ ಅವರಿಂದ ಸ್ಥಾಪಿಸಲ್ಪಟ್ಟ 'ಬಸವಸಮಿತಿ' ಶಿವಶರಣರ ವಚನಸಾಹಿತ್ಯಕ್ಕೆ ಸಂಬಂಧಿಸಿದಂತೆ ಪ್ರಕಟನೆ, ಪ್ರಸಾರ, ಚಿಂತನ-ಮಂಥನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಲಿದೆ. ವಿಜಾಪುರದಲ್ಲಿ ಡಾ.ಫ.ಗು.ಹಳಕಟ್ಟಿ ಅವರ ಹೆಸರಿನಲ್ಲಿ ಸಂಶೋಧನ ಸಂಸ್ಥೆಯೊಂದನ್ನು ಸ್ಥಾಪಿಸಿ ವೀರಶೈವ-ಲಿಂಗಾಯತ ಸಾಹಿತ್ಯ ಸಂಸ್ಕೃತಿ ಕುರಿತ ಸಂಶೋಧನ ಚಟುವಟಿಕೆಗಳನ್ನು ನಡೆಸಲಾಗುತ್ತಿದೆ. ಡಾ.ಫ.ಗು. ಹಳಕಟ್ಟಿ ಅವರ ಸಮಗ್ರ ಸಾಹಿತ್ಯ ಕೃತಿಗಳನ್ನು ಅದು ಪ್ರಕಟಿಸಿದೆ.

ಜೈನಧರ್ಮಕ್ಕೆ ಸಂಬಂಧಿಸಿದ ಪ್ರಾಕೃತ ಅಧ್ಯಯನ ಮತ್ತು ಸಂಶೋಧನ ಸಂಸ್ಥೆ (National Institute of Prakrit Studies and Research) ಎಂಬ ಒಂದು ಸಂಸ್ಥೆ ಶ್ರವಣಬೆಳಗೊಳದಲ್ಲಿ ೧೯೯೩ ರಿಂದ ಕಾರ್ಯ ಮಾಡುತ್ತಿದ್ದು ಕರ್ನಾಟಕ ಸರ್ಕಾರವು ಕನ್ನಡಕ್ಕೆ ಸಂಬಂಧಿಸಿದಂತೆಯೂ ಈ ಸಂಶೋಧನ ಸಂಸ್ಥೆ ಕಾರ್ಯಮಾಡಲಿ ಎಂದು ಈ ಕೇಂದ್ರಕ್ಕೆ ಧನ ಸಹಾಯವನ್ನು ಪ್ರತಿವರ್ಷ ನೀಡುತ್ತಿದೆ. ಮಂಗರಾಜನ ಖಗೇಂದ್ರಮಣಿ ದರ್ಪಣ (ಕ್ರಿ.ಶ.೧೩೬೦) ಕೃತಿ ಈ ಸಂಸ್ಥೆಯಲ್ಲಿನ ಹಸ್ತಪ್ರತಿಗಳ ಆಧಾರದಿಂದ ಸಂಪಾದಿಸಲ್ಪಟ್ಟು ಪ್ರಕಟಗೊಂಡಿದೆ. ಶ್ರವಣಬೆಳ್ಗೊಳದ ಈ ಸಂಸ್ಥೆಯು ಮೈಸೂರು ವಿಶ್ವವಿದ್ಯಾಲಯದ ಸಂಲಗ್ನತೆಯನ್ನೂ ಪಡೆದಿದೆ.

ಚಿಕ್ಕಮಗಳೂರು ಜಿಲ್ಲೆ ದೇವನೂರಿನಲ್ಲಿ ಲಕ್ಮೀಶ ಚಾರಿಟೇಬಲ್ ಟ್ರಸ್ಟು ಲಕ್ಮೀಶನ ಹೆಸರಿನಲ್ಲಿ ಸಂಶೋಧನ ಸಂಸ್ಥೆಯೊಂದನ್ನು ೧-೧೨-೨೦೧೩ರಿಂದ ಆರಂಭಿಸಿದೆ. ಡಾ.ಡಿ.ಆರ್.ಪಾಂಡುರಂಗ ಅವರು ಅದರ ನಿರ್ದೇಶಕರು. ಪ್ರಾಚೀನ ಹಸ್ತಪ್ರತಿಗಳ ಸಂಗ್ರಹ, ಸಂಪಾದನೆ, ಗ್ರಂಥ ಪ್ರಕಟನೆ, ವಿಚಾರಗೋಷ್ಠಿ, ಕಮ್ಮಟ ಇತ್ಯಾದಿ ಏರ್ಪಡಿಸುವುದು,

ಉಪನ್ಯಾಸ, ವಿಚಾರಸಂಕಿರಣಗಳಂತಹ ಕಾರ್ಯಗಳನ್ನು ಕೈಕೊಂಡಿವೆ. ಇನ್ನು ಧಾರ್ಮಿಕ ಸಂಸ್ಥೆಗಳ ಮಟ್ಟಿಗೆ ಹೇಳಬೇಕೆಂದರೆ ಅವುಗಳಿಗೆ ಯೋಜನಾಬದ್ಧತೆಯಾಗಲಿ, ಕಾಲ ಬದ್ಧತೆಯಾಗಲಿ, ವಿದ್ವತ್‌ಮಂಡಲಿಯ ನಿರಂತರ ಮಾರ್ಗದರ್ಶನವಾಗಲಿ ಇರುವುದಿಲ್ಲ. ಎಷ್ಟೋ ಸಲ ತಮ್ಮ ತಮ್ಮ ಧಾರ್ಮಿಕ ಸಾಹಿತ್ಯವನ್ನು ಮತ್ತು ತಾತ್ವಿಕ ಸಿದ್ಧಾಂತಗಳನ್ನು, ಇತಿಹಾಸವನ್ನು, ತಾವು ನಂಬಿಕೊಂಡು ಬಂದ ವೈಚಾರಿಕತೆಗಳನ್ನು ಪ್ರತಿಪಾದಿಸುವುದಕ್ಕಾಗಿ ವಿವಿಧ ಧರ್ಮಗಳ ಮಠಮಾನ್ಯಗಳು ಸಂಶೋಧನ ಸಂಸ್ಥೆಗಳನ್ನು ಹುಟ್ಟುಹಾಕಿರುತ್ತವೆ. ಆದ್ದರಿಂದ ಅವು ಎಷ್ಟೋ ಸಲ ವಿವಾದಾಸ್ಪದವೂ, ಗೊಂದಲಮಯವೂ ಆಗಬಹುದು. ಹೀಗೆ ನಿರ್ದಿಷ್ಟ ಚೌಕಟ್ಟಿನೊಳಗೆ ನಡೆಸುವ ಮಠಮಾನ್ಯಗಳ ಸಂಶೋಧನ ಚಟುವಟಿಕೆಗಳು ಸೀಮಿತವೆನಿಸುತ್ತವೆ. ಆದರೂ ಹಂಪಿ ಕನ್ನಡ ವಿಶ್ವವಿದ್ಯಾಲಯ ಮಠಮಾನ್ಯಗಳು ನಡೆಸುವ ಸಂಶೋಧನ ಕೇಂದ್ರಗಳಿಗೆ ಮಾನ್ಯತೆ ನೀಡಿ ಅಂತಹ ಸಂಶೋಧನೆಗಳಿಗೂ ಪ್ರೋತ್ಸಾಹಿಸುತ್ತಿದೆ.

ಜೈನ, ವೀರಶೈವ ಮತ್ತು ವೈದಿಕ ಧರ್ಮಗಳ ಸಂಶೋಧನ ಚಟುವಟಿಕೆಗಳನ್ನು ಅನೇಕ ಮಠಮಾನ್ಯಗಳು ನಡೆಸುತ್ತಬಂದಿವೆ. ಮಠಮಾನ್ಯಗಳಲ್ಲಿ ಹಸ್ತಪ್ರತಿ ಸಂಗ್ರಹ, ಸಂಶೋಧನ ಗ್ರಂಥಾಲಯ, ಗ್ರಂಥಪ್ರಕಟನೆ, ಸಂಶೋಧಕ ಸಾಧಕರಿಗೆ ಪ್ರಶಸ್ತಿ, ಅಲ್ಲದೆ ಗ್ರಂಥ ಪ್ರಕಟನೆಗೆ ಸಹಾಯ ನೀಡುವುದು, ಪ್ರಶಸ್ತಿ ನೀಡುವುದು ಇವೇ ಮುಂತಾದ ಸಂಸ್ಕೃತಿ ಸಂಶೋಧನೆ ಮತ್ತು ಸಂವರ್ಧನೆಯ ಕಾರ್ಯಗಳು ಅಲ್ಲಿ ನಡೆಯುತ್ತಿವೆ. ವೀರಶೈವ ಮಠಗಳು ಈ ನಿಟ್ಟಿನಲ್ಲಿ ಮುಂಚೂಣಿಯಲ್ಲಿವೆ. ಕೆಲವು ಮಠಗಳು ಸಂಶೋಧನ ಸಂಸ್ಥೆಗಳನ್ನು ಸ್ಥಾಪಿಸಿವೆ. ಪತ್ರಿಕೆಗಳನ್ನೂ ಪ್ರಕಟಿಸುತ್ತ ಬಂದಿವೆ. ಅಂತಹ ಮಹತ್ವದ ಕೆಲವನ್ನು ಇಲ್ಲಿ ಉದಾಹರಿಸಬಹುದು. ಬಾಳೆಹೊನ್ನೂರು ಶ್ರೀ ಜಗದ್ಗುರು ರಂಭಾಪುರಿ ಪೀಠ, ಶ್ರೀಕ್ಷೇತ್ರ ಧರ್ಮಸ್ಥಳ, ಮೈಸೂರಿನ ಸುತ್ತೂರು ಶ್ರೀ ಜಗದ್ಗುರು ಶಿವರಾತ್ರೀಶ್ವರ ಸಂಸ್ಥಾನಮಠ (ಜೆಎಸ್‌ಎಸ್ ಮಹಾವಿದ್ಯಾಪೀಠ), ಗದುಗಿನ ಶ್ರೀ ಜಗದ್ಗುರು ತೋಂಟದಾರ್ಯಮಠ, ತುಮಕೂರಿನ ಶ್ರೀ ಸಿದ್ಧಗಂಗಾಮಠ, ಬೆಳಗಾವಿಯ (ನಾಗನೂರು) ಶ್ರೀ ರುದ್ರಾಕ್ಷಿಮಠ, ಧಾರವಾಡದ ಶ್ರೀ ಮುರುಘಾಮಠ, ಹೊಸಪೇಟೆಯ ಶ್ರೀ ಕೊಟ್ಟೂರುಸ್ವಾಮಿಮಠ, ಹರಪನಹಳ್ಳಿಯ ಶ್ರೀ ತೆಗ್ಗಿನಮಠ, ಮುಂಡರಗಿಯ ಶ್ರೀ ಜಗದ್ಗುರು ಅನ್ನದಾನೀಶ್ವರಮಠ, ಹಾರಕೂಡದ ಶ್ರೀ ಚೆನ್ನಬಸವೇಶ್ವರ ಹಿರೇಮಠ, ಹೊನ್ನಾಳಿಯ ಸಂಸ್ಥಾನ ಹಿರೇಕಲ್ಮಠ, ಕವಲೆದುರ್ಗದ ಕೆಳದಿ ಸಂಸ್ಥಾನ ರಾಜಗುರು ಮಹಾಮಹತ್ತಿನ ಭುವನಗಿರಿ ಸಂಸ್ಥಾನಮಠ, ಶಿವಯೋಗಮಂದಿರ, ಕಲಬುರ್ಗಿಯ ಶ್ರೀ ಶರಣಬಸವೇಶ್ವರ ಮಹಾದಾಸೋಹ ಪೀಠ, ಗುಬ್ಬಿ ಶ್ರೀ ಚಿದಂಬರಾಶ್ರಮ, ಮಲ್ಲಾಡಿಹಳ್ಳಿ ಆಶ್ರಮ, ಮಂತ್ರಾಲಯದ ಶ್ರೀ ರಾಘವೇಂದ್ರಮಠ (ರಾಯಚೂರಿನಲ್ಲಿ ಸಂಶೋಧನ ಸಂಸ್ಥೆಯನ್ನು ಸ್ಥಾಪಿಸಿದೆ) ಮುಂತಾದ ಇನ್ನೂ ಹಲವಾರು ಮಠಗಳು ಸಾಮಾನ್ಯವಾಗಿ ತಮ್ಮ ತಮ್ಮ ಮಠಧರ್ಮಗಳ ತತ್ತ್ವ, ದಾರ್ಶನಿಕ, ವೈಚಾರಿಕ, ಸೃಜನ ಸಾಹಿತ್ಯ, ಸಂಸ್ಕೃತಿ ಮುಂತಾದ ಕ್ಷೇತ್ರಗಳ ಕುರಿತು ಗ್ರಂಥ ಪ್ರಕಟನೆ, ವಿಚಾರ ಸಂಕಿರಣ ಕಮ್ಮಟಗಳನ್ನು ಏರ್ಪಡಿಸುತ್ತ ಬಂದಿವೆ. ಕೆಲವು ಮಠಗಳ ಇಂತಹ ಚಟುವಟಿಕೆಗಳನ್ನು ಗಮನಿಸಿ ಹಂಪಿ ಕನ್ನಡ ವಿಶ್ವವಿದ್ಯಾಲಯವು ಎಂ.ಫಿಲ್., ಪಿಎಚ್.ಡಿ. ಸ್ನಾತಕೋತ್ತರ ಪದವಿಗಳಿಗಾಗಿ ವಿದ್ಯಾರ್ಥಿಗಳನ್ನು ಸಿದ್ಧಪಡಿಸಲು ಮಾನ್ಯತೆ ನೀಡಿದೆ. ಕನ್ನಡ ಸಾಂಸ್ಕೃತಿಕ ಸಂಶೋಧನ ಕ್ಷೇತ್ರಕ್ಕೆ ಇಂತಹ ಮಠಮಾನ್ಯಗಳ ಕಾಣಿಕೆಯೂ ಅನನ್ಯವಾಗಿದೆ. ಮಠಮಾನ್ಯಗಳು ಮತ್ತು ಅವುಗಳು ಸ್ಥಾಪಿಸಿದ ಸಂಸ್ಥೆಗಳು ತಮ್ಮ ತಮ್ಮ ಮಠಗಳ ಮುಖಪತ್ರಿಕೆಗಳಲ್ಲಿ ಅಥವಾ ಅವು ಸ್ಥಾಪಿಸಿದ ಸಂಸ್ಥೆಗಳ ನಿಯತಕಾಲಿಕೆಗಳಲ್ಲಿ ಕೆಲವುಸಲ

ಕಾಲಿಕೆಗಳು ಎಷ್ಟೋ ಸಲ ಕೇವಲ ದಾಖಲೆಗಾಗಿ ಮಾತ್ರ ಎನ್ನುವಂತಾಗಿವೆ. ಮೈಸೂರು, ಕರ್ನಾಟಕ ಮತ್ತು ಧಾರವಾಡ ವಿಶ್ವವಿದ್ಯಾಲಯಗಳು ಆರಂಭಕಾಲದಲ್ಲಿ ಪ್ರಕಟಿಸಿದ ನಿಯತಕಾಲಿಕೆಗಳಿಗೆ ಇದ್ದಷ್ಟು ಮಹತ್ವ ನಂತರದ ಕಾಲದಲ್ಲಿ ಕಳೆದುಹೋಯಿತು.

ಮೈಸೂರು ವಿಶ್ವವಿದ್ಯಾಲಯದ 'ಪ್ರಬುದ್ಧ ಕರ್ನಾಟಕ', ಬೆಂಗಳೂರು ವಿಶ್ವವಿದ್ಯಾಲಯದ 'ಸಾಧನೆ', ಕರ್ನಾಟಕ ವಿಶ್ವವಿದ್ಯಾಲಯದ 'ಕರ್ನಾಟಕ ಭಾರತಿ', ಗುಲಬರ್ಗಾ ವಿಶ್ವವಿದ್ಯಾಲಯದ 'ಕಲಾಗಂಗಾ', ಕನ್ನಡ ವಿಶ್ವವಿದ್ಯಾಲಯದ 'ಕನ್ನಡ ಅಧ್ಯಯನ', ಇವು ವಿಶ್ವವಿದ್ಯಾಲಯಗಳ ಕನ್ನಡ ಸಂಶೋಧನ ಕ್ಷೇತ್ರದ ನಿಯತಕಾಲಿಕೆಗಳು. ಈಗ ಎಲ್ಲವೂ ಶ್ವಾನನಿದ್ರೆಯಂತಾಗಿಬಿಟ್ಟಿವೆ. ಯಾವಾಗ ನಿಲ್ಲುತ್ತವೆ ಯಾವಾಗ ಕಾಣಿಸಿಕೊಳ್ಳುತ್ತವೆ ಹೇಳಲಿಕ್ಕಾಗದು. ಹಾಗೆ ನೋಡಿದರೆ ಇವು ಸಂಪೂರ್ಣ ಸಂಶೋಧನೆಗೇ ಮೀಸಲಾದ ನಿಯತಕಾಲಿಕೆಗಳೇನೂ ಅಲ್ಲ. ಇವುಗಳಲ್ಲಿ ವಿಮರ್ಶೆ, ಕಾವ್ಯಮೀಮಾಂಸೆ, ಸಾಹಿತ್ಯಚರಿತ್ರೆ, ಅಲ್ಲದೆ ವಿಚಾರಪರ ಲೇಖನಗಳೂ ಪ್ರಕಟವಾಗಿವೆ. ವಿಶ್ವವಿದ್ಯಾಲಯಗಳು ಹೊರಡಿಸುತ್ತಲಿದ್ದ ಈ ವಿದ್ವತ್ ಪತ್ರಿಕೆಗಳಿಗೆ ಬಹಳಷ್ಟು ಮಹತ್ವ ಒಂದುಕಾಲದಲ್ಲಿ ಇತ್ತು. ಅತ್ಯಂತ ಉನ್ನತಮಟ್ಟದ ಸಂಶೋಧನ ಲೇಖನಗಳು ವಿಶ್ವವಿದ್ಯಾಲಯ ನಿಯತಕಾಲಿಕೆಗಳಲ್ಲಿ ಪ್ರಕಟವಾಗುತ್ತಿದ್ದವು. ವಿದ್ವತ್ ಪತ್ರಿಕೆಗಳನ್ನು ವಿಶ್ವವಿದ್ಯಾಲಯಗಳಂತಹ ಉನ್ನತ ವಿದ್ಯಾಕೇಂದ್ರಗಳು ಪ್ರಕಟಿಸುವುದು, ಪ್ರಸಾರ ಮಾಡುವುದು ಅಷ್ಟು ಕಠಿನ ಕಾರ್ಯವೇನೂ ಅಲ್ಲ. ಯಾಕೆಂದರೆ ಮುದ್ರಣ, ವಿತರಣೆಗಳನ್ನು ವಿಶ್ವವಿದ್ಯಾಲಯಗಳ ಪ್ರಸಾರಾಂಗ ನೋಡಿಕೊಳ್ಳುತ್ತದೆ. ಇಷ್ಟಾಗಿಯೂ ವಿಶ್ವವಿದ್ಯಾಲಯಗಳ ನಿಯತಕಾಲಿಕೆಗಳು ಕೆಲ ವರ್ಷ ಬಹಳ ಉತ್ತಮವಾಗಿ ಪ್ರಸಾರಗೊಂಡು ಕೆಲ ವರ್ಷಗಳ ನಂತರ ಇದ್ದಕ್ಕಿದ್ದಂತೆ ಅಥವಾ ಅನಿಯತಕಾಲಿಕೆಗಳಾಗಿ ಕುಂಟುತ್ತ ಕೊನೆಗೊಮ್ಮೆ ನಿಂತುಬಿಡುತ್ತವೆ. ಇದಕ್ಕೆ ಮುಖ್ಯ ಕಾರಣವೆಂದರೆ ವಿಶ್ವವಿದ್ಯಾಲಯಗಳ ಸಂಶೋಧನ ಪತ್ರಿಕೆಗಳ ಸಂಪಾದಕರು ತೋರುವ ದಿವ್ಯ ನಿರ್ಲಕ್ಷ ಮತ್ತು ವಿಶ್ವವಿದ್ಯಾಲಯಗಳ ಜಿಡ್ಡುಗಟ್ಟಿದ ಆಡಳಿತ ವ್ಯವಸ್ಥೆ. ಹೀಗಾಗಿ ಕನ್ನಡ ಸಂಶೋಧನ ನಿಯತಕಾಲಿಕೆಗಳು ಈಗ ಇತಿಹಾಸ. ಆದರೆ ಇವುಗಳ ಕಾಣಿಕೆಯಂತೂ ಕನ್ನಡ ಸಂಶೋಧನ ಕ್ಷೇತ್ರಕ್ಕೆ ಅಪೂರ್ವ, ಅದ್ಭುತ. ಕೆಲವು ವಿಶೇಷ ಸಂಚಿಕೆಗಳಂತೂ ಅಪರೂಪದ ಕಾಣಿಕೆಗಳಾಗಿವೆ. ಉದಾಹರಣೆಗೆ – 'ಕರ್ನಾಟಕ ಭಾರತಿ' ಕರ್ನಾಟಕ ವಿಶ್ವವಿದ್ಯಾಲಯದ ರಜತ ಮಹೋತ್ಸವ ಸ್ಮರಣ ಸಂಚಿಕೆಯಲ್ಲಿ ಕರ್ನಾಟಕದ ಜಿಲ್ಲಾವಾರು ಕನ್ನಡ ಪ್ರಭೇದ ಭಾಷೆಗಳನ್ನು ದಾಖಲಿಸಲಾಗಿದೆ. ಬೆಂಗಳೂರು ವಿಶ್ವವಿದ್ಯಾಲಯದ 'ಸಾಧನೆ' ನಿಯತಕಾಲಿಕೆಯ ವಿಶೇಷ ಸಂಚಿಕೆಗಳು ಮೌಲಿಕ ಸಂಚಿಕೆಗಳಾಗಿವೆ. ಆಯಾ ವಾರ್ಷಿಕ ಸಂಚಿಕೆಗಳಲ್ಲಿ ಆಯಾ ವರ್ಷ ಪ್ರಕಟವಾದ ಶ್ರೇಷ್ಠ ಕನ್ನಡ ಗ್ರಂಥಗಳ ಸಮೀಕ್ಷೆಗಳು, ವಿಮರ್ಶೆಗಳು ಪ್ರಕಟವಾಗಿವೆ. ಇಡೀ ವರ್ಷದಲ್ಲಿ ಪ್ರಕಟವಾದ ಮಹತ್ವದ ಗ್ರಂಥಗಳ ಒಟ್ಟು ನೋಟ ಈ ಮೂಲಕ ಅಲ್ಲಿ ಸಿಗುತ್ತಿತ್ತು. ಮೈಸೂರು ವಿಶ್ವವಿದ್ಯಾನಿಲಯದ ಚಿನ್ನದ ಹಬ್ಬದ ಸಂಚಿಕೆಗಳು ಗಮನಾರ್ಹವಾಗಿವೆ. ಕೆಲವು ಪ್ರಮುಖ ನಿಯತಕಾಲಿಕೆಗಳನ್ನಿಲ್ಲಿ ನೋಡೋಣ.

ಪ್ರಬುದ್ಧ ಕರ್ಣಾಟಕ

ಮೈಸೂರು ವಿಶ್ವವಿದ್ಯಾನಿಲಯದ 'ಪ್ರಬುದ್ಧ ಕರ್ಣಾಟಕ'ವು ಕನ್ನಡ ಭಾಷೆ ಸಾಹಿತ್ಯ, ಸಂಶೋಧನೆಗಳಿಗೆ ಮೀಸಲಾದ ತ್ರೈಮಾಸಿಕ ಪತ್ರಿಕೆ. ಬೆಂಗಳೂರು ಸೆಂಟ್ರಲ್ ಕಾಲೇಜು ಕರ್ಣಾಟಕ ಸಂಘದ ಆಶ್ರಯದಲ್ಲಿ, ಇದು ಮೊದಮೊದಲು ಪ್ರಕಟವಾಗುತ್ತಿತ್ತು. ಆಗಿನ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಅಧ್ಯಾಪಕರಾಗಿದ್ದ ಎ.ಆರ್. ಕೃಷ್ಣಶಾಸ್ತ್ರಿಗಳು ಇದರ

ವಿಶ್ವವಿದ್ಯಾಲಯಗಳೊಂದಿಗೆ ಸಂಸ್ಥೆಯ ಸಂಲಗ್ನತೆಯನ್ನು ಪಡೆದು ಪಿಎಚ್.ಡಿ, ಎಂ.ಫಿಲ್ ಸಂಶೋಧನ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡುವುದು ಇವೇ ಮುಂತಾದ ಯೋಜನೆಗಳನ್ನು ಟ್ರಸ್ಟ ಹಮ್ಮಿಕೊಳ್ಳಲು ಯೋಜಿಸಿದೆ. ಲಕ್ಷ್ಮೀಶನ ಜೈಮಿನಿಭಾರತದ ಸುಧಾರಿತ ಆವೃತ್ತಿಯನ್ನು ಗದ್ಯಾನುವಾದದೊಂದಿಗೆ ಪ್ರಕಟಿಸಲು ಈಗಾಗಲೆ ಸಿದ್ಧಪಡಿಸಲಾಗಿದೆ.

ಸಂಶೋಧನ ಪತ್ರಿಕೆಗಳು

ಈ ಪ್ರಪಂಚದಲ್ಲಿ ಸಂಶೋಧನೆ ಎಂಬುದು ವ್ಯಕ್ತಿಗತ ಮತ್ತು ಸಾಂಸ್ಥಿಕವಾಗಿ ಅನೂಚಾನವಾಗಿ ನಡೆಯುತ್ತಲೇ ಇರುವ ಒಂದು ಪ್ರಕ್ರಿಯೆ. ಸಂಶೋಧನೆ ಎಲ್ಲಿಯೇ ನಡೆಯಲಿ ಹೇಗೆಯೇ ನಡೆಯಲಿ ಅದರ ಪ್ರಯೋಜನ ಸಾರ್ವತ್ರಿಕವಾದುದು. ಯಾವುದೇ ವ್ಯಕ್ತಿ ಅಥವಾ ಸಂಸ್ಥೆ ತಮಗಾಗಿ ಮಾತ್ರ ಸಂಶೋಧನೆಯನ್ನು ಕೈಕೊಳ್ಳುವುದು ಕ್ವಚಿತ್. ಒಂದು ವೇಳೆ ಹಾಗೆ ಮಾಡಿದರೂ ನಂತರ ಅದು ಪ್ರಸಾರವಾಗದೆ ಹೋಗದು. ಆಮೇಲೆ ಅದರ ಆನ್ವಯಿಕತೆ ಆರಂಭವಾಗಿಬಿಡುತ್ತದೆ. ಸಂಶೋಧನೆಗಳು ಮನುಷ್ಯನ ಅರಿವಿನ ವಿಸ್ತಾರಕ್ಕೆ ಸಂಬಂಧಿಸಿದವುಗಳಾಗಿದ್ದರಿಂದ ಅವುಗಳ ಮಹತ್ವ ಅಗಾಧವಾದುದು. ಮನುಷ್ಯರು ತಮ್ಮ ಸಮಕಾಲೀನ ಮತ್ತು ಭಾವಿ ಪೀಳಿಗೆಗೆ ತಮ್ಮ ಸಂಶೋಧನೆಯ ಅರಿವಿನ ವಿಸ್ತಾರವನ್ನು ತಿಳಿಸುವುದಕ್ಕಾಗಿ ಹಾಗೂ ದಾಖಲಿಸುವುದಕ್ಕಾಗಿ ಶಿಲ್ಪ, ಚಿತ್ರ, ಶಾಸನ, ಗ್ರಂಥ, ಪತ್ರಿಕೆ ಮುಂತಾದ ಚಾಕ್ಷುಸ ಮಾಧ್ಯಮಗಳನ್ನು ಬಳಸುವುದು ವಾಡಿಕೆ. ಪತ್ರಿಕೆಗಳಂತೂ ಬಹಳ ಉಪಯುಕ್ತ, ಪ್ರಭಾವಿ ಮತ್ತು ಸುಲಭ ಪ್ರಸಾರಮಾಧ್ಯಮಗಳಾಗಿವೆ. ಕನ್ನಡ ಪತ್ರಿಕಾ ಕ್ಷೇತ್ರ ಆರಂಭವಾದದ್ದೇ ಕ್ರಿ.ಶ.೧೮೪೩ರ ನಂತರದ ಕಾಲದಲ್ಲಿ.(ಹರ್ಮನ್ ಮೊಗ್ಲಿಂಗನು ಕ್ರಿ.೧೮೪೩ರಲ್ಲಿ ಪ್ರಕಟಿಸಿದ 'ಮಂಗಳೂರು ಸಮಾಚಾರ' ಪತ್ರಿಕೆಯೇ ಕನ್ನಡದ ಮೊದಲ ಪತ್ರಿಕೆಯೆಂದು ಹೇಳಲಾಗುತ್ತದೆ). ಅಂತಾರಾಷ್ಟ್ರೀಯ ಮಟ್ಟದ ವಿದ್ವತ್ ಪತ್ರಿಕೆಗಳಂತೂ ಕ್ವಚಿತ್. ನಿಯತಕಾಲಿಕೆಗಳೆಂದು ಆರಂಭವಾಗಿ ಅನಿಯತಕಾಲಿಕೆಗಳಾಗಿ ಮಾರ್ಪಟ್ಟು ನಿಂತೇ ಹೋಗಿರುವಂಥವೇ ಬಹಳ. ಇಂಥ ಸಂದರ್ಭದಲ್ಲಿ ಸಂಶೋಧನೆಗೆಂದೇ ರೂಪಿತವಾದ ಕನ್ನಡಪತ್ರಿಕೆಗಳನ್ನು ನಾವು ಹುಡುಕಹೊರಟರೆ ಕತ್ತಲಲ್ಲಿ ಕರಿಯ ಬೆಕ್ಕನ್ನು ಹುಡುಕಿದಂತೆಯೇ ಸರಿ. ಆರಂಭ ಕಾಲದಲ್ಲಿ ಪ್ರಕಟಗೊಳ್ಳುತ್ತಿದ್ದ ಯಾವುದೇ ನಿಯತಕಾಲಿಕೆಯಲ್ಲಿಯೂ ಕವಿಕೃತಿಗಳ ಪರಿಚಯ ಶೋಧಕುರಿತ ಕೆಲವು ಟಿಪ್ಪಣಿ, ಸುದ್ದಿ, ವಿಮರ್ಶೆ, ಕನ್ನಡ ನಾಡುನುಡಿಯ ಮಹತ್ವ, ಏಕೀಕರಣದ ಆವಶ್ಯಕತೆ ಮುಂತಾದ ವಿವರಣೆಗಳನ್ನು ಬಿಟ್ಟರೆ ಬೇರೆ ವಿಷಯ ಇರುತ್ತಿರಲಿಲ್ಲ. ಇಲ್ಲಿ ಸಂಶೋಧನೆಗೆ ಒತ್ತುಕೊಟ್ಟ ಮಹತ್ವದ ಪತ್ರಿಕೆಗಳನ್ನು ಪರಿಚಯಿಸಲಾಗಿದೆ.

ವಿಶ್ವವಿದ್ಯಾಲಯಗಳ ನಿಯತಕಾಲಿಕೆಗಳು

ವಿಶ್ವವಿದ್ಯಾಲಯಗಳಲ್ಲಿನ ಶಿಕ್ಷಕರು ಸಂಶೋಧನ ವಿದ್ಯಾರ್ಥಿಗಳು ತಮ್ಮ ತಮ್ಮ ಸಂಶೋಧನೆಯ ಚಟುವಟಿಕೆಗಳನ್ನು ಪ್ರಸಾರ ಮಾಡುವುದಕ್ಕಾಗಿ ಕರ್ನಾಟಕದ ವಿಶ್ವವಿದ್ಯಾಲಯಗಳು ಕನ್ನಡ ಮತ್ತು ಇಂಗ್ಲಿಷ್‌ನಲ್ಲಿ ನಿಯತಕಾಲಿಕೆಗಳನ್ನು ಪ್ರಕಟಿಸುತ್ತ ಬಂದಿವೆ. ಬಹುಕ್ವಚಿತ್ತಾಗಿ ವಿಶ್ವವಿದ್ಯಾಲಯೇತರ ಸಂಶೋಧಕರ ಲೇಖನಗಳಿಗೂ ನಿಯತಕಾಲಿಕೆಗಳಲ್ಲಿ ಅವಕಾಶ ಕಲ್ಪಿಸಿವೆ. ಆದರೆ ಈ ನಿಯತಕಾಲಿಕೆಗಳು ಹೆಚ್ಚಾಗಿ ಅನಿಯತಕಾಲಿಕೆಗಳಾಗಿಯೇ ಪ್ರಕಟವಾಗುತ್ತ ಬಂದಿವೆ. ಕೆಲವು ನಿಂತು ಹೋಗಿ ಮತ್ತೆ ಯಾವಾಗಲೋ ಇದ್ದಕ್ಕಿದ್ದಂತೆ ಪ್ರಕಟವಾಗಿಬಿಡುತ್ತವೆ. ಆದ್ದರಿಂದ ಲೇಖಕರ ಲೇಖನವೊಂದು ಪ್ರಕಟಗೊಳ್ಳಲು ಅನಿರ್ದಿಷ್ಟಕಾಲ ಕಾಯಬೇಕಾಗುತ್ತದೆ. ವಿಶ್ವವಿದ್ಯಾಲಯಗಳ ನಿಯತ

ಅನಿವಾರ್ಯವಾಯಿತು. ಆಗ ಮೈಸೂರು ವಿಶ್ವವಿದ್ಯಾಲಯದ ಪ್ರಬುದ್ಧ ಕರ್ನಾಟಕದ ಮಾದರಿಯಲ್ಲಿ ಕರ್ನಾಟಕ ವಿಶ್ವವಿದ್ಯಾಲಯವು ಕರ್ನಾಟಕ ಭಾರತಿ ಪತ್ರಿಕೆಯನ್ನು ಆರಂಭಿಸಿತು. ಉತ್ತರ ಕರ್ನಾಟಕದ ಓದುಗರ ಹಾಗೂ ಲೇಖಕರ ಬಳಗಕ್ಕೆ ಆ ಭಾಗದಲ್ಲಿ ಪ್ರೌಢವಾದ ಸಂಶೋಧನ ಹಾಗೂ ಸೃಜನಾತ್ಮಕ ಲೇಖನಗಳನ್ನು ಪ್ರಕಟಿಸಬಲ್ಲ ಉನ್ನತಮಟ್ಟದ ಷಾಣ್ಮಾಸಿಕ ನಿಯತಕಾಲಿಕೆಯಾಗಿ ಇದು ರೂಪುಗೊಂಡಿತು. ೧೯೬೮ರ ರಾಜ್ಯೋದಯ ದಿನದಂದು (ನವೆಂಬರ್ ೧) ಅದರ ಪ್ರಥಮ ಸಂಚಿಕೆಯು ಬಿಡುಗಡೆಯಾಯಿತು. ಮೊದಲ ಎರಡು ಸಂಪುಟಗಳ ನಾಲ್ಕು ಸಂಚಿಕೆಗಳು ಪ್ರಕಟವಾದ ಮೇಲೆ, ೧೯೭೦ರ ಆಗಸ್ಟ್ ೧೫ರ ಸಂಚಿಕೆಯಿಂದ ಅದು ತ್ರೈಮಾಸಿಕವಾಗಿ ಪರಿವರ್ತನೆಗೊಂಡಿತು. ಲೇಖನಗಳ ಜೊತೆಗೆ ಗ್ರಂಥಾವಲೋಕನ, ಸಂಪಾದಕೀಯ, ಲೇಖಕರ ಪರಿಚಯ ಹಾಗೂ ಕರ್ನಾಟಕ ವಿಶ್ವವಿದ್ಯಾಲಯದಿಂದ ಪ್ರಕಟವಾಗಿರುವ ಗ್ರಂಥಗಳ ಕ್ರಯಪಟ್ಟಿ ಇವನ್ನು ಪ್ರತಿಸಂಚಿಕೆಯೂ ಒಳಗೊಂಡಿರುತಿತ್ತು. ಪ್ರಬುದ್ಧ ಕರ್ನಾಟಕದಂತೆಯೇ ಕರ್ನಾಟಕ ಭಾರತಿಯೂ ಶ್ರೇಷ್ಠ ಸಂಶೋಧನ ಲೇಖನಗಳನ್ನು ಪ್ರಕಟಿಸಿತು. ಉತ್ತರಕರ್ನಾಟಕದ ಅಷ್ಟೇ ಅಲ್ಲ ಕರ್ನಾಟಕದ ಬೇರೆ ಪ್ರದೇಶಗಳ ವಿದ್ವಾಂಸರೂ ಇದರಲ್ಲಿ ತಮ್ಮ ಲೇಖನಗಳನ್ನು ಪ್ರಕಟಿಸಿದರು. ವಿಶೇಷ ಸಂಚಿಕೆಗಳನ್ನೂ ಪ್ರಕಟಿಸಿದೆ. ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದ ಹಿರಿಯ ಪ್ರಾಧ್ಯಾಪಕವರ್ಗದವರು ಕಾಲಕಾಲಕ್ಕೆ ಇದರ ಸಂಪಾದಕರಾಗಿ ಕಾರ್ಯವನ್ನು ನಿರ್ವಹಿಸುತ್ತ ಬಂದಿದ್ದಾರೆ.

ಸಾಧನೆ

ಮೈಸೂರು ವಿಶ್ವವಿದ್ಯಾಲಯದ ಪ್ರಬುದ್ಧಕರ್ನಾಟಕ ಮತ್ತು ಕರ್ನಾಟಕ ವಿಶ್ವವಿದ್ಯಾಲಯದ ಕರ್ನಾಟಕ ಭಾರತಿ ನಿಯತಕಾಲಿಕೆಗಳ ಮಾದರಿಯಲ್ಲಿ ಬೆಂಗಳೂರು ವಿಶ್ವವಿದ್ಯಾಲಯವು 'ಸಾಧನೆ' ಎಂಬ ನಿಯತಕಾಲಿಕೆಯನ್ನು ಹೊರಡಿಸುತ್ತಿತ್ತು. ಬೆಂಗಳೂರು ವಿಶ್ವವಿದ್ಯಾಲಯದ ವ್ಯಾಪ್ತಿಗೆ ಒಳಪಟ್ಟಿದ್ದರೂ ಇದೊಂದು ಅಖಿಲಭಾರತ ಮಟ್ಟದಲ್ಲಿ ವಿದ್ವತ್ ಪತ್ರಿಕೆಯಂತೆಯೇ ವಿದ್ವಾಂಸರಿಂದ ಮನ್ನಣೆಯನ್ನು ಪಡೆದ ಪತ್ರಿಕೆಯಾಗಿತ್ತು. ಅಷ್ಟದಳ ಡೆಮಿ ಆಕಾರದಲ್ಲಿ ಪ್ರಕಟವಾಗುತ್ತಿದ್ದ ಇದರಲ್ಲಿ ನಾಡಿನ ಶ್ರೇಷ್ಠ ಕನ್ನಡ ವಿದ್ವಾಂಸರೆಲ್ಲರ ಲೇಖನಗಳಿರುತ್ತಿದ್ದವು. ಸಂಶೋಧನ ಲೇಖನಗಳಲ್ಲದೆ ಗ್ರಂಥ ವಿಮರ್ಶೆ, ದಶಕದ ಸಂಶೋಧನ ಕೃತಿಗಳ ಪರಿಚಯ ಮುಂತಾದವು ಇರುತ್ತಿದ್ದವು. ಚಿದಾನಂದಮೂರ್ತಿ, ಹಂಪನಾ, ಎಸ್.ಶಿವಣ್ಣ, ಮುಂತಾದ ಸಂಶೋಧಕರ ಲೇಖನಗಳಲ್ಲದೆ ನಾಡಿನ ಬೇರೆ ಬೇರೆ ಭಾಗದ ವಿದ್ವಾಂಸರ ಲೇಖನಗಳೂ ಇದರಲ್ಲಿ ಪ್ರಕಟಗೊಳ್ಳುತ್ತಿದ್ದವು.

ಜಗಲಿ

ಕನ್ನಡ ಜಾನಪದ ಕ್ಷೇತ್ರದ ಸಂಶೋಧನೆಯ ಎಲ್ಲ ಆಯಾಮಗಳನ್ನು ವಿಶ್ಲೇಷಣೆಗೆ, ವಿವೇಚನೆಗೆ ಒಳಪಡಿಸುವ ಮೂಲಕ ಈ ಕ್ಷೇತ್ರದ ತಿಳಿವಳಿಕೆಯನ್ನು ವಿಸ್ತರಿಸುವ ಮತ್ತು ದಾಖಲಿಸುವ ಉದ್ದೇಶದಿಂದ ಕರ್ನಾಟಕ ಜಾನಪದ ವಿಶ್ವವಿದ್ಯಾಲಯವು 'ಜಗಲಿ' ಎಂಬ ಷಾಣ್ಮಾಸಿಕ ವಿದ್ವತ್ ಪತ್ರಿಕೆಯನ್ನು ೨೦೧೨ರಿಂದ ಪ್ರಕಟಿಸುತ್ತ ಬಂದಿದೆ. 'ಜಗಲಿ' ವಿವಿಧ ಸಂಶೋಧನ ಲೇಖನಗಳಿಗೆ ಮೀಸಲಾಗಿದೆ. ವಿವಿಧ ಕ್ಷೇತ್ರಗಳ ಲೇಖಕರ ಸಂಶೋಧನ ಲೇಖನಗಳಲ್ಲದೆ ಜಾನಪದ ಆಕರ ಗ್ರಂಥಗಳ ವಿಶ್ಲೇಷಣೆ, ವಿಮರ್ಶೆ, ಸಂವಾದ, ಪ್ರತಿಕ್ರಿಯೆ ಎಲ್ಲದಕ್ಕೂ ಇಲ್ಲಿ ಅವಕಾಶ ಕಲ್ಪಿಸಲಾಗಿದೆ. ತಾತ್ವಿಕ ಚರ್ಚೆಗೆ ಹಾಗೂ ಚಿಂತನೆಗೆ ಕಾರಣವಾಗುವ ಅಂಶಗಳನ್ನು ಪ್ರಕಟಿಸುವ ಧೋರಣೆಯನ್ನು ಹೊಂದಿದೆ. 'ಜಗಲಿ'ಯು

ಸ್ಥಾಪಕ ಸಂಪಾದಕರು. ಶ್ರೀರಾಮಕೃಷ್ಣಾಶ್ರಮದ ಪ್ರಬುದ್ಧ ಭಾರತ ಪತ್ರಿಕೆಯ ಮಾದರಿಯನ್ನಿಟ್ಟುಕೊಂಡು ಪ್ರಬುದ್ಧ ಕರ್ಣಾಟಕವನ್ನು ಇವರು ೧೯೧೯ರಲ್ಲಿ ಸಿದ್ಧಾರ್ಥಿ ಸಂವತ್ಸರದ ಯುಗಾದಿ ಸಂಚಿಕೆಯಾಗಿ ಆರಂಭಿಸಿದ್ದರು. ಈ ಸಂಚಿಕೆಯಲ್ಲಿ ಪತ್ರಿಕೆಯನ್ನು ಕುರಿತ ಸಂಪಾದಕರ ಲೇಖನ, ಎನ್. ನೀಲಕಂಠಪ್ಪ, ಎಸ್.ವಿ. ರಂಗಣ್ಣ, ಸಿ.ಕೆ. ವೆಂಕಟರಾಮಯ್ಯ ಇವರ ಲೇಖನಗಳು, ಪುಸ್ತಕ ವಿಮರ್ಶೆ ಮತ್ತು ವಸ್ತುಕೋಶ ಇವು ಪ್ರಕಟಗೊಂಡಿವೆ. ಮೊದಲು ವರ್ಷಕ್ಕೆ ಮೂರು ಸಂಚಿಕೆಗಳಂತೆ ಪ್ರಕಟವಾಗುತ್ತಿದ್ದುದು, ಮಾರನೆಯ ವರ್ಷದಿಂದ ನಾಲ್ಕು ಸಂಚಿಕೆಗಳಾಗಿ ಪ್ರಕಟವಾಗಲಾರಂಭಿಸಿತು. ೧೯೩೦ರಿಂದ ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗ ಇದರ ಪ್ರಕಟನೆಯನ್ನು ಕೈಗೆತ್ತಿಕೊಂಡಿತು. ಆ ಸಮಯದಲ್ಲಿ ಬಿ.ಎಂ. ಶ್ರೀಕಂಠಯ್ಯನವರು ಪ್ರಧಾನ ಸಂಪಾದಕರಾಗಿದ್ದರು. ಟಿ.ಎಸ್. ವೆಂಕಣ್ಣಯ್ಯ, ಮತ್ತು ಎ.ಆರ್. ಕೃಷ್ಣಶಾಸ್ತ್ರಿ ಇವರು ಸಂಪಾದಕರಾಗಿಯೂ ತೀ. ನಂ. ಶ್ರೀಕಂಠಯ್ಯ, ಕೆ.ವಿ. ಪುಟ್ಟಪ್ಪ ಮತ್ತು ವಿ. ಸೀತಾರಾಮಯ್ಯ ಇವರು ಸಂಪಾದಕ ಸಮಿತಿ ಸದಸ್ಯರಾಗಿಯೂ ಇದ್ದರು.

ಕವಿತೆ, ಕಥೆ, ನಾಟಕ, ಪ್ರಬಂಧ, ವಿಮರ್ಶೆ, ಸಂಪಾದನೆ, ಸಂಶೋಧನೆ ಮುಂತಾದ ಎಲ್ಲ ಕ್ಷೇತ್ರಗಳಿಗೆ ಸಂಬಂಧಿಸಿದ ಲೇಖನಗಳನ್ನು ಮತ್ತು ಆಗಾಗ ವಿಶೇಷ ಲೇಖನಗಳನ್ನು, ಪುರವಣಿಗಳನ್ನು ಈ ಪತ್ರಿಕೆ ಪ್ರಕಟಿಸಿದೆ. ಇದಲ್ಲದೆ ಕೆಲವು ವಿಶೇಷ ಸಂಚಿಕೆಗಳನ್ನೂ ಪ್ರಕಟಿಸಿದೆ. ಮೊದಮೊದಲು ವಿಜ್ಞಾನ ಮತ್ತು ಮಾನವಿಕ ಶಾಸ್ತ್ರಗಳಿಗೆ ಸಂಬಂಧಪಟ್ಟ ಲೇಖನಗಳೂ ಇದೇ ಪ್ರಬುದ್ಧ ಕರ್ನಾಟಕ ಪತ್ರಿಕೆಯಲ್ಲಿ ಪ್ರಕಟಗೊಳ್ಳುತ್ತಿದ್ದವು. ನಂತರ ವಿಜ್ಞಾನ ಕರ್ಣಾಟಕ, ಮಾನವಿಕ ಕರ್ಣಾಟಕಗಳೆಂಬ ಪ್ರತ್ಯೇಕ ಪತ್ರಿಕೆಗಳನ್ನು ವಿಶ್ವವಿದ್ಯಾನಿಲಯ ಆರಂಭಮಾಡಿತು. ಪತ್ರಿಕೆ ತನ್ನ ಸುದೀರ್ಘ ಅವಧಿಯಲ್ಲಿ ಸಂಪಾದಕರ ಯೋಜನೆಗೆ ತಕ್ಕಂತೆ ವಿನ್ಯಾಸ, ಮತ್ತು ಅಂತರಂಗದಲ್ಲಿ ಬದಲಾವಣೆಗಳಾಗಿವೆ. ಲೇಖನಗಳ ಜೊತೆಗೆ, ಕಾವ್ಯವಿತಾನ, ಕಮ್ಮಟದ ಕಿಡಿಗಳು, ಕಾವ್ಯಾವಲೋಕನ, ಸಂಪಾದಕೀಯ, ಸಾದರಸ್ವೀಕಾರ ಈ ಸ್ಥಿರಶೀರ್ಷಿಕೆಗಳನ್ನು ಒಳಗೊಂಡಿರುತ್ತದೆ. ಬಹಳಷ್ಟು ಕನ್ನಡದ ಪ್ರಖ್ಯಾತ ವಿದ್ವಾಂಸರು ಕವಿಗಳು ವಿಮರ್ಶಕರು ನಾಟಕಕಾರರು ಕಥೆಗಾರರು ಈ ಪತ್ರಿಕೆಯಲ್ಲಿ ತಮ್ಮ ಬರೆಹಗಳನ್ನು ಪ್ರಕಟಿಸುವುದರ ಮೂಲಕ ಅದರ ಮೌಲ್ಯವನ್ನು ಹೆಚ್ಚಿಸಿದ್ದಾರೆ. ಈ ಪತ್ರಿಕೆ ಭಾವಿ ಲೇಖಕರನ್ನು ಸಂಶೋಧಕರನ್ನು ವಿಮರ್ಶಕರನ್ನು ಬೆಳೆಸಿದೆ. ಪ್ರಬುದ್ಧ ಕರ್ಣಾಟಕದಲ್ಲಿಯ ಬಿಡಿಬರೆಹಗಳೂ ಲೇಖನಮಾಲೆಗಳೂ ಅನಂತರ ಗ್ರಂಥ ರೂಪದಲ್ಲಿ ಹೊರಬಂದಿವೆ. ಪ್ರಾಚೀನ ಸಾಹಿತ್ಯ, ಕೆಲವು ಕನ್ನಡ ಕವಿಗಳ ಜೀವನಕಾಲ ವಿಚಾರ, ವಿಗಡ ವಿಕ್ರಮರಾಯ, ವಿದ್ಯಾರಣ್ಯರ ಸಮಕಾಲೀನರು, ಗದಾಯುದ್ಧ ನಾಟಕ, ಭಕ್ತಿಭಂಡಾರಿ ಬಸವಣ್ಣನವರು, ಮೈಸೂರು ದೇಶದ ವಾಸ್ತುಶಿಲ್ಪ, ಸುಬ್ಬಣ್ಣ, ಪಂಪಾಯಾತ್ರೆ, ಅಶ್ವತ್ಥಾಮನ್, ಅಂತಿಗೊನೆ, ಮಲೆನಾಡಿನ ಚಿತ್ರಗಳು, ನಂಬಿಯಣ್ಣನ ರಗಳೆ, ಮೈಸೂರು ಮಲ್ಲಿಗೆ, ಅಹಲ್ಯೆ, ಹಗಲುಗನಸುಗಳು, ಭಾಸಕವಿ, ಜಗತ್ತುಗಳ ಹುಟ್ಟುಸಾವು, ಆನಂದವರ್ಧನನ ಕಾವ್ಯಮೀಮಾಂಸೆ–ಈ ಮುಂತಾದವು ಹಾಗೆ ಪ್ರಕಟವಾದ ಗ್ರಂಥಗಳಲ್ಲಿ ಕೆಲವು.

ಕರ್ನಾಟಕ ಭಾರತಿ

ಸೃಜನ, ವಿಮರ್ಶೆ, ಸಂಶೋಧನ ಮತ್ತು ವಿಜ್ಞಾನ ಸಾಹಿತ್ಯದ ಅಭಿವೃದ್ಧಿಗಾಗಿ ಮೀಸಲಾಗಿದ್ದ, ಕರ್ನಾಟಕ ವಿಶ್ವವಿದ್ಯಾಲಯದ ತ್ರೈಮಾಸಿಕ ಪತ್ರಿಕೆ 'ಕರ್ನಾಟಕ ಭಾರತಿ'. ಮೈಸೂರು ವಿಶ್ವವಿದ್ಯಾಲಯದ ವ್ಯಾಪ್ತಿ ಹೆಚ್ಚಿದಂತೆ ಪ್ರಬುದ್ಧ ಕರ್ನಾಟಕ ಮೈಸೂರು ವಿಶ್ವವಿದ್ಯಾಲಯದ ವ್ಯಾಪ್ತಿಯ ಅಧ್ಯಾಪಕರಿಗೆ, ಲೇಖಕರಿಗೆ ಪ್ರಾಶಸ್ತ್ಯ ಕೊಡುವುದು

ರಿಂದ ಈ ನಿಯತಕಾಲಿಕೆ ಪ್ರಕಟವಾಗುತ್ತಲಿದೆ. ಜಾಗತಿಕ ಮಟ್ಟದಲ್ಲಿ ಕರ್ನಾಟಕದ ಅಧ್ಯಯನ ವಿಷಯಗಳನ್ನು ತಿಳಿಸುವ ಅಪರೂಪದ ಪತ್ರಿಕೆ ಇದಾಗಿದೆ.

ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ

ಕನ್ನಡ ಸಾಹಿತ್ಯದ ಸಮಗ್ರ ಬೆಳವಣಿಗೆಗಾಗಿ ಅಂದರೆ– ಚಿಂತನೆ, ರಕ್ಷಣೆ, ಮೌಲ್ಯೀಕರಣ, ವಿಮರ್ಶೆ, ಸಂಶೋಧನೆ, ಗ್ರಂಥ ಪ್ರಕಟನೆ, ಸಮ್ಮೇಳನ, ವಿಚಾರ ಸಂಕಿರಣ, ಕಮ್ಮಟ, ಹಸ್ತಪ್ರತಿ ಭಂಡಾರ, ಗ್ರಂಥಾಲಯ ಹೀಗೆ ಹತ್ತಾರು ದಿಕ್ಕಿನಲ್ಲಿ ನಿರಂತರ ಕಾರ್ಯಗಳನ್ನು ಯಶಸ್ವಿಯಾಗಿ ಹಮ್ಮಿಕೊಳ್ಳುತ್ತ ಬಂದ ಕನ್ನಡ ಸಾಹಿತ್ಯ ಪರಿಷತ್ತು ಜಾಗತಿಕ ಮಟ್ಟದಲ್ಲಿ ಕನ್ನಡಕ್ಕೆ ಸಂಬಂಧಿಸಿದ ಬೃಹತ್ ಸಂಸ್ಥೆಯಾಗಿ ಬೆಳೆದಿದೆ. ಶತಮಾನದ ಹಿಂದೆ ೫–೫–೧೯೧೫ ರಲ್ಲಿ ಆರಂಭವಾದ ಈ ಸಂಸ್ಥೆಗೆ ಎಲ್ಲ ಹಿರಿ–ಕಿರಿಯ, ಉದ್ದಾಮ ಸಾಹಿತಿಗಳು ಅದರ ಬೆಳವಣಿಗೆಗೆ ಸಹಕರಿಸಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತು 'ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ' ಎಂಬ ತ್ರೈಮಾಸಿಕ ಪರಿಷತ್ ಪತ್ರಿಕೆಯನ್ನು ೧೯೧೬ರ ಎಪ್ರಿಲ್ ತಿಂಗಳಲ್ಲಿ ತ್ರೈಮಾಸಿಕವಾಗಿ ಆರಂಭಮಾಡಿ, ನಂತರ ಅದು ಷಾಣ್ಮಾಸಿಕವಾಗಿ ಆನಂತರ ದ್ವೈವಾರ್ಷಿಕವಾಗಿ ಪ್ರಕಟವಾಗುತ್ತ ಬಂದಿದೆ. ಕಾಲಕಾಲಕ್ಕೆ ಅಧ್ಯಕ್ಷರು ನೇಮಿಸಿದ ವಿವಿಧ ಸಂಪಾದಕರಿಂದ ಸಂಪಾದಿಸಲ್ಪಟ್ಟು ಕನ್ನಡ ಸಾಹಿತ್ಯ ಪರಿಷತ್‌ಪತ್ರಿಕೆ ಪ್ರಕಟಗೊಂಡಿದೆ.

ಕನ್ನಡ ಸಾಹಿತ್ಯಕ್ಕೆ ಸಂಬಂಧಿಸಿದ ವೈಚಾರಿಕ, ಸಂಶೋಧನಾತ್ಮಕ, ಉನ್ನತಮಟ್ಟದ ಲೇಖನಗಳು, ಚಿಂತನೆಗಳು, ಚರ್ಚೆಗಳು ಈ ಪರಿಷತ್ ಪತ್ರಿಕೆಯಲ್ಲಿ ಸ್ಥಾನಪಡೆದಿವೆ. ಶ್ರೇಷ್ಠ ಲೇಖಕರು ತಮ್ಮ ಲೇಖನಗಳನ್ನು, ವಿಚಾರಗಳನ್ನು ಈ ಪತ್ರಿಕೆಯಲ್ಲಿ ಮಂಡಿಸುತ್ತ ಬಂದಿದ್ದಾರೆ. ಇದೊಂದು ವಿದ್ವತ್‌ವಲಯದ ಪತ್ರಿಕೆಯಾಗಿಯೇ ಮುಂದುವರೆದಿದೆ. ನಾಡಿನ ಪ್ರಖ್ಯಾತ ಸಂಶೋಧಕರು, ವಿಮರ್ಶಕರು, ಚಿಂತಕರು ಈ ಪತ್ರಿಕೆಯಲ್ಲಿ ತಮ್ಮ ಲೇಖನಗಳನ್ನು ಪ್ರಕಟಿಸಿರುತ್ತಾರೆ. ಮುದ್ರಣದ ಅನುಕೂಲತೆ ಅಷ್ಟಾಗಿ ಇರದ ಆ ಕಾಲದಲ್ಲೂ ಸುಮಾರು ನೂರು ಮುದ್ರಿತ ಪುಟಗಳನ್ನು ಇದು ಒಳಗೊಂಡಿರುತ್ತಿತ್ತು. ಕವಿಚರಿತೆ, ಕಾವ್ಯಮೀಮಾಂಸೆ, ಛಂದಸ್ಸು, ವಿಮರ್ಶೆ, ಸಂಶೋಧನೆ ಮೊಂತಾದ ಕ್ಷೇತ್ರಗಳ ವಿದ್ವತ್ ಲೇಖನಗಳು ಇರುತ್ತಿದ್ದವಲ್ಲದೆ, ಅನೇಕ ಸಲ ಚರ್ಚೆಗಳೂ ನಡೆಯುತ್ತಿದ್ದವು. ಆರಂಭದ ಕೆಲವು ಸಂಚಿಕೆಗಳಲ್ಲಿ ಪ್ರತಿ ಲೇಖನದ ಇಂಗ್ಲಿಷ್ ಅನುವಾದವನ್ನು ಅಥವಾ ಸಾರವನ್ನು ಪತ್ರಿಕೆ ಒಳಗೊಂಡಿರುತ್ತಿತ್ತು. ಪ್ರಾಯಃ ಆಗ ಆಸಕ್ತರಾದ ಬ್ರಿಟಿಶ್ ಅಧಿಕಾರಿಗಳಿಗೂ ಕನ್ನಡ ಸಾಹಿತ್ಯದ ಪರಿಚಯವಾಗಲಿ ಎಂಬ ಉದ್ದೇಶವನ್ನು ಪರಿಷತ್ತು ಇಟ್ಟುಕೊಂಡಂತೆ ತೋರುತ್ತದೆ. ಆಗ ಕರ್ನಾಟಕ ಏಕೀಕರಣವಾಗಿದ್ದಿಲ್ಲ. ಆದ್ದರಿಂದ ಕನ್ನಡದಲ್ಲಿ ಬರೆಯುವವರು ಬೇರೆ ಬೇರೆ ಪ್ರಾಂತಗಳಲ್ಲಿ ಹರಿದು ಹಂಚಿಹೋಗಿದ್ದರು. ಅವರ ಬರವಣಿಗೆಯಲ್ಲಿ ವ್ಯತ್ಯಾಸಗಳಿದ್ದವು. ಪರಿಷತ್ ಪತ್ರಿಕೆಯ ಕಾರಣವಾಗಿ ಬೇರೆ ಬೇರೆ ಪ್ರಾಂತಗಳಲ್ಲಿ ಮತ್ತು ವಿದೇಶಿಗರು ಒಂದು ಗ್ರಾಂಥಿಕ ಶಿಷ್ಟ (standard) ಕನ್ನಡವನ್ನು ಬರವಣಿಗೆಗೆ ಬಳಸಬೇಕಾಯಿತು. ಇದೊಂದು ರೀತಿ ಗ್ರಂಥಸ್ಥ ಕನ್ನಡದ ಏಕೀಕರಣವೇ ಆಗಲು ಸಹಕಾರಿಯಾಯಿತು ಎನ್ನಬೇಕು. ಇದು ಒಂದು ಕ್ರಾಂತಿಕಾರಕ ಬದಲಾವಣೆಯೇ ಸರಿ. ಆದರೆ ಬೇರೆ ಬೇರೆ ಪ್ರಾಂತೀಯ ಬರೆಹದ ಶೈಲಿಗಳು ನಾಶವಾಗಲೂ ಇದು ಕಾರಣವಾಯಿತು.

ಶಿವಾನುಭವ

ವಚನ ಪಿತಾಮಹ ಎಂದು ಹೆಸರಾದ ಡಾ.ಫ.ಗು.ಹಳಕಟ್ಟಿ ಅವರು ವೀರಶೈವ ಸಂಶೋಧನ ಪತ್ರಿಕೆಯಾಗಿ ಶಿವಾನುಭವವನ್ನು ಸುಮಾರು ೪೦ ವರ್ಷಗಳ ಕಾಲ

ಜನಪದರ ಬದುಕಿನ ಸಂಭ್ರಮಗಳ ಜೊತೆಗೆ ನೋವು ಬವಣೆ ಶೋಷಣೆಗಳ ಮೂಲ ಶೋಧಗಳನ್ನು ನಡೆಸಿ ಸಮಾಜಮುಖಿಯಾದ ಅಧ್ಯಯನವನ್ನು ಬಿಂಬಿಸುವ ಸಂಶೋಧನಾತ್ಮಕ ಬರವಣಿಗೆಗೆ ಪ್ರೇರಕವಾಗಲಿದೆ ಎನ್ನುತ್ತಾರೆ ಇದರ ಸಂಪಾದಕರು. 'ಜಗಲಿ' ನಿಯತಕಾಲಿಕೆಗೆ ಕುಲಪತಿ ಮತ್ತು ಕುಲಸಚಿವರನ್ನೊಳಗೊಂಡ ಸಂಪಾದಕ ಮಂಡಳಿ ಇದ್ದು ಗೌರವ ಸಂಪಾದಕರೊಬ್ಬರು ಪತ್ರಿಕೆಯ ಲೇಖನಗಳನ್ನು ಸಂಪಾದಿಸುತ್ತಾರೆ.

ಕನ್ನಡ ವಿಶ್ವವಿದ್ಯಾಲಯದ ನಿಯತಕಾಲಿಕೆಗಳು

ವಿದ್ವತ್ ನಿಯತಕಾಲಿಕೆಗಳನ್ನು ಪ್ರಕಟಿಸುವಲ್ಲಿ ಕನ್ನಡ ವಿಶ್ವವಿದ್ಯಾಲಯವು ಮುಂಚೂಣಿಯಲ್ಲಿದೆ. ಅರ್ಧವಾರ್ಷಿಕಗಳಾಗಿ ಕನ್ನಡ ಅಧ್ಯಯನ, ದ್ರಾವಿಡ ಅಧ್ಯಯನ, ಮಹಿಳಾ ಅಧ್ಯಯನ, ಜಾನಪದ ಕರ್ನಾಟಕ, ಹಸ್ತಪ್ರತಿ ಅಧ್ಯಯನ, ಶಾಸನ ಅಧ್ಯಯನ, ಬುಡಕಟ್ಟು ಕರ್ನಾಟಕ, ವಿಜ್ಞಾನ ಸಂಗಾತಿ, ಇಂಗ್ಲಿಷ್ ಭಾಷೆಯಲ್ಲಿ Journal of Karnataka Studies ಎಂಬ ಹೀಗೆ ಒಂಬತ್ತು ನಿಯತಕಾಲಿಕೆಗಳನ್ನು ಕನ್ನಡ ವಿಶ್ವವಿದ್ಯಾಲಯವು ಪ್ರಕಟಿಸುತ್ತ ಬಂದಿದೆ. ಆಯಾ ಜ್ಞಾನಕ್ಷೇತ್ರಗಳಿಗೆ ಸಂಬಂಧಿಸಿದಂತೆ ಇವು ಉನ್ನತಮಟ್ಟವನ್ನು ಕಾಯ್ದುಕೊಂಡು ಬಂದಿರುವುದೂ ವಿಶೇಷ.

ಹಂಪಿ ವಿಶ್ವವಿದ್ಯಾಲಯದ 'ಕನ್ನಡ ಅಧ್ಯಯನ' ಸಂಚಿಕೆಗಳು ಒಂದೊಂದೂ ವಿಶಿಷ್ಟವಾಗಿವೆ. ಕನ್ನಡ ನಾಡಿನ ಜನ, ಸಮಾಜ, ಭಾಷೆ, ಸಾಹಿತ್ಯ, ಸಂಸ್ಕೃತಿ, ಚರಿತ್ರೆ, ಧರ್ಮ, ಆರ್ಥಿಕತೆ, ರಾಜಕಾರಣ, ಪರಿಸರ ಶೋಧಗಳು ಇಲ್ಲಿ ನಮೂದಾಗಿವೆ. ಉನ್ನತಮಟ್ಟದ ಬೌದ್ಧಿಕ ವೇದಿಕೆಯಾಗಿ ಇವು ನಿಂತಿವೆ. 'ಕನ್ನಡ ಅಧ್ಯಯನ' ಸಂಚಿಕೆಗಳಲ್ಲಿ ಸೊಲ್ಲು, ಲೇಖನ, ಹಿಂದಣ ಹೆಜ್ಜೆ, ಕನ್ನಡಿ, ಎಲೆಮರೆ, ಮುಖಾಮುಖಿ, ಹೊಳಹು, ಪುಸ್ತಕ ಪರಿಚಯ, ಆಕರ ಸೂಚಿ ಮುಂತಾದ ವಿಭಾಗಗಳಲ್ಲಿ ಬರೆಹಗಳನ್ನು ಒಳಗೊಂಡು ಹೊಸ ವಿಚಾರ ಹೊಸ ವಿನ್ಯಾಸಗಳನ್ನು ಅನಾವರಣಗೊಳಿಸಿವೆ. ಇಂತಹ ಸಂಶೋಧನ ನಿಯತಕಾಲಿಕೆಗಳನ್ನು ಈ ಮೊದಲು ಕನ್ನಡದಲ್ಲಿ ಕಂಡರಿಯದ ಸಂಗತಿ. ಜ್ಞಾನ ವಿಸ್ತರಣೆಯ ಕಾರ್ಯವನ್ನು ಇವು ಬಹು ಸಮರ್ಥವಾಗಿ ನಿರ್ವಹಿಸಿವೆ. ಹಾಗೆಯೆ ಕನ್ನಡ ವಿಶ್ವವಿದ್ಯಾಲಯದ ಇನ್ನೊಂದು ನಿಯತಕಾಲಿಕ 'ಶಾಸನ ಅಧ್ಯಯನ' ಕೇವಲ ಶಾಸನ ಅಧ್ಯಯನಗಳಿಗೆ ಮೀಸಲಾದ ಅಪರೂಪದ ಪತ್ರಿಕೆಯಾಗಿದೆ. ಹೊಸ ಶೋಧ, ಶಾಸನಾಧ್ಯಯನ, ಅನುವಾದ, ಶಾಸನ ನಿಬಂಧಗಳ ಮಾಹಿತಿ, ಶಾಸನ ಕೃತಿನೋಟ, ಶಾಸನ ಪರಿಣಿತರು, ಶಾಸನದ ಸುತ್ತ ಮುತ್ತ ಈ ಶೀರ್ಷಿಕೆಗಳಲ್ಲಿ ಬರೆಹಗಳನ್ನು ಈ ನಿಯತಕಾಲಿಕೆ ಒಳಗೊಂಡಿದೆ. ಶಾಸನಾಸಕ್ತರಿಗೆ ಮತ್ತು ಸಂಶೋಧಕರಿಗೆ ಇದು ಬಹು ಉಪಯುಕ್ತ ನಿಯತಕಾಲಿಕೆಯೆನ್ನುವುದರಲ್ಲಿ ಸಂದೇಹವಿಲ್ಲ.

ಹಂಪಿ ಕನ್ನಡ ವಿಶ್ವವಿದ್ಯಾಲಯವು ಕರ್ನಾಟಕದ ಬಗ್ಗೆ ಕುತೂಹಲವುಳ್ಳ ಕನ್ನಡೇತರರಿಗಾಗಿ ಆಂಗ್ಲಭಾಷೆಯಲ್ಲಿ Journal of Karnataka Studies ಎಂಬ ಅರ್ಧವಾರ್ಷಿಕ ಸಂಶೋಧನ ನಿಯತಕಾಲಿಕವನ್ನು ಪ್ರಕಟಿಸುತ್ತಲಿದೆ. ರಾಷ್ಟ್ರೀಯ, ಅಂತಾರಾಷ್ಟ್ರೀಯ ವಿದ್ವಾಂಸರ ಲೇಖನಗಳನ್ನು ಒಳಗೊಂಡ ಈ ನಿಯತಕಾಲಿಕೆ ದಕ್ಷಿಣ ಭಾರತದಲ್ಲಿ ಈ ಬಗೆಯ ರೆಫರೀಡ್ ನಿಯತಕಾಲಿಕೆಯನ್ನು ಹೊರತರುತ್ತಿರುವ ವಿಶ್ವವಿದ್ಯಾಲಯಗಳಲ್ಲಿ ಕನ್ನಡ ವಿಶ್ವವಿದ್ಯಾಲಯ ಮೊಟ್ಟಮೊದಲನೆಯದು. ವಿಶ್ವವಿದ್ಯಾಲಯಗಳು ಪ್ರಕಟಿಸುತ್ತಿರುವ ಕನ್ನಡದಲ್ಲಿನ ಎಲ್ಲ ನಿಯತ ಕಾಲಿಕೆಗಳು ನಿಂತು ಹೋಗಿರುವ ಈ ಸಂದರ್ಭದಲ್ಲಿ ಇಂಗ್ಲಿಷ್‌ನಲ್ಲಿನ ಈ ಒಂದು ನಿಯತಕಾಲಿಕೆಯಾದರೂ ಪ್ರಕಟವಾಗುತ್ತಿರುವುದು ಸಮಾಧಾನದ ಸಂಗತಿಯಾಗಿದೆ. ೨೦೦೮

ಪ್ರಕಟಗೊಳ್ಳುತ್ತಿದ್ದವು. ಕನ್ನಡ ಸಾಹಿತ್ಯ ಅದರಲ್ಲೂ ವಿಶೇಷವಾಗಿ ವಚನಸಾಹಿತ್ಯಕ್ಕೆ ಸಂಬಂಧಿಸಿದ ಲೇಖನಗಳು ಮತ್ತು ಗ್ರಂಥ ವಿಮರ್ಶೆಗಳು ವಿದ್ವಾಂಸರ ಗಮನವನ್ನು ಸೆಳೆದಿದ್ದವು.

ಸಂಶೋಧನ ವ್ಯಾಸಂಗ

ಇಪ್ಪತ್ತನೆಯ ಶತಮಾನದ ಉತ್ತರಾರ್ಧದ ವೇಳೆಗೆ ಕನ್ನಡ ಸಾಹಿತ್ಯ ಸಂಶೋಧನೆಯು ಒಂದು ಶಿಸ್ತು ಆಗಿ ವಿಶ್ವವಿದ್ಯಾಲಯಗಳ ವ್ಯಾಪ್ತಿಗೆ ಒಳಪಟ್ಟು ಆಳ ವಿಸ್ತಾರಗಳನ್ನು ಪಡೆದು ಸಂಶೋಧನ ಚಟುವಟಿಕೆಗಳು ಎಲ್ಲಡೆ ನಡೆಯತೊಡಗಿದಾಗ ಸಂಶೋಧನೆಯ ಪರಸ್ಪರ ಮಾಹಿತಿ ತಿಳಿವಳಿಕೆ, ಮಾಹಿತಿ ವಿನಿಮಯ, ವಿಶ್ಲೇಷಣೆ, ಸಂಶೋಧನ ಲೇಖನಗಳ ಪ್ರಕಟನೆ ಮುಂತಾದ ಕನ್ನಡ ಶೋಧಚಟುವಟಿಕೆಗಳಿಗೆ ಸಂಬಂಧಿಸಿ ಕ್ರಿ.ಶ.೧೯೮೭-೮೮ರಲ್ಲಿ 'ಸಂಶೋಧನ ವ್ಯಾಸಂಗ' ಪತ್ರಿಕೆಯನ್ನು ಡಾ.ಸಂಗಮೇಶ ಸವದತ್ತಿಮಠ ಅವರು ಕಲಬುರ್ಗಿಯಿಂದ ಪ್ರಕಟಿಸಲು ಪ್ರಾರಂಭ ಮಾಡಿದರು. ಮೊದಲು ಶೋಧನೆ ಎಂಬ ಹೆಸರಿನಲ್ಲಿ ಪ್ರಾಯೋಗಿಕ ಸಂಚಿಕೆಯೊಂದನ್ನು ಹೊರತಂದು ನಂತರ ೧೯೮೮ರ ಡಿಸೆಂಬರನಲ್ಲಿ 'ಸಂಶೋಧನ ವ್ಯಾಸಂಗ' ಹೆಸರಿನಲ್ಲಿ ನೋಂದಾಯಿತ ಪತ್ರಿಕೆಯಾಗಿ ಪ್ರಥಮ ಸಂಚಿಕೆ ಪ್ರಕಟವಾಯಿತು. ಅಂದಿನಿಂದ ಇಂದಿನವರೆಗೆ ಭಾಷೆ, ಸಾಹಿತ್ಯ ಸಂಸ್ಕೃತಿ ಸಂಶೋಧನ ಚಟುವಟಿಕೆಗಳಿಗೆ ಮೀಸಲಾದ ಈ ಕನ್ನಡ ದ್ವೈಮಾಸಿಕ ಪತ್ರಿಕೆಯು ಕಳೆದ ೨೬ ವರ್ಷಗಳಿಂದ ನಿರಂತವಾಗಿ, ನಿಯತವಾಗಿ ಪ್ರಕಟವಾಗುತ್ತ ಬಂದಿದೆ. ೧೯೯೪ರಲ್ಲಿ ನವದೆಹಲಿಯಲ್ಲಿ ನಡೆದ ೧೧ನೇ ಜಾಗತಿಕ ಪುಸ್ತಕಮೇಳದಲ್ಲಿ Academic and Literary journals of India ವಿಭಾಗದಲ್ಲಿ ಭಾರತದ ಉತ್ತಮ ಶೈಕ್ಷಣಿಕ ಪತ್ರಿಕೆಗಳ ಸಾಲಿನಲ್ಲಿ 'ಸಂಶೋಧನವ್ಯಾಸಂಗ' ಪತ್ರಿಕೆಯನ್ನು ಪ್ರದರ್ಶಿಸಿದ್ದು ವಿಶೇಷ. ೧೯೯೫ರಿಂದ ಕರ್ನಾಟಕ ರಾಜ್ಯಸರಕಾರದ ವಾರ್ತಾ ಇಲಾಖೆಯು ಇದೊಂದು ಉತ್ತಮ ಶೈಕ್ಷಣಿಕ ಪತ್ರಿಕೆಯೆಂದು ಪರಿಗಣಿಸಿ ಮಾಧ್ಯಮಪಟ್ಟಿಯಲ್ಲಿ ಸೇರಿಸಿ ಪ್ರೋತ್ಸಾಹಿಸುತ್ತ ಬಂದಿದೆ. ಅತ್ಯುತ್ತಮ ಕಿರು ಪತ್ರಿಕೆ ಎಂದು ಪರಿಗಣಿಸಿ ೨೦೦೮ನೇ ವರ್ಷದಿಂದ ಸತತ ಮೂರುವರ್ಷಗಳವರೆಗೆ ಕೇಂದ್ರಸರಕಾರದ ಮಾನವಸಂಪನ್ಮೂಲ ಇಲಾಖೆ ವರ್ಷಂಪ್ರತಿ ಹತ್ತು ಸಾವಿರ ರೂಪಾಯಿಗಳ ಸಹಾಯಧನವನ್ನು ನೀಡಿದೆ. ಓದುಗರ ಮೆಚ್ಚುಗೆ, ಕೇಂದ್ರ ಮತ್ತು ರಾಜ್ಯಸರಕಾರಗಳ ಮಾನ್ಯತೆಗಳನ್ನು ಪಡೆದ 'ಸಂಶೋಧನವ್ಯಾಸಂಗ' ಪತ್ರಿಕೆ United States Library of Congress ಮೂಲಕ ವಿದೇಶಗಳ ಗ್ರಂಥಾಲಯಗಳಿಗೂ ಲಭ್ಯವಾಗುತ್ತಿದೆ. ಡಾ.ಸಂಗಮೇಶ ಸವದತ್ತಿಮಠ ಅವರ ಅಂತರ್ಜಾಲದಲ್ಲಿಯೂ ಇದು ಲಭ್ಯ. ಡಾ.ಎಂ.ಎಂ.ಕಲಬುರ್ಗಿ ಅವರ 'ಮಾರ್ಗ' ಸರಣಿ ಲೇಖನಗಳು, ಡಾ.ಎಂ. ಚಿದಾನಂದಮೂರ್ತಿ, ಡಾ.ಟಿ.ವಿ.ವೆಂಕಟಾಚಲಶಾಸ್ತ್ರೀ, ಮುಂತಾದ ಹಿರಿಯ ಮತ್ತು ಹಲವಾರು ತರುಣ ಸಂಶೋಧಕರ ಲೇಖನಗಳು, ಚರ್ಚೆ, ವಿಮರ್ಶೆ, ಶೋಧಸಂಗತಿಗಳು ಈ ಪತ್ರಿಕೆಯಲ್ಲಿ ಪ್ರಕಟವಾಗಿವೆ. ಈ ಪತ್ರಿಕೆಯ ಸಂಪಾದಕೀಯಗಳ ಸಂಕಲನ ಕೃತಿ 'ಕುತೂಹಲ' (೨೦೧೩) ಪ್ರಕಟವಾಗಿದೆ.

ಶೋಧ ಪರಿಶೋಧ

ಕನ್ನಡ ಭಾಷೆಗೆ ಶಾಸ್ತ್ರೀಯ ಸ್ಥಾನವು ಲಭಿಸಿದ ಹಿನ್ನೆಲೆಯಲ್ಲಿ ಕನ್ನಡ ಸಂಶೋಧನ ಕ್ಷೇತ್ರವು ಹೆಚ್ಚು ಕ್ರಿಯಾಶೀಲಗೊಳ್ಳಬೇಕೆಂಬ ಹಂಬಲದಿಂದ 'ಕರ್ನಾಟಕ ಸಂಶೋಧಕರ ಒಕ್ಕೂಟ' ಎಂಬ ಬೆಂಗಳೂರು ಮೂಲದ ಸಂಘಟನೆಯೊಂದು ೨೦೦೯ ರಲ್ಲಿ ಉದಯವಾಯಿತು. ಒಕ್ಕೂಟವು ಅನೇಕ ಸಂಶೋಧನ ಕಮ್ಮಟಗಳನ್ನು, ಚಿಂತನ-ಮಂಥನ ನಡೆಸುವ

ನಡೆಸಿಕೊಂಡು ಬಂದರು. ಮೊದಲು ತ್ರೈಮಾಸಿಕವಾಗಿದ್ದ ಪತ್ರಿಕೆ ಅನಂತರದ ಕಾಲದಲ್ಲಿ ಮಾಸಿಕವಾಗಿ ಮಾರ್ಪಟ್ಟಿತು. ವೀರಶೈವ ಧರ್ಮ ಮತ್ತು ಸಂಸ್ಕೃತಿಗೆ ಸಂಬಂಧಿಸಿದ ಹಲವು ಶೋಧ ಲೇಖನಗಳು ಮೊಟ್ಟಮೊದಲು ಶಿವಾನುಭವದಲ್ಲಿ ಬೆಳಕು ಕಂಡವು. ಬಿಜಾಪುರ ಜಿಲ್ಲೆ ಹಾಗೂ ಇನ್ನಿತರ ಕಡೆಗಳ ಹಲವು ಅಪ್ರಕಟಿತ ತಾಡವೋಲೆಗರಿಗಳನ್ನು ಕ್ಷೇತ್ರಕಾರ್ಯದ ಮೂಲಕ ಸಂಗ್ರಹಿಸಿ ಸಂಶೋಧನೆ ನಡೆಸಿ ವಚನಗಳನ್ನು ಟೀಕೆ-ಟಿಪ್ಪಣಿ ಸಹಿತ ಹಳಕಟ್ಟಿಯವರು ಶಿವಾನುಭವದಲ್ಲಿ ಪ್ರಕಟಿಸಿದರು. ಹೊಸದಾಗಿ ಶೋಧಿತ ಗ್ರಂಥಗಳ ಬಗೆಗಿನ ಮಾಹಿತಿಯನ್ನು ಈ ಪತ್ರಿಕೆಯ ಮೂಲಕ ಬೆಳಕಿಗೆ ತಂದರು. ಜೇಡರ ದಾಸಿಮಯ್ಯ, ಪ್ರಭುದೇವ, ಬಸವಣ್ಣ, ಮಹಾದೇವಿಯಕ್ಕ ಈ ಮುಂತಾದವರ ವಚನಗಳನ್ನಲ್ಲದೆ ಅಂಬಿಗರ ಚೌಡಯ್ಯ, ಉರಿಲಿಂಗಪೆದ್ದಿ, ಗೋರಕ್ಷ, ಮಾಚಿದೇವ, ಮಾದಾರ ಚೆನ್ನಯ್ಯ, ತಿಮ್ಮಬ್ಬೆ, ಲಿಂಗಮ್ಮ, ಸತ್ಯಕ್ಕ ಮುಂತಾದ ಹಲವು ವಚನಕಾರರ ವಚನಗಳನ್ನು ಬೆಳಕಿಗೆ ತಂದ ಶ್ರೇಯಸ್ಸು ಶಿವಾನುಭವಕ್ಕಿದೆ.

ಮಾಮಿಡಿ

ಕನ್ನಡ ದಾರ್ಶನಿಕ ಸಾಹಿತ್ಯದ ದಿಗ್ಗಜರೆನಿಸಿದ ಡಾ.ಜ.ಚ.ನಿ.ಅವರು 'ಮಾನವತೆಯ ಮಿಡಿತವೆ ಮಾಮಿಡಿ' ಎಂಬ ಅರ್ಥವಂತಿಕೆಯನ್ನು ಇಟ್ಟುಕೊಂಡು ೧೯೮೦ ರಲ್ಲಿ ಗೂಳೂರಿನ ಜಗದ್ಗುರು ನಿಡುಮಾಮಿಡಿ ಸಂಸ್ಥಾನಮಠದ ಪ್ರಕಾಶನದಲ್ಲಿ ಸಾಹಿತ್ಯ – ಸಂಸ್ಕೃತಿ ವಿಷಯಕ್ಕೆ ಸಂಬಂಧಿಸಿ 'ಮಾಮಿಡಿ' ಹೆಸರಿನ ತ್ರೈಮಾಸಿಕ ಪತ್ರಿಕೆಯನ್ನು ಆರಂಭಿಸಿದ್ದರು. ಪತ್ರಿಕೆಯ ಧ್ಯೇಯೋದ್ದೇಶದಲ್ಲಿ 'ಪುರಾತನ ಪರಿಶೋಧನ'ವೂ ಒಂದಾಗಿತ್ತು. ಮಾಸ್ತಿ ವೆಂಕಟೇಶ ಅಯ್ಯಂಗಾರರು ಮೊದಲ ಸಂಚಿಕೆಯ ಬಿಡುಗಡೆ ಮಾಡಿದ್ದರು. ರಂ.ಶ್ರೀ.ಮುಗಳಿ ಪತ್ರಿಕೆಯನ್ನು ಪರಿಚಯಿಸಿದ್ದರು. 'ಹಳೆಗಾಲದ ಗ್ರಾಮದೇವತೆಗಳು', ಸಾಹಿತ್ಯ–ಸಾಹಿತಿ ಮುಂತಾದ ಲೇಖನಗಳಿವೆ. ಹೀಗೆ ಆರಂಭಗೊಂಡ ಪತ್ರಿಕೆ, ಬಸವಣ್ಣನ ದೀಕ್ಷಾಗುರು, ಸಂಶೋಧಕನ ಲಕ್ಷಣಗಳು (ಮಾಮಿಡಿ ೧೫–೧೯೮೮) ಮುಂತಾದ ನೂರಾರು ಲೇಖನಗಳನ್ನು ಪ್ರಕಟಿಸಿದೆ. ಅಲ್ಲದೆ ಸ್ವಾರಸ್ಯಕರ ವಿಷಯಗಳೂ ಪತ್ರಿಕೆಯಲ್ಲಿ ಪ್ರಸ್ತಾಪವಾಗುತ್ತಿದ್ದವು. ೫ ವರ್ಷಗಳ ನಂತರ ಮತ್ತೆ ಪತ್ರಿಕೆಗೆ ಹೊಸ ರೂಪ ಕೊಟ್ಟು ಸಂಶೋಧನೆಗೆ ಇನ್ನಷ್ಟು ಒತ್ತು ಕೊಟ್ಟು ಮೀಸಲು ಶೀರ್ಷಿಕೆಗಳಡಿಯಲ್ಲಿ ಡಾ.ಜ.ಚ.ನಿ ಅವರು ಪ್ರಕಟಿಸಲು ಆರಂಭಿಸಿದ್ದರು. ಮಾಮಿಡಿ ಮೂಲಕ ಅನೇಕ ಹಳೆಯ ವಚನಕಾರರು ಬೆಳಕಿಗೆ ಬಂದದ್ದು, ಆಧುನಿಕ ವಚನಕಾರರು ಸೃಷ್ಟಿಯಾದದ್ದು ವಿಶೇಷ. ಆರಂಭದ ವರ್ಷಗಳಲ್ಲಿ ಡಾ.ಸಂಗಮೇಶ ಹಂಡಗಿ ಅವರು ಸಂಪಾದಕರಾಗಿದ್ದರು. ನಂತರ ಪ್ರೊ.ಎಂ.ಜಿ.ನಾಗರಾಜ ಮುಂತಾದವರು ಸಂಪಾದಕರಾಗಿದ್ದು ಆರಂಭವಾಗಿ ೧೬ ವರ್ಷಗಳವರೆಗೆ ನಿರಂತರವಾಗಿ ಪತ್ರಿಕೆ ಪ್ರಕಟವಾಗುತ್ತಿತ್ತು.

ಸಾಹಿತ್ಯಸಮಿತಿ ಪತ್ರಿಕೆ

ಧಾರವಾಡದಲ್ಲಿ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆಯ ಸಾಹಿತ್ಯ ಸಮಿತಿಯು ಇಂಗ್ಲಿಷ್ ಮತ್ತು ಕನ್ನಡ ಎರಡೂ ಭಾಷೆಗಳಲ್ಲಿ ತ್ರೈಮಾಸಿಕ ಪತ್ರಿಕೆಯೊಂದನ್ನು ೧೯೪೦ ರಿಂದ ೧೯೫೧ರವರೆಗೆ ಪ್ರಕಟಿಸಿತ್ತು. ಈ ಪತ್ರಿಕೆಯ ಮೂಲ ಸ್ಫೂರ್ತಿ ಪ್ರೊ.ಶಿ.ಶಿ. ಬಸವನಾಳರು. ಅವರೇ ಅದರ ಸಂಪಾದಕರೂ ಆಗಿದ್ದರು. ವೀರಶೈವ ವಾಙ್ಮಯಕ್ಕೆ ಮೀಸಲಾದ ಈ ಪತ್ರಿಕೆಯಲ್ಲಿ ಆಗಿನ ಕಾಲಕ್ಕೆ ಪ್ರಚಲಿತವೆನಿಸಿದ್ದ ವಿಷ್ಣುವರ್ಧನನು ಜೈನನೇ ವೈಷ್ಣವನೇ? ಕುಮಾರವ್ಯಾಸನು ವೀರಶೈವನೇ? ಇಂತಹ ಅನೇಕ ಜಿಜ್ಞಾಸಾ ಲೇಖನಗಳು

ಮುಖ್ಯವಾಗಿ ಭಾಷೆ, ಸಾಹಿತ್ಯ, ಸಂಸ್ಕೃತಿಗಳಿಗೆ ಸಂಬಂಧಿಸಿದ ಉನ್ನತಮಟ್ಟದ ಲೇಖನಗಳು ಈ ಪತ್ರಿಕೆಯ ಮೌಲ್ಯವನ್ನು ಹೆಚ್ಚಿಸಿದೆ. ಪತ್ರಿಕೆಯು 'ಸಾಹಿತ್ಯ ಸಂಸ್ಕೃತಿ ಶೋಧದಲ್ಲಿ' ಎಂಬ ಧ್ಯೇಯವಾಕ್ಯವನ್ನು ಇಟ್ಟುಕೊಂಡಿದ್ದರೂ ಸಂಶೋಧನೆ, ಹೊಸ ಆಲೋಚನೆಗಳ ಲೇಖನಗಳಲ್ಲದೆ ಕತೆ, ಕವಿತೆ, ವಿಮರ್ಶೆ, ಪ್ರಚಲಿತ ವಿಷಯಗಳ ಚರ್ಚೆ, ಚಿಂತನ, ಸಾಹಿತಿಗಳ ಸಂದರ್ಶನ, ಹಿಂದಿನ ಸಾಹಿತ್ಯದ ಬಗೆ ಇತ್ಯಾದಿಗಳೂ ಇದರಲ್ಲಿ ಅವಕಾಶ ಪಡೆದಿವೆ.

ಉಪಸಂಹಾರ

ಸಂಶೋಧನೆಗೆ ಸಂಬಂಧಿಸಿದ ವಿದ್ವತ್ ಪತ್ರಿಕೆಗಳನ್ನು ಸಾಮಾನ್ಯವಾಗಿ ಯಾವ ಖಾಸಗಿ ಸಂಸ್ಥೆಗಳೂ ಪ್ರಕಟಿಸಲು ಮುಂದೆ ಬರುವುದಿಲ್ಲ, ಆದರೆ ವ್ಯಕ್ತಿಗತವಾಗಿಯೋ, ಗುಂಪು ಕಟ್ಟಿಕೊಂಡೋ ಕೆಲವು ಸಾಹಿತ್ಯಾಸಕ್ತರು ಪ್ರಕಟಿಸುವ ಪತ್ರಿಕೆಗಳಲ್ಲೂ ಸಾಮಾನ್ಯವಾಗಿ ಸಂಶೋಧನ ಲೇಖನಗಳನ್ನು ಪ್ರಕಟಿಸುವುದು ಕ್ವಚಿತ್. ಋತುರಾಜ, ಸಂಕ್ರಮಣ, ಸಂಕಲನ, ಸಂಕುಲ ಮುಂತಾದ ನಿಯತಕಾಲಿಕೆಗಳು ಸಾಹಿತ್ಯ ಮತ್ತು ಸಂಸ್ಕೃತಿ ಕ್ಷೇತ್ರದ ವೈಚಾರಿಕ, ವಿಮರ್ಶಾತ್ಮಕ ಲೇಖನಗಳಿಗಾಗಿ ಮೀಸಲಾದ ಪತ್ರಿಕೆಗಳಾಗಿದ್ದರೂ ಒಮ್ಮೊಮ್ಮೆ ಆನುಷಂಗಿಕವಾಗಿ ಸಂಶೋಧನ ಲೇಖನಗಳನ್ನೂ ಪ್ರಕಟಿಸಿವೆ. ಉದಾಹರಣೆಗೆ 'ಸಂಕಲನ' ಪತ್ರಿಕೆ ಡಾ.ಷ.ಶೆಟ್ಟರ್ ಅವರ ಸಂಗಂ ತಮಿಳಗಂ ಸಂಶೋಧನ ಲೇಖನ ಮಾಲೆಯನ್ನು ಪ್ರಕಟಿಸಿತ್ತು. ಮುಂದೆ ಅದುವೇ ಗ್ರಂಥ ರೂಪದಲ್ಲಿ ಪ್ರಕಟವಾಯಿತು. ಜನಪ್ರಿಯ ಪತ್ರಿಕೆಗಳಲ್ಲಿ ನಿಯತಕಾಲಿಕೆಗಳಲ್ಲಿ ಅದೂ ವಿಶೇಷಾಂಕಗಳಲ್ಲಿ ಕೆಲವುಸಲ ಸಂಶೋಧನ ಲೇಖನಗಳು ಪ್ರಕಟವಾಗುವುದೂ ಉಂಟು. ಆದರೆ ಅಂತಹ ಲೇಖನಗಳು ಉತ್ತಮವಿದ್ದಾಗಲೂ ಸಂಶೋಧಕರು ಗಂಭೀರವಾಗಿ ಪರಿಗಣಿಸುವಂತೆ ತೋರುವುದಿಲ್ಲ. ಅಂತಾರಾಷ್ಟ್ರೀಯ ಮಟ್ಟದಲ್ಲಿ ಕನ್ನಡ ಸಂಶೋಧನ ಸಂಸ್ಥೆಗಳು ಪತ್ರಿಕೆಗಳು ತಮ್ಮ ಚಟುವಟಿಕೆಗಳನ್ನು ವಿಸ್ತರಿಸಿಕೊಳ್ಳುವ ಅನಿವಾರ್ಯತೆ ಈಗ ಇದೆ. ಸಂಶೋಧನೆ ಒಂದು ಗಂಭೀರ ವಿಷಯವಾದ್ದರಿಂದ ಸ್ಪಂದನೆ ಸೀಮಿತವಲಯದಲ್ಲಿ ಮಾತ್ರ ಆಗುತ್ತದೆ. ಇನ್ನು ಈ ಕ್ಷೇತ್ರದಲ್ಲಿ ಬರೆಯುವವರು ತೀರ ಕಡಿಮೆ ಸಂಖ್ಯೆಯಲ್ಲಿ ದೊರೆಯುತ್ತಾರೆ. ಅವರ ಬರವಣಿಗೆಗಳೂ ಕೂಡ ಎಷ್ಟೋಸಲ ಬಹುಶ್ರುತ ಮತ್ತು ಸಮಗ್ರ ಎನಿಸುವುದಿಲ್ಲ. ತಮಗೆ ಬೇಡವಾದವರ ವಿಚಾರಗಳನ್ನು ಚಾಣಾಕ್ಷವಾಗಿ ಉಲ್ಲೇಖಿಸದೇ ಕೈಬಿಡುವ, ತಮ್ಮ ವಿಚಾರಗಳನ್ನೇ ಎಲ್ಲರೂ ಒಪ್ಪಬೇಕೆಂಬ ಧೋರಣೆ ನಮ್ಮ ಅನೇಕ ಲೇಖಕರಲ್ಲಿದೆ. ಇಂತಹ ಹಲವು ಕಾರಣಗಳಿಂದ ಸಂಶೋಧನ ಪತ್ರಿಕೆಗಳು ಕನ್ನಡದಲ್ಲಿ ನಿರ್ದಿಷ್ಟ ಗುಂಪುಗಳಿಗೆ ಸೀಮಿತವಾಗುತ್ತಿವೆ. ಅಂತರ್ಜಾಲದ ಮೂಲಕ ಸಂಶೋಧನ ಪತ್ರಿಕೆಗಳು ಪ್ರಸಾರವಾದರೆ ಓದುಗರ ವಲಯ ವಿಸ್ತಾರವಾಗಬಹುದು.

■

ಕಾರ್ಯಕ್ರಮಗಳನ್ನು ಹಮ್ಮಿಕೊಂಡು ೨೦೧೧ ರಲ್ಲಿ 'ಪರಿಶೋಧ' ಎಂಬ ಕೃತಿಯಲ್ಲಿ ಅವುಗಳನ್ನು ದಾಖಲಿಸಿತು. ನಂತರ ಅದರ ಮುಂದುವರಿದ ಭಾಗವಾಗಿ 'ಶೋಧ ಪರಿಶೋಧ' ಹೆಸರಿನಲ್ಲಿ ಸಂಶೋಧನ ನಾಲ್ದಿಂಗಳ ನಿಯತಕಾಲಿಕೆಯೊಂದನ್ನು ಆರಂಭಿಸಿದೆ. (ಮೇ ೨೦೧೨) ಕರ್ನಾಟಕದ ನಾಡುನುಡಿ, ಸಂಸ್ಕೃತಿ, ಜಾನಪದ ಮುಂತಾದ ವಿಸ್ತಾರವಾದ ಕ್ಷೇತ್ರಗಳ ಸಂಶೋಧನ ಲೇಖನಗಳನ್ನು ಈವರೆಗೆ ಪ್ರಾಯೋಗಿಕ (ಮೂರು) ಸಂಚಿಕೆಗಳಲ್ಲಿ ಪ್ರಕಟಿಸಲಾಗಿದೆ. 'ಕನ್ನಡ ಸಂಶೋಧನೆ ಸಾಗಬೇಕಾದ ದಾರಿ ಕೇವಲ ಸಾಹಿತ್ಯ, ಭಾಷೆಗಳಿಗೆ ಮಾತ್ರ ಸೀಮಿತವಾಗದೆ, ಅದು ಸಾಹಿತ್ಯೇತರ ಭಾಷಾವಲಯಗಳ ಅನ್ವೇಷಣೆಗೂ ತೊಡಗುವಂತೆ ಇರಬೇಕು ಎಂಬುದು ಸಂಶೋಧಕರ ಒಕ್ಕೂಟದ ಅಪೇಕ್ಷೆ'. ಹೊಸ ಕಾಲಮಾನದ ಬೇಕುಗಳಿಗೆ ನಾವು ಕನ್ನಡವನ್ನು ಹದಗೊಳಿಸಬೇಕು. ಕನ್ನಡಕ್ಕೆ ಕಸುವು ತುಂಬಬೇಕು. ಈ ಸಂದರ್ಭದಲ್ಲಿ ಕನ್ನಡ ಭಾಷೆ, ಸಾಹಿತ್ಯ, ಜನಪದ, ಪುರಾತತ್ವ, ಶಾಸನ, ಚರಿತ್ರೆ ಮುಂತಾದವುಗಳ ಅಧ್ಯಯನ, ಸಂಶೋಧನೆ, ಮರುಸಂಶೋಧನೆ, ತೌಲನಿಕ ವಿಶ್ಲೇಷಣೆಗಳು ನಡೆಯಬೇಕು. ಸಂಶೋಧನೆಯ ನೋಟ, ನಿಲುವುಗಳ ಬಗ್ಗೆ, ಅವಕಾಶ ಅನುಕೂಲಗಳ ಬಗ್ಗೆ ಯುವ ವಿದ್ವಾಂಸ ಮನಸ್ಸುಗಳನ್ನು ಸಜ್ಜುಗೊಳಿಸಬೇಕು ಎಂಬುದು ಒಕ್ಕೂಟದ ಧ್ಯೇಯ. 'ಕನ್ನಡ ಸಂಶೋಧನೆಯನ್ನು ಕ್ರಿಯಾಶೀಲಗೊಳಿಸುವತ್ತ ಹುಟ್ಟಿಕೊಂಡ ಕರ್ನಾಟಕ ಸಂಶೋಧಕರ ಒಕ್ಕೂಟ ಇಂದಿನ ಸಂಶೋಧನೆ ಅನ್ಯಬಹುಶಿಸ್ತೀಯ ನೆಲೆಗಳ ಜೊತೆ ಸಾವಯವ ಸಂಬಂಧವನ್ನು ಹುಡುಕುತ್ತಾ ಅದರ ಬೌದ್ಧಿಕ ನೆಲೆಯನ್ನು ವಿಸ್ತರಿಸುವತ್ತ', ಶೋಧ ಪರಿಶೋಧ ನಿಯತಕಾಲಿಕ ಒಂದು ವೇದಿಕೆಯಾಗಬೇಕೆಂಬ ಆಶಯವನ್ನು ಒಕ್ಕೂಟದ ಕಾರ್ಯಾಧ್ಯಕ್ಷ ಶ್ರೀ ಕಾ.ತ.ಚಿಕ್ಕಣ್ಣ ಪ್ರಾಯೋಗಿಕ ಸಂಚಿಕೆಗಳಲ್ಲಿ ವ್ಯಕ್ತಪಡಿಸಿದ್ದಾರೆ. ಈ ಸಂಚಿಕೆಗಳ ಸಂಪಾದನೆಯನ್ನು ಡಾ.ಬಸವರಾಜ ಕಲ್ಗುಡಿ, ಡಾ.ರೇವಯ್ಯ ಒಡೆಯರ್ ಅವರನ್ನೊಳಗೊಂಡ ಸಂಪಾದಕ ಮಂಡಳಿ ನಿರ್ವಹಿಸಿದೆ.

ಅರುಹು ಕುರುಹು

ಮೈಸೂರು ಮೂಲದ 'ಅರುಹು ಕುರುಹು' ಕನ್ನಡ ತ್ರೈಮಾಸಿಕವು ವಿಶಿಷ್ಟ ಛಾಪು ಮೂಡಿಸಿದ ಪತ್ರಿಕೆಯಾಗಿದೆ. ಲಿಂಗದೇವರು ಹಳೇಮನೆ, ಹಾ.ತಿ.ರತ್ನ, ಎಚ್.ಎಸ್.ಉಮೇಶ, ಹಾ.ತಿ.ಕೃಷ್ಣೇಗೌಡ, ಮುಂತಾದ ಸಮಾನಮನಸ್ಕ ಚಿಂತಕರಿಂದ ಕ್ರಿ.ಶ.೨೦೦೮ರ ಮಧ್ಯದಲ್ಲಿ ಸಾಹಿತ್ಯ ಮತ್ತು ಸಂಸ್ಕೃತಿ ಸಂಶೋಧನೆಗೆ ಒತ್ತುಕೊಡುವ ಪ್ರಮುಖ ಪತ್ರಿಕೆಯಾಗಿ 'ಅರುಹು ಕುರುಹು' ಹೆಸರಿನಲ್ಲಿ ಪತ್ರಿಕೆ ಆರಂಭಗೊಂಡಿತು. ಡೆಮಿ ಅಷ್ಟದಳ ಆಕಾರದಲ್ಲಿ ನೂರಕ್ಕೂ ಹೆಚ್ಚು ಪುಟಗಳಲ್ಲಿ ಸುಂದರವಾದ ವಿನ್ಯಾಸದೊಂದಿಗೆ ಇದು ಪ್ರಕಟವಾಗುತ್ತ ಬಂದಿದೆ. ಸದ್ಯ ಕನ್ನಡದಲ್ಲಿ ಇದೊಂದು ಅಪೂರ್ವ ಸಂಶೋಧನ ನಿಯತಕಾಲಿಕವಾಗಿದೆ. ಆರಂಭದಿಂದಲೂ ಪ್ರೊ.ಎಚ್.ಎಸ್.ಉಮೇಶ ಅವರು ಸಂಪಾದಕರಾಗಿದ್ದಾರೆ. ಸಂಸ್ಥಾಪಕರಲ್ಲಿ ಒಬ್ಬರಾಗಿದ್ದ ಲಿಂಗದೇವರು ಹಳೆಮನೆ ಅವರು ಇರುವವರೆಗೂ ಗೌರವಸಂಪಾದಕರಾಗಿದ್ದರು. ಆಗಾಗ್ಗ ಅತಿಥಿ ಸಂಪಾದಕರಿಂದ ವಿಶೇಷ ಸಂಚಿಕೆಗಳನ್ನು ಹೊರಡಿಸಲಾಗಿದೆ. ಉದಾಹರಣೆಗೆ ಬುಡಕಟ್ಟು ಸಂಸ್ಕೃತಿ ವಿಶೇಷಸಂಚಿಕೆಗೆ (ಜನವರಿ–ಮಾರ್ಚ ೨೦೧೨) ಕಿಕ್ಕೇರಿ ನಾರಾಯಣ ಅವರು ಸಂಪಾದಕರಾಗಿದ್ದರು. ಸಬಾಲ್ಟರ್ನ ಓದು ಸಂಚಿಕೆಗೆ (ಜನವರಿ–ಮಾರ್ಚ ೨೦೧೩) ಡಾ. ಮೇಟಿ ಮಲ್ಲಿಕಾರ್ಜುನ ಅತಿಥಿ ಸಂಪಾದಕರಾಗಿದ್ದಾರೆ. ಸಂಶೋಧನ ಲೇಖನಗಳ ಆಯ್ಕೆಯಲ್ಲಿ ಹೊಸತನ, ಅಲಕ್ಷಿತ ಮತ್ತು ಅಚರ್ಚಿತ ವಿಷಯಗಳ ಗಂಭೀರ ಚಿಂತನೆ ಈ ಪತ್ರಿಕೆಯ ಲೇಖನಗಳಲ್ಲಿ ಎದ್ದುಕಾಣುತ್ತವೆ. ಕೆಲವೊಮ್ಮೆ ನಿರ್ದಿಷ್ಟ ವಿಷಯಗಳನ್ನು ಇಟ್ಟು-ಕೊಂಡು ಅದೇ ವಿಷಯದ ಮೇಲೆ ಪ್ರಸಿದ್ಧ ಲೇಖಕರಿಂದ ಬರೆಸಿದ ಲೇಖನಗಳೂ ಇಲ್ಲಿವೆ.

೬

ಸಂಶೋಧನೆಯನ್ನು ಕುರಿತಂತೆ ಬಂದಿರುವ ಕೃತಿಗಳ ಪರಿಚಯ ಮತ್ತು ವಿಮರ್ಶೆ

ಡಾ. ಡಿ. ಕೆ. ಚಿತ್ತಯ್ಯ ಪೂಜಾರ್

ಕನ್ನಡ ಸಂಶೋಧನೆಗೆ ನೂರೈವತ್ತು ವರ್ಷಗಳಿಗೂ ಹಿಂದಿನ ಇತಿಹಾಸವಿದೆ. ಜರ್ಮನ್ ಪಾದ್ರಿಗಳು ಈ ದೇಶಕ್ಕೆ ಬಂದು ಕನ್ನಡ ಭಾಷೆ–ಸಂಸ್ಕೃತಿ ಕುರಿತು ಶೋಧಿಸಲು ಹೊರಟಂದಿನಿಂದ ಈ ಇತಿಹಾಸ ಆರಂಭವಾಗುತ್ತದೆ. ಮೊದಮೊದಲು ಸಂಶೋಧಕರು ಏಕಾಂಗಿಯಾಗಿ ಕೆಲಸ ಮಾಡುತ್ತಿದ್ದರು. ಆನಂತರ ಶ್ರೀಮಂತನೊಬ್ಬನ ಹವ್ಯಾಸವಾಗಿಯೂ, ರಸತಂತ್ರಜ್ಞನ ಅಧ್ಯಯನವಾಗಿಯೋ ನಡೆಯುತ್ತಿದ್ದ ಈ ಅಧ್ಯಯನ ಇತ್ತೀಚೆಗೆ ಸಾರ್ವಜನಿಕವಾಗಿದೆ. ಅಲ್ಲದೆ ಸಂಶೋಧನೆಗೆ ಈಚಿನ ವರ್ಷಗಳಲ್ಲಿ ಬಹು ಬಗೆಯ ಪ್ರೋತ್ಸಾಹ ದೊರಕುತ್ತಿದೆ. ವಿಶ್ವವಿದ್ಯಾಲಯಗಳು, ಸಂಘ ಸಂಸ್ಥೆಗಳು, ಸರಕಾರ, ಸಾರ್ವಜನಿಕ ಹಾಗೂ ಖಾಸಗೀ ಸಂಸ್ಥೆಗಳು, ಯು.ಜಿ.ಸಿ, ಆರ್.ಎಫ್.ಸಿ, ಪಿ.ಸಿ.ಎಸ್.ಆರ್. ಮುಂತಾದವುಗಳು ಸಂಶೋಧಕರಿಗೆ ಸಂಶೋಧನಾ ಕಾರ್ಯಕ್ಕಾಗಿ ಧನಸಹಾಯ ನೀಡುತ್ತಿವೆ. ಜೊತೆಗೆ ಎಂ.ಫಿಲ್ ಮತ್ತು ಪಿಎಚ್.ಡಿ ಪದವಿಗಾಗಿ ನೂರಾರು ಜನ ಸಂಶೋಧನೆ ಕೈಗೊಳ್ಳುತ್ತಿದ್ದಾರೆ. ಆದರೆ ಹೀಗೆ ಸಂಶೋಧನೆಗೆ ತೊಡಗುವ ಸಂಶೋಧಕರಿಗೆ ಪೂರ್ವದಲ್ಲಿಯೇ ಸಂಶೋಧನೆ ಎಂದರೇನು? ಅದರ ಸ್ವರೂಪ, ಉದ್ದೇಶ, ವ್ಯಾಪ್ತಿ ಮೊದಲಾದವುಗಳನ್ನು ಕುರಿತು ಚಿಂತಿಸುವ ಅಗತ್ಯವಿರುತ್ತದೆ.

ಸಂಶೋಧನೆಗೆ ಈಚಿನ ವರ್ಷಗಳಲ್ಲಿ ಬಹುಬಗೆಯ ಪ್ರೋತ್ಸಾಹ ದೊರಕುತ್ತಿದೆ ನಿಜ. ಆದರೆ ಇಂಗ್ಲೀಷಿನಲ್ಲಿ ಮನೋವಿಜ್ಞಾನ, ಶಿಕ್ಷಣ ವಿಜ್ಞಾನ, ಸಮಾಜವಿಜ್ಞಾನ, ಸಾಹಿತ್ಯವೇ ಮೊದಲಾದುವನ್ನು ಲಕ್ಷ್ಯದಲ್ಲಿರಿಸಿಕೊಂಡು ಸಂಶೋಧನ ವಿಧಿ ವಿಧಾನಗಳನ್ನು ವಿವರಿಸುವ ಹಲವು ಗ್ರಂಥಗಳಿವೆ. ಒಂದು ಪ್ರಬಂಧವನ್ನೋ (Paper) ನಿಬಂಧವನ್ನು (Desertation) ಸಿದ್ಧಪಡಿಸುವ ರೀತಿಯನ್ನು ಕುರಿತೇ ಬರಹಗಳಿವೆ. ಆದರೆ ಕನ್ನಡದಲ್ಲಿ ನೂರೈವತ್ತು ವರ್ಷದಿಂದ ಸಂಶೋಧನೆ ನಡೆಯುತ್ತಿದ್ದರೂ ಆ ಕ್ಷೇತ್ರದ ಕುರಿತು ಪುಸ್ತಕಗಳು ಬಂದಿದ್ದು ತೀರಾ ಇತ್ತೀಚೆಗೆ

ಅನುಭವಗಳನ್ನು ಪರಿಚಯ ಮಾಡಿಕೊಂಡಿದ್ದೇನೆ. ಹತ್ತು ವರ್ಷಗಳ ಕಾಲದಿಂದ ಸಂಶೋಧನೆಯಲ್ಲಿ ತೊಡಗಿಕೊಂಡಿದ್ದೇನೆ. ನನ್ನವೇ ಆದ ಹಲವು ಅನುಭವಗಳನ್ನು ಪಡೆದುಕೊಂಡಿದ್ದೇನೆ. ಈ ಎಲ್ಲಾ ಅನುಭವಗಳೇ ಈ ಪುಸ್ತಕದ ಮೂಲ ಸಾಮಗ್ರಿ" ಎಂದು ಹೇಳಿಕೊಂಡಿದ್ದಾರೆ. ಸಂಶೋಧನೆ, ಸಂಶೋಧಕ, ಸಂಶೋಧನ ವಿಷಯ ಮತ್ತು ಸಂಶೋಧನ ವಿಧಾನಗಳನ್ನು ಈ ಹೊತ್ತಿಗೆ ಸಂಗ್ರಹವಾಗಿ ಕೂಲಂಕಷವಾಗಿ ಚರ್ಚಿಸಿದೆ. ಸ್ವಅನುಭವಗಳ ಸಂಗತಿಗಳ ನಿರೂಪಣೆಯಿಂದ ಇದರ ಮಹತ್ವ ಹೆಚ್ಚಿದೆ. ದೇ.ಜವರೇಗೌಡ ಅವರು ಈ ಕೃತಿಯನ್ನು ಸಂಶೋಧಕರ ಕೈಪಿಡಿ (ಮುನ್ನುಡಿಯಲ್ಲಿ) ಎಂದು ಕರೆದಿದ್ದಾರೆ. ಸಂಶೋಧನೆಗೆ ತೊಡಗಿಕೊಂಡ ಯಾರೇ ಆಗಲಿ ಈ ಪುಸ್ತಿಕೆಯನ್ನು ಗಮನಿಸಬೇಕು ಎನ್ನುವ ಮಟ್ಟಿಗೆ ಕೃತಿ ವಿಷಯ ಬಾಹುಳ್ಯವನ್ನು ಹೊಂದಿದೆ. ಸಾಹಿತ್ಯಕ್ಷೇತ್ರದಲ್ಲಿ ಮಾತ್ರವಲ್ಲದೆ ಇತರ ಕ್ಷೇತ್ರಗಳಲ್ಲಿ ಕೆಲಸ ಮಾಡುವ ಸಂಶೋಧಕರಿಗೂ ಈ ಪುಸ್ತಕ ಸಹಕಾರಿಯಾಗಿದೆ.

'ಸಂಶೋಧನೆ' ಎನ್ನುವ ಈ ಪುಟ್ಟಕೃತಿಯು ಸಂಶೋಧನೆಯ ಅರ್ಥ, ಅದರ ಉದ್ದೇಶವನ್ನು ಬಹಳ ಸ್ಪಷ್ಟವಾಗಿ ಕಟ್ಟಿಕೊಟ್ಟಿದೆ. ಸಂಶೋಧನೆಯನ್ನು ಕೋಟೆಕಾಳಗಕ್ಕೆ ಹೋಲಿಸಿ ವಿವರಿಸಿರುವುದು, 'ಕುದುರೆ ತನ್ನ ಯಜಮಾನ ಒಮ್ಮೆ ಪ್ರೀತಿಯಿಂದ ತಟ್ಟಿದರೆ ಸಾಕು ಹತ್ತು ಚಾಟಿ ಏಟುಗಳನ್ನು ಸಹಿಸುತ್ತದೆ" ಎಂಬುದು ಮುಂತಾದ ಉಪಮೆಗಳ ಮೂಲಕ ಸಂಶೋಧಕರಿಗೆ ಸ್ಪಷ್ಟತೆ ನೀಡಲು ಪ್ರಯತ್ನಿಸಿದ್ದಾರೆ. ಹಾಗೆಯೇ ಸಂಶೋಧನೆಗೆ ಕೈಹಾಕುವ ವಿದ್ಯಾರ್ಥಿಯ ಪ್ರಾಥಮಿಕ ಅಗತ್ಯಗಳೇನು? ಸಂಶೋಧಕನ ಜವಾಬ್ದಾರಿ ಯಾವುದು? ಗುರಿ ಮತ್ತು ಉದ್ದೇಶವೇನಾಗಿಬೇಕು. ತನ್ನ ಆಯ್ಕೆಯ ಕ್ಷೇತ್ರದಲ್ಲಿರುವ ಸಮಸ್ಯೆಗಳನ್ನು ಹೇಗೆ ಗ್ರಹಿಸಬೇಕು, ಯಾವ ಕ್ಷೇತ್ರದಲ್ಲಿ ಕೆಲಸ ಆಗಿಲ್ಲ ಎಂಬುದನ್ನು ತಿಳಿಯುವ ಬಗೆ ಹೇಗೆ ಎಂಬುದನ್ನು ವಿವರಿಸಿದ್ದಾರೆ. ಹೊಸ ಸಮಸ್ಯೆಯ ಮೇಲೆ ಬೆಳಕು ಬೀರಬೇಕಾದ ಸಂಶೋಧಕ 'ಸಮಸ್ಯೆಗಳನ್ನು' ಆರಿಸಿಕೊಳ್ಳುವುದು ಬಹಳ ಮುಖ್ಯ. ಸಂಶೋಧಕ ಸಮಸ್ಯೆಯನ್ನು ಆರಿಸಿಕೊಳ್ಳುವವರೆಗೆ ಸಮಸ್ಯೆ ಅವನ ವಶದಲ್ಲಿರುತ್ತದೆ. ಆರಿಸಿಕೊಂಡಾದ ಮೇಲೆ ಅವನು ಅದರ ವಶವಾಗುತ್ತಾನೆ ಎಂಬ ಮಾತನ್ನು ಗಂಭೀರವಾಗಿ ಈ ಕೃತಿ ಚರ್ಚಿಸುತ್ತದೆ.

ಸಮಸ್ಯೆಯ ಆಯ್ಕೆಯನ್ನು ಕುರಿತು ಹೇಳುತ್ತಲೇ, ಅದನ್ನು ಹೇಗೆ ಬಿಡಿಸಿಕೊಳ್ಳಬೇಕು, ವಿಶ್ಲೇಷಣೆಗೆ, ಸತ್ಯದ ಒರೆಗಲ್ಲಿಗೆ ಉಜ್ಜಬೇಕು, ಹಾಗೆ ಮಾಡಬೇಕಾದರೆ ಅದಕ್ಕೆ ಬೇಕಾದ ಸಾಮಗ್ರಿ ಸಂಗ್ರಹಣ ಹೇಗಿರಬೇಕು? ಅದನ್ನು ಸಂಗ್ರಹಿಸುವ ವಿಧಾನ, ಸಾಮಗ್ರಿಗಳ ಬಗೆಗಳು ಮುಂತಾದವುಗಳ ಬಗ್ಗೆ ಬಹಳಷ್ಟು ಮಾಹಿತಿಯನ್ನು ಲೇಖಕರು ನೀಡಿದ್ದಾರೆ. ಹೀಗೆ ಸಂಗ್ರಹಿಸಿ ವಿಭಾಗಿಸಿಕೊಂಡ ಆಕರಗಳಿಂದ ಸಮಸ್ಯೆಯನ್ನು ಬಿಡಿಸಿಕೊಳ್ಳುವ ಬಗೆ, ಅವನ ಶೈಲಿ ಎಷ್ಟರಮಟ್ಟಿಗೆ ನಿರಲಂಕೃತವಾಗಿರಬೇಕು, ಭಾಷೆಯ ಬಳಕೆಯ ವಿಧಾನ, ಅಡಿಟಿಪ್ಪಣಿ ನೀಡುವ ಮಾದರಿಗಳು, ಮಾಹಿತಿ ಸಂಗ್ರಹಿಸುವ ಟಿಪ್ಪಣಿಗಳ ಆಕಾರ ಮುಂತಾದ ಹತ್ತು ಹಲವು ಉಪಯುಕ್ತ ಮಾಹಿತಿಗಳ ಚರ್ಚೆಯನ್ನು ಈ ಕೃತಿ ಒಳಗೊಂಡಿದೆ. ಹಾಗಾಗಿಯೇ ಇದು ಲೇಖಕರ ಸಂಶೋಧನ ನಿಷ್ಠೆಗೂ, ಪಾಂಡಿತ್ಯಕ್ಕೂ ವಿವೇಚನಾ ಸಾಮರ್ಥ್ಯಕ್ಕೂ ಸಾಕ್ಷಿಯಾಗಿದೆ ಎಂದು ಹೇಳಬಹುದು.

ಒಟ್ಟಾರೆ ಕನ್ನಡ ಸಂಶೋಧನೆಯ ಮಾರ್ಗ ಹಿಡಿಯಬಯಸುವ ಯಾರಿಗೇ ಆಗಲಿ ಆ ಕ್ಷೇತ್ರದ ಬಗ್ಗೆ ಪ್ರಾಥಮಿಕ ಮಾಹಿತಿಯನ್ನು ನೀಡಿ ದಿಟ್ಟವಾಗಿ ಸತ್ಯಶೋಧನೆಯತ್ತ ಮುನ್ನಡೆಯಲು ಈ ಕೃತಿ ದಾರಿದೀಪದಂತಿದೆ. ಸ್ವ ಅನುಭವ ಜನ್ಯವಾದ ಅನೇಕ ಸಂಗತಿಗಳು

ಎಂದರೆ ತಪ್ಪಲ್ಲ. ಅದಕ್ಕೆ ಮುಂಚೆ ಅಲ್ಲಲ್ಲಿ ಕೆಲವು ಲೇಖನಗಳು ಕಾಣಿಸಿಕೊಂಡಿದ್ದವು ಅಷ್ಟೇ. ಕನ್ನಡ ಸಾಹಿತ್ಯ ಸಂಸ್ಕೃತಿಗಳ ಹಿನ್ನೆಲೆಯಲ್ಲಿ ಸಂಶೋಧನೆಯ ಸ್ವರೂಪವನ್ನು ತಿಳಿಸುವ ಕೃತಿಗಳೆಂದರೆ ಡಾ.ಚಿದಾನಂದಮೂರ್ತಿ ಅವರ 'ಸಂಶೋಧನೆ' (೧೯೮೪), ಹೊಸ್ಕೆರೆ ಶಿವಸ್ವಾಮಿ ಅವರ ಸಂಶೋಧನಾಶಾಸ್ತ್ರ (೧೯೭೯), ಡಾ.ಪಿ.ವಿ.ಕುಲಕರ್ಣಿ, ಡಾ. ಹರಿಕೃಷ್ಣಭರಣ್ಯ, ಬಿ.ಸದಾಶಿವ ಅವರ ಸಂಶೋಧನ ವಿಧಾನ (೧೯೮೬) ಮೊದಲಾದ ಒಂದೆರಡು ಕಿರುಪುಸ್ತಕಗಳು ಮಾತ್ರ ಲಭ್ಯವಿದ್ದವು. ಆದರೆ ಅವು ಸೀಮಿತ ಪರಿಮಿತಿಯಲ್ಲಿ ಬರೆಯಲ್ಪಟ್ಟವುಗಳಾದ್ದರಿಂದ ಸಂಶೋಧನ ಕ್ಷೇತ್ರದಲ್ಲಿ ಪ್ರಥಮ ಸಲ ಕಾಲಿಡುವವರಿಗೆ ಸ್ಪಷ್ಟ ಮಾರ್ಗದರ್ಶನ ಲಭ್ಯವಾಗುವುದಿಲ್ಲ. ಆನಂತರ ಅಂಥ ಕೊರತೆ ನೀಗಿಸಲು ಅನೇಕ ಗ್ರಂಥಗಳು ರಚನೆಯಾದವು, ಆಗುತ್ತಿವೆ. ಆದರೂ ಆ ಎಲ್ಲ ಗ್ರಂಥಗಳೂ ಅದರದೇ ಆದ ಮಿತಿಯನ್ನು ಒಳಗೊಂಡಿರುವುದು ಸತ್ಯ. ಕಾರಣ ಸಂಶೋಧನ ವಿಧಿವಿಧಾನಗಳು ಇತ್ತೀಚೆಗೆ ಬಹಳಷ್ಟು ಬದಲಾವಣೆಯಾಗುತ್ತಿರುವುದೇ ಅದಕ್ಕೆ ಕಾರಣ.

ಅದೇನೇ ಇರಲಿ ನನಗೆ ಲಭ್ಯವಿರುವ ಆ ಕ್ಷೇತ್ರದ ಕುರಿತ ಗ್ರಂಥಗಳನ್ನು ಸಾದ್ಯಂತವಾಗಿ ಪರಿಚಯಿಸುವ ಹಾಗೂ ಅದರ ವ್ಯಾಪಕತೆ ಮತ್ತು ಮಿತಿಯನ್ನು ಗುರುತಿಸುವ ಪ್ರಯತ್ನವನ್ನು ಈಮುಂದೆ ಮಾಡಲಾಗಿದೆ. ಎಲ್ಲಾ ಮಿತಿಗಳನ್ನು ಮೀರಿಯೂ ಈ ಗ್ರಂಥಗಳು ಸಂಶೋಧಕರಿಗೆ, ಎಂ.ಫಿಲ್ ಮತ್ತು ಪಿಎಚ್.ಡಿ ವಿದ್ಯಾರ್ಥಿಗಳಿಗೆ ಬಹಳಷ್ಟು ಉಪಯುಕ್ತ ಮಾಹಿತಿಯನ್ನು ನೀಡುತ್ತವೆ ಎಂಬುದರಲ್ಲಿ ಎರಡು ಮಾತಿಲ್ಲ.

'ಸಂಶೋಧನೆ' (೧೯೬೭)ಯು ಕನ್ನಡದಲ್ಲಿ ಸಂಶೋಧನಾ ವಿಧಾನಗಳನ್ನು ಕುರಿತಾದ ಮೊದಲ ಕಿರುಕೃತಿ. ನಾಡಿನ ಶ್ರೇಷ್ಠ ವಿದ್ವಾಂಸರಲ್ಲಿ ಒಬ್ಬರಾದ ಡಾ.ಎಂ.ಚಿದಾನಂದಮೂರ್ತಿ ಅವರು ಕನ್ನಡ ಸಂಶೋಧನ ಕ್ಷೇತ್ರದಲ್ಲಿ ಅಪಾರವಾದ ಕೆಲಸ ಮಾಡಿದ್ದಾರೆ. ೪೦ಕ್ಕೂ ಹೆಚ್ಚು ಸಂಶೋಧನ ಕೃತಿಗಳನ್ನು ೩೫೦ಕ್ಕೂ ಹೆಚ್ಚು ಸಂಶೋಧನಾ ಲೇಖನಗಳನ್ನು ಬರೆದು ಕನ್ನಡ ಸಂಶೋಧನೆಗೆ ಕ್ಷೇತ್ರಕಾರ್ಯದ ಆಯಾಮವನ್ನು ಜೋಡಿಸಿದ ಮೊದಲಿಗರಲ್ಲಿ ಒಬ್ಬರು. ಸಂಶೋಧನೆಗೆ ಅದರಲ್ಲೂ ಕನ್ನಡ ಶಾಸನಾಧ್ಯಯನಕ್ಕೆ ಹೊಸ ಶಿಸ್ತನ್ನು ತಂದುಕೊಟ್ಟವರು. ಅವರ ಅಪಾರವಾದ ಸಂಶೋಧನ ಅನುಭವದ ಫಲಶ್ರುತಿಯೇ ಈ 'ಸಂಶೋಧನೆ' ಎಂಬ ಕೃತಿ. ಯುವ ಸಂಶೋಧಕರಿಗಾಗಿ ಬರೆದ ಈ ಕೃತಿ ಇಂದು ಪರಿಶೀಲನಾರ್ಹ ಕೃತಿಯಾಗಿದೆ. ಈ ಕೃತಿ ಪ್ರಕಟಣೆಗಿಂತ ಮುಂಚೆ ಅನೇಕರು ಕನ್ನಡ ಸಂಶೋಧನೆಯ ಕ್ಷೇತ್ರದಲ್ಲಿ ಕೆಲಸ ಮಾಡಿದ್ದರೂ ಅದರ ವಿಧಿವಿಧಾನಗಳನ್ನು ಕುರಿತಂತೆ ಗ್ರಂಥ ಬಂದಿರಲಿಲ್ಲ. ಕೆಲ ವಿದ್ವಾಂಸರು ತಾವು ಇತರ ಗ್ರಂಥಗಳಿಗೆ ಬರೆದ ಮುನ್ನುಡಿಗಳಲ್ಲಿ ಸಂಶೋಧನೆಗೆ ಸಂಬಂಧಿಸಿದ ಕೆಲವು ಅನಿಸಿಕೆಗಳನ್ನು ಪ್ರಕಟಪಡಿಸಿದ್ದರು ಅಷ್ಟೆ. ಇದೂ ಸಹ 'ಸಂಶೋಧನೆ' ಕೃತಿ ರಚನೆಗೆ ಪ್ರೇರಣೆಯಾಗಿದೆ ಎಂದು ಅವರೇ ಕೃತಿಯ ಅರಿಕೆಯಲ್ಲಿ ಹೇಳಿಕೊಂಡಿದ್ದಾರೆ. ಮೊದಲು ೧೯೬೭ರಲ್ಲಿ ಮೈಸೂರು ವಿಶ್ವವಿದ್ಯಾಲಯದಿಂದ ಪ್ರಕಟವಾದ ಈ ಕೃತಿ, ಆನಂತರ ಇದುವರೆಗೆ ಬೇರೆ ಬೇರೆ ಪ್ರಕಾಶನಗಳಿಂದ ಹಲವು ಮುದ್ರಣಗಳನ್ನು ಕಂಡಿದೆ.

ಚಿದಾನಂದಮೂರ್ತಿಯವರೇ 'ಅರಿಕೆ'ಯಲ್ಲಿ ಈ ಕೃತಿ ರಚನೆಗೆ ಕಾರಣ ಕುರಿತು ಹೀಗೆ ಹೇಳಿಕೊಂಡಿದ್ದಾರೆ. "ಇಂಗ್ಲೀಷ್‌ನಲ್ಲಿ ಸಂಶೋಧನೆ, ಸಂಶೋಧನ ನಿಬಂಧ ಮತ್ತು ಲೇಖನಗಳನ್ನು ಸಿದ್ಧಪಡಿಸುವ ಬಗೆ ಮುಂತಾದುವನ್ನು ಕುರಿತ ಹಲವು ಗ್ರಂಥಗಳಿವೆ. ಅವುಗಳಲ್ಲಿ ಕೆಲವನ್ನು ನಾನು ಓದಿದ್ದೇನೆ. ಶ್ರೇಷ್ಠ ಸಂಶೋಧಕರ ಬಳಿ ಒಡನಾಡಿದ್ದೇನೆ. ಅವರೊಡನೆ ಅನೇಕ ಸಮಸ್ಯೆಗಳನ್ನು ಚರ್ಚಿಸಿದ್ದೇನೆ ಜೊತೆಗೆ ಅವರ ಹಲವಾರು

ಸುಮಾರು ಹದಿಮೂರು ಅಧ್ಯಾಯಗಳಲ್ಲಿ ಸಂಶೋಧನೆಯ ಸ್ವರೂಪವನ್ನು ಕಟ್ಟಿಕೊಡಲು ಪ್ರಯತ್ನಿಸಿರುವ ಶಿರೂರ ಅವರು ಪ್ರಸ್ತಾವನೆಯಲ್ಲಿ ಸಂಶೋಧನೆಯ ಬೆಳವಣಿಗೆಯ ಇತಿಹಾಸವನ್ನು ಕುರಿತು ವಿವರಿಸುತ್ತಾರೆ. ಸಂಶೋಧನೆಯ ಅರ್ಥ, ಉದ್ದೇಶ, ಸ್ವರೂಪ, ವ್ಯಾಪ್ತಿ, ಸಂಶೋಧನೆಗೆ ಕಾರಣಗಳು ಅಕಸ್ಮಾತ್ ಸಂಶೋಧನೆಯೇ ಅಥವಾ ಉದ್ದೇಶ ಪೂರ್ವಕ ಸಂಶೋಧನೆಯೇ? ಹಾಗೆಂದರೇನು? ಎನ್ನುವುದನ್ನು ವಿವರಿಸಿದ್ದಾರೆ. ಸಂಶೋಧನೆ ಎನ್ನುವುದು ಕಲೆಯೇ? ವಿಜ್ಞಾನವೇ? ಎನ್ನುವ ಜಿಜ್ಞಾಸೆ ಮಾಡಿದ್ದಾರೆ. ಸಾಹಿತ್ಯದಲ್ಲಿ ನಡೆಯುವ ಸಂಶೋಧನೆಗೂ, ವಿವಿಧ ಜ್ಞಾನಶಾಖೆಗಳಲ್ಲಿ ನಡೆಯುವ ಸಂಶೋಧನೆಗೂ ಇರುವ ವ್ಯತ್ಯಾಸ ಹಾಗೂ ಅದರ ಸ್ವರೂಪವನ್ನು ೧. ರೂಪಸ್ತರ ೨. ಅರ್ಥಸ್ತರ ೩. ತಾತ್ಪರ್ಯಸ್ತರ ಹಾಗೂ ನಿಬಂಧಮಾದರಿ, ಲೇಖನಮಾದರಿ, ಟಿಪ್ಪಣಿ ಮಾದರಿಯಲ್ಲಿ ನಡೆಯುವ ಸಂಶೋಧನಾ ಕಾರ್ಯವನ್ನು ಉದಾಹರಣೆ ಸಹಿತ ವಿವರಿಸಿದ್ದಾರೆ.

ಬಹಳ ಮುಖ್ಯವಾಗಿ 'ಸಂಶೋಧನೆ' ನಿಂತಿರುವುದು ಸಂಶೋಧಕನ ತಿಳಿವಳಿಕೆಯ ಮೇಲೆ ಹಾಗಾಗಿ ಶಿರೂರ ಅವರು ಈ ಕೃತಿಯಲ್ಲಿ "ಸಂಶೋಧಕನ ಅರ್ಹತೆ ಮತ್ತು ಗುಣಲಕ್ಷಣ"ಗಳನ್ನು ಕುರಿತು ಚರ್ಚಿಸಿದ್ದಾರೆ. ಸಂಶೋಧಕರಲ್ಲಿಯೂ ಅನೇಕ ರೀತಿ–ಯವರಿದ್ದಾರೆ. ಪ್ರವೃತ್ತಿ ಸಂಶೋಧಕರು, ವೃತ್ತಿ ಸಂಶೋಧಕರು, ಹವ್ಯಾಸಿ ಸಂಶೋಧಕರು, ಪ್ರವಾಸಿ ಸಂಶೋಧಕರು, ಪದವಿ ಸಂಶೋಧಕರು, ಯೋಜನಾ ಸಂಶೋಧಕರು ಇತ್ಯಾದಿ. ಇವರಿಗೆಲ್ಲ ಇರಬೇಕಾದ ಅರ್ಹತೆ, ಪ್ರತಿಭೆ, ಅಭಿರುಚಿ, ಸತತ ಅಭ್ಯಾಸ ಮತ್ತು ಕಠೋರ ಪರಿಶ್ರಮಗಳು, ಆಲಸ್ಯ ಮತ್ತು ಸೋಮಾರಿತನದಿಂದ ದೂರ ಇರುವುದು, ಯಾವುದೇ ವಿಷಯದ ಮೇಲಿನ ಸತತ ಚಿಂತನೆ, ಚಿಕಿತ್ಸಕ ಬುದ್ಧಿ ಅಥವಾ ಜಿಜ್ಞಾಸೆಯ ಮನೋಭಾವ, ಸೂಕ್ಷ್ಮತೆ, ವೈಜ್ಞಾನಿಕ ಮನೋಭಾವ, ತಾಳ್ಮೆ, ಸಂಯಮ, ಛಲ, ಧೈರ್ಯ, ಪ್ರಾಮಾಣಿಕತೆ, ಸ್ವಯಂ ವಿಮರ್ಶೆ, ಬಿಚ್ಚುಮನಸ್ಸು, ಜನಸಂಪರ್ಕದ ಗುಣ ಮುಂತಾದವುಗಳು ಅಗತ್ಯವಾಗಿ ಇರಬೇಕು ಎಂಬುದನ್ನು ಸಕಾರಣವಾಗಿ ಉದಾಹರಣೆ ಸಮೇತ ವಿವರಿಸಿದ್ದಾರೆ. ಇವು ಒಬ್ಬ ಸಂಶೋಧಕ ಸಂಶೋಧನೆಗೆ ತೊಡಗುವ ಪೂರ್ವದಲ್ಲಿಯೇ ಅಗತ್ಯವಾಗಿ ತಿಳಿದಿರಬೇಕಾದ ಸಂಗತಿಗಳಾಗಿವೆ. ಇಲ್ಲವಾದಲ್ಲಿ ಸಂಶೋಧಕ ತನ್ನ ಗುರಿಯನ್ನು ಯಶಸ್ವಿಯಾಗಿ ಮುನ್ನಡೆಸಲಾರ ಎನ್ನುವುದು ಸತ್ಯ. ಸಂಶೋಧಕನಿಗೆ ಇರಬೇಕಾದ ಅರ್ಹತೆಯಂತೆ ಅವರ ಮಾರ್ಗದರ್ಶಕರಿಗೂ ಕೆಲವು ಅರ್ಹತೆಗಳು ಇರುವುದು ಅವಶ್ಯ. ಅದು ಪ್ರತ್ಯಕ್ಷ ಮಾರ್ಗದರ್ಶನವಿರಲಿ ಅಪ್ರತ್ಯಕ್ಷ ಮಾರ್ಗದರ್ಶನವಿರಲಿ ಅವರಿಗೂ ಕ್ಷೇತ್ರದ ಬಗ್ಗೆ ಮಾಹಿತಿ, ತಿಳಿವಳಿಕೆ ಇದ್ದರೆ ಒಳ್ಳೆಯದು. ಆಗ ನಾವು ಉತ್ತಮ ಸಂಶೋಧನೆ ಮಾಡಲು ಅಥವಾ ಸತ್ಯದ ಶೋಧನೆ ನಡೆಯಲು ಸಾಧ್ಯವಾಗುತ್ತದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

'ಸಂಶೋಧನೆಯ ಪ್ರಾಥಮಿಕ ಹಂತಗಳು' ಎನ್ನುವ ಭಾಗದಲ್ಲಿ ಒಬ್ಬ ಸಂಶೋಧಕ ಅಧ್ಯಯನಕ್ಕಾಗಿ ವಿಷಯವನ್ನು ಆಯ್ಕೆ ಮಾಡಿಕೊಳ್ಳುವಲ್ಲಿ ವಹಿಸಬೇಕಾದ ಎಚ್ಚರಿಕೆ ಅಥವಾ ಮುಂಜಾಗ್ರತ ಕ್ರಮಗಳನ್ನು ವಿವರಿಸಿದ್ದಾರೆ. ಮುಖ್ಯವಾಗಿ ಸಾಹಿತ್ಯ ಸಂಶೋಧನೆಯಲ್ಲಿರುವ ಅವಕಾಶಗಳನ್ನು ವಿವರಿಸುತ್ತಾ ಸಾಹಿತ್ಯಕ್ಷೇತ್ರ, ಭಾಷಾಕ್ಷೇತ್ರ, ಧಾರ್ಮಿಕ ಅಥವಾ ತಾತ್ವಿಕಕ್ಷೇತ್ರ, ಸಾಂಸ್ಕೃತಿಕ ಕ್ಷೇತ್ರ, ಜಾನಪದಕ್ಷೇತ್ರ, ಚಾರಿತ್ರಿಕಕ್ಷೇತ್ರ, ಅನ್ಯಜ್ಞಾನಕ್ಷೇತ್ರಗಳಲ್ಲಿ ಇದುವರೆಗೆ ನಡೆದಿರುವ ಅಧ್ಯಯನಗಳನ್ನು ಉದಾಹರಣೆಯಾಗಿ ನೀಡುತ್ತಾ ಸಂಶೋಧಕರ ಆಸಕ್ತಿಯನ್ನು ಸೆಳೆಯುತ್ತಾರೆ. ಇದರಿಂದ ಹೊಸದಾಗಿ ಸಂಶೋಧನೆ ಕೈಗೊಳ್ಳುವವರಿಗೆ ಒಂದು ಮಾರ್ಗಸೂಚಿ ಸಿಕ್ಕಿದಂತಾಗುತ್ತದೆ. ಈ ಹಿನ್ನೆಲೆಯಲ್ಲಿ ತಮ್ಮ ತಮ್ಮ ಆಸಕ್ತಿ ಕ್ಷೇತ್ರದಲ್ಲಿ ವಿಷಯದ

ಸಂಶೋಧಕರಿಗೆ ಧೈರ್ಯ, ಸ್ಥೈರ್ಯ ನೀಡುತ್ತವೆ. ಕನ್ನಡ ಸಂಶೋಧನೆ ಕುರಿತ ಯಾವುದೇ ಗ್ರಂಥಗಳು ಇಲ್ಲದಿದ್ದ ಕಾಲದಲ್ಲಿ ಇಂಥದೊಂದು ಪ್ರಯತ್ನ ನಡೆದಿರುವುದು ಈ ಕೃತಿಯ ಮತ್ತೊಂದು ಹೆಗ್ಗಳಿಕೆ. ಇಷ್ಟೆಲ್ಲಾ ಹೇಳಿದರೂ ಲೇಖಕರೇ ಕೃತಿಯ ಕೊನೆಯಲ್ಲಿ ಹೇಳಿರುವಂತೆ "ಸಂಶೋಧನೆಯಲ್ಲಿ ಯಾವುದೇ ನಿಯಮ ಕಡ್ಡಾಯವಲ್ಲ, ಸಂಶೋಧನೆ ಎಂದರೇನು ಎಂಬುದನ್ನು ಪುಸ್ತಕದಲ್ಲಿ ಓದಿ ಯಾರೂ ಸಂಶೋಧಕರಾಗಲಾರರು. ಪ್ರತಿಯೊಬ್ಬ ಸಂಶೋಧಕನೂ ತನ್ನ ಸ್ವಂತ ಅನುಭವದಿಂದ, ಶ್ರಮದಿಂದ ತನ್ನ ಮಾರ್ಗ ತಾನೇ ಕಂಡುಕೊಳ್ಳುತ್ತಾನೆ" ಎನ್ನುವ ಮಾತು ಆಂಶಿಕವಾಗಿ ಸತ್ಯವಾದರೂ ಮಾದರಿಗಳ ತಿಳಿವಳಿಕೆಗೆ ಇಂಥ ಕೃತಿಗಳ ಅಗತ್ಯ ಇದೆ ಎಂದು ಹೇಳಬಹುದು. ಕನ್ನಡ ಸಾಹಿತ್ಯ ಸಂಶೋಧನಾ ಕ್ಷೇತ್ರದಲ್ಲಿ ಮಾತ್ರವಲ್ಲದೆ ಇತರ ಕ್ಷೇತ್ರಗಳಲ್ಲಿ ಕೆಲಸ ಮಾಡುವ ಸಂಶೋಧಕರಿಗೂ ಈ ಕಿರುಕೃತಿ ಉಪಯುಕ್ತವಾಗಿದೆ.

ಹೊಸ್ಕೆರೆ ಶಿವಸ್ವಾಮಿಯವರ 'ಸಂಶೋಧನ ಶಾಸ್ತ್ರ' – ಎಂಬ ಕಿರುಕೃತಿಯಲ್ಲಿ ಸಂಶೋಧನೆ ಮತ್ತು ಸಂಶೋಧನಾಶಾಸ್ತ್ರ, ಸಂಶೋಧಕ, ಸಂಶೋಧನೆಯ ಮುಖ್ಯ ಘಟಕಗಳು, ಮೊದಲನೆ ಆದ್ಯತೆ : ನಿಬಂಧದ ರೂಪುರೇಷೆ ; ಅಡಿಟಿಪ್ಪಣಿ ಮತ್ತು ಅನುಬಂಧ ವಿವೇಚನೆ ; ಸಂಶೋಧನೆಯಲ್ಲಿ ಸಾಮಾನ್ಯ ತಪ್ಪುಗಳು ; ಉತ್ತಮ ಸಂಶೋಧನೆ ಎಂಬ ತೀರ ಚಿಕ್ಕ ಚಿಕ್ಕ ಅಧ್ಯಾಯಗಳಿವೆ. (ಕೆಲವು ೧.೧/೨ ಪುಟದಷ್ಟು ಚಿಕ್ಕವು) 'ಸಂಶೋಧನೆಯನ್ನು ಕುರಿತ ಅದರ ವಿಧಿ ವಿಧಾನಗಳನ್ನು ಕುರಿತ ಕ್ರಮವಾದ ಅಧ್ಯಯನವೇ ಸಂಶೋಧನಾಶಾಸ್ತ್ರ' ಎಂಬ ಮಾತನ್ನು ವಿವರಿಸಿದ್ದಾರೆ. ಅಂತಹ ಹೊಸಮಾತಿನ ಅಗತ್ಯ ಇದೆಯೇ? ಅಥವಾ ಸಂಶೋಧನೆಯೇ ಆ ಅರ್ಥವನ್ನು ಒಳಗೊಳ್ಳುವುದೇ ವಿಚಾರ ಮಾಡಬೇಕು. Hypothesis ಮಾತನ್ನು ಊಹನೆ' ಎಂದು ಅನುವಾದಿಸಿರುವುದು ಸರಿಯಾಗಲಾರದು. ಮತ್ತು Hypothesis ಪದವನ್ನು ಸರಿಯಾಗಿ ಗ್ರಹಿಸಿದಂತೆ ಕಾಣುವುದಿಲ್ಲ. ಅಡಿಟಿಪ್ಪಣಿ ಕೊಡುವ ವಿಧಾನವನ್ನು ಪು–೨೯ರಲ್ಲಿ ಹೇಳಿ ಪುಟ–೨೩ರಲ್ಲಿ ಅದರಂತೆ ಅಡಿ ಟಿಪ್ಪಣಿ ಕೊಡದಿರುವುದು ಎದ್ದುಕಾಣುತ್ತದೆ. ಇಂತಹ ಕೆಲವು ಅಸಂಗತಿಗಳನ್ನು ಬಿಟ್ಟರೆ ಸಮಸ್ಯೆಯನ್ನು ಆಯ್ಕೆ ಮಾಡುವಲ್ಲಿ ಸಂಶೋಧಕ ವಹಿಸಬೇಕಾದ ಎಚ್ಚರ, ಟಿಪ್ಪಣಿ ತೆಗೆದುಕೊಳ್ಳುವ ವಿಧಾನ, ಗ್ರಂಥ ಸೂಚಿಯನ್ನು ಬಳಸಿಕೊಳ್ಳುವ ರೀತಿ ಇವುಗಳನ್ನು ಕುರಿತ ಬರಹ ಚೊಕ್ಕವಾಗಿದೆ. ಎಂ.ಫಿಲ್, ವಿದ್ಯಾರ್ಥಿಯಾಗಿ ಸಿದ್ಧಪಡಿಸಿದ ಈ ಬರಹ ಸಂಶೋಧನ ವಿದ್ಯಾರ್ಥಿಗಳು ಒಮ್ಮೆ ಪರಿಶೀಲಿಸಬಹುದಾದ ಕೃತಿ. ಮತ್ತು ಅಲ್ಲಲ್ಲಿ ಬಂದಿರುವ ಸೂಚನೆಗಳು ಸಂಶೋಧಕರಿಗೆ ಎಚ್ಚರವನ್ನು ಕೊಡುತ್ತವೆ.

'ಸಂಶೋಧನ ಸ್ವರೂಪ' ಎನ್ನುವ ಈ ಕೃತಿ ಡಾ.ಬಿ.ವ್ಹಿ.ಶಿರೂರ ಅವರ ೧೯೯೨ರಲ್ಲಿ ಪ್ರಕಟವಾದ "ಸಂಶೋಧನ ವ್ಯಾಸಂಗ" ಎನ್ನುವ ಕೃತಿಯ ಪರಿಷ್ಕೃತ ಆವೃತ್ತಿ. ಈ ಮುಂಚೆ 'ಸಂಶೋಧನ ವ್ಯಾಸಂಗ'ವು ಎಂ.ಫಿಲ್ ಮತ್ತು ಪಿಎಚ್.ಡಿ ವಿದ್ಯಾರ್ಥಿಗಳಿಂದ ಅಪಾರ ಮನ್ನಣೆ ಪಡೆದುದರ ಕಾರಣವಾಗಿ ತೀ.ನಂ.ಶ್ರೀ ಸ್ಮಾರಕ ಬಹುಮಾನವನ್ನು ಪಡೆದಿತ್ತು. ಈ ಪ್ರೇರಣೆಯಿಂದ ಇನ್ನಷ್ಟು ಮಾಹಿತಿಯೊಂದಿಗೆ ೨೦೦೦ನೇ ವರ್ಷದಲ್ಲಿ ಪರಿಷ್ಕರಿಸಿ 'ಸಂಶೋಧನಾ ಸ್ವರೂಪ' ಎನ್ನುವ ಹೆಸರಿನಲ್ಲಿ ಹೊರತರಲಾಗಿದೆ. ಇಲ್ಲಿ ಮೂಲವನ್ನು ಬಹಳಷ್ಟು ಬದಲಾಯಿಸಿ ಅದೇ ರೀತಿ ಕಾಲಕ್ಕನುಗುಣವಾದ ವಿವಿಧ ವಿಷಯಗಳನ್ನು ಹೊಸದಾಗಿ ಸೇರಿಸಿರುವುದರಿಂದ ಈ ಕೃತಿ ಮೂಲಕ್ಕಿಂತ ಹೊಸ ಸ್ವರೂಪವನ್ನು ಪಡೆದುಕೊಂಡಿದೆ.

ಕ್ರಮಗಳನ್ನು ವಿವರಿಸುತ್ತಾರೆ. 'ಮಹಾಪ್ರಬಂಧದ ವಿನ್ಯಾಸವನ್ನು ಕುರಿತು ಬರೆಯುತ್ತಾ' ಅದರ ಶೀರ್ಷಿಕೆ, ಅರಿಕೆ, ಸಂಕೇತಸೂಚಿ, ಪದಸೂಚಿ, ಅರ್ಥಕೋಶ, ಆಧಾರಗ್ರಂಥ ಸೂಚಿಗಳನ್ನು ಹೇಗೆ ಸಿದ್ಧಪಡಿಸಬೇಕು ಎಂಬುದನ್ನು ಬಹಳ ಚೆನ್ನಾಗಿ ತಿಳಿಸಿಕೊಟ್ಟಿದ್ದಾರೆ. ಹೊಸದಾಗಿ ಸಂಶೋಧನೆಗೆ ತೊಡಗುವವರಿಗೆ ಇದು ಬಹಳಷ್ಟು ಉಪಯುಕ್ತ ಮಾಹಿತಿ ನೀಡುತ್ತದೆ.

ಹಾಗೆಯೇ ಮುಂದುವರೆದು "ಸಂಶೋಧನೆಯ ಪ್ರಕಾರ"ಗಳನ್ನು ವಿವರಿಸುತ್ತಾ ಅದರಲ್ಲಿರುವ ವಿವಿಧ ಬಗೆಗಳ ಚರ್ಚೆ ನೋಡಬಹುದು. ೧. ಸಾಮಗ್ರಿಮುಖಿ ಸಂಶೋಧನೆ ೨. ವಿವರಣಮುಖಿ ಸಂಶೋಧನೆ ೩. ವಿಶ್ಲೇಷಣಾಮುಖಿ ಸಂಶೋಧನೆ ೪. ಐತಿಹಾಸಿಕ ಮತ್ತು ಸಾಮಾಜಿಕ ಸಂಶೋಧನೆ ೫. ತುಲನಾತ್ಮಕ ಸಂಶೋಧನೆ ೬. ಮನೋವೈಜ್ಞಾನಿಕ ಸಂಶೋಧನೆ, ಕೇಸ್ ಸ್ಟಡಿ ಸಿದ್ಧಾಂತ ಕೇಂದ್ರಿತ ಸಂಶೋಧನೆಗಳ ಬಗ್ಗೆ ಸವಿವರವಾದ ಮಾಹಿತಿ ನೀಡಿದ್ದಾರೆ. "ಕವಿಯ ಕಾಲ, ದೇಶ, ಚರಿತ್ರೆ, ಕೃತಿಯ ಬಗ್ಗೆ ಅಧ್ಯಯನ ಮಾಡಬಯಸುವರಿಗೂ ಇಲ್ಲಿ ಕೆಲವು ಒಳಹುಗಳನ್ನು ನೀಡಿದ್ದಾರೆ. ಹಾಗೆಯೇ ಸಾರಲೇಖ ಸಿದ್ಧತೆ, ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ, ಸಂಶೋಧನ ವಿಧಾನ, ಅಧ್ಯಯನದ ಫಲಿತಾಂಶ, ಸಂಶೋಧನೆಯ ಭಾಷೆ, ಅಡಿಟಿಪ್ಪಣಿ, ಉದ್ಧರಣೆಗಳ ಬಗ್ಗೆಯೂ ಬಹಳಷ್ಟು ಮಾಹಿತಿ ನೀಡಿದ್ದಾರೆ.

ಕೃತಿಯ ಕೊನೆಯಲ್ಲಿ ಕರ್ನಾಟಕದಲ್ಲಿ ನಡೆದಿರಬಹುದಾದ ಇದುವರೆಗಿನ ಪ್ರಮುಖ ಅಧ್ಯಯನಗಳನ್ನು ಕುರಿತಂತೆ ಮಾಹಿತಿ ನೀಡಿದ್ದಾರೆ. ಉದಾ: ಶಾಸನ, ಭಾಷೆ, ಜನಪದ, ಸಾಹಿತ್ಯದಲ್ಲಿ ನಡೆದಿರುವ ಮೌಲಿಕ ಸಂಶೋಧನೆ ಮತ್ತು ಸಂಶೋಧಕರ ಬಗೆಗೆ ವಿವರಣೆ ನೀಡಿದ್ದಾರೆ. ಅನುಬಂಧದಲ್ಲಿ 'ಸಂಶೋಧನ ಸ್ವರೂಪ' ಎಂಬ ಈ ಕೃತಿ ರಚನೆ ಕಾಲದವರೆಗೆ ವಿವಿಧ ವಿಶ್ವವಿದ್ಯಾಲಯಗಳಲ್ಲಿ ನಡೆದಿರುವ ಸಂಶೋಧನೆಯ ವಿಷಯ, ಸಂಶೋಧಕ, ಪದವಿ ಪಡೆದ ವರ್ಷ (ಎಂ.ಫಿಲ್, ಪಿಎಚ್.ಡಿ, ಡಿ.ಲಿಟ್)ಗಳನ್ನು ಪಟ್ಟಿ ಮಾಡಿಕೊಟ್ಟಿದ್ದಾರೆ.

ಡಾ.ಬಿ.ವ್ಹಿ.ಶಿರೂರ ಈ ಕೃತಿ ಮೇಲ್ನೋಟಕ್ಕೆ ಕೇವಲ ಮಾಹಿತಿ ನೀಡುವ ಕೃತಿಯಂತೆ ಕಂಡುಬಂದರೂ ಸಂಶೋಧನೆಯಲ್ಲಿ ತೊಡಗಿಸಿಕೊಳ್ಳುವವರಿಗೆ, ಎಂ.ಫಿಲ್, ಪಿಎಚ್.ಡಿ, ಡಿ.ಲಿಟ್ ಪದವಿಗಾಗಿ ಅಧ್ಯಯನ ಮಾಡುವವರಿಗೆ ಬಹಳ ಉಪಯುಕ್ತ ಮಾಹಿತಿ ನೀಡುತ್ತದೆ. ಹಾಗಾಗಿ ಇದು ಕನ್ನಡದಲ್ಲಿ ಸಂಶೋಧನೆ ನಡೆಸುವವರು ಒಮ್ಮೆ ಓದಲೇಬೇಕಾದ ಕೃತಿ ಎಂದರೆ ತಪ್ಪಾಗಲಾರದು. ಹಾಗಾಗಿ ಈ ಕೃತಿಯನ್ನು ಸಂಶೋಧನ ವಿಧಿವಿಧಾನಗಳ ಬಗ್ಗೆ ತಿಳಿಯಬಯಸುವವರಿಗೆ ಒಂದು ಉತ್ತಮ ಆಕರಗ್ರಂಥವೆಂದೂ ಹೇಳಬಹುದು.

ಕನ್ನಡ ಸಂಶೋಧನ ಶಾಸ್ತ್ರ (೧೯೯೨) 'ಸಂಶೋಧನೆ' ಎಂದಾಕ್ಷಣ ನೆನಪಿಗೆ ಬರುವ ಕೆಲವೇ ವಿದ್ವಾಂಸರಲ್ಲಿ ಡಾ.ಎಂ.ಎಂ.ಕಲಬುರ್ಗಿಯವರು ಒಬ್ಬರು. ಕಳೆದ ೪೫ ವರ್ಷಗಳಿಂದ ಬೋಧನೆ, ಬರಹಗಳ ಮೂಲಕ ಸಂಶೋಧನೆಗೆ ಹೊಸ ಅರ್ಥ ಮತ್ತು ಆಯಾಮಗಳನ್ನು ನೀಡುತ್ತಾ ಬಂದ ಅವರ ಅನುಭವದ ಫಲವಾಗಿ ಈ ಕೃತಿ ಮೂಡಿಬಂದಿದೆ. ಬಹಳ ಮುಖ್ಯವಾಗಿ ಭಾಷೆ, ಸಾಹಿತ್ಯ, ಇತಿಹಾಸ, ಸಂಸ್ಕೃತಿ, ಜಾನಪದ, ಶಾಸನ ಕ್ಷೇತ್ರಗಳನ್ನು ಗಮನದಲ್ಲಿಟ್ಟುಕೊಂಡು ಈ ಕೃತಿ ರಚಿಸಿದ್ದಾರೆ. ಅವರೇ ತಮ್ಮ ಕೃತಿಯ 'ಅರಿಕೆ'ಯಲ್ಲಿ ಇದು 'ಆವಿಷ್ಕರಣಾತ್ಮಕ ಸಂಶೋಧನ ಶಾಸ್ತ್ರ'ವಲ್ಲ 'ಅನ್ವೇಷಣಾತ್ಮಕ ಸಂಶೋಧನಾ ಶಾಸ್ತ್ರ' ಎಂಬ ಸ್ಪಷ್ಟ ತಿಳಿವಳಿಕೆಯಂತೂ ಈ ಬರಹದ ಹಿಂದೆ ಉದ್ದಕ್ಕೂ ಕೆಲಸ ಮಾಡಿದೆ ಎಂದು ಹೇಳಿಕೊಂಡಿದ್ದಾರೆ. ಈ ಕೃತಿಯಲ್ಲಿ ಕನ್ನಡಕ್ಕೆ ಅಗತ್ಯವಿಲ್ಲದ ವಿಚಾರಗಳನ್ನು ಕೈಬಿಟ್ಟು ಕನ್ನಡ

ಆಯ್ಕೆಗೆ ಅನುಕೂಲವಾಗುತ್ತದೆ. ಮುಂದುವರೆದು ವಿಷಯದ ಆಯ್ಕೆಯಲ್ಲಿ ಸಂಶೋಧಕ ವಹಿಸಬೇಕಾದ ಮುಂಜಾಗರೂಕತೆಗಳನ್ನು ವಿವರಿಸುತ್ತಾ ಸಂಶೋಧನೆಯಲ್ಲಿ ಅಳವಡಿಸಿಕೊಳ್ಳಬೇಕಾದ ಸಿದ್ಧಾಂತಗಳನ್ನು ತಿಳಿಸುತ್ತಾರೆ. ಊಹನಾ ಸಿದ್ಧಾಂತದ ಪರಿಕಲ್ಪನೆ, ಅದರ ಲಕ್ಷಣ, ಪ್ರಕಾರಗಳು, ಈ ಸಿದ್ಧಾಂತದ ಉಪಯೋಗಗಳು ಮುಂತಾದವುಗಳನ್ನು ಕುರಿತ ಚರ್ಚೆ ಬಹಳ ಉಪಯುಕ್ತವಾದುದು. ಸಂಶೋಧನೆಯ ರೂಪುರೇಷೆ, ಅದರ ಬಗೆಗಳು ಅದನ್ನು ಅಳವಡಿಸಿಕೊಳ್ಳುವಾಗ ಇರಬೇಕಾದ ಎಚ್ಚರಿಕೆ, ಸಂಶೋಧನೆಯಲ್ಲಿ ವಿಷಯಕ್ಕೆ ಪೂರಕವಾಗಿ ಬಳಸಿಕೊಳ್ಳುವ ಪರಾಮರ್ಶನ ಗ್ರಂಥಸೂಚಿ, ಗ್ರಂಥಾಲಯಗಳನ್ನು ಬಳಸಿಕೊಳ್ಳುವ ರೀತಿ ಮುಂತಾದವುಗಳನ್ನು ತಿಳಿಸಿಕೊಡುತ್ತಾರೆ.

'ವಿಷಯ ಸಂಗ್ರಹಣೆ– ಆಕರಗಳು' ಎನ್ನುವ ಭಾಗದಲ್ಲಿ ಸಂಶೋಧನೆಗೆ ಸಂಬಂಧಿಸಿದಂತೆ ವಿಷಯ ಸಂಗ್ರಹಕ್ಕಿರುವ ವಿವಿಧ ಆಕರಗಳನ್ನು ಅವುಗಳ ಬಳಕೆಯ ವಿಧಾನವನ್ನೂ ವಿವರಿಸುವ ಪ್ರಯತ್ನ ಮಾಡಿದ್ದಾರೆ. ಇಲ್ಲಿ ಡಾ.ಎಂ.ಎಂ.ಕಲಬುರ್ಗಿ ಹಾಗೂ ಡಾ.ಸವದತ್ತಿಮಠ ಅವರು ಗುರ್ತಿಸಿರುವ ಆಕರ ಸಾಮಗ್ರಿಗಳ ಭಾಗವನ್ನು ಇಲ್ಲಿ ನೀಡಿದ್ದಾರೆ. ಪ್ರಾಚ್ಯಶೋಧ ಆಕರ ಸಾಮಗ್ರಿಗಳು, ದಾಖಲಿತ ಆಕರ ಸಾಮಗ್ರಿಗಳು, ವಸ್ತುರೂಪ ಸಾಮಗ್ರಿಗಳು ಇವುಗಳನ್ನೇ ಚಾಕ್ಷುಶ ಆಕರಗಳು, ಮೌಖಿಕ ಆಕರಗಳು ಮತ್ತು ವಿಶಿಷ್ಟ ಆಕರಗಳು ಎಂದು ಕರೆಯುವುದರಿಂದ ಇವೆಲ್ಲವುಗಳನ್ನು ಗಮನದಲ್ಲಿಟ್ಟುಕೊಂಡು ಒಟ್ಟಾರೆಯಾಗಿ 'ಮೂಲಸಾಮಗ್ರಿಗಳು' 'ಆನುಷಂಗಿಕ ಸಾಮಗ್ರಿಗಳು', 'ಪ್ರಾಮಾಣಿಕ ಮತ್ತು ಅಪ್ರಮಾಣಿಕ ಆಕರ ಸಾಮಗ್ರಿಗಳು' ಎನ್ನುವ ವಿಭಾಗ ಕ್ರಮದ ಅಡಿಯಲ್ಲಿ ವಿವರಿಸುವ ಪ್ರಯತ್ನ ಮಾಡಿದ್ದಾರೆ. ಆದರೂ ಕಲಬುರ್ಗಿ, ಸವದತ್ತಿಮಠ, ಚಿದಾನಂದಮೂರ್ತಿ ಅವರೂ ಸಹ ಈ ರೀತಿಯ ವಿಭಾಗ ಕ್ರಮವನ್ನು ಈ ಹಿಂದೆಯೇ ನೀಡಿರುವುದನ್ನು ಗಮನಿಸಬಹುದು.

ಲೇಖಕರು ಸಂಶೋಧನೆಯಲ್ಲಿ 'ಕ್ಷೇತ್ರಕಾರ್ಯ'ದ ಪ್ರಾಮುಖ್ಯತೆಯನ್ನು ಅರಿತು ಅದರ ಬಗ್ಗೆ ಸುದೀರ್ಘವಾಗಿ ಚರ್ಚಿಸಿದ್ದಾರೆ. ಕ್ಷೇತ್ರಕಾರ್ಯದ ಬಗ್ಗೆ ಸಂಶೋಧಕನಿಗೆ ತಿಳಿವಳಿಕೆ ಇಲ್ಲದಿದ್ದರೆ ಸಂಶೋಧನೆಗೆ ಅನೇಕ ತೊಡಕುಗಳು ಉಂಟಾಗುತ್ತವೆ. ಅದಕ್ಕಾಗಿ ಕ್ಷೇತ್ರ ಕಾರ್ಯದ ಪೂರ್ವಸಿದ್ಧತೆ ಮಾಡಿಕೊಳ್ಳಬೇಕಾಗುತ್ತದೆ. ತಮ್ಮ ಸಂಶೋಧನೆಯ ವಿಷಯದ ಆಧಾರದ ಮೇಲೆ ಸಂಗ್ರಹಾಲಯಗಳು, ಗ್ರಂಥಾಲಯಗಳು, ಹಸ್ತಪ್ರತಿ ಭಂಡಾರಗಳು, ಪತ್ರಾಗಾರ ಇಲಾಖೆಗಳು, ವಸ್ತುಸಂಗ್ರಹಾಲಯಗಳು ಅಥವಾ ವ್ಯಕ್ತಿಗಳು ಮುಂತಾದ ಮಾಹಿತಿಯನ್ನು ಮೊದಲೇ ತಿಳಿದುಕೊಂಡು ಅಲ್ಲಿಗೆ ಭೇಟಿ ನೀಡಿ ವಿಷಯ ಸಂಗ್ರಹಿಸಬೇಕಾಗುತ್ತದೆ ಎಂಬ ಮಾಹಿತಿ ನೀಡಿದ್ದಾರೆ. ಇದು ಸಹ ಸಂಶೋಧಕರಿಗೆ ಒಂದು ಮಾರ್ಗದರ್ಶನವೇ ಸರಿ. ಹಾಗೆಯೇ ಪ್ರಶ್ನಾವಳಿ, ಸಂದರ್ಶನ, ಅವುಗಳ ಪ್ರಕಾರಗಳು ಅವುಗಳನ್ನು ಸಿದ್ಧಪಡಿಸುವ ರೀತಿ, ಅವುಗಳಿಂದ ಆಗುವ ಪ್ರಯೋಜನ, ಕ್ಷೇತ್ರಕಾರ್ಯದಲ್ಲಿ ಮಾಹಿತಿಯನ್ನು ಸಂಗ್ರಹಿಸುವ ವಿಧಾನ ಮುಂತಾದುವುಗಳನ್ನು ಸವಿವರವಾಗಿ ವಿವರಿಸಿದ್ದಾರೆ ಈ ಭಾಗ ಹೆಚ್ಚು ಗಮನೀಯವಾದುದು.

ಕ್ಷೇತ್ರಕಾರ್ಯದ ಮೂಲಕ ಸಂಗ್ರಹಿಸಿದ ಸಾಮಗ್ರಿಯ ವರ್ಗೀಕರಣ ಮತ್ತು ವಿಶ್ಲೇಷಣೆಯನ್ನು ಕುರಿತ ಮಾಹಿತಿಯನ್ನೂ ಇಲ್ಲಿ ನೀಡಲಾಗಿದೆ. ನೋಟ್‌ಬುಕ್, ಬಿಡಿಹಾಳೆಗಳು, ಪಟ್ಟಿಕೆಗಳ ಮೂಲಕ ವಿಷಯ ಸಂಗ್ರಹಿಸುವ ವಿಧಾನವನ್ನು ತಿಳಿಸುವುದರ ಜೊತೆಗೆ ಹಾಗೆ ಸಂಗ್ರಹಿಸಿದ ಸಾಮಗ್ರಿಗಳನ್ನು ವಿಶ್ಲೇಷಿಸುವ ವಿಧಾನಗಳ ಬಗ್ಗೆಯೂ ತಿಳಿಸಿದ್ದಾರೆ. ಉದಾ:–ಪರಿಷ್ಕರಣ, ಸಂಕೇತಿಕರಣ, ಸ್ಮರಣೀಕರಣ ಮುಂತಾದ ವಿಶ್ಲೇಷಣಾ

ಇದುವರೆಗಿನ ಮಾದರಿಗಳನ್ನು ಹೇಳುತ್ತಾ ಅನೇಕ ಉದಾಹರಣೆಗಳನ್ನು, ಉಲ್ಲೇಖಗಳನ್ನು ನೀಡಿರುವುದು.

'ಸಂಪ್ರಬಂಧ–ಮಹಾಪ್ರಬಂಧ'ಗಳ ರಚನೆಯ ವಿನ್ಯಾಸ, ಮಹಾಪ್ರಬಂಧದ ಕಟ್ಟಡದ ಸ್ವರೂಪದ ಚರ್ಚೆಯೂ ಗಮನಿಸುವಂಥದ್ದು. ಸಂಶೋಧನೆಗೆ 'ಪೂರಕವಾದ' ಸೃಜನ – ವಿಮರ್ಶನ, ಸಂಶೋಧನಕ್ರಿಯೆ, ಭಾಷೆ, ವೈಯಕ್ತಿಕ ಸಂಶೋಧನೆ, ಜಂಟಿಸಂಶೋಧನೆ, ಸಾಂಸ್ಥಿಕ ಸಂಶೋಧನೆ, ಸಂಶೋಧನೆಗೆ ಪಡೆದುಕೊಳ್ಳುವ ಸಹಾಯ, ಸಂಶೋಧನೆಯ ಅವಶ್ಯಕತೆಯನ್ನು ಕುರಿತ ಚರ್ಚೆಯೂ ಅಷ್ಟೇ ಮುಖ್ಯ. ಕಾರಣ ಸಂಶೋಧನೆಗೆ ಹಣದ ನೆರವಿನ ಅಗತ್ಯ ಬೇಕೇ ಬೇಕು. ಅಂಥ ಸಹಾಯ ನೀಡುವ ಸಂಸ್ಥೆಗಳು, ವಿಶ್ವವಿದ್ಯಾಲಯಗಳ ಬಗ್ಗೆ ಮಾಹಿತಿ ನೀಡಿರುವುದು ಸಹ ಆ ಕ್ಷೇತ್ರದಲ್ಲಿ ಕೆಲಸ ಮಾಡುವವರಿಗೆ ಒಂದು ಪ್ರೋತ್ಸಾಹ ನೀಡಿದಂತೆಯೇ ಸರಿ. ಮುಂದುವರೆದು ಕೊನೆಯ ಅಧ್ಯಾಯದಲ್ಲಿ ಕನ್ನಡ ಸಂಶೋಧನೆಯ ಇತಿಹಾಸ, ಆಕರಗಳ ಶೋಧ, ಅವುಗಳ ರೂಪನಿಷ್ಠ ಹಾಗೂ ಗುಣನಿಷ್ಠ ಶೋಧಗಳ ಬಗ್ಗೆ ಮಾಹಿತಿ ನೀಡಿದ್ದಾರೆ. ಮತ್ತು ಸಂಶೋಧನೆಯ ಭವಿಷ್ಯವನ್ನು ಚರ್ಚಿಸಿರುವುದು ಈ ಕೃತಿಯ ಇನ್ನೊಂದು ವಿಶೇಷ. ಎಲ್ಲಾ ಅಂಶಗಳನ್ನು ಗಮನಿಸಿದಾಗ ಎಂ.ಎಂ.ಕಲಬುರ್ಗಿಯವರ ಈ 'ಕನ್ನಡ ಸಂಶೋಧನಾ ಶಾಸ್ತ್ರ' ಕೃತಿ ನಿಜವಾಗಿಯೂ ಅದರಲ್ಲಿರುವ ಸಂಶೋಧನೆಯ ತಿಳಿವಳಿಕೆಯ ಶಿಸ್ತುಬದ್ಧತೆಯಿಂದಾಗಿ ಕನ್ನಡಮುಖಿ ಸಂಶೋಧನೆಯ ಪೂರ್ಣಪ್ರಮಾಣದ ಶಾಸ್ತ್ರ ಕೃತಿಯಾಗಿದೆ ಎನ್ನುವಲ್ಲಿ ಅಭ್ಯಂತರವಿಲ್ಲ.

'ಕನ್ನಡ ಸಾಹಿತ್ಯ ಸಂಶೋಧನೆಯ ಇತಿಹಾಸ' ಎಂಬ ಕೃತಿಯನ್ನು ಡಾ.ಸಂಗಮೇಶ ಸವದತ್ತಿಮಠ ಅವರು ರಚಿಸಿದ್ದು ಕನ್ನಡ ಪುಸ್ತಕ ಪ್ರಾಧಿಕಾರ ಪ್ರಕಟಿಸಿದೆ. ಇದು ಕನ್ನಡ ಸಾಹಿತ್ಯ ಸಂಶೋಧನೆಯನ್ನು ಸಮೀಕ್ಷಿಸುವ ಪ್ರಥಮ ಕೃತಿಯಾಗಿದೆ ಎಂದು ಲೇಖಕರೇ ಹೇಳಿಕೊಂಡಿದ್ದಾರೆ. ಅಂದರೆ ಸಂಶೋಧನೆಯನ್ನು ಹಾಗೂ ಸಂಶೋಧಕರನ್ನು ಕುರಿತಂತೆ ಈ ಮುಂಚೆ ಅಲ್ಲಲ್ಲಿ ಬಿಡಿ ಲೇಖನಗಳು ಪ್ರಕಟವಾಗಿದ್ದರೂ ಸಮಗ್ರ ಕನ್ನಡ ಸಂಶೋಧನೆಯ ಚರಿತ್ರೆಯನ್ನು ಕಟ್ಟಿಕೊಡುವ ಕೆಲಸ ನಡೆದಿರಲಿಲ್ಲ. ಆ ದೃಷ್ಟಿಯಿಂದ ಲೇಖಕರ ಮಾತು ಸತ್ಯವೆನ್ನಬಹುದು. ಹಾಗಾಗಿ ಅಂಥದೊಂದು ಕೊರತೆಯನ್ನು ಈ ಕೃತಿ ತುಂಬುವ ಪ್ರಯತ್ನ ಮಾಡಿದೆ.

ಕನ್ನಡ ಭಾಷೆಯಲ್ಲಿ ಸಾಹಿತ್ಯ ಕೃತಿಗಳು ರಚನೆಯಾದಂತೆ ಸಾಹಿತ್ಯ ಚರಿತ್ರೆಯ ಗ್ರಂಥಗಳೂ ರಚನೆಗೊಳ್ಳುತ್ತ ಬಂದವು. ಹಾಗೆಯೇ ವ್ಯಾಖ್ಯಾನ, ವಿಶ್ಲೇಷಣೆಯನ್ನು ಒಳಗೊಂಡ ಗ್ರಂಥಗಳೂ ಕಾಣಿಸಿಕೊಂಡವು. ಜೊತೆ ಜೊತೆಗೆ ಸಂಶೋಧನ ಪ್ರಬಂಧಗಳೂ ಪ್ರಕಟವಾದವು. ಆದರೆ ಸಂಶೋಧನಾ ಶಿಸ್ತಿನ ಮೇಲೆ ಅಥವಾ ನೆಲೆಗಟ್ಟಿನ ಮೇಲೆ ಬೆಳಕು ಚಲ್ಲುವ ಕೃತಿಗಳು ಪ್ರಕಟವಾಗಲಿಲ್ಲ. ೧೯೬೦ರಲ್ಲಿ ಪ್ರಕಟವಾದ 'ಸಂಶೋಧನೆ' ಎನ್ನುವ ಡಾ.ಎಂ.ಚಿದಾನಂದಮೂರ್ತಿ ಅವರ ಕಿರುಪುಸ್ತಕವೇ ಮೊದಲನೆಯದು. ಆದರೆ ಅದು ಅಷ್ಟೊಂದು ವಿಸ್ತಾರವಾದ ಮಾಹಿತಿಯನ್ನೇನೂ ಒಳಗೊಂಡಿಲ್ಲದಿದ್ದರೂ ಸಂಶೋಧನಾ ಅಧ್ಯಯನಕ್ಕೆ ಒಂದು ಮಾರ್ಗಸೂಚಿಯಾಯಿತು. ಆದರೆ ಅದುವರೆಗೆ ಕನ್ನಡದಲ್ಲಿ ನಡೆದಿರುವ ಸಂಶೋಧನಾ ಚಟುವಟಿಕೆಗಳ ಬಗೆಗಾಗಲಿ, ಸಂಶೋಧಕರ ಸಾಧನೆಯ ಬಗೆಗಾಗಲೀ ಸ್ಥೂಲ ಪರಿಚಯವನ್ನು ಒಳಗೊಂಡ ಒಂದೂ ಕೃತಿಯೂ ಪ್ರಕಟಗೊಂಡಿರಲಿಲ್ಲ. ಅಂತಹ ಸಂದರ್ಭದಲ್ಲಿ ರಚನೆಗೊಂಡ 'ಕನ್ನಡ ಸಾಹಿತ್ಯ ಸಂಶೋಧನೆಯ ಇತಿಹಾಸ' ಕೃತಿ ಸಂಶೋಧನಾ ವಿದ್ಯಾರ್ಥಿಗಳಿಗೆ, ಸಂಶೋಧಕರಿಗೆ ಒಂದು ಮಹತ್ವದ ಕೃತಿಯಾಗಿ ಕಂಡುಬಂದಿತು.

ನಿಷ್ಠ ಸಂಶೋಧನೆಯನ್ನೇ ಕೇಂದ್ರವಾಗಿ ಮಾಡಿಕೊಂಡು ಅನ್ವೇಷಣಾತ್ಮಕ ಸಂಶೋಧನೆಯನ್ನು ಕುರಿತ ಒಂದು ತತ್ವಶಾಸ್ತ್ರವನ್ನು ರೂಪಿಸಲು ಪ್ರಯತ್ನಿಸಲಾಗಿದೆ.

ಸುಮಾರು ಆರು ಅಧ್ಯಾಯಗಳಲ್ಲಿ ಹರಡಿಕೊಂಡಿರುವ ಈ ಗ್ರಂಥವು ಕನ್ನಡ ಸಂಶೋಧನೆಯನ್ನು ಕುರಿತು ಬಂದಿರುವ ಕೃತಿಗಳಲ್ಲಿಯೇ ಬಹಳ ಅಪರೂಪವಾದದ್ದು. ಸಂಶೋಧನೆಯಲ್ಲಿ ಆಸಕ್ತಿ ಇರುವವರು ಮೊದಲು ಈ ಕೃತಿ ಅವಲೋಕಿಸಿದರೆ ಅವರ ಕೆಲಸ ಸುಲಭವಾಗುತ್ತದೆ ಎಂಬುದು ನನ್ನ ಅಭಿಪ್ರಾಯ. ಸಂಶೋಧನೆ ಎಂದರೇನು? ಅದರ ಅರ್ಥ, ವ್ಯಾಪ್ತಿಯನ್ನು ಕುರಿತು ಮೊದಲಿಗೆ ವಿವರಿಸುತ್ತಾರೆ. ಹಾಗೆಯೇ ಸಂಶೋಧಕನಾಗ ಬಯಸುವವನಿಗೆ ಇರಬೇಕಾದ ಅರ್ಹತೆಗಳು, ಆ ಕ್ಷೇತ್ರದಲ್ಲಿ ಕೆಲಸ ಮಾಡಬೇಕಾದರೆ ಸಹಜವಾಗಿ ಇರಬೇಕಾದ ಕುತೂಹಲ, ಪ್ರಾಮಾಣಿಕತೆ, ಧೈರ್ಯ, ವ್ಯುತ್ಪತ್ತಿ, ಕ್ರಿಯಾಶೀಲತೆ, ಪ್ರತಿಭೆಗಳನ್ನು ವಿವರಿಸಿದ್ದಾರೆ. ಇವುಗಳನ್ನು ಮೈಗೂಡಿಸಿಕೊಳ್ಳದಿದ್ದರೆ ಸಂಶೋಧನಾ ಕ್ಷೇತ್ರದಲ್ಲಿ ಯಶಸ್ವಿಯಾಗಲು ಕಷ್ಟಸಾಧ್ಯ ಎಂಬುದನ್ನು ವ್ಯಕ್ತಪಡಿಸುತ್ತಾರೆ.

ಸಂಶೋಧನೆಯಲ್ಲಿ ಬಹಳ ಮುಖ್ಯ ಪಾತ್ರವಹಿಸುವುದು ಆಕರಗಳು. ಈ ಆಕರ ಸಾಮಗ್ರಿಗಳ ಸದೃಢತೆ, ಕೊರತೆ ಅಥವಾ ಅವುಗಳನ್ನು ಗ್ರಹಿಸುವ ಸೂಕ್ಷ್ಮಮತಿ ಬಹಳ ಮುಖ್ಯ. ಕಲಬುರ್ಗಿಯವರು ಈ ವಿಷಯವನ್ನು ಕುರಿತಂತೆ ಅನೇಕ ವರ್ಷಗಳ ಕಾಲ ಚಿಂತನ ಮಂಥನ ನಡೆಸಿದ್ದಾರೆ. ಹಾಗಾಗಿಯೇ ಆಕರಗಳ ಸ್ವರೂಪ, ಪ್ರಮಾಣ, ಅವುಗಳ ಪ್ರಾಮಾಣಿಕತೆಯನ್ನು ಕುರಿತು ವಿವರಿಸುತ್ತಲೇ ಅವುಗಳನ್ನು ವಿಂಗಡಿಸಿಕೊಳ್ಳುವ ಅಥವಾ ಆಕರ ಸಾಮಗ್ರಿಗಳಲ್ಲಿರುವ ವಿವಿಧ ಬಗೆಯನ್ನು ಗುರ್ತಿಸುತ್ತಾರೆ. ಉದಾ: ವಸ್ತು ಸಾಮಗ್ರಿ, ಭಾಷಾಸಾಮಗ್ರಿ, ಕ್ರಿಯಾಸಾಮಗ್ರಿ, ಜ್ಞಾನಸಾಮಗ್ರಿ ಅವುಗಳ ಪ್ರಾಮಾಣಿಕತೆ, ಅಪ್ರಮಾಣಿಕತೆ, ಪ್ರಧಾನ ಆಕರಗಳು, ಪೋಷಕ ಆಕರಗಳು, ಪೂರಕವಾದ ಆಕರ ಸಾಮಗ್ರಿಗಳು ಮತ್ತು ಪ್ರತ್ಯಕ್ಷ –ಪರೋಕ್ಷ ಆಕರಗಳು ಎಂದು ವಿವರಿಸುತ್ತ ಅವುಗಳನ್ನು ಸಂಶೋಧನೆಯಲ್ಲಿ ಸಂಶೋಧಕ ಬಳಸಿಕೊಳ್ಳುವ ರೀತಿ ಮತ್ತು ಅವುಗಳ ಪಾತ್ರಗಳನ್ನು ಕುರಿತು ಹೇಳಿದ್ದಾರೆ. ಕೇಂದ್ರೀಯ ಹಾಗೂ ಕ್ಷೇತ್ರೀಯ ನೆಲಗಳಲ್ಲಿ ಅವುಗಳನ್ನು ಶೋಧಿಸಿಕೊಳ್ಳುವ ಬಗೆಯೂ ಅಷ್ಟೇ ಮುಖ್ಯ ಎಂಬುದನ್ನು ತಮ್ಮ ಸ್ವ ಅನುಭವಗಳ ಹಿನ್ನೆಲೆಯಲ್ಲಿ ಚರ್ಚಿಸಿದ್ದಾರೆ.

'ಸಂಶೋಧನ ಕ್ರಿಯೆ ಪ್ರಕಾರ' ಎನ್ನುವ ಭಾಗದಲ್ಲಿ ಸಂಶೋಧನೆಯೆನ್ನುವುದು ಕಳೆದುಕೊಂಡ ಇತಿಹಾಸವನ್ನು ಕಾಣಿಸಿಕೊಡುವುದು ಮತ್ತು ಕಟ್ಟಿಕೊಡುವುದು. ಈ ಸಂದರ್ಭದಲ್ಲಿ ಕಾವ್ಯಕಟ್ಟುವ ಕವಿಯಂತೆ ಸಂಶೋಧಕನೂ ಹಲವು ಹಂತಗಳನ್ನು ದಾಟಬೇಕಾಗುತ್ತದೆ ಎಂದು ಹೇಳುತ್ತಾ ಅವುಗಳನ್ನು ೧. ಮೂಲ ಊಹನಾ ೨. ಆಕರ – ಆಕರಸಾಮಗ್ರಿ – ದತ್ತಸಾಮಗ್ರಿಗಳ ಸಂಗ್ರಹಣ ೩. ವಿಶ್ಲೇಷಣಕ್ರಿಯೆ ವ್ಯಾಖ್ಯಾನ ಕ್ರಿಯೆ ೪. ಸಂಭಾವ್ಯ ಸಂಶೋಧನೆ – ಸತ್ಯಸಂಶೋಧನೆ ಎಂದು ವರ್ಗೀಕರಿಸಿ ವಿಶ್ಲೇಷಿಸಿದ್ದಾರೆ. ಕನ್ನಡ ಸಂಶೋಧನೆಯ ವೈಧಾನಿಕತೆ ಮತ್ತು ಮಾದರಿಗಳನ್ನು ಹಾಗೂ ವಿಷಯ ವ್ಯಾಪ್ತಿಯನ್ನು ಗಮನದಲ್ಲಿಟ್ಟುಕೊಂಡು ಇದುವರೆಗೆ ನಡೆದಿರುವ, ನಡೆಯುತ್ತಿರುವ ಸಂಶೋಧನೆಯನ್ನು ಪರಿಗಣಿಸಿ ಸ್ವ ಅನುಭವದ ಮೇಲೆ ಅನೇಕ ಪ್ರಕಾರಗಳನ್ನು ಗುರ್ತಿಸಿ ಚರ್ಚಿಸಿದ್ದಾರೆ. ಅಂದರೆ ವಿಷಯನಿಷ್ಠ, ಉದ್ದೇಶನಿಷ್ಠ, ವಿಧಾನನಿಷ್ಠ, ಸ್ವರೂಪನಿಷ್ಠ, ಅನ್ವಯಿಕ, ಬಹುಶಿಸ್ತೀಯ, ಸಂಖ್ಯಾನಿಷ್ಠ, ಮಾದರಿನಿಷ್ಠ, ಘಟಕನಿಷ್ಠ ಇತ್ಯಾದಿ ಸಂಶೋಧನಾ ಪ್ರಕಾರಗಳನ್ನು ವಿಶ್ಲೇಷಣೆಯಲ್ಲಿ ಒಳಗು ಮಾಡಿದ್ದಾರೆ. ಹಾಗಾಗಿ ಈ ಭಾಗ ಸಂಶೋಧಕರಿಗೆ ಹಾಗೂ ಸಂಶೋಧನಾ ವಿದ್ಯಾರ್ಥಿಗಳಿಗೆ ಬಹು ಉಪಯೋಗವಾದದ್ದು ಎನಿಸುತ್ತದೆ. ಕಾರಣ

ವಿವರಿಸುವ ಪ್ರಯತ್ನ ಮಾಡಿದ್ದಾರೆ. ಆದರೆ ಇದು ಕೇವಲ ಅಧ್ಯಯನದ ಅನುಕೂಲತೆಗಾಗಿ ಮಾತ್ರ ಕಾರಣ. ಸಂಶೋಧನೆಯ ವಿಧಾನ, ಸ್ವರೂಪ ಕಾಲದಿಂದ ಕಾಲಕ್ಕೆ ಬದಲಾಗುತ್ತಾ ಬಂದಿದೆ. ಅವುಗಳನ್ನು ಗುರುತಿಸುವುದು ಕಷ್ಟದ ಕೆಲಸ. ಇದನ್ನೇ ಡಾ.ಎನ್.ಎಸ್.ತಾರಾನಾಥ ಅವರು (ಶತಮಾನದ ಸಂಶೋಧನೆ ಕನ್ನಡ ಸಾಹಿತ್ಯ ಅಕಾಡೆಮಿ) ೧. ಸಾಮಗ್ರಿ ಸಂಗ್ರಹಣಕಾಲ (ಕ್ರಿ.ಶ.೧೯ನೇ ಶತಮಾನ) ೨. ಆಕರ ನಿರ್ಮಾಣ ಕಾಲ (ಕ್ರಿ.ಶ.೧೯೦೦ ರಿಂದ ೧೯೨೬) ೩. ಸಾಮಗ್ರಿ ವಿಶ್ಲೇಷಣಾ ಕಾಲ (ಕ್ರಿ.ಶ.೧೯೨೭ ರಿಂದ ೧೯೫೯) ೪. ಸಂಸ್ಕೃತಿ ಶೋಧನ ಕಾಲ (ಕ್ರಿ.ಶ.೧೯೬೦ ರಿಂದ ಮುಂದೆ) ಎಂದು ನಾಲ್ಕು ಘಟ್ಟಗಳನ್ನು ಗುರ್ತಿಸುತ್ತಾರೆ. ಕನ್ನಡ ಸಾಹಿತ್ಯ ಚಟುವಟಿಕೆಗಳನ್ನು ಆಧರಿಸಿ ಈ ರೀತಿ ಅವರು ಹೇಳಿದ್ದಾರೆ. ಆದರೆ 'ಸಾಮಗ್ರಿ ಸಂಗ್ರಹ' ಎನ್ನುವುದು ಮುಂದಿನ ಕಾಲಘಟ್ಟಕ್ಕೂ ವಿಸ್ತರಿಸಿದೆ. ಹಾಗೆಯೇ 'ಸಾಮಗ್ರಿ ವಿಶ್ಲೇಷಣೆಯೂ' ಮುಂದುವರೆದಿದೆ. ಅಂದರೆ ಯಾವುದನ್ನೂ ನಿಖರವಾಗಿ ಗೆರೆ ಎಳೆದು ಗುರ್ತಿಸಲು ಸಾಧ್ಯವಿಲ್ಲ. ಅವು ಒಂದರೊಳಗೊಂದು ಚಾಚಿಕೊಂಡಿವೆ.

ಹಾಗೆಯೇ ಆಯಾ ಕಾಲಘಟ್ಟದಲ್ಲಿ ಕಾಣಿಸಿಕೊಂಡ ಪ್ರಮುಖ ಸಂಶೋಧಕರನ್ನು ಗಮನದಲ್ಲಿಟ್ಟುಕೊಂಡು ೧. ಪ್ರಥಮ ಹಂತ ೨. ಎರಡನೇ ಹಂತ ೩. ಮೂರನೇ ಹಂತ ೪. ನಾಲ್ಕನೇ ಹಂತ ಎಂದು ವಿಭಾಗಿಸುವ ಪ್ರಯತ್ನವೂ ನಡೆದಿದೆ. ಅಂದರೆ ಆಂಗ್ಲ ವಿದ್ವಾಂಸರ ಸೇವೆಯಿಂದ ಹಿಡಿದು ೨೦ನೇ ಶತಮಾನದ ಪ್ರಾರಂಭದ ದೇಶೀ ವಿದ್ವಾಂಸರವರೆಗೆ ವಿಸ್ತರಿಸುವ ಪ್ರಯತ್ನ ನಡೆದಿದೆ. ಮುಂದುವರೆದಂತೆ ಕನ್ನಡ ಸಾಹಿತ್ಯ ಚರಿತ್ರೆಯ ಎಲ್ಲ ಹಂತಗಳನ್ನೂ ಗಮನದಲ್ಲಿಟ್ಟುಕೊಂಡು ಸಾಹಿತ್ಯ ಸಂಶೋಧನೆಯ ಇತಿಹಾಸದ ಪ್ರಮುಖ ಹೆಜ್ಜೆ ಗುರುತುಗಳನ್ನು ವಿವರಿಸುವ ಪ್ರಯತ್ನ ಮಾಡಿದ್ದಾರೆ.

ಆರಂಭ ಕಾಲದ ಕನ್ನಡ ಸಂಶೋಧನೆ (ಕ್ರಿ.ಶ.೧೮೫೦ ರಿಂದ ೧೯೫೦) ಎನ್ನುವ ಅಧ್ಯಾಯದಲ್ಲಿ ಆ ಕಾಲದ ಸಂಶೋಧನೆಯ ಸ್ವರೂಪ ಮತ್ತು ವೈಶಿಷ್ಟ್ಯಗಳನ್ನು ವಿವರಿಸುತ್ತಾ ಆ ಕಾಲಘಟ್ಟದಲ್ಲಿ ಸಂಶೋಧನಾ ಕೃಷಿ ನಡೆಸಿದ ಪ್ರತಿಯೊಬ್ಬ ಸಂಶೋಧಕರ ಸಾಧನೆಯ ಸಮೀಕ್ಷೆ ನಡೆಸಿದ್ದಾರೆ. ಕನ್ನಡ ಸಾಹಿತ್ಯ ಸಂಶೋಧನೆಯ ಇತಿಹಾಸದ ಮೊದಲನೆ ಘಟ್ಟದ ಸಂಶೋಧಕರಾದ ಕೆ.ಬಿ.ಪಾಠಕರಿಂದ (೧೮೫೦) ಹಿಡಿದು ಎಂ.ಆರ್.ಶ್ರೀನಿವಾಸ ಮೂರ್ತಿ(೧೯೫೦)ರವರೆಗೆ ಸುಮಾರು ಹತ್ತೊಂಭತ್ತು ವಿದ್ವಾಂಸರ ಪ್ರತಿಭೆ, ವಿದ್ವತ್ತು, ವಿದ್ಯಾಭ್ಯಾಸ, ಕೃತಿಗಳು ಅವರು ನಡೆಸಿದ ಸಂಶೋಧನೆಗಳು ಮುಂತಾದವುಗಳ ಸಂಕ್ಷಿಪ್ತ ಪರಿಚಯ ಮಾಡಿಕೊಟ್ಟಿದ್ದಾರೆ. ಇದರಿಂದ ಯುವ ವಿದ್ವಾಂಸರಿಗೆ ಆ ಕ್ಷೇತ್ರದಲ್ಲಿ ನಡೆದಿರ ಬಹುದಾದ ಸಂಶೋಧನೆ ಹಾಗೂ ಸಂಶೋಧಕರ ಬಗ್ಗೆ ತಿಳಿಯಲು ಅನುಕೂಲವಾಗುತ್ತದೆ. ಆದರೂ ಇದೊಂದು ಪ್ರಾಥಮಿಕ ಮಾಹಿತಿಯಷ್ಟೇ. ಇದರ ಮುಂದುವರೆದ ಭಾಗವಾಗಿ ಅಧ್ಯಾಯ ನಾಲ್ಕು ಶಿ.ಶಿ.ಬಸವನಾಳರಿಂದ ಮಿರ್ಜಿ ಅಣ್ಣಾರಾಯರವರೆಗೆ ನಡೆದ ದ್ವಿತೀಯ ಘಟ್ಟದ ಕನ್ನಡ ಸಂಶೋಧನೆ ಬಗೆಗೆ ಮಾಹಿತಿ ನೀಡಲಾಗಿದೆ.

ಆಧುನಿಕ ಘಟ್ಟದ ಕನ್ನಡ ಸಂಶೋಧನೆ (೧೯೭೬–೨೦೦೦) ಎನ್ನುವ ಭಾಗದಲ್ಲಿ ಸಂಶೋಧನೆ ಪಡೆದುಕೊಂಡ ಬದಲಾವಣೆ, ಅದರ ವೈಧಾನಿಕತೆ, ಸ್ವರೂಪ, ವೈಶಿಷ್ಟ್ಯಗಳು ಮತ್ತು ಆ ಕಾಲದ ಕೊಡುಗೆಗಳ ಪರಿಚಯ ಮಾಡಲಾಗಿದೆ. ಅಂದರೆ ಲೇಖಕರು, ಸಂಶೋಧನೆ ಪಡೆದುಕೊಂಡ ಹೊಸ ಆಯಾಮ ಅಥವಾ ಶಿಸ್ತುಗಳನ್ನು ಗುರ್ತಿಸುವ ಪ್ರಯತ್ನ ಮಾಡಿದ್ದಾರೆ. ಉದಾ: ಸಾಂಸ್ಕೃತಿಕ ಸಂಶೋಧನೆ, ಶಾಸನಮುಖಿ ಸಂಶೋಧನೆ, ವಿಮರ್ಶಾಮುಖಿ ಸಂಶೋಧನೆಗಳನ್ನು ಕುರಿತು ಚರ್ಚಿಸುತ್ತಾರೆ. ಹಾಗೂ ಅವುಗಳ

ಸುಮಾರು ಏಳು ಅಧ್ಯಾಯಗಳಲ್ಲಿ ವಿಸ್ತರಿಸಿಕೊಂಡಿರುವ ಈ ಕೃತಿ ಲೇಖಕರೇ ಹೇಳಿರುವಂತೆ ಸುಮಾರು ಕ್ರಿ.ಶ.೧೯೪೦ರವರೆಗೆ ಜನಿಸಿದ ಸಂಶೋಧಕರ ಸಂಶೋಧನೆಗಳಿಗೆ ಈ ಗ್ರಂಥದ ವ್ಯಾಪ್ತಿಯನ್ನು ಸಿಮೀತಗೊಳಿಸಿಕೊಂಡಿದ್ದಾರೆ. ಈ ಗ್ರಂಥದ ಉದ್ದಕ್ಕೂ ಸಂಶೋಧಕರು ಹುಟ್ಟಿದ ವರ್ಷಗಳನ್ನು ಕಾಲಾನುಕ್ರಮದಲ್ಲಿ ಇಟ್ಟುಕೊಂಡು ಸಂಶೋಧನಾ ಇತಿಹಾಸವನ್ನು ನಿರೂಪಿಸಿದ್ದಾರೆ. ಆದರೆ ಕೆಲವು ಸಂಶೋಧಕರು ಬಹಳ ವರ್ಷಗಳ ಕಾಲ ಬದುಕಿದ್ದು ಹೆಚ್ಚು ಹೆಚ್ಚು ಬರೆದಿದ್ದಾರೆ. ಹಾಗಾಗಿ ಅಂಥವರ ಕಾಣಿಕೆ ಯಾವ ಕಾಲಾವಧಿಯಲ್ಲಿ ವಿಶಿಷ್ಟ ಎನಿಸುತ್ತದೆಯೋ ಆ ಕಾಲಘಟ್ಟದಲ್ಲಿ ಅಥವಾ ಆ ಕಾಲದ ಕೊನೆಯಲ್ಲಿ ಅವರ ವಿಷಯವನ್ನು ಪ್ರಸ್ತಾಪಿಸಿರುವುದು ಒಂದು ವಿಶೇಷ.

ಸಾಹಿತ್ಯ ಸಂಶೋಧನೆಯ ಅರ್ಥ, ಸ್ವರೂಪ, ವಿನ್ಯಾಸಗಳನ್ನು ಕುರಿತು ವಿವರಿಸುವ ಹಾಗೂ ಸಾಹಿತ್ಯ ಮತ್ತು ಸಂಶೋಧನೆಯ ಅಧ್ಯಯನದ ವ್ಯತ್ಯಾಸ ಹಾಗೂ ಅಂತರ ಸಂಬಂಧಗಳನ್ನು ಕಟ್ಟಿಕೊಡುವ ಪ್ರಯತ್ನವನ್ನು ಮೊದಲ ಅಧ್ಯಾಯದಲ್ಲಿ ಮಾಡಲಾಗಿದೆ. ಮುಂದುವರೆದು ಸಂಶೋಧಕನ ಹಾಗೂ ಸಂಶೋಧನೆಯ ಜವಾಬ್ದಾರಿಗಳನ್ನು ಕುರಿತು ಸೂಕ್ಷ್ಮವಾಗಿ ತಿಳಿಸುತ್ತಲೇ ಸಂಶೋಧನೆಯ ವಿವಿಧ ಪ್ರಕಾರಗಳನ್ನು ಗುರುತಿಸುವ ಪ್ರಯತ್ನ ಮಾಡಲಾಗಿದೆ. ಅಂದರೆ ೧. ವೈಜ್ಞಾನಿಕ ಸಂಶೋಧನೆ. ೨. ಶಾಸ್ತ್ರೀಯ ಸಂಶೋಧನೆ ೩. ವಿಶ್ಲೇಷಣಾತ್ಮಕ ಸಂಶೋಧನೆ ೪. ತೌಲನಿಕ ಸಂಶೋಧನೆ ೫. ಐತಿಹಾಸಿಕ ಸಂಶೋಧನೆ ಎಂದು ವಿಭಾಗಿಸುತ್ತಲೇ ಅವುಗಳಿಗಿರುವ ಅಧ್ಯಯನದ ಸಾಧ್ಯತೆಗಳು, ಅವು ಒಳಗೊಳ್ಳುವ ಶಿಸ್ತು, ವೈಧಾನಿಕತೆ ಅಂಥ ಅಧ್ಯಯನಗಳ ಅವಶ್ಯಕತೆಯನ್ನು ಕುರಿತು ವಿವರಿಸಲಾಗಿದೆ.

ಎರಡನೇ ಅಧ್ಯಾಯದಲ್ಲಿ ಕನ್ನಡ ಸಾಹಿತ್ಯ ಸಂಶೋಧನೆಯ ಬೆಳವಣಿಗೆ, ಅದರ ಸಾಧಕ ಬಾಧಕಗಳು, ವಿಶ್ವವಿದ್ಯಾಲಯಗಳಲ್ಲಿರುವ ಅವಕಾಶ, ಸಂಘ ಸಂಸ್ಥೆಗಳು, ಕನ್ನಡ ಸಾಹಿತ್ಯ ಪರಿಷತ್ತು, ಕರ್ನಾಟಕ ವಿದ್ಯಾವರ್ಧಕ ಸಂಘ, ಗೋವಿಂದ ಪೈ ಸ್ಮಾರಕ ಸಂಶೋಧನಾ ಕೇಂದ್ರ ಮುಂತಾದ ಸಂಸ್ಥೆಗಳ ಕಾರ್ಯವೈಖರಿಯನ್ನು ಪರಿಚಯಿಸಲಾಗಿದೆ. ಹಾಗೆಯೇ ಪದವಿಗಾಗಿ (ಎಂ.ಫಿಲ್ ಮತ್ತು ಪಿಎಚ್.ಡಿ) ನಡೆಯುವ ಸಂಶೋಧನೆ, ಹವ್ಯಾಸಕ್ಕಾಗಿ ನಡೆಯುವ ಸಂಶೋಧನೆ ಅವುಗಳ ಗುಣಮಟ್ಟ ಹಾಗೂ ಪ್ರಾಮಾಣಿಕತೆ ಮುಂತಾದವುಗಳ ಚರ್ಚೆ ಆರೋಗ್ಯಪೂರ್ಣವಾದದ್ದಾಗಿದೆ. ಮುಂದುವರೆದಂತೆ ಸಂಶೋಧನೆಯನ್ನು ಕೈಗೊಳ್ಳುವುದಕ್ಕೆ ಮುಂದಾಗುವ ಯುವಕರನ್ನು ಹಾಗೂ ಹೊಸದಾಗಿ ಈ ಕ್ಷೇತ್ರದಲ್ಲಿ ಆಸಕ್ತಿ ತೋರಿಸುವವರಿಗಾಗಿ ಸುಮಾರು ಇಪ್ಪತ್ತೈದು 'ಸಾಹಿತ್ಯ ಸಂಶೋಧನೆಯ ಕ್ಷೇತ್ರಗಳನ್ನು" ಉದಾಹರಣೆ ಸಹಿತವಾಗಿ ಕಟ್ಟಿಕೊಟ್ಟಿರುವುದು ಗಮನಿಸುವಂಥದ್ದು. ಇದರಿಂದ ಹೊಸದಾಗಿ ಈ ಕ್ಷೇತ್ರಕ್ಕೆ ಪಾದಾರ್ಪಣೆ ಮಾಡುವವರಿಗೆ ಬಹಳ ಅನುಕೂಲವಾಗುತ್ತದೆ. ಒಂದು ವಸ್ತುವನ್ನು ಅಥವಾ ಸಮಸ್ಯೆಯನ್ನು ಸಂಶೋಧಕನೆ ಹೇಗೆ ಆಯ್ಕೆ ಮಾಡಿಕೊಳ್ಳಬೇಕು. ಹಾಗೂ ಅದರ ಮಾದರಿಗಳು ಹೇಗಿರುತ್ತವೆ ಎಂಬುದು ತಿಳಿಯುತ್ತದೆ.

ಆನಂತರ ಕನ್ನಡ ಸಾಹಿತ್ಯ ಸಂಶೋಧನೆಯ ಇತಿಹಾಸವನ್ನು ವಿವಿಧ ಕಾಲಘಟ್ಟಗಳಲ್ಲಿ ಮೂಡಿಬಂದ ಸಂಶೋಧನೆಯ ವೈಶಿಷ್ಟ್ಯ, ವೈವಿಧ್ಯಗಳನ್ನು ನಿರೂಪಿಸಲಾಗಿದೆ. ಇಲ್ಲಿ ಲೇಖಕರು ಕಾಲಮಾನದ ದೃಷ್ಟಿಯಿಂದ ಸಂಶೋಧನಾ ಬರವಣಿಗೆಯ ಇತಿಹಾಸವನ್ನು ಪ್ರಮುಖವಾಗಿ ೧. ಆರಂಭ ಕಾಲದ (ಕ್ರಿ.ಶ.೧೮೫೦–೧೯೫೦) ೨. ಮಧ್ಯಕಾಲ (ಕ್ರಿ.ಶ.೧೯೫೧–೧೯೭೫) ೩. ಆಧುನಿಕಕಾಲ (೧೯೭೬–೨೦೦೦) ಎಂದು ಮೂರು ಘಟ್ಟಗಳಲ್ಲಿ ವಿಂಗಡಿಸಿಕೊಂಡು

ಶಾಸನ ಕ್ಷೇತ್ರಕಾರ್ಯದ ಬಗೆಗೆ ಇದುವರೆಗೂ ಎಲ್ಲೂ ಹೆಚ್ಚು ಪ್ರಸ್ತಾಪವಾಗಿಲ್ಲ. ಆಲೂರು ವೆಂಕಟರಾಯರ 'ಕರ್ನಾಟಕ ಗತವೈಭವ', ಡಾ.ಎಂ.ಎಂ.ಕಲಬುರ್ಗಿಯವರ 'ಶಾಸನ ಸಂಪಾದನೆ' ಡಾ.ಆರ್.ಶೇಷಶಾಸ್ತ್ರೀಯವರ 'ಶಾಸನ ಪರಿಚಯ' ಹೀಗೆ ಕೆಲವು ಕೃತಿಗಳ ಪ್ರಸ್ತಾವನೆಯಲ್ಲಿ, ಮುನ್ನುಡಿಯಲ್ಲಿ ಪ್ರಾಸಂಗಿಕವಾಗಿ ಕೆಲವು ಮಾಹಿತಿಗಳನ್ನು ನೀಡಿದ್ದಾರೆ ಅಷ್ಟೇ. ಆದರೆ 'ಶಾಸನ ಕ್ಷೇತ್ರಕಾರ್ಯದಲ್ಲಿ' ಆರಂಭದ ಹಂತದಿಂದ ಹಿಡಿದು ಕೊನೆಯ ಹಂತದವರೆಗೂ ತೆಗೆದುಕೊಳ್ಳಬಹುದಾದ ಕ್ರಮಗಳ ಬಗ್ಗೆ ಎಲ್ಲೂ ವಿವರವಾದ ಮಾಹಿತಿ ದೊರೆಯುವುದಿಲ್ಲ. ಈ ಕೃತಿಯಲ್ಲಿ ಶಾಸನ ಕ್ಷೇತ್ರಕಾರ್ಯದಲ್ಲಿ ಅನುಸರಿಸಬೇಕಾದ ಕೆಲವು ಸಾಮಾನ್ಯ ವಿಧಾನಗಳನ್ನು ಕುರಿತು ಹೇಳಲಾಗಿದೆ. ಶಾಸನಗಳ ಪಡಿಯಚ್ಚು ತೆಗೆಯುವುದು, ಪಾಠನಿರ್ಧಾರ, ಶಾಸನಗಳನ್ನು ಪ್ರಕಟಿತ, ಅಪ್ರಕಟಿತ ಎಂದು ಗುರ್ತಿಸುವಿಕೆ, ಶಾಸನ ಲಿಪಿಯ ಪ್ರತಿ ತೆಗೆಯುವುದು ಮುಂತಾದವು ಇಲ್ಲಿ ಮುಖ್ಯ. ಶಾಸನ ಕ್ಷೇತ್ರಕಾರ್ಯದ ಮೂಲ ಉದ್ದೇಶವೇನು? ವ್ಯವಸ್ಥಿತವಾದ ಪೂರ್ವಸಿದ್ಧತೆಯೊಡನೆ ಕ್ರಮಬದ್ಧವಾದ ಮಾಹಿತಿಗಳನ್ನು ಸಂಗ್ರಹಿಸುವುದು ಹೇಗೆ ಎಂಬುದರ ಚರ್ಚೆಯನ್ನು ವೈಜ್ಞಾನಿಕ ಕ್ಷೇತ್ರಕಾರ್ಯದ ಹಿನ್ನೆಲೆಯಲ್ಲಿ ವಿವರಿಸಿದ್ದಾರೆ.

ಪ್ರಾಸಂಗಿಕ ಕ್ಷೇತ್ರಕಾರ್ಯ ಮತ್ತು ಸಮಗ್ರ ಕ್ಷೇತ್ರಕಾರ್ಯ ಎಂದು ವಿಭಾಗಿಸಿರುವ ಶ್ರೀಯುತರು ಅದರಿಂದ ಸಂಶೋಧನೆಗೆ ಆಗುವ ಲಾಭವನ್ನು ವಿವರಿಸಿದ್ದಾರೆ. ಬಹಳ ಮುಖ್ಯವಾಗಿ ಈ ಕೃತಿಯಲ್ಲಿ ಗಮನಿಸಬೇಕಾದದ್ದು 'ಪೂರ್ವ ತಯಾರಿ' ಮಾಡಿಕೊಳ್ಳ-ಬೇಕಾದಾಗ ವಹಿಸುವ ಎಚ್ಚರಿಕೆಗಳು, ಬೇಕಾಗುವ ಪರಿಕರಗಳು ಹಾಗೂ ಕ್ಷೇತ್ರಕ್ಕೆ ಭೇಟಿ ನೀಡಿದಾಗ ಮಾಹಿತಿಗಾಗಿ ಸ್ಥಳೀಯರನ್ನು 'ಪ್ರಶ್ನಿಸುವ ವಿಧಾನ', ಕಣ್ಣಿಗೆ ಕಾಣುವ, ಕೇಳುವ ವಿಷಯಗಳನ್ನು 'ಟಿಪ್ಪಣಿ ಮಾಡಿಕೊಳ್ಳುವ ವಿಧಾನ', 'ಧ್ವನಿಮುದ್ರಣ ಯಂತ್ರ ಬಳಕೆ', ಕ್ಯಾಮರಾಬಳಕೆ, 'ಶಾಸನಗಳನ್ನು ಪಡಿಯಚ್ಚು ತೆಗೆಯುವುದು' ಆನಂತರ ಅದನ್ನು ಓದಲು, ಅರ್ಥೈಸಲು 'ಬುದ್ಧಿಶಕ್ತಿಯ ಬಳಕೆ' ಜೊತೆಜೊತೆಗೆ ನಮಗೆ ಬೇಕಾದ 'ಭಿನ್ನ ಮಾಹಿತಿಗಳ ನೆರವು'ಗಳನ್ನು ಹೇಗೆ ಪಡೆದುಕೊಳ್ಳಬೇಕು ಎನ್ನುವ ಮಾಹಿತಿಯನ್ನು ಅನೇಕ ಉದಾಹರಣೆಗಳ ಜೊತೆಗೆ ತಮ್ಮ ಸ್ವ ಅನುಭವಗಳ ಹಿನ್ನೆಲೆಯಲ್ಲಿ ಚರ್ಚಿಸಿದ್ದಾರೆ. ಹಾಗಾಗಿ ಶಾಸನ ಕ್ಷೇತ್ರದಲ್ಲಿ ಸಂಶೋಧನೆ ಕೈಗೊಳ್ಳುವವರಿಗೆ ಈ ಕೃತಿಯಿಂದ ಕೆಲವು ಮಾಹಿತಿಗಳು ಲಭ್ಯವಾಗುತ್ತವೆ.

ಕನ್ನಡ ಸಂಶೋಧನೆ : ತಾತ್ವಿಕ ವಿಚಾರ (೨೦೦೭) ಎನ್ನುವ ಡಾ.ರಹಮತ್ ತರೀಕೆರೆ ಅವರ ಕೃತಿಯನ್ನು ಕನ್ನಡ ವಿಶ್ವವಿದ್ಯಾಲಯ ಹಂಪಿಯ ಪ್ರಸಾರಾಂಗ ಪ್ರಕಟಿಸಿದೆ. ಇದರಲ್ಲಿ ಕನ್ನಡ ಸಾಹಿತ್ಯ, ಸಂಸ್ಕೃತಿ, ಅಧ್ಯಯನದ ವಿಧಾನ, ಸತ್ಯದ ಶೋಧವನ್ನು ಕುರಿತ ಮುಕ್ತ ಹಾಗೂ ಬಹು ಸಾಧ್ಯತೆಗಳ ಬಗ್ಗೆ ಬೆಳಕು ಚೆಲ್ಲಲಾಗಿದೆ. ಡಾ.ರಹಮತ್ ತರೀಕೆರೆ ಅವರು ಇಲ್ಲಿ ಇದುವರೆಗಿನ ಅಧ್ಯಯನದ ಮಾದರಿಗಳಿಗಿಂತ ಭಿನ್ನವಾಗಿ ಅಥವಾ ಸಂಪ್ರದಾಯವಾದಿ ದೃಷ್ಟಿಕೋನಕ್ಕೆ ಭಿನ್ನವಾಗಿ ತಮ್ಮ ಆಲೋಚನೆಗಳನ್ನು ಮಂಡಿಸಿದ್ದಾರೆ. ಸಾಹಿತ್ಯ, ಸಂಸ್ಕೃತಿ ಹಾಗೂ ಕರ್ನಾಟಕತ್ವದ ಅಧ್ಯಯನ ಎನ್ನುವುದು ನಿರಂತರ ಸತ್ಯದ ಹುಡುಕಾಟದ ಚಲನಶೀಲ ಪ್ರಕ್ರಿಯೆ ಎನ್ನುವ ಅನುಭಾವಿ ದೃಷ್ಟಿಕೋನ ಕಂಡುಬರುತ್ತದೆ. ಹಾಗಾಗಿ ಸಂಶೋಧನೆಯ ಬಗ್ಗೆ ಒಂದು ರೀತಿಯ ಹೊಸ ಆಲೋಚನೆಗಳನ್ನು ಈ ಕೃತಿ ಬಿತ್ತುತ್ತದೆ. ಇಲ್ಲಿ ಮಾಹಿತಿ ಸಂಗ್ರಹ, ಅಧ್ಯಯನ ವಿಶ್ಲೇಷಣೆ, ಫಲಿತ ಎನ್ನುವ ಸಂಶೋಧನಾ ನೆಲೆಗಳನ್ನು ಲೇಖಕರು ಮರುವಿಮರ್ಶೆಗೆ ಒಳಪಡಿಸಿದ್ದಾರೆ.

ಸಂಶೋಧನೆಯ ವಿಧಾನಗಳು, ಅದರ ವ್ಯಾಪ್ತಿ ಹಾಗೂ ಮಿತಿಯನ್ನು ಆ ಕಾಲದಲ್ಲಿ ನಡೆದ ಕೆಲವು ಮುಖ್ಯ ಸಂಶೋಧನಾ ಕೃತಿಗಳನ್ನು ಆಧಾರವಾಗಿಟ್ಟುಕೊಂಡು ವಿವರಿಸಿದ್ದಾರೆ. ಹಾಗೆಯೇ ಆ ಕಾಲದ ಹಲವು ಮುಖ್ಯ ಸಂಶೋಧಕರ (ಸಂ.ಶಿ.ಭೂಸನೂರುಮಠ ಅವರಿಂದ ಎಸ್.ಶಿವಣ್ಣ) ಸಾಧನೆ ಸಿದ್ಧಿಗಳನ್ನು ಕುರಿತ ಚರ್ಚೆಯೂ ಈ ಭಾಗದಲ್ಲಿ ಗಮನಿಸುವಂಥದ್ದು.

ಕೊನೆಯದಾಗಿ 'ಇತರ ಕ್ಷೇತ್ರಗಳ ವಿದ್ವಾಂಸರ ಕನ್ನಡ ಸಂಶೋಧನೆ'ಯ ಮಾಹಿತಿಯನ್ನು ಸವಿವರವಾಗಿ ನೀಡಲಾಗಿದೆ. ಅಂದರೆ ವಿದೇಶಿ ವಿದ್ವಾಂಸರು, ಇತಿಹಾಸ ಮತ್ತು ಶಾಸನವನ್ನು ಅನುಲಕ್ಷಿಸಿ ನಡೆಸಿದ ಸಂಶೋಧನೆ ಮತ್ತು ಸಂಶೋಧಕರ ಮಾಹಿತಿ ಸಂಗ್ರಹಿಸಲಾಗಿದೆ. ಮುಂದುವರೆದಂತೆ ಸಾಹಿತ್ಯ ಸಂಶೋಧನೆಯ ನಿಯತಕಾಲಿಕೆಗಳು, ಹಾಗೆಯೇ ಸಂಶೋಧನ ಕ್ಷೇತ್ರದಲ್ಲಿ ನಡೆದ ಕೆಲವು ಪ್ರಥಮಗಳು, ಮತ್ತು ವಿಶೇಷ ಶೋಧಗಳ ಪಟ್ಟಿಯನ್ನು ಹಾಗೂ ಪದವಿಗಾಗಿ ಸಿದ್ಧಪಡಿಸಿದ ಕೆಲವು ಮಹತ್ವದ ಪ್ರಕಟಿತ ಸಂಶೋಧನಾ ಪ್ರಬಂಧಗಳ ಮಾಹಿತಿಯನ್ನು ನೀಡಿದ್ದಾರೆ.

ಈ ಎಲ್ಲಾ ಮಾಹಿತಿಯನ್ನು ಒಳಗೊಂಡ ಈ ಕೃತಿ ಅನೇಕ ಸಲ ಮೇಲ್ನೋಟಕ್ಕೆ ಮಾಹಿತಿ ಸಂಗ್ರಹ ಕೃತಿಯಂತೆ ಕಂಡುಬರುತ್ತದೆ. ಆದರೂ ಸೂಕ್ಷ್ಮವಾಗಿ, ಗಂಭೀರವಾಗಿ ಅವಲೋಕಿಸಿದಾಗ ಸಂಶೋಧನಾ ಕ್ಷೇತ್ರದಲ್ಲಿ ನಡೆದ ಸಂಗತಿಗಳು, ಅದರ ವೈಧಾನಿಕತೆ, ವೈಶಿಷ್ಟ್ಯಗಳನ್ನು ಕುರಿತಂತೆ ಸಮಗ್ರವಾಗಿ ಮಾಹಿತಿಯೇ ಲಭ್ಯವಿಲ್ಲದಿದ್ದ ಕಾಲದಲ್ಲಿ ಇಂಥದ್ದೊಂದು ಕೃತಿ ಮೈದಾಳಿದ್ದೇ ವಿಶೇಷ. ಹೀಗೆ ಒಟ್ಟಾರೆ ಕನ್ನಡ ಸಾಹಿತ್ಯ ಸಂಶೋಧನೆ ನಡೆದು ಬಂದ ದಾರಿಯ ಒಂದು ಕಿರುನೋಟ ಹಾಗೂ ಅದರ ಸಂಕ್ಷಿಪ್ತ ಸ್ವರೂಪ, ವೈಶಿಷ್ಟ್ಯಗಳನ್ನು ತಿಳಿದುಕೊಳ್ಳಲು ಈ ಗ್ರಂಥ ಉಪಯುಕ್ತ.

ಬಹಳಷ್ಟು ಕಾಲ ಸಂಶೋಧನಾ ಕ್ಷೇತ್ರವನ್ನು ಕುರಿತು ಚಿಂತಿಸುತ್ತಾ ಬಂದಿರುವ ಡಾ.ಸಂಗಮೇಶ ಸವದತ್ತಿಮಠ ಅವರು ಪರಿಚಯಾತ್ಮಕ ಮತ್ತು ವಿಶ್ಲೇಷಣಾತ್ಮಕ ಸಂಶೋಧನೆಯನ್ನು ಕುರಿತು ಬರೆದಿದ್ದಾರೆ. 'ಸಂಶೋಧನಾ ವ್ಯಾಸಂಗ' ಎನ್ನುವ ನಿಯತ ಕಾಲಿಕೆಯನ್ನು ನಡೆಸಿಕೊಂಡು ಬರುತ್ತಿರುವ ಇವರು ಸಂಶೋಧನೆ ಕಾರ್ಯದ ಆಳ-ಅಗಲಗಳನ್ನು ಬಲ್ಲವರು. ಹಾಗಾಗಿ ಈ ಕೃತಿ ಸಂಶೋಧನಾ ವಿದ್ಯಾರ್ಥಿಗಳಿಗೆ ಮತ್ತು ಆ ಕ್ಷೇತ್ರದ ಪ್ರಾರಂಭಿಕ ವ್ಯಾಸಂಗಿಗಳಿಗೆ ತುಂಬಾ ಉಪಯುಕ್ತವಾದ ಕೃತಿ ಎನ್ನಬಹುದು.

ಶಾಸನ ಸಂಶೋಧನೆ (೧೯೯೪) ಕನ್ನಡ ಶಾಸನ ಸಂಶೋಧನೆಯಲ್ಲಿ ಸಾಕಷ್ಟು ಕೆಲಸ ಮಾಡಿರುವ ಡಾ.ಡಿ.ವಿ.ಪರಮಶಿವಮೂರ್ತಿಯವರು ಕ್ಷೇತ್ರಕಾರ್ಯವನ್ನು ಕೇಂದ್ರವಾಗಿಟ್ಟು ಕೊಂಡು ಈ ಕೃತಿ ರಚಿಸಿದ್ದಾರೆ. ಸಂಶೋಧನೆಯಲ್ಲಿ ಕ್ಷೇತ್ರಕಾರ್ಯ ಬಹಳ ಮುಖ್ಯವಾದುದು. ಒಂದು ನಾಡಿನ ಸಂಸ್ಕೃತಿ, ಇತಿಹಾಸ, ಕಲೆ, ಜನಜೀವನಗಳ ಬಗ್ಗೆ ಸಂಶೋಧನೆ ಮಾಡುವವರಿಗೆ ಕ್ಷೇತ್ರಕಾರ್ಯ ಅನಿವಾರ್ಯ. ಮೂಲ ಆಕರಗಳಿಂದ ಸಾಮಗ್ರಿಯನ್ನು ಸಂಗ್ರಹಿಸಲು ಇದು ಸುಲಭ ಮಾರ್ಗ. ಈ ಕ್ಷೇತ್ರಕಾರ್ಯವನ್ನು ಯಾವ ರೀತಿ ಕೈಗೊಳ್ಳ ಬೇಕು ಎಂಬುದು ಸಂಶೋಧನೆಗೆ ಆಯ್ದು ಕೊಂಡ ವಿಷಯದ ಮೇಲೆ ಅವಲಂಬಿಸಿರುತ್ತದೆ. ಪ್ರಸ್ತುತ ಈ ಕೃತಿಯಲ್ಲಿ ಡಾ.ಡಿ.ವಿ.ಪರಮಶಿವಮೂರ್ತಿಯವರು ಶಾಸನ ಕ್ಷೇತ್ರಕಾರ್ಯದಲ್ಲಿ ಅನುಸರಿಸಬೇಕಾದ ಕೆಲವು ಸಾಮಾನ್ಯ ವಿಧಾನಗಳನ್ನು ಕುರಿತು ವಿವರಿಸಿದ್ದಾರೆ. ಹಾಗಾಗಿ ಶಾಸನ ಸಂಶೋಧನೆಯಲ್ಲಿ ತೊಡಗಿಕೊಳ್ಳುವವರಿಗೆ ಈ ಕೃತಿ ಬಹಳಷ್ಟು ಮಾಹಿತಿ ನೀಡುತ್ತದೆ.

ವನ್ನು ಕುರಿತು ಚರ್ಚಿಸಿದ್ದಾರೆ. ಸಂಶೋಧಕನೂ ಸಹಜಮಾನವನಾಗಿರುವುದರಿಂದ ಜಾತಿ, ಧರ್ಮ, ಜನಾಂಗ, ಸಮುದಾಯ, ಪ್ರಾದೇಶಿಕತೆ ಮುಂತಾದವುಗಳನ್ನು ಕುರಿತು ಅಧ್ಯಯನ ನಡೆಸುವಾಗ ಅವುಗಳ ಕಡೆ ಒಲವು ತೋರುವ ಸಂದರ್ಭಗಳಿವೆ. ನಿಜವಾದ ಸಂಶೋಧಕ ಇವುಗಳಿಂದ ಬಿಡಿಸಿಕೊಳ್ಳಬೇಕು. ತನ್ನ ಸಂಶೋಧನೆಯ ಸಂದರ್ಭದಲ್ಲಿ ನೀಡುವ ಮಾಹಿತಿ ಅಥವಾ ತಾನು ಬಿಡಿಸುವ ಸಮಸ್ಯೆ ಯಾವುದೇ ರೀತಿಯ ರಾಜಕೀಯ ಪ್ರೇರಿತವಾಗಬಾರದು ಎನ್ನುವುದು ಇಲ್ಲಿನ ಅಭಿಪ್ರಾಯ. ಹಾಗೆಯೇ ಪ್ರತಿಯೊಂದು ಅಧ್ಯಯನದ ಸಂದರ್ಭದಲ್ಲಿಯೂ ಅದಕ್ಕೊಂದು ವಿಧಾನವನ್ನು ಮೊದಲು ಕಂಡುಕೊಳ್ಳಬೇಕು. ಸಾಂಪ್ರದಾಯಿಕ ನೆಲೆಯಿಂದ ಹೊರಬಂದ ತನ್ನ ಸಮಕಾಲೀನ ಬದುಕಿನಿಂದ ಅದನ್ನು ಕಂಡುಕೊಳ್ಳುವ ಭವಿಷ್ಯತ್ತಿಗಾಗಿ ನಿರ್ಮಿಸುವ ಎಚ್ಚರಿಕೆ ಬಹಳ ಮುಖ್ಯವಾದದ್ದು ಎನ್ನುವುದನ್ನು ವಿವರಿಸುತ್ತಾರೆ.

ಇದುವರೆಗೆ ಅನೇಕ ಕ್ಷೇತ್ರಗಳಲ್ಲಿ ಅನೇಕ ಸಮಸ್ಯೆಯನ್ನು ಕುರಿತು ಅಧ್ಯಯನಗಳು ನಡೆಯುತ್ತಾ ಬಂದಿವೆ, ನಡೆಯುತ್ತಿವೆ. ಆದರೂ ಅಧ್ಯಯನದ ತೊಡಕುಗಳೂ ಅಷ್ಟೇ ಪ್ರಮಾಣದಲ್ಲಿರುವುದನ್ನು ಲೇಖಕರು ಗುರ್ತಿಸುವ ಪ್ರಯತ್ನ ಮಾಡಿದ್ದಾರೆ. ಉದಾಹರಣೆ : 'ಅನುಭಾವಿಗಳ ಅಧ್ಯಯನದಲ್ಲಿರುವ ತೊಡಕುಗಳು' ವೈದಿಕ ವಿರೋಧದ ಸಮಸ್ಯೆ, 'ಪ್ರಾಚೀನ' ಕೃತಿಗಳ ಸಾಂಸ್ಕೃತಿಕ ಮುಖಾಮುಖಿಯ ಸಂದರ್ಭದಲ್ಲಿನ ಸಮಸ್ಯೆಗಳು, ಸಮುದಾಯ ಮತ್ತು ಧರ್ಮಗಳನ್ನು ಕುರಿತು ಅಧ್ಯಯನ ನಡೆಸುವ ಸಂದರ್ಭದಲ್ಲಿ ಎದುರಾಗುವ ಅನೇಕ ತೊಡಕುಗಳನ್ನು ಕುರಿತು ಬಹಳ ಸೂಕ್ಷ್ಮವಾಗಿ ಮತ್ತು ಆಳವಾಗಿ ಚರ್ಚಿಸಿರುವುದು ಕಂಡುಬರುತ್ತದೆ.

ಇದು ಲೇಖಕರ ಚಿಂತನಾ ಕ್ರಮವನ್ನು ಪಾಂಡಿತ್ಯವನ್ನು ತಿಳಿಸುತ್ತದೆ. ಹಾಗೆಯೇ ಸಂಶೋಧಕರು ಇಂಥ ತೊಡಕುಗಳನ್ನು ಬಿಡಿಸಿಕೊಳ್ಳುವಾಗ ವಹಿಸಬೇಕಾದ ಎಚ್ಚರಿಕೆ, ಕಾಳಜಿ ನಿಲುವುಗಳನ್ನು ಕುರಿತು ಇಲ್ಲಿ ವಿವರಿಸಲಾಗಿದೆ. ಇದು ಅನೇಕ ಸಂಶೋಧಕರಿಗೆ ಒಂದು ಉತ್ತಮ ಮಾರ್ಗದರ್ಶನ ಎಂದರೆ ತಪ್ಪಲ್ಲ. ಈ ಲೇಖನಗಳು ಬಹಳ ಉಪಯುಕ್ತ ಮಾಹಿತಿ ನೀಡುತ್ತವೆ.

ಹಾಗೆಯೇ ಸಂಶೋಧನೆ ಮತ್ತು 'ಪರಧನ' ಸಹಾಯ, ಶಾಸ್ತ್ರದ ಋಣಭಾರ : ಇಳಿಸುವ ಬಗೆ, ಆದರ್ಶ ಅಧ್ಯಯನ ವಿಧಾನಗಳು ಇವೆಯೇ? ಸಾಹಿತ್ಯದ ಕಣ್ಣಲ್ಲಿ ಸಮಾಜಶಾಸ್ತ್ರ ಎನ್ನುವ ಲೇಖನಗಳು ಸಹ ಕರ್ನಾಟಕ ಸಂಶೋಧನೆಯಲ್ಲಿ ತೊಡಗಿದವರು ಗಮನಿಸಲೇ ಬೇಕಾದಂಥವು. ಒಟ್ಟಾರೆ ಇಲ್ಲಿನ ಲೇಖನಗಳು ಮಾಹಿತಿ ಪ್ರಧಾನ, ಆಕರನಿಷ್ಠ ಹಾಗೂ ಏಕತೀರ್ಮಾನದ ಸಂಶೋಧನೆಯ ಮಾದರಿಗಿಂತ ಭಿನ್ನವಾದವುಗಳಾಗಿವೆ. ಅಧ್ಯಯನ, ವಿಧಾನಗಳ ಹುಡುಕಾಟ ನಿರಂತರವೂ, ಜೀವಂತವೂ, ಸಮಕಾಲೀನವೂ ಆಗಿರಬೇಕೆಂಬ ಆಶಯವನ್ನು ಲೇಖಕರು ವ್ಯಕ್ತಪಡಿಸುತ್ತಾರೆ. ಇಲ್ಲಿನ ಲೇಖನಗಳಲ್ಲಿ ಸಂಶೋಧಕರಿಗೆ ಹೀಗೆ ಮಾಡಿ ಹಾಗೆ ಮಾಡಿ ಎಂಬ ಮಾರ್ಗದರ್ಶಕ ಮಾತುಗಳಿಲ್ಲ. ಅದರ ಬದಲಾಗಿ ಒಪ್ಪಿಗೆ, ಭಿನ್ನಾಭಿಪ್ರಾಯ ಹಾಗೂ ನಿರಾಕರಣೆಗೆ ಕಾರಣವಾಗಬಹುದಾದ ಸಂಗತಿಗಳ ಚರ್ಚೆ ಇರುವುದು ಮೆಚ್ಚುವಂತದ್ದು. ಹಾಗೆಯೇ ಇಲ್ಲಿನ ಚರ್ಚೆಗಳು ಕೆಲವು ದಿನಗಳ ಬಳಿಕ ಅನುಪಯುಕ್ತವಾಗಬಹುದು ಎಂಬ ಎಚ್ಚರಿಕೆಯೂ, ಜೀವಂತ ಸಮಾಜದಲ್ಲಿ ಅಧ್ಯಯನ ವಿಧಾನಗಳಿಗೆ ಸತ್ತು ಹುಟ್ಟುವ ಗಳಿಗೆಗಳು ನಿರಂತರವಾಗಿ ಇರುತ್ತವೆ, ಇರಬೇಕು ಎಂಬ ತಿಳುವಳಿಕೆಯೂ ಇರುವುದು ಕಂಡುಬರುತ್ತದೆ.

ಲೇಖಕರೆ ತಮ್ಮ 'ಅರಿಕೆ'ಯಲ್ಲಿ ಹೇಳಿಕೊಳ್ಳುವಂತೆ "ಕನ್ನಡ ವಿಶ್ವವಿದ್ಯಾಲಯದ ವಿದ್ವತ್ ಪತ್ರಿಕೆಗಳಲ್ಲಿ ಒಂದಾದ ಕನ್ನಡ ಅಧ್ಯಯನ"ವನ್ನು ಸಂಪಾದನೆ ಮಾಡುವಾಗ (೧೯೯೮–೨೦೦೩) ಪ್ರತಿ ಸಂಚಿಕೆಗೂ ಬರೆದ ಸಂಪಾದಕೀಯ ಟಿಪ್ಪಣಿಗಳೂ ಹಾಗೂ ವಿಶ್ವವಿದ್ಯಾಲಯದ ಇತರೆ ಪತ್ರಿಕೆಗಳಿಗೂ, ವಿಚಾರ ಸಂಕಿರಣಗಳಿಗೂ, ಸಂಶೋಧನಾ ಕಮ್ಮಟಗಳಿಗೂ ಸಿದ್ಧಪಡಿಸಿದ ಟಿಪ್ಪಣಿಗಳ ವಿಸ್ತೃತ ರೂಪವೇ ಈ ಕೃತಿ. ಇಲ್ಲಿನ ಲೇಖನಗಳು ಕನ್ನಡ ಸಾಹಿತ್ಯ, ಸಂಸ್ಕೃತಿಯ ಅಧ್ಯಯನಗಳಲ್ಲಿ ಮತ್ತೆ ಮತ್ತೆ ಎದುರಾಗುತ್ತಿರುವ ಅಧ್ಯಯನ ವಿಧಾನದ ಕೆಲವು ಕೆಲವು ತಾತ್ವಿಕ ಸಮಸ್ಯೆಗಳನ್ನು ಕುರಿತು ತಮ್ಮದೇ ಆದ ರೀತಿಯಲ್ಲಿ ಬಿಡಿಸಲು ಪ್ರಯತ್ನಿಸಿದ್ದಾರೆ. ಈ ಕೃತಿಯಲ್ಲಿ ಅಡಕವಾಗಿರುವ ಇಪ್ಪತ್ತು ಲೇಖನಗಳಲ್ಲಿ ಸಂಶೋಧನೆಯ ತಾತ್ವಿಕ ಸಮಸ್ಯೆಗಳನ್ನು ವಿಸ್ತಾರವಾಗಿ ಚರ್ಚಿಸುವ, ಪರಿಹಾರ ಕಂಡುಹಿಡಿಯುವುದರ ಜೊತೆಗೆ ಪ್ರಶ್ನೆ ಎತ್ತುವ, ಅಧ್ಯಯನದ ಸಮಸ್ಯೆಗಳನ್ನು ಗುರ್ತಿಸುವ, ಅರಿಯುವ ಹಾಗೂ ಬಿಡಿಸುವ ಅಥವಾ ಪರ್ಯಾಯ ಹುಡುಕುವ ಪ್ರಯತ್ನ ಮಾಡಲಾಗಿದೆ. ಈ ದೃಷ್ಟಿಯಿಂದ ಕನ್ನಡ ಅಧ್ಯಯನವನ್ನು ಹೆಚ್ಚು ಸೂಕ್ಷ್ಮವಾಗಿ, ಸೃಜನಶೀಲವಾಗಿ ಅನುಭವಜನ್ಯ, ಅನುಭಾವ ಪ್ರೇರಿತ ಹಾಗೂ ಸತ್ಯದ ಹೊಳಹುಗಳು ಇಲ್ಲಿ ಕಾಣಿಸುತ್ತವೆ.

ಬಹಳ ಮುಖ್ಯವಾಗಿ 'ಸಂಸ್ಕೃತಿ' ಹಾಗೆಂದರೇನು? ಎನ್ನುವ ಚರ್ಚೆಯನ್ನು ಬಹು ಆಯಾಮಗಳಲ್ಲಿ ಚರ್ಚಿಸುತ್ತಲೇ ಜಾಗತೀಕರಣದ ಅಬ್ಬರದ ದಿನಮಾನಗಳಲ್ಲಿ ಸಂಸ್ಕೃತಿ ಎನ್ನುವ ನುಡಿಗಟ್ಟಿನಲ್ಲಾಗುತ್ತಿರುವ ಬದಲಾವಣೆಗಳು ಅಧ್ಯಯನದ ಮಾದರಿಯಲ್ಲಿ ತಂದೊಡ್ಡುವ ಸಮಸ್ಯೆಯನ್ನು ತಾತ್ವಿಕವಾಗಿ ವಿಶ್ಲೇಷಣೆಗೆ ಒಡ್ಡಲಾಗಿದೆ. ಕರ್ನಾಟಕ ಎನ್ನುವುದು ಒಂದು ಸಂಸ್ಕೃತಿಯೋ ಅಥವಾ ಅನೇಕ ಸಂಸ್ಕೃತಿಗಳ ಸಮಷ್ಟಿ ಪ್ರಜ್ಞೆಯೋ ಎನ್ನುವ ಚರ್ಚೆಯೂ ಅಷ್ಟೇ ಪಾಂಡಿತ್ಯ ಪೂರ್ಣವಾದುದು. 'ಸೃಜನಶೀಲ' ಮತ್ತು 'ಸೃಜನೇತರ' ಅಧ್ಯಯನಗಳ ಮಾದರಿಗಳು ಹಾಗೂ ವೈಧಾನಿಕತೆಯನ್ನು ಕುರಿತು ಇದುವರೆಗೆ ವ್ಯಕ್ತವಾಗಿರುವ ಚಿಂತಕರ, ಸಂಶೋಧಕರ ಮಾದರಿಗಳಿಂದ ಬಿಡಿಸಿಕೊಳ್ಳುವ ಅವಶ್ಯಕತೆಯನ್ನು ಕುರಿತ ಚಿಂತನೆಯನ್ನು ಮಾಡಲಾಗಿದೆ. ಅಂದರೆ ಮಾಹಿತಿಪ್ರಧಾನ, ಆಕರನಿಷ್ಠ ಹಾಗೂ ಏಕತೀರ್ಮಾನದ ಸಂಶೋಧನೆಯ ಮಾದರಿಗಳ ಭಿನ್ನವಾದ ಮಾದರಿಯ ಹುಡುಕಾಟ ಇಲ್ಲಿದೆ.

ಬಹಳ ಮುಖ್ಯವಾಗಿ ಸಂಶೋಧನೆಯಲ್ಲಿ ಹಾಗೂ ಸಂಶೋಧಕನಲ್ಲಿ ಇರಬೇಕಾದದ್ದು 'ಬದ್ಧತೆ'. ಈ 'ಬದ್ಧತೆಯ ಪ್ರಶ್ನೆ'ಯನ್ನು ಕುರಿತ ಲೇಖನ ಪ್ರತಿಯೊಬ್ಬ ಸಂಶೋಧಕನೂ ಓದಲೇಬೇಕಾದದ್ದು. ಕಾರಣ ಸಂಶೋಧಕ ಅಥವಾ ಸಂಶೋಧನೆಗೆ ಈ ಬದ್ಧತೆ ಇಲ್ಲದಿದ್ದರೆ ಕಷ್ಟವಾಗುತ್ತದೆ. ಅಂಥ ಸಂಶೋಧಕ ಮತ್ತು ಸಂಶೋಧನೆ ತನ್ನ ಅಸ್ತಿತ್ವವನ್ನು ಉಳಿಸಿ ಕೊಳ್ಳಲಾರವು. ಹಾಗೆಯೇ ಸಂಶೋಧನೆ ಅಥವಾ ಅಧ್ಯಯನದಲ್ಲಿ 'ಭಾಷೆಯ ಪಾವಿತ್ರ್ಯತೆ'ಯ ರಕ್ಷಣೆಯೂ ಮುಖ್ಯವಾದದ್ದು ಎನ್ನುವುದು ಲೇಖಕರ ಅಭಿಪ್ರಾಯ. 'ಸಮಸ್ಯೀಕರಣ ಹಾಗೂ ತಾತ್ವೀಕರಣ' ಎನ್ನುವ ಲೇಖನದಲ್ಲಿ ಸಂಶೋಧಕ ಒಂದು ಸಮಸ್ಯೆಯನ್ನು ಕಂಡುಕೊಳ್ಳುವ ಹಾಗೂ ಆ ಸಮಸ್ಯೆಯನ್ನು ಬಿಡಿಸುವಲ್ಲಿ ಅದಕ್ಕೊಂದು ತಾತ್ವಿಕ ಆಯಾಮವನ್ನು ಕಟ್ಟಿಕೊಳ್ಳುವ ವಿಧಾನವನ್ನು ಕುರಿತು ಚರ್ಚಿಸಿದ್ದಾರೆ. ಆ ಮುಖಾಂತರವೇ ಸಂಶೋಧನೆಯಲ್ಲಿ 'ಸತ್ಯ'ದ ಅಭಿವ್ಯಕ್ತಿ ಸಾಧ್ಯ ಎನ್ನುವುದು ಲೇಖಕರ ಅಭಿಪ್ರಾಯವಾಗಿದೆ.

ಸೃಜನಶೀಲ ಸಾಹಿತ್ಯದಲ್ಲಿ ಕಂಡುಬರುವಂತೆ ಸಂಶೋಧನೆಯಲ್ಲಿಯೂ ರಾಜಕಾರಣ ಕಂಡುಬರುವ ಬಗೆಯನ್ನು ಗುರ್ತಿಸುತ್ತಾ 'ಮಾಹಿತಿ ಹಾಗೂ ವಿಶ್ಲೇಷಣೆಯ ರಾಜಕಾರಣ'

ಮಹತ್ವಪೂರ್ಣ ಕೊಡುಗೆಯಾಗಿದೆ. ಕರ್ನಾಟಕ ಸಂಶೋಧನೆಯ ಮೊದಲ ತಲೆಮಾರಿನವರಾದ ಕಪಟರಾಳ, ಶಂಬಾ, ಗೋವಿಂದ ಪೈ, ಮತ್ತು ಎಂ.ಎನ್.ಶ್ರೀನಿವಾಸ ಅವರ ಸಂಶೋಧನೆಯ ನೆಲೆಗಳನ್ನು ಚರ್ಚಿಸುತ್ತಲೇ ಅವರ ಸಂಶೋಧನಾ ಕ್ರಮ ಇಂದಿನ ದಿನಮಾನಗಳಲ್ಲಿ ಒಳಗೊಳ್ಳುತ್ತಿಲ್ಲವೆನಿಸಿದರೂ, ಕರ್ನಾಟಕದ ಇತಿಹಾಸ, ಭಾರತದ ಇತಿಹಾಸ, ಸಂಸ್ಕೃತಿ, ಧರ್ಮತತ್ವಗಳ ಜಿಜ್ಞಾಸೆ ಕುರಿತಾಗಿ ಮಾಡಿದ ಶೋಧ, ಕಂಡುಕೊಂಡ ಫಲಶೃತಿಯನ್ನು ಚರ್ಚಿಸುತ್ತದೆ. ಹಾಗೆಯೇ ಸಂಶೋಧನೆಯ ಹೊಸ ಸಾಧ್ಯತೆಗಳ ಕಡೆಗೂ ಬೆಳಕು ಚೆಲ್ಲುತ್ತದೆ. ಸಮಾಜ ನಿರಂತರವಾಗಿ ಬದಲಾವಣೆಗೊಳ್ಳುತ್ತಲೇ ಇರುತ್ತದೆ. ಅದಕ್ಕನುಗುಣವಾಗಿ ಅದರ ಅಧ್ಯಯನದ ವಿಧಾನಗಳು, ಮಾದರಿಗಳು ಬದಲಾಗುತ್ತಿರುತ್ತವೆ. ಅದರ ಜೊತೆ ಜೊತೆಯಲ್ಲೇ ಆ ಹಿಂದಿನ ಅಧ್ಯಯನದ ಮಾದರಿಗಳನ್ನು ನಿರಾಕರಿಸುವ ಮತ್ತು ಪುರಸ್ಕರಿಸುವ ಹಾಗೂ ಪರಿಷ್ಕರಿಸುವ ಪ್ರಯತ್ನಗಳೂ ನಡೆಯುತ್ತಿರುತ್ತವೆ. ಹಾಗೆಯೇ ಹೊಸ ಬಗೆಯ ಸವಾಲುಗಳು ಎದುರಾಗುತ್ತಿರುತ್ತವೆ. ಅದಕ್ಕನುಗುಣವಾಗಿ ಹೊಸ ಹೊಸ ಅಧ್ಯಯನದ ವಿಧಾನಗಳೂ ರೂಪುಗೊಳ್ಳುತ್ತಿರುತ್ತವೆ ಅಂಥ ಕೆಲಸವನ್ನು ಈ ಕೃತಿ ಮಾಡಿದೆ.

ಕರ್ನಾಟಕ ಸಂಸ್ಕೃತಿಯ ಅಧ್ಯಯನದ ವಿಧಾನಗಳು ಪಳೆಯುಳಿಕೆಯ ಶಾಸ್ತವಾಗದೆ, ಬದಲಾಗುತ್ತಿರುವ ಕಾಲಮಾನದಲ್ಲಿ ಎದುರಾಗುತ್ತಿರುವ ಸಮಸ್ಯೆ ಸವಾಲುಗಳಿಗೆ ತಕ್ಕಂತೆ ತನ್ನ ಗತಿಯನ್ನು ಬದಲಾಯಿಸಿಕೊಳ್ಳುತ್ತಾ ಬಂದಿದೆ. ಹಾಗಾಗಿ ಸಾಂಪ್ರದಾಯಿಕ ಸಂಶೋಧನಾ ವಿಧಾನಗಳನ್ನು ಆಧುನೀಕರಣದ ಈ ಕಾಲಘಟ್ಟದಲ್ಲಿ ಸಮಕಾಲೀನಗೊಳಿಸಿಕೊಳ್ಳಬೇಕಾಗಿದೆ. ಹಾಗಾಗಿ ಇಂಥ ಈ ಕೃತಿ ಸಂಶೋಧಕರಿಗೆ ಸಂಶೋಧನಾ ವಿದ್ಯಾರ್ಥಿಗಳಿಗೆ ಅಪೂರ್ವ ಮಾಹಿತಿಗಳುಳ್ಳ ಮಹತ್ವದ ಆಕರಗ್ರಂಥ ಎಂದರೆ ತಪ್ಪಾಗಲಾರದು.

ಕನ್ನಡ ಸಂಶೋಧನೆಯ ವೈಧಾನಿಕತೆಗಳು (೨೦೦೮) ಎನ್ನುವ ಕೃತಿಯನ್ನು ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಪ್ರಸಾರಾಂಗ ಪ್ರಕಟಿಸಿದೆ. ಡಾ.ಅಮರೇಶ ನುಗಡೋಣಿಯವರ ಸಂಪಾದಕತ್ವದಲ್ಲಿ ಪ್ರಕಟಗೊಂಡ ಈ ಕೃತಿಯಲ್ಲಿ ನಾಡಿನ ಖ್ಯಾತ ವಿದ್ವಾಂಸರಿಂದ ರಚಿಸಲ್ಪಟ್ಟ, ವಿಶೇಷವಾಗಿ ಸಂಶೋಧನಾ ವೈಧಾನಿಕತೆಯನ್ನು ಕೇಂದ್ರವಾಗಿಟ್ಟುಕೊಂಡು ಬರೆಯಲ್ಪಟ್ಟ ೨೦ ಲೇಖನಗಳು ಸಂಯೋಜನೆಗೊಂಡಿವೆ. ಎಂ.ಫಿಲ್ ಮತ್ತು ಪಿಎಚ್.ಡಿ ಪದವಿಗಾಗಿ ಅಧ್ಯಯನ ಮಾಡುವ ಅಭ್ಯರ್ಥಿಗಳಿಗೆ ಹಾಗೂ ಹೊಸದಾಗಿ ಸಂಶೋಧನೆಗೆ ತೊಡಗಿಕೊಳ್ಳುವವರಿಗೆ ಈ ಕೃತಿ ದಿಕ್ಸೂಚಿಯಾಗಿದೆ. ಕನ್ನಡ ಸಾಹಿತ್ಯ, ಸಮಾಜ, ಸಂಸ್ಕೃತಿಯನ್ನು ಅಧ್ಯಯನ ಮಾಡುವುದಕ್ಕೆ ಹಲವು ಮಾದರಿಗಳಿವೆ. ಹಲವು ಸಿದ್ಧಾಂತಗಳಿವೆ. ಅವುಗಳನ್ನು ಅಧ್ಯಯನ ಮಾಡುವುದರ ಮೂಲಕ ಬದಲಾದ ಕಾಲಕ್ಕನುಗುಣವಾಗಿ ಕನ್ನಡ ಅಧ್ಯಯನಗಳು ರೂಪುಗೊಳ್ಳುತ್ತಿವೆ. ಏಕಸತ್ಯದ ಬದಲಾಗಿ ಅನೇಕ ಸತ್ಯಗಳ ಹುಡುಕಾಟ, ಹಾಗೆಯೇ ಏಕ ಸಂಸ್ಕೃತಿಯ ಬದಲಾಗಿ ಬಹುಸಂಸ್ಕೃತಿಗಳ ಹುಡುಕಾಟ ನಡೆಯುತ್ತದೆ. ಇಂಥ ಅಧ್ಯಯನಗಳಿಗಾಗಿಯೇ ಹೊಸ ಹೊಸ ಮಾದರಿಗಳು ರೂಪುಗೊಂಡಿವೆ, ಗೊಳ್ಳುತ್ತಿವೆ. ಅಂಥ ಅಧ್ಯಯನಗಳ ಅಲೋಚನೆಗಳನ್ನು ಸಂಶೋಧನಾ ಅಭ್ಯರ್ಥಿಗಳಿಗೆ ತಲುಪಿಸುವುದೇ ಈ ಕೃತಿಯ ಉದ್ದೇಶವಾಗಿದೆ.

ಇಲ್ಲಿನ ಅನೇಕ ಲೇಖನಗಳು 'ಕನ್ನಡ ಸಂಶೋಧನೆ'ಯ ವೈಧಾನಿಕತೆಯ ಹಲವು ಮಗ್ಗುಲುಗಳನ್ನು ವಿಭಿನ್ನ ದೃಷ್ಟಿಕೋನಗಳ ಮೂಲಕ ಗಂಭೀರವಾದ ಚರ್ಚೆಗೆ ಒಳಪಡಿಸಿವೆ. 'ಸಂಶೋಧನೆ' ಎಂಬುದು ಸಮಾಜದಂತೆ ಸದಾ ಪರಿವರ್ತನಾಗತಿಯಲ್ಲಿ ಸಾಗುವ ಪ್ರಕ್ರಿಯೆ. ಹಾಗಾಗಿ ಸಂಶೋಧನೆ ಎಂಬುದು ಕಾಲಕಾಲಕ್ಕೆ ತನ್ನ ವಸ್ತುವನ್ನು, ಅಧ್ಯಯನಕ್ಕೆ ಬೇಕಾದ

ಪೂರಕ ಆಕರವನ್ನು, ದೃಷ್ಟಿಕೋನವನ್ನು, ತಾತ್ವಿಕತೆಯನ್ನು, ವೈಧಾನಿಕತೆಯನ್ನು ಬದಲಾಯಿಸಿಕೊಳ್ಳುತ್ತಲೇ ಮುಂದೆ ಸಾಗುತ್ತದೆ. ಅಂಥ ಸಿದ್ಧಾಂತಗಳ ತಾತ್ವಿಕ ಪರಿಚಯದ ಲೇಖನಗಳೂ ಇಲ್ಲಿ ಅಡಕವಾಗಿದೆ. ಡಾ.ಕೆ.ವಿ.ನಾರಾಯಣ ಅವರು 'ಸಂಶೋಧನೆ : ಪರಿಕಲ್ಪನೆ' ಎಂಬ ಲೇಖನದಲ್ಲಿ ಸಂಶೋಧನೆಯ ತಾತ್ವಿಕತೆ, ಸತ್ಯವನ್ನು ಗ್ರಹಿಸುವ ರೀತಿ, ಸತ್ಯವನ್ನು ವಸ್ತುನಿಷ್ಠವಾಗಿ ವ್ಯಕ್ತಿನಿರಪೇಕ್ಷವಾಗಿ ಹುಡುಕುವ ಬಗೆಯನ್ನು ವಿವರಿಸುತ್ತಲೇ ಸಂಶೋಧನೆ ಎಂಬುದು ಮೌಲ್ಯ ನಿರಪೇಕ್ಷ ಚಟುವಟಿಕೆ ಎನ್ನುವ ಅಭಿಪ್ರಾಯವನ್ನು ಮಂಡಿಸುತ್ತಾರೆ. ಮುಂದುವರೆದಂತೆ ಕನ್ನಡ ಸಂಶೋಧನೆಯ ವಿವಿಧ ಹಂತಗಳನ್ನು ವಿವರಿಸುತ್ತಾ ಕವಿರಾಜಮಾರ್ಗದಿಂದ ಇಲ್ಲಿಯವರೆಗೆ ರಚನೆಗೊಂಡಿರುವ ಕರ್ನಾಟಕ, ಕನ್ನಡ ಸಂಸ್ಕೃತಿಯ ಅನನ್ಯತೆ ಹಾಗೂ ಅಸ್ಮಿತೆಯನ್ನು ಕುರಿತು ವಿವರಿಸಿದ್ದಾರೆ. ಸಂಶೋಧನೆ ಎಂಬುದು : ಸಾಂಸ್ಕೃತಿಕ ಪುನಾರಚನೆಯಾಗಿ ಕಾಲದಿಂದ ಕಾಲಕ್ಕೆ ಸಾಗುವಂತಿರಬೇಕು ಎನ್ನುವ ಅಭಿಪ್ರಾಯ ತಾಳಿದ್ದಾರೆ.

'ಸಂಶೋಧನೆಯ ಸ್ವರೂಪ'ವನ್ನು ಕುರಿತ ಸಿ.ಎನ್.ರಾಮಚಂದ್ರನ್ ಅವರ ಲೇಖನವು ಸಂಶೋಧನೆ ಎಂಬುದು ಏಕಾ ಏಕಿ ರೂಪುಗೊಳ್ಳುವುದಲ್ಲ. ಅದಕ್ಕೆ ಪೂರ್ವಸಿದ್ಧತೆಯ ಅವಶ್ಯಕತೆ ಇದೆ ಎಂದು ಹೇಳುತ್ತಾ ಅದರ ಪೂರ್ವ ತಯಾರಿಯ ಸ್ವರೂಪವನ್ನು ವಿವರಿಸುತ್ತಾರೆ. ಸಂಶೋಧನೆಯ ಪ್ರಾರಂಭದಲ್ಲಿ 'ಕಟ್ಟಿಕೊಳ್ಳಬೇಕಾದ ಪ್ರಮೇಯದ' ಮಹತ್ವವನ್ನು ಹಾಗೂ ಖಚಿತ ವೈಚಾರಿಕ, ಪರಿಪ್ರೇಕ್ಷ್ಯದ ಅವಶ್ಯಕತೆ ಕುರಿತು ಚರ್ಚಿಸಿದ್ದಾರೆ. ಹಾಗೆಯೇ ಸಂಶೋಧನೆಯ ವಿಶ್ವಾಸನೀಯತೆ, ಪ್ರಮಾಣ–ಸಾಕ್ಷ್ಯಗಳು ಅವುಗಳನ್ನು ಸಂಶೋಧಕ ಸ್ವೀಕರಿಸಬಹುದಾದ ಅಥವಾ ಅಲಕ್ಷಿಸಬೇಕಾದ ರೀತಿ–ನೀತಿಗಳನ್ನು ವಿವೇಚಿಸುತ್ತಾ ಸಂಶೋಧಕ ಜನಪ್ರಿಯ ವ್ಯಾಮೋಹದಿಂದ ಹೊರಗಿರಬೇಕು. ಸಂಶೋಧಕ ಒಪ್ಪಿಕೊಳ್ಳುವ ಮತ್ತು ಕೊಡುವ 'ಸಾಕ್ಷ್ಯ'ದ ವಿಶ್ವಾಸನೀಯತೆಯೇ ನಮ್ಮ ಕೊನೆಯ ತೀರ್ಮಾನಗಳ ವಿಶ್ವಾಸನೀಯತೆಯನ್ನು ನಿರ್ಧರಿಸುತ್ತದೆ ಎನ್ನುವುದನ್ನು ತಿಳಿಸುತ್ತಾರೆ. 'ಸಾಹಿತ್ಯ ಸಂಶೋಧನೆಯ ವೈಧಾನಿಕತೆ'ಯನ್ನು ಕುರಿತ ಎಚ್.ಎಸ್. ರಾಘವೇಂದ್ರರಾವ್ ಅವರ ಲೇಖನವು ಆ ಕ್ಷೇತ್ರದಲ್ಲಿ ಕೆಲಸ ಮಾಡುವವರು ಗಮನಿಸಬೇಕಾದ ಲೇಖನವಾಗಿದೆ. ಹೆಚ್.ಎಸ್.ಶ್ರೀಮತಿ ಅವರ ಸಾಹಿತ್ಯಾಧ್ಯಯನ ಮತ್ತು ಮಹಿಳಾ ಅಧ್ಯಯನ, ಹಾಗೂ ಡಾ. ಛಾಯಾ ದೇಗಾಂವಕರ್ ಅವರ 'ಸ್ತ್ರೀವಾದಿ ಸಂಶೋಧನಾ ವಿಧಾನಗಳು : ಸ್ವರೂಪ ಹಾಗೂ ಅಗತ್ಯತೆ' ಎನ್ನುವ ಲೇಖನಗಳಲ್ಲಿ ಸ್ತ್ರೀವಾದಿ ಸಂಶೋಧನೆಯ ಅರ್ಥ, ಸ್ವರೂಪ, ಅಧ್ಯಯನದ ವಿಧಿವಿಧಾನಗಳನ್ನು ಕುರಿತು ಚರ್ಚಿಸಲಾಗಿದೆ. ಈ ಲೇಖನಗಳು ಆ ಕ್ಷೇತ್ರದಲ್ಲಿ ಕೆಲಸ ಮಾಡುವವರಿಗೆ ಕೆಲವು ಹೊಸ ಒಳಹುಗಳನ್ನು ನೀಡುತ್ತವೆ.

'ಸಂಶೋಧನೆಗೂ ನಮ್ಮದೇ ಪರಿಕರಗಳ ಅಗತ್ಯವಿದೆ' ಎನ್ನುವ ಡಾ.ಕೆ. ಕೇಶವಶರ್ಮ ಅವರ ಲೇಖನವು, ಸಂಶೋಧನೆ ಎನ್ನುವುದು ಪ್ರಾರಂಭದಿಂದ ಇಂದಿನವರೆಗೆ ಬೆಳೆದುಬಂದಿರುವ ಮಾರ್ಗದ ಅವಲೋಕನವಾಗಿದೆ. ಲೇಖಕರು ಕನ್ನಡ ಸಂಶೋಧನೆಯ ಮಾದರಿಗಳನ್ನು ಮೂರು ರೀತಿಯಾಗಿ ಹೇಳುತ್ತಾರೆ. ಅಂದರೆ ವಸಾಹತುಪೂರ್ವ, ವಸಾಹತು ಕಾಲ, ವಸಾಹತೋತ್ತರ ಕಾಲ ಎಂಬುದಾಗಿ. ಇಲ್ಲಿ ಆದ ಬದಲಾವಣೆ ಅದಕ್ಕೆ ಕಾರಣ, ಪ್ರೇರಣೆ ಪ್ರಭಾವಗಳನ್ನು ಉದಾಹರಣೆ ಸಮೇತ ಕಟ್ಟಿಕೊಡುವ ಪ್ರಯತ್ನ ಮಾಡಿದ್ದಾರೆ. ಮುಂದುವರೆದು ನವೋದಯ ಕಾಲಘಟ್ಟದಲ್ಲಿ ರೂಪಿತವಾದ ಮರೆತು ಹೋದ ಕೃತಿಗಳ ಪರಿಶೀಲನೆ, ಗ್ರಂಥ ಸಂಪಾದನೆ, ಶಾಸನಗಳ ಅಧ್ಯಯನ, ಜಾತಿ ಅಧ್ಯಯನ, ಜಾತ್ರೆಗಳ ಅಧ್ಯಯನ, ತೌಲನಿಕ ಅಧ್ಯಯನ ಮುಂತಾದ ಅಧ್ಯಯನದ ಮಾದರಿಗಳನ್ನು

ಉದಾಹರಣೆ ಸಹಿತ ವಿವರಿಸುತ್ತಾರೆ. ಇಲ್ಲಿ ಗಮನಿಸಬೇಕಾದ ಮತ್ತೊಂದು ಅಂಶವೆಂದರೆ ಬ್ರಿಟಿಷ್ ಅಥವಾ ವಸಾಹತು ಮಾದರಿಯಿಂದ ಹೊರಬಂದು ನಮ್ಮ ಪರಿಕರಗಳನ್ನೇ ಕೇಂದ್ರವಾಗಿಟ್ಟುಕೊಂಡು ನಮ್ಮದೇ ಮಾದರಿಯನ್ನು ರೂಪಿಸಿಕೊಳ್ಳುವ ಅಗತ್ಯದ ಚರ್ಚೆ ಗಮನೀಯವಾದುದು.

ಹಾಗೆಯೇ ಈ ಕೃತಿಯಲ್ಲಿ ಚರ್ಚಿತವಾಗುವ ಪ್ರಮುಖ ಅಂಶಗಳೆಂದರೆ ಸಂಶೋಧನೆಯಲ್ಲಿ ಬಳಕೆಯಾಗುವ ಅರ್ಥಕಲ್ಪನೆ, ಸಮಸ್ಯೀಕರಣ ಹಾಗೂ ಅದರ ತಾತ್ವೀಕರಣದ ಚರ್ಚೆ ಹಾಗೂ ಸಂಶೋಧನೆಯಲ್ಲಿ ಸಮಸ್ಯೆ ಮತ್ತು ಸಮಸ್ಯೀಕರಣಕ್ಕಿರುವ ಮಹತ್ವ, ಸಂಶೋಧನೆಯ ತಾತ್ವಿಕ ನೆಲೆಗಳು, ಧೋರಣೆಗಳು ಹಾಗೂ ಸಿದ್ಧತೆಗಳನ್ನು ಕುರಿತ ವಿವಿಧ ವಿದ್ವಾಂಸರ ಚರ್ಚೆ ಸಂಶೋಧಕರಿಗೆ ಒಂದು ಹೊಸ ದಿಕ್ಕನ್ನು ಸೂಚಿಸುತ್ತದೆಯಲ್ಲದೆ ಕನ್ನಡ ಸಂಶೋಧನೆಗೆ ಒಂದು ಹೊಸ ಆಯಾಮವನ್ನೇ ತಂದುಕೊಡುತ್ತವೆ ಎಂದರೆ ತಪ್ಪಲ್ಲ. ಹಾಗೆಯೇ ಮೊಗಳ್ಳಿ ಅವರ 'ದೇಶಿ ಸಂಶೋಧನಾ ವಿಧಾನವೂ' ಒಂದು ಹೊಸ ಚರ್ಚೆಗೆ ನಾಂದಿಯಾಗುತ್ತದೆ. ಮುಂದುವರೆದಂತೆ ಸಂರಚನಾವಾದ, ವಿರಚನೆ, ನಿರಚನೆ ಹಾಗೂ ಆಧುನಿಕೋತ್ತರವಾದ ಮತ್ತು ರಚನೋತ್ತರವಾದವನ್ನು ಕುರಿತ ಚರ್ಚೆ ಅಭಿಪ್ರಾಯಗಳೂ ಸಹ ಸಂಶೋಧನೆಗೆ ಒಂದು ಹೊಸ ಚೌಕಟ್ಟನ್ನು ನೀಡುತ್ತವೆ. ವಿಮರ್ಶೆಯ ಕಾರ್ಯ, ಸಂಸ್ಕೃತಿಯ ಅಧ್ಯಯನದ ವೈಧಾನಿಕತೆಯ ವಿಶ್ಲೇಷಣೆ, ಸ್ತ್ರೀವಾದಿ ಓದು, ನಿರಚನವಾದಿ ಓದು, ಎನ್ನುವ ಲೇಖನಗಳು ಆಧುನಿಕ ಸಾಹಿತ್ಯ ವಿಮರ್ಶೆಯಲ್ಲಿ ವಹಿಸುವ ಪಾತ್ರವನ್ನು ವಿಶಿಷ್ಟವಾಗಿ ತಿಳಿಸಿಕೊಡುತ್ತವೆ.

ಒಟ್ಟಾರೆ ಸಂಶೋಧನ ವಿದ್ಯಾರ್ಥಿಗಳ ಅಧ್ಯಯನಕ್ಕೆ ಅಗತ್ಯವಾಗಿ ಬೇಕಾಗುವ ವೈಧಾನಿಕತೆಗಳ ತಾತ್ವಿಕ ಪರಿಚಯವನ್ನು ಇಲ್ಲಿನ ಲೇಖನಗಳು ಮಾಡಿಕೊಡುತ್ತವೆ. ವಾದ, ಸಿದ್ಧಾಂತಗಳ ಅನ್ವಯದಿಂದ ಅಧ್ಯಯನ ಮಾಡುವುದಕ್ಕಾಗಿ ಇವು ಸಹಕಾರಿಯಾಗುತ್ತದೆ. ಹಾಗೆಯೇ ಹೊಸದಾಗಿ ಸಂಶೋಧನೆ ಕೈಗೊಳ್ಳುವ ಸಂಶೋಧನಾ ವಿದ್ಯಾರ್ಥಿಗಳಿಗೆ ಎದುರಾಗುವ ದೃಷ್ಟಿಕೋನದ ಕೊರತೆಯನ್ನು ಹೋಗಲಾಡಿಸಿಕೊಳ್ಳಬಹುದು. ಸಂಶೋಧನ ವಿಷಯದ ಆಯ್ಕೆ, ಹಾಗೆ ಆಯ್ಕೆ ಮಾಡಿಕೊಂಡ ವಿಷಯದ ಪ್ರಸ್ತಾವನೆ ಸಿದ್ಧಪಡಿಸಲು ಹಾಗೂ ಅವುಗಳನ್ನು ಅಧ್ಯಯನಗಳಾಗಿ ವಿಂಗಡಿಸಿಕೊಳ್ಳಲು ಸಹ ಈ ಲೇಖನಗಳು ನೆರವಿಗೆ ಬರುತ್ತವೆ.

ತೀರಾ ಇತ್ತೀಚೆಗೆ 'ಕನ್ನಡ ಸಂಶೋಧನೆ'ಯ ತಾತ್ವಿಕತೆ, ವೈಧಾನಿಕತೆ, ಅವಲೋಕನ, ಸಂಶೋಧನಾ ಪ್ರಬಂಧಗಳ ಸಿದ್ಧತೆ ಮುಂತಾದ ವಿಷಯಗಳನ್ನು ಕುರಿತಂತೆ ಅನೇಕ ವಿದ್ವಾಂಸರು, ಸಂಶೋಧಕರು ತಮ್ಮ ಬಿಡಿ ಲೇಖನಗಳನ್ನು, ಗ್ರಂಥಗಳನ್ನೂ ಬರೆದು ಪ್ರಕಟಿಸುತ್ತಿರುವುದು ಸಂತೋಷದ ಸಂಗತಿ. ಹಾಗೆಯೇ ಸಂಶೋಧಕರ ಸಂಖ್ಯೆಯೂ ಹೆಚ್ಚಾಗುತ್ತಿರುವುದು ಆರೋಗ್ಯಕರ ಬೆಳವಣಿಗೆಯಾಗಿದೆ. ಆದರೆ ವಿಶ್ವವಿದ್ಯಾಲಯ ಮತ್ತು ಯು.ಜಿ.ಸಿ.ಯ ಪದವಿಗಾಗಿ ನಡೆಯುತ್ತಿರುವ ಸಂಶೋಧನೆಯ ಗುಣಮಟ್ಟ ಅಷ್ಟೊಂದು ಚೆನ್ನಾಗಿಲ್ಲ ಎಂಬ ಮಾತು ಕೇಳಿಬರುತ್ತಿದೆ. ಇದಕ್ಕೆ ಬೇರೆಯೇ ಚರ್ಚೆಯ ಅಗತ್ಯವಿರುವುದರಿಂದ ನಾನು ಅದನ್ನು ಪ್ರಸ್ತಾಪಿಸುವುದಿಲ್ಲ. ಜಾನಪದ, ಶಾಸನಶಾಸ್ತ್ರ, ಭಾಷಾಶಾಸ್ತ್ರ, ಸಾಂಸ್ಕೃತಿಕ ಅಧ್ಯಯನ, ಶಾಸ್ತ್ರಗ್ರಂಥಗಳ ಅಧ್ಯಯನ, ಪ್ರಾಚೀನ ಸಾಹಿತ್ಯ, ಪ್ರಾದೇಶಿಕ ಅಧ್ಯಯನ ಅಥವಾ ಸ್ಥಳೀಯ ಸಂಸ್ಕೃತಿ ಅಧ್ಯಯನ ಮುಂತಾದ ಕ್ಷೇತ್ರಗಳ ಅಧ್ಯಯನ ವ್ಯಾಪಕವಾಗಿ ಪ್ರತ್ಯೇಕ ಪ್ರತ್ಯೇಕವಾಗಿ ನಡೆಯುತ್ತಿದೆ. ಅದರ ಜೊತೆಗೆ ಜಾಗತೀಕರಣದ ಪ್ರಭಾವ, ಅನ್ಯಜ್ಞಾನದ ತಿಳುವಳಿಕೆಗಳಿಂದಲೂ ಕನ್ನಡ ಸಂಶೋಧನೆ ಅನೇಕ

ಬದಲಾವಣೆಗಳಿಗೆ ಒಳಗಾಗುತ್ತಿದೆ. ಈ ರೀತಿಯ ಅಧ್ಯಯನಗಳಿಗೆ ವಿಶ್ವವಿದ್ಯಾಲಯಗಳು, ಸಂಘ ಸಂಸ್ಥೆಗಳು, ಸರ್ಕಾರ, ಯು.ಜಿ.ಸಿ ಮುಂತಾದವುಗಳ ಧನಸಹಾಯ ನೀಡುತ್ತದೆ. ಈ ಎಲ್ಲಾ ಕಾರಣಗಳಿಂದ ನಮ್ಮ ಸಂಶೋಧನ ವಿಧಿವಿಧಾನಗಳು ಇನ್ನಷ್ಟು ಬದಲಾಗಬೇಕಿದೆ. ಸಮಕಾಲೀನಗೊಳ್ಳಬೇಕಿದೆ. ಜಾಗತಿಕ ಮಟ್ಟದಲ್ಲಿ 'ಕನ್ನಡ ಸಂಶೋಧನೆ' ಬೇರೆಯ ಸ್ವರೂಪವನ್ನೇ ಪಡೆದುಕೊಳ್ಳಬೇಕಿದೆ.

ಆಧಾರ ಗ್ರಂಥಗಳು

೧. ಸಂಶೋಧನೆ : ಡಾ.ಎಂ.ಚಿದಾನಂದಮೂರ್ತಿ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ದ್ವಿ.ಮು.೧೯೮೪

೨. ಸಂಶೋಧನ ವಿಧಾನ : ಡಾ.ಹರಿಕೃಷ್ಣಭರಣ್ಯ, ಬಿ.ಸದಾಶಿವ, ಡಾ.ಪಿ.ಕುಲಕರ್ಣಿ, ಪ್ರಭಸ ಬಿಡುಗಡೆ, ಮಧುರೈ (೧೯೮೯)

೩. ಸಂಶೋಧನಶಾಸ್ತ್ರ : ಹೊಸ್ಕೆರೆ ಶಿವಸ್ವಾಮಿ, ತ.ವೆಂ.ಸ್ಮಾರಕ ಗ್ರಂಥಮಾಲೆ, ಮೈಸೂರು, ೧೯೭೯

೪. ಸಾಮಾಜಿಕ ಸಂಶೋಧನೆ : ಎಸ್.ರಾಜಶೇಖರ್, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೮೩

೫. ಸಾಮಾಜಿಕ ಸಂಶೋಧನಾ ವಿಧಾನಗಳು : ಆರ್.ಇಂದಿರಾ, ವಿದ್ಯಾಸಾಗರ ಮುದ್ರಣ ಮತ್ತು ಪ್ರಕಾಶನಾಲಯ, ಮೈಸೂರು, ೧೯೮೬

೬. ಸಾಹಿತ್ಯ ಸಂಶೋಧನ ಮಾರ್ಗ : ಡಾ.ಸಂಗಮೇಶ ಸವದತ್ತಿಮಠ, ರೂಪದ ರಶ್ಮಿ ಪ್ರಕಾಶನ, ಕಲಬುರ್ಗಿ, ದ್ವಿ.ಮು.೧೯೯೮

೭. ಸಂಶೋಧನ ಸ್ವರೂಪ : ಡಾ.ಬಿ.ವಿ.ಶಿರೂರ, ಅನ್ನಪೂರ್ಣ ಪ್ರಕಾಶನ, ಹುಬ್ಬಳ್ಳಿ, ಪರಿಷ್ಕೃತ ಮುದ್ರಣ, ೨೦೦೦

೮. ಸಂಶೋಧನ ಶಾಸ್ತ್ರ : ಡಾ.ಎಂ.ಎಂ.ಕಲಬುರ್ಗಿ, ಸ್ವಪ್ನ ಬುಕ್ ಹೌಸ್, ಬೆಂಗಳೂರು. ೨೦೦೦

೯. ಸಂಶೋಧನ ರಂಗ : ಡಾ.ವಸಂತ ಕುಮಾರ ತಾಳ್ತಜೆ, ಮುಂಬೈ ವಿಶ್ವವಿದ್ಯಾಲಯ, ೨೦೦೧

೧೦. ಶತಮಾನದ ಸಂಶೋಧನೆ : ಸಂ.ಎನ್.ಎಸ್.ತಾರಾನಾಥ, ಕರ್ನಾಟಕ ಸಾಹಿತ್ಯ ಅಕಾಡೆಮಿ, ೨೦೦೧

೧೧. ಅಧ್ಯಯನದ ವಿಧಿವಿಧಾನಗಳು : ಡಾ.ಕೆ.ರವೀಂದ್ರನಾಥ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೮

೧೨. ಕನ್ನಡ ಸಂಶೋಧನೆಯ ವೈಧಾನಿಕತೆಗಳು : ಸಂ.ಡಾ.ಅಮರೇಶ ನುಗಡೋಣಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೮

೧೩. ಕನ್ನಡ ಸಂಶೋಧನೆ ತಾತ್ವಿಕ ವಿಚಾರ : ಡಾ.ರಹಮತ್ ತರೀಕೆರೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭

೧೪. ಶಾಸನ ಸಂಶೋಧನೆ : ಡಾ.ಡಿ.ವಿ.ಪರಮಶಿವಮೂರ್ತಿ, ಗುಣನಿಧಿ ಪ್ರಕಾಶನ, ಬೆಂಗಳೂರು. ೧೯೯೪

■

೧೦

ಸಂಶೋಧನೆಯ ಫಲಶ್ರುತಿ–ಸಮೀಕ್ಷೆ

ಕಮಲಾ ಹಂಪನಾ

ಸಂಶೋಧನೆಯೆಂಬ ಪರಿಕಲ್ಪನೆಯ ಆಯಾಮ, ಅನನ್ಯತೆ, ರೂಪ, ಸ್ವರೂಪ, ಆದರ್ಶ – ಮೊದಲಾದ ಸಂಗತಿಗಳನ್ನು 'ಸಂಶೋಧನೆಯ ವಿಸ್ತಾರ–ವಿನ್ಯಾಸ' ಎಂಬ ಮೊದಲ ಲೇಖನದಲ್ಲಿ ಸೋದಾಹರಣಪೂರ್ವಕ ವಿವರವಾಗಿ ಚರ್ಚಿಸಿದ್ದೇನೆ. ಅದರ ಸಂಬಂಧವಾದ ಮತ್ತು ಅದಕ್ಕೆ ಪೂರಕವಾದ ಇನ್ನಷ್ಟು ಸಂಶೋಧನ ಮಾಹಿತಿ ಮುಂದಿನ ಪುಟಗಳಲ್ಲಿದೆ.

ಹೊರನಾಡಿನವರ ಕೊಡುಗೆ

ಪಾಶ್ಚಾತ್ಯ ವಿದ್ವಾಂಸರ ಶೋಧನ ವಿಧಾನದ ಪ್ರೇರಣೆ ಪ್ರಭಾವದಿಂದ ದೇಶೀಯ ಸಂಶೋಧಕರ ದೃಷ್ಟಿಧೋರಣೆಗಳಲ್ಲಿ ಬದಲಾವಣೆ ಆಯಿತು. ಹಳೆಯದರ ಪರಿಷ್ಕಾರದ ಜೊತೆ ಜೊತೆಗೆ ಹೊಸ ಆವಿಷ್ಕಾರ ನಡೆಯತೊಡಗಿ ಸಂಶೋಧನೆಯ ಕ್ಷೇತ್ರದಲ್ಲಿ ಮಾರ್ಪಾಟುಗಳಾದುವು. ವಿದೇಶಿ ವಿದ್ವಾಂಸರ ಅಮೂಲ್ಯ ಪ್ರಯತ್ನಗಳು ಸಂಶೋಧನೆ ಬಹುಮುಖಿಯಾಗಿ ಮೈತುಂಬಿಕೊಳ್ಳಲು ಚಿಮ್ಮುಹಲಗೆಯಾದದ್ದು ಈಗ ಸ್ಥಾಪಿತ ಸತ್ಯ. ಪಶ್ಚಿಮದ ಸಂಶೋಧಕರ ಮಾರ್ಗದರ್ಶಕ ಬರೆಹಗಳು, ಭಾರತಕ್ಕೆ ಕರ್ನಾಟಕಕ್ಕೆ ಬರದಿದ್ದರೂ, ಸ್ಫೂರ್ತಿ ನೀಡಿದ ಆಕರಗಳಾದುವು. ಇದಕ್ಕೂ ಮುಖ್ಯವಾದ್ದು ಮತ್ತು ಇನ್ನೂ ಮಿಗಿಲಾದದ್ದು ಕರ್ನಾಟಕದಲ್ಲೇ ನೆಲಸಿ, ಕನ್ನಡ ಕಲಿತು ದೇಶೀಯ ಸತ್ವ ಸಂಪತ್ತಿನ ಅನನ್ಯತೆಯ ಆಯಾಮವನ್ನು ಹುಡುಕಿ, ಗುರುತಿಸಿ, ಬೆಳಕಿಗೆ ತಂದದ್ದು. ಆದಿಕರ್ತರಾದ ಹೊರಗಿನ ಪಂಡಿತರು ದೇಶೀಯ ತವನಿಧಿಯ ರೂಪ, ಸ್ವರೂಪ, ಮಹತ್ವಗಳನ್ನು ಅನುಸಂಧಾನಿಸಿ ಮಾಡಿದ ಅಗಾಧ ಕಾರ್ಯ ಹಾಗೂ ನೀಡಿದ ಕೊಡುಗೆ ಮರೆಯಲಾಗದ್ದು.

ಸ್ಥಳೀಯ ಅಸ್ಮಿತೆಗೆ, ನೆಲದ ಮರೆಯ ನಿಧಾನದ ಗುರುತಿಸುವಿಕೆಗೆ ಹೆದ್ದಾರಿ ನಿರ್ಮಿಸಿದವರು ಪರದೇಶೀಯ ಸಂಶೋಧಕರು. ಅವರಲ್ಲಿ ಕೆಲವರು ದಿಟಕ್ಕೂ ಪ್ರಾತಃಸ್ಮರಣೀಯರು. ಆದಿಪರಿಶೋಧಕರೆನಿಸಿ ಕೆಸರ್ಗಲ್ಲು ಇಟ್ಟುಹೋದ ಅಗ್ರಗಾಮಿ

ಮೂಲ ಪುರುಷರ ಹೆಸರುಗಳನ್ನು ಹೇಳದೆ ಮುಂದೆ ಹೋಗುವುದು ಸರಿಯಾಗಲಾರದು. ಈ ಗ್ರಹಿಕೆಯಿಂದ ಕೇವಲ ಕೆಲವರ ಹೆಸರುಗಳನ್ನಷ್ಟೆ, ಸಾಧನೆಗಳನ್ನಲ್ಲ, ಇಲ್ಲಿ ನಮೂದಿಸಿದೆ. ಸಂಶೋಧನೆಯ ಹಾಸು ನಿರ್ಮಿಸಿ ವಿವಿಧ ರಂಗಗಳಲ್ಲಿ ಮೌಲಿಕವಾದ ಸಾಧನೆಯೆಸಗಿದವರಲ್ಲಿ ಪ್ರಾತಿನಿಧಿಕರನ್ನು ನೆನೆಯಲಾಗಿದೆ. ಇವರಲ್ಲಿ ಒಬ್ಬೊಬ್ಬರ ಬರೆಹಗಳೂ ಬೆಲೆಯುಳ್ಳ ಬಾಗಿನಗಳು, ಸಂಶೋಧನೆಯ ಭವ್ಯ ಭವನದ ಮುಖ್ಯ ದ್ವಾರದಲ್ಲಿಯೇ ರಾರಾಜಿಸುವ ನಾಂದಿ ತೋರಣಗಳು, ಹೊಸ ತಲೆಮಾರಿಗೆ ಹುರುಪು ತರುವ ಪ್ರಸಿದ್ಧ ಮಾದರಿಗಳು.

ಕಲಕತ್ತ (ಮತ್ತು ಮುಂಬಯಿ) ನಗರದಲ್ಲಿ ೧೭೮೪ರಲ್ಲಿ ರಾಯಲ್ ಏಷಿಯಾಟಿಕ್ ಸೊಸೈಟಿ ಆರಂಭವಾಯಿತು. ಆ ಸಂಸ್ಥೆಯ ವತಿಯಿಂದ ಪ್ರಕಟವಾಗುತ್ತಿದ್ದ ವಿದ್ವತ್ ಪತ್ರಿಕೆಯಲ್ಲಿ ಕನ್ನಡ ನಾಡಿನ ಭಾಷೆ, ಸಂಸ್ಕೃತಿ, ಶಾಸನ, ಇತಿಹಾಸ ಮೊದಲಾದ ವಿಷಯಗಳನ್ನು ಕುರಿತ ಸಂಶೋಧನ ಲೇಖನಗಳು ಅಚ್ಚಾದುವು. ಕರ್ನಲ್ ಮೆಕೆಂಜಿ, ಫ್ರಾನ್ಸಿಸ್ ಬುಕನನ್ (೧೭೬೨–೧೮೨೯), ವಾಲ್ಟರ್ ಇಲಿಯಟ್, ಹೆನ್ರಿ ವಥೆನ್, ಹರ್ಮನ್ ಮೊಗ್ಲಿಂಗ್ (೧೮೧೧–೧೮೮೧) ಮೊದಲಾದವರು ಸಂಶೋಧನ ರಂಗ ಕರ್ನಾಟಕದಲ್ಲೆ ಕಳೆಗೊಳ್ಳಲು ಹತ್ತೊಂಬತ್ತನೆಯ ಶತಮಾನದಲ್ಲಿ ಗುದ್ದಲಿ ಪೂಜೆ ಗೈದು ದಾರಿ ನಿರ್ಮಿಸಿದರು. ಈ ದಾರಿಯಲ್ಲಿ ಹೆಜ್ಜೆ ಹಾಕುತ್ತ ಹೆದ್ದಾರಿ ರೂಪಿಸಿದವರು ಮಹಾ ವಿದ್ವಾಂಸರಾದ ಫರ್ಡಿನಾಂಡ್ ಕಿಟ್ಟೆಲರು ಮತ್ತು ಬಿ.ಎಲ್. ರೈಸರು.

ಜಾನ್ ಫೆಯಿತ್‌ಫುಲ್ ಫ್ಲೀಟರು (೧೮೪೭–೧೯೧೭) ಬಹುಶಾಸ್ತ್ರ ವಿಶಾರದರು, ಭಾಷಾತಜ್ಞರು, ಮತ್ತು ಜನಪದ ಸಾಹಿತ್ಯ ಸಂಗ್ರಹಕಾರರು. ಪಾಳಿ–ಸಂಸ್ಕೃತ–ಮತ್ತು ಹಳಗನ್ನಡ ಶಾಸನಗಳು (೧೮೭೮) ಎಂಬುದು ಅವರು ಭಾಷೆ – ಸಾಹಿತ್ಯ ವಿಚಾರದಲ್ಲಿ ಹೊಂದಿದ್ದ ಆಸಕ್ತಿ ಮತ್ತು ತಿಳಿವಳಿಕೆಗೊಂದು ಉದಾಹರಣೆ. ಜೆ.ಎಫ್. ಫ್ಲೀಟರನ್ನು ಶಾಸನಶಾಸ್ತ್ರ ಪಿತಾಮಹರೆಂದು ಗುರುತಿಸುವುದು ಸರಿಯಾದ ಪರಿಗಣನೆ. ಉತ್ತರ ಕರ್ನಾಟಕದ ನೂರಾರು ಶಾಸನಗಳ ವಿಶಿಷ್ಟತೆಯನ್ನು ಒತ್ತುಕೊಟ್ಟು ಎತ್ತಿತೋರಿಸಿದ ಮೊದಲ ಮನ್ನಣೆ ಅವರಿಗೆ ಸಲ್ಲುತ್ತದೆ. ಮುಂಬಯಿ ಶಾಖೆಯ ರಾಯಲ್ ಏಷಿಯಾಟಿಕ್ ಸೊಸೈಟಿಯ ಪತ್ರಿಕೆಯಲ್ಲಿ ಅಚ್ಚಾಗಿರುವ ಪ್ರೌಢ ಲೇಖನಗಳು ಅವರ ಸಂಶೋಧನೆಯ ಘನತೆ ಗಾಂಭೀರ್ಯವನ್ನು ಕನ್ನಡಿಸುತ್ತವೆ. ೧೮೭೨ರಲ್ಲಿ ಆರಂಭವಾದ ಸಂಶೋಧನೆಗೆ ಮೀಸಲಾದ ಇಂಡಿಯನ್ ಆ್ಯಂಟಿಕ್ವೆರಿ ಪತ್ರಿಕೆಗೆ ಫ್ಲೀಟರು ೧೮೮೫ ರಿಂದ ೧೮೯೧ರ ವರೆಗೆ ಏಳು ವರ್ಷ ಸಂಪಾದಕರೂ ಆಗಿದ್ದು ಹಲವು ಮೌಲಿಕ ಶೋಧನೆಗಳ ಬರೆಹಗಳನ್ನು ಪ್ರಕಟಿಸಿದರು.

ಕನ್ನಡ ಅಥವಾ ಕರ್ನಾಟಕ ಶಾಸನ ಶಾಸ್ತ್ರದ ಭೀಷ್ಮರೆನಿಸಿದವರು ಬೆಂಜಮಿನ್ ಲೂಯಿ ರೈಸರು (೧೮೩೭–೧೯೨೭). ಇವರ ಸಮಕಾಲೀನ ಜೆ.ಎಫ್. ಫ್ಲೀಟರು ಉತ್ತರ ಕರ್ನಾಟಕದ ಶಾಸನಗಳಿಗೆ ನಿಗಾವಹಿಸಿದ್ದರು. ಮೈಸೂರು, ಬೆಂಗಳೂರು, ಕೋಲಾರ, ತುಮಕೂರು, ಹಾಸನ, ಕಡೂರು, ಚಿತ್ರದುರ್ಗ ಮತ್ತು ಶಿವಮೊಗ್ಗ ಎಂಬ ಕೇವಲ ಎಂಟು ಜಿಲ್ಲೆಗಳನ್ನು ಒಳಗೊಂಡಿತ್ತು ಹಳೆಯ ಮೈಸೂರು ರಾಜ್ಯ. ಬಿ.ಎಲ್. ರೈಸರು ಹಳೆಯ ಮೈಸೂರು ಭಾಗದ ಶಾಸನಗಳ ಸಿರಿಸಂಪದವನ್ನು ಹೊರಗೆಡವಿದರು. ಇವರಿಗೆ ನಾನಾ ಜ್ಞಾನ ಶಾಖೆಗಳಲ್ಲಿ ಪ್ರವೇಶವಿತ್ತು. ಕ್ಷೇತ್ರ ಕಾರ್ಯ ಕೈಗೊಂಡು ಇವರು ಶಾಸನ ಸಾಮಗ್ರಿ ಸಂಗ್ರಹ ಮಾಡಿದ ವಿಧಾನ ತರುವಾಯದ ವಿದ್ವಾಂಸರಿಗೆ ಮೇಲ್ಪಂಕ್ತಿ ಆಯಿತು. ಇವರದು ಸಾಹಿತ್ಯದಲ್ಲೂ ಸಮದಂಡಿಯಾದ ಅನ್ವೇಷಣೆ. ಆದಿಕವಿ ಪಂಪನನ್ನೂ ಅವನ ಕಾವ್ಯವನ್ನೂ ಲೋಕ ಶ್ರುತಗೊಳಿಸಿದ ಆದ್ಯರು. ಪಂಪಭಾರತ (ವಿಕ್ರಮಾರ್ಜುನ ವಿಜಯ), ಪಂಪ ರಾಮಾಯಣ (ರಾಮಚಂದ್ರಚರಿತ ಪುರಾಣ), ಶಬ್ದಾನುಶಾಸನ – ಮುಂತಾದ ಶ್ರೇಷ್ಠ ಕಾವ್ಯ ಮತ್ತು ಶಾಸ್ತ್ರ

ಗ್ರಂಥಗಳ ಪ್ರಥಮ ಆವೃತ್ತಿ ಪ್ರಕಟಿಸಿದ ಗ್ರಂಥ ಸಂಪಾದಕರಿವರು. ಬಿ.ಎಲ್. ರೈಸರ ಸಂಶೋಧನೆಯ ಸಾಧನೆಯ ಶೃಂಗ ಎಪಿಗ್ರಾಫಿಯ ಕರ್ನಾಟಿಕ ಸಂಪುಟಗಳು.

ಫರ್ಡಿನಾಂಡ್ ಕಿಟ್ಟೆಲರು (೧೮೩೨–೧೯೦೩) ಸ್ಥಳೀಯ ಬಲ್ಲಿದರ ಬಳಗವನ್ನು ಬಳಸಿಕೊಂಡು ಸಿದ್ಧಪಡಿಸಿದ ಕನ್ನಡ–ಕನ್ನಡ ಇಂಗ್ಲಿಷ್ ನಿಘಂಟು (೧೮೯೪) ಎಪ್ಪತ್ತು ಸಾವಿರ ಕನ್ನಡ ಶಬ್ದಗಳ ಬೃಹತ್ ಕೋಶ. ಇದು ಆ ವೇಳೆಗಾಗಲೆ (೧೮೩೨ರಲ್ಲಿ) ಅಚ್ಚಾಗಿದ್ದ ರೆವರೆಂಡ್ ರೀವ್ ಅವರ ಕನ್ನಡ–ಇಂಗ್ಲಿಷ್ ಶಬ್ದಕೋಶಕ್ಕಿಂತ ಅಯ್ದುಪಟ್ಟು ದೊಡ್ಡದಾಗಿತ್ತಲ್ಲದೆ ಇನ್ನೂ ಪ್ರಮಾಣಭೂತವಾಗಿತ್ತು. ಕನ್ನಡದ ಕೈಂಕರ್ಯಕ್ಕೆ ಕಂಕಣ ಕಟ್ಟಿದ ಕಿಟ್ಟೆಲರು ಶಬ್ದಮಣಿದರ್ಪಣ (೧೮೭೨), ಛಂದೋಂಬುಧಿ (೧೮೭೫) ಪರಿಷ್ಕರಿಸಿ ಪ್ರಕಟಿಸಿದರು.

ತಮ್ಮ ಇಪ್ಪತ್ತೈದನೆಯ ವಯಸ್ಸಿಗೇನೆ ಸಂಶೋಧಕ ಮನೋಧರ್ಮ ರೂಢಿಸಿಕೊಂಡು ಬಿ.ಎಲ್. ರೈಸರ ನೆರಳಲ್ಲಿ ಅರಳಿದ ಅಪರೂಪದ ವಿದ್ವಾಂಸ ಚಾಮರಾಜ ನಗರದ ಪದ್ಮರಾಜ ಪಂಡಿತರು (೧೮೬೧–೧೯೪೫). ಕನ್ನಡ, ಸಂಸ್ಕೃತ, ಇಂಗ್ಲಿಷ್ ಮತ್ತು ತಮಿಳು ಭಾಷೆಗಳಲ್ಲಿ ಸ್ವತಂತ್ರ ಗ್ರಂಥ ರಚಿಸಿದ್ದಲ್ಲದೆ ಒಂದು ನೂರಕ್ಕೂ ಹೆಚ್ಚು ಕೃತಿಗಳನ್ನು ಓಲೆಗರಿಯಿಂದ ತಾವೇ ಪ್ರತಿ ಮಾಡಿ, ಸಂಪಾದಿಸಿ ತಮ್ಮದೇ ಮುದ್ರಣಾಲಯ ತೆರೆದು ಮುದ್ರಿಸಿದ ಸಾಧಕ ಸಂಶೋಧಕರು. ದೇವಾಲಯದ ಅರ್ಚಕರಾಗಿ, ಆಯುರ್ವೇದ ಪಂಡಿತರಾಗಿ, ಶಾಸನ ತಜ್ಞರಾಗಿ ಇವರು ಮಾಡಿದ ವಿದ್ವತ್‌ಕಾರ್ಯವನ್ನು ಬಿ.ಎಲ್. ರೈಸ್ ಅವರು ರಾ. ನರಸಿಂಹಾಚಾರ್ಯರೂ ಶ್ಲಾಘಿಸಿದ್ದಾರೆ. ಓಲೆಗರಿಗಳ ಗ್ರಂಥಾಲಯವನ್ನು ಸ್ವಂತ ಪರಿಶ್ರಮದಿಂದ ಖಾಸಗಿಯಾಗಿ ಪ್ರಾರಂಭಿಸಿದ ಮೊತ್ತ ಮೊದಲಿಗರಿವರು. ಹತ್ತೊಂಬತ್ತನೆಯ ಶತಮಾನದಲ್ಲಿ ತೊಡಗಿ, ೧೮೮೬ ರಿಂದ ೧೯೪೪ರ ವರೆಗೆ ವಿದ್ವತ್‌ಕ್ಷೇತ್ರದಲ್ಲಿ ಇವರ ಸಾಧನೆ ಮೈಸೂರು ಆರ್ಕಿಯಲಾಜಿಕಲ್ ಸರ್ವೆಯಲ್ಲೂ ವರದಿಯಾಗಿದೆ.

ಚಂದ್ರವಳ್ಳಿ (ಚಿತ್ರದುರ್ಗ) ಗುಡ್ಡತಟಾಕ (ಬನವಾಸಿ) ಮುಂತಾದ ಕಡೆ ನಡೆದ ಮಹತ್ವದ ಉತ್ಖನನಗಳು, ಇತಿಹಾಸ, ಒಗಟು, ಕವನಗಳು, ಕವಿಚರಿತೆ, ಕಲೆಗಳು, ಅರಮನೆಗಳು, ಬಖೈರು–ಕೈಫಿಯತ್ತುಗಳು, ಗಾದೆ, ಜನಪದ ಸಾಹಿತ್ಯ, ದೇವಾಲಯಗಳು, ಧಾರ್ಮಿಕ ಚರಿತ್ರೆ, ನಿಘಂಟುಗಳು, ನಾಣ್ಯಗಳು, ನಡುಗನ್ನಡ (ವಚನ–ಕೀರ್ತನೆ), ಪುರಾತತ್ವ, ಪ್ರಾಚೀನ ಸಾಹಿತ್ಯ – ಹಳಗನ್ನಡ, ಭಾಷಾಧ್ಯಯನ ಸಾಮಗ್ರಿ, ರಾಜವಂಶಗಳು, ಲಿಪಿ, ವಾಸ್ತು, ಶಾಸನಗಳು, ಶಾಸ್ತ್ರಗಳು, ಶಿಲ್ಪಗಳ – ವಿವಿಧ ಶೈಲಿಗಳು, ಸಂಸ್ಕೃತಿ–ಸಮಾಜ ಮತ್ತು ಸಾಹಿತ್ಯ ಅಧ್ಯಯನ, ಹಸ್ತಪ್ರತಿಗಳು, ಹಾಡುಗಳು – ಹೀಗೆ ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ ಚರಿತ್ರೆಯ ಪುನಾರಚನೆಗೆ ಪೂರಕವಾಗುವ ಇನ್ನೂ ಹತ್ತಾರು ಉಪಷ್ಟಂಬಕ ಸಾಮಗ್ರಿಯ ಸಂಚಯ ಕಾರ್ಯವನ್ನು ಶತಮಾನದ ಹಾಸಿನುದ್ದಕ್ಕೂ ಪ್ರೌಢ, ನಿಷ್ಣಾತ ಪಂಡಿತ ಮಂಡಲಿ ನಡೆಸುತ್ತ ಬಂದಿದೆ.

ಈ ಕೈಂಕರ್ಯದಲ್ಲಿ ವಿದೇಶೀಯ ವಿದ್ವಾಂಸರಂತೆಯೇ ದೇಶೀಯ ಸೂರಿಗಳೂ ತಮ್ಮನ್ನು ತೊಡಗಿಸಿಕೊಂಡಿರುವುದನ್ನು ಮನಗಾಣಬೇಕು. ರಾಜ್ಯದೊಳಗೆ ಪೂರ್ತಿ ವಿಲೀನವಾಗ ದಿದ್ದರೂ ವಿಶಾಲ ಕರ್ನಾಟಕದಲ್ಲಿ ಸಮಾವೇಶವಾಗಿದ್ದ ಕನ್ನಡವನ್ನು ಮಾತನಾಡುವ ವ್ಯಾಪ್ತ ಪ್ರದೇಶದಲ್ಲಿ ಮಹತ್ವದ ಸಂಶೋಧನ ಕಾರ್ಯ ಮಾಡಿದ ಮಹನೀಯರ ಪಂಕ್ತಿ ದೊಡ್ಡದಿದೆ. ಇವರಲ್ಲಿ ಅಗಾಧ ಕ್ಷೇತ್ರಕಾರ್ಯ ಕೈಗೊಂಡವರೂ ಮೇಜು ಕಾರ್ಯಕ್ಕೆ ಸೀಮಿತರಾದವರೂ ಹಾಗೂ ಕ್ಷೇತ್ರಕಾರ್ಯ – ಮೇಜು ಕಾರ್ಯ ಎರಡನ್ನೂ ಒಟ್ಟೊಟ್ಟಿಗೆ ಸಮದಂಡಿಯಾಗಿ

ಕೈಗೂಡಿಸಿದವರೂ ಸೇರಿದ್ದಾರೆ. ಇದಲ್ಲದೆ ಕನ್ನಡ ಭಾಷೆಯ ಜೊತೆಗೆ ಇಂಗ್ಲಿಷಿನಲ್ಲಿಯೂ ತಮ್ಮ ಶೋಧದ ಸಾರವನ್ನು ಪ್ರಕಟಿಸಿದವರೂ ಇಲ್ಲಿ ಉಲ್ಲೇಖಾರ್ಹರು.

ಹೊಸ ಹಾದಿಯ ಹೊರಳು ದಾರಿಯಲ್ಲಿ ನಿಂತು ಅದ್ಭುತ ಒಳನೋಟದ ಸೋಪಜ್ಞ ಚಿಂತಕರಾಗಿದ್ದ ಡಿ.ಆರ್. ನಾಗರಾಜರನ್ನು (೧೯೫೪–೧೯೯೮) ಮರೆಯಲಾಗದು. ಅಮೃತ ಮತ್ತು ಗರುಡ (೧೯೮೩) ಶಕ್ತಿಶಾರದೆಯ ಮೇಳ (೧೯೮೭) ನಾಗಾರ್ಜುನ (೧೯೯೩) ಅಲ್ಲಮಪ್ರಭು ಮತ್ತು ಶೈವಪ್ರತಿಭೆ (೧೯೯೮) ಕೃತಿಗಳಲ್ಲಿ ವಿಮರ್ಶೆಯ ಜೊತೆ ಜೊತೆಯಲ್ಲಿ ಸಾಂಸ್ಕೃತಿಕ ಚಿಂತನೆಯೂ ಹೆಣೆದುಕೊಂಡು ಮನನ ಮಾಡುವಂತಹ ಸೂಚನೆಗಳನ್ನು ಕೀಲಿಸಿದ್ದಾರೆ.

ಸಂಸ್ಕೃತಿ ಅಧ್ಯಯನ

ಸಂಶೋಧನ ಪರಿಕಲ್ಪನೆ ಪ್ರವೃತ್ತಿಗಳಲ್ಲಿ ವಿಧಾನಗಳಲ್ಲಿ ಬದಲಾವಣೆಗಳುಂಟು. ತಳಮೂಲ ಜನಪದ ಸಂಸ್ಕೃತಿಯ ಗಂಭೀರ ಅಧ್ಯಯನದತ್ತ ಸಂಶೋಧನ ಪಥವನ್ನು ಹೊರಳಿಸಿದ್ದು ಒಂದು ಹೊಸ ಸ್ವಾಗತಾರ್ಹ ಮಾರ್ಪಾಟು. ಹೊನ್ನಾಳಿ ತಿಪ್ಪೇರುದ್ರ ಸ್ವಾಮಿಯವರ (೧೯೨೮–೧೯೯೪) ಕರ್ನಾಟಕ ಸಂಸ್ಕೃತಿ ಸಮೀಕ್ಷೆ (೧೯೬೮), ಶಂಬಾ ಜೋಷಿಯವರ (೧೮೯೬–೧೯೯೧) ಕರ್ನಾಟಕ ಸಂಸ್ಕೃತಿಯ ಪೂರ್ವಪೀಠಿಕೆ ಪುಸ್ತಕದ ಎರಡು ಭಾಗಗಳು ಸಂಸ್ಕೃತಿ ಅಧ್ಯಯನಕ್ಕೆ ದೊಡ್ಡ ಹಾಸನ್ನು ಒದಗಿಸಿದೆ. ಹಾರೋಗದ್ದೆ ಮಾನಪ್ಪ ನಾಯಕರ (೧೯೩೧–೨೦೦೦) ಸಂಶೋಧನ ಮೌಲ್ಯದೊಂದಿಗೆ ಸಾಂಸ್ಕೃತಿಕ ಮಹತ್ವವಿರುವ ಬಗೆಬಗೆಯ ಬಿಡಿಲೇಖನಗಳು ಅವರ ಅಂಕಣ ಬರೆಹದ ಸಂಕಲನದಲ್ಲಿ ಸೇರಿವೆ. ವಿವಿಧ ಬುಡಕಟ್ಟು ಸಂಸ್ಕೃತಿಗಳ ಸಮೀಕ್ಷೆಗಳು, ಸಮಸಂಸ್ಕೃತಿ ಹಾಗೂ ಸಹ ಸಂಸ್ಕೃತಿಗಳ ಸಂಶೋಧನ ಸಾಮಗ್ರಿಯಿರುವ ಹತ್ತಾರು ಸಂಸ್ಕೃತಿ ಅಧ್ಯಯನ ಸಂಬಂಧ ಉತ್ತಮ ಗ್ರಂಥಗಳು ಕರ್ನಾಟಕ ಸಾಹಿತ್ಯ ಅಕಾಡಮಿ ಬರಗೂರು ರಾಮಚಂದ್ರಪ್ಪನವರ ಮಾರ್ಗದರ್ಶನದಲ್ಲಿ ಹೊರತಂದಿರುವುದನ್ನು ಅವಶ್ಯ ಗಮನಿಸಬೇಕು.

ಸಾಹಿತ್ಯ, ಸಂಸ್ಕೃತಿ ಅಧ್ಯಯನ ಕ್ಷೇತ್ರಗಳಲ್ಲದೆ ಕೃಷಿ ವಿಜ್ಞಾನ ಕ್ಷೇತ್ರದಲ್ಲಿ ಮಹತ್ತರವಾದ ಸಂಶೋಧನೆಗಳು ನಡೆದಿವೆ. ಬೆಂಗಳೂರು ಧಾರವಾಡಗಳಲ್ಲಿ ಉನ್ನತ ವ್ಯಾಸಂಗ ಮತ್ತು ಸಂಶೋಧನೆಗೆ ಕೃಷಿವಿಶ್ವವಿದ್ಯಾಲಯಗಳು ಸ್ಥಾಪಿತವಾದುವು. ಕನ್ನಡ ಬಲ್ಲ ರೈತರಿಗೆ ಅನುಕೂಲವಾಗುವ ಪ್ರಕಟಣೆಗಳು ಹೊರಬಂದಿವೆ. ಕೃಷಿಗೆ ಸಂಬಂಧಿಸಿದ ಸಂಶೋಧನೆಗಳು ಕರ್ನಾಟಕದಲ್ಲಿ ಹಸಿರು ಕ್ರಾಂತಿಗೆ ನೆರವಾಗುವ ಅನ್ವಯಿಕ ಸಂಶೋಧನೆಗಳಾಗಿದ್ದು ಒಕ್ಕಲುತನಕ್ಕೂ ಸಹಕಾರಿಯಾಗಿವೆ. ಕೇಂದ್ರ ಮತ್ತು ರಾಜ್ಯ ಸರ್ಕಾರದ ನೆರವಿನಿಂದ ಅರಣ್ಯ ಇಲಾಖೆ, ತೋಟಗಾರಿಕೆ, ಮೀನುಗಾರಿಕೆ, ಪ್ರಾಚ್ಯವಸ್ತು ಇಲಾಖೆ, ಭೂಗರ್ಭ ಇಲಾಖೆ, ಹೈನುಗಾರಿಕೆ ಮುಂತಾದ ಇಲಾಖೆಗಳಲ್ಲಿಯೂ ಸಂಶೋಧನೆ ನಡೆದಿರುವುದನ್ನು ಮನಗಾಣಬೇಕು.

ಇದರಂತೆ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ (ತಾತಾ ವಿಜ್ಞಾನ ಮಂದಿರ), ಆಹಾರ ಸಂಶೋಧನಾ ಸಂಸ್ಥೆ, ರಾಷ್ಟ್ರೀಯ ಏರೊನಾಟಿಕಲ್ ಸಂಸ್ಥೆ, ವಾಕ್–ಶ್ರವಣ ಸಂಸ್ಥೆ, ಕ್ಷಯರೋಗ ಸಂಶೋಧನ ಕೇಂದ್ರ, ಕ್ಷೀರೋದ್ಯಮ ಸಂಶೋಧನ ಕೇಂದ್ರ, (ಗೌರೀಬಿದನೂರಿನ) ಭೂಕಂಪನ ಮಾಪನ ಕೇಂದ್ರ, ಆಕಾಶ ಸಂಶೋಧನ ಕೇಂದ್ರ ಮೊದಲಾದ ಸರ್ಕಾರ ಅಥವಾ ಖಾಸಗಿ ಸಂಸ್ಥೆಗಳು ನಡೆಸುತ್ತಿರುವ ಸಂಶೋಧನ ಕೇಂದ್ರಗಳು ಕಾರ್ಯನಿರತವಾಗಿದ್ದು ಮನುಷ್ಯ ಸಮಾಜದ ಸುಖಕ್ಕೆ ನೆರವಾಗಿವೆ. ಮಿಥಿಕ್ ಸೊಸೈಟಿ

(ಬೆಂಗಳೂರು), ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ (ಉಡುಪಿ) ಇತಿಹಾಸ, ಮನಸ್‌ಶಾಸ್ತ್ರ, ಅರ್ಥಶಾಸ್ತ್ರ, ಸಂಸ್ಕೃತಿ ಅಧ್ಯಯನ ಮತ್ತು ಸಮಾಜ ಶಾಸ್ತ್ರ ಮೊದಲಾದ ಮಾನವಿಕ ವಿಭಾಗಗಳಲ್ಲಿಯೂ ಗಣನೀಯ ಸಂಶೋಧನೆ ಸಾಗಿದೆ. ಅಲ್ಲದೆ ಆಯಾ ಕ್ಷೇತ್ರಕ್ಕೆ ಸಂಬಂಧಿಸಿದ ಶೋಧನೆಗಳನ್ನು ಪರಿಚಯಿಸುವ ಪುಸ್ತಕಗಳು ಕನ್ನಡದಲ್ಲಿಯೂ ಬಂದಿವೆ. [ಪ್ರಸ್ತುತ ನಮ್ಮ ಸಂಶೋಧನೆಯ ಸಮೀಕ್ಷೆ - ವಿವಕ್ಷೆಗಳು ಕನ್ನಡ ಸಾಹಿತ್ಯದ ಪರಿಪ್ರೇಕ್ಷೆಗೆ ಪರಿಮಿತವಾದುದು. ಅದರಿಂದ ಅದರಾಚೆಯ ವಲಯಗಳಿಗೆ ಈ ಅನುಸಂಧಾನ ಹೆಜ್ಜೆ ಹಾಕುವ ಅಗತ್ಯವಿಲ್ಲ.]

ಸಮಾಜ ವಿಜ್ಞಾನ, ಸಸ್ಯವಿಜ್ಞಾನ, ಮನೋವಿಜ್ಞಾನ ಸಂಬಂಧ ವಿಷಯಗಳನ್ನು ಆರಿಸಿ ಒಳ್ಳೆಯ ಸಂಶೋಧನಾತ್ಮಕ ಬರವಣಿಗೆ ಇಪ್ಪತ್ತನೆಯ ಶತಮಾನದ ಉತ್ತರಾರ್ಧದ ದಶಕಗಳಲ್ಲಿ ಗಣನೀಯ ಪ್ರಮಾಣದಲ್ಲಿ ನಡೆಯಿತು. ಬಿ.ಜಿ.ಎಲ್. ಸ್ವಾಮಿಯವರ (೧೯೧೬-೧೯೮೦) ಹಸುರು ಹೊನ್ನು (೧೯೭೬), ಶಾಸನಗಳಲ್ಲಿ ಗಿಡಮರಗಳು (೧೯೭೫) ಸಸ್ಯಜೀವಿ - ಪ್ರಾಣಿಜೀವಿ (೧೯೭೯), ನಮ್ಮ ಹೊಟ್ಟೆಯಲ್ಲಿ ದಕ್ಷಿಣ ಅಮೆರಿಕ ಮುಂತಾದ ಪುಸ್ತಕಗಳು ಕುತೂಹಲ ಅರಳಿಸಿದವು. 'ರಾಶಿ' ಕಾವ್ಯನಾಮದ ಆರ್. ಶಿವರಾಂ (೧೯೦೫-೧೯೮೪) ಅವರು ರಚಿಸಿದ ಮನೋನಂದನ (೧೯೬೫), ಅಲರ್ಜಿ (೧೯೭೦) ಮನಮಂಥನ (೧೯೭೪) ಮನೋವಿಜ್ಞಾನದ ಬರಹವಾಗಿದ್ದು ವೈವಿಧ್ಯವನ್ನು ಊಡಿದುವು. ಮಿರ್ಜಿ ಅಣ್ಣಾರಾಯರ (೧೯೧೮-೧೯೭೫) ಜೈನಧರ್ಮ (೧೯೫೨), ರತ್ನಕರಂಡಕ ಶ್ರಾವಕಾಚಾರ (೧೯೬೦) ಮತ್ತು ಭಾರತೀಯ ಸಂಸ್ಕೃತಿಗೆ ಜೈನಧರ್ಮದ ಕೊಡುಗೆ (೧೯೭೧) ಆಕರಗ್ರಂಥಗಳಾದುವು. 'ಶ್ರೀರಂಗ' ಕಾವ್ಯನಾಮದ ಆದ್ಯರಂಗಾಚಾರ್ಯರು (೧೯೦೪-೧೯೮೪) ಭಾಷಾಶಾಸ್ತ್ರ ವಿಚಾರವಾಗಿ ಬರವಣಿಗೆಗೆ ತೊಡಗಿದರೂ ಆಮೇಲೆ ರಂಗಭೂಮಿಯತ್ತ ಹೊರಳಿದರು. ಕನ್ನಡದಲ್ಲೂ ಆಂಗ್ಲಭಾಷೆಯಲ್ಲೂ ಭರತನ ನಾಟ್ಯಶಾಸ್ತ್ರ ಮತ್ತು ಸಂಸ್ಕೃತ ನಾಟಕ ಪರಂಪರೆಯ ಬಗ್ಗೆ ಸಂಶೋಧನೆ ಮಾಡಿದರು. ತೀ.ನಂ. ಶ್ರೀಕಂಠಯ್ಯನವರ (೧೯೦೬-೧೯೬೬) ಭಾರತೀಯ ಕಾವ್ಯ ಮೀಮಾಂಸೆ (೧೯೫೩) ಗ್ರಂಥವಲ್ಲದೆ ಕನ್ನಡ ಮಧ್ಯಮ ವ್ಯಾಕರಣ (೧೯೩೯), ಸಮಾಲೋಕನ (೧೯೫೮) ನಂಬಿಯಣ್ಣನ ರಗಳೆ (೧೯೪೭) ಗದಾಯುದ್ಧ ಸಂಗ್ರಹ ಗ್ರಂಥಗಳೂ ಸಂಶೋಧನಕಾರರಿಗೆ ಆಕರ ಸ್ವರೂಪಿ ಯಾದುವು. ಸೇಡಿಯಾಪು ಕೃಷ್ಣಭಟ್ಟರು (೧೯೦೨-೧೯೬೬) ಕನ್ನಡ ವರ್ಣಗಳು, ಛಂದಸ್ಸು, ದೇಶನಾಮಗಳು, ನಿಘಂಟು ಮುಂತಾದ ಶಾಸ್ತ್ರ ಸಾಹಿತ್ಯ ಆಧರಿಸಿದ ಸಂಶೋಧನೆಗೈದರು.

ವಿಶ್ವವಿದ್ಯಾಲಯೇತರ ಸಂಶೋಧಕರು

ಕಾಲೇಜು, ವಿಶ್ವವಿದ್ಯಾಲಯಗಳಲ್ಲಿ ಕಲಿಸುತ್ತಿದ್ದ ಶಿಕ್ಷಕ ವೃಂದಕ್ಕೆ ಅಧಿಕಾಧಿಕ ಸವಲತ್ತುಗಳು ಸುಲಭವಾಗಿ ಸಿಗುತ್ತವೆ. ಸಹಜವಾಗಿಯೇ ಅಲ್ಲಿನ ಅಧ್ಯಾಪಕರಿಗೆ ಅನುಕೂಲದೊಂದಿಗೆ ಅವಕಾಶವೂ ಒದಗಿ ಬರುತ್ತವೆ. ಹಾಗೆಂದ ಮಾತ್ರಕ್ಕೆ ಸಂಶೋಧನೆ ವಿಶ್ವವಿದ್ಯಾಲಯಗಳ ಇಲ್ಲವೇ ಅಧ್ಯಾಪಕರ ಗುತ್ತಿಗೆ ಏನಲ್ಲ. ಸಂಶೋಧನೆ ಆ ಬಗೆಯ ಪ್ರವೃತ್ತಿ ಮತ್ತು ಪೂರ್ವತಯಾರಿ ಇರುವ ಎಲ್ಲರಿಗೂ ಸೇರಿದ್ದು. ಆದರೆ ನೆನಪಿಡಬೇಕಾದ ಮಾತು - ಕಲಿತವರೆಲ್ಲ ಸಂಶೋಧಕರಾಗಲಾರರು. ಆ ಬಗೆಯ ಮನೋಧರ್ಮವನ್ನು ರೂಢಿಸಿ ರೂಪಿಸಿಕೊಂಡವರಿಗೆ ಸಂಶೋಧನೆ ಒಲಿದುಬರುತ್ತದೆ.

ಸಂಶೋಧನೆ ಎಂಬ ಶಬ್ದ ಹೇಳಿದೊಡನೆ ತಟ್ಟಕ್ಕನೆ ಅದು ವಿಶ್ವವಿದ್ಯಾಲಯಗಳವರು ಮಾಡುವಂತಹುದು ಎಂಬ ಭಾವನೆ ತಗುಳ್ಳುತ್ತದೆ. ಅದು ಹುಸಿನಂಬುಗೆಯೇ ಹೊರತು

ದಿಟವಲ್ಲ. ವಿಶ್ವವಿದ್ಯಾಲಯೇತರ ಖಾಸಗಿ ವಿದ್ವಾಂಸರ ಸಂಶೋಧನೆಗಳನ್ನು ಕುರಿತೂ ಹೇಳಬೇಕಾದ್ದಿದೆ. ಯಾವ ವಿದ್ಯಾರ್ಥಿ ವೇತನವನ್ನೂ ಪಡೆಯದೆ ಸ್ವಯಿಚ್ಛೆಯಿಂದ ಬೆಲೆಯುಳ್ಳ ಸಂಶೋಧನೆಗಳು ಅವರುಗಳಿಂದ ಹೊರಬಂದಿವೆ. ಸಾಹಿತ್ಯೇತರ ಕ್ಷೇತ್ರದಲ್ಲಿ ಉದ್ಯೋಗದಲ್ಲಿದ್ದು ಅಮೂಲ್ಯ ಶೋಧನ ಮೌಲ್ಯದ ಕೃತಿಗಳನ್ನು ಪ್ರಕಟಿಸಿದ ಅಧಿಕಾರಿ ಸಂಶೋಧಕರಿದ್ದಾರೆ. ವಯಸ್ಸಿನ ನಿರ್ಬಂಧ ಸಂಶೋಧನೆಗೆ ಇಲ್ಲ. ಸಂಶೋಧಿಸುವ ಮನೋಧರ್ಮ ಮುಖ್ಯ. ಇದನ್ನು ದೃಢೀಕರಿಸುವ ಅನ್ವೇಷಕ ಬುದ್ಧಿಯ ಸಂಶೋಧಕರು ಕರ್ನಾಟಕದಲ್ಲಿದ್ದು ಈ ಕ್ಷೇತ್ರಕ್ಕೆ ವಿಶಿಷ್ಟ ಕೊಡುಗೆ ನೀಡಿದ್ದಾರೆ.

ಪಾಳೆಯಗಾರರ ಇತಿಹಾಸ ಹುಡುಕಿ ತೆಗೆದ ಎಂ.ಎಸ್. ಪುಟ್ಟಣ್ಣ (೧೮೫೪–೧೯೩೦), ಸರ್ವಜ್ಞ, ಮೋಳಿಗೆ ಮಾರಯ್ಯ, ಮಹಾದೇವಿ, ಆದಯ್ಯಾದ್ಯರ ವಚನಗಳನ್ನು ಸಂಗ್ರಹಿಸಿದ ರೆವರೆಂಡ್ ಉತ್ತಂಗಿ ಚೆನ್ನಪ್ಪ (೧೮೮೧–೧೯೬೨), ವಚನ ಶಾಸ್ತ್ರ ಪಿತಾಮಹ ಫ.ಗು. ಹಳಕಟ್ಟಿ (೧೮೮೦–೧೯೬೪), ಮಂಜೇಶ್ವರ ಗೋವಿಂದ ಪೈ (೧೮೮೩–೧೯೬೩), ಕಪಟರಾಳ ಕೃಷ್ಣರಾವ್ (೧೮೮೯–೧೯೯೬), ಎಂ.ಆರ್. ಶ್ರೀನಿವಾಸಮೂರ್ತಿ (೧೮೯೩–೧೯೫೩), ಶಂ.ಬಾ. ಜೋಶಿ (೧೮೯೬–೧೯೯೧) ಮೊದಲಾದ ಇನ್ನೂ ಹಲವು ಸಂಶೋಧಕವರೇಣ್ಯರು ವಿಶ್ವವಿದ್ಯಾನಿಲಯಗಳ ಚೌಕಟ್ಟಿನಿಂದ ಹೊರಗಿದ್ದವರು.

ಜಾನಪದ

ಗ್ರಂಥಸ್ಥ ಸಾಹಿತ್ಯದ ಸಂಶೋಧನೆಯಲ್ಲಿ ತೊಡಗಿದ್ದ ವಿದ್ವಾಂಸರ ಗಮನ ಶಾಸನ ಹಾಗೂ ಜನಪದ ಸಾಹಿತ್ಯ ಸಂಗ್ರಹ ಮತ್ತು ಅಧ್ಯಯನದತ್ತ ಹೊರಳಿತು. ಇದು ಬಹು ಮಹತ್ವದ ತಿರುವು. ಜನಪದ ಸಾಹಿತ್ಯ ಸಂಗ್ರಹ ಕಾರ್ಯ ಇಪ್ಪತ್ತನೆಯ ಶತಮಾನದಲ್ಲಿ ಸ್ವಾತಂತ್ರ್ಯ ಪೂರ್ವ ಕಾಲಘಟ್ಟದಲ್ಲಿಯೇ ಆರಂಭವಾಯಿತು. ಅದಕ್ಕೂ ಬಹಳ ಹಿಂದೆಯೇ ಬಿ. ಪದ್ಮರಾಜ ಪಂಡಿತರು ೧೮೯೫ರಲ್ಲಿ 'ಕನ್ನಡ ಗಾದೆಗಳ ಮೊದಲನೆಯ ಪುಸ್ತಕ'–ವನ್ನು ಬರೆದು ಮುದ್ರಿಸಿ ಜಾನಪದ ಮುಂಗೋಳಿಯಾದರು. ವಿದೇಶಿ ವಿದ್ವಾಂಸರು ಕೂಡ ಗಾದೆಗಳು, ಲಾವಣಿಗಳು ಮತ್ತು ಒಡಪುಗಳ ಸಂಗ್ರಹ ಕಾರ್ಯಕ್ಕೆ ಗಮನಕೊಟ್ಟರು. ಉತ್ತರ ಕರ್ನಾಟಕದಲ್ಲಿ ಸಿಂಪಿ ಲಿಂಗಣ್ಣನವರು ಹಾಗೂ ಹಲಸಂಗಿ ಗೆಳೆಯರು ಸಂಗ್ರಹದಲ್ಲಿ ಮುಂದಾದರು. ಗರತಿಯ ಹಾಡು ಮೇಲ್ಪಂಕ್ತಿ ಹಾಕಿದ ಆರಂಭದ ಸಂಗ್ರಹವೆಂಬ ಕೀರ್ತಿಗೆ ಅರ್ಹವಾಯಿತು. ಬೆಟಗೇರಿ ಕೃಷ್ಣಶರ್ಮರು (ಆನಂದಕಂದ) ಮುಂಚೂಣಿಯಲ್ಲಿ ನಿಂತರು. ಬಿ.ಎಸ್. ಗದ್ದಗಿಮಠರು (೧೯೧೭–೧೯೬೦) ಜಾನಪದ ಅಧ್ಯಯನದಲ್ಲಿ ಮೇಲಾಳುವೆನಿಸಿ ಸಂಶೋಧನ ಮಹಾಪ್ರಬಂಧ ಬರೆದ ಮೊದಲ ಜನಪದ ತಜ್ಞರಾದರು. ಮಂಟೆಸ್ವಾಮಿ, ಮಲೆಮಾದೇಶ್ವರ, ಸಿದ್ಧಪ್ಪಾಜಿ, ಜುಂಜಪ್ಪ, ಮೊದಲಾದ ಜನಪದರ ಆರಾಧ್ಯರ ಚರಿತೆಗಳು ಮಹಾಕಾವ್ಯದ ಸತ್ವ ತತ್ವಗಳಿಂದ ನಿಬಿಡವಾಗಿರುವುದು ಮನವರಿಕೆ ಆಯಿತು.

ಇತ್ತ ಹಳೆಯ ಮೈಸೂರು ಕಡೆ ಕರಾಕೃ, ಜೀಶಂಪ, ದೇಜಗೌ, ಎಚ್.ಎಲ್. ನಾಗೇಗೌಡ ಮುಂತಾದವರು ಜನಪದ ಸಾಹಿತ್ಯ ಸಂಶೋಧನೆ, ಸಂಪಾದನೆ ಮತ್ತು ಅಧ್ಯಯನದ ಅಗತ್ಯ ಮತ್ತು ಪ್ರಾಮುಖ್ಯವನ್ನು ಮನಗಾಣಿಸುವಲ್ಲಿ ಸಫಲರಾದರು. ಸಮಗ್ರ ಕರ್ನಾಟಕದಲ್ಲಿ ಹೊಸ ಸಂಚಲನದ ಹುರುಪು ಹಬ್ಬಿತು. ರಾಮನಗರದ ಬಳಿ ಜನಪದ ಲೋಕ ಸ್ಥಾಪಿತವಾಯಿತು. ಜಾನಪದಕ್ಕೆ ಉನ್ನತ ಶಿಕ್ಷಣದಲ್ಲಿ ಕೂಡ ಎಡೆದೊರೆತುದಲ್ಲದೆ ಪ್ರತ್ಯೇಕ ವಿಭಾಗದ ಸ್ಥಾನ ಕಲ್ಪಿತವಾಯಿತು. ನಾಡಿನ ಉದ್ದಗಲದಲ್ಲಿ ಜಾನಪದ ನವ ಮನ್ವಂತರದ ಅಲೆಗಳೆದ್ದು ಕಡೆಗೆ ಜಾನಪದ ವಿಶ್ವವಿದ್ಯಾನಿಲಯವೂ ಆರಂಭವಾಯಿತು. ಕನ್ನಡ ಸಾಹಿತ್ಯ ಪರಿಷತ್ತಿನ

ಆಶ್ರಯದಲ್ಲಿ ಚಂದ್ರಶೇಖರ ಕಂಬಾರರ ನೇತೃತ್ವದಲ್ಲಿ ಜನಪದ ವಿಶ್ವಕೋಶ ಕೂಡ ಪ್ರಕಟವಾಯಿತು. [ಜನಪದ ಸಾಹಿತ್ಯ ಕ್ಷೇತ್ರದ ಸಮಗ್ರ ವಿವರಗಳಿಗೆ ನೋಡಿ ಈ ಮಾಲೆಯ ಸಂಪುಟ – ಎಂಟು]. ಬಿ.ಎ. ವಿವೇಕ ರೈ, ಹಿ.ಚಿ. ಬೋರಲಿಂಗಯ್ಯ, ಪುರುಷೋತ್ತಮ ಬಿಳಿಮಲೆ, ಚಿನ್ನಪ್ಪಗೌಡ, ಹಿ.ಶಿ. ರಾಮಚಂದ್ರೇಗೌಡ, ಅಂಬಳಿಕೆ ಹಿರಿಯಣ್ಣ, ಸೋಮಶೇಖರ ಇಮ್ರಾಪುರ, ಎಂ.ಎಸ್. ಸುಂಕಾಪುರ, ಎಂ.ಎಸ್. ಲಠ್ಠೆ, ಎಂ.ಎ. ಜಯಚಂದ್ರ, ಡಿ. ಲಿಂಗಯ್ಯ, ಅರವಿಂದ ಮಾಲಗತ್ತಿ, ಸಿದ್ಧಲಿಂಗಯ್ಯ, ಮುಂತಾದವರು ತಮ್ಮ ಸಂಶೋಧನೆಗಳಿಂದ ಜಾನಪದ ಕ್ಷೇತ್ರದ ಕ್ಷಿತಿಜವನ್ನು ವಿಸ್ತರಿಸಿದ್ದಾರೆ.

ಸಂಶೋಧನ ಪತ್ರಿಕೆಗಳು

ಬಿಬ್ಲಿಯೋಥಿಕ ಕರ್ನಾಟಿಕ ಹಾಕಿಕೊಟ್ಟ ಮಾದರಿಯನ್ನು ಸ್ಥಳೀಯ ಸಂಘಟನೆಗಳು ಬೆಳೆಸಿದುವು. ಕರ್ಣಾಟಕ ಕಾವ್ಯಮಂಜರಿ, ಕರ್ಣಾಟಕ ಕಾವ್ಯ ಕಲಾನಿಧಿ, ಗ್ರಂಥ ಪ್ರಕಾಶಿಕೆ, ಬುಧಜನಮನೋರಂಜಿನಿ ಮುಂತಾದ ದೇಶೀ ಗ್ರಂಥಮಾಲೆ ಪತ್ರಿಕೆಗಳು ತಲೆದೋರಿದುವು. ತಾಳೆಗರಿಗಳಲ್ಲಿ ಕುಳಿತಿದ್ದ ಸಾಹಿತ್ಯ ಮತ್ತು ಶಾಸ್ತ್ರಗಳ ನಿಧಿ ನಿಕ್ಷೇಪವನ್ನು ಪ್ರತಿಯೆತ್ತಿ, ಪರಿಶೋಧಿಸಿ, ಮುದ್ರಿಸಿ ಕನ್ನಡಿಗರಿಗೆ ಸಿಗುವಂತೆ ಮಾಡಿದ ಹಿರಿಮೆ ಈ ಪತ್ರಿಕೆಗಳದು. ಇಪ್ಪತ್ತನೆಯ ಶತಮಾನದಲ್ಲಿ ಸುಮಾರು ಆರೇಳು ದಶಕಗಳ ಕಾಲ ಸಂಶೋಧನಾತ್ಮಕ ವಿಷಯಗಳಿಗೆ ಮೀಸಲಾಗಿರುವ ಶ್ರೇಷ್ಠ ತ್ರೈಮಾಸಿಕವೆನಿಸಿತ್ತು ಪ್ರಬುದ್ಧ ಕರ್ನಾಟಕ. ಕಥೆ ಕವನಾದಿ ಸೃಜನಾತ್ಮಕ ವಿಷಯದ ಬರೆಹಗಳಿಗೂ ಸರಿಸಮನಾದ ಮನ್ನಣೆ ಇದ್ದರೂ ಪ್ರೌಢ ಶೋಧನ ಲೇಖನಗಳಿಗೆ ಆದ್ಯತೆಯಿತ್ತು.

ಈ ಪತ್ರಿಕೆಯ ಹುಟ್ಟು ಬೆಳವಣಿಗೆ ಕುತೂಹಲಕರವಾಗಿದೆ. ಕನ್ನಡ ಭಾಷೆ ಸಾಹಿತ್ಯ ಕುರಿತ ಬರೆಹಗಳಿರುವ, ಉತ್ತಮ ಅಭಿರುಚಿಯ ಓದುಗರಿಗೂ ಬಲ್ಲಿದರಿಗೂ ಪ್ರಿಯವಾಗುವ ತ್ರೈಮಾಸಿಕ ಪತ್ರಿಕೆಯನ್ನು ಹೊರತರಲು ಮುಂದಾದವರು ಎ.ಆರ್. ಕೃಷ್ಣ ಶಾಸ್ತ್ರಿಗಳು. ಅವರು ಆಗ ಬೆಂಗಳೂರು ಸೆಂಟ್ರಲ್ ಕಾಲೇಜಲ್ಲಿ ಅಧ್ಯಾಪಕರಾಗಿದ್ದರು. ಸೆಂಟ್ರಲ್ ಕಾಲೇಜಲ್ಲಿ ಇದ್ದ ಕರ್ಣಾಟಕ ಸಂಘದ ಆಶ್ರಯದಲ್ಲಿಯೇ ಸಂಘದ ಅಂಗವಾಗಿ ಈ ಪತ್ರಿಕೆಯನ್ನು ಮುದ್ರಿಸಲು ಸಂಕಲ್ಪಿಸಿದರು. ಶ್ರೀರಾಮಕೃಷ್ಣಾಶ್ರಮದ ವಿದೇಹಾನಂದರು ಕನ್ನಡಿಗರಿಗೊಂದು ಮೇಲ್ಮಟ್ಟದ್ದ ಪತ್ರಿಕೆಯನ್ನು ಪ್ರಕಟಿಸಲು ಸಲಹೆ ಇತ್ತರು. ಇಂಗ್ಲಿಷಿನಲ್ಲಿರುವ 'ಪ್ರಬುದ್ಧ ಭಾರತ' ಪತ್ರಿಕೆ ಮಾದರಿಯಲ್ಲಿ ಕನ್ನಡದಲ್ಲಿಯೂ 'ಪ್ರಬುದ್ಧ ಕರ್ಣಾಟಕ' ಹೊರಡಿಸಬೇಕೆಂದು ಪತ್ರಿಕೆಯ ಹೆಸರನ್ನು ಸಹ ಅವರು ಸೂಚಿಸಿದರು. ಅದರಂತೆ ೧೯೧೯ರಲ್ಲಿ ಯುಗಾದಿಯಂದು ಎ.ಆರ್.ಕೃ. ಸಂಪಾದಕತ್ವದಲ್ಲಿ ಮೊದಲ ಸಂಚಿಕೆ ಬಿಡುಗಡೆಯಾಗಿ ಇಂದಿಗೂ ಈ ಪತ್ರಿಕೆ ಜೀವಂತವಾಗಿರುವುದು ಒಂದು ದಾಖಲೆ.

ಪ್ರಬುದ್ಧ ಕರ್ನಾಟಕ, ೧೯೧೯ ರಿಂದ ೧೯೩೧ರ ವರೆಗೆ ಸೆಂಟ್ರಲ್ ಕಾಲೇಜು ಕರ್ಣಾಟಕ ಸಂಘದ ಅಂಗವಾಗಿದ್ದು ೧೯೩೨ ರಿಂದ ಮೈಸೂರು ವಿಶ್ವವಿದ್ಯಾಲಯದ ವಶಕ್ಕೆ ಸೇರಿ ನೂರು ವರ್ಷಗಳ ಹೊಸ್ತಿಲಿಗೆ ಬಂದಿದ್ದು ಚಿರಕಾಲ ಬಾಳಿದೆ. ಕನ್ನಡ ಸಾಹಿತ್ಯದ ಸುಮಾರು ಒಂದು ಶತಮಾನದ ಸೃಜನ–ಸೃಜನೇತರ ರಂಗಗಳಲ್ಲಿ ನಡೆದ ಪ್ರಯೋಗಗಳ ವಿವರಗಳನ್ನು ಈ ಪತ್ರಿಕೆಯಿಂದ ಅರಿಯಬಹುದು. ಪ್ರಬುದ್ಧ ಕರ್ನಾಟಕವಲ್ಲದೆ ಕಾಲಕ್ರಮೇಣ ವಿಜ್ಞಾನ ಕರ್ನಾಟಕ ಹಾಗೂ ಮಾನವಿಕ ಕರ್ಣಾಟಕ ಎಂಬ ಎರಡು ಪ್ರತ್ಯೇಕ ಪತ್ರಿಕೆಗಳು ಬರತೊಡಗಿದುವು. ಜಯಂತಿ, ಜಯಕರ್ನಾಟಕ, ಜೀವನ, ವಾಗ್ಭೂಷಣ, ಸಾಧನೆ, ಪರಿಷತ್ಪತ್ರಿಕೆ, ಕರ್ನಾಟಕ ಭಾರತಿ, ಮೊದಲಾದುವು ಉದಾತ್ತ ಧ್ಯೇಯ, ಉದ್ದೇಶ ಹೊತ್ತು ಹುಟ್ಟಿದ ವಿದ್ವತ್ತಿನ ಪ್ರಸರಣಕ್ಕೆ ಮೀಸಲಾದ ಪತ್ರಿಕೆಗಳು.

ಈ ಬಗೆಯ ಇನ್ನೂ ಕೆಲವು ಪತ್ರಿಕೆಗಳು ನಿಡುಗಾಲ ನಿಲ್ಲದೆ ನಿಂತು ಹೋದುವು. ದೀರ್ಘಕಾಲ ನಡೆಸಲು ಆಗದೆ ಹಲಕೆಲವು ಸಂಚಿಕೆ ಸಂಪುಟಗಳನ್ನು ಮುದ್ರಿಸಲಷ್ಟೆ ಸಾಧ್ಯವಾದ ಮಾಸಿಕ, ತ್ರೈಮಾಸಿಕ, ಷಾಣ್ಮಾಸಿಕ ಹಾಗೂ ವಾರ್ಷಿಕ ಸಂಚಿಕೆಗಳಲ್ಲಿ ಅಚ್ಚಾದ ಅಪರೂಪದ ಸಂಶೋಧನಾತ್ಮಕ ಲೇಖನಗಳು ಹೆಚ್ಚು ಪ್ರಚಾರಕ್ಕೆ ಬರಲಿಲ್ಲ. ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿ ಆ ಬಗೆಯ ನಿಂತು ಹೋದ ಹಳೆಯ ಸಂಚಿಕೆ ಉತ್ತಮ ಬರೆಹಗಳನ್ನು ಒಂದೆಡೆ ಕೂಡಿಸಿ, ವಿಷಯವಾರು ವಿಂಗಡಿಸಿ ಹೊರತರುವುದು ಇನ್ನೂ ಆಗಬೇಕಾದ ಉಪಯುಕ್ತ ಕೆಲಸ. ಇದೇ ಬಗೆಯಲ್ಲಿ ನಾನಾ ಸಂಭಾವನೆ (ಗೌರವ) ಗ್ರಂಥಗಳಲ್ಲಿ ಸೇರ್ಪಡೆಯಾಗಿದ್ದು ಬೇರೆಲ್ಲೂ ಪುಸ್ತಕ ರೂಪದಲ್ಲಿ ಓದುಗರಿಗೆ ಸಿಗದಿರುವ ಅಮೂಲ್ಯ ಸಂಶೋಧನ ಬರೆಹಗಳ ಸಂಕಲನಗಳೂ ಸಿದ್ಧವಾಗುವುದು ಅವಶ್ಯವಿದ್ದು ಯಾರಾದರೂ, ಸಂಘವಾಗಲಿ ಸಂಸ್ಥೆಯಾಗಲಿ, ಜರೂರು ಮಾಡಬೇಕಾದ್ದು. ಸಂಶೋಧನೆಗೇ ಮೀಸಲಾದ 'ಸಂಶೋಧನ ವ್ಯಾಸಂಗ' ಪತ್ರಿಕೆಯನ್ನು ಪ್ರೊ. ಸಂಗಮೇಶ ಸವದತ್ತಿಮಠರು ನಡೆಸುತ್ತಿರುವುದು ಗಮನಾರ್ಹ. ಇತ್ತೀಚೆಗೆ ಮೈಸೂರಿಂದ ಪ್ರಕಟವಾಗುತ್ತಿರುವ ಅರುಹು-ಕುರುಹು ಆಸಕ್ತಿ ಮೂಡಿಸಿದೆ.

ಕೃತಿ ಪರಿಷ್ಕರಣದ ಜಂಗಮ ಆಯಾಮ

ಸಂಶೋಧನೆಗಳಲ್ಲಿ ಸಂಭವಿಸುವ ಉಲ್ಲಟ ಪಲ್ಲಟಗಳು ಕೂಡ ಕುತೂಹಲಕಾರಿಯಾಗಿರುತ್ತವೆ. ಯಾವುದಾದರೊಂದು ವಿಷಯ ಇಲ್ಲವೆ ಕೃತಿ ಅಥವಾ ಕರ್ತೃ ಕುರಿತು ಹಿಂದಾನೊಂದು ಕಾಲದಲ್ಲಿ ಪೂರೈಸಿದ್ದ ಸಂಶೋಧನೆ ಅಲ್ಲಿಗೆ ಮುಗಿಯಿತೆಂದು ಹೇಳಲಾಗದು. ಅದರ ವಿಚಾರದಲ್ಲಿ ಮುಂದಾನೊಂದು ಕಾಲದಲ್ಲಿ ಮತ್ತಷ್ಟು ಹೊಸ ಸಾಕ್ಷ್ಯಗಳು ದೊರೆತು ಹಿಂದಣ ತೀರ್ಮಾನಗಳನ್ನು ಕದಲಿಸಬಹುದು. ಹೀಗೆ ಗೂಢ ನಿಗೂಢಗಳನ್ನು ಶೋಧಿಸುವ ವಿದ್ವತ್ ಸಾಹಸ ಸ್ಥಾವರವಾಗದೆ ಜಂಗಮವಾಗಿ ಮುಂದುವರಿಯುತ್ತಿರುತ್ತದೆ. ಒಂದು ಉದಾಹರಣೆಯೊಂದಿಗೆ ಇದರ ಸ್ವಾರಸ್ಯವನ್ನು ಮನಗಾಣಿಸುತ್ತೇನೆ. ವಡ್ಡಾರಾಧನೆ ಕನ್ನಡ ಸಾಹಿತ್ಯದಲ್ಲಿ ಆರಂಭದ ಕೃತಿಗಳಲ್ಲಿ ಮಹತ್ವದ್ದು. ಇದರ ಹೆಸರು, ಕಾಲ, ಕೃತಿಕಾರ ಮತ್ತು ಆತನ ಸ್ಥಳದ ವಿಚಾರದಲ್ಲಿ ಎಂಬತ್ತು ವರ್ಷಗಳ ಸುದೀರ್ಘವಾದ ಚರ್ಚೆಗಳಾಗಿವೆ. ಇದನ್ನು ಮೊದಲು ಬೆಳಕಿಗೆ ತಂದವರು ಡಿ.ಎಲ್. ನರಸಿಂಹಾಚಾರ್ (೧೯೪೯).

ಅವರು ಬಳಸಿದ ಓಲೆಗರಿ ಗ್ರಂಥಗಳು ವಿವಿಧ ಸ್ಥಳಗಳಿಂದ, ವಿವಿಧ ಮೂಲಗಳಿಂದ ಬಂದಿವೆಯೆಂಬುದೂ ಅವುಗಳ ವರ್ಗೀಕರಣವೂ ವಿದ್ವಾಂಸರ ಗಮನ ಸೆಳೆಯಿತು. ವಡ್ಡಾರಾಧನೆಯಲ್ಲಿ ಪ್ರಾಕೃತ, ಸಂಸ್ಕೃತ ಮತ್ತು ಕನ್ನಡ ಪದ್ಯಗಳೂ ಹಾಸು ಹೊಕ್ಕಾಗಿವೆ. ಕಥೆಗಳ ಗದ್ಯಶೈಲಿ ಪೂರ್ವದ ಹಳಗನ್ನಡಕ್ಕೆ ಹತ್ತಿರವಾಗಿದೆ. ಮೊದಲ ಮೂರು ಮುದ್ರಣಗಳಿಗೆ ಸಂಪಾದಕರು ಪ್ರಸ್ತಾವನೆ ಬರೆದಿರಲಿಲ್ಲ, ಶಿವಕೋಟಿ ವಿರಚಿತವೆಂದಷ್ಟೆ ನಮೂದಿಸಿದ್ದರು. ಅಂತರ-ಬಾಹ್ಯ ಪ್ರಮಾಣಗಳನ್ನು ಇಟ್ಟುಕೊಂಡು ಮಂಜೇಶ್ವರ ಗೋವಿಂದ ಪೈಯವರು ಈ ಗ್ರಂಥ ಆರು-ಏಳನೆಯ ಶತಮಾನದ ಅತ್ಯಂತ ಪ್ರಾಚೀನ ಗ್ರಂಥವೆಂದು ಪ್ರತಿಪಾದಿಸಿದರು. ಅವರ ಸಂಶೋಧನೆಯನ್ನು ಕೆಲವರು ಒಪ್ಪಿದ್ದೂ ಆಯಿತು. ಆದರೆ ಅದು ಇದಮಿತ್ಥಂ ಎಂದು ಅಖೈರು ತೀರ್ಮಾನ ಆಗಲಿಲ್ಲ.

ಈ ಹಂತದಲ್ಲಿ ಇಡೀ ವಡ್ಡಾರಾಧನೆ ಗ್ರಂಥದ ಚರ್ಚೆಗೆ ದಿವ್ಯ ತಿರುವು ಕೊಟ್ಟವರು ಆ(ದಿನಾಥ)ನೇ(ಮಿನಾಥ) ಉಪಾಧ್ಯೆಯವರು. ಪ್ರಾಕೃತ ಮತ್ತು ಸಂಸ್ಕೃತ ಭಾಷೆಗಳಲ್ಲಿ ಪ್ರಗಲ್ಭ

ಪಾಂಡಿತ್ಯ ಇದ್ದುದರಿಂದ ಅವರು ವಡ್ಡಾರಾಧನೆ ಗ್ರಂಥದಲ್ಲಿನ ಉದಾಹೃತ ಪದ್ಯಗಳ ಆಕರಗಳನ್ನು ಪತ್ತೆ ಹಚ್ಚಿದರು. ಮಂ.ಗೋ. ಪೈಯವರು ಗ್ರಂಥದ ಪ್ರಾಚೀನ ಶೈಲಿಯನ್ನು ಮುಖ್ಯವಾಗಿ ಅವಲಂಬಿಸಿ ಕಾಲವನ್ನು ನಿರ್ಧರಿಸಿದ್ದರು. ಕೃತಿಕಾರನೇ ನೇರವಾಗಿ ತನ್ನ ಹೆಸರು, ಕೃತಿಯ ಹೆಸರು ಮತ್ತು ಕೃತಿ ರಚನೆಯ ಕಾಲವನ್ನು ಹೇಳದಿದ್ದಾಗ ಅಂಥ ಪ್ರಾಚೀನ ಗ್ರಂಥದ ಕಾಲವನ್ನು, ಹೆಸರನ್ನು ಗುರುತಿಸುವ ದಿಕ್ಕಿನಲ್ಲಿ ಸಂಶೋಧಕರು ಮುಗಿಬೀಳಬೇಕಾದ ಅನ್ಯಾನ್ಯಮೂಲ ಮತ್ತು ವಿಧಾನಗಳತ್ತ ಉಪಾಧ್ಯೆಯವರು ಬೆರಳು ತೋರಿದರು.

ಕೃತಿಯ ಭಾಷೆಯೊಂದನ್ನೇ ಅವಲಂಬಿಸಿದರೆ ಎದುರಾಗುವ ತೊಡಕುಗಳನ್ನೂ ತಪ್ಪುಗಳನ್ನೂ ಮುಂದಿಟ್ಟರು. ಪ್ರಾಕೃತ ಸಂಸ್ಕೃತ ಉದಾಹೃತ ಗಾಹೆ – ಶ್ಲೋಕಾದಿಗಳ ಮೂಲ ಕೃತಿಗಳನ್ನು ಪತ್ತೆ ಹಚ್ಚಿ ವಡ್ಡಾರಾಧನೆಯು ಹತ್ತನೆಯ ಶತಮಾನಕ್ಕಿಂತಲೂ ಹಿಂದಿನ ಗ್ರಂಥವಲ್ಲವೆಂದು ಉಪಾಧ್ಯೆ ಸ್ಥಾಪಿಸಿದರು. ಜೊತೆಗೆ ಇದರ ಲೇಖಕನು ಶಿವಕೋಟಿ ಅಲ್ಲವೆಂದೂ, ಇದರ ಹೆಸರು ವಡ್ಡಾರಾಧನೆ ಅಲ್ಲವೆಂದೂ ಸಾಬೀತುಪಡಿಸಿದರು. ಮಂ.ಗೋ. ಪೈಯವರಿಗೂ ಉಪಾಧ್ಯೆಯವರಿಗೂ ಡಿ.ಎಲ್. ನರಸಿಂಹಾಚಾರ್ಯರಿಗೂ ಪತ್ರೋತ್ತರ ವ್ಯವಹಾರ ನಡೆಯಿತು. ವಾಗ್ವಾದಗಳ ಬಿಸಿ ಏರಿತು. ವಡ್ಡಾರಾಧನೆಯ ನಾಲ್ಕನೆಯ ಆವೃತ್ತಿಗೆ ಪ್ರಸ್ತಾವನೆಯಲ್ಲಿ ಸಂಪಾದಕ ಡಿಎಲ್ಎನ್‌ರವರು–

೧. ವಡ್ಡಾರಾಧನೆ ಎಂಬುದೇ ಗ್ರಂಥದ ಶೀರ್ಷಿಕೆ

೨. ಇದರ ಕಾಲ ಸುಮಾರು ೯೨೦

೩. ಶಿವಕೋಟಿಯೇ ಇದರ ಕರ್ತೃ

೪. ಲೇಖಕ (ಕಥೆಗಾರ)ನ ಸ್ಥಳ ಕೋಗಳಿ

– ಎಂದು ನಾಲ್ಕು ಅಂಶಗಳನ್ನು ಪ್ರಬಲವಾಗಿ ಮಂಡಿಸಿದರು. ಈ ನಿರ್ಣಯಗಳು ಮೂರು ದಶಕಗಳ ಕಾಲ ಅಬಾಧಿತವಾಗಿ ಚಾಲ್ತಿಯಲ್ಲಿದ್ದುವು. ವಡ್ಡಾರಾಧನೆ ಕುರಿತು ಹಂಪ ನಾಗರಾಜಯ್ಯ (ಹಂಪನಾ) 'ವಡ್ಡಾರಾಧನೆ : ಸಮಗ್ರ ಅಧ್ಯಯನ' ವಿಷಯವಾಗಿ ಸಂಶೋಧಿಸಿ ಬೆಂಗಳೂರು ವಿಶ್ವವಿದ್ಯಾಲಯದಿಂದ ಡಾಕ್ಟರೇಟ್ ಪದವಿ ಪಡೆದಾಗ ಇದೇ ನಿಲುವನ್ನು ತಳೆದಿದ್ದರು.

ಆದರೆ ಮೂಡಬಿದ್ರಿಯ ತಾಳೆಗರಿಸಂಗ್ರಹಾಲಯದಲ್ಲಿದ್ದು ಸಂಪಾದಕ ಡಿಎಲ್ಎನ್ ಅವರು ನೋಡದೆ – ಬಳಸದೆ ಬಿಟ್ಟಿದ್ದ ತಾಡೆಯೋಲೆ ಹಸ್ತಪ್ರತಿಯನ್ನು ಹಂಪನಾ ನೋಡಿದಾಗ ಹೊಚ್ಚ ಹೊಸ ಮಾಹಿತಿ ದೊರೆಯಿತು. ಅದು ವಡ್ಡಾರಾಧನೆಯನ್ನು ಕುರಿತು ಆ ತನಕ ಇದ್ದ ತಿಳಿವಳಿಕೆಯನ್ನೆಲ್ಲ ತಳಕೆಳಕು ಮಾಡಿತೆಂಬುದು ಸಂಶೋಧನೆಯ ಸಾಧನೆ. ಸಂಶೋಧನೆ ಎಂಬುದು ನಿಂತ ನೀರಲ್ಲ, ಅದು ಜಂಗಮ. ನಿರಂತರವಾಗಿ ನಡೆಯಬೇಕಾದ ಚಲನಶೀಲ ಪ್ರಕ್ರಿಯೆ. ಕಲಬುರ್ಗಿಯವರು ಹೇಳುವಂತೆ ಇದು ಅರ್ಧವಿರಾಮ, ಅಲ್ಪವಿರಾಮಗಳಿಂದ ಪೂರ್ಣವಿರಾಮದತ್ತ ನಿರಂತರವಾಗಿ ಸಾಗುವ ಕ್ರಿಯೆ. ಈ ಲಕ್ಷಣಕ್ಕೆ ಲಕ್ಷ್ಯವಾಗಿರುವ ಕೃತಿ ವಡ್ಡಾರಾಧನೆ. ತಮಗೆ ಲಭ್ಯವಾದ ವಿಶ್ವಸನೀಯ ಆಧಾರವನ್ನು ಅವಲಂಬಿಸಿ ಹಂಪನಾ ತಳೆದ ನಿಲವು ಡಿ.ಎಲ್.ಎನ್. ಮಂಡಿಸಿದ್ದ ಮತ್ತು ಪಂಡಿತರು ಮಾನ್ಯ ಮಾಡಿದ್ದ ಮಾನದಂಡಕ್ಕಿಂತ ಬೇರೆಯಾಗಿದ್ದುವು. ಹಂಪನಾ ಪ್ರತಿಪಾದಿಸಿದ ನಾಲ್ಕು ಅಂಶಗಳು :

೧. ಕೃತಿಯ ಹೆಸರು ವಡ್ಡಾರಾಧನೆ ಅಲ್ಲ. ಆರಾಧನಾ ಕರ್ಣಾಟ ಟೀಕಾ ಎಂಬುದು ಅದರ ಹೆಸರು.

೨. ಅದರ ಕಾಲ ಸುಮಾರು ೮೦೦.

೩. ಅದರ ಕರ್ತೃ ಭ್ರಾಜಿಷ್ಣು, ಶಿವಕೋಟಿ ಅಲ್ಲ.

೪. ಭ್ರಾಜಿಷ್ಣುವಿನ ಸ್ಥಳ ಹ(ಪ)ಳ್ಳಿಖೇಡ, ಕೋಗಳಿ ಅಲ್ಲ.

ವಡ್ಡಾರಾಧನೆಯನ್ನು ಮೊದಲು ಓದಿದವರು ಅದರ ತಾಳೆಯೋಲೆ ಪ್ರತಿಗಳನ್ನು ಸಿದ್ಧಪಡಿಸಿದ ಹಸ್ತಪ್ರತಿಕಾರರು. ಈಗ ಸಿಕ್ಕಿರುವ ಏಳೆಂಟು ಹಸ್ತಪ್ರತಿಗಳು ೧೩೨೫ ರಿಂದ ೧೭೦೦ರ ವರೆಗೆ, ಸುಮಾರು ನಾಲ್ಕು ನೂರು ವರ್ಷಗಳ ಅಂತರದಲ್ಲಿ ಹಾದುಬಂದಿವೆ. ಈ ಪ್ರತಿಗಳು ದಕ್ಷಿಣ ಕನ್ನಡ ಜಿಲ್ಲೆ, (ಮೂಡಬಿದ್ರಿ) ಹಳೆಯ ಮೈಸೂರು (ಸಾಲಿಗ್ರಾಮ), ಧಾರವಾಡ, ಕೊಲ್ಹಾಪುರ (ಮಹಾರಾಷ್ಟ್ರ), ಆರಾ (ಮಧ್ಯಪ್ರದೇಶ) – ಹೀಗೆ ಭೌಗೋಳಿಕ ಹರಹಿನಲ್ಲಿ ಹರಡಿಕೊಂಡಿವೆ.

ಹೊಸಗನ್ನಡದ ಹೊಸ್ತಿಲಲ್ಲಿ ಇದನ್ನು ಓದಿದಾತ ವಿಶಿಷ್ಟ ಲೇಖಕನಾದ 'ರಾಜಾವಳೀ ಕಥಾಸಾರ' ಕೃತಿಯ ದೇವಚಂದ್ರ (೧೭೭೦-೧೮೪೧). ಅನಂತರ ಇಪ್ಪತ್ತನೆಯ ಶತಮಾನದ ಮೊತ್ತ ಮೊದಲನೆಯ ಓದುಗರು ಸಾಲಿಗ್ರಾಮದ ಸರಾಫ್ ಪದ್ಮರಾಜಯ್ಯನವರು. ತಾಳೆಯೋಲೆ ಪ್ರತಿಯು ತರುವಾಯ ಅವರಿಂದಲೇ ಮೈಸೂರು ಓರಿಯಂಟಲ್ ಭಂಡಾರ, ಅಲ್ಲಿಂದ ಕನ್ನಡ ಸಾಹಿತ್ಯ ಪರಿಷತ್ತು, ಮತ್ತು ಅಂತಿಮವಾಗಿ ಡಿಎಲ್ಎನ್ ಅವರ ಮಡಿಲು ಸೇರಿದ ಸಂಕಥನ ಸಂಶೋಧನೆಯ ರೋಚಕ ರೋಮಾಂಚಕಾರಿ ಅಧ್ಯಾಯ.

ಸಂಶೋಧನೆ ಮುಚ್ಚಿದ ಬಾಗಿಲಲ್ಲ. ಅದರ ಕಿಟಕಿ ಬಾಗಿಲು ತೆರೆದಿರುತ್ತದೆ. ಅದರಿಂದ ವಡ್ಡಾರಾಧನೆಯ ಸಂಶೋಧನೆಯನ್ನು ಇನ್ನೂ ಮುಂದೆ ಕೊಂಡೊಯ್ಯಲು ಅವಕಾಶಗಳಿವೆ. ಕೃತಿ ಮತ್ತು ಕೃತಿಕಾರ ಕೇಂದ್ರಿತ ಸಂಶೋಧನೆಯ ಆಯಾಮವನ್ನು ದೃಷ್ಟಾಂತದೊಂದಿಗೆ ಬಿಚ್ಚಳಿಸುವ ಸಲುವಾಗಿ ವಡ್ಡಾರಾಧನೆಯನ್ನು ಕೇಂದ್ರವಾಗಿಸಿ ಅತಿ ಸಂಕ್ಷೇಪದಲ್ಲಿ ಈ ವಿವರಗಳನ್ನು ನಿರೂಪಿಸಿದ್ದೇನೆ. ಇದೇ ರೀತಿಯಾಗಿ ನಾಗಚಂದ್ರ, ನಾಗವರ್ಮ ಮತ್ತು ಶಿಶುಮಾಯಣ ಮೊದಲಾದ ಕವಿಗಳ ಕಾಲವಿಚಾರದಲ್ಲಿ ಇತ್ಯರ್ಥವಾಗದೆ ತಕ್ಕಡಿಯಲ್ಲಿ ತೂಗಾಡುತ್ತಿದ್ದುದು ಒಂದು ನಿಲುಗಡೆಗೆ ಬಂದು ನಿಂತಿವೆ.

ಬ್ರಿಟಿಷರ ಆಗಮನಾನಂತರ ಶಾಲಾ ಕಾಲೇಜು ವಿಶ್ವವಿದ್ಯಾಲಯಗಳು ಅಕ್ಷರ ಲೋಕದ ಬಾಗಿಲು ತೆರೆದು ವಿದ್ಯೆ ಎಲ್ಲರಿಗೂ ಎಟುಕುವಂತಾಯಿತು ಎಂಬುದು ನಿಜವೇ ಆದರೂ ಅದಕ್ಕೂ ಮೊದಲು ಇದ್ದ ಜ್ಞಾನ ಸಂಚಯ ಮತ್ತು ಪ್ರಸರಣ ವ್ಯವಸ್ಥೆಯನ್ನು ಮರೆಯುವಂತಿಲ್ಲ ಎಂಬ ಮಾತು ಆಗಲೇ ಬಂದಿದೆ. ಈ ದಿಸೆಯಲ್ಲಿ ಧಾರ್ಮಿಕ ಕೇಂದ್ರಗಳು ಪ್ರಮುಖ ಪಾತ್ರವಹಿಸಿವೆ. ಜೈನ ಬಸದಿಗಳೂ ಬೌದ್ಧ ಸಂಘಾರಾಮ ವಿಹಾರಗಳೂ ಉನ್ನತ ಮತ್ತು ತೌಲನಿಕ ಶಿಕ್ಷಣಕ್ಕೆ ಮಾನ್ಯತೆ ನೀಡಿದ್ದುವು. ಗುರುಕುಲ ಮತ್ತು ಆಶ್ರಮ ಶಿಕ್ಷಣ ಪದ್ಧತಿಗಳು ಶತಮಾನಗಳವರೆಗೆ ವಿದ್ಯೆ ನೀಡುವ ತಾಣಗಳಾಗಿದ್ದುದು ತಿಳಿದೇ ಇದೆ. ಅಗ್ರಹಾರಗಳು, ಘಟಿಕಗಳು, ಬ್ರಹ್ಮಪುರಿಗಳೂ ಊಟ ವಸತಿ ಒದಗಿಸಿ ಶಿಕ್ಷಣ ಕೊಡುವ ಕೇಂದ್ರಗಳಾಗಿದ್ದುವು. ಕೊಪ್ಪಳ, ಶ್ರವಣಬೆಳಗೊಳ, ಹೊಂಬುಜ ಮೊದಲಾದ ಜೈನ ಕೇಂದ್ರಗಳಲ್ಲಿ ಇಂಥ ವ್ಯವಸ್ಥೆಯಿತ್ತು. ಉಮ್ಮಚಿಗೆ, ಕಾಡಿಯೂರು, ತಾಳಗುಂದ, ದೇಗಾಂವಿ, ಬಾದಾಮಿ – ಮುಂತಾದ ಅಗ್ರಹಾರಗಳೂ ತಲಕಾಡು, ಬಳ್ಳಿಗಾವೆ, ವಿಕ್ರಮಪುರ ಮುಂತಾದ ಬ್ರಹ್ಮಪುರಿಗಳೂ ಉನ್ನತ ಶಿಕ್ಷಣದ ನೆಲೆಗಳಾಗಿದ್ದುವು. ಕೋಡಿಮಠ, ನಾಗಾಯಿಮಠ, ಶೈವ, ವೈಷ್ಣವ, ಮಾಧ್ವ, ವೀರಶೈವಾದಿ ವಿವಿಧ ಧರ್ಮಗಳ ಮಠಗಳು ವಿದ್ಯಾಕೇಂದ್ರಗಳಾಗಿದ್ದುವು.

ಸಂಶೋಧನೆಗೆ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಹೆಚ್ಚಿನ ಅನುಕೂಲ ಹಾಗೂ ಅವಕಾಶಗಳು ಒದಗುತ್ತವೆ. ಆಧುನಿಕ ಯುಗದಲ್ಲಿ ಸಹಜವಾಗಿಯೇ ಸ್ನಾತಕೋತ್ತರ ಕೇಂದ್ರಗಳಲ್ಲಿ ಸಂಶೋಧನೆ ನಡೆಯುತ್ತ ಬಂದಿದೆ. ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್‌ನಲ್ಲಿ ಸ್ನಾತಕೋತ್ತರ ಛಾತ್ರರು ಫಲದಾಯಕ ಸಂಶೋಧನ ಕಾರ್ಯನಿರತರಾಗಿರುತ್ತಾರೆ. ಸರ್ ಸಿ.ವಿ. ರಾಮನ್ ಸಂಶೋಧನ ಸಂಸ್ಥೆಯಲ್ಲಿ ಭೌತಶಾಸ್ತ್ರ ಸಂಬಂಧ ಪ್ರಯೋಗಗಳಾಗುತ್ತಿವೆ. ಮೈಸೂರಿನ ಆಹಾರ ಸಂಶೋಧನ ಸಂಸ್ಥೆಯು ಜನತೆಯ ಮತ್ತು ಸೈನ್ಯದ ಆಹಾರ ಸಮಸ್ಯೆಗಳಿಗೆ ಸಂಬಂಧಿಸಿದ ಸಂಶೋಧನೆ ನಡೆಸುತ್ತಿದೆ. ಬೆಂಗಳೂರಿನ ರಾಷ್ಟ್ರೀಯ ವಾಯುಮಾನ ಸಂಶೋಧನ ಸಂಸ್ಥೆಯಲ್ಲಿ ವಿಮಾನಗಳ ವಿನ್ಯಾಸ ಹಾಗೂ ಚಲನೆಗೆ ಸಂಬಂಧಿಸಿದ ಸಂಶೋಧನೆ ನಡೆದಿದೆ. ಬಾಹ್ಯಾಕಾಶಯಾನ ಕ್ಷೇತ್ರದಲ್ಲಿ, ಗಣಕ ಕ್ಷೇತ್ರದಲ್ಲಿ, ತಂತ್ರಜ್ಞಾನದ ಅಳವಡಿಕೆ ಸಾಧ್ಯವಾಗುವ ನಾನಾ ವಿಭಾಗಗಳಲ್ಲಿ ಕಳೆದ ಎರಡು ದಶಕಗಳಿಂದೀಚೆಗೆ ನಡೆದಿರುವ ಸಂಶೋಧನೆ ಊಹೆಗೂ ಮೀರಿದ ಮಹತ್ತರ ಬೆಳವಣಿಗೆಗೆ ಕಾರಣವಾಗಿವೆ. ಈಗ ಸಂಶೋಧನ ವಲಯ ಜಗದಗಲ ಮುಗಿಲಗಲ ಎಂಬಂತೆ ದ್ಯಾವಾಪೃಥ್ವಿಯನ್ನು ಹಬ್ಬಿದೆ.

ಹೊಸ ಹಾದಿಗಳ ಹುಡುಕಾಟ

ಮೌರ್ಯರು ಹಾಗೂ ಸಾತವಾಹನರು ಆಳುತ್ತಿದ್ದ ಕಾಲದಿಂದ ಕನ್ನಡದೊಂದಿಗೆ ಪ್ರಾಕೃತ ಭಾಷೆಯೂ ವ್ಯವಹಾರದಲ್ಲಿತ್ತು. ಅಶೋಕನ ಶಾಸನಗಳಲ್ಲದೆ ಕನಗನಹಳ್ಳಿ – ಸನ್ನತಿ ಪರಿಸರದಲ್ಲೂ ವಡಗಾಂವ – ಮಾಧವಪುರ, ಬನವಾಸಿ, ಮಳವಳ್ಳಿ ಮೊದಲಾದ ಕಡೆ ಅನೇಕ ಪ್ರಾಕೃತ ಶಾಸನಗಳು ಸಿಕ್ಕಿವೆ. ಭ್ರಾಜಿಷ್ಣು ವಿರಚಿತ ಆರಾಧನಾ ಕರ್ಣಾಟ ಟೀಕಾ (ವಡ್ಡಾರಾಧನೆ) ಪ್ರಾಕೃತ ಪ್ರಭಾವವನ್ನು ಪಡೆದಿದೆ. ವೀರಸೇನಾಚಾರ್ಯ (ಧವಲಾ), ಜಿನಸೇನಾಚಾರ್ಯ (ಜಯಧವಲಾ) ವಟ್ಟಕೇರ (ಮೂಲಾಚಾರ), ಜದಿ ಉಸಹ (=ಯತಿವೃಷಭನ) (ತಿಲೋಯ ಪಣ್ಣತ್ತಿ), ಸ್ವಯಂಭು (ಹರಿವಂಶ, ರಿಟ್ಠಣೇಮಿ ಚರಿಯ), ತ್ರಿವಿಕ್ರಮ (ವ್ಯಾಕರಣ), ಪುಷ್ಪದಂತ (ತಿಸಟ್ಠಿ ಮಹಾಪುರಿಸ ಗುಣಾಲಂಕಾರು, ಜಸಹರಚರಿಉ, ಣಾಯಕುಮಾರ ಚರಿಉ), ಚಾವುಂಡರಾಯನ ಗುರು ನೇಮಿಚಂದ್ರ ಸಿದ್ಧಾಂತ ಚಕ್ರವರ್ತಿ (ಗೊಮ್ಮಟ ಸಾರ, ದ್ರವ್ಯ ಸಂಗ್ರಹ, ತ್ರಿಲೋಕಸಾರ, ಲಬ್ಧಿಸಾರ) – ಮೊದಲಾದವರು ಕನ್ನಡ ನಾಡಿನಲ್ಲಿ ಬಾಳಿ ಪ್ರಾಕೃತ ಕೃತಿಗಳನ್ನು ರಚಿಸಿದರು.

ಆದಿಕವಿ ಪಂಪನೂ ಆದಿಪುರಾಣದಲ್ಲಿ (೧–೧೪) ತನ್ನನ್ನು 'ಕೊಂಡಕುಂದಾನ್ವಯ ನಂದನವನ ಶುಕ' (ಕೊಂಡಕುಂದ ಆಚಾರ್ಯನ ವಂಶವೆಂಬ ಉದ್ಯಾನದ ಗಿಳಿ) ಎಂದು ಪರಿಚಯಿಸಿದ್ದಾನೆ. ಈ ಕುಂದಕುಂದಾಚಾರ್ಯನ ಪಂಚಾಸ್ತಿಕಾಯ, ಪ್ರವಚನ ಸಾರ, ಸಮಯಸಾರ ಮತ್ತು ಅಷ್ಟಪಾಹುಡ ಕೃತಿಗಳು ಪ್ರಾಕೃತದಲ್ಲಿವೆ. ಪಂಪ ಪೊನ್ನ ರನ್ನ ಜನ್ನರಾದಿಯಾಗಿ ಜೈನ ಕವಿಗಳು ಪ್ರಾಕೃತದ ಪ್ರಾಜ್ಞರು. ನೇಮಿಚಂದ್ರಕವಿ ತನ್ನ (ಅರ್ಧ) ನೇಮಿನಾಥ ಪುರಾಣ ಕಾವ್ಯದಲ್ಲಿ ಎರಡು ಪ್ರಾಕೃತ ಗಾಹೆಗಳನ್ನು ರಚಿಸಿದ್ದಾನೆ. ರತ್ನಾಕರವರ್ಣಿಯ ಭರತೇಶ ವೈಭವ ಮಹಾಕಾವ್ಯದಲ್ಲಿ ಪ್ರಾಕೃತ ಗ್ರಂಥಗಳ ದಟ್ಟ ಪ್ರಭಾವವಿದೆ. ಅನೇಕ ಪ್ರಾಕೃತ ಸಿದ್ಧಾಂತ ಗ್ರಂಥಗಳಿಗೆ ಕನ್ನಡ ವ್ಯಾಖ್ಯಾನಗಳು ರಚಿತವಾಗಿವೆ. ಒಂದು ಮಾತಿನಲ್ಲಿ ಹೇಳುವುದಾದರೆ ಪ್ರಾಕೃತ ವಾಙ್ಮಯವು ಕನ್ನಡ ಭಾಷೆ, ಸಾಹಿತ್ಯ, ಛಂದಸ್ಸಿನ ಮೇಲೆ ಗಾಢವಾದ ಪ್ರಭಾವವನ್ನು ಬೀರಿದೆ. ಕನ್ನಡ – ಪ್ರಾಕೃತಗಳ ಆದಾನ ಪ್ರದಾನದ ರೂಪ ಸ್ವರೂಪ ಕುರಿತ ಸಂಶೋಧನೆಗೆ ಅವಕಾಶದ ಬಾಗಿಲು ತೆರೆದಿದೆ (ಹಂಪನಾ : ಪ್ರಾಕೃತ ಕಥಾ ಸಾಹಿತ್ಯ : ೨೦೧೪).

ಇನ್ನು ಮೇಲೆ ಸಂಶೋಧನೆಯು ಹೆಜ್ಜೆ ಹಾಕಬೇಕಾದ ಹಾದಿ ಮತ್ತು ದಿಕ್ಕು ಯಾವುದು, ಎತ್ತ ಎಂಬ ಕೇಳ್ವಿಯಲ್ಲಿ ಹುರುಳಿದೆ. ಅವುಗಳಲ್ಲಿ ಒಂದೆರಡನ್ನು ಪ್ರಾಸಂಗಿಕವಾಗಿ ಪ್ರಸ್ತಾಪಿಸುತ್ತೇನೆ. ಕನ್ನಡ ಭಾಷೆ ಮತ್ತು ಸಾಹಿತ್ಯ ನಿರಂತರವಾಗಿ ಅನ್ಯಾನ್ಯ ಭಾಷಾ ಸಾಹಿತ್ಯಗಳ ಪ್ರಭಾವಕ್ಕೆ ಸಿಕ್ಕಿದೆ. ಆರಂಭದ ಹಂತದಲ್ಲಿ ಪ್ರಾಕೃತ (ಪಾಗದ) ಮತ್ತು ಸಂಸ್ಕೃತ (ಸಕ್ಕದ) ಭಾಷೆಗಳ ಸಂಪರ್ಕ ಹೊಂದಿದ್ದು ಅವುಗಳ ಚಹರೆಗಳ ಮೊಹರನ್ನು ಹೊಂದಿದೆ. ಈ ಎರಡು ಭಾಷೆಗಳಲ್ಲಿ ಸಂಸ್ಕೃತ ಭಾಷಾ-ಸಾಹಿತ್ಯ ಪ್ರಭಾವವನ್ನು ಗುರುತಿಸಿದ್ದಾಗಿದೆ. ಆದರೆ ಪ್ರಾಕೃತ ಭಾಷೆಗಳ ಗಾಢ ಪ್ರಭಾವದ ಸ್ವರೂಪ ಕುರಿತು ವ್ಯಾಪಕ ಸಂಶೋಧನೆ ಆಗಬೇಕಾದ್ದಿದೆ. ಕನ್ನಡ ಭಾಷೆ ಆಡುನುಡಿಯ ಹಂತವನ್ನು ದಾಟಿ ಸಾಹಿತ್ಯದ ಭಾಷೆಯಾಗಿ ಮಾರ್ಪಾಟು ಗೊಳ್ಳುತ್ತಿದ್ದಾಗ ಪ್ರಾಕೃತ (ಪಾಗದ)ದ ಪ್ರಭಾವ ಆಯಿತು.

ಪ್ರಾಕೃತದ ಸಾಹಚರ್ಯ

ಅದರಂತೆ ಸ್ವಲ್ಪಮಟ್ಟಿಗೆ ಕನ್ನಡದ ಪ್ರಭಾವ ಪ್ರಾಕೃತ ಭಾಷೆಯ ಮೇಲಾಗಿದೆ. ಆ.ನೇ. ಉಪಾಧ್ಯೆಯವರು 'ದೇಶಿ ಕೋಶಗಳಲ್ಲಿನ ಕನ್ನಡ ಶಬ್ದಗಳು' ಲೇಖನದಲ್ಲಿ ಅಂತಹ ಕೆಲವು ಶಬ್ದಗಳನ್ನು ಗುರುತಿಸಿದ್ದಾರೆ. ಹಾಲನೆಂಬ ಸಾತವಾಹನ ರಾಜನ (ಕ್ರಿ.ಶ. ೧-೨ನೆಯ ಶತಮಾನ) ಗಾಥಾ ಸತ್ತಸಈ (ಗಾಥಾ ಸಪ್ತಶತಿ=ಏಳುನೂರು ಗಾಹೆಗಳು) ಎಂಬ ಪ್ರಾಚೀನ ಪ್ರಾಕೃತ ಸಂಕಲನದಲ್ಲಿ ಕನ್ನಡ ಮಾತುಗಳಿವೆ. ಕೆಲವು ಉದಾಹರಣೆಗಳು - ಅತ್ತಾ (ಅತ್ತೆ), ತೀರಇ (ತೀರ್), ತುಪ್ಪಾ (ತುಪ್ಪ), ಪೊಟ್ಟ (ಪೊಟ್ಟೆ), ಫಲಹಿ (ಪಟು).

ಹಾಗೆಯೇ ಪ್ರಾಕೃತ ದೇಶಿ ಕೋಶಗಳಲ್ಲಿ ಸೇರಿರುವ ಅಕ್ಕಾ (ಅಕ್ಕ), ಆಲಂಬಂ (ಅಣಂಬೆ), ಇಗ್ಗೋ (ಎಗ್ಗ), ಉಡೂ (ಉಡು), ಉಂಡಲಂ (ಹೊಂಡ) ಉಬುಕ್ಕುಂ (ಉಬ್ಬಸ), ಉಮ್ಮಲ್ಲೊ (ಉಮ್ಮಳ), ಉಲ್ಲೀ (ಒಲೆ), ಊಲೋ (ಉರುಳ್), ಎ(ಇ)ತ್ತೊಪ್ಪಂ (ಎಂತಪ್ಪ-ಇಂತಪ್ಪ), ಒಕ್ಕಿಅ (ಒಕ್ಕು), ಒಪ್ಪಾ (ಒಪ್ಪ), ಓಲಗ, ಕಲೀ (ಕಲಿ), ಕು(ಕೊ)ಂಡಿಓ (ಗಾವುಂಡಗೌಡ), ಕುರುಡ, ಕಾಹಲ್ಲೀ (ಕಾವಲಿ), ಕುಣಿಆ (ಕುಣಿ/ಗುಣಿ, ಕುಟಿ), ಕೋಲೋ (ಕೊರಲ್), ಖಡ್ಡಂ (ಗಡ್ಡ), ಚಿಕ್ಕ, ಣೇಸರೋ (ನೇಸರ್), ತುಪ್ಪೋ (ತುಪ್ಪ), ತುಂಬಿಲ್ಲೀ (ತುಂಬಿಯ ಇಲ್), ಪಾವೋ (ಪಾವು), ಪಾಲೋ (ಪಾಟು್), ಪುಲ್ಲೀ (ಪುಲಿ), ಪೊಚ್ಚಂ (ಪೊಚ್ಚ), ಪೋಟ (ಪೊಟ್ಟೆ), ಮರುಲೋ (ಮರುಳ್), ಸೂಲಾ (ಸೂಳೆ) ಮೊದಲಾದ ಶಬ್ದಗಳು ಪ್ರಾಕೃತ ಭಾಷೆಗಳ ಮೇಲೆ ಆಗಿರುವ ಕನ್ನಡ ಭಾಷೆಯ ಪ್ರಭಾವದ ಹೆಚ್ಚಳವನ್ನು ತಿಳಿಸುತ್ತವೆ.

ಪ್ರಾಚೀನ ಪ್ರಾಕೃತ ಶಾಸನಗಳಲ್ಲಿ ಕಾಣುವ ಕೆಲವು ಕನ್ನಡ ಮಾತುಗಳನ್ನು ಎಂ.ಬಿ. ನೇಗಿನಹಾಳ ಸಂಶೋಧಿಸಿದ್ದಾರೆ [ನೇಗಿನಹಾಳ ಪ್ರಬಂಧಗಳು : ೧೯೯೯ : ೨೩-೩೧]. ಅವರು 'ಪ್ರಾಚೀನ ಕನ್ನಡ ಶಾಸನಗಳ ಭಾಷಿಕ ಅಧ್ಯಯನ' (೧೯೮೨) ಎಂಬ ಸಂಶೋಧನ ಗ್ರಂಥದಲ್ಲಿ ಕ್ರಿ.ಶ. ೪೫೦ ರಿಂದ ೮೫೦ರ ವರೆಗಿನ ಕರ್ನಾಟಕದ ಶಾಸನಗಳನ್ನು ಅವಲೋಕಿಸಿ ಅವುಗಳಲ್ಲಿ ಪ್ರಾಕೃತದ ಮೇಲೆ ಕನ್ನಡದ ಪ್ರಭಾವವನ್ನು ಗುರುತಿಸಿದ್ದಾರೆ. ಕ್ರಿಪೂ. ಒಂದನೆಯ ಶತಮಾನದ ಮಾಧವಪುರ-ವಡಗಾವಿ ಪ್ರಾಕೃತ ಶಾಸನದಲ್ಲಿ 'ಣಾಟಪತಿಸ' - ಶಬ್ದವಿದೆ. ಇದರಲ್ಲಿನ ಣಾಟ ಎಂಬುದು ಕನ್ನಡದ ನಾಟ (=ನಾಡು). ಎರಡನೆಯ ಶತಮಾನದ ಮಳವಳ್ಳಿಯ ಪ್ರಾಕೃತ ಶಾಸನದಲ್ಲಿ ಮಟ್ಟಪಟ್ಟಿ (ಮಳವಳ್ಳಿ) ರೂಪ ಕನ್ನಡದ್ದು. ಸನ್ನತಿಯ ಶಾಸನೋಕ್ತ 'ಸಂಬಲೀವೂರ ವಾಸಿನೋ' ಎಂಬಲ್ಲಿ ಕನ್ನಡದ ಊರು ಸೇರಿದೆ.

ಸನ್ನತಿಯ ಇನ್ನೊಂದು ಕಲ್ಬರಹದಲ್ಲಿ ಮೂಡಾಣ (ಮೂಡಣ) ರೂಪವಿದೆ. ಮೂರನೆಯ ಶತಮಾನದ ಹಿರೇಹಡಗಲಿ ಪ್ರಾಕೃತ ಶಾಸನದಲ್ಲಿ 'ಕೋಟ್ಟಸಮ' (ಕೋಟ್ಟಶರ್ಮ) ಎಂಬ ವ್ಯಕ್ತಿಯ ಹೆಸರಿದೆ. ಇಲ್ಲಿ ಇರುವ ಕೋಟ್ಟವು ಕನ್ನಡದ ಕೋಟ್ಟೆ (ಕೋಂಟೆ-ಕೋಟೆ)ಗೆ ಸೇರಿದ್ದು. ಇದರಿಂದ ಕನ್ನಡದ ಪ್ರಭಾವವೇ ಅಲ್ಲದೆ ಕನ್ನಡದ ಹಳಮೆಯೂ ತಿಳಿದುಬರುತ್ತದೆ. ಈ ದಿಕ್ಕಿನ ಸಂಶೋಧನೆ ಇನ್ನೂ ವ್ಯಾಪಕವಾಗಿ ಆಗಬೇಕಾಗಿದೆ. ಅದಕ್ಕೆ ಉಭಯ ಭಾಷೆಗಳಲ್ಲಿ ಸಮದಂಡಿ ಪಾಂಡಿತ್ಯಬೇಕು. ಅದರಂತೆಯೇ ಕಳೆದ ಎರಡು ನೂರು ವರ್ಷಗಳಿಂದ ಉಂಟಾಗಿರುವ ಇಂಗ್ಲಿಷ್ ಭಾಷೆಯ ಪ್ರಭಾವದ ಸ್ವರೂಪವನ್ನೂ ಸಂಶೋಧಿಸಬೇಕಾಗಿದೆ.

ಹೀಗೆಯೇ ಕನ್ನಡ ಶಾಸನಗಳ ಪುನರಾವಲೋಕನ ಆಗಬೇಕು. ಈ ವಿಚಾರದತ್ತ ಬಿ. ರಾಜಶೇಖರಪ್ಪ 'ಶಾಸನಗಳ ಮರುಪರಿಶೀಲನೆ : ಒಂದು ತೀವ್ರ ಅಗತ್ಯ' ಬರೆಹದ ಮೂಲಕ ಗಮನ ಸೆಳೆದಿದ್ದಾರೆ [ಹರಿತಿ ಸಿರಿ : (ಸಂ) ಲಕ್ಷ್ಮಣ ತೆಲಗಾವಿ : ೧೯೮೭ : ೬೪೫-೬೬೧].

ಸಂಶೋಧನೆಯ ಅನುಕೂಲಕ್ಕೆಂದು ವಿಪುಲ ವಿಷಯಗಳನ್ನು ಕೆಲವು ನಿರ್ದಿಷ್ಟ ವರ್ಗಗಳಾಗಿ ವಿಂಗಡಿಸಲಾಗಿದೆ :

೧. ಭಾಷೆಯ ಹಿನ್ನೆಲೆಯಿಂದ ಅಧ್ಯಯನ : ಕನ್ನಡ ಭಾಷೆಯ ಬೆಳವಣಿಗೆ, ನಿಷ್ಪತ್ತಿ, ಮೂಲದ್ರಾವಿಡದೊಂದಿಗೆ ತುಲನೆ, ಸಂಭವಿಸಿರುವ ಸ್ಥಿತ್ಯಂತರಗಳು, ಅನ್ಯಭಾಷೆಗಳ ಪ್ರಭಾವ ಇತ್ಯಾದಿ.

೨. ಧರ್ಮಗಳನ್ನು ಆಧರಿಸಿದ ಅಧ್ಯಯನ : ಕನ್ನಡ ನಾಡು ಬಹುಧರ್ಮಗಳ ಬೀಡು. ಜೈನ, ಬೌದ್ಧ, ಶೈವ, ವೈಷ್ಣವ, ಶಾಕ್ತ ಮೊದಲಾದ ಧರ್ಮಗಳು ಹಾಗೂ ಅವುಗಳಲ್ಲಿ ಅಂತರ್ಗತವಾಗಿರುವ ಇತರ ಶಾಖೆಗಳ ಕೂಲಂಕಷ ಅನ್ವೇಷಣೆ; ಕರ್ನಾಟಕದ ಸಂಸ್ಕೃತಿ ನಿರ್ಮಾಣ ಮತ್ತು ಸಾಮರಸ್ಯಕ್ಕೆ ಈ ಧರ್ಮಗಳ ಕೊಡುಗೆ.

೩. ಸಾಹಿತ್ಯ ಮತ್ತು ಸಮಾಜವನ್ನು ಆಧರಿಸಿದ ಅಧ್ಯಯನ : ಇದರಲ್ಲಿ

(ಅ) ಕವಿಕಾವ್ಯ - ಗ್ರಂಥ ಸಂಪಾದನೆಯನ್ನು ಪ್ರಾಚೀನ, ಮಧ್ಯಕಾಲೀನ ಮತ್ತು ಆಧುನಿಕ ಹಂತಗಳಲ್ಲಿ ವಿವೇಚನೆ ಹಾಗೂ ಕವಿ ಅಥವಾ ಲೇಖಕನ ಒಟ್ಟುಕೊಡುಗೆಯ ಆಯಾಮವನ್ನು ವಿಮರ್ಶೆ ಮಾತ್ರ ಆಗಿ ಪರ್ಯವಸಾನಗೊಳ್ಳದೆ ಸಂಶೋಧನೆಯೂ ಆಗಿರುವ ಅಧ್ಯಯನ.

(ಆ) ಶಾಸ್ತ್ರ ಸಾಹಿತ್ಯ : ಅಲಂಕಾರ, ಛಂದಸ್ಸು, ವ್ಯಾಕರಣ ಸಂಬಂಧ ಸೂಕ್ಷ್ಮಗಳ ಪರಾಮರ್ಶೆ. ಚಂಪೂ, ಷಟ್ಪದಿ, ತ್ರಿಪದಿ, ಸಾಂಗತ್ಯ, ಅಂಕಗಣ- ಮಾತ್ರಾಗಣ, ದೇಸೀ ಮಟ್ಟುಗಳು, ಓವನಕೆ - ಒನಕೆವಾಡು, ಧವಳ, ಸೋಬಾನೆ ಇತ್ಯಾದಿಗಳ ಪರಿಶೀಲನೆ.

(ಇ) ಜನಪದ ಸಾಹಿತ್ಯ : ಕಥೆ, ಹಾಡು, ಒಗಟು, ಗಾದೆ, ಲಾವಣಿ ಪ್ರಕಾರಗಳಲ್ಲಿ ಸಾಗುವ ಸಾಹಿತ್ಯವನ್ನು ಮೌಖಿಕ ಪರಂಪರೆಯಿಂದ ಲಿಖಿತ ರೂಪಕ್ಕೆ ತರುವುದು. ವ್ಯಕ್ತಿ ನೆಲೆಯ ಪ್ರಯತ್ನಗಳಲ್ಲದೆ ಸಾಂಘಿಕ, ಸಾಂಸ್ಥಿಕ ಪ್ರಯತ್ನಗಳನ್ನೂ ಗಮನಿಸುವುದು.

೪. ಸಂಸ್ಕೃತಿ ಆಧಾರಿತ ಅಧ್ಯಯನ ಮತ್ತು ಇತಿಹಾಸ ಆಧರಿಸಿದ ಅಧ್ಯಯನ : ಕಿರಿಯ-ಹಿರಿಯ ರಾಜಮನೆತನಗಳ ಆಡಳಿತಾವಧಿಯಲ್ಲಿ ನಡೆದ ಮಹತ್ವದ ಸಂಗತಿಗಳ ದಾಖಲೆ.

೫. ಶಾಸನಗಳ ಅಧ್ಯಯನ : ವಾಸ್ತುಶಿಲ್ಪ ದೇವಾಲಯ ಅಧ್ಯಯನ, ಲಿಪಿಶಾಸ್ತ್ರ ನಿಘಂಟುಶಾಸ್ತ್ರ, ಚಿತ್ರಕಲೆ – ಇತ್ಯಾದಿ ಅಧ್ಯಯನ.

ಒಬ್ಬ ನಿರ್ದಿಷ್ಟ ಸಂಶೋಧಕನು ಅನುಸರಿಸಿದ ವಿಧಾನವೇ ಸರ್ವೋತ್ಕೃಷ್ಟವೆಂದಾಗಲೀ ಅದರ ಹೊರತು ಬೇರೆ ಮಾರ್ಗಗಳು ಇಲ್ಲವೆಂದಾಗಲಿ ಅರ್ಥೈಸಬೇಕಾದ್ದಿಲ್ಲ. ಒಂದು ಚಾರಿತ್ರಿಕ ದೃಷ್ಟಾಂತ ಕೊಟ್ಟು ಇದನ್ನು ವಿಷದಪಡಿಸುತ್ತೇನೆ. ಉತ್ತರ ಭಾರತದಲ್ಲಿ ಹನ್ನೆರಡು ವರ್ಷಗಳ ದೊಡ್ಡ ಬರಗಾಲ ಬಂದಾಗ ಸಾಮ್ರಾಟ್ ಚಂದ್ರಗುಪ್ತನು ತನ್ನ ರಾಜಗುರು ಭದ್ರಬಾಹು ಆಚಾರ್ಯನೊಂದಿಗೆ ಬರ ಇರದ ಒಳ್ಳೆಯ ಜಾಗ ಹುಡುಕುತ್ತ ಹೊರಟರು. ಶ್ರವಣಬೆಳಗೊಳ ಹದವಾಗಿರುವುದು ಮನವರಿಕೆಯಾಗಿ ಅಲ್ಲಿ ನೆಲೆ ನಿಂತರು. ಅದು ಅವರು ಕಂಡುಕೊಂಡ ಉತ್ತಮ ಸ್ಥಳ. ಹಾಗಾದರೆ ಆ ಕಾಲದಲ್ಲಿ ಇನ್ನೆಲ್ಲೂ ಕ್ಷಾಮರಹಿತ ಸಮೃದ್ಧ ಸ್ಥಳ ಇರಲೇ ಇಲ್ಲವೆ, ಇದೊಂದೇನೆ ಇಡೀ ಭಾರತದಲ್ಲಿ ಇದ್ದುದು – ಎಂಬ ಪ್ರಶ್ನೆ ಕೇಳಬಹುದು. ಅದಕ್ಕೆ ಚಂದ್ರಗುಪ್ತನ ಪರಿವಾರ ಶ್ರವಣಬೆಳ್ಗೊಳವನ್ನು ಆಯ್ಕೆ ಮಾಡಿಕೊಂಡರು ಎಂಬುದು ಉತ್ತರ.

ಹತ್ತೊಂಬತ್ತನೆಯ ಶತಮಾನದಲ್ಲಿ ಸಂಶೋಧನೆಯ ಕಟ್ಟಡ ಕಟ್ಟಲು ಬೇಕಾಗುವ ಗಾರೆ ಇಟ್ಟಿಗೆ ಮುಂತಾದ ಮೂಲ ಸಾಮಗ್ರಿಯನ್ನು ಕಲೆಹಾಕುವ ಕೆಲಸ ನಡೆಯಿತು. ಭವ್ಯ ಸಂಶೋಧನ ಭವನ ನಿರ್ಮಾಣವಾದದ್ದು ಇಪ್ಪತ್ತನೆಯ ಶತಮಾನದಲ್ಲಿ. ಅದುವರೆಗೆ ವಿದೇಶೀಯ ಬಹುಶ್ರುತರು ಸಂಶೋಧನ ಶಾಖೆಗಳಲ್ಲೆಲ್ಲ ತುಂಬಿ ತುಳುಕಿದ್ದರು. ಇದೀಗ ಎಲ್ಲ ರಂಗಗಳಲ್ಲೂ ಸ್ಥಳೀಯ ಅರಿವಿನೋಜರು ಮಿಂಚತೊಡಗಿದರು. << ಕೃತಿ ಶೋಧನೆಯಿಂದ ಗ್ರಂಥ ಸಂಪಾದನೆಗೆ, ಕವಿಚರಿತೆಯಿಂದ ಸಾಹಿತ್ಯ ಚರಿತ್ರೆಗೆ, ಛಂದಃಸೂತ್ರಗಳಿಂದ ಛಂದಃಶಾಸ್ತ್ರ ಸ್ವರೂಪ ಭೇದನಕ್ಕೆ, ವ್ಯಾಕರಣದಿಂದ ಭಾಷಾಚರಿತ್ರೆಗೆ, ಅಲಂಕಾರ ಶಾಸ್ತ್ರದಿಂದ ಕಾವ್ಯ ಮೀಮಾಂಸೆಗೆ ಕನ್ನಡ ಸಂಶೋಧನೆ ಹೊರಳಿದ್ದು ಈ ಕಾಲದಲ್ಲೇ. ಸಾಮಗ್ರಿ ಸಂಗ್ರಹ, ಪ್ರಕಟಣೆಗಳೆಡೆ ಕೇಂದ್ರೀಕೃತವಾಗಿದ್ದ ಕನ್ನಡ ಸಂಶೋಧನೆ ತೀವ್ರವಾದ ಸಾಮಗ್ರಿ ವಿಶ್ಲೇಷಣೆಯೆಡೆ ಮೊಗ ಮಾಡಿತು >> [ಎನ್.ಎಸ್. ತಾರಾನಾಥ: (ಸಂ) ಶತಮಾನದ ಸಂಶೋಧನೆ : ೨೦೦೧ : xxvi].

ಹೊಂಬೆಳಗಿನ ಕಾಲ

ಎಂ. ಚಿದಾನಂದಮೂರ್ತಿ (೧೯೩೧–), ಟಿ.ವಿ.ವೆಂಕಟಾಚಲಶಾಸ್ತ್ರೀ (೧೯೩೩–), ಹಂಪ ನಾಗರಾಜಯ್ಯ (೧೯೩೬–), ಎಂ.ಎಂ. ಕಲಬುರ್ಗಿ (೧೯೩೮–) ಈ ನಾಲ್ವರು ಸಂಶೋಧನೆಯ ಚತುರ್ಮುಖರೆಂದು ಪ್ರಸಿದ್ಧರು. ಎಂ. ಚಿದಾನಂದಮೂರ್ತಿಯವರು ರಚಿಸಿರುವ ಕೃತಿಗಳು ಭಾಷೆ, ಧರ್ಮ, ಸಾಹಿತ್ಯ, ಸಂಸ್ಕೃತಿ, ಛಂದಸ್ ಶಾಸ್ತ್ರ – ಈ ಕ್ಷೇತ್ರಗಳ ಸಂಶೋಧನೆಯನ್ನು ಒಳಗೊಂಡಿವೆ. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ (೧೯೬೬), ಸಂಶೋಧನ ತರಂಗದ ಎರಡು ಸಂಪುಟಗಳು (೧೯೭೦), ಶೂನ್ಯ ಸಂಪಾದನೆಯನ್ನು ಕುರಿತು (೧೯೭೨) ಮೊದಲಾದುವು ಮೌಲಿಕ ಶೋಧವನ್ನು ಪ್ರತಿನಿಧಿಸುತ್ತವೆ. 'ಚಿದಾನಂದ ಸಮಗ್ರ (ಹನ್ನೊಂದು)' ಸಂಪುಟಗಳು ಅವರ ಸಾಧನೆಯ ಪ್ರತಿಬಿಂಬಗಳಾಗಿದ್ದು ನಾನಾ ವಿಷಯಗಳ ಚರ್ಚೆ ಒಳಗೊಂಡಿವೆ.

ಟಿ.ವಿ. ವೆಂಕಟಾಚಲಶಾಸ್ತ್ರಿಯವರು (೧೯೩೩–) ಹಳೆಗನ್ನಡ ಕಾವ್ಯಗಳ ಚಿಂತನ ಮಂಥನ ಕೈಗೊಂಡು ಮಾಡಿರುವ ಸಂಶೋಧನೆ ಮಹತ್ವದ್ದು. ಪಂಪನ ಕಾವ್ಯಗಳನ್ನು, ಕೇಶಿರಾಜನ ಶಬ್ದಮಣಿದರ್ಪಣವನ್ನು ಪುನರ್ ಶೋಧಿಸಿದ್ದೂ ಕೆಲವು ಅಪರೂಪದ ಪದ್ಯಗಳ

ಪಾಠಕ್ಲೇಶಗಳನ್ನು ನೇರ್ಪುಗೊಳಿಸಿದ್ದೂ ಛಂದಸ್ಸನ್ನು ಕುರಿತ ತುಲನಾತ್ಮಕ ಅಧ್ಯಯನ ಗ್ರಂಥ ರಚಿಸಿದ್ದೂ ಸಂಶೋಧಕರಿಗೆ ಉಪಯುಕ್ತವಾಗಿವೆ. ಅವರ ಸಂಶೋಧನ ಬರೆಹಗಳು ಒಟ್ಟಿಗೆ ಒಂದೆಡೆ ಸಂಕಲಿತವಾಗಿರುವ 'ಶಾಸ್ತ್ರೀಯ'ದ ಹತ್ತು ಸಂಪುಟಗಳು ವಿದ್ವಾಂಸರಿಗೂ ವಿದ್ಯಾರ್ಥಿಗಳಿಗೂ ಆಕರ ಸ್ವರೂಪಿಯಾಗಿವೆ. ನೇಮಿನಾಥ ಪುರಾಣಗಳ ತೌಲನಿಕ ಅಧ್ಯಯನ ಸಂಶೋಧನೆಯ ಗಾಂಭೀರ್ಯವನ್ನು ಬಿಂಬಿಸುತ್ತದೆ.

ಹಂಪ. ನಾಗರಾಜಯ್ಯನವರ (೧೯೩೬–) ಸಂಶೋಧನೆಯೂ ಭಾಷೆ, ಜೈನಧರ್ಮ, ಸಾಹಿತ್ಯ, ಶಾಸನ, ಇತಿಹಾಸ, ಜಾನಪದ ಮತ್ತು ಸಂಸ್ಕೃತಿ ಅಧ್ಯಯನಕ್ಕೆ ಸಂಬಂಧಿಸಿದ್ದು. ದ್ರಾವಿಡ ಭಾಷಾವಿಜ್ಞಾನ (೧೯೬೬), ಚಂದ್ರಕೊಡೆ (೧೯೯೭), ಯಕ್ಷ ಯಕ್ಷಿಯರು (೧೯೭೬), ವಡ್ಡಾರಾಧನೆ : ಸಮಗ್ರ ಅಧ್ಯಯನ (೧೯೯೯), ಯಾಪನೀಯ ಸಂಘ (೧೯೯೯), ಸಾಂತರರು : ಒಂದು ಅಧ್ಯಯನ (೧೯೯೭), ಕಮ್ಮಟದ ಕಿಡಿಗಳು (೧೯೮೦) ಮತ್ತು ಪ್ರಾಕೃತ ಕಥಾ ಸಾಹಿತ್ಯ (೨೦೧೪) – ಇವು ಮೌಲಿಕ ಸಂಶೋಧನ ಕೃತಿಗಳು. ನಾಗಚಂದ್ರ : ಇತಿವೃತ್ತ (೧೯೯೨) ಮತ್ತು ಕವಿ ಬಂಧುವರ್ಮ (೧೯೯೩) – ಇವು ಕವಿ–ಕಾಲ ಜಿಜ್ಞಾಸೆಗೆ ಹೊಸ ಸಾಮಗ್ರಿಯನ್ನು ಗರ್ಭೀಕರಿಸಿವೆ.

ಎಂ.ಎಂ. ಕಲಬುರ್ಗಿಯವರ (೧೯೩೮–) ಸಂಶೋಧನೆಗಳು ಪ್ರಧಾನವಾಗಿ ವಚನ ವಾಙ್ಮಯ ಮತ್ತು ಶಾಸನ ಅಧ್ಯಯನ ಕೇಂದ್ರಿತವೆಂದು ಮೇಲುನೋಟಕ್ಕೆ ತೋರಿದರೂ ಅದರ ಹರಹು ದೊಡ್ಡದಿದೆ. ಕನ್ನಡ ಗ್ರಂಥ ಸಂಪಾದನ ಶಾಸ್ತ್ರ (೧೯೭೨), ಸಂಶೋಧನ ಶಾಸ್ತ್ರ (೧೯೯೨) ಮತ್ತು ಹಸ್ತಪ್ರತಿ ಶಾಸ್ತ್ರ (೧೯೯೩) ಪರಸ್ಪರ ಪೂರಕ ನೆಲೆಯಲ್ಲಿ ಚಲಿಸಿವೆ. ಇತಿಹಾಸ ಮತ್ತು ಸಂಸ್ಕೃತಿ ಅಧ್ಯಯನಕಾರರಿಗೆ ನೆರವಾಗುವ 'ಮಾರ್ಗ'ದ ಆರು ಬೃಹತ್ ಸಂಪುಟಗಳು ಅವರ ವಿದ್ವತ್ತಿನ ಆಳ ನಿರಾಳವನ್ನು ಅನುರಣಿಸುತ್ತವೆ. ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ (೧೯೭೦) ಅವರ ಕೃತಿಗಳಲ್ಲಿ ಮುಡಿಯ ಮಾಣಿಕ್ಯ.

ಷ. ಶೆಟ್ಟರ್ ಅವರ ಹಳಗನ್ನಡ ಲಿಪಿ, ಲಿಪಿಕಾರ, ಲಿಪಿ ವ್ಯವಸಾಯ (೨೦೧೪), ಬಾದಾಮಿ ಚಾಲುಕ್ಯರ ಶಾಸನ ಸಾಹಿತ್ಯ – ಗಮನಾರ್ಹ ಸಂಶೋಧನ ಗ್ರಂಥಗಳು. ಇವರ ತರುವಾಯದ ತಲೆಮೊರೆಗೆ ಸೇರಿದ ವಾಸ್ತುಶಿಲ್ಪ – ಲಿಪಿಶಾಸ್ತ್ರ ಸಂಶೋಧಕ ದೇವರಕೊಂಡಾರೆಡ್ಡಿ, ಶಿವತತ್ವರತ್ನಾಕರ – ಮಾನಸೋಲ್ಲಾಸ ಮಹತ್ವ ಮನಗಾಣಿಸಿದ ಮಲ್ಲೇಪುರಂ ಜಿ. ವೆಂಕಟೇಶ್, ಸೂಫಿಮಾರ್ಗದ ಅನನ್ಯ ಕೊಡುಗೆಯನ್ನು ಪರಿಚಯಿಸಿದ ರಹಮತ್ ತರೀಕೆರೆ, ಸಂಸ್ಕೃತಿ ಅಧ್ಯಯನಕಾರ ಬಸವರಾಜ ಕಲ್ಗುಡಿ, ತಲಸ್ಪರ್ಶಿ ಪಾಂಡಿತ್ಯದ ತಾರಾನಾಥ್ ಮೊದಲಾದವರು ಸಂಶೋಧನ ರಂಗವನ್ನು ಸಂಪನ್ನವಾಗಿಸುತ್ತಿದ್ದಾರೆ.

ಮಹಿಳೆಯರಿಗೂ ಸಂಶೋಧನೆಗೂ ಪುದುವಾಳು ಸಾಧ್ಯವಾಗಲಿಲ್ಲವೆಂಬ ಆರೋಪವಿದೆ. ಇದು ತಕ್ಕಮಟ್ಟಿಗೆ ನಿಜವೂ ಹೌದು. ಪ್ರೊ. ಕಮಲಾ ಹಂಪನಾ ಒಬ್ಬರು ಈ ಹೇಳಿಕೆಗೆ ದೊಡ್ಡ ಅಪವಾದ. ಕಮಲಾ ಹಂಪನಾ (೧೯೩೫–) ಹಿಂಡನಗಲಿದ ಒಂಟಿ ಪಿಡಿಯಂತೆ ಏಕಮೇವಾದ್ವಿತೀಯರಾಗಿದ್ದಾರೆ. ಮಹಿಳೆಯರಲ್ಲಿ ಸಂಶೋಧಕಿಯರು ಇಲ್ಲ ಎಂಬ ಆಪಾದನೆಗೆ ಅಪವಾದವಾಗಿ ನಿಂತಿದ್ದಾರೆ. ಬತೇರಿ, ಬತ್ತಳಿಕೆ, ಬೆರಗು, ಬಹುಧಾ, ಬಹುಳ, ಭರಣ, ಭೂಮಿಕಾ ಅವರ ಏಳು ಬೃಹತ್ ಸಂಪುಟಗಳು ಗಣ್ಯಸ್ಥಾನ ಗಳಿಸಿದ್ದು ನಾನಾ ವಿಷಯಗಳನ್ನೂ ಒಳಗೊಂಡಿವೆ. ಹಾಗೆಯೇ ಶಾಸನಗಳ ವ್ಯಾಸಂಗವನ್ನು ಪ್ರಮುಖವಾಗಿ ಅಪ್ಪಿಕೊಂಡು ಹನುಮಾಕ್ಷಿಗೋಗಿ ಸಂಶೋಧನೆ ಮುಂದುವರಿಸಿದ್ದಾರೆ. ಚೆನ್ನಕ್ಕ ಪಾವಟೆ, ಪದ್ಮಾಶೇಖರ್, ವೈ.ಸಿ.ಭಾನುಮತಿ ಮೊದಲಾದ ಹಲವರು ಸಂಶೋಧನೆಯಲ್ಲಿ

ತೊಡಗಿದ್ದಾರೆ. ಅನೇಕರು ಅದರಲ್ಲಿಯೂ ವಿಶ್ವವಿದ್ಯಾಲಯಗಳಲ್ಲಿ ಇರುವವರು ಪಿಎಚ್.ಡಿ ಮಹಾಪ್ರಬಂಧ ಸಿದ್ಧಪಡಿಸಿದ್ದಾರೆ. ಆದರೆ ಅವರ ಅಧ್ಯಯನ ಅಲ್ಲಿಗೇ ತಟಸ್ಥಗೊಂಡಿದೆ. ಈ ಮಾತು ಮಹಿಳೆ–ಯರಿಗಷ್ಟೇ ಅಲ್ಲದೆ ಅನೇಕ ಪುರುಷರಿಗೂ ಅನ್ವಯಿಸುತ್ತದೆ. ಉದ್ಯೋಗದಲ್ಲಿ ಬಡ್ತಿಗೆ ಪಿಎಚ್.ಡಿ ರಹದಾರಿ ಎಂದು ತಿಳಿದವರು ಸಂಶೋಧನೆಯನ್ನು ಮುಂದುವರಿಸದೆ ತಟಸ್ಥರಾದರು.

ಕನ್ನಡ ಸಂಶೋಧನೆ ಇಂಗ್ಲಿಷಿನಲ್ಲಿ

ಕನ್ನಡದ ಹಿರಿಮೆಗರಿಮೆ ಸಾಧನೆಗಳ ಸಮೃದ್ಧಿಯನ್ನು ಕನ್ನಡೇತರರಿಗೆ ತಲಪಿಸುವ ಇರಾದೆಯಿಂದ ಕೆಲವು ವಿದ್ವಾಂಸರು ಇಂಗ್ಲಿಷಿನಲ್ಲೂ ಲೇಖನ ಬರೆದರು, ಹೊತ್ತಗೆಗಳನ್ನು ಹೊರತಂದರು. ಆ.ನೇ. ಉಪಾಧ್ಯೆ (೧೯೦೬–೧೯೭೫)ಯವರದು ದೊಡ್ಡ ಹೆಸರು. ಅವರು ಕನ್ನಡದಲ್ಲೂ ಬರೆದಿದ್ದಾರೆ. ಆದರೆ ಇಂಗ್ಲಿಷ್ ಬರೆಹದ ಹರಹು ಹೆಚ್ಚಾಗಿದೆ. ಕನ್ನಡ ವಾಙ್ಮಯದ ಎತ್ತರ ಬಿತ್ತರಗಳನ್ನು ಆ.ನೇ. ಉಪಾಧ್ಯೆಯವರು ಇಂಗ್ಲಿಷ್ ಬರೆಹದ ಮೂಲಕ ವಿದ್ವತ್ ಪ್ರಪಂಚಕ್ಕೆ ನೀಡಿರುವ ಕೊಡುಗೆಯ ಅನನ್ಯತೆಯನ್ನು ಟಿ.ವಿ. ವೆಂಕಟಾಚಲಶಾಸ್ತ್ರಿಯವರು ಸಂಗ್ರಹಿಸಿ ನಿರೂಪಿಸಿದ್ದಾರೆ ['ಭಾರತೀಯ ಜೈನ ಸಾಹಿತ್ಯದ ತಿಳಿವಳಿಕೆಗೆ ಕನ್ನಡ ಸಾಹಿತ್ಯದ ನೆರವು' : ಶಾಸ್ತ್ರೀಯ–೩ : ೧೯೯೯ : ೯೫–೧೦೫].

ಕನ್ನಡದ ಆದಿಕವಿ ಪಂಪನನ್ನು ಕುರಿತು ಮೊತ್ತ ಮೊದಲನೆಯ ಲೇಖನ ಬಂದದ್ದೇ ಇಂಗ್ಲಿಷಿನಲ್ಲಿ. ಅದನ್ನು ಬರೆದವರು ಬಿ.ಎಲ್. ರೈಸರು. ಈ ಪರಂಪರೆಯನ್ನು ಎಫ್. ಕಿಟ್ಟೆಲರೂ, ಇ.ಪಿ. ರೈಸರೂ (೧೮೪೯–೧೯೩೬), ಜೆ.ಎಫ್. ಫ್ಲೀಟರೂ, ಇನ್ನೂ ಇತರ ವಿದೇಶಿ ವಿದ್ವಾಂಸರೂ ಮುನ್ನಡೆಸಿದರು. ಇಂಗ್ಲಿಷಿನಲ್ಲಿ ತಮ್ಮ ಸಂಶೋಧನ ಬರೆಹಗಳನ್ನು ಪ್ರಕಟಿಸಿದ ದೇಸಿ ವಿದ್ವಾಂಸರ ಪಾಳಿಯೇ ಇದೆ. ಮೇಲೆ ಹೇಳಿದ ಆ.ನೇ. ಉಪಾಧ್ಯೆ ಅವರಲ್ಲದೆ ರಾ. ನರಸಿಂಹಾಚಾರ್ಯ, ಕೆ.ಜಿ. ಕುಂದಣಗಾರ (೧೮೯೫–೧೯೬೫), ಷ. ಶೆಟ್ಟರ್, ಹಂಪನಾ ಮುಂತಾದವರನ್ನು ಪ್ರಾತಿನಿಧಿಕವಾಗಿ ಹೆಸರಿಸಬಹುದು.

ಇತಿಹಾಸ, ಪ್ರಾಚ್ಯವಸ್ತು ಮತ್ತು ಸಂಸ್ಕೃತ ವಿದ್ವಾಂಸರು ವಾಡಿಕೆಯಂತೆ ಇಂಗ್ಲಿಷಿನಲ್ಲಿ ಬರೆಯುತಿದ್ದರು. ಪ್ರಥಮ ದರ್ಜೆಯ ಇತಿಹಾಸ ಸಂಶೋಧಕರ ಸಾಲಿಗೆ ಸೇರಿದ ಎಂ.ಎಚ್. ಕೃಷ್ಣ (೧೮೯೨–೧೯೪೭), ಬಿ.ಎ. ಸಾಲೆತೊರೆ (೧೯೦೦–೧೯೬೩), ಹೊಸಕೋಟೆ ಕೃಷ್ಣಶಾಸ್ತ್ರೀ (೧೮೭೦–೧೯೨೮), ಆರ್.ಎಸ್. ಪಂಚಮುಖಿ, ಎನ್. ಲಕ್ಷ್ಮೀನಾರಾಯಣ ರಾವ್ (೧೮೯೮–೧೯೭೯), ಜಿ.ಎಸ್. ಗಾಯಿ, ಬಾ.ರಾ. ಗೋಪಾಲ (೧೯೩೦–೧೯೯೭), ಎಂ.ವಿ. ಕೃಷ್ಣರಾವ್, ಶ್ರೀನಿವಾಸ ರಿತ್ತಿ (೧೯೨೯), ಪಿ.ಬಿ. ದೇಸಾಯಿ (೧೯೧೦–೧೯೭೬), ಬಿ. ಷೇಕ ಅಲಿ ಮೊದಲಾದವರ ಸಂಶೋಧನೆಗಳು ಕನ್ನಡ ಮತ್ತು ಕರ್ನಾಟಕಗಳ ಪರಿಪ್ರೇಕ್ಷ್ಯಕ್ಕೆ ಒಳಪಟ್ಟಿವೆ. ಪಾಂಡುರಂಗ ದೇಸಾಯಿಯವರ ಬಸವೇಶ್ವರ ಅಂಡ್ ಹಿಸ್ ಟೈಮ್ಸ್, ಜೈನಿಸಂ ಇನ್ ಸೌತ್ ಇಂಡಿಯ (೧೯೫೭) ಸಂಶೋಧನ ಗ್ರಂಥಗಳು ಮಾಹಿತಿಯ ಕಣಜಗಳು. ಕೆ.ಜಿ. ಕುಂದಣಗಾರರು ರಚಿಸಿದ Some Notes on Shri Mahalakshmi Temple (೧೯೩೯) ಮತ್ತು Inscriptions in Northern Karnataka and the Kolhapur State (೧೯೩೯) ಇಂದಿಗೂ ಮೌಲಿಕ ಸಂಶೋಧನೆ.

ಈ ಸಂಪುಟದಲ್ಲಿ ಒಂಬತ್ತು ಜನ ಲೇಖಕರು ಬರೆದಿರುವ ಒಟ್ಟು ಹತ್ತು ಬರೆಹಗಳಿವೆ. ಸಂಪಾದಕರು ಮೊದಲನೆಯ ಮತ್ತು ಕಡೆಯ (ಹತ್ತನೆಯ) ಎರಡು ಲೇಖನಗಳನ್ನು ಬರೆದಿದ್ದಾರೆ. ಹತ್ತೂ ಲೇಖನಗಳು ಪೂರ್ಣಪ್ರಮಾಣದಲ್ಲಿ ಇಲ್ಲಿ ಸೇರ್ಪಡೆಯಾಗಿ ಓದುಗರಿಗೆ

ನೇರವಾಗಿ ಒದಗುವುದರಿಂದ ಅವುಗಳ ವಿವರಗಳನ್ನು ಮತ್ತೆ ಬಿಡಿಸಿ ಹೇಳುವ ಅಗತ್ಯವಿಲ್ಲ. ಆದರೂ ಸಂಪುಟದ ಸಮಗ್ರ ಸಮೀಕ್ಷೆ ಹಾಗೂ ಸಾರ ಸಮಷ್ಟಿಯನ್ನು ದಿಗ್ದರ್ಶನ ರೂಪದಲ್ಲಿ ಸೂಚಿಸಬೇಕಾದ ಸಂಪಾದಕರ ಹೊಣೆ ಮತ್ತು ಶಿಷ್ಟಾಚಾರದಂತೆ ಒಂದೆರಡು ವಾಕ್ಯಗಳಲ್ಲಿ ಪ್ರತಿಯೊಂದೂ ಲೇಖನದ ಸಾರವನ್ನು ತಿಳಿಸುತ್ತೇನೆ. ಕೆಲವು ಪ್ರಬಂಧಗಳಿಗೆ ಅಡಿಟಿಪ್ಪಣಿ, ಆಧಾರಗ್ರಂಥ – ಇವನ್ನು ಪ್ರತ್ಯೇಕವಾಗಿ ಕೊಟ್ಟಿಲ್ಲ. ಅದರ ಬದಲು ಪ್ರಬಂಧಗಳ ಪಾಠದಲ್ಲಿಯೇ ಅದನ್ನು ಅಳವಡಿಸಲಾಗಿದೆ.

ಸಂಪುಟದ ಮೊತ್ತ ಮೊದಲನೆಯ < ಸಂಶೋಧನೆಯ ವಿಸ್ತಾರ-ವಿನ್ಯಾಸ > ಬರೆಹದಲ್ಲಿ ಕಮಲಾ ಹಂಪನಾ ರೂಪನಿಷ್ಠತೆಯಿಂದ ಗುಣನಿಷ್ಠತೆಯತ್ತ ಹೊರಳಿದ ಸಂಶೋಧನೆಯು ಹೇಗೆ ಕನ್ನಡ ಮುಖಿ, ಕರ್ನಾಟಕ ಮುಖಿ, ಜನಮುಖಿ ಮತ್ತು ಸಂಸ್ಕೃತಿ ಮುಖಿಯಾಗಿ ಹಬ್ಬಿತು ಎಂಬುದನ್ನು ದಾಖಲಿಸಿದ್ದಾರೆ. < ಸಂಶೋಧನೆ ಮತ್ತು ಅದರ ಪರಿಕಲ್ಪನೆಯಲ್ಲಿ ಆಗಿರುವ ಮಾರ್ಪಾಟುಗಳು > ಲೇಖನದಲ್ಲಿ ಎಸ್.ಪಿ. ಪದ್ಮಪ್ರಸಾದರು ಸಂಶೋಧನೆಯು ಸಾಂಸ್ಕೃತಿಕವಾಗಿ ಪುನರಾಚಿಸುವ ಪರಿಕಲ್ಪನೆಯಾಗಿ ಪರಿಷ್ಕಾರಗೊಳ್ಳುತ್ತ ಬಹುಮುಖಿಯಾದ ನೆಲೆಗಳನ್ನು ನಿರೂಪಿಸಿದ್ದಾರೆ ಮತ್ತು ಈ ಸಂಬಂಧವಾಗಿ ವಿದ್ವಾಂಸರ ಅಭಿಪ್ರಾಯಗಳನ್ನೂ ಚರ್ಚಿಸಿದ್ದಾರೆ. ಇದಕ್ಕೆ ಪೂರಕವೆನಿಸುವಂತೆ ಸಿ. ನಾಗಣ್ಣ ಅವರ < ಸಂಶೋಧನೆಯ ಪಾಶ್ಚಾತ್ಯ ಮತ್ತು ದೇಶೀ ನೆಲೆಗಳು > ಪ್ರಬಂಧವಿದೆ. ಸಂಶೋಧನ ಕಾರ್ಯ ವಿಧಾನ ಕುರಿತು ಹಲವಾರು ಆಂಗ್ಲ ಅಧ್ಯಯನಗಳಲ್ಲಿ ಸಿಗುವ ಪಠ್ಯದ ವಿಶ್ಲೇಷಣೆ, ಕಥನ ವಿಶ್ಲೇಷಣೆಯ ಆಯಾಮಗಳನ್ನೂ ಗತಿಶೀಲ ಗುಣವನ್ನೂ ಅಂತರ ಶಾಸ್ತ್ರೀಯ ಅಧ್ಯಯನವನ್ನೂ ಪರಿಚಯಿಸಿದ್ದಾರೆ.

< ಸಂಶೋಧನೆಯ ಪರಿಕರಗಳು ಮತ್ತು ಅವುಗಳನ್ನು ಬಳಸಿಕೊಂಡ ಬಗೆ > ಪ್ರಬಂಧದಲ್ಲಿ ಎಂ.ಜಿ. ಮಂಜುನಾಥರು ಶಾಸನ, ಪ್ರಾಕ್ತನ ಶಾಸ್ತ್ರ, ಗ್ರಂಥ ಸಂಪಾದನೆ, ಇತಿಹಾಸ, ಸಂಸ್ಕೃತಿ ಕ್ಷೇತ್ರಗಳಲ್ಲಿ ಸಮಗ್ರ ಕರ್ನಾಟಕದ ವಿದ್ವಾಂಸರು ಮಾಡಿರುವ ಸಾಧನೆಯ ಸಿಂಹಾವಲೋಕನ ಮಾಡಿದ್ದಾರೆ. ತಾಳ್ತಜೆ ವಸಂತಕುಮಾರರು < ಸಂಶೋಧನೆ ಮತ್ತು ಸಂಸ್ಕೃತಿ >ಯಲ್ಲಿ ತಾತ್ವಿಕ – ಆನ್ವಯಿಕ ಸಂಶೋಧನೆಯ ಹಾಗೂ ಸಂಸ್ಕೃತಿಯ ಒಳ ತೊಳೆಗಳನ್ನು ಬಿಡಿಸಿಟ್ಟಿದ್ದಾರೆ. ಸಂಶೋಧನ ಬರೆಹದ ಭಾಷಿಕ ವಿನ್ಯಾಸದ ಪದರಗಳನ್ನೂ ಅದರ ಸೂಕ್ಷ್ಮ ಸಂವಹನ ಶೀಲತೆಯನ್ನೂ ಸೋಮಶೇಖರ ಗೌಡರ < ಸಂಶೋಧನ ಬರಹಗಳ ಭಾಷೆ > ಲೇಖ ಚರ್ಚಿಸಿದೆ. ಮಾನವಶಾಸ್ತ್ರ, ಆಧುನೀಕರಣ ಸುಧಾರಿತ ಸಮಾಜ ಥಿಯರಿಗಳು, ಪೂರ್ವ-ಪಶ್ಚಿಮ ಮುಖಾಮುಖಿ, ವರ್ಗಗಳ ದೃಷ್ಟಿಕೋನ, ಲಿಂಗ-ಜಾತಿ ತಾರತಮ್ಯ-ಎಂಬೀ ಬಹು ಆಯಾಮದ ವಾಗ್ವಾದಗಳನ್ನು ಎಂ. ಚಂದ್ರಪೂಜಾರಿಯವರ < ಸಮಾಜ ಶಾಸ್ತ್ರಗಳು ಮತ್ತು ಸಂಶೋಧನೆ > ಲೇಖನ ಗರ್ಭೀಕರಿಸಿದೆ.

ಸಂಗಮೇಶ ಸವದತ್ತಿಮಠರ < ಸಂಶೋಧನೆಗಾಗಿ ರೂಪಿತವಾದ ಸಂಸ್ಥೆಗಳು ಮತ್ತು ಪತ್ರಿಕೆಗಳು > ಪ್ರಬಂಧದಲ್ಲಿ ಸಮೃದ್ಧ ಮಾಹಿತಿ ತುಂಬಿ ತುಳುಕಿದೆ. ಬಲ್ಲಿದರು ನೆನಪಿಡಬೇಕಾದ ಹಲವು ಮರೆತು ಹೋದ ಶೋಧ ಸಂಸ್ಥೆಗಳನ್ನೂ ಪತ್ರಿಕೆಗಳನ್ನೂ ಪ್ರಸ್ತಾಪಿಸಿದ್ದಾರೆ. < ಸಂಶೋಧನೆಯನ್ನು ಕುರಿತಂತೆ ಬಂದಿರುವ ಕೃತಿಗಳ ಪರಿಚಯ ಮತ್ತು ವಿಮರ್ಶೆ > ಲೇಖನದಲ್ಲಿ ಚಿತ್ತಯ್ಯ ಪೂಜಾರ್, ಬರೆಹದ ತಲೆಬರೆಹವೇ ತಿಳಿಸುವಂತೆ, ಸಂಶೋಧನೆಯ ಸ್ವರೂಪ, ಉದ್ದೇಶ, ವ್ಯಾಪ್ತಿಗಳನ್ನು ವಿವರಿಸಲು ಕನ್ನಡದಲ್ಲಿ ಅಚ್ಚಾಗಿರುವ ಪುಸ್ತಕಗಳ ತಿರುಳನ್ನು ತೆರೆದಿಟ್ಟಿದ್ದಾರೆ. ಸಂಶೋಧನೆಯ ವಿಧಾನ ಆಧಾರಿತ, ವಿಷಯ ಆಧಾರಿತ ಮತ್ತು ಸಿದ್ಧಾಂತ ಆಧಾರಿತ ಕೃತಿಗಳು ಒಳಗೊಂಡಿರುವ ವಿವರಗಳನ್ನು

ಈ ಸಂಪುಟದ ಲೇಖಕರು

ಕಮಲಾ ಹಂಪನಾ
೯೮೪೫೫೦೭೧೩೪
hampana1@gmail.com

ಎಸ್.ಪಿ. ಪದ್ಮಪ್ರಸಾದ್
೯೪೪೮೭೬೮೫೬೭

ಸಿ. ನಾಗಣ್ಣ
೯೯೮೦೭೮೧೬೦೨

ಎಂ.ಜಿ. ಮಂಜುನಾಥ್
೯೮೪೫೨೯೨೪೧

ತಾಳ್ತಜೆ ವಸಂತಕುಮಾರ್
೯೪೪೮೮೫೮೦೦೨

ಸೋಮಶೇಖರ ಗೌಡ
೯೮೪೫೮೮೭೦೬೬

ಚಂದ್ರ ಪೂಜಾರಿ
೯೪೪೮೧೬೫೧೩೦

ಸಂಗಮೇಶ ಸವದತ್ತಿಮಠ
೯೮೪೫೨೭೩೭೩೬

ಚಿತ್ತಯ್ಯ ಪೂಜಾರಿ
೮೦೨೨೯೬೧೬೮೧

ಸಂಶೋಧಕರು ಮತ್ತು ಕೆಲವು ಸಂಶೋಧನ ಪತ್ರಿಕೆಗಳು




ಬಿ.ಎಲ್. ರೈಸ್



ರಾ. ನರಸಿಂಹಾಚಾರ್



ಫ.ಗು. ಹಳಕಟ್ಟಿ



ಎಫ್. ಕಿಟೆಲ್



ಗೋವಿಂದ ಪೈ



ಆ.ನೇ. ಉಪಾಧ್ಯೆ



ಡಿ.ಎಲ್. ನರಸಿಂಹಾಚಾರ್




ಕೆ.ಜಿ. ಕುಂದಣಗಾರ್



ಪ್ರಬುದ್ಧ ಕರ್ನಾಟಕ ಮುಖಪುಟ



ಮುಳಿಯ ತಿಮ್ಮಪ್ಪಯ್ಯ



ಕರ್ಣಾಟಕ ಸಾಹಿತ್ಯ ಪರಿಷತ್ಪತ್ರಿಕೆ

JOURNAL OF THE KANNADA ACADEMY

VOLUME I 1916–1917

ಪರಿಷತ್ ಪತ್ರಿಕೆ ಮುಖಪುಟ



ಎ.ಆರ್. ಕೃಷ್ಣಶಾಸ್ತ್ರಿ




ಸೇಡಿಯಾಪು ಕೃಷ್ಣಭಟ್ಟ


ಕೆಲವು ಸಂಶೋಧನ ಸಂಸ್ಥೆಗಳು




ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು




ಮೈಸೂರು ವಿಶ್ವವಿದ್ಯಾಲಯ




ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ



ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ



ಕನ್ನಡ ವಿಶ್ವವಿದ್ಯಾಲಯ, ಹಂಪಿ



ಮಿಥಿಕ್ ಸೊಸೈಟಿ, ಬೆಂಗಳೂರು

ಎರಡು ಶತಮಾನಗಳಷ್ಟು ದೀರ್ಘ ಕಾಲಾವಧಿಯ,
ಅಪಾರ ಗ್ರಂಥರಾಶಿಯುಳ್ಳ ಸಮಗ್ರ ಕನ್ನಡ ಬರವಣಿಗೆಯ
ಚರಿತ್ರೆಯನ್ನು ರಚಿಸಿ ಪ್ರಕಟಿಸುವ ಐತಿಹಾಸಿಕ
ಯೋಜನೆಯನ್ನು ಕನ್ನಡ ಸಾಹಿತ್ಯ ಪರಿಷತ್ತು
ತನ್ನ ಶತಮಾನೋತ್ಸವದ ಮಹತ್ವಾಕಾಂಕ್ಷೆಯ
ಯೋಜನೆಯನ್ನಾಗಿ ಕೈಗೆತ್ತಿಕೊಂಡಿದೆ.
ಕನ್ನಡ ಕಾವ್ಯ, ನಾಟಕ, ಕಾದಂಬರಿ, ಕಥಾಸಾಹಿತ್ಯ
– ಹೀಗೆ ವಿವಿಧ ಪ್ರಕಾರಗಳಿಗೆ ಒಂದೊಂದು ಸಂಪುಟದಂತೆ
ಒಟ್ಟು ೧೭ ಸಂಪುಟಗಳಲ್ಲಿ ಈ ಸಾಹಿತ್ಯ ಚರಿತ್ರೆ
ಪ್ರಕಟವಾಗಲಿದೆ. ಕನ್ನಡ ಬರವಣಿಗೆಯ ಎಲ್ಲ
ಓದುಗರಿಗೆ, ವಿದ್ಯಾರ್ಥಿಗಳಿಗೆ, ಅಧ್ಯಯನಶೀಲರಿಗೆ,
ವಿದ್ವಾಂಸರಿಗೆ ಇವು ಉಪಯುಕ್ತವಾಗಲಿವೆ
ಎಂದು ನಂಬಿದ್ದೇನೆ.

ಪುಂಡಲೀಕ ಹಾಲಂಬಿ
ಅಧ್ಯಕ್ಷರು

ಕನ್ನಡ ಸಾಹಿತ್ಯ ಪರಿಷತ್ತು
ಬೆಂಗಳೂರು